## ದೇವನೂರ ಮಹಾದೇವ

ಹುಟ್ಟಿದ್ದು ೧೯೪೮ರ ಯಾವುದೋ ತಿಂಗಳ ಸೋಮವಾರ. ಮೈಸೂರು ಜಿಲ್ಲೆಯ ಚಿಕ್ಕಕವಲಂದೆ, ಹುಣಸೂರು, ಹೊಮ್ಮರಗಳ್ಳಿ, ದೇವನೂರು, ಸಾಲಿಗ್ರಾಮ ಮತ್ತು ಮೈಸೂರುಗಳಲ್ಲಿ ವಿದ್ಯಾಭ್ಯಾಸ. ಕೆಲಕಾಲ ಮೈಸೂರಿನ ಸಿ.ಐ.ಐ.ಎಲ್‌ನಲ್ಲಿ ಕೆಲಸ ಮಾಡಿ ಅಲ್ಲಿಯ ವೃತ್ತಿಗೆ ರಾಜೀನಾಮೆ. ಈಗ ವ್ಯವಸಾಯ.

ಒಡಲಾಳ ಕೃತಿಯನ್ನು ಕಲ್ಕತ್ತಾದ ಭಾರತೀಯ ಭಾಷಾ ಪರಿಷತ್ ೧೯೮೪ರ ಉತ್ತಮ ಸೃಜನಶೀಲ ಕೃತಿಯೆಂದು ಗೌರವಿಸಿದೆ. ೧೯೯೦ರಲ್ಲಿ ಇವರ ಕುಸುಮಬಾಲೆ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿಯನ್ನೂ ಪಡೆದಿರುವ ಮಹಾದೇವ ಅವರು ೧೯೮೯ರಲ್ಲಿ ಅಮೆರಿಕಾದಲ್ಲಿ ನಡೆದ ಇಂಟರ್‌ನ್ಯಾಷನಲ್ ರೈಟಿಂಗ್ ಪ್ರೋಗ್ರಾಂನಲ್ಲಿ ಭಾಗವಹಿಸಿದ್ದರು. ದ್ಯಾವನೂರು, ಒಡಲಾಳ ಮತ್ತು ಕುಸುಮಬಾಲೆ ಇವರ ಕೃತಿಗಳು

# ಎದೆಗೆ ಬಿದ್ದ ಅಕ್ಷರ

ದೇವನೂರ ಮಹಾದೇವ

ಅಭಿನವದ ೩೦೦ನೆಯ ಪುಸ್ತಕ

ಅಭಿನವ

೧೭/೧೮-೨, ಮೊದಲನೆಯ ಮುಖ್ಯರಸ್ತೆ,
ಮಾರೇನಹಳ್ಳಿ, ವಿಜಯನಗರ. ಬೆಂಗಳೂರು-೪೦

**EDEGE BIDDA AKSHARA:** Collection of articles by **Devanoora Mahadeva.**
Published by **Abhinava,** 17/18-2, 1st Main, Marenahalli, Vijayanagara, Bengaluru-560040 Ph: 9448804905 / 080-23505825
email:abhinavaravi@gmail.com

ISBN: 978-93-81055-94-6

| | | | |
|---|---|---|---|
| **First Edition:** | **14-12-2012** | **Fifth Edition:** | **14-02-2013** |
| **Second Edition:** | **21-12-2012** | **Sixth Edition:** | **10-03-2013** |
| **Third Edition:** | **18-01-2013** | **Seventh Edition:** | **14-04-2013** |
| **Fourth Edition:** | **05-02-2013** | **Eighth Edition:** | **28-06-2013** |

Pages: 16 + 320 Paper Used: 70 GSM N.S. Maplitho
Size: Demy 1/8 **Price: Rs 200/-**

**ಹಕ್ಕುಗಳು:** ಲೇಖಕರವು

| | | | |
|---|---|---|---|
| **ಮೊದಲ ಮುದ್ರಣ:** | **೧೪–೧೨–೨೦೧೨** | **ಐದನೆ ಮುದ್ರಣ:** | **೧೪–೦೨–೨೦೧೩** |
| **ಎರಡನೆ ಮುದ್ರಣ:** | **೨೧–೧೨–೨೦೧೨** | **ಆರನೆ ಮುದ್ರಣ:** | **೧೦–೦೩–೨೦೧೩** |
| **ಮೂರನೆ ಮುದ್ರಣ:** | **೧೮–೦೧–೨೦೧೩** | **ಏಳನೆ ಮುದ್ರಣ:** | **೧೪–೦೪–೨೦೧೩** |
| **ನಾಲ್ಕನೆ ಮುದ್ರಣ:** | **೦೫–೦೨–೨೦೧೩** | **ಎಂಟನೆ ಮುದ್ರಣ:** | **೨೮–೦೬–೨೦೧೩** |

ಪುಟಗಳು: ೧೬+೩೨೦
ಕಾಗದದ ಗುಣಮಟ್ಟ: ೭೦ ಜಿ.ಎಸ್.ಎಂ. ಎನ್. ಎಸ್ ಮ್ಯಾಪ್ಲಿತೋ
ಪುಸ್ತಕದ ಆಕಾರ: ೧/೮ ಅಷ್ಟದಳ(ಡೆಮಿ)
**ಬೆಲೆ: ರೂ. ೨೦೦/–**

**ಸಲಹೆ ಸಹಕಾರ**
ಪಿ. ಚಂದ್ರಿಕಾ
ಮಮತಾ. ಜಿ
ಸಿರಾಜ್ ಅಹಮದ್
ಶ್ರೀಧರ ಹೆಗಡೆ ಭದ್ರನ್

**ಮುಖಪುಟ, ಅಕ್ಷರ ವಿನ್ಯಾಸ:** ಕೆ.ಜೆ.ಸಚ್ಚಿದಾನಂದ
**ಮುಖಪುಟ ಚಿತ್ರಿಕೆ:** ಪುಸ್ತಕ ಬಿಡುಗಡೆ ಮಾಡಿದವರ ಸಹಿಗಳು
**ಹಿಂಬದಿ ಭಾವಚಿತ್ರ:** ಅಬ್ದುಲ್ ರಶೀದ್
**ರಕ್ಷಾಪುಟ ಫೋಟೋ:** ಎಂ. ಶ್ರೀಧರಮೂರ್ತಿ

**ಪ್ರಸಾರಣೆ:**
ಕೃಷ್ಣಾ ಚೆಂಗಡಿ

**ಮುದ್ರಣ:**
ಲಕ್ಷ್ಮೀ ಮುದ್ರಣಾಲಯ ಬೆಂಗಳೂರು.

ಸಮಾನತೆ ಉಸಿರಾಡುವ ಜೀವಿಗಳ
ಪಾದಗಳಿಗೆ

# ನುಡಿವ ಬೆಡಗು

## ಇದು ನನ್ನದು ನನ್ನದಾಗಬೇಕಿದೆ– ಬ್ಲೇಕ್

ತೊಂಬತ್ತರ ದಶಕದ ಕೊನೆಯ ವರ್ಷಗಳು. ಮಹಾದೇವರನ್ನು ಕುರಿತ ಅಭಿನವದ ಸಂಚಿಕೆ ತರಬೇಕೆಂಬ ಉತ್ಸಾಹ. ಗೆಳೆಯರಿಂದ ಬಂದ ಮೊದಲ ಮಾತು 'ಅದಕ್ಕೆಲ್ಲ ಮಹಾದೇವ ಅವಕಾಶ ಕೊಡುವುದಿಲ್ಲ' ಎಂಬುದು. ನಮಗೋ ಹುಚ್ಚು ಧೈರ್ಯ ಬಿಟ್ಟರೆ ಬೇರಿಲ್ಲ. ನಮ್ಮ ಕೆಲವು ಸಂಚಿಕೆಗಳೊಡನೆ ಅವರ ಮನೆಗೆ ಹೋದರೆ–ಎಷ್ಟೋ ಜನ್ಮಗಳ ಸಂಬಂಧಿಗಳಂತೆ ಮಾತನಾಡಿಸಿದರು. ನೇರ ಕೇಳಿದೆ: 'ಸರ್ ನಿಮ್ಮ ಬಗೆಗೆ ಸಂಚಿಕೆ ತರಬೇಕೆಂದುಕೊಂಡಿದ್ದೇವೆ' ಎಂದರೆ–
'ಮೊದಲು ಲಂಕೇಶ್ ಬಗೆಗೆ ತನ್ನಿ' ಎಂದರು.
'ಆಯ್ತು ಸರ್. ಖಂಡಿತಾ. ಈಗ ನಿಮ್ಮ ಬಗೆಗೆ ...' ಎಂದೆವು.
ಕೆಲವು ಕ್ಷಣ ಮೌನ ಮತ್ತು ಸಿಗರೇಟು... ಅವರ ಮೌನವೇ ನಮಗೆ ಒಪ್ಪಿಗೆಯನ್ನು ಕೊಟ್ಟಿತ್ತು, ಧೈರ್ಯವನ್ನು ಹೆಚ್ಚಿಸಿತ್ತು. ಆ ಹೊತ್ತಿಗೆ ನಮಗೂ ಮಹಾದೇವರನ್ನು ಕುರಿತ ಸಂಚಿಕೆಯನ್ನು ಹೀಗೆ ತರಬೇಕೆಂಬ ಸ್ಪಷ್ಟ ಕಲ್ಪನೆ ಇರಲಿಲ್ಲ. ಕೆಲವು ಲೇಖನಗಳು ಅವರ ವ್ಯಕ್ತಿತ್ವ ಕುರಿತು, ಕೆಲವು ಕೃತಿಗಳ ಕುರಿತು, ಒಂದು ಸಂದರ್ಶನ ಇತ್ಯಾದಿ. ಆದರೆ ಎರಡು ವರ್ಷಗಳ ಕಾಲ ಅವರ ಬಗೆಗೆ/ಕೃತಿಗಳ ಬಗೆಗೆ ಬಂದ ಲೇಖನಗಳು, ಸಂದರ್ಶನಗಳು, ಪತ್ರಿಕಾ ಚರ್ಚೆ/ಸಂವಾದಗಳನ್ನು ಸಂಗ್ರಹಿಸಿದೆವು. ಈ ಮಧ್ಯೆ ಎಂ. ಇ. ಎಸ್. ಕಾಲೇಜಿನಲ್ಲಿ ವಿಚಾರಸಂಕಿರಣವನ್ನೂ ಮಾಡಲಾಯ್ತು. ಮಹಾದೇವರಿಗೆ ಎಷ್ಟು ಸಂಕೋಚವೆಂದರೆ ಇಂಥವರಿಗೆ ಲೇಖನ ಬರೆಯಲು ಹೇಳಿದ್ದೇವೆ, ಇಂಥ ಲೇಖನ ತೆಗೆದುಕೊಳ್ಳುತ್ತಿದ್ದೇವೆ ಎಂದಾಗ 'ಹೌದಾ' ಎಂದು ಸುಮ್ಮನಾಗಿಬಿಡುತ್ತಿದ್ದರು. ಇತರ ಲೇಖಕರಾದರೋ ಇಂಥವರಿಂದ ಬರೆಸಿ, ಕೇಳಿ ಇಂಥ ಲೇಖನ ತೆಗೆದುಕೊಳ್ಳಬೇಡಿ... ಎಂದೆಲ್ಲಾ ಹೇಳಿದ್ದನ್ನು ಕೇಳಿದ್ದ ನಮಗೋ ಇದು ಆಶ್ಚರ್ಯ. ಒಂದೇ ತಿಂಗಳಿನಲ್ಲಿ ಸಂಚಿಕೆ ಪುನರ್ ಮುದ್ರಣವಾಯಿತು. ಮುಂದೆ ಯಾರು ಕೇಳಿದರೂ ಈ ಸಂಚಿಕೆಯ ಬಗೆಗೇ ಮಾತು. ಅದೆಷ್ಟು ವಿಷಯಗಳನ್ನು ಇಡಿಕಿರಿಯುವಂತೆ ತುಂಬಿಸಿದ್ದೀರಿ ಎನ್ನುವಲ್ಲಿಂದ ಹಿಡಿದು ಮಹಾದೇವರ ಕುರಿತು ನೀವು ಭಾವುಕರಾಗಿ ವರ್ತಿಸಿದ್ದೀರಿ ಎನ್ನುವವರೆವಿಗೆ. ಆದರೆ ಅದ್ಯಾವುದೂ ನಮ್ಮ

ಉತ್ಸಾಹವನ್ನು ಕಡಿಮೆ ಮಾಡಲಿಲ್ಲ. ಮುಂದೊಂದು ದಿನ ರಂಗಕರ್ಮಿ ಬಸವಲಿಂಗಯ್ಯನವರು ನೀನಾಸಂಗೆ 'ದೇವನೂರಿನಲ್ಲಿ ದೇ ಮಾ' ಎಂಬ ನಾಟಕ ನಿರ್ದೇಶಿಸಿದರು. ಇದಕ್ಕಿಂತ ದೊಡ್ಡ ಭಾಗ್ಯ ಒಂದು ಪತ್ರಿಕೆಗೆ ಉಂಟೇ? ಸಿದ್ದಲಿಂಗಯ್ಯನವರನ್ನು ಈ ಸಂಚಿಕೆಗಾಗಿ ಸಂದರ್ಶಿಸಲು ಹೋದಾಗ ಉಮಾಲಕ್ಷ್ಮಿಯವರು ಸಿಕ್ಕರು. ಅವರು ಜೋಪಾನವಾಗಿ ಸಂಗ್ರಹಿಸಿಟ್ಟಿದ್ದ ಮಹಾದೇವರ ಲೇಖನಗಳನ್ನೆಲ್ಲ ಕೊಟ್ಟರು. ಹಾಗೊಮ್ಮೆ ಹೀಗೊಮ್ಮೆ ಪ್ರಕಟವಾಗುತ್ತಿದ್ದ ಅವರ ಲೇಖನಗಳನ್ನು ಗಮನಿಸುತ್ತಿದ್ದ ನಮಗೆ ಅವರ ಲೇಖನಗಳದ್ದೇ ಒಂದು ಸಂಕಲನ ತರುವ ಮನಸ್ಸಾಯಿತು. 'ಹೇ....ಬೇಡ...' ಎಂದರು ಮಹಾದೇವ. ಹಾಗೂ ಹೀಗೂ ಹೇಳಿ ಒಪ್ಪಿಸಿದೆವು. 'ಮಾನವತೆ ಅಂತಾರಲ್ಲ...' ಎಂದು ಹೆಸರಿಟ್ಟು ನಮ್ಮ ಮುಂದಿನ ಪುಸ್ತಕಗಳು ತಲೆಬರಹದಡಿಯಲ್ಲಿ ಅಚ್ಚುಮಾಡಲು ಶುರು ಮಾಡಿದೆವು. ಕಂಡ ಕಂಡವರೆಲ್ಲ 'ಯಾವಾಗ ಬರುತ್ತೇ?' ಕೇಳುತ್ತಿದ್ದರು. ಮಹಾದೇವರಿಗೆ 'ಸರ್ ಅಭಿನವದ ಐವತ್ತನೆಯ ಪುಸ್ತಕ ನಿಮ್ಮದಾಗಲಿ' ಎಂದು ಆಸೆ ತೋರಿಸಿದರೆ– 'ನೂರನೆಯದು ಯಾಕಾಗಬಾರದು?' ಎಂದು ನಗೆಯಾಡಿದರು.

ಅಭಿನವದ ಪುಸ್ತಕಗಳು ನೂರು ನೂರೈವತ್ತು, ಇನ್ನೂರು ದಾಟಿದರೂ ದೇವನೂರರ ಪುಸ್ತಕ ಬರಲೇ ಇಲ್ಲ. ಅಂಗಡಿಯವರು, ಲೇಖಕರು, ವಿದ್ಯಾರ್ಥಿಗಳು ಸಿಕ್ಕ ಸಿಕ್ಕಲ್ಲೆಲ್ಲ ಕೇಳಲು ಶುರುಮಾಡಿದರು. ಈ ಮಧ್ಯೆ ಸರ್ವೋದಯ ಪಕ್ಷದ ಕೆಲಸ, ಸಭೆಗಳಲ್ಲಿ ಮಹಾದೇವ ಬ್ಯುಸಿಯಾದರು. ಒಮ್ಮೆ 'ಆಯ್ತು ಎಲ್ಲ ಲೇಖನಗಳನ್ನು ಕಂಪೋಸ್ ಮಾಡಿಸಿ ಪ್ರೂಫ್ ತಿದ್ದಿ ಕಳಿಸಿ, ಒಂದೂ ತಪ್ಪಿಲ್ಲದಂತಿರಬೇಕು. ಒಂದು ತಪ್ಪು ಇದ್ದರೂ ನಮ್ಮ ಕಾಂಟ್ರಾಕ್ಟ್ ಕ್ಯಾನ್ಸಲ್ ಆಗುತ್ತದೆ' ಎಂದು ನಕ್ಕರು. ಆಯ್ತೆಂದು ನನ್ನ ಕೆಲಸಗಳ ಮಧ್ಯೆ ತೊಡಗಿಕೊಂಡೆ. ಕೊನೆಗೂ ನನ್ನಲ್ಲಿದ್ದ ಎಲ್ಲ ಲೇಖನ/ಪತ್ರಿಕೆಯ ಚೂರುಗಳನ್ನೆಲ್ಲ ಕಳುಹಿಸಿದೆ. ಅದೆಷ್ಟು ತನ್ಮಯರಾಗಿ ಈ ಲೇಖನಗಳನ್ನೆಲ್ಲ ತಿದ್ದಲು, ಪುನಃ ಬರೆಯಲು ತೊಡಗಿಕೊಂಡರೆಂದರೆ ಮತ್ತೆ ಕುಸುಮಬಾಲೆ ಬರೆಯುವ ಹೊತ್ತಿನ ಮಹಾದೇವರಂತಾಗುವಷ್ಟು. ಅವರು ಯಾವ ಕೆಲಸವನ್ನೂ ಹರಿಬರಿಯಲ್ಲಿ ಮಾಡಿದವರಲ್ಲ. ಅದು ಹೃದಯದ ಆಳದ ಆಳಕ್ಕೆ ಇಳಿಯಬೇಕು, ಒಂದು ಪುಸ್ತಕವಾಗಲಿ, ಮಾತಾಗಲಿ, ಅಕ್ಷರವಾಗಲಿ...

ಅಷ್ಟೇ ಅಲ್ಲ ಮಾತಿನಲ್ಲಾಗಲೀ, ಬದುಕಿನಲ್ಲಾಗಲೀ ಯಾರನ್ನೂ, ಯಾವುದನ್ನೂ ನೋಯಿಸುವ(ಅಕ್ಷರವನ್ನೂ)ಜಾಯಮಾನ ಮಹಾದೇವ ಅವರದಲ್ಲ. ಕಟುವಾಗಿ ಹೇಳಬೇಕಾಗಿ ಬಂದಾಗ ಕೂಡ ಒಂದೋ ತಮ್ಮ

ವಿಶಿಷ್ಟ ಹಾಸ್ಯ ಪ್ರಜ್ಞೆಯ ಮೂಲಕ ಅಥವಾ ಕಡಿಮೆ 'ಹಾರ್ಷ್' ಪದದೊಂದಿಗೆ ಮಾನವೀಯ ಸ್ಪರ್ಶಕೊಡುತ್ತಾರೆ. ಈ ನಡುವೆ 'ನಿಮ್ಮ ಲೇಖನಗಳನ್ನು ಪುಸ್ತಕ ಮಾಡುತ್ತೇವೆ' ಎಂದು ಕೇಳಿದವರು, ಭಾವನಾತ್ಮಕವಾಗಿ ಒಪ್ಪಿಸಲು ಹೋದವರು, ಬೇರೆಯವರಿಂದ ಹೇಳಿಸಿ ಪಡೆಯಲೆತ್ನಿಸಿದವರು ಹತ್ತಾರು ಜನ. ಮಹದೇವರದು ಒಂದೇ ಮಾತು 'ಅಭಿನವದವರಿಗೆ ಮಾತುಕೊಟ್ಟಿದ್ದೇನೆ' ಇದು ಕೇವಲ ಸಾಹಿತ್ಯದ ಬಗೆಗಿನ ಕಮಿಂಟ್‌ಮೆಂಟಲ್ಲ, ಮಹಾದೇವರ ಬದುಕಿನ ಕಮಿಂಟ್‌ಮೆಂಟ್. ಯಾಕೆ ಮಹಾದೇವರ ಬರಹಗಳಿಗೆ ಅಂಥ ಶಕ್ತಿ ಇದೆ ಎಂದು ಯೋಚಿಸುವಾಗಲೆಲ್ಲ ನನಗೆ ತಮ್ಮ ಪ್ರಾಣವನ್ನೇ ಆ ಅಕ್ಷರಗಳಲ್ಲಿಟ್ಟ ಬೇಂದ್ರೆಯವರ ಕವಿತೆ ನೆನಪಾಗುತ್ತದೆ, ಸಂಸರ ವಿಗಡ ವಿಕ್ರಮರಾಯ ನಾಟಕದ ಡೈಲಾಗುಗಳು ನೆನಪಾಗುತ್ತವೆ. ದೇವನೂರರ ಬರಹದಲ್ಲೂ ನನಗೆ ಕಾಣುವುದು ಇದೇ. ಇಲ್ಲದಿದ್ದರೆ ಇಲ್ಲಿಯ ಲೇಖನಗಳನ್ನು ತಿದ್ದುವಾಗ ಕೂಡ ಅವರು ಯಾಕೆ ಸುಸ್ತಾಗಬೇಕು, ಜ್ವರ ಬಂದವರಂತೆ ಬಳಲಬೇಕು, ಹಿಂಸೆ ಪಟ್ಟುಕೊಳ್ಳಬೇಕು. ಅಷ್ಟೇ ಚೈತನ್ಯವನ್ನು ತುಂಬಿಕೊಳ್ಳಬೇಕು? ಬರವಣಿಗೆಯೆಂದರೆ ಹೀಗೆನಾ.... ಬದುಕೆಂಬುದು ಹೀಗೂ ಇರುತ್ತದಾ... ಸತ್ಯವೆಂಬುದು ಯಾವಾಗಲೂ ಸತ್ಯವಾಗಿ ಇರುತ್ತದಾ... ಗೊತ್ತಿಲ್ಲ. ಆದರೆ ಮಹಾದೇವರ ಬರವಣಿಗೆ ಬರವಣಿಗೆಯೆಂದರೆ ಹೀಗಿರಬೇಕು ಎಂದು ಹೇಳುತ್ತಿವೆ. ಅದಕ್ಕಾಗಿಯೇ ಈ ಬರಹಗಳನ್ನು ನಮ್ಮೆಲ್ಲ ಚೌಕಟ್ಟುಗಳಲ್ಲಿಯೂ ಚೌಕಟ್ಟುಗಳಾಚೆಯೂ ನೋಡಲು ಸಾಧ್ಯವಾಗುತ್ತದೆ.

ಈ ಪುಸ್ತಕವನ್ನು ಅಭಿನವಕ್ಕೇ ಪ್ರಕಟಿಸುವ ಅವಕಾಶ ಮಾಡಿಕೊಟ್ಟ ದೇವನೂರ ಮಹಾದೇವ ಅವರಿಗೆ, ಮೊದಲು ಅವರ ಲೇಖನಗಳನ್ನು ಕಾಳಜಿಯಿಂದ ಕಾಪಾಡಿದ ಮತ್ತು ಕೇಳಿದ ತಕ್ಷಣ ಏನನ್ನೂ ನಿರೀಕ್ಷಿಸದೆ ಎಲ್ಲ ಲೇಖನಗಳನ್ನು ಜೆರಾಕ್ಸ್ ಮಾಡಿಸಿಕೊಟ್ಟ ಕೆ. ಉಮಾಲಕ್ಷ್ಮಿ, ಪ್ರೊ. ಹಾ.ತಿ. ಕೃಷ್ಣೇಗೌಡ, ಬಿ. ದೇವರಾಜ್, ಎಂ. ಶ್ರೀಧರಮೂರ್ತಿ, ಪ್ರೀತಿಯ ಮಾತುಗಳ ತುಕಾರಾಂ, ಎಲ್ಲೇ ಇರಲಿ ಯಾವ ಹೊತ್ತಿನಲ್ಲೇ ಸಿಗಲಿ ಅಷ್ಟೇ ಆತ್ಮೀಯತೆಯಿಂದ ಮಾತನಾಡುವ ಓ.ಎಲ್.ನಾಗಭೂಷಣಸ್ವಾಮಿ, ಪ್ರೊ. ಶ್ರೀನಿವಾಸನ್ ರವಿ, ಮಹಾದೇವರ ಬಗೆಗೆ ಪತ್ರಿಕೆಗಳಲ್ಲಿ ಬಂದದ್ದನ್ನೆಲ್ಲ ಸಂಗ್ರಹಿಸಿ ನನ್ನ ಕೈಗಿತ್ತ ಲತಾ ಮೈಸೂರು, 'ಅಣ್ಣ ಇಂಥ ಚರ್ಚೆ ಆಂದೋಲನದಲ್ಲಿ ಒಂದು ತಿಂಗಳು ನಡೆದಿತ್ತು' ಎಂದು ವಿಷಯ ತಿಳಿಸುವಲ್ಲಿನ ಮಾತಿನಲ್ಲಿಯೇ ಆಸೆ ತೋರಿಸುವ ಮಹೇಶ್ ಹರವೆ, ಮಹಾದೇವರ ಬಗೆಗೆ ಹಲ ಬಗೆಯ ನೆನಪುಗಳನ್ನು ಸರಿ ರಾತ್ರಿಗಳವರೆಗೂ ಹೇಳಬಲ್ಲ ಕೆ. ವೆಂಕಟರಾಜು, ಅಪ್ಪ ಅಮ್ಮನಷ್ಟೇ ಪ್ರೀತಿಯ

ಉಜ್ವಲಾ, ಮಿತಾ ದೇವನೂರ್, ದೇವನೂರರೆಂದರೆ ಬೆರಗಾಗುವ ಮತ್ತು ಕುಸುಮಬಾಲೆಯನ್ನು ಅಗಾಧ ನೆನಪಿನ ಶಕ್ತಿಯಿಂದ ಅದೇ ಭಾಷೆಯಲ್ಲಿ ಎಗ್ಗಿಲ್ಲದೆ ಹೇಳಬಲ್ಲ ಶಿವಸ್ವಾಮಿ, ಪ್ರಕಾಶ್ ಚಿಕ್ಕಪಾಳ್ಯ, ಅಬ್ದುಲ್ ರಶೀದ್, ಪುಸ್ತಕ ಪ್ರೀತಿಯ ಅಭಿರುಚಿ ಪ್ರಕಾಶನದ ಗಣೇಶ್ ಮತ್ತು ಜ್ಯೋತಿ ಹಾಗೂ ಇಷ್ಟೂ ವರ್ಷ ದೇವನೂರರನ್ನು ತಮ್ಮ ಕಣ್ಣ ರೆಪ್ಪೆಗಳಂತೆ ಕಾಪಾಡುತ್ತಿರುವ ಸುಮಿತ್ರಾಬಾಯಿ ಮೇಡಂ ಅವರಿಗೆ, 'ಬೇರೇ ಯಾರಿಗಾದರೂ ಕೊಟ್ಟುಬಿಟ್ಟಾರು ಕೇಳಿ ಕೇಳಿ ಎಂದು ಚಡಪಡಿಸಿದ ಕೃಷ್ಣ ಚೆಂಗಡಿ, ನಿಮ್ಮ ಪುಸ್ತಕ ಕೊಡಿ, ಬೇರೆಯವರದನ್ನು ನಿಲ್ಲಿಸಿ ಮಾಡಿಕೊಡುತ್ತೇವೆ ಎನ್ನುವ ಭರವಸೆಯ ಲಕ್ಷ್ಮೀ ಮುದ್ರಣಾಲಯದ ಮಂಜು ಮತ್ತು ಸಿಬ್ಬಂದಿ ವರ್ಗಕ್ಕೆ,

ನಮ್ಮ ಎಚ್ಚರವನ್ನು ಕಾಯುತ್ತಿರುವ ಎಚ್. ಎಸ್. ರಾಘವೇಂದ್ರರಾವ್, ಯು. ಆರ್. ಅನಂತಮೂರ್ತಿ, ಷ. ಶೆಟ್ಟರ್, ವಿಜಯಮ್ಮ, ಶ್ರೀನಿವಾಸರಾಜು ಕುಟುಂಬ, ರವಿಬೆಳಗೆರೆ, ಜಿ. ರಾಜಶೇಖರ, ಫಣಿರಾಜ್, ಜಿ. ಎನ್. ಮೋಹನ್ ಮುಂತಾದವರಿಗೆ,

ಎಲ್ಲಕ್ಕಿಂತ ಮುಖ್ಯವಾಗಿ ಮಹಾದೇವರ ಪುಸ್ತಕ ಯಾವಾಗ ಬರುತ್ತದೆ ಎಂದು ಕೇಳಿದ/ಕೇಳುತ್ತಿರುವ ಅಕ್ಷರ ನಂಟಿನ ಹೃದಯಗಳಿಗೆ ಅಭಿನವ ಋಣಿ.

**ನ. ರವಿಕುಮಾರ,** ಅಭಿನವದ ಪರವಾಗಿ

## ಎರಡನೆಯ ಮುದ್ರಣದ ಮಾತು

ಎದೆಗೆ ಬಿದ್ದ ಅಕ್ಷರಕ್ಕೆ ಇಡೀ ಕನ್ನಡ ಸಾಂಸ್ಕೃತಿಕ ಲೋಕ ಸಂಭ್ರಮ ಪಟ್ಟಿದೆ. ಒಟ್ಟು ಪುಸ್ತಕದ ವಿನ್ಯಾಸ, ಲೇಖನಕ್ರಮ, ವಿಚಾರ, ಚಿಂತನೆ ಎಲ್ಲವನ್ನೂ ಓದುಗ ಲೋಕ ಸ್ವಾಗತಿಸಿದೆ. ಮಾನವೀಯ ಅಂತಃಕರಣಕ್ಕೆ ತುಡಿಯುವ ಸಂಘಟನೆಗಳು ಎಷ್ಟೋ ದಿನದಿಂದ ಈ ಮಾತುಗಳಿಗೆ ಕಾಯುತ್ತಿದ್ದಂತೆ ಸಂಭ್ರಮಿಸಿವೆ. ಇಲ್ಲಿನ ಅಂತಃಕರಣದ ನುಡಿಗಳು ಅಂತರಂಗಕ್ಕೆ ಮುಟ್ಟುವ ಪರಿ ಬೆರಗಾಗಿಸಿದೆ. ಸತ್ಯ ಮತ್ತು ಪ್ರಾಮಾಣಿಕತೆಗೆ ದೊರೆತ ಗೌರವವಿದು.

## ಮರುಮುದ್ರಣಗಳ ಮಾತು

ಹೆಚ್ಚೂ ಕಮ್ಮಿ ಒಂದು ವಾರದೊಳೊಳಗೆ ಮರುಮುದ್ರಣವಾದ ಎದೆಗೆ ಬಿದ್ದ ಅಕ್ಷರ ಮತ್ತೆ ಮತ್ತೆ ಮುದ್ರಣಗಳನ್ನು ಕಾಣುತ್ತಿದೆ! ಇನ್ನು ಮಾತೇನು? ಕೃತಜ್ಞತೆ ತುಂಬಿ ಬರುತ್ತಿದೆ.

# ಅನಂತಮೂರ್ತಿ ಗೌರವ ಮಾಲಿಕೆ

ಪ್ರಧಾನ ಸಂಪಾದಕರು
**ಷ. ಶೆಟ್ಟರ್**

ಸಂಪಾದಕರು
**ಎನ್. ಎ. ಎಂ. ಇಸ್ಮಾಯಿಲ್**
**ನ. ರವಿಕುಮಾರ**

ಕಳೆದ ಆರು ದಶಕಗಳ ಅವಧಿಯಲ್ಲಿ ಕನ್ನಡದ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂದರ್ಭದಲ್ಲಿ ನಡೆದ ಪ್ರಮುಖ ವಾಗ್ವಾದಗಳ್ಯಾವನ್ನೂ ಅನಂತಮೂರ್ತಿಯವರಿಲ್ಲದೆ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಬಹುಮುಖ್ಯವಾದ ಕೆಲವು ವಾಗ್ವಾದಗಳನ್ನು ಅವರೇ ಆರಂಭಿಸಿದ್ದರೆ ಇನ್ನು ಕೆಲವು ವಾಗ್ವಾದಗಳಿಗೆ ಹೊಸ ತಿರುವು ನೀಡಿದ್ದಾರೆ.

ಅನಂತಮೂರ್ತಿಯವರ ಸ್ಪಂದನೆ ಕೇವಲ ಸಾಹಿತ್ಯಕ್ಕೆ ಸೀಮಿತವಾಗಿಲ್ಲ. ರಾಜಕಾರಣವನ್ನೂ ಅವರು ಚಿಕಿತ್ಸಕ ಮನೋಭಾವದೊಂದಿಗೆ ಎದುರಾಗಿದ್ದಾರೆ. ಚಳವಳಿಗಳು ಕನ್ನಡ ಸಂಸ್ಕೃತಿಯ ಮೂಲಗುಣವಾದ ಸಹಿಷ್ಣುತೆಯನ್ನು ಮರೆತು ಮುಂದುವರಿದಾಗ ಬಹಳ ಧೈರ್ಯದಿಂದ ಪ್ರತಿಭಟಿಸಿ ಹೊಸ ಚಿಂತನೆಯ ಹುಟ್ಟಿಗೆ ಕಾರಣರಾಗಿದ್ದಾರೆ.

ಆಧುನಿಕತೆಯನ್ನು ಅದರ ಇತ್ಯಾತ್ಮಕತೆಯಲ್ಲಿ ಒಪ್ಪಿಕೊಳ್ಳುತ್ತಲೇ ಅದರ ನೇತ್ಯಾತ್ಮಕ ಗುಣಗಳನ್ನು ಕಠಿಣ ವಿಮರ್ಶೆಗೆ ಒಳಪಡಿಸಿದವರು. ಅನಂತಮೂರ್ತಿಯವರಿಗೆ ಎಂಬತ್ತು ತುಂಬುತ್ತಿರುವ ಈ ಹೊತ್ತಿನಲ್ಲಿ ಅವರ ಬೌದ್ಧಿಕ ಧೀಮಂತಿಕೆಯನ್ನು ಗೌರವಿಸುವ ಉದ್ದೇಶ ನಮ್ಮದು.

ಇದಕ್ಕಾಗಿ 'ಅಭಿನವ' ಅನಂತಮೂರ್ತಿ ಗೌರವ ಮಾಲಿಕೆಯ ಪ್ರಕಟಣೆಗೆ ಮುಂದಾಗಿದೆ.

ಈ ಪುಸ್ತಕ ಮಾಲಿಕೆಯ ಪ್ರಧಾನ ಸಂಪಾದಕತ್ವದ ಹೊಣೆ ಡಾ.ಎಸ್. ಶೆಟ್ಟರ್ ಅವರದ್ದು. ಪತ್ರಕರ್ತ ಎನ್.ಎ.ಎಂ. ಇಸ್ಮಾಯಿಲ್ ಮತ್ತು ಅಭಿನವದ ನ. ರವಿಕುಮಾರ ಸಂಪಾದಕರಾಗಿರುತ್ತಾರೆ. ಮುಂದಿನ ಒಂದು ವರ್ಷದ ಅವಧಿಯಲ್ಲಿ ಕನಿಷ್ಠ 12 ಪುಸ್ತಕಗಳನ್ನು ಈ ಮಾಲೆಯಡಿಯಲ್ಲಿ ಪ್ರಕಟಿಸುವ ಉದ್ದೇಶವಿದೆ.

ತನ್ನ ಕಾಲಕ್ಕೆ ಸ್ಪಂದಿಸುತ್ತಲೇ ಶಾಶ್ವತವಾದ ಆದರ್ಶವೊಂದರತ್ತ ತುಡಿಯುವುದು ಅನಂತಮೂರ್ತಿಯವರ ಬರಹ ಮತ್ತು ಮಾತಿನಲ್ಲಿರುವ ಸ್ಥಾಯಿ ಗುಣ. ಇದನ್ನು ಗಮನದಲ್ಲಿಟ್ಟುಕೊಂಡು ಭೂತ/ವರ್ತಮಾನವನ್ನು ಅರ್ಥಮಾಡಿಕೊಳ್ಳುವ, ವಿಶ್ಲೇಷಿಸುವ, ವಿಮರ್ಶಿಸುವ, ಈ ಪ್ರಕ್ರಿಯೆಯ ಮೂಲಕ ಹೊಸ ಒಳನೋಟಗಳನ್ನು ನೀಡಬಲ್ಲ ಭವಿಷ್ಯಮುಖಿ ಬರಹಗಳನ್ನು ಪ್ರಕಟಿಸಬೇಕೆಂಬ ಮಹತ್ವಾಕಾಂಕ್ಷೆ ಈ ಮಾಲಿಕೆಯದ್ದು.

ಈ ಉದ್ದೇಶವನ್ನು ಸಾಧ್ಯಮಾಡಲು ಈಗಾಗಲೇ ಕನ್ನಡದ ಉತ್ಕೃಷ್ಟ ಮನಸ್ಸುಗಳು ಒಪ್ಪಿಗೆ ನೀಡಿವೆ. ದೇವನೂರ ಮಹಾದೇವರ ಬರಹಗಳ ಈ ಸಂಕಲನ ಅನಂತಮೂರ್ತಿ ಗೌರವ ಮಾಲಿಕೆಯ ಮೊದಲ ಪುಸ್ತಕ.

# ನನ್ನ ಮಾತು

ಇಲ್ಲಿನ ಕೆಲವು ಆರಂಭದ ಬರಹಗಳಿಗೆ ಸುಮಾರು ನಲವತ್ತಕ್ಕೂ ಹೆಚ್ಚು ವರ್ಷ ವಯಸ್ಸಾಗಿದೆ. ಎಲ್ಲೆಲ್ಲೋ ಇದ್ದವು. ಯಾರ್‍ಯಾರ ಬಳಿಯೋ ಇದ್ದವು. ಯಾವ್ಯಾವ ರೂಪದಲ್ಲೋ ಇದ್ದವು. ಇವುಗಳನ್ನು ಹುಡುಕುವುದು, ಸಿಕ್ಕಿದ ಬರಹಗಳಲ್ಲಿ ಕೆಲವು ಕಡೆ ಇಲ್ಲದ ಭಾಗವನ್ನು ಅಂದಾಜಿಸಿ ಬರೆಯುವುದು, ಪುನರುಕ್ತಿ ತೆಗೆಯುವುದು ಹೀಗೆ ಒಂದು ಲೇಖನವನ್ನು ಎರಡಾಗಿಸಿದ್ದೂ ಇದೆ. ಹಾಗೆ ಎರಡು ಲೇಖನಗಳನ್ನು ಒಂದು ಮಾಡಿದ್ದೂ ಇದೆ, ಜೊತೆಗೆ ಒಂದೆರಡು ಲೇಖನಗಳನ್ನು ಮೂಲ ಲೇಖನವನ್ನು ಆಧರಿಸಿ ಹೆಚ್ಚು ಕಮ್ಮಿ ಹೊಸದಾಗೆ ಬರೆದಂತೂ ಆಗಿದೆ. ಇದೊಂದು ರೀತಿ ಉತ್ಖನನ, ಗ್ರಂಥಸಂಪಾದನೆ, ಸಂಕಲಿಸುವುದು ಇತ್ಯಾದಿ ಆಗುತ್ತ, ಇದೊಂದು ಪಯಣ ಜೊತೆಗೆ ಹಳೆಯ ಮನೆಯ ರಿಪೇರಿಯಂತೆಯೂ ಆಗಿಬಿಟ್ಟಿತು.

ಈ 'ಎದೆಗೆ ಬಿದ್ದ ಅಕ್ಷರ'ವನ್ನು ಈಗ ಕೈಗಿಡುವಂತಾಗಲು, ಕಳೆದ ಒಂದು ದಶಕದಿಂದಲೂ ಸೋಲರಿಯದ ತ್ರಿವಿಕ್ರಮನಂತೆ ಹಿಂಬಾಲಿಸಿದ ಅಭಿನವದ ರವಿ ಮುಖ್ಯ ಕಾರಣರು. ಇಲ್ಲಿನ ಬಹುತೇಕ ಲೇಖನಗಳು, ಭಾಷಣದ ಕ್ಯಾಸೆಟ್‌ಗಳನ್ನು ನಾಡಿನ ಮೂಲೆ ಮೂಲೆಗಳಿಂದಲೂ ಸಂಗ್ರಹಿಸಿ ಅದನ್ನು ನನಗೇ ನೀಡಿ ನಿಜವಾದ ಅರ್ಥದಲ್ಲಿ ಅವರು ಈ ಕೃತಿಗೆ ಸಂಪಾದಕರಾಗಿದ್ದಾರೆ! ಜೊತೆಗೆ ಇಲ್ಲಿನ ಬರಹಗಳನ್ನು–
ಪ್ರೀತಿಯಿಂದ ಪ್ರಕಟಿಸಿದ ಪತ್ರಿಕೆಗಳಿಗೆ, ಕಾಪಾಡಿಕೊಂಡಿದ್ದು ನೀಡಿದ ಬೊಗಸೆಗಳಿಗೆ, ಹಾಗೆ ಎದೆಗೆ ಬಿದ್ದ ಅಕ್ಷರಗಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿದ ಕಣ್ಣುಗಳಿಗೆ ನನ್ನ ನೆನಕೆಗಳು ಸಲ್ಲುತ್ತವೆ. ಇಲ್ಲಿನ ಕೆಲವು ಲೇಖನಗಳ ಜೊತೆಗಿರುವ ಗೆಳೆಯ ರಾಮು, ಔಚಿತ್ಯದ ಸಲಹೆ ನೀಡಿದ ರೂಪ ಹಾಸನ, ಪುಸ್ತಕ ವಿನ್ಯಾಸ ಮಾಡುತ್ತ ಶ್ರಮಾನಂದ ಅನುಭವಿಸುತ್ತಿದ್ದ ಸಚ್ಚು ಹಾಗೂ ಈ ಕೃತಿಯನ್ನು ಸಂಕಲಿಸುತ್ತಿದ್ದ ಸಮಯದಲ್ಲಿ ನಮ್ಮ ಮನೆ ರಿಪೇರಿ ಪುಸ್ತಕದ ಕೊಠಡಿ ಕಟ್ಟುತ್ತ ನನಗೆ ಏನೂ ಒತ್ತಡ ಕೊಡದೆ ಎಚ್ಚರಿಕೆವಹಿಸಿದ, ಕಟ್ಟಡ ಕಟ್ಟುವುದನ್ನು ಕಲೆ ಎಂದು ಒಂದಾಗುವ ಮನು ಬ್ರದರ್ಸ್ ಒಟ್ಟುಕುಟುಂಬಕ್ಕೂ ಕೃತಜ್ಞತೆಗಳು.

**ಡಿಸೆಂಬರ್ 2012** **ದೇವನೂರ ಮಹಾದೇವ**
**ಮೈಸೂರು.**

# ಎದೆಗೆ ಬಿದ್ದ ಅಕ್ಷರದಲ್ಲಿ

## ಮನವ ಕಾಡುತಿದೆ

ಎದೆಗೆ ಬಿದ್ದ ಅಕ್ಷರ / ೩
ನಾನು ಚಿತ್ರಿಸಿದಂತೆ ನನ್ನ ದೇವರು / ೪
ನನ್ನ ದೇವರು / ೫
ಮನವ ಕಾಡುತಿದೆ / ೭
ದಯೆಗಾಗಿ ನೆಲ ಒಣಗಿದೆ / ೮
ಮೂರ್ಛಾವಸ್ಥೆಯಲ್ಲಿ ಕಾರುಣ್ಯ / ೧೦
ಕೇವಲ ಮನುಷ್ಯನಾಗುವುದೆಂದರೆ... / ೧೨
ಕೊಳಕು ಎಲ್ಲಿದೆ? / ೧೪
ಅಸ್ಪೃಶ್ಯನಾಗಿರುವುದೆಂದರೆ... / ೧೬
ಯಾರಿಗೆ ಯಾವ ಚಿಕಿತ್ಸೆ? / ೧೮
ಅಹಿಂಸೆಯ ಹುಡುಕುತ್ತಾ / ೨೧
ಬುದ್ಧನೆಡೆಗೆ ಒಂದು ನಡಿಗೆ / ೨೪
ನಡೆದು ಬರುವ ಅರಿವು / ೨೬
ಲಯವಿಡಿದು / ೨೮
ಕುಸುಮಬಾಲೆ ಹುಟ್ಟುವ ಮುನ್ನ / ೩೦
ಬಂಡೆಗಳ ಮೇಲೆ ಚಿಗುರೊಡೆಯಬೇಕಾಗಿದೆ / ೩೨
ದನಿ ಇಲ್ಲದೆ ಮಲಗಿರುವವರ ದನಿಯಾಗಿಯೂ / ೩೫
ಆನೆ ಮೇಲೆ ಹೋಗಿ, ಆದರೆ... / ೩೮

## ಒಳನೋಟ

ಕಣ್ಣು ತೆರೆಸುವ ಮೊದಲ ಕೆಲಸ / ೪೩
ಅಸ್ಪೃಶ್ಯತೆ ನಿನ್ನ ಮೂಲ ಎಲ್ಲಿ? / ೪೫
ದಲಿತ ಮನಸ್ಸಿನ ದುಗುಡದಲ್ಲಿ / ೪೮
ಹೆಂಡ, ಬೀರು ಮತ್ತು ದಲಿತರು / ೫೦
ಹೆಣ್ಣು ಜಾತಿ ಮತ್ತು ದಲಿತ ಜಾತಿ / ೫೨
ಮುಸ್ಲಿಮರೊಡನೆ ಪಿಸುಮಾತು / ೫೪
ಬೇಡ ಎನಲಿ ಯಾವ ನಾಲಿಗೆಯಲಿ? / ೫೬
ಬ್ರಾಹ್ಮಣನ ಒಂದು ಹಲ್ಲಿಗೆ ಗೌಡನ ಎರಡು ಹಲ್ಲು / ೫೮
ಆಲನಹಳ್ಳಿಗೆ ಅರ್ಥವಾಗುವುದು ಮತ್ತು ಅರ್ಥವಾಗದಿರುವುದು / ೬೦
ಒಂದು ಒಳನೋಟ / ೬೩
ಅಶೋಕಪುರಂ ಗೋವಿಂದರಾಜುವಿಗೆ ಹೆಣ್ಣಿಲ್ಲ? / ೬೬
ಆರ್ಮುಗಂ, ಪ್ರಸಾದ್‌ಗೆ ನಿದ್ದೆ ಬಾರದಿರಲಿ / ೬೮
ಜೀತ ಬಿಡುಗಡೆಯಲ್ಲಿ ಬಿದ್ದ ಕನಸು / ೭೦
ನಾಳೈ ನಮದ್ಯೆ / ೭೩
ದೊಂಬಿದಾಸ್! / ೭೫
ಎಂಡಿಎನ್ ಈಜು / ೭೭
ಹುಟ್ಟುತ್ತ ವಿಶ್ವಮಾನವ / ೮೦
ಅರುಳುಮರುಳು ಕಣ್ಣಲ್ಲಿ– ದಸಂಸ / ೮೨
ಗಂಡಭೇರುಂಡ ಪಕ್ಷಿ ಕಥೆ / ೮೫
ಉದ್ಘಾಟನೆಯಾದ ಸಮಾರೋಪ! / ೮೭

## ಮತಾಂಧರ ಮೆದುಳೊಳಗೆ

ಮತಾಂಧರ ಮೆದುಳೊಳಗೆ ಕೆಲವು ಕ್ಷಣಗಳು / ೯೧
ರಾಮನನ್ನು ಹುಡುಕಬೇಕಾಗಿದೆ! / ೯೭
ಮಂದಿರ ಅಗೆದರೆ ಒಳಗೆ ಮಂಡಲ್! ಹಾಗೂ ಒಂದು ಡಿಎನ್‌ಎ ಪರೀಕ್ಷೆ / ೧೦೦
'ದೇಶಭಕ್ತಿ'ಯಲ್ಲಿ ನನ್ನ ಕಾಡುತ್ತಿರುವ ಶಂಕೆ / ೧೦೪
ಹಿಂದೂ ಸಮಾಜೋತ್ಸವ ಮತ್ತು ಆರ್‌ಎಸ್‌ಎಸ್ / ೧೦೬
ಗೋಹತ್ಯೆಯ ನಿಷೇಧ ಕಾಯಿದೆಯೊಳಗೆ / ೧೦೮
ಬೇಕಾದುದು– ವೈಷ್ಣವ ದೀಕ್ಷೆಯಲ್ಲ; ತ್ರಿಜ ದೀಕ್ಷೆ / ೧೧೨
ಮಠಕ್ಕೂ ಒಂದು ಪತ್ರ / ೧೧೬
'ಇಂಥ ಪರಿಸ್ಥಿತಿ ಬರಬಾರದಾಗಿತ್ತು' / ೧೧೮

## ಹೀಗೇ ಮುಂದುವರೆದರೆ

ಹೀಗೇ ಮುಂದುವರೆದರೆ / ೧೨೧
ಶಾಪವಿಮೋಚನೆಗಾಗಿ / ೧೨೫
ಬೇಕಿದೆ ಒಂದು ರಥಯಾತ್ರೆ / ೧೨೭
ಜೈ ಅಹಿಂದ್ / ೧೩೧
ಇಂಗದ ದಾಹದ ಇತ್ತೀಚಿನ ರಾಜಕೀಯ / ೧೩೪
ಒಂದು ಪತ್ರಿಕಾಗೋಷ್ಠಿ / ೧೩೭
ಕನ್ನಡಕ್ಕೂ ಒಂದು 'ರಾಷ್ಟ್ರೀಯತೆ'? / ೧೩೯
ಆಕಾಶದಲ್ಲಿ ರಣಹದ್ದುಗಳು / ೧೪೨
ಅಂದಿನ ಬಾಯಾರಿಕೆ ಮತ್ತು ಇಂದಿನ ದಾಹ / ೧೪೪
ಬೇಸಾಯದಲಿ ಬದುಕುಳಿಯಲು / ೧೪೭
ಇಂಗ್ಲಿಷ್‌ನೊಡನೆ ಗುದ್ದಾಟದಲಿ.... / ೧೫೧
ಮುಚ್ಚಿ ವಿಲೀನ ಎಂದರೆ ಕೊಂದು ಸ್ವರ್ಗಕ್ಕೆ ಕಳುಹಿಸಲಾಯಿತು ಎಂದಂತೆ / ೧೫೪
ಸರ್ಕಾರ ಕಣ್ಬಿಡಲಿ / ೧೫೬
ನೃಪತುಂಗ ಪ್ರಶಸ್ತಿ ಪಡೆಯಲೋಸುಗ / ೧೫೯

## ಮುತ್ತು ಮುಳುಗ ಮತ್ತು ಇತರ

ಒಂದು ಸ್ವಾಗತ ಭಾಷಣ! / ೧೬೩
ಹುಟ್ಟಿನ ಜಾಡು ಹಿಡಿದು / ೧೬೫
ಹಿರಿಯ ವಿದ್ಯಾರ್ಥಿಗಳ ಬೀಳ್ಕೊಡುತ್ತಾ ಪಂಪನ ಜೊತೆ / ೧೬೯
ಖಾಸನೀಸ ಮುಖೇನ ಸಣ್ಣಕಥೆ / ೧೭೩
ವೈಶಾಖದೊಳಗೆ... / ೧೭೮
'ಮುತ್ತು ಮುಳುಗ' ಪ್ರೊ. ಎಲ್. ಬಸವರಾಜು / ೧೭೯
ಲಂಕೇಶ್ ಎಂಬ ತಲ್ಲಣಿಸುವ ಜೀವ / ೧೮೨
ಅರಸು ಚಕ್ರವರ್ತಿಯಂತೆ... / ೧೮೬
ಕೊನೆಯದಾಗಿ, ಗಾಯತ್ರಿ ಮಂತ್ರ! / ೧೮೮
ಎಂಡಿಎನ್ ಸಂದರ್ಶನ / ೧೯೧
'ಮಜ್ಜು ಇಲ್ಲವಾದ; ಕಾಡು ಗೋಳ್ಗರೆಯುತ್ತಿದೆ' / ೧೯೯
ಲೋಹಿಯಾ ನೆನಪಿನ ಸುತ್ತಮುತ್ತ / ೨೦೫

## ಮುಖಾಮುಖಿ

ಮಾಜಿ ಉಸ್ತಾದರೊಬ್ಬರ ಹಾಲಿ ಜೀವನ / ೨೧೧
ಒಂದು ಹೆಬ್ಬೆಟ್ಟು ಕಥೆ / ೨೧೫
ತಗಡೂರು ಅಸ್ಪೃಶ್ಯ ವಸತಿ ಹೋರಾಟ ಇತಿಹಾಸ / ೨೨೦
ಕುರುಡು ಜಾತೀಯು ಕುಣಿಯೂತಲಿತ್ತೊ / ೨೨೮
ಬ್ರಾಹ್ಮಣರ ಬಹಿರಂಗ ಸಭೆಯ ಅಂತರಂಗದಲಿ ಕೆಲಕಾಲ / ೨೪೦

## ಸಮಾನತೆಯ ಕನಸನ್ನು ಮತ್ತೆ ಕಾಣುತ್ತಾ

ಮಾನವೀಯತೆ ಅಂತಾರಲ್ಲ– ಅದರ ಬಗ್ಗೆ / ೨೫೧
ದಲಿತ ನೌಕರರ ಜೊತೆ ಪಿಸುಮಾತು / ೨೫೭
ಪ್ರತಿಭಾನ್ವೇಷಣೆಗಾಗಿಯೇ ಮೀಸಲಾತಿ / ೨೬೦
ಖಾಸಗೀ ಸಂಚಿನ ವಲಯ / ೨೬೪
ಒಳಮೀಸಲಾತಿ ಹಾಗೂ ಜಾತಿ ಜನಗಣತಿ / ೨೬೮
‘ಅಸ್ಪೃಶ್ಯತೆ’ ಅಂದರೆ ವರ್ಣಭೇದದ ಮುತ್ತಾತ / ೨೭೪
ಭಾರತ ಸಂವಿಧಾನಕ್ಕೆ ‘ಭೂತ’ಚೇಷ್ಟೆ / ೨೮೦
ನಾನು ಗಾಂಧಿ ಚಿತ್ರ ನೋಡಿದೆ ಅಥವಾ ಆಕಾಶಕ್ಕೆ ಎರಡು ಗೇಣು ಕಮ್ಮಿ / ೨೮೮
ಗಾಂಧಿ ಅಂಬೇಡ್ಕರ್ – ಒಂದಿಷ್ಟು ಮಾತು / ೨೯೪
ಆ ದಶಕ – ಬಿಡುಗಡೆಯ ಮಾತು / ೨೯೯
ಸರ್ವೋದಯ ಕರ್ನಾಟಕ– ಹೊಸ ರಾಜಕೀಯದತ್ತ ಅಂಬೆಗಾಲು / ೩೦೬
ಸಮಾನತೆಯ ಕನಸನ್ನು ಮತ್ತೆ ಕಾಣುತ್ತಾ / ೩೧೧

# ಮನವ
# ಕಾಡುತಿದೆ

## ಎದೆಗೆ ಬಿದ್ದ ಅಕ್ಷರ

ಭೂಮಿಗೆ ಬಿದ್ದ ಬೀಜ
**ಎದೆಗೆ ಬಿದ್ದ ಅಕ್ಷರ**
ಇಂದಲ್ಲ ನಾಳೆ ಫಲ ಕೊಡುವುದು
(ಸಾಕ್ಷರತೆಗಾಗಿ ರಚಿತ ನುಡಿ)

# ನಾನು ಚಿತ್ರಿಸಿದಂತೆ ನನ್ನ ದೇವರು



# ನನ್ನ ದೇವರು

ಕನ್ನಡದ ಪ್ರಸಿದ್ಧ ವಾರಪತ್ರಿಕೆಯೊಂದು 'ನನ್ನ ದೇವರು' ಹೆಸರಡಿ ಲೇಖಕರ, ಚಿಂತಕರ ಅನಿಸಿಕೆಗಳನ್ನು ಪ್ರಕಟಿಸುತ್ತಿತ್ತು. ಅಕಸ್ಮಾತ್ ನನ್ನನ್ನೂ ಕೇಳಿದರೆ ಯಾವುದಕ್ಕೂ ಇರಲಿ ಎಂದು ನಾನು ಬರೆಯಬೇಕಾದುದನ್ನು ಅಂದಾಜಿಸಿಕೊಂಡಿದ್ದೆ. ಆದರೆ ಪತ್ರಿಕೆಯವರು ನನಗೆ ದೇವರಿಲ್ಲ ಎಂದು ನಿರ್ಧರಿಸಿಕೊಂಡೋ ಏನೋ ನನ್ನನ್ನು ಕೇಳಲೇ ಇಲ್ಲ. ನಾನು ಅಂದಾಜಿಸಿಕೊಂಡಿದ್ದ ನನ್ನ ದೇವರು ನನ್ನೊಳಗೇ ಉಳಿಯಿತು.

ನನ್ನ ದೇವರು ನನ್ನೊಳಗೆ ಉಳಿದಿರುವುದು ಹೀಗೆ:

ಕವಿ ಸಿದ್ಧಲಿಂಗಯ್ಯ ಒಮ್ಮೆ ನನಗೆ ಹೇಳಿದ ಕತೆಯಲ್ಲಿ ಮನೆಮಂಚಮ್ಮ ಎಂಬ ಗ್ರಾಮದೇವತೆಯ ಒಳಗಿಂದ ನನ್ನ ದೇವರು ಒಡಮೂಡುತ್ತದೆ– ಒಂದ್ಸಲ ಒಂದು ಗ್ರಾಮದ ಜನರೆಲ್ಲಾ ಸೇರಿ ತಮ್ಮ ದೇವತೆಗೆ ಗುಡಿಕಟ್ಟಲು ಆರಂಭಿಸುತ್ತಾರೆ. ಹೀಗೆ ಕಟ್ತಾ ಚಾವಣಿ ಮಟ್ಟಕ್ಕೆ ಆ ಗುಡಿ ಬಂದಾಗ ಒಬ್ಬನ ಮೈಮೇಲೆ ಆ ದೇವತೆ ಮಂಚಮ್ಮ ಆವಾಹಿಸಿಕೊಂಡು 'ನಿಲ್ಸಿ ನನ್ ಮಕ್ಕಳಾ' ಎಂದು ಅಬ್ಬರ ಮಾಡುತ್ತಾಳೆ. ಆ ಅಬ್ಬರಕ್ಕೆ ಜನ ತಮ್ಮ ಕೆಲ್ಸ ನಿಲ್ಸಿ ಕಕ್ಕಾಬಿಕ್ಕಿಯಾಗಿ ನೋಡುತ್ತಿರಲು ಆ ದೇವತೆ ಹಾಗೂ ಆ ಜನರ ನಡುವೆ ಮಾತುಕತೆ ನಡೆಯುತ್ತದೆ:

'ಏನ್ರಯ್ಯಾ ಏನ್ ಮಾಡ್ತಾ ಇದ್ದೀರಿ?'

'ನಿನಗೊಂದು ಗುಡಿಮನೆ ಕಟ್ತಾ ಇದ್ದೀವಿ ತಾಯಿ'

'ಓಹೋ, ನನಗೇ ಗುಡಿಮನೆ ಕಟ್ತಾ ಇದ್ದೀರೋ? ಹಾಗಾದರೆ ನಿಮಗೆಲ್ಲಾ

ಮನೆ ಉಂಟಾ ನನ್ನ ಮಕ್ಕಳಾ?'

'ನನಗಿಲ್ಲ ತಾಯಿ'– ಅಲ್ಲೊಬ್ಬ ಹೇಳ್ತಾನೆ.

'ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ'

–ಹೀಗೆಂದ ಮಂಚಮ್ಮದೇವಿ ಮನೆಮಂಚಮ್ಮನಾಗುತ್ತಾಳೆ!

ಛಾವಣಿ ಇಲ್ಲದ ಗುಡಿಯಲ್ಲಿ ತಾಯಿ ಮನೆಮಂಚಮ್ಮ ಇಂದು ಪೂಜಿತಳಾಗುತ್ತಿದ್ದಾಳೆ. ಈ ರೀತಿಯಲ್ಲಿ ಛಾವಣಿ ಇಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಬುದ್ಧನನ್ನು ಇಟ್ಟರೆ ಅದೇ ನನ್ನ ದೇವರಾಗುತ್ತದೆ.

## ಮನವ ಕಾಡುತಿದೆ

‘ದಿನ ಸವೆಯುತ್ತಿದೆ. ದಿನ ಮುಗಿಯುವ ಕೊನೆಯಲ್ಲಿ ಎಲ್ಲವೂ ಮುಗಿದ ಮೇಲೆ ಭಾವನೆ ಮೀರಿದ ಇಥಿಯೋಪಿಯಾದ ಮಕ್ಕಳು ಬರುತ್ತವೆ. ಕ್ಷಾಮದ ಬಿಳಿ ಹಲ್ಲುಗಳು ಅವುಗಳನ್ನು ತಿನ್ನುತ್ತವೆ. ಅವುಗಳು ನನ್ನನ್ನು ತಿನ್ನುತ್ತವೆ...’

## ದಯೆಗಾಗಿ ನೆಲ ಒಣಗಿದೆ

ಬುದ್ಧನಂತೂ ಯಾವ ಸಹಸ್ರಮಾನವನ್ನೂ ಮೀರಿದವನು.

ಈಗಷ್ಟೆ ಕಳೆದುಹೋದ ಸಹಸ್ರಮಾನದ ಕ್ರಿಸ್ತನ ದೇಹದ ದಯೆಯ ರಕ್ತ ಈ ಭೂಮಿಗೆ ಬಿದ್ದು ಎರಡು ಸಾವಿರ ವರ್ಷಗಳು ಆದವಂತೆ. ರಕ್ತ ಭೂಮಿಗೆ ಬೀಳದಿರುವುದು ಅಂದಿಗಿಂತಲೂ ಇಂದಿಗೇ ಹೆಚ್ಚು ಬೇಕಾಗಿದೆ. ಕ್ರಿಸ್ತ ಮತ್ತು ದಯೆಗಾಗಿ ಭೂಮಿ ಒಣಗಿದೆ.

ಇದಾದ ಮೇಲೆ ನನಗೆ ಈ ಸಹಸ್ರಮಾನದಲ್ಲಿ ಕಾಣುವುದು ಹನ್ನೆರಡನೆಯ ಶತಮಾನದ ವಚನ ಆಂದೋಲನದ ಆ ಇಪ್ಪತ್ತೈದು ವರ್ಷಗಳು. ಹುಡುಕಿದರೂ ಜಗತ್ತಿನಲ್ಲೇ ಕರ್ನಾಟಕದ ಈ ಮಾದರಿ ಬಹುಶಃ ಎಲ್ಲೂ ಸಿಗುವುದಿಲ್ಲವೇನೋ! ಈ ವಚನಧರ್ಮವನ್ನು ಜಾತಿಯ ಬಚ್ಚಲಿನಿಂದ ಮೇಲೆತ್ತಿ ರಕ್ಷಿಸಿದರೆ ಜಗತ್ತಿಗೇ ಇದು ಬೆಳಕಾಗಬಹುದೇನೋ. ಇದು ಜಾತಿಯಾದರೆ ಕೆಟ್ಟ ಜಾತಿ; ಧರ್ಮವಾದರೆ ಮಹೋನ್ನತ ಧರ್ಮ.

ಆಮೇಲೆ ಪರಮಹಂಸ. ಒಂದು ದೇಹ ಮನಸ್ಸು ಅದೆಷ್ಟು ಮಾಧ್ಯಮವಾಗಬಹುದೋ ಅದಷ್ಟೂ ಒಂದೇ ದೇಹದಲ್ಲಿ ಸಂಭವಿಸಿದ ಒಂದು ಉದಾಹರಣೆ ಪರಮಹಂಸ. ಯಾವುದನ್ನೂ ಕೊಲ್ಲದೆ, ಒಳಿತುಗಳನ್ನೆ ಕೂಡಿಸುತ್ತ ಕೂಡಿಸುತ್ತ ಹೋದ ಪರಮಹಂಸ ಹಾಗೂ ನಾನು ಹುಟ್ಟುವ ಮೊದಲು ಕಾಲವಶವಾದ ಗಾಂಧಿ– ಒಂದು ಜೀವಿತದಲ್ಲಿ ಇರಬಹುದಾದ ಗಳಿಗೆ ಗಳಿಗೆಗಳನ್ನು ಬದುಕುತ್ತಾ ಗಳಿಗೆಯಿಂದ ಗಳಿಗೆಗೆ ಎಡವುತ್ತ ಸತ್ಯ ಸಮಾನತೆಗಳ ಕಡೆಗೆ ನಡೆಯುತ್ತ ಸಮಷ್ಟಿಯೇ ಆದ ಗಾಂಧಿ ಜೊತೆಗೆ ಅಂಬೇಡ್ಕರ್‌ರ ಆರ್ತತೆ ಹಾಗೂ ಋಷಿ ಐನ್‌ಸ್ಟೈನ್.

ಇಷ್ಟಾದ ಮೇಲೆ ವ್ಯಾಸ ಕ್ರಿಸ್ತಪೂರ್ವವೋ ಕ್ರಿಸ್ತಶಕವೋ ನನಗೆ ತಿಳಿಯದು. ಅವನು ಎಲ್ಲಾ ಶತಮಾನಗಳ ಜತೆ ಬೆಳೆಯುತ್ತಲೇ ಇರುವವನು. ಟಾಲ್‌ಸ್ಟಾಯ್, ಶೇಕ್ಸ್‌ಪಿಯರ್ ಹಾಗೂ ನಮ್ಮ ನೆಲದ ಪಂಪ, ಕುಮಾರವ್ಯಾಸ, ಕವಿ ಬೇಂದ್ರೆಯವರ ಒಂದಿಷ್ಟು ಕವಿತೆ, ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಪುಣ್ಯದಂತೆ ನನಗೆ ಕಾಣಿಸುತ್ತವೆ.

## ಮೂರ್ಛಾವಸ್ಥೆಯಲ್ಲಿ ಕಾರುಣ್ಯ

ಬುದ್ಧನ ಕಾರುಣ್ಯ ನನ್ನ ಮನದೊಳಗೆ ಕೂತ ಬಗೆಯನ್ನು ಒಂದು ಉದಾಹರಣೆಯಿಂದ ಹೇಳಲು ಪ್ರಯತ್ನಿಸುವೆ.

ಇತ್ತೀಚೆಗೆ ಶಿವಮೊಗ್ಗದ ಡಾ. ಅಶೋಕ ಪೈ ಅವರು ಮೈಸೂರಿಗೆ ಬಂದಿದ್ದರು. ಅವರು ಮನಸ್ಸಿನ ಬಗ್ಗೆ ನಡೆದಿರುವ ಒಂದು ಸಂಶೋಧನಾ ಸತ್ಯವನ್ನು ಹೇಳಿದರು. ಏನೆಂದರೆ– ಕೆಲವು ಜನ ಒಂದು ಕೊಠಡಿಯಲ್ಲಿ ಕುಳಿತು ಟೆಲಿವಿಷನ್ ನೋಡುತ್ತಿದ್ದಾರೆ ಎಂದಿಟ್ಟುಕೊಳ್ಳೋಣ. ಇನ್ನೊಂದಿಷ್ಟು ಜನ ಇದರ ಅರಿವಿಲ್ಲದೆ ಇನ್ನೊಂದು ಪಕ್ಕದ ಕೊಠಡಿಯಲ್ಲಿ ಇಸ್ಪೀಟ್ ಆಡುತ್ತಲೊ, ಏನೊ ಮಾತುಕತೆಯಾಡುತ್ತಲೊ ಅಲ್ಲಿ ತಮ್ಮಷ್ಟಕ್ಕೆ ತಾವಿರುವರು ಎಂದಿಟ್ಟುಕೊಳ್ಳೋಣ. ಆಗ ಟೆಲಿವಿಷನ್‌ನಲ್ಲಿ ಯಾವುದಾದರೂ ಕೊಲೆ ದೃಶ್ಯ ಬಂದಾಗ ಇಲ್ಲಿ ಇದನ್ನು ನೋಡುತ್ತಿದ್ದವರ ದುಃಖದ ಭಾವನೆಯು ಇದನ್ನು ನೋಡದೆ ಇರುವ ಪಕ್ಕದ ಕೊಠಡಿಯಲ್ಲಿ ತಮ್ಮಷ್ಟಕ್ಕೆ ತಾವೇ ಇಸ್ಪೀಟು ಆಡುತ್ತಿರುವವರ ಮನಸ್ಸಿಗೂ ಮುಟ್ಟಿ ಅವರ ಮನಸ್ಸು ಸ್ವಲ್ಪಮಟ್ಟಿಗೆ ದುಗುಡಗೊಳ್ಳುತ್ತದಂತೆ. ಅದೇ ಟೆಲಿವಿಷನ್‌ನಲ್ಲಿ ಯಾವುದಾದರೂ ನೃತ್ಯ ದೃಶ್ಯ ಬಂದಾಗ ಅದನ್ನು ನೋಡುತ್ತಿದ್ದವರ ಖುಷಿ ಭಾವನೆಯು ಪಕ್ಕದ ಕೊಠಡಿಯಲ್ಲಿ ಇದನ್ನು ನೋಡದ ತಮ್ಮಷ್ಟಕೆ ತಾವೇ ಇಸ್ಪೀಟು ಆಡುವವರ ಮನಸ್ಸಿನ ಮೇಲೂ ಪರಿಣಾಮ ಮಾಡಿ ಸ್ವಲ್ಪ ಮಟ್ಟಿಗೆ ಸಂತೋಷದ ಭಾವನೆ ಉಂಟಾಗುವುದಂತೆ.

ಈ ನಿಜ ಏನನ್ನು ಹೇಳುತ್ತದೆ? ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ ಎಂದು ಹೇಳುತ್ತದೆ. ಯಾವುದೇ ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ ಎಲ್ಲಾ ಜೀವಿಗಳಲ್ಲೂ ಕಂಪನ ಉಂಟು

ಮಾಡುತ್ತಿರುತ್ತದೇನೊ. ಈ ಅನುಕಂಪನ ನಿಜವು ಇಡೀ ಜೀವಸಂಕುಲವನ್ನೆ ಒಂದು ಎಂದು ಹೇಳುತ್ತದೆ.

ಬುದ್ಧನ ಕಾರುಣ್ಯ ಇಲ್ಲಿಂದಲೇ ಮೂಡಿರಬಹುದು.

ಕೊಲೆ ಸುಲಿಗೆ ದ್ವೇಷ ಅಸೂಯೆಗಳಿಂದ ಕ್ಷೋಭೆಗೊಂಡು ನರಳುತ್ತಿರುವ ಜಗತ್ತು– ಅದು ಘಾಸಿಗೊಳಿಸುವುದು– ತನ್ನ ಆಳದ ಒಳ ಸಮಷ್ಟಿ ಮನಸ್ಸನ್ನೆ. ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ. ನಾವು ಮನುಷ್ಯರು ಗುಣವಾಗಬೇಕಾಗಿದೆ.

ನಮ್ಮೊಳಗೆ ಮೂರ್ಛಾವಸ್ಥೆಯಲ್ಲಿರುವ ಕಾರುಣ್ಯವನ್ನು ಎಚ್ಚರಗೊಳಿಸಬೇಕಾಗಿದೆ.

ಈ ಎಳೆ ಹಿಡಿದು ಜಾಗತೀಕರಣವನ್ನೂ ರೂಪಿಸಬೇಕಾಗಿದೆ. ಆಗ ಮಾತ್ರವೇ ಅದು ಜಾಗತೀಕರಣ.

## ಕೇವಲ ಮನುಷ್ಯನಾಗುವುದೆಂದರೆ...

ಕನ್ನಡ ಕಾದಂಬರಿ 'ಇಂದಿರಾಬಾಯಿ'ಗೆ ಇಂದಿಗೆ ನೂರು ವರ್ಷ. ಈ ನೂರು ವರ್ಷಗಳಲ್ಲಿ ಶ್ರೇಷ್ಠವಾದ ಕಾದಂಬರಿ ಯಾವುದು ಎಂದು ತಿರುಗಿ ನೋಡಿದಾಗ– ಅದು 'ಮಲೆಗಳಲ್ಲಿ ಮದುಮಗಳು'. ಈ ಎರಡೂ ಕೃತಿಗಳಿಗೂ ಕೃತಜ್ಞತೆ ಸಲ್ಲಿಸುವುದರ ಮೂಲಕ ಮಂಗಳೂರು ವಿಶ್ವವಿದ್ಯಾಲಯ ಏರ್ಪಡಿಸಿರುವ– 'ಯಜಮಾನ್ಯ ಮತ್ತು ಪ್ರತಿರೋಧದ ನೆಲೆ' ಎಂಬ ಈ ವಿಚಾರ ಸಂಕಿರಣವನ್ನು ಉದ್ಘಾಟನೆ ಮಾಡುತ್ತಿದ್ದೇನೆ.

ಒಬ್ಬ ವ್ಯಕ್ತಿಗೆ ಇರುವ ಸೂಕ್ಷ್ಮತೆ, ಅಂತಃಕರಣ, ಸಹಾನುಭೂತಿ, ಕಾಣುವ ಕಣ್ಣು ಹಾಗೂ ಆತ ನಿಂತ ನೆಲೆ ಇವುಗಳಿಂದಾಗಿ ಒಂದೇ ವಸ್ತುವಿಚಾರಗಳು ಹೇಗೆ ಯಜಮಾನ್ಯವೋ, ಪ್ರತಿಭಟನೆಯೋ, ಬಂಡಾಯವೋ ಆಗಿ ಪರಿಣಮಿಸುವ ರೀತಿಯನ್ನು ಒಂದು ಉದಾಹರಣೆಯ ಮೂಲಕ ಮನದಟ್ಟು ಮಾಡಲು ಪ್ರಯತ್ನಿಸುವೆ. ಆ ಉದಾಹರಣೆಯು ಉಡುಪಿಯ ರಥಬೀದಿಯಲ್ಲಿದೆ. ಅಲ್ಲಿ ಕೃಷ್ಣ ದೇವಾಲಯವಿದೆ. ಹೊರಗೆ ಕನಕದಾಸ ಹಾಡುವ ಭಂಗಿಯಲ್ಲಿ ನಿಂತಿದ್ದಾನೆ. ನಡುವೆ ಒಂದು ಕಿಂಡಿ ಇದೆ. ಈ ದೃಶ್ಯ ಯಾರ್‍ಯಾರಿಗೆ ಹೇಗೆ ಕಾಣಿಸಬಹುದು? ಈ ಕುತೂಹಲದಿಂದ ನನಗೆ ಕಂಡದ್ದು ಹೀಗೆ– ಒಬ್ಬ ಮಾಧ್ವ ಜನಾಂಗದ ಕಟ್ಟಾ ಸಂಪ್ರದಾಯಸ್ಥ ಕರ್ಮಠನಿಗೆ 'ಛೇ ಛೇ ಒಬ್ಬ ಹೀನ ಜಾತಿಯವನಿಗಾಗಿ ಭಗವಂತನನ್ನೇ ತಿರುಗಿಸುವುದೆಂದರೇನು' ಅನ್ನಿಸಬಹುದು. ಆತನ ನಿದ್ದೆ ಕೆಡಬಹುದು. ಅದೇ ಮಾಧ್ವ ಜನಾಂಗದ ಉದಾರವಾದಿ ಧಾರ್ಮಿಕ ಮನುಷ್ಯನಿಗೆ 'ಕೃಷ್ಣ ಪರಮಾತ್ಮನ ಲೀಲೆಯೇ ಲೀಲೆ, ಭಕ್ತವತ್ಸಲ ಶ್ರೀ ಕೃಷ್ಣನು ಹೀನಕುಲದ ಕನಕನಿಗೂ ದರ್ಶನ ಕೊಟ್ಟ! ಧನ್ಯ ಕನಕ ನೀನೇ ಧನ್ಯ' ಅನ್ನಿಸಬಹುದು. ಈತ ನೆಮ್ಮದಿಯಿಂದ ನಿದ್ದೆ ಮಾಡಬಹುದು. ಅದೇ

ಉಡುಪಿಯಲ್ಲಿ ಅದೇ ಮಾಧ್ವ ಜನಾಂಗದಲ್ಲಿ ಸೂಕ್ಷ್ಮಜ್ಞನಾದ ಮಾನವೀಯ ಪ್ರಜ್ಞಾವಂತನೊಬ್ಬ ಹುಟ್ಟುವುದು ಅಸಂಭವವೇ? ಅಂಥಹವನಿಗೆ ಈ ದೃಶ್ಯ ಹೇಗೆ ಕಾಣಿಸಬಹುದು? ಮಠದೊಳಗಿನ ಕಿಂಡಿ ಹಿಂದೆ ನಿಂತು ಆತ ಹೊರನೋಡಿದರೆ ಕಾಣುವ ಕನಕನನ್ನು ಕಂಡು ಏನನ್ನಿಸಬಹುದು? 'ನನ್ನ ಪೂರ್ವಜರು ಎಷ್ಟೊಂದು ಪಾಪಿಷ್ಠರು! ದೇವರಿಗೆ ಸಮಾನರಾದ ಸಂತ ಕನಕನನ್ನು ಹೊರಗೆ ನಿಲ್ಲಿಸಿಬಿಟ್ಟಿದ್ದಾರಲ್ಲ! ತನ್ನ ಪೂರ್ವಜರಿಗೆ ಪೂರ್ಣಪ್ರಜ್ಞೆಯ ಮಾತಿರಲಿ, ಅಲ್ಪಪ್ರಜ್ಞೆಯೂ ಇಲ್ಲದಾಯ್ತಲ್ಲ' ಎನ್ನಿಸಿ ಈತ ನೆಮ್ಮದಿ ಕಳೆದುಕೊಂಡು ನಿದ್ದೆಗೆಡಬಹುದು. ಕೃಷ್ಣನ ವಿಗ್ರಹವನ್ನು ಹೊರತೆಗೆದು ಕನಕನ ಪದತಲದಲ್ಲಿಟ್ಟು ಹೊಸಗುಡಿ ಕಟ್ಟುವವರೆಗೂ ಸಮಾಧಾನ ಸಿಗದೇ ಹೋಗಬಹುದು. ನಾನು ಇದನ್ನು ಅಸಾಧ್ಯವೆಂದುಕೊಂಡಿಲ್ಲ. ಯಾಕೆಂದರೆ, ಮೇಲು ಕೀಳುಗಳನ್ನು ಮೌಲ್ಯ ಮಾಡಿಕೊಂಡ ಬ್ರಾಹ್ಮಣ ಧರ್ಮದಲ್ಲಿ ಹುಟ್ಟಿದ್ದಕ್ಕಾಗಿ ಜಿಗುಪ್ಸೆಗೊಂಡು ಸಾಯಲು ಪರಿತಪಿಸಿದ ಮಹಾನ್ ಮಾನವರಾದ ಶ್ರೀ ಧರ್ಮಾನಂದ ಕೋಸಂಬಿ ಇದೇ ಮಣ್ಣಿನಲ್ಲಿ ಹುಟ್ಟಿದ್ದಾರೆ.

ಇತ್ತ ಕನಕನ ಜನಾಂಗಕ್ಕೆ ಸೇರಿದ ಒಬ್ಬನಿಗೆ 'ನಮ್ಮ ಕನಕ ದೇವರನ್ನೇ ತಿರುಗಿಸಿಬಿಟ್ಟ! ಹೇಗೆ!' ಅನ್ನಿಸಿ ಹೆಮ್ಮೆಗೆ ಕಾರಣವಾದರೆ ಇದೇ ದೃಶ್ಯ ಆ ಜನಾಂಗದ ಇನ್ನೊಬ್ಬನಿಗೆ ಕನಕ ಹೊರಗೆ ನಿಂತಿರುವುದು ಎದೆಗೆ ಭರ್ಜಿ ಚುಚ್ಚಿದಂತಾಗಿ ಆ ಮಠವನ್ನೇ ಭೂಮಿ ಮೇಲಿಂದ ಧ್ವಂಸ ಮಾಡಿಬಿಡಬೇಕೆನ್ನಿಸಬಹುದು. ಆದರೆ ಹೊರಗೆ ನಿಂತ ನಮ್ಮ ಕನಕನ ಪ್ರತಿಮೆಗೆ ಜೀವ ಬಂದರೆ ಏನು ಅನ್ನಿಸಬಹುದು? 'ಮಾಧ್ವ ಕುರುಬ ಇಬ್ಬರೂ ಮೇಲು–ಕೀಳು ಎಂಬ ಜಾತಿಯ ಬಚ್ಚಲಿನಲ್ಲಿ ಹುಳಗಳಾಗಿ ವಿಲವಿಲ ಒದ್ದಾಡುತ್ತಿದ್ದಾರೆ, ನೋಡಲಾರೆ. ಇವರನ್ನು ಮನುಷ್ಯರನ್ನಾಗಿಸು ಪರಮಾತ್ಮ' – ಹೀಗನ್ನಿಸಬಹುದೇ? ಯಾಕೆಂದರೆ ಈ ಜಾತಿ ಮತ ಮೇಲು ಕೀಳು ಭಾರತದಲ್ಲಿ ಏನೆಲ್ಲಾ ಆಗಬಹುದು, ಆದರೆ ಕೇವಲ ಮನುಷ್ಯನಾಗುವುದು ಬಲು ಕಷ್ಟ. ಅದಕ್ಕಾಗಿ ನಮ್ಮ ಋಷಿಗಳು, ಸಂತರು ಭಿನ್ನಭಾವದ ಊರಿಂದ ದೂರವಾಗಿ ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತಿದ್ದರೇನೋ! ಅದಕ್ಕಾಗೇ ನಮ್ಮ ಜೋಗಿಗಳು ಭಿನ್ನಭಾವದ ಊರುಗಳಲ್ಲಿ ನೆಲೆಗೊಳ್ಳದೆ ಊರೂರು ಅಲೆಯುತ್ತಿದ್ದರೇನೋ! ಇದನ್ನು ನೋಡಿದಾಗ ಮನುಷ್ಯನಾಗಿ ಹುಟ್ಟಿದ ಮನುಷ್ಯ– ಮನುಷ್ಯನಾಗೇ ಉಳಿಯಲು ಎಷ್ಟೊಂದು ಕಷ್ಟ ಅನ್ನಿಸಿ ಸುಸ್ತಾಗುತ್ತದೆ.

# ಕೊಳಕು ಎಲ್ಲಿದೆ?

ದಲಿತ ಸಂಘರ್ಷ ಸಮಿತಿಯ ಹುಟ್ಟಿಗೂ ಮೊದಲು, 1973ನೇ ಇಸವಿಯಲ್ಲಿ ನಾನು ಎಂ.ಎ. ವಿದ್ಯಾರ್ಥಿಯಾಗಿದ್ದಾಗ ಶ್ರೀ ಓ. ಶ್ರೀಧರನ್ ಜೊತೆಗೂಡಿ ಅಶೋಕಪುರಂ ಪಕ್ಕ ಇರುವ ಪೌರಕಾರ್ಮಿಕ ಕಾಲೋನಿಯಲ್ಲಿ ಸಂಘ ಕಟ್ಟುವ ಪ್ರಯತ್ನ ನಡೆಸಿದೆವು ಅಷ್ಟೇ, ಮುಂದುವರಿಸಲಿಲ್ಲ. ಅಲ್ಲೆ ನಾನು ಮೊದಲಿಗೆ 'ಅಮಾಸ' ಎಂಬ ಹೆಸರನ್ನು ಕೇಳಿದ್ದು, ಅದು ನನ್ನೊಳಗೆ ಉಳಿಯಿತು. ಆ ಸಂದರ್ಭದಲ್ಲೆ ನಾನು ಬರೆದ ಕತೆಯೊಂದರಲ್ಲಿನ ಹುಡುಗನ ಪಾತ್ರಕ್ಕೆ ಅಮಾಸ ಎಂದೂ ಆ ಕತೆಗೂ ಅಮಾಸ ಎಂದು ಹೆಸರಿಟ್ಟೆ. ಆಮೇಲೆ ದಸಂಸ ಹುಟ್ಟಿ ಬೆಳೆದು ಅದಕ್ಕೊಂದು ಸಂಕೇತ ನಿಶ್ಚಯಿಸುವಾಗ, ಬಂದೂಕು, ಪೆನ್ನು, ಹುಲಿ, ಚಿರತೆ ಇತ್ಯಾದಿಗಳೆಲ್ಲಾ ಎದುರಾದರೂ, 'ನಿಲ್ಲಿಸಿದ ಪೊರಕೆ'ಯೇ ಸಂಕೇತವಾಗುವಂತೆ ನೋಡಿಕೊಂಡೆ. ಇಂದು ಇದು ನನಗೆ ನೆನಪಾಗುತ್ತಿದೆ.

ಜೊತೆಗೆ ಇನ್ನೊಂದು ನೆನಪು– ಒಂದ್ಸಲ ನಮ್ಮ ಮನೆಯ ಕಕ್ಕಸ್ಸು ಕಮೋಡ್ ಕಟ್ಟಿಕೊಂಡಿತ್ತು. ಕಡ್ಡೀಲಿ ಅಲ್ಲಾಡಿಸಿ ಸರಿಮಾಡಲು ನೋಡಿದೆ, ಆಗಲಿಲ್ಲ. ಕೈಗೆ ಪ್ಲಾಸ್ಟಿಕ್ ಚೀಲ ಬಳಸಿ ರಿಪೇರಿ ಮಾಡಲು ನೋಡಿದೆ, ಜಗ್ಗಲಿಲ್ಲ. ಕೊನೆಗೆ ಸೋತು 'ಅಯ್ಯೋ ನನ್ನ ಮಕ್ಕಳದಲ್ಲವೆ' ಎಂಬ ಭಾವನೆ ತಂದುಕೊಂಡು ಕೈಯಲ್ಲೆ ಸರಿಮಾಡಿದೆ. ಈ ಭಾವನೆ ಬಾರದಿದ್ದರೆ ನಾನು ಕೈ ಹಾಕುತ್ತಿರಲಿಲ್ಲ. ಇಲ್ಲಿ ಸೋಲು ಮತ್ತು ಆ ಭಾವನೆ ಎರಡೂ ಇದೆ. ಮುಂದೆ ನನಗೆ ಆಶ್ಚರ್ಯ ಕಾದಿತ್ತು. ನನ್ನ ಪತ್ನಿ ಸುಮಿತ್ರಾ ತನ್ನ ಸಂಶೋಧನೆಗಾಗಿ ಒಬ್ಬ ಪೌರಕಾರ್ಮಿಕ ಹಿರಿಯರನ್ನು 'ನಿಮಗೆ ಮ್ಯಾನ್‌ಹೋಲ್ ಡ್ರೈನೇಜ್ ಕೆಲ್ಸ ಮಾಡಲು ಕಷ್ಟಕಹಿ ಅಂತ ಅನ್ನಿಸುವುದಿಲ್ಲವೆ?' ಅಂತ ಪ್ರಶ್ನಿಸಿದ್ದಕ್ಕೆ 'ಯಾಕ್ರಮ್ಮಾ ಕಷ್ಟಕಹಿ. ನನ್ನ ಮಕ್ಕಳದು ಅಂತ ಅಂತ್ಕಂಡ್ರಾಯ್ತು' ಅಂದರಂತೆ. ಅಸಹಾಯಕತೆ ಸೋಲಿನ

ನಡುವೆಯೂ ಈ ದೊಡ್ಡ ಮನಸ್ಸೂ ಇಲ್ಲದಿದ್ದರೆ ಈ ಕೆಲ್ಸ ಮಾಡುವುದು ಕಷ್ಟ. ಆದರೆ ಇಂಥ ದೊಡ್ಡ ಮನಸ್ಸನ್ನೆ ಸಮಾಜ ಕೊಳಕು ಅಂತ ಗಣಿಸಿದೆ. ಇದು ಸಮಾಜವೇ ಕೊಳಕಾಗಿರುವುದರ ಲಕ್ಷಣ, ಅಷ್ಟೆ.

ಕೊನೆಯದಾಗಿ, ರೇಷ್ಮೆಹುಳ ಗೂಡು ಕಟ್ಟುತ್ತೆ. ಆ ಹುಳಗಳ ಬೇಯಿಸಿ ಗೂಡಿನ ನೂಲನ್ನು ಮಡಿ ಬಟ್ಟೆಗಾಗಿ ಬಳಸಲಾಗುತ್ತದೆ. ನಗರದ ಮಡಿ ಸ್ವಚ್ಛತೆಗಾಗಿ ಪೌರಕಾರ್ಮಿಕರು ಬೇಯಿಸಲ್ಪಡುತ್ತಿದ್ದಾರೆ. ಹಳೆತಲೆಗಳು ಹೋಗಲಿ, ಮಕ್ಕಳಾದರೂ ಚಿಟ್ಟೆಯಾಗಿ ಹಾರಾಡಲಿ. ಪೌರಕಾರ್ಮಿಕನ ಮಕ್ಕಳು ಪೌರಕಾರ್ಮಿಕ ಆಗಲೇಬಾರದು. ದತ್ತು ಶಿಕ್ಷಣ ಈ ಮಕ್ಕಳಿಗೆ ಕಡ್ಡಾಯವಾಗಬೇಕು.

ಯಾಕೆಂದರೆ– ಇಂದು ಅಸ್ಪೃಶ್ಯತೆ ನಾನಾ ರೂಪ ತಳೆಯುತ್ತಿದ್ದು, ಅಸ್ಪೃಶ್ಯತೆಯು ಅದರ ಘನರೂಪದಲ್ಲಿ ಉಳಿದಿರುವುದು ಪೌರಕಾರ್ಮಿಕರ ನಡುವೆ ಹಾಗೂ ಕೆಲವು ಕುಗ್ರಾಮಗಳಲ್ಲಿ ಮಾತ್ರ. ಉಳಿದ ಕಡೆ ಅಸ್ಪೃಶ್ಯತೆ ದ್ರವರೂಪದ್ದೋ ಅಥವಾ ಮಾನಸಿಕವಾದ್ದೋ ಇರಬಹುದು. ಪೌರಕಾರ್ಮಿಕರಿಗೆ ವೃತ್ತಿಯ ಜೊತೆಗೇ ಘನ ಅಸ್ಪೃಶ್ಯತೆ ಅಂಟಿದೆ. ಇದಕ್ಕಾಗಿ ಇತರರಿಗೆ ಪೌರಕಾರ್ಮಿಕ ಕೆಲಸದಲ್ಲಿ 25% ಮೀಸಲಾತಿ ನೀಡುವ ಚಿಂತನೆಯನ್ನೂ ಮಾಡಬೇಕಾಗಿದೆ. ಇದಕ್ಕಾಗಿ ಆಕರ್ಷಕ ಸಂಬಳದ ಜೊತೆಗೆ ಪೌರಕಾರ್ಮಿಕರನ್ನು ಊರಾಚೆ ನೂಕುವ ಸಂಪ್ರದಾಯದ ಬದಲು ನಗರಗಳ ನಡುವೆ ಇರುವ ಬಿಡಿ ನಿವೇಶನಗಳಲ್ಲಿ ವಸತಿ ಏರ್ಪಾಡು ಮಾಡಬೇಕಾಗುತ್ತದೆ.

ಬಹಳ ಮುಖ್ಯವಾಗಿ ಸಾರ್ವಜನಿಕ ಸ್ವಚ್ಛತೆ ಹಾಗೂ ಚಪ್ಪಲಿ ತಯಾರಿಕೆಯನ್ನು ಶಾಲಾ ಕಾಲೇಜು ಶಿಕ್ಷಣದ ಭಾಗ ಮಾಡಿ ವಾರದಲ್ಲಿ ಒಂದು ದಿನ ವಿದ್ಯಾರ್ಥಿಗಳು ತೊಡಗುವಂತೆ ಪಠ್ಯದ ಭಾಗವಾಗಬೇಕಾಗಿದೆ. ಭಾರತೀಯ ಮಡಿ ಮನಸ್ಸಿಗೆ ಇವು ಶಿಕ್ಷಣದ ಪಠ್ಯವಾಗುವುದೇ ಒಂದು ದೊಡ್ಡ ಶಿಕ್ಷಣದಂತಾಗುತ್ತದೆ, ಇದರಿಂದ ವಿದ್ಯಾವಂತನಾದವನು ತನ್ನನ್ನು ವಿಶಾಲಗೊಳಿಸಿಕೊಂಡಂತಾಗುತ್ತದೆ.

ಇದಾಗುವುದು ಒಂದು ಸರ್ಕಾರ ಮತ್ತು ಸಮಾಜ ತಾನು ಎಷ್ಟು ನಾಗರಿಕ ಎಂಬುದರ ಮೇಲೆ ಅವಲಂಬಿಸಿದೆ.

## ಅಸ್ಪೃಶ್ಯನಾಗಿರುವುದೆಂದರೆ...

ಆಫ್ರಿಕಾ ಲೇಖಕ ಚಿನುವಾ ಅಚಿಬೆಯವರು ಮೈಸೂರಿಗೆ ಬಂದಿದ್ದಾಗ ನಮ್ಮಲ್ಲಿನ ಒಂದು ಹಳ್ಳಿಗೆ ಹೋಗಿ ಬಂದು ಅವರು ಅಂದದ್ದು ನನ್ನನ್ನು ಮತ್ತೂ ಕಂಗೆಡಿಸಿತು. ಅವರು ಅಂದರು– 'ನಿಮ್ಮ ಹಳ್ಳಿಯ ಅಸ್ಪೃಶ್ಯರನ್ನು ಕಂಡೆ. ಇಂದಿನಿಂದ ನಾನು ಹೆಚ್ಚು ದುಃಖಿತನಾದೆ. ನಮ್ಮ ಆಫ್ರಿಕಾದಲ್ಲು 'ಗಾಡ್ ಚಿಲ್ಡ್ರನ್' (ದೇವರ ಮಕ್ಕಳು) ಎಂಬ ಜನ ಇದ್ದಾರೆ. ಅಲ್ಲಿ ಅವರ ರಕ್ತ ಭೂಮಿಗೆ ಬಿದ್ದರೆ ಪಾಪ ಬರುತ್ತೆ. ಇಲ್ಲಿ ಈ ಹರಿಜನರ ರಕ್ತ ಭೂಮಿಗೆ ಬಿದ್ದರೆ ಪುಣ್ಯ ಬರುತ್ತೆ.' ಇಲ್ಲಿನ ನನ್ನನ್ನೂ ಸೇರಿಸಿ ಯಾವ ಲೇಖಕನೂ ಅಚಿಬೆಯಷ್ಟು ಡಿಸ್ಟರ್ಬ್ ಆದಂತೆ ನನಗೆ ಕಂಡಿಲ್ಲ. ನಮ್ಮೆಲ್ಲರ ರಕ್ತ ಮಿದುಳು ಜಡಗಟ್ಟಿ ಹೋಗಿದೆ ಅನ್ನಿಸುತ್ತದೆ. ಜಾತಿಯು ನಮ್ಮ ಸಂವೇದನೆಯನ್ನು ಮತ್ತು ಸೃಷ್ಟ್ಯಾತ್ಮಕತೆಯನ್ನು ಚಿವುಟಿ ಹಾಕಿದೆ.

ಇಲ್ಲಿನ ಜಾತಿಯ ಅಸ್ಪೃಶ್ಯತೆ ಭೀಕರ, ಆದರೆ ನಮಗೆಲ್ಲ ಸಾಮಾನ್ಯ, ರೂಢಿಗತ. ಅಂದರೆ ತಮಟೆ ಬಡಿಯುವ ರೂಢಿಯನ್ನು ದಲಿತರು ನಿರಾಕರಿಸಿದರೆ ಅವರ ಚರ್ಮದಿಂದಲೇ ತಮಟೆ ಮಾಡಿ ಬಡಿಯುವಷ್ಟು ಕ್ರೂರತೆ ಸವರ್ಣೀಯ ಮನಸ್ಸಲ್ಲಿದೆ. ನಮ್ಮ ಭಾರತದಲ್ಲಿ ಸಾಮರಸ್ಯ ಇದ್ದರೆ ಅದು ಜಾತಿ ರೂಢಿಗಳನ್ನು ಸುತ್ತಿರುವ ಅಮಾನವೀಯ ಅವಮಾನಕರವಾದ ಸಂಬಂಧಗಳ ಸಾಮರಸ್ಯ. ಆದರೆ ನಮಗೆ ಬೇಕಾಗಿರುವುದು– ಜಾತಿ ಮತಗಳ ರೂಢಿಗಳನ್ನು ಕಿತ್ತ ಮಾನವೀಯ ಘನತೆಯ ಸಂಬಂಧ. ಎಲ್ಲಿವರೆಗೆ ಅಂದರೆ, ಹಳ್ಳೀಲಿ ಬೇರೆ ಬೇರೆ ಕೋಮಿನ ಗಂಡು ಹೆಣ್ಣಿಗೆ ಊರೊಟ್ಟಿನವರೆಲ್ಲ ಸೇರಿ ಮದುವೆ ಮಾಡುವವರೆಗೆ. ಅಲ್ಲಿಯವರೆಗೂ ನಮಗೆ ಬಿಡುಗಡೆ ಇಲ್ಲವೇ ಇಲ್ಲ.

ಊರಾಚೆ ಎಸೆಯಲ್ಪಟ್ಟವರ ಅಸಹನೆಗೆ ಒಂದು ಉದಾಹರಣೆ ಹೇಳುತ್ತೇನೆ. ದಲಿತ ಹುಡುಗರು ನಮ್ಮೂರ ಹೈಸ್ಕೂಲಲ್ಲಿ ಕೈಬೊಗಸೆಯಲ್ಲಿ ನೀರು ಕುಡಿಯಬೇಕಿತ್ತು. ನೀರನ್ನು ಕುಡಿಯಲೇಬೇಕಲ್ಲ! ನಾನು ಉಸಿರೆತ್ತದೆ ನೀರು ಕುಡಿಯುತ್ತಿದ್ದೆ. ಆದರೆ ಕ್ಷಮಿಸಿ– ಆಗ ನಾನು ಯಾರಿಗೂ ಕಾಣದಂತೆ ಆ ಪಾತ್ರೆಯಲ್ಲಿದ್ದ ನೀರಿಗೆ ಉಗಿಯುತ್ತಿದ್ದೆ. ಈ ಬಗ್ಗೆ ಈಗ ಬೇಸರವಾದರೂ ಆಗ ಅದು ನನ್ನ ಅಭಿವ್ಯಕ್ತಿ ಆಗಿತ್ತು.

ನನಗೆ ಇನ್ನೂ ಅರ್ಥವಾಗದ್ದು ಅಂದರೆ– ಅಸ್ಪೃಶ್ಯರ ಬಗ್ಗೆ ಕಾರಣವೇ ಇಲ್ಲದೆ ಅಸಹನೆ ಪಡುವ ಜಾತ್ಯಸ್ಥರ ಮನದಾಳವೇನು ಎಂಬುದು. ಇದಕ್ಕೆ ಚಾಂಡಾಲರ ಕಡೆಗೆ ನೋಡುವೆ. ಯಾಕೆಂದರೆ ಚಾಂಡಾಲರಾದ ಅಸ್ಪೃಶ್ಯರು ಬ್ರಾಹ್ಮಣ ಹೆಣ್ಣು ಮತ್ತು ಶೂದ್ರಾದಿ ಗಂಡಿನ ಮಕ್ಕಳಂತೆ– ಈ ಪುರಾತನ ಅಸಹನೆ ಜಾತ್ಯಸ್ಥ ಹಿಂದೂ ರಕ್ತದಲ್ಲಿ ಉಳಿದು ಹರಿಯುತ್ತಿರಬಹುದೆ?

ಹುಟ್ಟಿದ ಮಕ್ಕಳದೇನು ತಪ್ಪು? ಈಗಲಾದರೂ ಇದನ್ನು ನಾವು ಅಂದುಕೊಳ್ಳಬೇಕಾಗಿದೆ.

## ಯಾರಿಗೆ ಯಾವ ಚಿಕಿತ್ಸೆ?

ಅಯೋಧ್ಯೆಯ ಘಟನೆ ನಮ್ಮನ್ನು ತತ್ತರಿಸುವಂತೆ ಮಾಡಿತು. ಹಿಂದೂ ಮತಾಂಧತೆ ಮುಸ್ಲಿಮರ ಬಲಿಗೆ ತವಕಿಸಿತು. ಭಿನ್ನಭಾವನೆ ಕೆರಳಿಸಿ ಅದನ್ನೇ ಆರಾಧಿಸುವಂಥ ವಾತಾವರಣ ಉಂಟುಮಾಡಿತು. ಇದು ಹೀಗೇ ಮುಂದುವರೆದರೆ ಅದು ಎಲ್ಲೆಲ್ಲಿಗೆ ಹೋಗಬಹುದು? ಇಂದು ಮುಸ್ಲಿಮರನ್ನು ಗುರಿ ಮಾಡಿಕೊಂಡಿರುವ ಹಿಂದೂ ಮತಾಂಧತೆ ನಾಳೆ ಅಸ್ಪೃಶ್ಯರನ್ನು ಬಲಿ ಕೇಳಬಹುದು. ನಾಳಿದ್ದು ಶೂದ್ರರು. ಇದಾದ ಮೇಲೆ ಪ್ರಗತಿಪರ ಬ್ರಾಹ್ಮಣರೂ ಬಲಿ ವಸ್ತುಗಳಾಗಬೇಕಾಗುತ್ತದೆ. ಮತಾಂಧತೆ ಭಿನ್ನತೆಗಳನ್ನು ವೈಭವೀಕರಿಸಿದಾಗ ಅದು ಎಲ್ಲಿಯವರೆಗೆ ಹೋಗಬಹುದೆಂದರೆ– ಬ್ರಾಹ್ಮಣರ ಉಪಪಂಗಡಗಳನ್ನೆಲ್ಲ ಒಟ್ಟಿಗೆ ವಾಸಿಸುವಂತೆ ಮಾಡಿ 'ನಾಮ, ಮುದ್ರೆ ಹಾಕುವುದರ ಬಗ್ಗೆ ಒಂದು ನಿರ್ಧಾರಕ್ಕೆ ಬರುವಂತೆ' ತಿಳಿಸಿದರೆ ಜೀವನಪರ್ಯಂತ ಅವರು ಅದಕ್ಕಾಗಿ ಜಗಳವಾಡುವರು. ತಾನು ಭಿನ್ನ, ತನಗಿಂತ ಭಿನ್ನವಾದುದು ಇರಬಾರದು ಎಂಬ ಅಸಹನೆಯು ಆಳ್ವಿಕೆ ನಡೆಸಿದಾಗ ಇಲ್ಲಿಗೆ ತಂದು ನಿಲ್ಲಿಸುತ್ತದೆ.

ಚರಿತ್ರೆಯ ಏರಿಳಿತ ನೋಡಿದಾಗ ಉಪನಿಷತ್, ಅಂತರಂಗದ ಉನ್ನತಿಗೆ ಹಾತೊರೆದಿತ್ತು. ಮುಂದೆ ಜಾತಿ ಪದ್ಧತಿಯನ್ನು ವೈಭವೀಕರಿಸಿ ಅದೇ ಧರ್ಮ ಎಂಬಂತಾಯ್ತು. ಈಗ ಚೇತರಿಸಿಕೊಳ್ಳುತ್ತಿರುವ ಕಾಲದಲ್ಲಿ ಆ ಭಿನ್ನತೆ ಮತ್ತೆ ಭುಗಿಲೆದ್ದಿದೆ. ಈ ಹಿಂದೆ ಭಿನ್ನತೆ ಮತಾಂಧತೆಗಳನ್ನು ಆರಾಧಿಸಿದ್ದಾಗ ಏನಾಯ್ತು? ಆಗ ಯಾವ ಸಾಮಾಜಿಕ ವ್ಯವಸ್ಥೆ ಇತ್ತು? ಅಲ್ಲಿಗೆ ಮತ್ತೆ ಹಿಂದುವರೆಯಬೇಕಾಗುತ್ತದೆ. ಅಂದರೆ ಶೂದ್ರರು ಮೇಲಿನವರ 'ಬಂಟರು', 'ಒಕ್ಕಲು'ಗಳಾಗಿ ಸೇವಕರಾಗಿರಬೇಕಾಗುತ್ತದೆ. ಅಸ್ಪೃಶ್ಯರು ಊರಾಚೆ ಎಸೆಯಲ್ಪಡುತ್ತಾರೆ. ಎಲ್ಲರೂ ಭಿನ್ನರಾಗಿ ಛಿದ್ರರಾಗುತ್ತಾರೆ.

ಈ ಭಿನ್ನತೆಯ ಅಂಟುಜಾಡ್ಯ ಯಾವುದನ್ನೂ ಬಿಟ್ಟಿಲ್ಲ. ಸಮಾನತೆಗಾಗಿ ತುಡಿದ ಚಿಂತಕರಲ್ಲೂ ಈ ಭಿನ್ನತೆಯನ್ನು ಕಾಣುತ್ತೇವೆ. ಅವರ ಚಿಂತನೆಗಳಲ್ಲೂ ಭಿನ್ನತೆ ಕಾಣುತ್ತೇವೆ. ಇನ್ನಾದರೂ ನಮ್ಮ ನೋಟ ಬದಲಾಗಬೇಕಾಗಿದೆ. ಯಾವುದೇ ಚಿಂತಕನೂ ಪೂರ್ಣನಲ್ಲ, ಯಾವುದೇ ಚಿಂತನೆಯೂ ಪೂರ್ಣವಲ್ಲ. ಅಂಬೇಡ್ಕರ್, ಗಾಂಧಿ, ಲೋಹಿಯಾ, ಮಾರ್ಕ್ಸ್ ಯಾರೇ ಆಗಿರಲಿ, ಅವರ ನಡುವೆ ಸಾಮ್ಯ ಗುರುತಿಸುವ ಪ್ರವೃತ್ತಿ ಬೆಳೆಸಿಕೊಳ್ಳಬೇಕಾಗಿದೆ. ಕಸಿ ಮಾಡುವ ಐಕ್ಯತೆಯ ಕಣ್ಣು ನಮ್ಮದಾಗಬೇಕಾಗಿದೆ.

ತುಂಬಾನೇ ಗೋಜಲಾಗಿರುವ ಭಾರತದ ಸಾಮಾಜಿಕ ವ್ಯವಸ್ಥೆಯನ್ನು, ಅವಮಾನಿತ ಹಿನ್ನೆಲೆಯ ನಾವು ಮುಟ್ಟಲು ಹೊರಟಿದ್ದೇವೆ. ಇಲ್ಲಿ ವಿವೇಕ, ಎಚ್ಚರ ನಮ್ಮ ದಾರಿಯಾಗಬೇಕು. ಐಕ್ಯತೆ ನಮ್ಮ ಗುರಿಯಾಗಬೇಕು. ಇಲ್ಲದಿದ್ದರೆ ಗೋಜಲಿಗೆ ಮತ್ತಷ್ಟು ಗೋಜಲೇ ಸೇರಬಹುದು. ಉದಾಹರಣೆಗೆ– ಬ್ರಾಹ್ಮಣರು ಸಾಂಸ್ಕೃತಿಕವಾಗಿ ಮುಂದುವರೆದವರು ಎಂಬ ಭಾವನೆ ಶೂದ್ರರಿಗೂ ದಲಿತರಿಗೂ ಇದೆ. ಹಾಗೇ ಶೂದ್ರರು ಸಾಮಾಜಿಕವಾಗಿ ಮುಂದುವರೆದವರು ಎಂಬ ಭಾವನೆ ದಲಿತರಲ್ಲಿ ಇದೆ. ಈ ಭಾವನೆ ಇರುವುದರಿಂದಾಗಿ ಬ್ರಾಹ್ಮಣರು ಸಂಸ್ಕೃತಿಯನ್ನೆಲ್ಲಾ ತಮ್ಮಲ್ಲೇ ಗುಡ್ಡೆ ಹಾಕಿಕೊಂಡಿರುವಂತೆ ನಮಗೆ ಕಾಣಿಸುತ್ತದೆ. ಹೀಗೆ ಕಾಣುವುದರಿಂದ ಬ್ರಾಹ್ಮಣರನ್ನು ದ್ವೇಷಿಸಲು ತೊಡಗುತ್ತೇವೆ. ಅಥವಾ ಅವರಂತಾಗಲು ಬಯಸಿ ಅಸೂಯೆ, ಕೀಳರಿಮೆಯ ರೋಗಕ್ಕೆ ತುತ್ತಾಗಿ ನರಳುತ್ತೇವೆ. ಆದರೆ ಅವಮಾನಿತ ದಲಿತರು ತಮ್ಮ ಕೀಳರಿಮೆಯ ರೋಗದಿಂದ ಬಿಡಿಸಿಕೊಂಡು ಒಳಗಣ್ಣಿಂದ ನೋಡತೊಡಗಿದರೆ, ವಸ್ತುಸ್ಥಿತಿ ಬೇರೆಯಾಗೇ ಕಾಣಿಸಲೂಬಹುದು. ಗೋಜಲು ಬಿಡಿಸುವ ಎಳೆ ಸಿಗಲೂಬಹುದು.

ಸ್ಪಷ್ಟತೆಗಾಗಿ ಒಂದೆರಡು ವಿವೇಕಾನಂದರ ಅನಿಸಿಕೆಗಳನ್ನು ಮುಂದಿಡುವೆ– ಬ್ರಾಹ್ಮಣರ 'ನಾನೇ ಶುದ್ಧ ಉಳಿದವರೆಲ್ಲಾ ಅಶುದ್ಧ' ಎಂಬುದು ಮೃಗೀಯ ರಾಕ್ಷಸೀಧರ್ಮ. ಹಿಂದೆ ವಿದ್ಯಾವಂತರೆನ್ನಿಸಿಕೊಂಡವರು ಆಚರಣೆಗಳನ್ನೇ ಧರ್ಮ ಸಂಸ್ಕೃತಿಯನ್ನು ಮಾಡಿಕೊಂಡು ನೀರನ್ನು ಎಡಗೈಯಿಂದ ಕುಡಿಯುವುದೋ ಅಥವಾ ಬಲಗೈಯಿಂದ ಕುಡಿಯುವುದೋ? ಅದನ್ನು ಮೂರು ಸಲ ತೊಳೆಯುವುದೋ ಅಥವಾ ನಾಲ್ಕು ಸಲ ತೊಳೆಯುವುದೋ? ಬಾಯನ್ನು ಐದು ಸಲ ಮುಕ್ಕಳಿಸುವುದೊ ಅಥವಾ ಆರು ಸಲ ಮುಕ್ಕಳಿಸುವುದೊ ಎಂಬುದನ್ನು ಚರ್ಚಿಸುತ್ತಾ ಕಾಲ ಕಳೆದರು' –ಇದನ್ನು ನೋಡಿದಾಗ ಹೇಗನ್ನಿಸುತ್ತದೆ? ಇದೇನು ಸಂಸ್ಕೃತಿಯೇ? ನಾವು ಇದಾಗಬೇಕೆ?

ಇದಕ್ಕಾಗಿ ಯಾಕೆ ಸ್ಪರ್ಧೆ, ಯಾಕಾಗಿ ದ್ವೇಷ ಅಸೂಯೆ ಕೀಳರಿಮೆ ಮೇಲರಿಮೆ? ಅಂತ ಬೆಚ್ಚಬೇಕಾಗುತ್ತದೆ. ಹೊರನೋಟಕ್ಕೆ ಸಂಸ್ಕೃತಿಯಂತೆ ಕಂಡುಬಂದುದು ಒಳಗಣ್ಣಿಗೆ ಸಾಂಸ್ಕೃತಿಕ ಅಧಃಪತನವಾಗಿ ಕಾಣತೊಡಗುತ್ತದೆ. ಮೇಲರಿಮೆಯ ರೋಗದ ಸವರ್ಣೀಯರು ಸಮಾಜವನ್ನು ಸುಡುತ್ತಿದ್ದರೆ, ಕೀಳರಿಮೆ ರೋಗದ ದಲಿತರು ತಮ್ಮನ್ನೇ ತಾವು ಸುಟ್ಟುಕೊಳ್ಳುತ್ತಿರುವುದು ಕಾಣುತ್ತದೆ. ಐಕ್ಯತೆಯ ಮನಸ್ಸಿಲ್ಲದೆ ಯಾರು ಯಾವುದನ್ನು ಮುಟ್ಟಿದರೂ ಅದು ಧ್ವಂಸವಾಗಿಬಿಡುತ್ತದೆ.

ಚಿಕಿತ್ಸೆ ಯಾರಿಗೆ ಬೇಕಾಗಿದೆ? ಸಗಟಾಗಿ ನೋಡುವುದಾದರೆ ನಮ್ಮ ಸಮಾಜದ ಸ್ವಾಸ್ಥ್ಯಕ್ಕೆ ಅತ್ಯಗತ್ಯವಾಗಿರುವುದು– ಬ್ರಾಹ್ಮಣರಿಗೆ ಸಾಂಸ್ಕೃತಿಕ ಚಿಕಿತ್ಸೆ ಕೊಟ್ಟು ಉದ್ಧಾರ ಮಾಡಬೇಕಾಗಿದೆ. ಹಾಗೆ ಶೂದ್ರರನ್ನು ಸಾಮಾಜಿಕವಾಗಿ ನಾಗರಿಕರನ್ನಾಗಿಸಬೇಕಾಗಿದೆ. ಇಲ್ಲಿ ದಲಿತರಿಗೆ ಆರ್ಥಿಕ ಆಸರೆಯಾಗಬೇಕಾಗಿದೆ. ಇದಕ್ಕೂ ಮೊದಲು ದಲಿತ ಸಂಘಟನೆಗಳು ತಮ್ಮ 'ಕೀಳುಹುಚ್ಚು ರೋಗ'ದಿಂದ ಬಿಡುಗಡೆ ಪಡೆದು 'ಮೇಲುಹುಚ್ಚು ರೋಗ'ದವರನ್ನೂ ವಿಮೋಚನೆಗೊಳಿಸಬೇಕಾಗಿದೆ.

ಈಗ ಹೇಳಿ! ನಾವು ಆಗಬೇಕಾದ್ದು ರೋಗಿಯೋ ಅಥವಾ ವೈದ್ಯರೋ? ಅದು ನಮ್ಮ ಕೈಲೇ ಇದೆ.

## ಅಹಿಂಸೆಯ ಹುಡುಕುತ್ತಾ

ಅಹಿಂಸೆಯ ಬಗ್ಗೆ ತಾತ್ವಿಕ ಜಿಜ್ಞಾಸೆಯನ್ನು ನಾನಿಲ್ಲಿ ಮಾಡುವುದಿಲ್ಲ. ಬದಲಾಗಿ ನನ್ನ ಅಸ್ಪಷ್ಟ ಗೊಂದಲದ ಮನಸ್ಸಿನೊಳಗೆ 'ಅಹಿಂಸೆ' ಹೇಗೆ ಆಕಾರ ತಳೆಯಿತು ಎಂಬುದನ್ನು ಕಾಣಲು ಯತ್ನಿಸುವೆ.

ಎಪ್ಪತ್ತರ ದಶಕ ಇರಬೇಕು. ಆಗ ನಾನು ಸಮಾಜವಾದಿ ಆಂದೋಲನದಲ್ಲಿದ್ದೆ. ಆ ಸಮಯದಲ್ಲಿ ಕೇರಳದಲ್ಲಿ ನಕ್ಸಲೈಟ್ ಅಜಿತಾ ಮತ್ತು ಆಕೆಯ ಗುಂಪು ಪೊಲೀಸ್ ಠಾಣೆಯ ಮೇಲೆ ದಾಳಿ ಮಾಡಿ ಪೊಲೀಸರನ್ನು ಕೊಂದು ಆ ರಕ್ತದಲ್ಲೆ ಹಸ್ತ ಅದ್ದಿ, ಆ ರಕ್ತಹಸ್ತದ ಗುರುತನ್ನು ಠಾಣೆಯ ಗೋಡೆಯ ಮೇಲೆ ಉಳಿಸಿ ಹೋಗಿತ್ತು. ಈ ಸುದ್ದಿ ದೇಶದ ನರನಾಡಿಗಳಲ್ಲಿ ವಿದ್ಯುತ್ ಸಂಚಾರವಾದಂತೆ ಸಂಚಾರ ಮಾಡಿತ್ತು. ಈ ಸುದ್ದಿಯಿಂದ ಪುಳಕಿತರಾದ ನನ್ನ ಗೆಳೆಯರನೇಕರು ನಾ ಮುಂದು ತಾ ಮುಂದು ಎಂಬಂತೆ ಅಜಿತಾಳನ್ನು ಮದುವೆಯಾಗಲು ಆಸೆಪಡುತ್ತಿದ್ದರು. ಅದಾಗಲೇ ಮದುವೆಯಾಗಿದ್ದ ನನ್ನ ನತದೃಷ್ಟ ಗೆಳೆಯನೊಬ್ಬ ತನ್ನ ಹೆಂಡತಿ ಸಮ್ಮತಿಸುವುದಾದರೆ ತನಗೂ ಅಜಿತಾಳನ್ನು ಮದುವೆ ಆಗುವ ಆಸೆ ಇದೆ ಎಂದು ಪರಿತಪಿಸುತ್ತಿದ್ದ. ಈ ಪರಿಸ್ಥಿತಿಯಲ್ಲಿ ನಾನು ಗೊಂದಲದಲ್ಲಿ ಇದ್ದೆ, ಅಜಿತಾಳನ್ನು ನಾನೂ ಮದುವೆ ಆಗಬೇಕೋ ಬೇಡವೋ ಎಂಬ ವಿಚಾರದಲ್ಲಿ ಅಲ್ಲ. ಅಜಿತಾ ಮತ್ತು ಆಕೆಯ ಗುಂಪು ಮಾಡಿದ್ದು ಸರಿಯೋ ತಪ್ಪೋ ಎಂಬ ಗೊಂದಲದಲ್ಲಿದ್ದೆ. ನನ್ನ ಅಪ್ಪ ಪೊಲೀಸ್ ಕಾನ್ಸ್‌ಟೇಬಲ್ ಆಗಿದ್ದುದೂ ಕಾರಣವಾಗಿ ನನ್ನ ಅಪ್ಪ ಅಜಿತಾಳಿಂದ ಕೊಲೆಯಾಗಿದ್ದರೆ ಅಜಿತಾ ನನಗೆ ಹೇಗೆ ಕಾಣಿಸುತ್ತಿದ್ದಳು ಎಂಬ ಊಹೆಯೂ ಇದೆಲ್ಲದರೊಡನೆ ನನ್ನ ಮನಸ್ಸಿಗೆ ಬರುತ್ತಿತ್ತು.

ಈ ಸಂದರ್ಭದಲ್ಲೆ ರಷ್ಯನ್ ಲೇಖಕ ದಾಸ್ತೊವೆಸ್ಕಿಯ 'ಅಪರಾಧ ಮತ್ತು ಶಿಕ್ಷೆ' ಕಾದಂಬರಿಯ ಕನ್ನಡ ಅನುವಾದ ಸಿಕ್ಕಿದ್ದರಿಂದ ನಾನೂ ಓದುವಂತಾಗಿ, ಅಲ್ಲಿ ನನಗೆ ಹಿಂಸೆ– ಅಹಿಂಸೆ ಬಗ್ಗೆ ಒಂದು ಅಂದಾಜು ಬಂತು. ಈ ಕಾದಂಬರಿಯ ನಾಯಕ ರೋಡಿಯಾನ್ ಎರಡು ಕೊಲೆ ಮಾಡುತ್ತಾನೆ. ಒಬ್ಬಳು ಅಲ್ಯೋನಾ ಎಂಬ ಮುದುಕಿ. ಈಕೆ ಸಾವಿಗೆ ಹತ್ತಿರ ಇರುವವಳು. ಗೋರಿಯಲ್ಲಿ ಒಂದು ಕಾಲು ಮನೆಯಲ್ಲಿ ಮತ್ತೊಂದು ಕಾಲು ಎಂಬಷ್ಟು ಹಣ್ಣಾಗಿರುವವಳು. ಬಡ್ಡಿ ವ್ಯಾಪಾರದಲ್ಲಿ ಸುಲಿಯುವವಳು. ರಕ್ಕಸಿಯಂತೆ ಭಯಂಕರಿ. ಕರುಣೆ ಇಲ್ಲದವಳು, ಮೇಲಾಗಿ ಕುರೂಪಿ. ಭೂಮಿಗೆ ಭಾರವಾದ ಈಕೆಯನ್ನು ಕೊಂದರೂ ನೂರಾರು ಜೀವಗಳ ಪ್ರಾಣರಕ್ಷಣೆ ಆಗುತ್ತದೆ– ಅಂಥವಳು. ಹೀಗೆಲ್ಲಾ ಯೋಚಿಸಿಯೇ ಇಂಥವಳನ್ನು ಕಾದಂಬರಿಯ ನಾಯಕ ರೋಡಿಯಾನ್ ಕೊಲ್ಲುತ್ತಾನೆ. ಈ ಸಂದರ್ಭದಲ್ಲೆ ಕೊಲೆಯಾದ ಮುದುಕಿಯ ಮಲತಂಗಿ ಲಿಜೋವೆಟಾ ಬರುತ್ತಾಳೆ. ಅವಳು ಚಿಕ್ಕವಳು, ಸಹಜ ಸಾವಿಗೆ ದೂರ ಇರುವಂಥವಳು, ಕರುಣಾಮಯಿ, ಸಾಧುಪ್ರಾಣಿ. ಇವಳು ತನ್ನ ಅಕ್ಕನ ಕೊಲೆ ನೋಡಿಬಿಟ್ಟ ಸಾಕ್ಷಿಯಾದ ಕಾರಣದಿಂದ ಸ್ವಲ್ಪವೂ ಯೋಚಿಸದೆ ರೋಡಿಯಾನ್ ಆಕೆಯನ್ನೂ ಕೊಲ್ಲುತ್ತಾನೆ.

ಇದಾದ ಮೇಲೆ ಆತ ಈ ಕೊಲೆಯನ್ನು ತನಗೆ ತಾನೇ ಎಷ್ಟೇ ವಾದವಿವಾದಗಳಿಂದ ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದರೂ ಸೋತು ದಿಕ್ಕೆಡುತ್ತಾನೆ. ಅಂತರಂಗವನ್ನು ಗರಗಸದಂತೆ ಕೊರೆಯುತ್ತಿರುವ ಈ ಕೊಲೆಯನ್ನು ಹೊತ್ತು ತಿರುಗುವುದೆಂದರೆ ಅಸಾಧ್ಯ ಎಂಬಲ್ಲಿಗೆ ತಲುಪುತ್ತಾನೆ. ಒಂದೊಂದು ಸಲ, ಆ ಕೊಲೆಯಾದ ಹುಳಕ್ಕಿಂತ ತಾನೇ ಹೆಚ್ಚು ಕ್ಷುದ್ರವಾದ ದರಿದ್ರ ಹುಳ ಎಂದೂ ಅಂದುಕೊಳ್ಳುತ್ತಾನೆ. ಒಟ್ಟಿನಲ್ಲಿ ಈ ಕೊಲೆಯು ಆತನ ಮಿದುಳನ್ನು ಹೋಗುತ್ತ ಬರುತ್ತ ಕುಯ್ವ ಗರಗಸವಾಗುತ್ತದೆ.

ಇಲ್ಲಿ ರೋಡಿಯಾನ್‌ನನ್ನು ಕನಸು ಮನಸ್ಸಿನಲ್ಲೂ ಹಿಂಡುವ ಕೊಲೆ– ಇನ್ನೇನು ಸಾಯಲಿದ್ದ ಆ ದುಷ್ಟ ಅನುಪಯುಕ್ತ ಮುದುಕಿಯ ಕೊಲೆ ಮಾತ್ರ. ಆ ಸಂದರ್ಭದಲ್ಲೇ ಜರುಗಿದ ತುಂಬಾ ಒಳ್ಳೆಯವಳಾದ ಪರೋಪಕಾರಿ ಹಾಗೂ ಚಿಕ್ಕವಳಾದ ಲಿಜೋವೆಟಾ ಕೊಲೆಯು ಕೊಲೆಗಾರನನ್ನು ಕಾಡುವುದಿಲ್ಲ. ಆ ಕೊಲೆಗಾರ 'ಲಿಜೋವೆಟಾಳನ್ನು ನಾನು ಕೊಂದೇ ಇಲ್ಲವೆನ್ನುವಂತೆ ಎಂದೆಂದೂ ಅವಳ ಸ್ಮರಣೆ ನನಗೆ ಉಂಟಾಗಿಲ್ಲ, ಇದೇನು ವಿಲಕ್ಷಣ?' ಅಂದುಕೊಳ್ಳುತ್ತಾನೆ. ಆ ಕಾದಂಬರಿಯ ಎಲ್ಲಾ ವಿವರಗಳನ್ನು ಮರೆತರೂ ಈ ವಿಲಕ್ಷಣ ನನ್ನ ಮನದಲ್ಲಿ ಉಳಿಯಿತು. ಕೊಲೆ, ಹಿಂಸೆಯನ್ನು

ಪ್ರಜ್ಞಾಪೂರ್ವಕವಾಗಿ ಯೋಜನೆಮಾಡಿ ಮಾಡುವುದಕ್ಕೂ, ಉದ್ದೇಶರಹಿತವಾಗಿ, ಕೊಲೆ ಹಿಂಸೆ ಆಗುವುದಕ್ಕೂ ಇರುವ ಅಗಾಧ ವ್ಯತ್ಯಾಸವನ್ನು ಅದು ನನಗೆ ಮನಗಾಣಿಸಿತು. ಉದ್ದೇಶರಹಿತ ನೂರು ಕೊಲೆಗಳ ಮುಂದೆ, ಕೊಲೆ–ಹಿಂಸೆಯನ್ನು ತಾತ್ವಿಕಗೊಳಿಸಿದ ಒಂದೇ ಕೊಲೆ ಸಮ ಸಮ ಅನ್ನಿಸಿಬಿಟ್ಟಿತು. ದಲಿತ ಸಂಘರ್ಷ ಸಮಿತಿ ಪ್ರಣಾಳಿಕೆಯಲ್ಲಿನ ಅಹಿಂಸೆಗೆ ಈ ಕಥೆಯೂ ಕಾರಣವಾಯಿತು.

ಇನ್ನು ಅಹಿಂಸೆಗೆ ಬಂದರೆ ಈ ಅಹಿಂಸೆಯ ಪರಮ ಸ್ಥಿತಿ ಯಾವಾಗ ಉಂಟಾಗುತ್ತದೆ? ಎಲ್ಲವೂ ತಾನೇ ಆದಾಗ ಉಂಟಾಗುತ್ತದೆ. ಅಂದರೆ ಹೊರ ಜಗತ್ತಿಗೂ ತನಗೂ ಭಿನ್ನಭಾವ ತಾರತಮ್ಯ ಇಲ್ಲದಾಗ ಉಂಟಾಗುವ ಸ್ಥಿತಿ. ತನ್ನನ್ನು ತಾನೇ ಯಾವುದೂ ಹಿಂಸಿಸಿಕೊಳ್ಳದು. ಎಲ್ಲವೂ ತಾನೇ ಆದಾಗ ಹಿಂಸೆ ನಿಂತು, ಸಾಮರಸ್ಯ, ಅಹಿಂಸೆ, ಐಕ್ಯದ ಸ್ಥಿತಿ ಅರಳುತ್ತದೆ. ಬೆಳಕು ಕಂಡವರಿಗೆ ಇದೇ ಧರ್ಮವಾಗಿ ಇದೇ ದೇವರಾಗಿ ಕಂಡಿದೆ. ಈ ಅರಿವಿನೊಡನೆ ನಮ್ಮ ಸುತ್ತಮುತ್ತಲನ್ನು ನೋಡಿದಾಗ ನಮಗೆ ಕಾಣುವುದೇನು? ಭಿನ್ನಭಾವ–ಹಿಂಸೆ. ಇಂದು ಧರ್ಮ ದೇವರು ಅನ್ನಿಸಿಕೊಂಡವುಗಳ ಒಳಗೂ ಇರುವುದೇನು? ಭಿನ್ನಭಾವ, ಹಿಂಸೆ, ತಾರತಮ್ಯ, ಮೇಲುಕೀಳು– ಇವು ಇದ್ದಲ್ಲಿ ಅದು ಧರ್ಮದ ಮುಖವಾಡದ ಅಧರ್ಮ; ಅದು ದೇವರ ಮುಖವಾಡದ ದೆವ್ವ.

ಅಹಿಂಸೆ ಹಿಡಿದುಕೊಂಡು ತನ್ನ ವ್ಯಾಪ್ತಿ ಮೀರಿ, ದೇವರು ಧರ್ಮಕ್ಕೆ ಒಳೇಟು ಕೊಡುತ್ತಿದ್ದಾನೆ ಎಂದು ನಿಮಗೆ ಅನ್ನಿಸಿದರೆ ಕ್ಷಮೆ ಇರಲಿ. ಒಂದು ಧರ್ಮದಲ್ಲಿ ಧರ್ಮ ಉಂಟೋ, ಇಲ್ಲವೋ ಎಂಬ ಅಳತೆಯನ್ನು ಅಹಿಂಸೆ ಮತ್ತು ಐಕ್ಯತೆಯಿಂದ ಅಳೆಯಬೇಕು ಎಂಬುದಷ್ಟೆ ನನ್ನ ಕಾಂಕ್ಷೆ.

# ಬುದ್ಧನೆಡೆಗೆ ಒಂದು ನಡಿಗೆ

ಇವೊತ್ತು ಬೌದ್ಧಧರ್ಮಕ್ಕೆ ಸೇರಬೇಕೇ? ಬೇಡವೇ? ಎಂಬ ಚರ್ಚೆ ಅನಗತ್ಯವಾಗಿದೆ. ಅಂಬೇಡ್ಕರ್‌ರ ವಿವೇಕವು ಬುದ್ಧನ ಬೆಳಕನ್ನು ನಮ್ಮ ಮುಂದೆ ಇಟ್ಟಿದೆ. ಈ ದಿಕ್ಕಿನಲ್ಲಿ ನಡೆಯಲು ಅನೇಕರು ಶ್ರಮಿಸಿರುವುದನ್ನು ನಾವಿಲ್ಲಿ ನೆನಪು ಮಾಡಿಕೊಳ್ಳಬೇಕಿದೆ. ಕರ್ನಾಟಕದಲ್ಲಿ ಶ್ರೀ ಬಸವಲಿಂಗಪ್ಪ ಅವರ ಪ್ರಯತ್ನಗಳು, 'ಬುದ್ಧ ಬರಲಿ ನಮ್ಮೂರಿಗೆ' ಎಂಬ ಕಿರುಪುಸ್ತಕದೊಂದಿಗೆ ದಲಿತ ಸಂಘರ್ಷ ಸಮಿತಿ ನಡೆಸಿದ ಜಾಥಾ, ಹಾಗೆಯೇ ಮೈಸೂರಿನಲ್ಲಿ ನಡೆದ ಶ್ರೀ ಶ್ರೀನಿವಾಸ್ ಪ್ರಸಾದ್ ಅವರ ನೇತೃತ್ವದ 'ಬುದ್ಧನೆಡೆಗೆ ಮರಳಿಮನೆಗೆ' ಸಮಾವೇಶಗಳನ್ನು ನೆನಪಿಸಿಕೊಳ್ಳಬೇಕಾಗಿದೆ. ಯಾಕೆಂದರೆ ಇಂದಿನ ಬೌದ್ಧಧಮ್ಮ ಸ್ವೀಕಾರ ಕ್ರಿಯೆಗೆ ಅವೆಲ್ಲವೂ ಕಾರಣವಾಗಿವೆ. ಜೊತೆಗೆ ಈ ಸಮಾವೇಶ ಆಯೋಜಿಸಿ ದಲಿತ ಸಂಘರ್ಷ ಸಮಿತಿಯು ಹೊಸಹುಟ್ಟು ಪಡೆದುಕೊಂಡಂತಾಗಿದೆ.

ಮುಖ್ಯವಾಗಿ ದಲಿತರು ಬೌದ್ಧಧರ್ಮ ಸೇರುವುದರಿಂದಾಗಿ ಕಳೆದುಕೊಳ್ಳುವುದಾದರೂ ಏನು? ಬಹುಶಃ ಏನೂ ಇಲ್ಲ. ಈ ಪ್ರಶ್ನೆ ಬಂದಾಗಲೆಲ್ಲಾ 'ಬೌದ್ಧರಾದರೆ ಅಸ್ಪೃಶ್ಯತೆ ಹೋಗುತ್ತದಾ?' ಎಂಬ ಪುರಾತನ ಪ್ರಶ್ನೆಯೂ ಎದ್ದೇಳುತ್ತದೆ. ಇದರ ಬಗ್ಗೆ ಸಂಶೋಧನೆ ಮಾಡುವುದು ಸಂಶೋಧಕರಿಗೆ ಬಿಟ್ಟಿದ್ದು. ಬೌದ್ಧಧರ್ಮ ಸ್ವೀಕರಿಸಿದ ಅಸ್ಪೃಶ್ಯರನ್ನು ಮೇಲುಕೀಳುಗಳ ವಿಷ ವರ್ತುಲದ ಸಮಾಜ ಹೇಗೆ ನೋಡುತ್ತದೆ ಎಂಬುದನ್ನು ಊಹಿಸಲಾರೆ. ಆದರೆ ತನಗೆ ತಾನೇ ಕೀಳು ಎಂದು ತಾನೇ ಒಪ್ಪಿಕೊಂಡಿರುವ ತಳ ಸಮುದಾಯಗಳು ಬೌದ್ಧಧಮ್ಮ ಸ್ವೀಕರಿಸಿ ತಾನು

ಮೇಲೂ ಅಲ್ಲ, ಕೀಳೂ ಅಲ್ಲ ಅಂದುಕೊಂಡರೆ ಇದಷ್ಟೇ ಸಾಕು. ಇದೂ ಕೂಡ ದೊಡ್ಡ ಬಿಡುಗಡೆಯೇ. ಸದ್ಯಕ್ಕೆ ಇಷ್ಟು ಸಾಕು, ಮುದುಡಿಕೊಂಡಿರುವ ದಲಿತ ಶಕ್ತಿ ಅರಳಲೂಬಹುದು, ಚಿಗುರಲೂಬಹುದು.

ಇತ್ತೀಚೆಗೆ ಬೌದ್ಧಧರ್ಮ ಪ್ರಚಾರ ಕಾರ್ಯಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿ ಬಂತೇಜಿಗಳಿಗೆ ವಿನಂತಿಸುವೆ. ಏನೆಂದರೆ ಬುದ್ಧ ಮತ್ತು ವಚನಕಾರರು ಜನರಾಡುವ ಮಾತಲ್ಲಿ ನುಡಿದವರು. ಇದೇ ಕಾರಣವಾಗಿ ಅವರು ನೇರವಾಗಿ ಹೃದಯ ಮುಟ್ಟುವವರಾಗಿದ್ದಾರೆ. ಹಾಗಾಗಿ ಆಯಾಯ ಜನರ ಭಾಷೆಯಲ್ಲಿ ಬುದ್ಧನ ದರ್ಶನದ ನುಡಿಗಟ್ಟನ್ನು ರೂಪಿಸಿ ಜೀವಂತಗೊಳಿಸಬೇಕಾಗಿದೆ.

ಹಾಗೇನೆ ದುಡಿಯುವ ವರ್ಗವು ಕೇವಲ ಭಕ್ತರಾಗಿ ಮಾತ್ರವಲ್ಲದೆ ತಾತ್ವಿಕ ಚಿಂತಕರಾಗಿ ಘನತೆಯಿಂದ ಸಮಸಮವಾಗಿ ಕೂಡಿ ಬಾಳಿದ್ದು ಹನ್ನೆರಡನೆಯ ಶತಮಾನದ ವಚನಕಾರರ ಕಾಲಮಾನದಲ್ಲಿ. ಈ ವಚನ ಧರ್ಮವನ್ನು ಇಲ್ಲಿಗೆ ಕಸಿ ಮಾಡುವುದು ಹೇಗೆ? ಈ ಪ್ರಯೋಗಶೀಲತೆಯ ಕಡೆಗೂ ಯೋಚಿಸಬೇಕಾಗಿದೆ. ಯಾವುದೇ ವ್ಯಕ್ತಿ, ಸಮುದಾಯ, ಧರ್ಮಗಳಲ್ಲಿ ಆಂಶಿಕವಾಗಿಯಾದರೂ ಸಮತ್ವ, ಕಾರುಣ್ಯ ಕಂಡುಬಂದಲ್ಲಿ ಅದನ್ನು ಬುದ್ಧನ ಬೆಳಕೆಂದೇ ಕಾಣುವ ಮುಕ್ತ ಕಣ್ಗಳೂ ಬೇಕಾಗಿದೆ.

ಈಗ ಬೌದ್ಧಧಮ್ಮ ಸ್ವೀಕರಿಸಿ ದಲಿತ ಸಂಘರ್ಷ ಸಮಿತಿ ಹೊಸಹುಟ್ಟು ಪಡೆದಿದೆ. ಅದು ಈ ಕೆಲಸವನ್ನು ಇಲ್ಲಿಗೆ ನಿಲ್ಲಿಸಿದರೆ ಅದು ಇಲ್ಲಿಗೇ ನಿಲ್ಲುತ್ತದೆ. ಈಗ ದಸಂಸ ಮಾಡಬೇಕಾದ ಕೆಲಸವೆಂದರೆ, ತನ್ನೊಡನೆ ಎಲ್ಲಾ ಬಣಗಳನ್ನು ಸೇರಿಸಿಕೊಂಡು ತಾಲ್ಲೂಕು, ಹೋಬಳಿ, ಗ್ರಾಮಮಟ್ಟದಲ್ಲಿ ಬಂತೇಜಿಗಳ ಮಾರ್ಗದರ್ಶನ, ಆ ತಾಲ್ಲೂಕಿನ ದಲಿತ ನೌಕರರ ಸಹಕಾರದೊಡನೆ 'ಬುದ್ಧವಿಹಾರ' ಸ್ಥಾಪಿಸಿ ಅಲ್ಲಿ ವಾಚನಾಲಯ, ಧ್ಯಾನಕೇಂದ್ರ, ಗ್ರಂಥಾಲಯ, ಉದ್ಯೋಗ ಮಾಹಿತಿ ಕೇಂದ್ರ, ಮಕ್ಕಳ ಪಾಲನಾ ಕೇಂದ್ರ ಇತ್ಯಾದಿ ಚಟುವಟಿಕೆ ಆರಂಭಿಸಬೇಕಾಗಿದೆ. ಈ ನಡಿಗೆ ದಲಿತರಿಂದ ಆರಂಭವಾದರೂ ಅದರಾಚೆಗೂ ಹಬ್ಬಬೇಕಾಗಿದೆ.

# ನಡೆದು ಬರುವ ಅರಿವು

ಮಹಾಕವಿ ಬೇಂದ್ರೆ ಈ ಸ್ಥಳದಲ್ಲಿ 'ಹಕ್ಕಿ ಹಾರುತಿದೆ ನೋಡಿದಿರಾ' ಕವನ ಓದಿದಾಗ ಸಭಿಕರು ಆಕಾಶ ನೋಡಿದ್ದು ನನ್ನ ಕಣ್ಮುಂದೆ ಬರುತ್ತಿದೆ.

ನಾನೇನು ಮಾತಾಡಲಿ? ಮೊನ್ನೆ ಒಂದು ಪುಸ್ತಕ ಓದುತ್ತಾ ಇದ್ದೆ. 'ಶಿವಾನುಭವ ಶಬ್ದಕೋಶ' ಪುಸ್ತಕದ ಹೆಸರು. ಹಳಕಟ್ಟಿಯವರು ಬರೆದ ಪುಸ್ತಕ ಅದು. ಅರಿವು, ಜ್ಞಾನದ ಬಗ್ಗೆ ಅವರು ಹೇಳಿರೋದು ನೋಡಿ ನನಗೆ ಸುಸ್ತಾಗ್ಹೋಯ್ತು. ವಚನಕಾರರ ದೃಷ್ಟಿಯಲ್ಲಿ ಅರಿವು ಅಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳಿವಳಿಕೆ, ಜ್ಞಾನ ಮಾತ್ರ ಅಲ್ಲ; ಅದು ಕ್ರಿಯೆಯ ಅನುಭವದಿಂದ ಒಡಮೂಡುವುದು. ಅದು ಕೇಳಿ ತಿಳಿದಿದ್ದಲ್ಲ. ಕ್ರಿಯೆಯಲ್ಲಿ ಮೂಡಿದ ತಿಳಿವಳಿಕೆ, ಅದು ತರ್ಕವಲ್ಲ. ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು.

ಈಗ ನನ್ನ ಮನಸ್ಸು ಅರಿವಿಗಾಗಿ ಕಂಡ ಕಂಡ ಕಡೆ, ಇದುವರೆಗೆ ಭಾರತೀಯ ಪರಂಪರೆಯಲ್ಲಿ ಈ ಸುಟ್ಟುಕೊಂಡು ಬರುವ ಅರಿವು ಯಾರ್‍ಯಾರಿಗಿದೆ? ಎಲ್ಲೆಲ್ಲಿದೆ? ಹುಡುಕಾಡತೊಡಗಿದೆ.

ಮತ್ತೆ ಇನ್ನೊಂದು. ವಚನಕಾರರು ನಮ್ಮ ಸುತ್ತಮುತ್ತ ಇರುವ ದೇವರುಗಳನ್ನು ದೇವರು ಅಂದುಕೊಂಡಿರಲಿಲ್ಲ. ಪ್ರತಿಯೊಬ್ಬ ವಚನಕಾರರಿಗೂ ಅವರವರದೇ ಇಷ್ಟದೈವ. ಅಂದರೆ ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು. ಈ ರೀತಿ ಪ್ರಜ್ಞೆಯನ್ನೇ ದೇವರು ಅಂತ ಅಂದುಕೊಂಡರೆ ಸುಡುವ ಬೆಂಕಿಯನ್ನು ನೆತ್ತಿ ಮೇಲೆ ಇಟ್ಟುಕೊಂಡಂತಾಗುತ್ತದೆ. ತಮ್ಮ ಪ್ರಜ್ಞೆ ಮುಂದೆ ಸುಳ್ಳು ಹೇಳಕ್ಕಾಗಲ್ಲ. ಅದೇ ಕಷ್ಟ ಆಗೋದು. ಇತರೆ ದೇವರಿಗಾದರೆ– ಕಾಳಿ ಇರಲಿ, ಯಾವುದೇ

ಉಗ್ರ ದೇವತೆ ಇರಲಿ, ಏನೋ ಸ್ವಲ್ಪ ಹೊಟ್ಟೆ ಒಳಕ್ಕೆ ಹಾಕ್ಕೋಂತ ಸುಳ್ಳುಪಳ್ಳು ಹೇಳಿಬಿಡಬಹುದು. ಆದರೆ ಪ್ರಜ್ಞೆ ಮುಂದೆ ಇದು ನಡೆಯದು. ಈ ಇಕ್ಕಟ್ಟಿಗೆ ವಚನಕಾರರು ಮುಖಾಮುಖಿಯಾದರು ಎಂದು ಕಾಣಿಸುತ್ತದೆ. ಅವರು ತಮ್ಮ ಕಷ್ಟ ಸುಖಾನ, ದುಃಖ ದುಮ್ಮಾನಾನ, ಏಳುಬೀಳುಗಳನ್ನು ಅವರ ಉತ್ಕಟ ಇಕ್ಕಟ್ಟುಗಳನ್ನು ಆ ಪ್ರಜ್ಞೆ ಮುಂದೆ ಹೇಳಿಕೊಳ್ಳುತ್ತ ಒದ್ದಾಡುತ್ತಿದ್ದರೆಂದು ಕಾಣುತ್ತದೆ. ಈ ಒದ್ದಾಟಕ್ಕೆ ಅವರು ನುಡಿ ಕೊಟ್ಟರು.

ಅವರು ಅಂದು ನುಡಿದದ್ದು ಇಂದು ನುಡಿದಂತೆ ಕೇಳಿಸುತ್ತಿದೆ. ಅದು ತನಗೆ ತಾನೇ ಕಾವ್ಯವಾಗಿಬಿಟ್ಟಿದೆ. ಈ ಬೆಂಕಿಯಂಥ ವಚನ ಸೃಷ್ಟಿಗೆ ಸಾಂತ್ವನದ ಜಾನಪದ ಕಸಿ ಮಾಡಿ ನಾವು ಹುಟ್ಟಬೇಕಾಗಿದೆ, ಹುಟ್ಟುಪಡೆಯಬೇಕಾಗಿದೆ, ಅನ್ನಿಸತೊಡಗಿದೆ.

# ಲಯವಿಡಿದು

**ಒಂದು**

ನಾನು ಅಮೆರಿಕಾಕ್ಕೆ ಬಂದಾಗ ಇಂಗ್ಲಿಷ್ ಉಚ್ಚಾರಣೆ ತುಂಬಾ ಕಷ್ಟವೆನಿಸಿ ಕಕ್ಕಾಬಿಕ್ಕಿ ಆಗುತ್ತಿತ್ತು. ನಾನೊಮ್ಮೆ ನಮ್ಮ ತಂಡದವರೇ ಆದ ಜಮೈಕಾದ ಕ್ರಿಸ್ಟಿನ್ ಅವರ ವಾಚನಕ್ಕೆ ಹೋದೆ. ಅವರು ಮಾತಾಡುತ್ತಿದ್ದ ರೀತಿ ನಾನು ಬೇರೊಂದು ದೇಶದಲ್ಲಿದ್ದೇನೆಂಬ ಭಾವನೆಯನ್ನೆ ತೊಡೆದುಹಾಕಿತು. ನನಗೆ ಟ್ರೇಸಿಚಾಪ್‌ಮನ್‌ಳ ಇಂಗ್ಲಿಷ್ ಗೀತೆ 'ಫಾಸ್ಟ್ ಕಾರ್' ನೆನಪಾಯ್ತು. ನನ್ನ ಮಗಳು ಈ ಹಾಡನ್ನು ಬಲವಂತವಾಗಿ ಕೇಳಿಸಿದ್ದಳು. ಅದು ನಮ್ಮ ಜನಪದ ಗೀತೆಗಳಿಗೆ ಹತ್ತಿರವಾಗಿತ್ತು. ಇದು ಮನಸ್ಸಿಗೆ ಬಂದಾಗ, ನಮಗೆ ಭಾರತೀಯರಿಗೆ ಇಂಗ್ಲಿಷಿನಲ್ಲಿ ನಮ್ಮದೇ ಆದ ಒಂದು ಲಯವಿಲ್ಲವೇನೊ ಎಂದು ಅನ್ನಿಸತೊಡಗಿತು. ನಂತರ ನನ್ನ ಕಾದಂಬರಿ ಇಂಗ್ಲಿಷ್ ಅನುವಾದದ ವಾಚನವನ್ನು ಜಮೈಕಾದ ಲಯದಲ್ಲಿ ಪ್ರಯತ್ನಿಸಿದೆ. ಇದು ನನ್ನ ವಾಚನವನ್ನು ಸರಾಗ ಹಾಗೂ ಸಹಜಗೊಳಿಸಿತು.

ಭಾರತದ ನಮ್ಮ ಇಂಗ್ಲಿಷ್ ಕಲಿಕೆಯಲ್ಲಿ, ಅಮೆರಿಕ ಅಥವಾ ಬ್ರಿಟೀಷರ ನುಡಿಲಯವನ್ನು ಅನುಕರಿಸುತ್ತಾ ಇಂಗ್ಲಿಷ್ ಉಚ್ಚಾರಣೆಯ ತೊಡಕಿನಲ್ಲಿ ಸಿಕ್ಕಿಬಿದ್ದಿದ್ದೇವೆ ಎಂದು ಅನ್ನಿಸಿತು. ಹಾಗಾಗಿ ಭಾಷೆಯ ಸಂವಹನದಲ್ಲಿನ ಅಂಗಾಂಗ ಚಲನೆ, ಧ್ವನಿ, ಶೈಲಿ ಹಾಗೂ ಏರಿಳಿತಗಳನ್ನು ಕಳೆದುಕೊಂಡುಬಿಡುತ್ತೇವೆ. ನಾವು ಪ್ರಜ್ಞಾಪೂರ್ವಕವಾಗಿ ಪದಗಳನ್ನು ಒಪ್ಪಿಸುತ್ತಿರುತ್ತೇವೆ. ಇದರೊಡನೆ, ನಾವು ಇಂಗ್ಲಿಷ್ ಮಾತನಾಡುತ್ತಿರುವಾಗಲೆಲ್ಲಾ ಆ ವ್ಯಾಕರಣ ನಮ್ಮ ಮನಸ್ಸನ್ನು ತುಂಬಿಕೊಂಡಿರುತ್ತದೆ. ವ್ಯಾಕರಣವನ್ನು ಮರೆತು ಲಯ ಹಿಡಿದು ಇಂಗ್ಲಿಷಿನೊಡನೆ ನಾವು ಒಡನಾಡಬೇಕಾಗಿದೆಯೇನೊ.

**ಎರಡು**

ನನ್ನ ಮೊಮ್ಮಗ ಅರವಿಂದ್ ಲಕ್ನೋದಿಂದ ಬಂದಾಗ ಅವನು ಹಿಂದಿಯನ್ನು ಉಸಿರಾಡಿದಷ್ಟು ಸರಾಗ ಮಾತಾಡುತ್ತ, ನನಗೋ ಇವನು ಇಷ್ಟು ಬೇಗ ಹೇಗೆ ಕಲಿತ ಎಂದು ಸೋಜಿಗವಾಗಿತ್ತು. ನಾನು ಏನಾರು ಕೇಳಿದರೆ 'ತೂ ಪಾಗಲ್ ಹೋಗಯಾ ಕ್ಯಾ' ಅನ್ನುತ್ತಿದ್ದ. ನಾನು ಯಾವುದಕ್ಕೂ ಇರಲಿ, ಮುಂದೆ ಇವನೊಡನೆ ಮಾತಾಡ್ತ ಹಿಂದಿ ಕಲಿಯಬಹುದು ಅಂತ '30 ದಿನಗಳಲ್ಲಿ ಹಿಂದಿ ಕಲಿಯಿರಿ' ಪುಸ್ತಕ ತಂದು ಓದತೊಡಗಿದೆ. ಇದನ್ನು ಕಂಡು ಅರವಿಂದ್ ತನ್ನ ಕೆನ್ನೆಗುಳಿ, ಕಣ್ಣುಗಳಲ್ಲಿ ನಗು ತಂದುಕೊಂಡು
'ಏನ್ ಮಾಡ್ತಾ ಇದ್ದೀಯ' ಅಂದ. 'ಹಿಂದಿ ಕಲೀತಾ ಇದ್ದೀನಿ' ಅಂದೆ.
'ಈ ರೀತಿ ಎಲ್ಲಾ ಕಲಿಯೋಕೆ ಆಗಲ್ಲ' ಅಂದ. 'ನೀನು ಹೇಗೆ ಕಲಿತೆ?' ಅಂದೆ.
'ಲಕ್ನೋದಲ್ಲಿ ನನ್ನ ಗೆಳೆಯರು ಮಾತಾಡುವುದನ್ನ ಸುಮ್ಮನೆ ಕೇಳಿಸಿಕೊಳ್ತಾ ಇದ್ದೆ. ಹೀಗೆ ಕೇಳಿಸಿಕೊಳ್ತಾ ಸುಮಾರು ದಿನ ಆದಮೇಲೆ ಒಂದು ದಿನ ನನಗೇ ಬಂತು' ಅಂದ. ಅವನು ಕೇಳಿಸಿಕೊಳ್ಳುತ್ತಿದ್ದುದು ಆ ಭಾಷೆಯ ಏರಿಳಿತ ಲಯ, ಆಲಿಸುತ್ತ ಅದರೊಳಗಿನ ಪದ, ಅದಕ್ಕಂಟಿರುವ ಅರ್ಥ ತಂತಾನೆ ಆಯ್ತೆ?

**ಮೂರು**

ಪತ್ರಿಕೆಗಳಲ್ಲಿ ಒಂದು ವರದಿ ಬಂದಿತ್ತು. ತಾಯಿಯ ಗರ್ಭದೊಳಗಿರುವ ಶಿಶು ತನ್ನ ತಾಯಿ ಮಾತಿನ ಭಾವಕ್ಕೆ ಸ್ಪಂದಿಸುತ್ತದಂತೆ. ಈ ಸ್ಪಂದನ ತಾಯಿಮಾತಿನ ಏರಿಳಿತ ಲಯಕ್ಕೆ ತಕ್ಕಂತೆ ಇರುತ್ತದಂತೆ.

**ನಾಲ್ಕು**

ಆಗತಾನೇ ಹುಟ್ಟುವ ಕಾವ್ಯದೊಳಗೂ ಜೀವಾಡುವ ರೀತಿ ಹೀಗೇ ಇರಬಹುದೆ?

# ಕುಸುಮಬಾಲೆ ಹುಟ್ಟುವ ಮುನ್ನ

ನನ್ನ ಕಥೆಗಳಲ್ಲಿ ನಾನೆಲ್ಲಿರಬಹುದು? – ಎರಡು ಕಥೆಗಳು ನನ್ನ ಮನಸ್ಸಿಗೆ ಬರುತ್ತವೆ. ಒಂದು ಕ್ರಿಸ್ತಪೂರ್ವದಲ್ಲಿದ್ದ ಆದಿನಾಥನೆಂಬ ಜೈನ ದೊರೆಯದು. ಆತ ಒಂದು ಬೆಳಗ್ಗೆ ಎದ್ದು ನೋಡುತ್ತಾನೆ– ಅವನ ತಲೆಯ ಒಂದು ಕೂದಲು ನೆರೆತಿದೆ. ಅವನಿಗೆ ತಕ್ಷಣವೇ ಬದುಕಿನ ಕ್ಷಣಿಕತೆಯ– ಹುಟ್ಟು, ಸಾವು ಎಲ್ಲದರ ದರ್ಶನವಾಯಿತು. ಅವನು ರಾಜ್ಯ ಕೋಶ ಎಲ್ಲವನ್ನೂ ಬಿಟ್ಟು ತಪಸ್ಸು ಮಾಡಲು ಕಾಡಿಗೆ ಹೊರಟುಹೋದ.

ಇನ್ನೊಂದು ಸುಮಾರು ನನ್ನ ಥರದ ಮನುಷ್ಯನಿಗೆ ಸಂಬಂಧಿಸಿದ್ದು. ಅವನು ಒಂದು ದಿನ ನದಿಯೊಂದರಲ್ಲಿ ನೀರು ಕುಡಿಯುತ್ತಿದ್ದಾಗ ಅವನ ಬೊಗಸೆಯಲ್ಲಿ ಒಂದು ಉದ್ದನೆಯ ಕೂದಲು ಕಂಡಿತು. ತಕ್ಷಣ ಅವನ ಕಣ್ಮುಂದೆ ಸುಂದರ ಹೆಣ್ಣಿನ ರೂಪವೊಂದು ಮೂಡಿತು. 'ಈ ಕೂದಲೇ ಇಷ್ಟೊಂದು ಮನೋಹರವಾಗಿರುವಾಗ ಆ ಕೂದಲನ್ನು ಪಡೆದ ಹೆಣ್ಣು ಇನ್ನೆಷ್ಟು ಚೆಲುವೆಯಾಗಿರಬೇಕು' ಎಂದು ಆತ ಯೋಚಿಸಿದ. ಅವನು ಆ ಹೆಣ್ಣನ್ನು ಹುಡುಕಿ ಅವಳ ಒಲವನ್ನು ಗಳಿಸಲು ಹೆಣಗತೊಡಗಿದ.

ಮೋಹ ಮತ್ತು ನಶ್ವರತೆ ನಡುವೆ ಸೃಷ್ಟಿ ಉಯ್ಯಾಲೆಯಾಡುತ್ತಿದೆಯೆ? ಕುಸುಮಬಾಲೆ ಬರೆಯಲು ನನ್ನನ್ನು ಪ್ರೇರೇಪಿಸಿದ್ದು ಏನು? ಅಂದಾಜು ಈ ಮೂರು: ಮೊದಲನೆಯದು, ನಾನಿನ್ನೂ ಹುಡುಗನಾಗಿದ್ದಾಗ ಸಾವಿನ ಕಡೆಗೆ ನವೆದುಹೋಗುತ್ತಿದ್ದವರನ್ನು ಉಳಿಸಲು ಆಚರಿಸುತ್ತಿದ್ದ ನೇಮವೊಂದರ ಬಗ್ಗೆ ಕೇಳಿದ್ದೆ. ದೇಹಕ್ಕೆ ಗರ ಬಡಿದಿದೆ ಎಂಬೊಂದು ನಂಬಿಕೆ. ಈ ಗರವನ್ನು ಓಡಿಸಲು ಆ ವ್ಯಕ್ತಿಗೆ ಗೊತ್ತಿಲ್ಲದಂತೆ ಬಗೆಬಗೆಯ ತಿಂಡಿ ತಿನಿಸುಗಳನ್ನು

ಸಿದ್ಧಪಡಿಸಿ ಗರಬಡಿದಾತನನ್ನು ಒಂಟಿಯಾಗಿ ಆ ಅನಿರೀಕ್ಷಿತ ಔತಣದ ಮುಂದೆ ಕುಳ್ಳಿರಿಸಿ ಮರೆಯಾಗುತ್ತಾರೆ. ಆ ತಿಂಡಿತಿನಿಸುಗಳ ರಾಶಿಯ ಮಂದೆ ಆ ಗರಬಡಿದಾತ ಮುಖಾಮುಖಿಯಾದಾಗ ಆ ಜೀವಕ್ಕೆ ಬೆರಗು ತುಂಬಿ ತೃಪ್ತಿಯಾಗಿ ಆ ಗರ ಆ ದೇಹವನ್ನು ಬಿಟ್ಟು ಓಡಿಹೋಗುತ್ತದೆ ಎಂಬ ಈ ನೇಮದ ಆಚರಣೆ ನನ್ನನ್ನು ಹಿಂಬಾಲಿಸುತ್ತಿತ್ತು. ಇದು ನನಗೆ ಬಡತನವನ್ನು ಅರ್ಥಮಾಡಿಸಿತು. ಇದು ನಮ್ಮ ಜನ ತಮ್ಮ ಅರಿವಿನ ಮೂಲಕ ರೂಢಿಸಿಕೊಂಡ ಒಂದು ರೀತಿಯ ಮನೋಚಿಕಿತ್ಸೆಯಾಗಿ ಕಂಡಿತು. ನಾನೆಂದೂ ಈ ಆಚರಣೆಯನ್ನು ಕಣ್ಣಾರೆ ನೋಡಿಲ್ಲ. ಆದರೆ ಕುಸುಮಬಾಲೆಯಲ್ಲಿ ಈ ಆಚರಣೆಯನ್ನು ವಿವರಿಸುವ ಪುಟಗಳು ನನ್ನ ಅತ್ಯುತ್ತಮ ಬರವಣಿಗೆ ಎಂದು ನನಗನ್ನಿಸಿದೆ.

ಇನ್ನೊಂದು ಕೂಡ ಒಂದು ಜನಪದ ಕಥೆಯೇ– ಜೋತಮ್ಮಗಳನ್ನು ಕುರಿತದ್ದು. ರಾತ್ರಿ ದೀಪಗಳನ್ನು ಆರಿಸಿದ ನಂತರ ಈ ದೀಪಗಳ ಆತ್ಮಗಳು ಹಳ್ಳಿಯ ಒಂದು ಸ್ಥಳದಲ್ಲಿ, ಮರವೊಂದರ ಕೆಳಗಿರುವ ಮಂಟಪದಲ್ಲಿ ಸೇರಿ ತಂತಮ್ಮ ಮನೆಗಳಲ್ಲಿ ಏನೇನು ಆಗುತ್ತಿದೆ ಎಂಬುದನ್ನು ಹಂಚಿಕೊಳ್ಳುತ್ತವೆ ಎನ್ನುವುದು ಈ ಕಥೆ. ಜನಪದ ಕಥೆಯಲ್ಲಿ ಇದನ್ನು ತಮಾಷೆಗೆಂದು ಬಳಸಲಾಗಿದೆ. ಆದರೆ ನಿಜವನ್ನು ನುಡಿಸುವ ಆತ್ಮವಾಗಿ ನನಗೆ ಇದು ಕಾಣಿಸಿತು.

ಕೆಲವರ್ಷಗಳ ಹಿಂದೆ ನನಗೆ ಗೊತ್ತಿದ್ದ ದಲಿತ ಸಂಘಟನೆಯಲ್ಲಿದ್ದ ಸ್ನೇಹಿತನೊಬ್ಬನ ಕೊಲೆಯಾಯಿತು. ಆತ ಕೊಲೆಯಾದ ಸ್ಥಳಕ್ಕೆ ಹೋಗಿ ನೋಡಿದರೆ ಆ ಸ್ಥಳದಲ್ಲಿದ್ದ ಗೋಡೆಗಳಿಗೆ ಸುಣ್ಣ ಬಳಿಯಲಾಗಿತ್ತು. ಅಲ್ಲಿದ್ದ ಒಬ್ಬ ಮುದುಕಿ 'ನೀವು ಎರಡು ದಿನ ಮುಂಚೆ ಬಂದಿದ್ದರೆ ರಕ್ತದ ಕಲೆಗಳನ್ನು ನೋಡಬಹುದಿತ್ತು' ಎಂದಳು. ಆ ಕ್ಷಣ ನನಗೆ 'ಗೋಡೆಗೆ ಸುಣ್ಣ ಬಳಿದ ಮಾತ್ರಕ್ಕೆ ರಕ್ತದ ಕಲೆಗಳು ಉಳಿಯುವುದಿಲ್ಲವೇ?' ಅನ್ನಿಸಿ ಅದು ಒಳಗೇ ಬೆಳೆಯತೊಡಗಿತು.

ಒಂದು ದಿನ, ನನ್ನೊಳಗೆ ಈ ಮೂರೂ ಎಳೆಗಳೂ ಐಕ್ಯಗೊಂಡು ಕುಸುಮಬಾಲೆ ಮೂಡತೊಡಗಿತು?

## ಬಂಡೆಗಳ ಮೇಲೆ ಚಿಗುರೊಡೆಯಬೇಕಾಗಿದೆ

ಸ್ನೇಹಿತರೆ, ನನ್ನೊಡನೆ ನಾನೇ ಮಾತನಾಡುತ್ತಿರುವೆ ಅಂದುಕೊಂಡು ನಿಮ್ಮೊಡನೆ ಈಗ ಮಾತಾಡುವ ಯತ್ನ ಮಾಡುತ್ತಿದ್ದೇನೆ. ಇಲ್ಲಿ ಒಟ್ಟಾಗಿರುವ ನಾವು ಅಲ್ಪಸ್ವಲ್ಪ ಬರಹಗಾರರು, ಸಾಹಿತ್ಯ ಸೃಷ್ಟಿಯಲ್ಲಿ ಆಸಕ್ತರು, ಇದರೊಡನೆಯೇ ಸಮಾಜದ ಬದಲಾವಣೆಗಾಗಿ ಆಸೆಪಡುವಂಥವರಾಗಿದ್ದೇವೆ. ಈ ಆಸೆ ನಮ್ಮನ್ನು ಇಲ್ಲಿ ಸೇರಿಸಿದೆ.

ಈ ಮೊದಲು ನಾವು ಪ್ರಗತಿಶೀಲ, ಬರಹಗಾರರ ಒಕ್ಕೂಟಗಳನ್ನು ಕೇಳಿದ್ದೇವೆ, ಕಂಡಿದ್ದೇವೆ. ಅವೂನು ತಮ್ಮೆಲ್ಲ ಮಿತಿ ಮತ್ತು ಕೊರತೆಗಳೊಡನೆ ಮನುಷ್ಯನ ಉನ್ನತಿ ಕಡೆಗೆ ಮುಖಮಾಡಿ ನಿಂತಂಥವುಗಳು. ಈಗ ನಾವು ಅಂಥದೇ ಮತ್ತು ಅದರಿಂದ ಮುಂದುವರಿದ ಪ್ರಯತ್ನಕ್ಕೆ ಕೈ ಹಾಕಿದ್ದೇವೆ. ಇದುವರೆಗೂ ಆದ ಪ್ರಯತ್ನಗಳನ್ನು ಗಮನಿಸಿ ನಡೆಯಬೇಕಾಗಿದೆ. ಇಲ್ಲದಿದ್ದಲ್ಲಿ ಹುಟ್ಟಿನ ಸೆರಗಿಗೆ ಸಾವನ್ನು ನಾವೇ ಗಂಟು ಹಾಕಿದಂತಾಗುತ್ತದೆ.

ಯಾಕೆಂದರೆ ಬಂಡೆಗಳ ಮೇಲೆ ನಾವು ಚಿಗುರೊಡೆಯಬೇಕಾಗಿದೆ. ಈ ಭಯವು ಎಚ್ಚರವು ನಮ್ಮನ್ನು ಉಳಿಸಬಲ್ಲದು. ಯಾಕೆಂದರೆ ಒಕ್ಕೂಟವನ್ನು ಅದರ ಹುಂಬತನ, ಅಬ್ಬರ, ಪ್ರಚಾರ, ತತ್ವವನ್ನು ವ್ಯಕ್ತಿಗತಗೊಳಿಸುವ ಗೊಂದಲದ ಸರಪಳಿಗಳು ಒಕ್ಕೂಟವನ್ನೆ ಕಟ್ಟಿಹಾಕಿ ನಮ್ಮ ಕಣ್ಣೆದುರು ತಿಂದುದ್ದನ್ನು ನೋಡಿದ್ದೇವೆ. ನಮ್ಮ ತಪ್ಪುಗಳಿಗೆ ನಾವೇ ಆಹಾರವಾಗಬಹುದು ಎಂಬ ಎಚ್ಚರದೊಡನೆ ನಾವು ಕಾಲಿಡಬೇಕಾಗಿದೆ.

ಈಗ ನಡೆಯುತ್ತಿರುವ ಬಂಡಾಯ ಸಾಹಿತ್ಯ ಸಮ್ಮೇಳನವು ತನ್ನ ಹುಟ್ಟಿನೊಡನೆ ಗದ್ದಲವನ್ನೂ ಹುಟ್ಟಿಸಿಕೊಂಡಿದೆ. ಸ್ವಲ್ಪ ಆತುರವಾಗೂ ಹುಟ್ಟಿಕೊಂಡಿದೆ. ಸ್ವಲ್ಪ

ಆತುರವಾಗೂ ಅಂದರೆ ಏಳು ತಿಂಗಳಿಗೆ ಹುಟ್ಟಿದೆ. ದಲಿತ ಸಂಘರ್ಷ ಸಮಿತಿ ಬೆಳವಣಿಗೆಯಲ್ಲಿ ಪ್ರಗತಿಪರರ ಒಡಗೂಡಿ ಅದು ತನ್ನ ಸಹಜ ಹುಟ್ಟನ್ನು ಕಂಡುಕೊಳ್ಳಬೇಕಿತ್ತು. ಏನೇ ಆಗಿದ್ದರೂ ಅದರ ಹುಟ್ಟು ತಪ್ಪಲ್ಲ. ಕಾರಣಗಳಲ್ಲಿ ತಪ್ಪುಗಳಿದ್ದರೆ ಅದರಿಂದಾಗಿ ಇಲ್ಲಿರುವ ನಮ್ಮಗಳ ಹೊಣೆ ಹೆಚ್ಚಿದಂತಾಗಿದೆ, ಅಷ್ಟೆ.

ನಮಗೆ ಬೇಕಾಗಿರುವುದು, ಸಾಹಿತ್ಯ ಪರಿಷತ್ತಿನಂಥ ನಮ್ಮದಾದ ಒಂದನ್ನು ಕಟ್ಟುವುದಲ್ಲ ಎಂಬುದನ್ನು ನಾವು ಇಡುವ ಮೊದಲ ಹೆಜ್ಜೆಯಲ್ಲೇ ತೋರಿಸಿಕೊಡಬೇಕಾಗಿದೆ. ಸಾಹಿತ್ಯ ಪರಿಷತ್ತು, ಅದಕ್ಕಿರುವ ರಚನೆಯಲ್ಲಿ ಎಂದೂ ನಮ್ಮಂಥವರ ಆಸೆಗಳನ್ನು ಮುಟ್ಟಲಾರದು. ನಮ್ಮ ಆಸೆಗಳ ಪೂರೈಕೆಗಾಗಿ ಅದರ ಕಡೆ ನೋಡುವುದೇ ನಮ್ಮ ತಪ್ಪು, ಮೂರ್ಖತನ ಇತ್ಯಾದಿ. ಪರಿಷತ್ತು ನಿಲುಗಡೆಯಾದ ಸಾಹಿತ್ಯವನ್ನು ಮೆರೆಸುತ್ತ ಬಂದಿದೆ. ಅದರಿಂದ ಆಗುವುದು ಅದೇನೆ. ನಮಗೆ ಬೇಕಾಗಿರುವುದು ನಡಿಗೆ.

ನಮ್ಮನ್ನು ಇಂದು ಕಂಡುಕೊಳ್ಳೋಣ. ಸಮತಾವಾದದ ಮಾತುಗಳಲ್ಲಿ ಹೇಳುವುದು ಅದೆಷ್ಟೇ ಆಕರ್ಷಕವಾಗಿದ್ದರೂ ಅವೂ ಇಂಡಿಯಾದಲ್ಲಿ ತುಕ್ಕು ಹಿಡಿದು ಕುಂತಿವೆ. ಅವನ್ನೂ ನಾವು ಚಿಗುರಿಸಬೇಕಾಗಿದೆ. ನಮ್ಮ ಮಾತುಗಳು ತಮ್ಮ ಮಾತನ್ನು ನಿಲ್ಲಿಸಿ ನಮ್ಮ ಕ್ರಿಯಾ ಮಾತಾಡುವುದಾದಲ್ಲಿ ಸಮಾಜವಾದ ಸಮತಾವಾದಗಳು ಆಗ ಚಿಗುರೊಡೆಯಬಹುದು. ಅದಕ್ಕಾಗಿ ನಾವು ಏನು ಮಾಡಬಹುದು ಅಥವಾ ನಮ್ಮ ಕೈಲಿ ಆಗುವುದು ಎಷ್ಟು? ಇದು ಈಗ ನಮ್ಮ ಮುಂದಿದೆ.

ಭಾರತದಲ್ಲಿ ಎಲ್ಲ ತುಳಿತಗಳೊಡನೆ, ಜ್ಞಾನ ಬಂಡವಾಳಶಾಹಿಯೂ ಸೇರಿ ಮಾನವ ಸಮೂಹವನ್ನು ಕತ್ತಲ ರಾಜ್ಯಕ್ಕೆ ಸತತವಾಗಿ ನೂಕುತ್ತ ಬಂದಿವೆ. ಮಾನವ ಸಮೂಹವು ಇಲ್ಲಿ ತನ್ನ ಅರಿವು ಕಳೆದುಕೊಂಡು ಬಿದ್ದಿದೆ. ಈ ಬಿದ್ದಿರುವ ಅನುಭವ ಸಂಪತ್ತಿಗೆ ಅದಕ್ಕೆ ಅದನ್ನೇ ಕಾಣಿಸುವ ಕೆಲಸ ಮಾಡಬೇಕಾಗಿದೆ. ಆಗ ನೋವು ಗಾಯಗಳು ತಮ್ಮ ಮಾತನ್ನಾಡಲು ಆರಂಭಿಸುತ್ತವೆ. ಆಗ ನಮಗೆ ಬೆಳಕು ಕಾಣಬಹುದು. ಆ ಬೆಳಕು ತನ್ನ ಹುಟ್ಟಿನಲ್ಲೆ ಕಾವ್ಯವೂ ತಾನಾಗಿ ಸಮಾಜಕ್ಕೆ ನಡಿಗೆ ತಂದುಕೊಡಲೂಬಹುದು.

ನಾನು ಅಂಥ ಕತ್ತಲ ರಾಜ್ಯದಿಂದ ಬಂದಂಥವನು. ಕಲಾ ಮಾಧ್ಯಮದಲ್ಲಿ ನಾನು ಕಂಡುಕೊಳ್ಳುತ್ತಿರುವುದು ಒಂದು ಆಕಸ್ಮಿಕವೆ. ನಾನು ಇದುವರೆಗೆ ಬರೆದಿರುವುದು ನಮ್ಮ ರಾಜ್ಯದ ಮನುಷ್ಯನ ಆರೇಳು ಬೆರಳುಗಳು, ಹೆಚ್ಚೆಂದರೆ

ಒಂದು ಹಸ್ತ ಇದ್ದೀತು. ಅದಷ್ಟೆ ಕನ್ನಡ ಸಾಹಿತ್ಯದ ಗತಿಯನ್ನು ತನ್ನ ಪ್ರಮಾಣಕ್ಕಿಂತ ಹೆಚ್ಚಾಗಿ ಅಲ್ಲಾಡಿಸಿದೆ. ಕತ್ತಲ ರಾಜ್ಯದ ಇಡೀ ಮನುಷ್ಯ ಮಾತಾಡುವುದಾದರೆ? ಒಂದು ಸಮುದಾಯವೇ ಮಾತಾಡಿದಂತಾಗಬಹುದು. ಒಂದು ಆಂದೋಲನ ಇದನ್ನು ಕಾಣಿಸಬಹುದೇನೊ.

ಇಂಥ ಒಂದು ಆಂದೋಲನದಿಂದ ಅಸ್ಪೃಶ್ಯತೆಯ ಕತ್ತಲು ಕೊನೆಯಾಗಬಹುದು. ಜಾತೀಯ ಗೋಡೆಗಳು ಕುಸಿಯಬಹುದು. ಆಗ ಒಬ್ಬರ ಮೇಲೆ ಒಬ್ಬರು ನಿಂತವರು ನೆಲದ ಮೇಲೆ ಪಾದ ಊರಿ ಸಮಸಮ ನಿಲ್ಲಬಹುದು. ಮನುಷ್ಯರ ನಡುವೆ, ಮನುಷ್ಯ–ಮನುಷ್ಯ ಸಂಬಂಧ ಉಂಟಾಗಬಹುದು. ಈ ರೂಪಾಂತರವನ್ನು ಹಿಡಿಯುವ ಕಲೆಯು ತಾನೂ ಹೊಸ ಹುಟ್ಟನ್ನು ಪಡೆದು ಹೊಸ ಮನುಷ್ಯನ ಹುಟ್ಟಿಗೂ ಕಾರಣವಾಗಬಹುದು.

## ದನಿ ಇಲ್ಲದೆ ಮಲಗಿರುವವರ ದನಿಯಾಗಿಯೂ

ನಾವು ಮಾಡಬೇಕಾದ್ದು ಕ್ರಾಂತಿ. ಕ್ರಾಂತಿ ಸಾಹಿತ್ಯದಿಂದ ಆಗದು, ಕೈಲಾಗದವ ಬರೆದುಕೊಳ್ಳುತ್ತಾನೆ ಇತ್ಯಾದಿ ಚರ್ಚೆ ಕೇಳಿದ್ದೇನೆ. ಆದರೆ, ಯಾರಾದರೂ ಅನಕ್ಷರಸ್ಥರ ಮಿದುಳನ್ನು ಬಿಚ್ಚಿಟ್ಟರೂ ಅಲ್ಲಿ ಕಂಡುಬರುವುದು ಏನೇನು? ಪಾಂಡವರು ಇರಬಹುದು, ಕೌರವರು ಇರಬಹುದು, ರಾಮ ಇರಬಹುದು, ರಾವಣ ಇರಬಹುದು ಅಥವಾ ತಮ್ಮ ಸುತ್ತಲಲ್ಲಿ ಇತ್ತೀಚೆಗೆ ನಡೆದ ಕೊಲೆಯೋ ಪವಾಡವೊ ಕತೆ ರೂಪದಲ್ಲಿ ಆ ಮಿದುಳನ್ನು ತುಂಬಿರುತ್ತದೆ. ಅದು ಆ ವ್ಯಕ್ತಿಯ ಇಂದಿನ ಬದುಕನ್ನು ಆಳುತ್ತಿರುತ್ತದೆ. ನಮಗೆ ಅರಿವಿಲ್ಲದೆ ನಮ್ಮ ಉಸಿರಾಟದಂತೆ ಇಂಥವು ನಮ್ಮನ್ನು ರೂಪಿಸಿಬಿಟ್ಟಿರುತ್ತವೆ.

ಹೀಗೆ, ಸಾಹಿತ್ಯ ಉಂಟುಮಾಡಬಲ್ಲಂಥ ಪರಿಣಾಮ ಎಂಥದು ಎನ್ನುವುದಕ್ಕೆ ನಮ್ಮಲ್ಲಿ ಇರುವ ಒಂದು ಜನಪದ ಕಥೆಯನ್ನು ನೆನಪಿಸುವೆ. ದಲಿತರಾದ ನಮ್ಮಲ್ಲಿ ಮಾರಮ್ಮನಿಗೆ ಕೋಣ ಬಲಿ ಕೊಡುವ ಪದ್ಧತಿ ಇತ್ತು. ಈ ಪದ್ಧತಿಯ ಹಿಂದೆ ಇರುವ ಕಥೆ ಏನೆಂದರೆ– ಒಬ್ಬ ಅಸ್ಪೃಶ್ಯನು ಬ್ರಾಹ್ಮಣ ಕನ್ಯೆಯನ್ನು ಪ್ರೀತಿಸಿ, ತಾನು ಬ್ರಾಹ್ಮಣ ಎಂದು ಸುಳ್ಳು ಹೇಳಿ ವಂಚಿಸಿ ಆಕೆಯನ್ನು ಮದುವೆಯಾಗುತ್ತಾನೆ. ಮುಂದೆ ತಾನು ಮದುವೆಯಾದಾತ ಅಸ್ಪೃಶ್ಯ ಎಂದು ಆ ಬ್ರಾಹ್ಮಣಿಗೆ ತಿಳಿದಾಗ ಆಕೆ ಕುಪಿತಳಾಗಿ ಅಗ್ನಿ ಪ್ರವೇಶ ಮಾಡುತ್ತಾ 'ಜಾತಿ ಸುಳ್ಳು ಹೇಳಿ ನನ್ನನ್ನು ಕೆಡಿಸಿದ ಪ್ರಯುಕ್ತ ಆ ಅಸ್ಪೃಶ್ಯ ಕೋಣವಾಗಿ ಹುಟ್ಟಲಿ, ಆ ಕೋಣವನ್ನು ನನಗೆ ಬಲಿ ಕೊಡಲಿ' ಎಂದು ಶಾಪ ಕೊಡುತ್ತಾಳೆ. ಇದು ಕಥೆ. ಕೋಣವಾದ ತಮ್ಮವನನ್ನೇ ನಮ್ಮವರು ಬಲಿಕೊಡುತ್ತಾ, ಅಷ್ಟೇ ಅಲ್ಲ ತಿಂದು ಬಂದಿದ್ದಾರೆ. ಇಂದು ಕೋಣ ಬಲಿಯು

ಮಾಂಸ ಮಾತ್ರವಾಗಿರಬಹುದು, ಆದರೆ ಹಿಂದೆ, ನಮ್ಮವರನ್ನು ನಮ್ಮಿಂದಲೇ ಕೊಲ್ಲಿಸುವುದನ್ನು ಈ ಕತೆ ಮಾಡಿಸಿತ್ತು. ವರ್ಣಸಂಕರವನ್ನು ತಡೆದಿತ್ತು.

ಒಬ್ಬ ದೊರೆ ಅಥವಾ ಸರ್ವಾಧಿಕಾರಿ ತನಗೆ ಇಷ್ಟವಾಗದವರನ್ನು ಗಲ್ಲಿಗೆ ಏರಿಸಬಹುದು ಅಥವಾ ಕೊಲ್ಲಿಸಬಹುದು. ಆದರೆ ಈ ಕತೆ ಯಾವ ಬಲಾತ್ಕಾರವನ್ನು ಮಾಡದೆ ನಮ್ಮನ್ನು ನಮ್ಮ ಕೈಯಾರೆಯೇ ಕೊಲ್ಲಿಸಿದೆ. ಸಾಹಿತ್ಯವನ್ನು ಉಡಾಫೆಯಾಗಿ ನೋಡಬೇಡಿ ಎನ್ನುವುದಕ್ಕೆ ಇಷ್ಟೆಲ್ಲ ಹೇಳುತ್ತಿರುವೆ. ಮತ್ತೂ ಉದಾಹರಣೆಗೆ ನಮ್ಮ ಪಂಚಮ ಪತ್ರಿಕೆಯ ಕೆಲವು ಅನುಭವಗಳನ್ನು ಓದಿ ಸಂವೇದನಾಶೀಲ ಬ್ರಾಹ್ಮಣರೊಬ್ಬರು ಒಂದು ಕಾಗದ ಬರೆದಿದ್ದರು. ಅದರಲ್ಲಿ ಅವರು 'ಇದುವರೆಗೂ ವಿಚಾರದ ಮಟ್ಟದಲ್ಲಿ ದಲಿತರ ಪರವಿದ್ದೆ. ಈಗ ಪಂಚಮದಲ್ಲಿ ಪ್ರಕಟವಾಗುತ್ತಿರುವ ಅನುಭವ ಓದುತ್ತಾ ಅವು ನನ್ನವೂ ಆದವು. ನಾನೂ ದಲಿತನಾಗಿ ತಳಮಳಿಸುತ್ತಾ ಚಿಂತೆಗೀಡಾದೆ' ಎಂಬರ್ಥದಲ್ಲಿ ಬರೆದಿರುವರು. ಅಂದರೆ ವಿಚಾರದಿಂದ ದಲಿತರ ಪರ ಆಗುವವನು, ಸಾಹಿತ್ಯ ಉಂಟುಮಾಡುವ ಅನುಭವದಿಂದ ದಲಿತ ಸ್ಥಿತಿಯನ್ನು ಅನುಭವಿಸುತ್ತಾನೆ. ಗಾಯ ಎಂಬುವುದು ವಿಚಾರವಾದರೆ, ಗಾಯದ ಅನುಭವವನ್ನು ಭಾಷೆಯಲ್ಲಿ ಮೂಡಿಸುವುದು ಸಾಹಿತ್ಯವಾಗುತ್ತದೆ. ಈ ಅನುಭವಿಸುವಿಕೆಯು ಸಮೀಪಗೊಳಿಸುತ್ತದೆ. ಹಾಗೂ ಕಲಾವಿದ ಸ್ವಭಾವದಲ್ಲೇ 'ನಿನ್ನೊಳಕ್ಕೆ ನಾನು ಹೋಗಿ ನಿನ್ನನ್ನು ಅನುಭವಿಸುವ' ಗುಣವಿರುತ್ತದೆ. ಇದು ಸಮಾಜ ಬದಲಾವಣೆ ಬಯಸುವ ನಮಗೆ ಅತ್ಯಗತ್ಯ.

ಆಮೇಲೆ ಆಗಾಗ ಕೇಳಿಬರುವ ಅನಕ್ಷರಸ್ಥರಾದ ನಮ್ಮ ಜನಕ್ಕೆ ನಮ್ಮ ಸಾಹಿತ್ಯ ತಲುಪುತ್ತಾ? ತಲುಪದಿದ್ದರೆ ಯಾರಿಗಾಗಿ ಬರೆಯಬೇಕು? ಎಂಬ ಪ್ರಶ್ನೆಗೆ ವಚನ ಓದಿ ಎಂದಷ್ಟೆ ಹೇಳಬಯಸುವೆ. ಅಕ್ಷರಸ್ಥರು ಅರ್ಥ ಮಾಡಿಕೊಳ್ಳಲು ಕಷ್ಟಪಡುವ ವಚನಗಳನ್ನು ಅನಕ್ಷರಸ್ಥರು ಅರ್ಥ ಮಾಡಿಕೊಳ್ಳುವುದನ್ನು ಬಲ್ಲೆ. ನಮ್ಮ ಹಳ್ಳಿಗಾಡ ಅನಕ್ಷರಸ್ಥರಲ್ಲಿ ಕಲ್ಪನೆ ರೂಪಕಗಳು ಅಲ್ಲಲ್ಲೆ ಹುಟ್ಟುತ್ತವೆ. ನಾವು ಅಕ್ಷರಸ್ಥರಾಗಿ ನಮ್ಮ ಜನರಿಂದ ಕತ್ತರಿಸಿಕೊಂಡು ಬೇರಿಲ್ಲದವರಾಗಿದ್ದೇವೆ! ಅಕ್ಷರಸ್ಥರಾದ ನಾವು ಬೇರುಗಳನ್ನು ಉಳಿಸಿಕೊಂಡು ವಿದ್ಯಾವಂತರಾಗಬೇಕಾಗಿದೆ.

ಜೊತೆಗೆ, ನಾವು ದಲಿತ ಬಂಡಾಯದ ಲೇಖಕರು, ಹೆಚ್ಚು ಕಮ್ಮಿ ಯಾವುದಾದರು ಇಸಂಗೊ ಸಂಘಟನೆಗೂ ಒಲವು ಉಳ್ಳವರೂ ಆಗಿರುತ್ತೇವೆ. ನಮಗೆ ಒಲವು ಇರುವ ಸಂಘಟನೆಯ ವಿಚಾರಗಳು

ನಮ್ಮ ಬರವಣಿಗೆಯನ್ನು ನಿರ್ಧರಿಸಬಹುದು. ಸಂಘಟನೆಗಳು ಜೀವನ ಬದಲಾವಣೆಗೆ ಹೊರಟರೆ, ಸಾಹಿತ್ಯ ಜೀವನವನ್ನು ಅನುಭವಿಸುವಂತೆ ಮಾಡಿ ಜೀವನವನ್ನು ಹೆಚ್ಚು ಅರ್ಥಮಾಡಿಸುತ್ತದೆ. ಜೀವನವನ್ನು ಹೆಚ್ಚು ಅರ್ಥ ಮಾಡಿಕೊಂಡರೆ ಬದಲಾವಣೆಯೂ ಹೆಚ್ಚು ಅರ್ಥಪೂರ್ಣವಾಗುವುದು. ಸಂಘಟನೆಗಳು ವಿಚಾರ ಹಿಡಿದುಕೊಂಡು ನಡೆದರೆ, ಸಾಹಿತ್ಯವು ಬದುಕನ್ನೆ ಹಿಡಿದು ನಡೆಯುತ್ತದೆ. ಆದ್ದರಿಂದ ಈ ಎರಡು ನಿಂತಿರುವ ಸ್ಥಳಗಳು ತಲೆ ಪಾದಗಳಂತಿದ್ದರೂ ಜೀವದಲ್ಲಿ ಬೇರೆ ಬೇರೆಯಲ್ಲ. ಮಾವೊ ಹೇಳುತ್ತಾನೆ– 'ಒಳ್ಳೆಯ ಸಾಹಿತ್ಯವಲ್ಲದ್ದು ಒಳ್ಳೆಯ ರಾಜಕೀಯವೂ ಅಲ್ಲ'. ಯಾವುದೇ ಇಸಂಗೆ ಒಲವಿದ್ದರೂ ಕಲಾವಿದನ ನಿಷ್ಠೆ ಬದುಕಿಗೆ ಆಗಿರಬೇಕೆನಿಸುತ್ತದೆ. ನನ್ನ ಅಮಾಸ ಕತೆಯಲ್ಲಿ ಬರುವ ಗ್ಯಾಂಗ್‌ಮೆನ್ ಸಿದ್ದಪ್ಪ ಎಂಬ ವ್ಯಕ್ತಿ ಕಮ್ಯುನಿಸಂ ಪದ ಬಳಸುತ್ತಾನೆ. ಆ ಪಾತ್ರದ ಬಾಯಿಂದ ನನ್ನ ಅಪೇಕ್ಷೆಯ 'ಸಮಾಜವಾದ' ಎಂದು ಹೇಳಿಸಿದ್ದರೆ ಆ ಪಾತ್ರವೇ ಸುಳ್ಳಾಗುತ್ತಿತ್ತು. ಪರಿಣಾಮವೇ ಇಲ್ಲದಂತಾಗುತ್ತಿತ್ತು.

ಸಾಮಾನ್ಯವಾಗಿ ಹಿಂದಲದರ ಬಗ್ಗೆ ಬೇರೆಯದರ ಬಗ್ಗೆ ಕಣ್ಣು ಮುಚ್ಚಿಕೊಳ್ಳುವುದು ನಮ್ಮ ಸ್ವಭಾವವಾಗಿದೆ. ಕಣ್ಣು ಮುಚ್ಚಿಕೊಂಡರೆ ನಮ್ಮ ಕಣ್ಣು ಕಿರಿದಾಗುತ್ತದೆಯೇ ಹೊರತು, ಅಂದರೆ ಅದರ ಪರಿಣಾಮ ನಮ್ಮ ಮೇಲೆಯೇ ಆಗುತ್ತದೆ. ನಾನು ಕಾಳಿದಾಸನ 'ರಘುವಂಶ' ಕತೆಯನ್ನು ಕೇಳಿದ್ದೇನೆ. ರಘುವಂಶದಲ್ಲಿ ರಾಜಾಧಿರಾಜರ ಪರಂಪರೆಯು ರಾರಾಜಿಸುತ್ತ ಕೊನೆಯ ರಾಜನಿಗೆ ತೊನ್ನು ಹಿಡಿಯುತ್ತದೆ. ಆ ರಾಜನೂ ತೊನ್ನು ಹಿಡಿಯದ ತನ್ನ ದೇಹದ ಭಾಗಗಳನ್ನು ಮಾತ್ರ ಜನತೆಗೆ ತೋರಿಸಿಕೊಂಡು ಬರುತ್ತಾನೆ. ಕೊನೆಗೆ ತೊನ್ನು ಆ ರಾಜನ ಪಾದವನ್ನು ಮಾತ್ರ ಬಿಟ್ಟು ಇಡೀ ದೇಹವನ್ನು ಆವರಿಸಿಕೊಳ್ಳುತ್ತದೆ. ಆ ರಾಜ ಇಡೀ ದೇಹವನ್ನು ಮುಚ್ಚಿಟ್ಟುಕೊಂಡು ಇನ್ನೂ ತೊನ್ನು ಹಿಡಿಯದ ತನ್ನ ಪಾದವನ್ನು ಮಾತ್ರ ಪ್ರಜೆಗಳಿಗೆ ತೋರಿಸುತ್ತಾನೆ. ಇಲ್ಲಿನ ದುರಂತ ವ್ಯವಸ್ಥೆಯ ದುರಂತವಲ್ಲವೆ? ಈ ಕತೆಯಲ್ಲಿ ದಲಿತರ, ಬಡವರ ಬದುಕಿಲ್ಲ ಎನ್ನಲು ಆಗುತ್ತದೆಯೆ?

ಕೊನೆಯದಾಗಿ ದಲಿತ ಸಾಹಿತ್ಯ ಬಳಗವು ಬಂಡಾಯ ಸಾಹಿತ್ಯ ಸಂಘಟನೆಯಿಂದ ಪ್ರತ್ಯೇಕಗೊಳ್ಳದೆ, ದನಿ ಇಲ್ಲದೆ ಮಲಗಿರುವವರ ಬದುಕಲ್ಲಿ ದನಿಗಳನ್ನು ಗುರುತಿಸುತ್ತ, ನಮ್ಮ ಸಮಾಜದ ಚಲನೆಗೆ ವೇಗವರ್ಧಕದಂತೆ ನಾವಾಗಬೇಕಾಗಿದೆ.

## ಆನೆ ಮೇಲೆ ಹೋಗಿ, ಆದರೆ...

ಇಲ್ಲಿ, ಬಿಎಸ್‌ಪಿ ವಿದ್ಯಾರ್ಥಿ ಸಮಾವೇಶದಲ್ಲಿ ಸೇರಿರುವವರು ಹೆಚ್ಚಾಗಿ ಎಳೆಯ ಗೆಳೆಯರು. ಆದರ್ಶಗಳನ್ನು ತಲೆ ತುಂಬಾ ತುಂಬಿಕೊಂಡು ಇರಬೇಕಾದವರು. ಹೊಂದಾಣಿಕೆ ಅಂದರೆ ಕಿಡಿಕಾರಬೇಕಾದವರು. ವಯಸ್ಸಿಗೆ ಸಹಜವಾಗಿ ಇದು ಕಾಣಬೇಕಿತ್ತು. ಆದರೆ ಅಂಥವರು ಹೊಂದಾಣಿಕೆ ರಾಜಕೀಯದ ಬಗ್ಗೆ ಇಲ್ಲಿ ತಲೆ ಕೆಡಿಸಿಕೊಳ್ಳುತ್ತಿರುವುದು ನನ್ನನ್ನು ಕಕ್ಕಾವಿಕ್ಕಿ ಮಾಡಿದೆ. ಡಾ. ಅಂಬೇಡ್ಕರ್ ತನ್ನ ಕಟು ವ್ಯಕ್ತಿತ್ವಕ್ಕೆ ಆದರ್ಶಗಳಿಗೆ ತಿಲಾಂಜಲಿ ಬಿಟ್ಟು ಅವಕಾಶವಾದಿ ಹೊಂದಾಣಿಕೆ ರಾಜಕೀಯ ಮಾಡಿದ್ದರೆ ಏನಾಗುತ್ತಿತ್ತು? ಅವರು ಸತ್ತ ದಿನವೇ ಸತ್ತು ಹೋಗುತ್ತಿದ್ದರು.

ಇಲ್ಲಿ ಒಂದು ಸ್ಪಷ್ಟನೆ: ರಾಜಕೀಯ ಮಾಡುವ ಛಾತಿ ನನಗೆ ಇಲ್ಲದಿರಬಹುದು. ಆದರೆ ರಾಜಕೀಯ ಅತ್ಯಂತ ಅಗತ್ಯ, ನಿರ್ಣಾಯಕ ಅಂದುಕೊಂಡಿದ್ದೇನೆ. ರಾಜಕೀಯದ ಮಹತ್ವವನ್ನು ನಾನು ಕಡೆಗಣಿಸುತ್ತಿಲ್ಲ. ಹೊಂದಾಣಿಕೆ ಮಾಡಿಕೊಳ್ಳುವ ಅನಿವಾರ್ಯತೆ, ಪರಿಸ್ಥಿತಿ ಬಗ್ಗೆ ಅರ್ಥಮಾಡಿಕೊಳ್ಳುವೆ. ಬಿಎಸ್‌ಪಿಗೆ ನೀವು ಸೇರುವ ಮೊದಲೇ ಅದನ್ನು ನಾನು ಬೆಂಬಲಿಸಿದ್ದೆ. ಯಾವಾಗ ಬಿಎಸ್‌ಪಿಯು ಬಿಜೆಪಿ ಜೊತೆಗೂಡಿತೋ ಮಾರನೆಯ ದಿನವೇ ಅದನ್ನು ವಿರೋಧಿಸಿದೆ.

ಇಲ್ಲಿ ನನಗೆ ಸಮಸ್ಯೆ ಇರುವುದು ಹೊಂದಾಣಿಕೆ ಬಗ್ಗೆ ಅಲ್ಲ; ಹೊಂದಾಣಿಕೆ ಯಾರ ಜತೆಯಲ್ಲಿ ಎಂಬ ಬಗ್ಗೆ ಮಾತ್ರ.

ಭಾರತದಲ್ಲಿ ಜಾತಿ ವ್ಯವಸ್ಥೆಯಲ್ಲಿ ಅಸಮಾನತೆ ಎಂಬುದೇ ಧರ್ಮವಾಗಿದೆ. ಸಮಾಜದ ಸ್ವಭಾವವಾಗಿದೆ. ಪ್ರವಾಹವಾಗಿದೆ. ಇಲ್ಲಿ ಸಮಾನತೆಯನ್ನು

ಬಲಾತ್ಕಾರವಾಗಿ ಕಟ್ಟಬೇಕಾಗಿದೆ. ಪ್ರವಾಹದ ವಿರುದ್ಧವೇ ಈಜಬೇಕಾಗಿದೆ. ಇಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕೆಂದಿದ್ದರೆ ಯಾರ ಜತೆಗೆ ನಮ್ಮ ಹೊಂದಾಣಿಕೆ?

ಅಂಬೇಡ್ಕರ್‌ರವರು ಹೇಳುವಂತೆ 'ಒಂದು ಜನಾಂಗದ ಹಿತಕ್ಕೆ ವಿರುದ್ಧವಾದುದನ್ನು ಮತ್ತೊಂದು ಜನಾಂಗ ತನ್ನ ಹಕ್ಕು' ಎಂಬಂತಿರುವ ಸಮಾಜ ನಮ್ಮದು. ಇಂಥ ಸಮಾಜದಲ್ಲಿ ಶೋಷಿತ ವರ್ಗಗಳು ಬ್ರಾಹ್ಮಣ್ಯದ ರಾಜಕೀಯ ಪಕ್ಷದಲ್ಲಿ ಸಹಕರಿಸಲು ಒಪ್ಪಿಕೊಂಡರೆ ಅಲ್ಲಿ ಶೋಷಿತ ವರ್ಗಗಳ ಹಿತ ಕಾಪಾಡಬಹುದೆ?

ಕಾಂಗ್ರೆಸ್‌ನಲ್ಲಿ ಬ್ರಾಹ್ಮಣ ರಾಜಕೀಯ ಮಾಡುವ ವ್ಯಕ್ತಿಗಳು ಹೆಚ್ಚಾಗಿದ್ದರು. ಆದರೆ ಬ್ರಾಹ್ಮಣ್ಯ ರಾಜಕಾರಣವನ್ನು ತಾತ್ವಿಕಗೊಳಿಸಿರಲಿಲ್ಲ. ಇಷ್ಟಕ್ಕೇನೆ ಅಂಬೇಡ್ಕರ್ ಕುಪಿತರಾಗುತ್ತಾರೆ, ಎಚ್ಚರಿಕೆ ವಹಿಸುತ್ತಾರೆ. ಇಂದು ಬಿಜೆಪಿ ಮನುಧರ್ಮ ಸಂಸತ್ ಹೇಳುತ್ತಾ ಭೂತಕ್ಕೆ ಎಳೆಯುತ್ತಿದೆ. ಬ್ರಾಹ್ಮಣ್ಯ ರಾಜಕೀಯವನ್ನು ತಾತ್ವಿಕಗೊಳಿಸುತ್ತಿದೆ. ಇದನ್ನು ಅಂಬೇಡ್ಕರ್ ಹೇಗೆ ನೋಡುತ್ತಿದ್ದರು? ದಯವಿಟ್ಟು ಕಲ್ಪಿಸಿಕೊಳ್ಳಿ. ಕಾಂಗ್ರೆಸ್‌ಗೆ ವಿರೋಧಿಸುವ ಸಾವಿರ ಪಾಲು ಬಿಜೆಪಿಗೆ ವಿರೋಧಿಸಬೇಕಾಗುತ್ತದೆ.

ಬ್ರಾಹ್ಮಣ ರಾಜಕೀಯ ಮಾಡುವ ವ್ಯಕ್ತಿಗಿಂತ ಬ್ರಾಹ್ಮಣ್ಯ ರಾಜಕೀಯವನ್ನು ತಾತ್ವಿಕಗೊಳಿಸಿದ ರಾಜಕಾರಣ ದುಷ್ಟ ಎಂಬುದರ ಅರಿವು ನಮಗಿರಬೇಕು. ಉದಾ: ಒಬ್ಬ ವ್ಯಕ್ತಿ ಸಾಂದರ್ಭಿಕವಾಗಿ ಒಂದು ಕೊಲೆ ಮಾಡಿದರೆ ಆತ ತಲೆತಗ್ಗಿಸಿ ನಡೆಯಬಹುದು, ಪಶ್ಚಾತ್ತಾಪ ಪಡಬಹುದು, ನರಳಬಹುದು. ಇನ್ನೊಂದು ಕೊಲೆ ಮಾಡದಿರಬಹುದು. ಅದೇ ವ್ಯಕ್ತಿ ಒಂದು ತತ್ವಕ್ಕಾಗಿ ಎಂದು ಕೊಲೆ ಮಾಡಿದ್ದರೆ ಆಗ ಆತ ತಲೆ ಎತ್ತಿ ನಡೆಯುತ್ತಾನೆ. ಅವನಲ್ಲಿ ಪಶ್ಚಾತ್ತಾಪ ಇರುವುದಿಲ್ಲ. ಆತ ನರಳುವುದಿಲ್ಲ. ಮುಂದಿನ ಕೊಲೆಗಾಗಿ ಹಸನ್ಮುಖನಾಗಿ ಹಾತೊರೆಯುತ್ತಾನೆ. ಸಾಂದರ್ಭಿಕವಾಗಿ ಅಸಮಾನತೆಯನ್ನು ಆಚರಿಸುವವನಿಗಿಂತ, ಅಸಮಾನತೆಯನ್ನು ತಾತ್ವಿಕಗೊಳಿಸುವವನು ಸಾವಿರಾರು ಪಾಲು ದುಷ್ಟ ಎಂಬ ಎಚ್ಚರ ನಮಗಿರಬೇಕು. ಹೊಂದಾಣಿಕೆಯಲ್ಲಿ ಇದನ್ನು ನೋಡಬೇಕು. ಇಲ್ಲದಿದ್ದರೆ ಇದು ಪ್ರಜ್ಞಾರಹಿತ ರಾಜಕೀಯ ಆಗಿಬಿಡುತ್ತದೆ. 'ನೀವು ಆನೆ ಮೇಲೆ ಪಾರ್ಲಿಮೆಂಟಿಗೆ ಹೋಗುವುದನ್ನು ನಾನು ಸ್ವಾಗತಿಸುತ್ತೇನೆ; ಆದರೆ ಪ್ರಜ್ಞಾಹೀನರಾಗಿ ಕತ್ತೆ ಮೇಲೆ ಕೂರಬೇಡಿ' ಎಂದಷ್ಟೇ ನನ್ನ ವಿನಂತಿ.

ಒಂದು ಸೂಕ್ಷ್ಮ ಉದಾಹರಣೆ ಕೊಟ್ಟು ನನ್ನ ಮಾತು ಮುಗಿಸುತ್ತೇನೆ: ಪ್ರವೀಣ ತೊಗಾಡಿಯಾ ಥರದವರು ಇಂದು ದೇಶದ ತುಂಬಾ ಹುಟ್ಟುತ್ತಿದ್ದಾರೆ. ಗೋಮಾಂಸ ತಿಂದುದಕ್ಕಾಗಿ, ತಿಂದವರ ನರಬಲಿಯಾಗಬೇಕೆಂಬ ರಕ್ತದಾಹಿಗಳು ನರಹಂತಕರು ಸ್ವಾತಂತ್ರ್ಯದ ನಂತರದಲ್ಲಿ ಮೊದಲ ಬಾರಿಗೆ ಯಾವ ಅಳುಕು ಇಲ್ಲದೆ ಅಟ್ಟಹಾಸ ಮಾಡುತ್ತಿದ್ದಾರೆ. ಇದಕ್ಕೆ ಕಾರಣ ಬಿಜೆಪಿ ಕೇಂದ್ರ ಸರ್ಕಾರದ ಕಣ್ಸನ್ನೆ ಮತ್ತು ವಾತಾವರಣ ಕಾರಣ ಎಂದು ಅರಿವಾಗದಿದ್ದರೆ, ಇದಕ್ಕೆ ಕಾರಣ ಬಿಜೆಪಿ ಸರ್ಕಾರ ಉಳಿಯಲು ಕಾರಣರಾದ– ಜಾರ್ಜ್, ಡಿಎಂಕೆ, ಬಿಎಸ್‌ಪಿ ಮತ್ತಿತರ ಮಿತ್ರ ಪಕ್ಷಗಳೂ ಕಾರಣ ಎಂದು ಅರಿವಾಗದಿದ್ದರೆ, ಅಂದರೆ ಪ್ರವೀಣ ತೊಗಾಡಿಯಾ ಅಂಥವರ ಹುಟ್ಟಿಗೆ ಬಿಎಸ್‌ಪಿಯೂ ಪರೋಕ್ಷ ಕಾರಣ ಎಂಬ ಅರಿವು ಅಥವಾ ಅನುಮಾನದ ಎಳೆಯಾದರೂ ಇಲ್ಲದಿದ್ದರೆ... ಈ ನನ್ನ ಆತಂಕದ ಮಾತುಗಳನ್ನು ನೀವು ಒಪ್ಪಬೇಕಾಗಿಲ್ಲ, ಒಂದು ಗಳಿಗೆಯಾದರೂ ಹೃದಯದಲ್ಲಿಟ್ಟುಕೊಳ್ಳಿ ಎಂದಷ್ಟೇ ನನ್ನ ಮನವಿ.

# උපග්‍රන්ථය

## ಕಣ್ಣು ತೆರೆಸುವ ಮೊದಲ ಕೆಲಸ

ತುಂಬಾ ಹಿಂದಿನ ಮಾತು. ಒಂದು ಹುಡುಗ, ಅಸ್ಪೃಶ್ಯರವನು, ಎಲ್. ಎಸ್ ಪರೀಕ್ಷೆ ಕಟ್ಟಲು ತಾಲೂಕು ಕೇಂದ್ರಕ್ಕೆ ಬರುತ್ತಾನೆ. ಅವ್ವ ಕೊಟ್ಟು ಕಳಿಸಿದ್ದ ಎಂಟಾಣೆ ಹಿಡಿದು ಪರೀಕ್ಷೆ ಕಟ್ಟಲು ಬಂದಿದ್ದಾನೆ ಹುಡುಗ. ಆ ಊರಿನ ಒಂದು ಹಾಸ್ಟೆಲಿನಲ್ಲಿ ಬಿಟ್ಟಿ ಊಟದ ವ್ಯವಸ್ಥೆ ಇದ್ದು ಈ ನಮ್ಮ ಹುಡುಗನೂ ಬರುವಾಗಲೇ ಒಂದು ಸಿಲ್ವರ್ ಊಟದ ತಟ್ಟೆಯನ್ನೂ ಕಂಕುಳಲ್ಲಿ ಸಿಕ್ಕಿಸಿಕೊಂಡು ಬಂದಿದ್ದಾನೆ. ಆದರೆ ನೀರು ಕುಡಿಯಲು ಲೋಟ ಇಲ್ಲ. ಏನು ಮಾಡ್ತಾನೆ, ಅವ್ವ ಕೊಟ್ಟ ಕಾಸಲ್ಲೆ ನೀರು ಕುಡಿಯಲು ತಕ್ಕುದಾದ ಒಂದು ಸಣ್ಣ ಮಣ್ಣಿನ ಮಡಕೆ ತೆಗೆದುಕೊಂಡು ಅದ ಕೈಲಿಡಿದು ಸಿಲ್ವರ್ ತಟ್ಟೆಯ ಕಂಕುಳಲ್ಲಿರಿಕಿ ಹಾಸ್ಟೆಲ್‌ಗೆ ಊಟಕ್ಕೆ ಹಾಜರಾಗುತ್ತಾನೆ.

ಆ ಹಾಸ್ಟೆಲಿನಲ್ಲಿ ಮೇಲು ಅನ್ನಿಸಿಕೊಂಡ ಜಾತಿಯವರಿಗೆಲ್ಲಾ ಒಳಗೆ ಊಟ, ಕೀಳು ಅನ್ನಿಸಿಕೊಂಡ ಜಾತಿಯವರಿಗೆಲ್ಲಾ ದೂರದಲ್ಲಿ ಹೊರಗೆ ಊಟ ಮಾಮೂಲಿಯಾಗಿ. ಈ ಹುಡುಗನೂ ಫುಲ್ ಮೀಲ್ಸ್ ಸಿಗುತ್ತದೆಂಬ ಸಂತಸದಿಂದ ಎಂಜಲೆಲೆ ಇಡುವ ಪಕ್ಕದ ಸಾಲಿನಲ್ಲಿ ಗಾಳಿಯಲ್ಲಿ ತೇಲಾಡುತ್ತಿದ್ದ ಯಾವ ವಾಸನೆಗೂ ಜಗ್ಗದೆ ಊಟಕ್ಕೆ ಕೂರುತ್ತಾನೆ. ಅಲ್ಲಿ ದಲಿತ ಮಕ್ಕಳ ಊಟದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದಾತ ಎಸ್ಸೆಲ್ಸಿ ಫೇಲಾದ, ಊಟಕ್ಕೆ ಗತಿಯಿಲ್ಲದ ಅಸ್ಪೃಶ್ಯರವನು. ಊಟಕ್ಕಾಗಿ ಆ ಹಾಸ್ಟೆಲಿಗೆ ಸೇರಿಕೊಂಡಿದ್ದನು. ಆತ ಯಾಕೋ ಈ ನಮ್ಮ ಹುಡುಗನನ್ನು ದುರುದುರು ನೋಡುತ್ತಿರುತ್ತಾನೆ. ಈ ಹುಡುಗ ಅದನ್ನು ಗಮನಿಸಿದರೂ, ಕಸಿವಿಸಿಗೊಂಡರೂ ಅವನು ಮಾಡುತ್ತಿದ್ದುದು ಊಟವಾದ ಪ್ರಯುಕ್ತ ಅದಾವುದನ್ನೂ ಲೆಕ್ಕಿಸದೆ ಊಟ ಮುಗಿಸಿ ಮೇಲೇಳುತ್ತಾನೆ. ಮೇಲ್ವಿಚಾರಕ ಇವನನ್ನು 'ಬಾರೋ ಇಲ್ಲಿ' ಎಂದು

ಕರೆಯುತ್ತಾನೆ. ಈ ಹುಡುಗ ತನ್ನ ಸಿಲ್ವರ್ ತಟ್ಟೆಯನ್ನು ಕಂಕುಳಲ್ಲಿರಿಕಿ ಕೈಯಲ್ಲಿ ಆ ಮಣ್ಣಿನ ಮಡಕೆ ಹಿಡಿದು ಹಾಜರಾಗುತ್ತಾನೆ. ಮೇಲ್ವಿಚಾರಕ ಕೇಳುತ್ತಾನೆ– 'ನೀವು ಬಾಳ ಬಡವರೇನೋ?'. ಅದಕ್ಕೆ ಈ ಹುಡುಗ ಅಂತದೆ 'ಹೌದು ಸಾ'. ಅದಕ್ಕೆ ಮೇಲ್ವಿಚಾರಕ 'ಸರಿ, ಚೆನ್ನಾಗಿ ಓದು. ನಾಳೆಯಿಂದ ಆ ಮಣ್ಣಿನ ಮಡ್ಕೆ ತರಬೇಡ ಕಣೋ. ಹೊಲೆ ಮಾದಿಗರಿಗೆ ಮಣ್ಣಿನ ಮಡ್ಕೆ ಲಾಯಕ್ಕು ಅಂತ ಬೇರೆಯವರು ಅಂದ್ಕೊತಾರೆ' ಅಂತಾನೆ. ಈ ನಮ್ಮ ಹುಡುಗ ಮಿಕಿ ಮಿಕಿ ನೋಡಿ, ಒಳಗೊಳಗೆ ನಾ ತಂದರೆ ಇವನಿಗೇನು ಅಂದುಕೊಂಡು ನಾಳೆ ಪರೀಕ್ಷೆಗೆ ಓದಲು ನಡೆದನು. ಮಾರನೆಯ ದಿನವೂ ಈ ನಮ್ಮ ಹುಡುಗ ಮತ್ತೆ ಅದೇ ಮಣ್ಣಿನ ಮಡಕೆಯನ್ನು ಹಿಡಿದು ಊಟಕ್ಕೆ ಬಂದಾಗ ಆ ಮೇಲ್ವಿಚಾರಕ ಆ ಮಣ್ಣಿನ ಮಡಕೆಯನ್ನು ಕಿತ್ತು ದೂರ ಎಸೆದುಬಿಡುತ್ತಾನೆ. ಈ ನಮ್ಮ ಹುಡುಗ ಚೂರಾಗುತ್ತಿದ್ದ ಮಣ್ಣಿನ ಮಡಕೆಯನ್ನೇ ನೋಡುತ್ತಾ ಕಣ್ಣಲ್ಲಿ ನೀರು ತುಂಬಿಕೊಂಡು ನಿಲ್ಲುತ್ತಾನೆ.

ಆಗ ಎಲ್.ಎಸ್ ಪರೀಕ್ಷೆ ಕಟ್ಟಲು ಹೋಗಿದ್ದ ಆ ನಮ್ಮ ಹುಡುಗ ದಾವಣಗೆರೆಯ ಡಾ. ತಿಪ್ಪೇಸ್ವಾಮಿಯವರು. ತನ್ನ ಮಣ್ಣಿನ ಮಡಕೆಯನ್ನು ಯಾಕೆ ಮೇಲ್ವಿಚಾರಕ ಕಿತ್ತು ಎಸೆದ ಎಂಬುದು ಬಹಳ ದಿನಗಳವರೆಗೂ ತಮಗೆ ಅರ್ಥವಾಗಿರಲಿಲ್ಲ ಎಂದು ಡಾ. ತಿಪ್ಪೇಸ್ವಾಮಿಯವರು ಹೇಳಿದರು. ಜಾತಿ ಪದ್ಧತಿಗೆ, ಮೇಲುಕೀಳಿಗೆ ಕುದಿಯುತ್ತಿದ್ದ ಆತ ಮಡಕೆ ಚೂರು ಮಾಡುವ ಮೂಲಕ ತನ್ನ ದುಃಖ ವ್ಯಕ್ತಪಡಿಸಿದ ಅಂದರು. ಅಂಥ ಕುದಿತವನ್ನು ನಮ್ಮ ಜನರಲ್ಲಿ ಮೊದಲು ಉಂಟುಮಾಡಬೇಕು ಎಂದು
ಡಾ. ತಿಪ್ಪೇಸ್ವಾಮಿಯವರು ನುಡಿದಾಗ ನಾನೂ 'ಹೌದು' ಅಂದೆ.

## ಅಸ್ಪೃಶ್ಯತೆ ನಿನ್ನ ಮೂಲ ಎಲ್ಲಿ?

ಅಸ್ಪೃಶ್ಯತೆ ಜಾತೀಯತೆ ಭೂತಗಳನ್ನು ಈ ಭೂಮಿಯಿಂದ ದೂರ ಓಡಿಸುವತ್ತ ಪ್ರಯತ್ನಗಳ ಮೇಲೆ ಪ್ರಯತ್ನಗಳು ನಡೆಯುತ್ತ ಬರುತ್ತಿದ್ದರೂ ಆದಾಗ್ಯೂ ಇವೂ ಜಗ್ಗದೆ ನಮ್ಮ ಜೊತೆ ಜೊತೆ ಬರುತ್ತಿವೆ. ಇದಕ್ಕೆ ಕಾರಣ– ಒಂದಲ್ಲ, ನೂರಾರು. ಅವುಗಳಲ್ಲೊಂದು ಬೇತಾಳ ಕಥೆಯಂತಿದೆ.

ಯಥಾಪ್ರಕಾರ ನಿಮಗೆಲ್ಲ ಗೊತ್ತಿರುವಂತೆ ರಾಜ ತ್ರಿವಿಕ್ರಮನು ಬೇತಾಳವನ್ನು ತನ್ನ ಹೆಗಲಿಗೇರಿಸಿಕೊಂಡು ನಡೆದಾಗ ರಾಜನ ಬೇಸರ ಕಳೆಯಲು ಬೇತಾಳ ಯಥಾ ಪ್ರಕಾರ ಒಂದು ಕಥೆ ಹೇಳುವುದು.

ಆ ಕಥೆಯು ಏನೆಂದರೆ ನಂಜನಗೂಡು ತಾಲ್ಲೂಕಿನಲ್ಲಿ ಚಂದ್ರವಾಡಿ ಎಂಬ ಗ್ರಾಮವಿದೆ. ಆ ಗ್ರಾಮದಲ್ಲೊಂದು ಸರ್ಕಾರಿ ಆಸ್ಪತ್ರೆ ಇದೆ. ಆ ಆಸ್ಪತ್ರೆಯ ಜವಾನ ದಲಿತ ಪಂಗಡಕ್ಕೆ ಸೇರಿದಾತ. ಆ ಊರಲ್ಲಿ ತನ್ನ ಜಾತಿಯವರು ಯಾರೂ ವಾಸವಿಲ್ಲದ ಪ್ರಯುಕ್ತ ಆ ದಲಿತ ನೌಕರನಿಗೆ ಊರೊಳಗೆ ಮನೆ ಸಿಗದೆ, ಪಕ್ಕದಲ್ಲಿದ್ದ ಶಾಲೆಯ ಒಂದು ಕೊಠಡಿಯಲ್ಲಿ ವಾಸ ಮಾಡುತ್ತ, ಡ್ಯೂಟಿ ಮಾಡುತ್ತ ತನ್ನ ವಸತಿಗಾಗಿ ಯಾರ್‍ಯಾರಿಗೊ ಅರ್ಜಿ ಬರೆದು ಆತ ಕೇಳಿಕೊಂಡಿದ್ದರೂ ಏನೂ ಆಗ್ಲಿಲ್ಲ. ಇಂಥವೆಲ್ಲ ಸರ್ವೆ ಸಾಮಾನ್ಯವಲ್ಲ! ಇದರಲ್ಲೇನು ಮಹಾ! ಅನ್ನಬೇಡಿ. ಇದ್ದೀತು. ಇರಲಿ. ಆ ಊರಿಗೆ ಕೊಡಗಿನ ಕಡೆಯ ತುಸು ಮೇಲುಜಾತಿಯ ನರ್ಸು ವರ್ಗವಾಗಿ ಬಂದಳು. ಆಕೆಯು ಆ ಊರಿಗೆ ಬಂದ ಮೊದಲಲ್ಲಿ ಯಾವ ಜಾತಿಭೇದವನ್ನೂ ಮಾಡದೆ ಆ ದಲಿತ ನೌಕರನು ಮಾಡಿಕೊಟ್ಟ ತಿಂಡಿ ತಿನಿಸು ಮುಂತಾಗಿ ತಿನ್ನುತ್ತಿದ್ದಳು. ಹಾಗೆಯೇ ನರ್ಸ್ ಜೊತೆಯಲ್ಲಿ ಬಂದಿದ್ದ ಒಂದು ಪುಟ್ಟ ಹುಡುಗನೂ ತಿನ್ನುತ್ತಿದ್ದನು.

ಹೀಗೆ ತಿನ್ನುತಾ, ಇವೆಲ್ಲ ಆಗಿ ಸ್ವಲ್ಪ ದಿನಗಳು ಕಳೆದ ಮೇಲೆ ನರ್ಸು ತುಸು ಮೇಲುಜಾತಿಯವಳಾದ್ದರಿಂದ ಆಕೆಗೆ ಆ ಊರ ಒಳಗೆ ಮನೆ ಸಿಕ್ಕಿತು. ಮನೆ ಸಿಕ್ಕಿದ ಮೇಲೂ ಆ ನರ್ಸಿನ ಜೊತೆಯಲ್ಲಿ ಬಂದಿದ್ದ ಹುಡುಗ ಯಥಾ ಪ್ರಕಾರ ಆ ದಲಿತ ನೌಕರನ ಬಳಿಗೆ ಬಂದು ಮಾತಾಡುವುದು ಯಥಾ ಪ್ರಕಾರ ತಿಂಡಿತಿನಿಸು ಕೊಟ್ಟರೆ ತಿನ್ನುವುದು ಮಾಡುತ್ತಿತ್ತು.

ಒಂದು ದಿನ ಇದು ಆ ಊರಿನಲ್ಲಿದ್ದ ಬ್ರಾಹ್ಮಣ ಜಾತಿಯವನಾದ ಅಕ್ಷರಸ್ಥ ದನದ ಇನ್ಸ್‌ಪೆಕ್ಟರನ ಕಣ್ಣಿಗೆ ಬಿತ್ತು. ಅವನು ಏನು ಮಾಡಿದ ಅಂದರೆ ಆ ನರ್ಸನ್ನು ಕರೆಸಿ 'ಏನಮ್ಮಾ ನಿಮ್ಮ ಹುಡುಗ ಆ ಹೊಲೆಮಾದಿಗರ ಮನೆಲೆಲ್ಲ ತಿನ್ನುತ್ತಾನಲ್ಲ, ಸರಿಯಾ' ಎಂದಷ್ಟೇ ಪ್ರಶ್ನೆ ಮುಂದಿಟ್ಟು ಉಪಸ್ಥಿತನಾದ. ಈ ಮಾತು ಕೇಳಿದ ಆ ನರ್ಸ್ ಕೋಪಾವೇಶಕ್ಕೆ ಒಳಗಾಗಿ ಅಲ್ಲಿಗೇನೆ ತಮ್ಮ ಹುಡುಗನನ್ನು ಕರೆಸಿ 'ಏನೋ, ಹೊಲೆಮಾದಿಗರ ಮನೆಲೆಲ್ಲಾ ತಿಂತಿಯಾ?' ಎಂದು ರಕ್ತ ಬರುವವರೆಗೂ ಹೊಡೆದಳು. ಇದಿಷ್ಟು ಕಥೆ. ಕಥೆಯಲ್ಲ ನಡೆದದ್ದು. ಯಾಕೆಂದರೆ ಆ ದಲಿತ ನೌಕರ ನನ್ನ ಮಾವ.

ಈಗ ಪ್ರಶ್ನೆ : (1) ಮೊದಲು ಹೊಲೆಮಾದಿಗರ ತಿಂಡಿ ತಿಂದಿದ್ದ ನರ್ಸ್ ಯಾಕೆ ಆಮೇಲೆ ಕುಪಿತಗೊಂಡಳು? (2) ಇಷ್ಟೆಲ್ಲ ಹಿಕ್ಮತ್ ಮಾಡಿ ಉಪಸ್ಥಿತನಾದ ಆ ಅಕ್ಷರಸ್ಥ ಬ್ರಾಹ್ಮಣ ಜಾತಿಯ ದನದ ಇನ್ಸ್‌ಪೆಕ್ಟರಿಗೆ ಇದರಿಂದ ಏನು ಲಾಭ? ಎಲೈ ತ್ರಿವಿಕ್ರಮನೇ, ಈ ಮೇಲಿನ ಪ್ರಶ್ನೆಗಳಿಗೆ ನೀನು ತಿಳಿದೂ ಉತ್ತರ ಹೇಳದಿದ್ದರೆ ನಿನ್ನ ತಲೆ ಸಿಡಿದು ಸಹಸ್ರ ಚೂರು ಚೂರಾಗುತ್ತದೆ– ಎಂದು ಕೇಳಿ ಬೇತಾಳ ಮೌನವಾಯಿತು.

ಅನೇಕಾನೇಕ ಪ್ರಶ್ನೆಗಳಿಗೆ ಲೀಲಾಜಾಲವಾಗಿ ಉತ್ತರ ಕೊಟ್ಟಿದ್ದ ತ್ರಿವಿಕ್ರಮ ಭೂಪನಿಗೆ ಬೇತಾಳನ ಈ ಪ್ರಶ್ನೆಗಳು ಪೀಕಲಾಟಕ್ಕೆ ದೂಡಿತು. ಕೊನೆಗೆ ರಾಜ ವಿಕ್ರಮನು ಚಿಂತಿಸಿ ಹೇಳಿದ್ದೇನೆಂದರೆ– ಮೊದಲನೆಯದಾಗಿ, ತಾನೇ ಮೊದಲು ಹೊಲೆಮಾದಿಗರ ಮನೆಯಲ್ಲಿ ತಿಂದಿದ್ದರೂ ಆ ನರ್ಸ್ ಆಮೇಲೆ ಆ ಕಾರಣಕ್ಕಾಗೆ ಕುಪಿತಗೊಳ್ಳಲು ಕಾರಣ, ಅವಳ ಸ್ಥಾನಮಾನದ ಪ್ರಶ್ನೆ. ಅವಳು ಕುಪಿತಗೊಳ್ಳದಿದ್ದರೆ ಅವಳನ್ನೇ ಉಳಿದವರು ಕೀಳಾಗಿ ಕಾಣುವ ಸಂಭವ ಇತ್ತು. ಅವಳ ಈ ಭಯವೇ ಅವಳ ವರ್ತನೆಗೆ ಕಾರಣ. ಎರಡನೆಯ ಪ್ರಶ್ನೆ: ದನದ ಇನ್ಸ್‌ಪೆಕ್ಟರನಿಗೆ ಏನು ಲಾಭ? ಎಂದು. ಇಂಥವುಗಳಿಂದೆಲ್ಲ ಲಾಭ ಹೆಚ್ಚು ಆಗುವುದು ದನದ ಇನ್ಸ್‌ಪೆಕ್ಟರ್‌ನಂಥವರಿಗೇ. ಯಾಕೆಂದರೆ ದನದ ಇನ್ಸ್‌ಪೆಕ್ಟರ್ ಜಾತಿ ಶ್ರೇಣಿಯಲ್ಲಿ ಮೇಲಿರುವಾತ. ಸಾಮಾಜಿಕವಾಗಿ ಮೇಲು

ಕೀಳು ಕಿತ್ತಾಟ ಯಾರಲ್ಲೆ ಆದರೂ ಅದರಿಂದ ಸಾಮಾಜಿಕ ಪ್ರತಿಷ್ಠೆಯ ಲಾಭ ಹೆಚ್ಚು ದಕ್ಕುವುದು ಮೊದಲು ಬ್ರಾಹ್ಮಣನಿಗೆ ಆಮೇಲೆ ಕ್ಷತ್ರಿಯನಿಗೆ ಹೀಗೆ. ಆ ದನದ ಡಾಕ್ಟರನು ಮಧ್ಯಮ ಜಾತಿಯ ನರ್ಸ್‌ಗೆ 'ನೀನು ಹೊಲೆಮಾದಿಗರಿಗಿಂತ ಮೇಲು' ಅಂದರೆ, ಅಲ್ಲೆ 'ಎಲ್ಲೈ ನರ್ಸಳೇ ನನಗಿಂತಲೂ ನೀನು ಕೀಳು' ಎಂದೂ ಅಲ್ಲೆ ಅರ್ಥವಿದೆ. ಈ ನರ್ಸ್‌ನಂಥ ಮಧ್ಯಮ ಜಾತಿಯವರು ತಾವು ಅಸ್ಪೃಶ್ಯರಿಗಿಂತ ಮೇಲು ಎಂದುಕೊಂಡದ್ದಾದರೆ, ಆ ಅಂದುಕೊಂಡದ್ದರಲ್ಲೆ ಬ್ರಾಹ್ಮಣ ಕ್ಷತ್ರಿಯ ಇತ್ಯಾದಿಗಳಿಗಿಂತ ತಾವು ಕೀಳು ಎಂದು ಅಂದುಕೊಂಡಂತೂ ಆಗುತ್ತದೆ.

ಸಣ್ಣ ಪುಟ್ಟ ಜಾತಿಗಳಲ್ಲಿ ಪ್ರತಿಷ್ಠೆಗಾಗಿ ಕಿತ್ತಾಟ ನಡೆದರೂ ಇದರ ಫಲ ದಕ್ಕುವುದು ಮೇಲು ಮೇಲು ಇರುವ ಜಾತಿಯವರಿಗೇ. ಊರಾಚೆಯ ಹೊಲೆಮಾದಿಗರ ಒಳಗೊಳಗೆ ಪ್ರತಿಷ್ಠೆಗಾಗಿ ಜಗಳವಾದರೆ ಈ ಇಬ್ಬರಲ್ಲೂ ಮೇಲು ಕೀಳು ಏನೂ ಹೆಚ್ಚು ಕಮ್ಮಿ ಆಗದೆ ಇವರು ಸಾಮಾಜಿಕವಾಗಿ ಮತ್ತಷ್ಟೂ ದೂರ ಎಸೆಯಲ್ಪಡುವರು. ಇವರ ಸ್ಥಾನಮಾನದ ವ್ಯಾಜ್ಯ ಬಗೆಹರಿಯದೆ ಆದರೆ ಜಾತಿಶ್ರೇಣಿಯಲ್ಲಿ ಮೇಲಿರುವವನ ಪಟ್ಟವನ್ನು ಮತ್ತೂ ಹೆಚ್ಚು ಭದ್ರ ಮಾಡುತ್ತದೆ. ಹೀಗೆ ಆ ಅಕ್ಷರಸ್ಥ ದನದ ಇನ್ಸ್‌ಪೆಕ್ಟರನು ತನ್ನ ಜಾತಿಯ ಪಟ್ಟವನ್ನು ಭದ್ರಮಾಡಿಕೊಳ್ಳಲು ಹಿಕ್ಮತ್ ಮಾಡಿದ ಎಂದ ತ್ರಿವಿಕ್ರಮನ ಈ ಉತ್ತರ ಕೇಳಿದ್ದೇ ತಡ ಬೇತಾಳ ಅರೆಕ್ಷಣವೂ ನಿಲ್ಲದೆ ಓಡಿ ಹೋಯಿತು.

ಎಲ್ಲೈ ಹೊಲೆಮಾದಿಗರೆ ಹಾಗೂ ಜಾತಿಯಿಂದ ಸಂಕುಚಿತಗೊಂಡವರೆ ಈ ಪ್ರಶ್ನೆ ಇರುವುದು ರಾಜ ತ್ರಿವಿಕ್ರಮನಿಗಲ್ಲ, ನಿಮಗೇ. ನೀವುಗಳು ಇತ್ತ ಗಮನ ಹರಿಸದಿದ್ದರೆ ತಲೆ ಸಹಸ್ರ ಚೂರಾಗುವುದು ರಾಜನಿಗಲ್ಲ, ನಿಮಗೇ.

## ದಲಿತ ಮನಸ್ಸಿನ ದುಗುಡದಲ್ಲಿ

ಈ ಎಪ್ಪತ್ತೇಳರ ಯುಗಾದಿ ಹಬ್ಬದ ದಿನ ಇಂದಿರಾಗಾಂಧಿಯವರು ಸೋತ ದಿನ. ಒಂದು ಹಳ್ಳಿಯ ದಲಿತ ಕೇರಿಯಲ್ಲಿ ಹಬ್ಬದ ಅಡುಗೆ ಮಾಡಿ ಸೊಸೆ ಅತ್ತೆಯನ್ನು ಊಟಕ್ಕೆ ಕರೆದಾಗ ಅತ್ತೆ ಅಂದಳಂತೆ: 'ಅಯ್ಯೋ ಹೋಗವ್ವ, ಎಂಥ ಸುಡುಗಾಡ್ ಊಟ. ಇಂದ್ರಮ್ಮನ ಮನೇಲಿ ಒಲೆ ಹತ್ತಿಸಿದ್ದಾರೊ ಇಲ್ವೊ, ಅಡುಗೆ ಮಾಡಿದ್ದಾರೊ ಇಲ್ವೊ.'

ಮೇಲಿನಂತೆ ದಕ್ಷಿಣ ಭಾರತದ ದಲಿತ, ಆದಿವಾಸಿ, ಮುಸ್ಲಿಮ್ ಸಮುದಾಯ ನರಳಿರಬೇಕು. ನಮ್ಮ ಜನಾಂಗಗಳ ಉದ್ಧಾರಕರು ಕಾಂಗ್ರೆಸ್ಸೇ, ಅದರಲ್ಲು ಇಂದಿರಾಗಾಂಧಿಯವರೇ ಎಂದು ಈ ಸಮುದಾಯ ನಂಬಿದ್ದರಿಂದ ಇಂದಿರಾರವರು ಸೋತಾಗ ಈ ಜನಾಂಗಗಳು ಆಧಾರ ತಪ್ಪಿದಂತೆ ಪರಿತಪಿಸಿವೆ. ಆ ನಂಬಿಕೆ ಹುಟ್ಟಲು ಕಾಂಗ್ರೆಸ್ಸೂ ಇಂದಿರಾರು ತಕ್ಕಂಥ ಮುಖವಾಡ ಧರಿಸಿ ನಾಟಕವಾಡಿದ್ದಾರೆ. ಕಾಂಗ್ರೆಸ್ ಇಂದ್ರಾ ನಾಟಕವು ದಕ್ಷಿಣದ ಕಡೆ ಜಯಗಳಿಸಿತು. ಅದೇ ಉತ್ತರದ ಕಡೆ ದಲಿತ ಆದಿವಾಸಿ ಮುಸ್ಲಿಮರು ಕಾಂಗ್ರೆಸ್ ಇಂದ್ರಾ ನಾಟಕಕ್ಕೆ ಚಪ್ಪಾಳೆ ತಟ್ಟದ ಪ್ರಯುಕ್ತ ಆ ಕಡೆ ಕಾಂಗ್ರೆಸ್ ಸೋತಿತು. ಕೇಂದ್ರದಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬರಲು ಉತ್ತರದ ಕಡೆ ದಲಿತ ಆದಿವಾಸಿ ಮುಸ್ಲಿಮರು ಜನತಾ ಪಕ್ಷಕ್ಕೆ ಮತ ನೀಡಿದ್ದೂ ಹೆಚ್ಚು ಕಾರಣವಾಗಿದೆ. ಹಾಗಾಗಿ ಜನತಾ ಪಕ್ಷದ ಗೆಲುವು, ದಲಿತ ಆದಿವಾಸಿ ಮುಸ್ಲಿಮರ ಗೆಲುವೂ ಕೂಡ ಆಗಿದೆ.

ಆದಾಗ್ಯೂ ನಮ್ಮ ಜನಾಂಗಗಳು ಜನತಾ ಪಕ್ಷದ ಬಗ್ಗೆ ಅನುಮಾನ ಆತಂಕದಿಂದ ನರಳುತ್ತಿವೆ. ದಲಿತ ಆದಿವಾಸಿಗಳಿಗೆ ಸಿಗುತ್ತಿದ್ದ ಸವಲತ್ತು

ಮುಸ್ಲಿಮರಿಗೆ ಸಿಗುತ್ತಿದ್ದ ರಕ್ಷಣೆ ಇತ್ಯಾದಿ ನಿಲುಗಡೆಯಾಗಬಹುದೇನೋ ಎಂಬ ಗಾಬರಿ ನಮ್ಮವರ ತಲೆ ಒಳಗೆ ಎದ್ದಿದೆ. ಇದಕ್ಕೆ ತಕ್ಕಂತೆ ಅನೇಕ ಹಳ್ಳಿಗಳಲ್ಲಿ ಜನತಾ ಪಕ್ಷ ಗೆದ್ದಿರುವುದರಿಂದ 'ಜೀತಕ್ಕೆ ಬನ್ನಿ, ಭೋಗ್ಯ, ಸಾಲ, ಗಿರವಿ ಎಲ್ಲಾ ಈಗ ಮತ್ತೆ ಬಂತು' ಎಂದು ಮೇಲ್ಜಾತಿ ಮೇಲ್ವರ್ಗದವರು ಗುಲ್ಲು ಮಾಡುತ್ತಿರುವರು. ದಲಿತ ಮುಸ್ಲಿಮರಿಗೆ ಹೇಗೋ ಹಾಗೆ ಮೇಲ್ಜಾತಿ ಮೇಲ್ವರ್ಗ ಅನ್ನಿಸಿಕೊಂಡವರಿಗೂ ಗೊತ್ತಿಲ್ಲ, ಏನೆಂದರೆ ಉತ್ತರದ ಕಡೆ ಜನತಾ ಪಕ್ಷ ಗೆಲ್ಲದಿದ್ದರೆ ಜನತಾ ಪಕ್ಷ ಅಧಿಕಾರಕ್ಕೆ ಬರುತ್ತಿರಲಿಲ್ಲ, ಉತ್ತರದ ಕಡೆ ದಲಿತ ಆದಿವಾಸಿ ಮುಸ್ಲಿಮ್ ಅಲ್ಪಸಂಖ್ಯಾತರು ಜನತಾ ಪಕ್ಷಕ್ಕೆ ಮತ ನೀಡದಿದ್ದರೆ ಜನತಾ ಪಕ್ಷ ಅಧಿಕಾರಕ್ಕೆ ಬರುವಷ್ಟು ಗೆಲ್ಲುತ್ತಿರಲಿಲ್ಲ. ಈ ಸಮುದಾಯಗಳ ಮತ ಹಸ್ತಾಂತರವಾದುದರಿಂದಲೇ, ಕೇಂದ್ರದಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂದು ಇತಿಹಾಸದ ವೇಗ ದ್ವಿಗುಣಗೊಂಡಿತು.

ಈಗ ಜನತಾಪಕ್ಷ ಅಧಿಕಾರಕ್ಕೆ ಬಂದಿದೆ. ಹಳ್ಳಿಗಳ ಕಡೆ ಗುಲ್ಲಾಗಿರುವಂತೆ ಜೀತ ಸಾಲ ಗಿರವಿ ಭೋಗ್ಯ ಇತ್ಯಾದಿ ಮತ್ತೆ ಬರುವುದಿಲ್ಲ. ಬಂದರೆ ಜನತಾ ಪಕ್ಷ ಅಧಿಕಾರದಲ್ಲಿ ಉಳಿಯಲು ಸಾಧ್ಯವಾಗುವುದಿಲ್ಲ. ಕಾಂಗ್ರೆಸ್ ಕಲ್ಪಿಸಿಕೊಟ್ಟಿರುವ ಅನುಕೂಲದ ಎರಡರಷ್ಟನ್ನಾದರೂ ಜನತಾ ಪಕ್ಷವು ದಲಿತ ಆದಿವಾಸಿ ಮುಸ್ಲಿಮ್ ಅಲ್ಪಸಂಖ್ಯಾತರಿಗೆ ಕಲ್ಪಿಸಿಕೊಡಬೇಕಾಗುತ್ತದೆ.

ಜನತಾ ಪಕ್ಷ ತಾನು ಹೇಳಿದ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡದಿದ್ದರೆ ಏನು ಮಾಡೋಣ? ದೆಹಲಿ ಜುಮ್ಮಾ ಮಸೀದಿಯ ಶಾಹಿ ಇಮಾಂ ನುಡಿದ– 'ಜನತಾ ಪಕ್ಷ ಮಾತಿಗೆ ತಪ್ಪಿದರೆ ನನ್ನ ಕೋಲು ಅದರ ತಲೆ ಮೇಲೆ ಇರುತ್ತದೆ' ಎಂಬ ಈ ಮಾತನ್ನು ನೆನಪಿಟ್ಟುಕೊಳ್ಳೋಣ.

# ಹೆಂಡ, ಬೀರು ಮತ್ತು ದಲಿತರು

ತಮ್ಮ ಹಸಿವು ಅವಮಾನಗಳನ್ನು ಹೆಂಡ ಕುಡಿದು ಸಾಯಿಸುತ್ತೇವೆನ್ನುವ ಜನಸಮುದಾಯದಿಂದ ಬಂದವರಿಂದಲೇ ಮದ್ಯಪಾನದ ಬಗ್ಗೆ ಮೂರು ಮಾತುಗಳಿವೆ. ಆ ಮೂರು ಮಾತುಗಳನ್ನು ನಾಕಾರು ದಿಕ್ಕಿನಿಂದಲೂ ತಾಳೆ ಮಾಡಿ ಒಂದು ನಿಲುವು ತಾಳಬೇಕಾಗಿದೆ. ಅದ್ಯಾವುದೆಂದು ವಿಚಾರಿಸೋಣ. ಈ ಹೇಳಿಕೆಗಳನ್ನು ನೋಡಿರಿ–

1. ಮದ್ಯಪಾನ ರದ್ದಾಗಲಿ – ಶ್ರೀ ಟಿ.ಎನ್. ನರಸಿಂಹಮೂರ್ತಿ
2. ಹೆಂಡದ ಬದಲು ಬೀರು ಕುಡಿಯಿರಿ – ಶ್ರೀ ಎನ್. ರಾಚಯ್ಯ
3. ಹೆಂಡ ಕುಡಿಯಿರಿ – ಶ್ರೀ ಸಿದ್ಧಲಿಂಗಯ್ಯ.

ಮದ್ಯಪಾನ ರದ್ದು ಕೂಡಾ ಆಗಿ ಸೋತಿದೆ. ಮದ್ಯಪಾನ, ಲಾಟರಿ, ಕುದುರೆ ಜೂಜು ಇತ್ಯಾದಿಗಳಿಂದ ಬರುವ ಕೋಟಿಗಟ್ಟಲೆ ಕಾಂಚಾಣ ಯಾವ ಸರ್ಕಾರವನ್ನೇ ಆಗಲಿ ಮೋಹಿಸಿ ಬಲಿ ತೆಗೆದುಕೊಳ್ಳುವಂತಹ ಶಕ್ತಿ ಉಳ್ಳದ್ದು. ಆದ್ದರಿಂದ ಮದ್ಯಪಾನ ರದ್ದಾಗಬೇಕಾದರೆ ಅದರಲ್ಲಿ ವ್ಯಾವಹಾರಿಕತೆಗಿಂತ ಭಾವನಾತ್ಮಕವಾದ ಪ್ರಬಲ ಮನಸ್ಸಿರಬೇಕಾಗುತ್ತದೆ. ಅಂದರೆ, ಮದ್ಯಪಾನ ರದ್ದು ಮಾಡುವ ಸರ್ಕಾರಕ್ಕೆ ತನ್ನ ಸಂಬಂಧಿಗಳು ಈ ಮದ್ಯಪಾನದಿಂದ ಹಾಳಾಗುತ್ತಿದ್ದಾರೆ ಎಂದು ಬಲವಾಗಿ ಅನ್ನಿಸಬೇಕಾಗುತ್ತದೆ. ಈ ರೀತಿ ಅನ್ನಿಸಬೇಕಾದರೆ ಕುಡಿತದ ಜಗತ್ತಿನಿಂದ ಬಂದವರ ಕೈಲಿ ಸರ್ಕಾರ ಇದ್ದೂ ಅವರ ಕೈಲೇ ಅಧಿಕಾರವೂ ಇರಬೇಕಾಗುತ್ತದೆ. ಇದಾದರೂ ಆಗದೆ ಇರಬಹುದು. ಆದರೆ ನಿಜವಾದ ಗಾಂಧಿ ತಾತ್ವಿಕತೆ ಉಳ್ಳಂಥ ಇಚ್ಛಾಶಕ್ತಿ

ಅಧಿಕಾರದಲ್ಲಿದ್ದರೆ ಮದ್ಯಪಾನ ರದ್ದಾಗುವ ಸಾಧ್ಯತೆಗಳಿವೆ. ಇಲ್ಲದಿದ್ದರೆ ಮದ್ಯಪಾನ ರದ್ದಿನಿಂದ ಆಗುವ ಕೋಟಿಗಟ್ಟಲೆ ಹಣದ ನಷ್ಟವನ್ನು ಕಳೆದುಕೊಳ್ಳಲು ಸಹಜವಾಗೇ ಯಾರೂ ಬಯಸುವುದಿಲ್ಲ. ಆದ್ದರಿಂದ ಸದ್ಯದ ಪರಿಸ್ಥಿತಿಯಲ್ಲಿ ಮದ್ಯಪಾನ ರದ್ದು ಒಂದು ಆದರ್ಶ ಅಷ್ಟೇ.

ಮುಂದಿನ 'ಹೆಂಡದ ಬದಲು ಬೀರು ಕುಡಿಯಿರಿ' ಎಂಬ ಮಾತು ತುಂಬಾ ಕುತೂಹಲದ್ದಾಗಿದೆ. ಮದ್ಯಪಾನ ಸದ್ಯಕ್ಕೆ ರದ್ದಾಗದು ಎಂಬ ಅರಿವು ಈ ಮಾತಿನಲ್ಲಿದೆ. ಹೆಂಡವನ್ನು ಕುಡಿಯುವ ಜನತೆಗೆ ಮಾತ್ರವೇ ಈ ಮಾತನ್ನು ಹೇಳಲಾಗಿದೆ. ತಮಾಷೆಯೆಂದರೆ ಹೆಂಡವನ್ನು ಕುಡಿಯುವ ಜನ ಬೀರನ್ನು ಕುಡಿಯಲು ಆರ್ಥಿಕವಾಗಿ ಅಸಮರ್ಥರಾಗಿದ್ದಾರೆ. ಆದ್ದರಿಂದ ಈ 'ಹೆಂಡದ ಬದಲು ಬೀರು ಕುಡಿಯಿರಿ' ಮಾತಿನಂತೆ ದಲಿತ ಜನತೆ ನಡೆದುಕೊಳ್ಳುವುದಾದರೆ ಇವರಿಗೆ ಅಪರೂಪಕ್ಕೆ ಮಾತ್ರ ಬೀರು ಕುಡಿಯಲು ಸಾಧ್ಯವಾಗುತ್ತದೆ. ಈ ಮಾತಿನ ಒಳಗೆ ಹೆಂಡವನ್ನು ಕುಡಿದು ಹಾಳಾದ ಜನಾಂಗದ ಅಸಹಾಯಕ ಒಳನೋವಿದೆ.

'ಹೆಂಡವನ್ನು ಕುಡಿಯಿರಿ, ದನದ ಬಾಡನ್ನು ತಿನ್ನಿ, ಇದು ಅಂತರರಾಷ್ಟ್ರೀಯ ಆಹಾರ'– ಇತ್ಯಾದಿಯಾಗಿ ಶ್ರೀ ಸಿದ್ಧಲಿಂಗಯ್ಯ ಹೇಳುವರು. ಇದಕ್ಕಾಗಿ ಕೀಳಾಗಿ ಭಾವಿಸಿಕೊಳ್ಳಬೇಕಾಗಿಲ್ಲ ಎಂದು ಇವರ ವಾದ. ಹೆಂಡ, ದನದ ಬಾಡನ್ನು ಕೇವಲ ಆಹಾರವೆಂಬಂತೆ ಭಾವಿಸಿ ಇವರು ಈ ಮಾತನ್ನು ಹೇಳುವರು. ದುರಂತವೆಂದರೆ– ಹೆಂಡ, ದನದ ಬಾಡು ನಮ್ಮ ಪಾಲಿಗೆ ಕೇವಲ ಆಹಾರ ಮಾತ್ರವಾಗಿಲ್ಲ. ಈ ಸಮಾಜದಲ್ಲಿ ಹೆಂಡ, ದನದ ಬಾಡಿನಲ್ಲಿ ಅವಮಾನ ಜೊತೆಗೂಡಿಸಲ್ಪಟ್ಟಿದೆ. ಹೆಂಡ ದನದ ಬಾಡು ಭಾರತದಲ್ಲಿ ಪ್ರತಿಷ್ಠಿತ ಹೊಟೇಲ್, ತಿಥಿ ಊಟ ಆಗುವವರೆಗೂ ಈ ಆಹಾರಕ್ಕೆ ಅಂಟಿಸಿರುವ ಅವಮಾನದಿಂದ ತಪ್ಪಿಸಿಕೊಳ್ಳುವುದು ಕಷ್ಟ.

ಹಾಗಾದರೆ ಏನು ಮಾಡೋಣ? ಹೆಂಡ ತಪ್ಪೇ? ದನದ ಬಾಡು ತಪ್ಪೇ? ಅದರಲ್ಲಿ ಏನು ತಪ್ಪಿದೆ? ಹೆಂಡ, ದನದ ಬಾಡಿನಲ್ಲಿ ಅಡಕವಾಗಿಸಿರುವ ಅವಮಾನ ತಪ್ಪು. ಹೆಂಡ ದನದ ಬಾಡಿನಲ್ಲಿ ಅಡಕವಾಗಿಸಿರುವ ಅವಮಾನದ ಅಂಶ ತೆಗೆದರೆ ಮಾತ್ರ ಇವೂ ಸಹಜ 'ಆಹಾರ' ಆಗುತ್ತವೆ. ಅಲ್ಲಿಯವರೆಗೂ ಏನು ಹೇಳೋಣ?– 'ಹೆಂಡದ ಬದಲು ಬೀರು ಕುಡಿಯಿರಿ'

## ಹೆಣ್ಣು ಜಾತಿ ಮತ್ತು ದಲಿತ ಜಾತಿ

ಮುಂದೆ ಹೇಳುವಂಥವುಗಳು ದಿನಕ್ಕೆ ಎಷ್ಟಾಗುತ್ತವೊ ಏನೋ. ಈಗ ಒಂದು ನೆನಪಾಗುತ್ತಿದೆ. ನಮಗೆ ಪರಿಚಿತ ಹುಡುಗಿಯೊಬ್ಬಳು ಪ್ಯಾಂಟ್ ಹಾಕಿಕೊಂಡು ಬಂದಳು. ಇದನ್ನು ಕಂಡಾಗ ನನ್ನ ಗೆಳೆಯರನೇಕರಿಗೆ ಒಳಗೊಳಗೇ ಕಸಿವಿಸಿಯಾಯಿತು. ಒಬ್ಬ ಹೊಟ್ಟೆಯೊಳಗಿನದನ್ನು ಹೊರಕ್ಕೆ ಕಕ್ಕಿದ– 'ಬಹಳ ಧಿಮಾಕಿನವಳು' ಎಂದು. ಅನೇಕರು ಆ ಹುಡುಗಿಯನ್ನು ವಕ್ರ ವಕ್ರವಾಗಿ ನೋಡಿದರು. ಆ ಹುಡುಗಿ ಪ್ಯಾಂಟ್ ಹಾಕಿಕೊಂಡು ಬಂದದ್ದಕ್ಕೆ ಹುಡುಗರು ತಮ್ಮದು ಏನೋ ಕಳೆದುಹೋದಂತೆ ವರ್ತಿಸಿದರು. ಏನಿಲ್ಲ ಎತ್ತಿಲ್ಲ ಆ ಹುಡುಗಿ ಪ್ಯಾಂಟ್ ಹಾಕಿದ್ದಕ್ಕೆ ಯಾಕೆ ಧಿಮಾಕಿನವಳು? ಹುಡುಗರಿಂದ ಏನು ಕಳೆದು ಹೋಯಿತು? ಎಷ್ಟು ಹುಡುಕಿದರೂ ನನಗೆ ಏನೂ ಕಾಣಲಿಲ್ಲ.

ಆ ಹುಡುಗಿ ಪ್ಯಾಂಟ್ ಹಾಕಿಕೊಂಡಿದ್ದಕ್ಕೆ ಸಿಕ್ಕಂಥ ಮೂಗೇಟು ಅಸ್ಪೃಶ್ಯಜಾತಿಯವರಿಗೆ ಸ್ವಲ್ಪ ಟಿಪ್‌ಟಾಪ್ ಆಗಿದ್ದರೆ ಸಿಕ್ಕುತ್ತದೆ. ಒಬ್ಬ ದಲಿತ ಶೋಕಿಯಾಗಿದ್ದರೆ ಅವನಿಗೆ ನೂರೆಂಟು ಕಾಮೆಂಟು ಕಟ್ಟಿಟ್ಟದ್ದು. ಅವನು ಸವರ್ಣೀಯರ ಕಣ್ಣಲ್ಲಿ ಧಿಮಾಕಿನವನಾಗುತ್ತಾನೆ. ಅವನು ಒಳ್ಳೆಯ ಫ್ಯಾಷನ್ ಬಟ್ಟೆ ಹಾಕಿಕೊಂಡರೆ ಅವನ ಯೋಗ್ಯತೆ ಕೆಟ್ಟುಬಿಡುತ್ತದೆ. ಒಬ್ಬ ದಲಿತ ವಿದ್ಯಾರ್ಥಿಗೆ ಅವರ ಪ್ರಿನ್ಸಿಪಾಲರು– 'ಏನ್ರೀ, ಷಡ್ಯೂಲ್ಡ್ ಕ್ಯಾಸ್ಟ್ ಅಂತೀರಿ? ಇಷ್ಟು ಮಾಡ್ರನ್ ಬಟ್ಟೆ ಹಾಕ್ತೀರಲ್ಲಾ!' ಎಂದರಂತೆ. ಒಟ್ಟಿನಲ್ಲಿ ದಲಿತರು ಯೋಗ್ಯರಾಗಬೇಕಾದರೆ ಅವರು ದೀನರಾಗಿರಬೇಕು. ಹೆಂಗಸೂ ಯೋಗ್ಯಳಾಗಿರಬೇಕಾದರೆ ಅವಳೂ ದೀನಳಾಗಿರಬೇಕು. ಹೆಂಗಸರೂ ದಲಿತರೂ ಸವರ್ಣೀಯರ ಅಧೀನದಲ್ಲಿ ಚಲಿಸಾಡಬೇಕು. ಇದು ತಪ್ಪಿದರೆ ಅವರು ಮುಪ್ಪಾಗಿ ಗೋಣಗುವರು ಅಸಹಾಯಕರಾಗಿ.

ಈ ಒಂದು ಅನ್ನದ ಅಗುಳನ್ನು ಹಿಚುಕಿ ಏನೆಂದು ನೋಡುತ್ತಿರುವೆ. ಹೆಂಗಸರ ದಲಿತರ ಸಮಾನತೆಯನ್ನು ಯಾಕೆ ಸವರ್ಣೀಯ ಮನಸ್ಸು ಸಹಿಸುವುದಿಲ್ಲ ಎನ್ನುವುದಕ್ಕೆ ಇತಿಹಾಸವೇ ಇದೆ. ಇರಲಿ. ಆದರೆ ಮೇಲಿನಂತಹ ಅಸಹನೆಯ ಭಾವನೆಗಳು ಪ್ರಗತಿಪರ ವ್ಯಕ್ತಿ ಹಾಗೂ ಪಕ್ಷಗಳಲ್ಲಿಯೂ ಒಳಗೊಳಗೆ ಇವೆ ಎಂಬ ವಿಷಾದಕ್ಕೆ ಈಗ ಬರೋಣ. ಕೆಲವು ಪ್ರಗತಿಪರ ವ್ಯಕ್ತಿಗಳು, ಪಕ್ಷಗಳು ಹೆಚ್ಚಾಗಿ ವರ್ಗ ಹೋರಾಟ ಪ್ರತಿಪಾದಿಸುವ ಕಮ್ಯುನಿಷ್ಟರು 'ದಲಿತರ ಬಿಡುಗಡೆ ವರ್ಗ ಹೋರಾಟದಲ್ಲೇ' ಎಂದು ಮಾತನಾಡುವರು. ವರ್ಗ ಹೋರಾಟದಲ್ಲಿ ದಲಿತರ ಭಾಗವಹಿಸುವಿಕೆ ಇಲ್ಲದಿದ್ದರೆ, ದಲಿತ ನಾಯಕತ್ವವೂ ಇಲ್ಲದಿದ್ದರೆ ಆ ವರ್ಗ ಹೋರಾಟವೇ ಮುಂದಕ್ಕೆ ನೂಕಲ್ಪಡುತ್ತದೆ ಎಂಬ ನಿಜದ ಅರಿವಿಲ್ಲದವರು ಇಂಥ ಮಾತಾಡುವರು.

ಇಂಥಾ ಮಾತನ್ನೇ ಹಿಂದೆ ಚೈನಾದಲ್ಲೂ ಮಾತನಾಡಿದ್ದರು. ಮಹಿಳೆಯರ ಬಿಡುಗಡೆಯ ಪ್ರಶ್ನೆ ಬಂದಾಗ ಅಲ್ಲಿನ ಕೆಲವು ಸಂಪ್ರದಾಯವಾದಿ ಕಮ್ಯುನಿಷ್ಟರು 'ವರ್ಗ ಹೋರಾಟದೊಡನೆ ಮಹಿಳೆಯರ ಬಿಡುಗಡೆಯೂ ತಂತಾನೇ ಆಗುತ್ತದೆ' ಎಂದು ಪ್ರತಿಪಾದಿಸಿ ಪ್ರತ್ಯೇಕ ಮಹಿಳಾ ಹೋರಾಟದ ಅಗತ್ಯತೆಯನ್ನು ನಿರಾಕರಿಸಿದ್ದರು. ಈ ವಾದವನ್ನು ನಿಜವಾದ ಕಮ್ಯುನಿಷ್ಟರು ಅಲ್ಲೇ ಅಲ್ಲಗಳೆದು ಇಂಥ ದೃಷ್ಟಿಕೋನವು 'ಬಹಿರಂಗವಾಗಿ ಪ್ರಗತಿಪರ, ಅಂತರಂಗದಲ್ಲಿ ಪ್ರಗತಿವಿರೋಧಿ' ಎಂದು ವಿವರಿಸಿ ನಿಜ ಕಾಣಿಸಿದರು. ಚೀನಾದಲ್ಲಿ ಮಹಿಳೆಯರ ಬಿಡುಗಡೆಯ ಬಗ್ಗೆ ಸಂಪ್ರದಾಯವಾದಿ ಕಮ್ಯುನಿಷ್ಟರು ತಳೆದಿದ್ದ ಭಾವನೆಗಳಿಗೂ ಇಲ್ಲಿ ಅಂದರೆ ಇಂಡಿಯಾದಲ್ಲಿ ಕಮ್ಯುನಿಷ್ಟರು ತಳೆದಿರುವ 'ದಲಿತರ ಬಿಡುಗಡೆ ವರ್ಗ ಹೋರಾಟದಲ್ಲೇ' ಎಂಬ ನಿಲುವೂ 'ಬಹಿರಂಗವಾಗಿ ಪ್ರಗತಿಪರವಾಗಿದ್ದು ಅಂತರಂಗದಲ್ಲಿ ಪ್ರಗತಿವಿರೋಧಿ'ಯಾಗಿ ಸಂವೇದನೆ ಇಲ್ಲದ್ದಾಗಿರುತ್ತದೆ.

ಈ ಪ್ರಗತಿಪರರು ಮೊದಲು ತಮ್ಮ ಪೊರೆ ಕಳಚಿ ಹೊಸ ಹುಟ್ಟು ಪಡೆಯಬೇಕಾಗಿದೆ. ಯಾರ ಪೊರೆ ಕಳಚಲಿ ಬಿಡಲಿ, ಹೆಣ್ಣು ಜಾತಿಯೂ ದಲಿತ ಜಾತಿಯೂ ಕೈ ಕೈ ಹಿಡಿದು ತಮ್ಮ ಬಿಡುಗಡೆಗೆ ಜೊತೆಗೂಡಿ ಮುನ್ನಡೆಯಬೇಕಾಗಿದೆ.

## ಮುಸ್ಲಿಮರೊಡನೆ ಪಿಸುಮಾತು

'ಲೋ ಹೊಲೆಮಾದಿಗ...'

'ಏ ಸಾಬೀ...'

ಇಂಥಾ ಮಾತುಗಳು ಇಂದಿನ ವಸ್ತುಸ್ಥಿತಿಯೊಳಗೆ ರಕ್ತದಂತೊ ಅಥವಾ ಚರ್ಮದಂತೊ ಇವೆ. 'ಲೋ ಹೊಲೆ ಮಾದಿಗಾ' ಅಂದಾಗ ಹೊಲೆಮಾದಿಗನು ಅವಮಾನಿತನಾಗಿ ಕುಗ್ಗುವನು. 'ಏ ಸಾಬಿ' ಎಂದಾಗ ಮುಸ್ಲಿಮನು ಅನುಮಾನಿತನಾಗಿ ಕುಗ್ಗುವನು. ಇಂಥಾ ಮಾತುಗಳು ಅವರ ಮನಸ್ಸಿನ ತಳದ ಕೊನೆಯ ಪದರದವರೆಗೂ ಮುಟ್ಟಿ ಗಾಯಮಾಡಿ ನಿದ್ದೆಯಲ್ಲೂ ನರಳಾಡಿಸುವುದು. ಹೀಗಾಗಿ ಆ ಈ ಜನಾಂಗಗಳೆರಡೂ ಇಂದಿನ ವ್ಯವಸ್ಥೆಯ ಜೀವನ ರೀತಿಯಲ್ಲಿ ಮೈಮನಸ್ಸು ಮುದುರಿಕೊಂಡು ಪಾಲ್ಗೊಳ್ಳುತ್ತಿರುವುವು. ಇವರು ಗರಿಗೆದರಿ ಸಂಪೂರ್ಣ ಮನಸ್ಸಿನಿಂದ ಹಾರಾಟ ನಡೆಸಿದ್ದಿಲ್ಲ. ದಲಿತರನ್ನು ಅವಮಾನಿತರನ್ನಾಗಿಸಿಯೂ ಮುಸ್ಲಿಮರನ್ನು ಅನುಮಾನಿತರನ್ನಾಗಿಸಿಯೂ ಇಟ್ಟು ಇಂದಿನ ವ್ಯವಸ್ಥೆ ಅವರನ್ನು ತನ್ನೊಳಗೆ ಸೇರಿಸಿಕೊಳ್ಳದೆ ಒಂದು ಗೊತ್ತಾದ ದೂರದಲ್ಲಿ ಆಚೆ ಇಟ್ಟು ನಡೆಯುವುದು ಅದರ ಲಕ್ಷಣವಾಗಿದೆ.

ಹಾಗಾದರೆ ಏನರ್ಥ? ದೊಡ್ಡ ದೊಡ್ಡ ನಾಯಕರು ಇಂದಿನ ವ್ಯವಸ್ಥೆಯಲ್ಲೂ ಆ ಈ ಜನಾಂಗಗಳಲ್ಲು ಇರುವರಲ್ಲ? ಹಾಗಾದರೆ ಏನರ್ಥ? ಸ್ವಲ್ಪವೇ ಕಣ್ಣು ತೆರೆದು ನೋಡಿ– ಈ ಎರಡೂ ಜನಾಂಗಗಳ ಪ್ರತಿನಿಧಿಗಳು ಎಂಥೆಂಥಾ ಸ್ಥಾನಗಳಲ್ಲಿ ಇರುವರು? ಹಲ್ಲು ಇಲ್ಲದ ಆದರೆ ಹೆಸರಿಗೆ ದೊಡ್ಡದಾಗಿರುವ ಸ್ಥಾನಗಳಲ್ಲಿ ಇದ್ದಿರುವರು. ತಮ್ಮ ಹಲ್ಲನ್ನು ಕಳಚಿಟ್ಟು ತದನಂತರ ದೊಡ್ಡ

ಸ್ಥಾನದಲ್ಲಿ ಪವಡಿಸುವರು. ಅವರು ಮರೆತು ಹಲ್ಲಾಡಿಸಿದರೂ ಆ ದೊಡ್ಡ ಸ್ಥಾನವನ್ನು ಕಳೆದುಕೊಳ್ಳುವರು!

ಇಂದಿನ ವ್ಯವಸ್ಥೆಯು ಆ ಈ ಜನಾಂಗಗಳ ನಾಯಕರ ದೇಹಕ್ಕೆ ಪಂಪು ಹೊಡೆದು ಊದಿಸಿ ಇದನ್ನು ಆಯಾಯ ಜನಾಂಗಗಳಿಗೆ ತೋರಿಸಲು ಇಟ್ಟುಕೊಂಡಂತಹ ಸರಕುಗಳಾಗಿವೆ. ಹೀಗೆ ಇಂದಿನ ವ್ಯವಸ್ಥೆ ಎರಡೂ ಜನಾಂಗಗಳ ಆಯ್ದ ವ್ಯಕ್ತಿಗಳನ್ನು ಉಬ್ಬಿಸಿ ತನ್ನ ಕೈಯಲ್ಲಿ ಇಟ್ಟುಕೊಂಡು ಆಡಿಸುತ್ತಾ ಬಂದಿರುವುದು. ಇದರಿಂದಾಗಿ ಈ ಎರಡೂ ಜನಾಂಗಗಳ ಮಹಾಜನತೆ ಇದ್ದಲ್ಲೇ ಇದ್ದು ನಿದ್ದೆಯಲ್ಲಿದೆ.

ದಲಿತರಂತೇ ಮುಸ್ಲಿಮರೂ ನಿದ್ದೆ ಮಾಡುತ್ತಿರುವ ಜನಾಂಗ ಎಂಬ ಕಾರಣಕ್ಕೊ, ದಲಿತರಂತೆ ಮುಸ್ಲಿಮರೂ ಮಾನಸಿಕ ನರಳಾಟಕ್ಕೆ ತುತ್ತಾದವರು ಎಂಬ ಕಾರಣಕ್ಕೊ, ದಲಿತರೂ ಮುಸ್ಲಿಮರೂ ಉಪನಿಷತ್ ಕಾಲದ ಋಷಿ ಮುನಿಗಳ ಆಹಾರ ಸ್ವೀಕರಿಸುವ ಕಾರಣಕ್ಕಾಗೊ, ದಲಿತರಂತೆಯೇ ಮುಸ್ಲಿಮರು ದೇಶವ್ಯಾಪ್ತಿ ಜನತೆ ಎಂಬ ಕಾರಣಕ್ಕೊ, ದಲಿತರೊಡನೆ ಇನ್ಯಾರೊ ಕುಸ್ತಿ ಮಾಡದಿದ್ದಾಗ ಮುಸ್ಲಿಮರಾದರೂ ತಮ್ಮೊಡನೆ ಕುಸ್ತಿ ಮಾಡುವರೆಂಬ ಕಾರಣಕ್ಕೊ, ದಲಿತರಂತೆಯೇ ಮುಸ್ಲಿಮರಿಗೂ ಮಕ್ಕಳು ಜಾಸ್ತಿ ಎಂಬ ಕಾರಣಕ್ಕಾಗೋ,

ಕಾರ್ಖಾನೆ ಉತ್ಪಾದಿಸುವ ಕೊಳಚೆ ಪ್ರದೇಶಗಳಿಗೆ ಬಂದರೆ, ಈ ಕಡುಬಡತನದ ದವಡೆಗೆ ಎಸೆಯಲ್ಪಟ್ಟವರು ದಲಿತರಂತೆಯೇ ಮುಸ್ಲಿಮರೂ ಹೆಚ್ಚು ಎಂಬ ಕಾರಣಕ್ಕಾಗಿಯೊ, ಎಚ್ಚೆತ್ತ ದಲಿತರು ಹಿಂದೂ ಧರ್ಮವನ್ನು ದ್ವೇಷಿಸುವುದರಿಂದ ಶತ್ರುವಿನ ಶತ್ರು ಮಿತ್ರ ಎಂಬ ಕಾರಣಕ್ಕಾಗಿಯೊ, ದಲಿತರನ್ನು ಕುಗ್ಗಿಸುವ ಅಸ್ಪೃಶ್ಯತಾ ಆಚರಣೆ ಮುಸ್ಲಿಮರಲ್ಲಿ ಅಷ್ಟಾಗಿ ಇಲ್ಲ, ಇದ್ದರೂ ಹಿಂದೂಗಳಲ್ಲಿದ್ದಂತೆ ರಕ್ತಗತವಾದುದ್ದಲ್ಲ, ಹಿಂದೂ ಸಮಾಜದಲ್ಲಿ ಪ್ರತಿಷ್ಠೆ ಉಳಿಸಿಕೊಳ್ಳಲೊ ಆರ್ಥಿಕ ಅನುಕೂಲಕ್ಕಾಗಿಯೊ ಇರುವಂಥದ್ದು ಎಂಬ ಕಾರಣಕ್ಕಾಗೋ ದಲಿತ ಜನತೆ ಮುಸ್ಲಿಮರೊಡನೆ ಹೆಚ್ಚೆಚ್ಚು ಹೊಂದಿಕೊಳ್ಳಬಹುದಾದ ಸಮುದಾಯವಾಗಿದೆ.

ಆದ್ದರಿಂದ, ಬಹುತೇಕ ಗರೀಬರನ್ನು ಒಳಗೊಂಡ ಈ ಸಮುದಾಯಗಳ ಎಚ್ಚೆತ್ತವರು ಹಾಗೂ ಜಾತಿರಹಿತ ಸಮಾಜಕ್ಕಾಗಿ ಹೋರಾಡುವವರು ಜೊತೆಗೂಡಿ ಯತ್ನಿಸುವುದರ ಮೇಲೂ ಜಾತಿರಹಿತ, ವರ್ಗರಹಿತ ಸಮಾಜದ ದೂರ ನಿಂತಿದೆ.

## ಬೇಡ ಎನಲಿ ಯಾವ ನಾಲಿಗೆಯಲಿ?

ಕಾಲನು, ಭಾರತಮಾತೆಯ ಹಣೆಯಲ್ಲಿ ತಮಿಳುನಾಡಿನ ಮೀನಾಕ್ಷಿಪುರಂ ಎಂಬ ಊರಿನ ಹೆಸರನ್ನು ರಹಮತ್ ನಗರ ಎಂದು ತಿದ್ದಿ ಆ ಬರಹಾ ಬರೆದು ಮುಂದಿನ ನಡಿಗೆಗೆ ಕಣ್ಸನ್ನೆ ಮಾಡಿ ಹೋದನು. ಮೀನಾಕ್ಷಿಪುರಂ, ರಹಮತ್‌ನಗರವಾಗುವ ಮುನ್ನ ಗುಜರಾತ್ ಬೆಂಕಿ ಸುಡುತ್ತಿತ್ತು. ಇದಾಗುವಾಗ ಇಲ್ಲಿ ಹೊಳೆನರಸೀಪುರದ ಹಿಂದೂ ಮತ್ತು ದಲಿತರ ಗಲಾಟೆಯ ನಿಜ ತಿಳಿಯಲು ಹೋದಾಗ ಅಲ್ಲೊಬ್ಬ ತುಂಬಾ ದೈವಭಕ್ತರಾಗಿದ್ದವರು– 'ಮುಸ್ಲಿಮರಾಗದೆ ದಲಿತರಿಗೆ ಉಳಿಗಾಲವಿಲ್ಲ' ಎಂದಿದ್ದರು. ಅದಕ್ಕೆ ನಾನು 'ಧರ್ಮಗಳಲ್ಲ ನಮಗೆ ಬೇಕಿರುವುದು, ಎಲ್ಲಾ ಧರ್ಮಗಳನ್ನು ವಿರೋಧಿಸಬೇಕು' ಎಂದುದಕ್ಕೆ ಅವರೆಂದರು: 'ಅದಕ್ಕಾದರೂ ಮೊದಲು ನಾವು ಉಳೀಬೇಕಲ್ಲ. ಉಳಿಯುವುದಕ್ಕೆ ಮುಸ್ಲಿಮರಾಗಬೇಕು.'

ಅವರ ಮಾತನ್ನು ನಾನು ಒಪ್ಪದೇ ಬಂದರೂ ಆ ಮಾತು ನನ್ನ ಮನದೊಳಗೆ ಕೂತು ಇಲ್ಲಿ ನಿಜವಿಲ್ಲವೇ ಎಂದು ಕುಟುಕುತ್ತಿತ್ತು. ದಲಿತರು ನೋಡಲು ಚೆನ್ನಾಗಿದ್ದಾರೆ ಎಂಬ ಕಾರಣಕ್ಕೆ ಹೊಡೆತ ತಿಂದಿದ್ದರು. ಸವರ್ಣೀಯ ಹುಡುಗೀನ ಪ್ರೀತಿಸಿದ್ದಕ್ಕೆ ಕೊಲೆಯಾಗಿದ್ದರು. ಪಂಚಾಯ್ತಿ ಅಧ್ಯಕ್ಷರಾಗಿದ್ದಕ್ಕೆ ಜೀವ ತೆತ್ತಿದ್ದರು. ಅಸ್ಪೃಶ್ಯರ ದೇಹಕ್ಕೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿ, ಆ ಉರಿಯುವ ದೇಹವು ಸವರ್ಣೀಯ ಸಸ್ಯಾಹಾರಿ ಅಹಿಂಸಾವಾದಿಗಳಿಗೆ ಆಹಾರವಾಗಿತ್ತು. ಗಂಗಾಜಲ ತರುತ್ತಿದ್ದ ಅಸ್ಪೃಶ್ಯರನ್ನು ಕೊಲ್ಲಿಸಲು ವಿಪ್ರನು ಡಕಾಯಿತರೊಡನೆ ಅಡ್ಡಗಟ್ಟಿ, ಡಕಾಯಿತರೇ ಕೊಲೆ ಮಾಡಲು ಹಿಂದೆಗೆಯುತ್ತಿದ್ದಾಗ, ಕ್ರೂರ ವಿಪ್ರನು 'ಧರ್ಮ ಉಳಿಸುವುದಕ್ಕಾಗಿ' ಎಂದು ಕೊಲ್ಲಿಸಿದ್ದನು. ಊರಾಚೆಯವರ ಮದುವೆ ದಿಬ್ಬಣ ಊರೊಳಕ್ಕೆ ಬಂದುದಕ್ಕಾಗಿ,

ಹದಿನಾಲ್ಕು ಜನ ಜೀವ ತೆತ್ತು, ರಕ್ತವು ಬಿಹಾರದ ಬೆಲ್ಚಿ ಹತ್ಯಾಕಾಂಡಕ್ಕಿಂತಲೂ ಕ್ರೂರವಾಗಿ ಚೆಲ್ಲಾಡಿತ್ತು. ಪ್ರಾಣಿದಯಾ ಸಂಘದವರಾದರೂ ಈ ಬಗ್ಗೆ ಮಾತಾಡಲಿಲ್ಲ! ಇದನ್ನು ಎಲ್ಲರೂ ತುಂಬ ಸಹಜವೆಂಬಂತೆ ಸಹಜವಾಗಿ ಮರೆತರು. ಇಂಥವೆಲ್ಲವೂ ಮೊದಲು ನಮ್ಮ ಪ್ರಾಣ ಉಳಿದರೆ ಸಾಕು, ಸಮಾನತೆ ಆಮೇಲಿನ ಮಾತು ಎಂಬಂಥ ಅಸಹಾಯಕತೆಯಲ್ಲಿ ನಮ್ಮನ್ನು ನಿಲ್ಲಿಸಿದವು. ಅದಕ್ಕಾಗೆ ಮೀನಾಕ್ಷಿಪುರಂ, ರಹಮತ್ ನಗರವಾದಾಗ ನಮ್ಮ ಪ್ರಾಣದ ಉಳಿವಿಗೆ ಇದೂ ಒಂದು ಆಸೆ ಅನ್ನಿಸಿತು.

ಈ ಅನ್ನಿಸಿಕೆ ನಡುವೆಯೂ ಭಯ ಆತಂಕ ಅಡಗಿದೆ. ಸರಳ ಭಾವುಕರಾದ ಮುಸ್ಲಿಮರ ಬಗ್ಗೆ ಅವರ ಸೋದರತೆ ಬಗ್ಗೆ ಪ್ರೀತಿಯಿದ್ದರೂ ಅವರ ಮತ ನಿಷ್ಠೆ ಮತ್ತು ಇಸ್ಲಾಂ ಧರ್ಮದ ಹಿಡಿತ ಭೀತಿಗೊಳಿಸುತ್ತದೆ. ಖೊಮೇನಿ ಕನಸಲ್ಲಿ ಬಂದು 'ಸೋಷಲಿಸ್ಟರೇ ನೀವೇ ನನ್ನ ಮೊದಲ ಬಲಿ' ಅನ್ನುತ್ತಿದ್ದಾನೆ. ಅದಕ್ಕಾಗಿ ನನಗೆ ಪ್ರಿಯವಾದ ಬೌದ್ಧ ಧರ್ಮದ ಕಡೆ ನೋಡಿದರೂ ಗುಜರಾತ್ ಮಹಾರಾಷ್ಟ್ರದಲ್ಲಿ ದಲಿತರ ದೇಹ ಬೌದ್ಧರಾಗೂ ಅಸ್ಪೃಶ್ಯ ಎಂದು ಸುಡಿಸಿಕೊಳ್ಳುವ ವಸ್ತುವಾಗಿದೆ.

ಮತಾಂತರಕ್ಕೆ ಅಭ್ಯಂತರವಿಲ್ಲವೆಂದು ದಲಿತ ಸಂಘರ್ಷ ಸಮಿತಿ ನಿರ್ಣಯಿಸಿದೆ. ಹರಿವ ನೀರನು ತಡೆಯಲು ದೊಣ್ಣೆನಾಯಕರು ಅನಗತ್ಯವಾಗಿ ಚಡ್ಡಿ ಧರಿಸಿಕೊಂಡು ಒಂದು ಕೈಲಿ ಲಾಠಿ ಹಿಡಿದು ಇನ್ನೊಂದು ಕೈಲಿ ರಾಖಿ ಹಿಡಿದು ಓಡಾಡುತ್ತಿದ್ದಾರೆ. ನನ್ನ ಪತ್ನಿ ಸುಮಿತ್ರಾಳೂ ಸ್ನೇಹಿತ ಗೋವಿಂದಯ್ಯನೂ ಕಟ್ಟಾ ಮುಸ್ಲಿಂವಾದಿಗಳಾಗಿ ಮತಾಂತರವಾಗಲೇಬೇಕು ಎಂಬ ಮನಸ್ಥಿತಿಯಲ್ಲಿದ್ದಾರೆ. ಈ ಪ್ರಭಾವದಿಂದಾಗೇನೊ ನಾಲ್ಕನೆ ಕ್ಲಾಸು ಓದುವ ಮಗಳು ಉಜ್ವಲಾ ತನ್ನಷ್ಟಕ್ಕೆ ತಾನೆ ಯಾರಿಗೂ ತಿಳಿಯದಂತೆ ತನ್ನ ಪುಸ್ತಕದಲ್ಲಿ ಉಜ್ವಲಾಖಾನ್ ಎಂದು ಬರೆದುಕೊಳ್ಳುತ್ತಿದ್ದಾಳೆ. ಮೊನ್ನೆ ತಾನೆ, ನಮ್ಮ ಲೋಕಸಭಾ ಸದಸ್ಯ ಶ್ರೀನಿವಾಸ ಪ್ರಸಾದ್‌ರ ತಂದೆಯವರು 'ದೇವರೆ, ನಮ್ಮ ಹೊಲೆ ಮಾದಿಗರಿಗೆ ಜನ್ಮ ಕೊಡಬೇಡ. ಕೊಟ್ಟರೆ ಮುಸ್ಲಿಮರಾಗಿ ಹುಟ್ಟಿಸು' ಎಂದ ಮಾತು ನನ್ನ ಸುತ್ತಲೂ ಸುತ್ತಾಡುತ್ತಿದೆ.

ಹೀಗಾಗಿ ಯಾವ ಮತವೂ ಬೇಡ ಅನ್ನುವ ನನ್ನ ನಾಲಿಗೆಯು ನನ್ನ ಜನರ ಪ್ರಾಣಪಕ್ಷಿ ಮತ್ತು ಛಿದ್ರರಾಗಿರುವ ದಲಿತ ಸಮುದಾಯಗಳು ಕನಿಷ್ಠ ಹೀಗಾದರೂ ಒಂದಾಗಬಹುದಾದ ಆಸೆಯಿಂದಾಗಿ ಮತಾಂತರ ಬೇಡ ಎಂದು ನುಡಿಯದಂತಾಗಿದೆ.

# ಬ್ರಾಹ್ಮಣನ ಒಂದು ಹಲ್ಲಿಗೆ ಗೌಡನ ಎರಡು ಹಲ್ಲು

ಹೀಗೆ ಒಂದೂರಿನ ಒಂದು ಆಫೀಸಿನಲ್ಲಿ, ಗೌಡ ಅಧಿಕಾರಿಯೂ ಬ್ರಾಹ್ಮಣ ಗುಮಾಸ್ತನೂ ಇದ್ದರು. ಗೌಡ ಅಧಿಕಾರಿಯು ಆಗತಾನೆ ಕೆಲಸಕ್ಕೆ ಬಂದಂತಹವನಾದರೆ ಬ್ರಾಹ್ಮಣ ಗುಮಾಸ್ತೆಯು ಆ ಆಫೀಸು ಹುಟ್ಟಿದ ಪುರಾತನದಿಂದಲೂ ಅಲ್ಲೇ ಇದ್ದಂತಹವನು. ಹಾಗಾಗಿ ಬಂದು ಹೋದ ಅಧಿಕಾರಿಗಳೆಲ್ಲರೂ ಗುಮಾಸ್ತೆಗೆ ಅನುಸರಿಸಿಕೊಂಡು ಹೋಗುವುದಾಗುತ್ತಿತ್ತು. ಆದರೆ ಹೊಸದಾಗಿ ಬಂದ ಗೌಡ ಅಧಿಕಾರಿಯು ಹಳಬ ಬ್ರಾಹ್ಮಣ ಗುಮಾಸ್ತೆಗೆ ಕೇರು ಮಾಡದೆ ನಡೆದನು. ಇದರಿಂದಾಗಿ ಗೌಡ ಅಧಿಕಾರಿಯು ಹೇಳಿದ್ದಕ್ಕೆಲ್ಲ ಬ್ರಾಹ್ಮಣ ಗುಮಾಸ್ತೆಯು ಕ್ವಯರಿ ಹಾಕುತ್ತಾ ಎಲ್ಲಾ ಕೆಲಸವೂ ಅಲ್ಲಲ್ಲಿಗೆ ನಿಂತುಬಿಡುತ್ತಿತ್ತು.

ಈ ಗೌಡ ಅಧಿಕಾರಿಯು ಆ ಬ್ರಾಹ್ಮಣ ಗುಮಾಸ್ತೆಗೆ ಒಂದು ಸಲ ಹೇಳಿ ನೋಡಿದನು. ಕ್ವಯರಿ ನಿಲ್ಲಲಿಲ್ಲ. ಎರಡನೆಯ ಸಲವೂ ಹೇಳಿ ನೋಡಿದನು. ಹಾಗೂ ಕ್ವಯರಿ ನಿಲ್ಲಲಿಲ್ಲ. ಕೊನೆಗೆ ತಾಳಲಾರದೆ ಒಂದು ದಿನ ಗೌಡ ಅಧಿಕಾರಿಯು ಬ್ರಾಹ್ಮಣ ಗುಮಾಸ್ತೆಯ ಕಪಾಳಕ್ಕೆ ಹೊಡೆದುಬಿಟ್ಟ. ಪರಿಣಾಮವಾಗಿ ಬ್ರಾಹ್ಮಣ ಗುಮಾಸ್ತೆಯ ಬಾಯಿಂದ ರಕ್ತವೂ ಮತ್ತು ಒಂದು ಹಲ್ಲೂ ಉದುರಿತು. ಬ್ರಾಹ್ಮಣ ಗುಮಾಸ್ತೆಯು ನೋವನ್ನೂ ರಕ್ತವನ್ನೂ ನುಂಗಿಕೊಂಡನು. ತನ್ನ ಉದುರಿದ ಒಂದು ಹಲ್ಲಿಗೆ ಮತ್ತು ಹೋದ ಮಾನಕ್ಕೆ ಬದಲಾಗಿ ಗೌಡ ಅಧಿಕಾರಿಯ ಎರಡು ಹಲ್ಲನ್ನು ತೆಗೆಯುವುದಾಗಿ ಆಗ ಮನದಲ್ಲೇ ಪ್ರತಿಜ್ಞೆ ಮಾಡಿದನು.

ಮನದಲ್ಲೇ ಮಾಡಿದ ಪ್ರತಿಜ್ಞೆಯು ಗುಮಾಸ್ತೆಯ ಮನದಲ್ಲೆ ಉಳಿಯಲಿಲ್ಲ. ಆತ ಒಬ್ಬನಿಗೆ ಹೇಳಿದ್ದು ಇನ್ನೊಬ್ಬನಿಗೆ ತಲುಪಿ ಹೀಗೆ ಸುತ್ತಾಡಿ ಅಧಿಕಾರಿಯ ಕಿವಿಗೂ ಸುದ್ದಿ ತಾಕಿತು. ಇದರಿಂದ ಕುಪಿತನಾದ ಆ ಗೌಡ ಅಧಿಕಾರಿಯು ಈ ಬ್ರಾಹ್ಮಣ ಗುಮಾಸ್ತೆಯನ್ನು ನೀರು ನೆರಳಿಲ್ಲದೆಡೆಗೆ ವರ್ಗ ಮಾಡಿಸಿ ಆ ಗುಮಾಸ್ತೆಯನ್ನೂ ಹಲ್ಲು ಪ್ರಕರಣವನ್ನೂ ಮರೆತುಬಿಟ್ಟನು.

ಹೀಗೆ ವರ್ಷಗಳು ಉರುಳಿದವು. ಆ ಅಧಿಕಾರಿಗೆ ನಿವೃತ್ತಿಯಾಯಿತು. ಇನ್ನು ಪೆನ್ಷನ್ನು ಮತ್ತೊಂದು ಪಡೆದು ಇಳಿಜೀವನ ಸಾಗಿಸಲು ರೆಡಿಯಾದನು. ನಿವೃತ್ತ ಅಧಿಕಾರಿಯ ಪೆನ್ಷನ್ನು ಗ್ರಾಚುಯಿಟಿ ರಿಕಾರ್ಡುಗಳೆಲ್ಲಾ ಓಡಾಡಿ ಇನ್ನೇನು ಹಣ ಕೈಗೆ ಸಿಕ್ಕಿತು ಎಂಬ ಮಟ್ಟಕ್ಕೆ ಬಂತು. ಇನ್ನೇನು ಹಣ ಚೆಕ್ಕು ಪಡೆಯಲು ಬಂದಾಗ ಈ ನಿವೃತ್ತ ಅಧಿಕಾರಿಗೆ ಒಂದು ಸಮಸ್ಯೆ ಎದುರಾಯಿತು. ಏನೆಂದರೆ ನಿವೃತ್ತ ಅಧಿಕಾರಿಯ ಚಹರೆಯಲ್ಲಿ ಸದರಿ ಅಧಿಕಾರಿಯ ಮುಂದಿನ ಎರಡು ಹಲ್ಲುಗಳು ಇಲ್ಲ ಎಂಬುದಾಗಿ ಚಹರೆ ಬರೆಯಲಾಗಿತ್ತು. ಆದರೆ ಆ ನಿವೃತ್ತ ಅಧಿಕಾರಿಗೆ ಹಾಲಿ ಹಲ್ಲಿತ್ತು. ಪ್ರಯುಕ್ತ ದಾಖಲೆಗೆ ತಾಳೆಯಾಗದೆ ಪೆನ್ಷನ್ ಗ್ರಾಚುಯಟಿ ತಡೆಹಿಡಿಯಲಾಗಿತ್ತು. ಬ್ರಾಹ್ಮಣ ಗುಮಾಸ್ತೆಯ ಕಳೆದುಕೊಂಡ ಒಂದು ಹಲ್ಲು ನಗಾಡುತ್ತಿತ್ತು. ಆ ಒಂದು ಹಲ್ಲು, ಎರಡು ಹಲ್ಲಿಗಾಗಿ ಡಿಮ್ಯಾಂಡ್ ಇಟ್ಟಿತ್ತು.

ಅಸಹಾಯಕನಾದ ಅಧಿಕಾರಿಯು ಬಾಯಿ ಮುಚ್ಚಿಕೊಂಡು ಹೊರಬಂದು ದಂತವೈದ್ಯರಿಂದ ತನ್ನ ಮುಂದಿನ ಎರಡೂ ಹಲ್ಲುಗಳನ್ನು ತೆಗೆಸಿ ಪೆನ್ಷನ್ನು ಮತ್ತೊಂದು ಪಡೆದನು ಎಂಬಲ್ಲಿಗೆ ಬ್ರಾಹ್ಮಣ ಗುಮಾಸ್ತೆಯು ಅಧಿಕಾರಿಯ ರಿಜಿಸ್ಟರ್‌ನಲ್ಲಿ ಕೈಯಾಡಿಸಿ ತನ್ನ ಪ್ರತಿಜ್ಞೆಯನ್ನು ಈಡೇರಿಸಿಕೊಂಡ ಎಂಬಲ್ಲಿಗೆ ಕಥೆ ಸಮಾಪ್ತಿಯಾಯಿತು.

ಸ್ನೇಹಿತರೇ, ಚಹರೆಗೆ ಹಲ್ಲನ್ನು ಗುರುತಾಗಿ ಪರಿಗಣಿಸುವುದೂ ಇಲ್ಲ. ಆದರೆ ಗೆಳೆಯ ಬಿ. ಎ. ಉಮ್ಮರಬ್ಬ ಹೇಳಿದ ಈ ಕಥೆ ಪ್ರಚಲಿತದಲ್ಲಿದೆ. ಆದರೆ ಇದು ಕಥೆಯೂ ಅಲ್ಲ. ಗೌಡ ಬ್ರಾಹ್ಮಣನದೂ ಅಲ್ಲ. ಇದು ಲಾಗಾಯ್ತಿನಿಂದ ಪಾಳೆಗಾರಿಕೆ ಜುಟ್ಟು ಹಿಡಿದು ನಡೆದು ಬರುತ್ತಿರುವ ಬ್ರಾಹ್ಮಣ್ಯದ ನಡಿಗೆ.

## ಆಲನಹಳ್ಳಿಗೆ ಅರ್ಥವಾಗುವುದು ಮತ್ತು ಅರ್ಥವಾಗದಿರುವುದು

ನಾನು ಪಿಯುಸಿ ಫೇಲಾಗಿ ನನ್ನೊಳಗೆ ಪಿಯುಸಿ ಪಾಸುಮಾಡುವ, ಕತೆ ಕವನ ಬರೆಯುವ ಆಸೆ ಇಟ್ಟುಕೊಂಡು ಅಲೆದಾಡುತ್ತಿದ್ದಾಗ ಆಗಲೇ ಶ್ರೀಕೃಷ್ಣ ಆಲನಹಳ್ಳಿಯವರ ಹೆಸರು ಕರ್ನಾಟಕದ ತುಂಬಾ ಮೆರೆದಾಡುತ್ತಿತ್ತು. ಹಾಗೂ ಹೀಗೂ ಪರಿಚಯವಾಗಿ ಮೊದಲ ಭೇಟಿಯಲ್ಲೆ ಆಲನಹಳ್ಳಿ ನನ್ನನ್ನು ತನ್ನ ತಮ್ಮನಂತೆ ಕಂಡರು. ಮೈಸೂರಿಗೆ ಬಂದಾಗ ಉಳಿದುಕೊಳ್ಳಲು ಅವರ ರೂಮು ಆಯ್ತು. ಮಹಾರಾಜ ಕಾಲೇಜಿಗೆ ಸೇರಿದಾಗ ಕೆಲಕಾಲ ಗುರುವೂ ಆದರು. ಲಾ ಸೇರಬೇಕೆಂದಿದ್ದ ನನ್ನನ್ನು ಕನ್ನಡ ಎಂಎಗೆ ಒತ್ತಾಯಿಸಿ ಸೇರಿಸಿದರು. ಆಲನಹಳ್ಳಿ ಇಸ್ಪೀಟು ಆಡುವಾಗ, ಅಶುಭ ಅಂತ ಯಾರಿಗೂ ಕಾಸನ್ನು ಎಂಥ ಪರಿಸ್ಥಿತಿಯಲ್ಲೂ ಕೈ ಎತ್ತಿ ಕೊಡುತ್ತಿರಲಿಲ್ಲ. ಇಸ್ಪೀಟನ್ನು ನೋಡುತ್ತಾ ಕೂರುತ್ತಿದ್ದ ನನಗೆ ಆಗಾಗ ತಮ್ಮ ಧರ್ಮ ಸಾಯಿಸಿ ಕಾಸನ್ನೂ ಕೊಡುತ್ತಿದ್ದರು. ಸಿಐಐಎಲ್‌ನಲ್ಲಿ ಇಬ್ಬರಿಗೂ ಜೊತೆಗೇ ಕೆಲಸ ಸಿಕ್ಕಿ ಸಹೋದ್ಯೋಗಿಗಳೂ ಆದೆವು. ಏನನ್ನಾದರೂ ಹಂಚಿಕೊಳ್ಳುವ ಪ್ರಸಂಗ ಬಂದಾಗ ಆಲನಹಳ್ಳಿ 'ನನಗೆ ಫಿಫ್ಟಿ, ನಿನಗೆ ಫಿಫ್ಟಿ ಸರಿನಾ' ಎಂದು ಮಗುವಿನಂತೆ ಅಂತಿದ್ದರು. ಹೀಗೆ ಒಡನಾಟ ಇದ್ದು ಆಲನಹಳ್ಳಿ ತೀರಿಕೊಂಡಾಗ 'ನನ್ನ ಫಿಫ್ಟಿ ಇಲ್ಲವಾಯ್ತು' ಅಂದೆ.

ಆಲನಹಳ್ಳಿಯ ತೋಟ ಮಾಡುವ, ವಿಸ್ತರಿಸುವ ಮಹತ್ವಾಕಾಂಕ್ಷೆಯು ಉತ್ಸಾಹದ ಚಿಲುಮೆ ಆಲನಹಳ್ಳಿಯನ್ನು ಹೆಚ್ಚು ಜರ್ಜರಿತಗೊಳಿಸಿತು. ಆಗಾಗ ಆ ತೋಟಕ್ಕೆ ನಾನೂ ಜೊತೆಯಲ್ಲೇ ಹೋಗುತ್ತಿದ್ದೆ. ಅಲ್ಲಿ ಆಲನಹಳ್ಳಿ ತಳ

ಸಮುದಾಯಕ್ಕೆ ಸೇರಿದ ಕೆಲಸಗಾರರನ್ನು 'ಲೋ ಬಾರ್ಲಾ', 'ಲೇ ಬಾರಮ್ಮಿ' ಎಂದು ಮಾತಾಡಿಸುತ್ತಿದ್ದುದು ಮಾತ್ರ ನನಗೆ ಭರ್ಜಿಯಲ್ಲಿ ತಿವಿದಂತಾಗುತ್ತಿತ್ತು. ನಾನು ತಡೆದೂ ತಡೆದೂ ತಡೆಯಲಾರದೆ ಒಂದು ದಿನ 'ಹಿಂಗೆಲ್ಲ ಮಾತಾಡ್ಸದು ಸರೀನಾ?' ಅಂದೆ. ಅದಕ್ಕೆ ಆಲನಹಳ್ಳಿ ಗಹಗಹಿಸಿ ನಕ್ಕು 'ಅದ್ಕೆ ಮಾದೇವ, ನಿನಗೆ ಏನೂ ಗೊತ್ತಾಗಲ್ಲ ಅನ್ನದು. ನಾನು ಹಾಗೆ ಮಾತಾಡಿಸದೇ ಇದ್ದರೆ ಅವ್ರು ಬೇಜಾರು ಮಾಡ್ಕಬುಡ್ತರೆ. ನಿನಗೆ ಹಳ್ಳೀನೆ ಗೊತ್ತಿಲ್ಲ' ಅಂದರು. ಆಲನಹಳ್ಳಿ ಹೀಗೆ ಅಂದಿದ್ದರೂ ಅವರ ಒಳಗೆ ಜಾತಿ ಸೋಂಕಿಲ್ಲ ಎಂಬುದರ ಅರಿವಿತ್ತು.

ಹೀಗೆ ಆಗ್ತಾ ಒಂದು ದಿನ ಆಲನಹಳ್ಳಿ ಗಂಟಲಲ್ಲಿ ಏನನ್ನೊ ಇಟ್ಟುಕೊಂಡು ನುಂಗಕ್ಕೂ ಆಗ್ತಾ ಇಲ್ಲ ಉಗಿಯಾಕೂ ಆಗ್ತಾ ಇಲ್ಲ ಎಂಬಂತೆ ಇದ್ದರು. ಏನು ಸಮಾಚಾರ ಅಂದೆ. ಏನೂ ಇಲ್ಲ ಅಂತ ಮಾತು ಮರೆಸಿದರು. ಹೇಳಕೂ ಆಗ್ದೆ ಬಿಡಕೂ ಆಗ್ದೆ ಒದ್ದಾಡುತ್ತಿದ್ದ ಆಲನಹಳ್ಳಿ ಎಷ್ಟು ಕಾಲ ತಾನೇ ತಡೆದುಕೊಂಡಾರು? ನಿಧಾನಕ್ಕೆ ಬಾಯಿಬಿಟ್ಟರು. 'ನೆನ್ನೆ ಮುಖ್ಯಮಂತ್ರಿ ಅರಸು ಅವರ ಮನೆಗೆ ಹೋಗಿದ್ದೆ. ನನ್ನನ್ನು ನೋಡಿ ಫುಲ್ ಖುಷಿಯಾಗಿ ಬಿಟ್ಟರು' ಎಂದು ಹೇಳಿ ನನ್ನ ಕಡೆಗೊಮ್ಮೆ ನೋಡಿ ಅವರೇ ಮಾತು ಮುಂದುವರಿಸಿದರು–

'ಆಮೇಲೆ ಅವರಿಗಿಂತಲೂ ಹೆಚ್ಚು ಖುಷಿಯಾದ್ದು ಯಾರಿಗೆ ಗೊತ್ತಾ? ಮುಖ್ಯಮಂತ್ರಿ ಅರಸು ಅವರ ಮಗಳಿಗೆ! ಆಲನಹಳ್ಳಿ ಕೃಷ್ಣ ಬಂದವರೆ ಎಂದು ಗೊತ್ತಾದ್ದೇ ತಡ, ಆ ತಿಂಡಿ ಏನು ಆ ಡ್ರಿಂಕ್ಸ್ ಏನು?' ಎಂದು ಹೇಳಿ ಆಮೇಲೆ–

'ಆಮೇಲೆ ಇನ್ನೊಂದು ಗೊತ್ತಾ? ನಾನು ಬರೆದಿರೋದ ಎಲ್ಲಾ ಓದವರೆ ಮುಖ್ಯಮಂತ್ರಿ ಮಗಳು! ನನಗೆ ಆಶ್ಚರ್ಯ ಆಯ್ತು!'

ಇದನ್ನು ಹೇಳಿದ ಮೇಲೆ ತಮ್ಮ ಮಾತಿನ ಓಟಕ್ಕೆ ಒಂದು ಫ಼ಾಸ್ ಕೊಟ್ಟು ಮುಂದುವರೆಸಿದಿರು.

'ಆದರೆ ಅರಸು ಮಗಳು ಒಂದು ತಪ್ಪು ಮಾಡಿಬಿಟ್ಟಳು. ಅದೇ ನಾನು ಅವರ ಮನೆಗೆ ಬಂದ ಖುಷಿಗೆ ಓಡೋಗಿ ಅವರ ತಾಯಿನ ಕರ್ಕಂಬಂದ್ಬುಟ್ರು...'

'ಅದರಲ್ಲೇನು ತಪ್ಪು' ಅಂದೆ.

'ಆದ್ರೆ ಮಾದೇವ ಹೇಳ್ತೀನಿ– ಅರಸು ಹೆಂಡ್ತಿಯಂತು ಫುಲ್ ಅನ್‌ಕಲ್ಚರ್ಡ್ ಲೇಡಿ, ಅನಾಗರಿಕಳು'

ಅರ್ಥವಾಗದೆ ಆಲನಹಳ್ಳಿ ಮುಖ ನೋಡಿದೆ. ಅವರ ಮುಖದಲ್ಲಿ ದುಮ್ಮಾನವಿತ್ತು. ಆಲನಹಳ್ಳಿ ಮಾತನ್ನು ತಡೆದೂ ತಡೆದು ಹೇಳತೊಡಗಿದರು–

'ಕೇಳಿದರೆ... ನಿಂಗೂ ಬೇಜಾರಾಗುತ್ತೆ. ಅರಸು ಮಗಳು ತನ್ನ ತಾಯಿಗೆ 'ಅಮ್ಮಾ ಇವರೇ ಆಲನಹಳ್ಳಿ ಕೃಷ್ಣ. ಸಿಕ್ಕಾಬಟ್ಟೆ ದೊಡ್ಡ ಕವಿ' ಅಂತ ಪರಿಚಯ ಮಾಡಿಕೊಟ್ಟರೆ ಅದಕ್ಕೆ ಅರಸು ಹೆಂಡ್ತಿ 'ಯಾರಯ್ಯ ಅಲ್ಲಿ ನೀನು...? ಅಲ್ಲಿ ಯಾರೊ ಎತ್ತೇಗೌಡ್ನೊ ಏನೋ ಅಂತ ಇದ್ನಲ್ಲಾ...? ಅವನ ಮೊಮ್ಮಗನ್ಯೆ?' ಅಂತ ಕೇಳಿಬಿಡುವುದೆ?'

ಆಲನಹಳ್ಳಿಗೆ ಮುಂದಕ್ಕೆ ಮಾತಾಡಲು ಕಷ್ಟವಾಗುತ್ತಿತ್ತು. ಆಲನಹಳ್ಳಿ ದುಃಖಿತರಾಗಿದ್ದರು. ನಾನು ನನ್ನ ಸುಖ ಹಂಚಿಕೊಳ್ಳಲು 'ಇದಕ್ಕೆ ಯಾಕೆ ಬೇಜಾರು? ಆ ರೀತಿ ಮಾತಾಡದಿದ್ದರೆ ನಿಮಗೆ ಬೇಜಾರು ಆಗಬಹುದು ಅಂತ ಅರಸು ಪತ್ನಿ ಆ ರೀತಿ ಮಾತಾಡಿರಬಹುದು!' ಅಂದೆ.

ಆಲನಹಳ್ಳಿಗೆ ಅರ್ಥವಾಗದೇ ಇದ್ದುದು ಅರ್ಥವಾಗತೊಡಗಿದೆ ಅನ್ನಿಸತೊಡಗಿತು.

## ಒಂದು ಒಳನೋಟ

ಯಾವುದನ್ನಾಗಲೀ ಎಷ್ಟು ಮತ್ತು ಹೇಗೆ ಪ್ರತಿಭಟಿಸಬೇಕೆಂದು ನನಗೆ ತಿಳಿವಿನ ಸುಳಿವು ಕೊಟ್ಟ ಒಂದು ಘಟನೆ ಮುಂದಿಡುವೆ: ಹಿಂದೆ ಒಂದ್ಸಲ ನಂಜನಗೂಡು ದಲಿತ ವಿದ್ಯಾರ್ಥಿನಿಲಯಕ್ಕೆ ಹೋಗಿದ್ದೆ. ಅಲ್ಲಿ ದಲಿತ ವಿದ್ಯಾರ್ಥಿಯೊಬ್ಬ ಚೆಂಬಿನಲ್ಲಿ ನೀರ್ಹಿಡಿದು ಅತಿ ದಲಿತನಾದ ಪೌರಕಾರ್ಮಿಕನೊಬ್ಬನ ಕೈ ಬೊಗಸೆಗೆ ಎತ್ತರದಿಂದ ನೀರುಹಾಕುತ್ತಾ ನೀರು ಕುಡಿಸುತ್ತಿದ್ದನು. ಅಂದು ನನ್ನನ್ನು ತಲ್ಲಣಿಸಿದ ಇದು ಇಂದೂ ಗಂಟಲಲ್ಲಿ ನೀರು ಸಿಕ್ಕಿಕೊಂಡಂತೆ ಮರೆಯಲಾಗದೆ ಉಳಿದಿದೆ.

ಹೇಳಿ, ಸವರ್ಣೀಯನೊಬ್ಬ ನನಗೆ ಅಥವಾ ನಿಮಗೆ ಬೊಗಸೆ ನೀರು ಕುಡಿಸಲು ಬಂದಾಗ ನಮ್ಮ ಒಡಲೊಳಗೆ ಉಂಟಾಗುವ ಅಲ್ಲೋಲ ಕಲ್ಲೋಲಗಳು ಏನೇನು? ಎಷ್ಟೆಷ್ಟು? ಕೋಪ ದ್ವೇಷದಿಂದ ಸೇಡಿನ ಭಾವಾವೇಶಕ್ಕೆ ಒಳಗಾಗುವ ನಾವು ಸ್ವಾಭಿಮಾನ ಸಮಾನತೆಗಾಗಿ ಕುದಿಯುತ್ತೇವೆ. ಆದರೆ ಯಾವುದನ್ನು ಬೇರೆಯವರು ಮಾಡಿದಾಗ ನಮಗೆ ಅಪ್ರಿಯವಾಗುವುದೋ ಅದನ್ನೇ ನಾವು ಇತರರಿಗೆ ಮಾಡುವಾಗ ಅದೇ ನಮಗೆ ಪ್ರಿಯವಾಗುವುದಾದರೆ ಏನು ಅಂತ? ಇದನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗುತ್ತದೆ. ಅಥವಾ ಹೀಗಿರಬಹುದೇ? ಮೊದಲನೆಯದು ಸಹಜ, ಪ್ರಾಣಿಸಹಜ ಕೋಪ. ಈ 'ಪ್ರಾಣಿಸಹಜ ಕೋಪ' ತನ್ನನ್ನು ಮೀರಿಕೊಂಡು 'ತಾತ್ವಿಕ ಕೋಪ'ವಾಗಿ ನಮ್ಮೊಳಗೆ ರೂಪಾಂತರ ಪಡೆಯಬೇಕು. ಆಗ ಸವರ್ಣೀಯನೊಬ್ಬಗೆ ಒಬ್ಬ ದಲಿತನೇ ಕೈಬೊಗಸೆ ನೀರು ಕುಡಿಸುತ್ತಿದ್ದರೂ ಇದು ನಮ್ಮನ್ನು ಧೃತಿಗೆಡಿಸುತ್ತದೆ.

ಇಲ್ಲಿ ಗಂಗೊತ್ರಿಯಲ್ಲಿ ದಲಿತರ ಬಗ್ಗೆ ಅಸಹನೆ ತಾರತಮ್ಯಗಳು ಸಾಕಷ್ಟು ಇವೆ. ಉದಾಹರಣೆಗೆ ಒಬ್ಬ ಸವರ್ಣೀಯ ಅಧ್ಯಾಪಕ ತನ್ನ ಸ್ವಜಾತಿ ವಿದ್ಯಾರ್ಥಿಗೆ ಸ್ವಸಂತೋಷದಿಂದಲೇ ಹೆಚ್ಚು ಅಂಕ ಕೊಟ್ಟು ಬೇರೆಯವರಿಗೆ ಅದರಲ್ಲೂ ದಲಿತರಿಗೆ ತಾರತಮ್ಯ ಮಾಡಿರಬಹುದಾದ ಅನೈತಿಕತೆಯಂಥವು ಒಂದೆರಡಲ್ಲ. ಇವನ್ನು ಹೇಗೆ ಮತ್ತು ಎಷ್ಟು ಪ್ರತಿಭಟಿಸಬೇಕು? ಇನ್ನೊಬ್ಬರಿಗೆ ಹೆಚ್ಚು ಕೊಟ್ಟಂತೆ ನನಗೂ ಹೆಚ್ಚು ಕೊಡು ಎಂದು ಕೇಳುವುದು ಆ ಅನೈತಿಕತೆಯಲ್ಲಿ ಪಾಲು ಕೇಳಿದಂತಾಗುತ್ತದೆ. ಹಾಗೂ ಆ ಅಧ್ಯಾಪಕ ದಲಿತ ವಿದ್ಯಾರ್ಥಿಗಳೊಡನೆ ಅಂಥಾ ಅನೈತಿಕ ಸಂಬಂಧಕ್ಕೆ ನಿರಾಕರಿಸಿದಾಗ ಆತನಿಗೆ ಬೆದರಿಕೆ ಹಾಕಿ ಪಾಲು ತೆಗೆದುಕೊಳ್ಳುವುದು ಬಲತ್ಕಾರದ ಸಂಬಂಧದಂತಾಗುತ್ತದೆ. ಒಂದು ತಪ್ಪು ಹೋಗಿ ಎರಡಾಗುತ್ತದೆ. ಈ ಬಲಾತ್ಕಾರ, ಒತ್ತಡ ಬೇರೆಯವರು ಮಾಡುವುದಿಲ್ಲವೇ? ನಾವೇಕೆ ಮಾಡಬಾರದು ಎಂಬುದು ದಲಿತರ ಮನಸ್ಸಿನಲ್ಲಿ ಏಳಬಹುದು. ಕಲುಷಿತವಾಗಿರುವ ಹಿಂದೂ ಧರ್ಮದ ಕಾರಣವಾಗಿ ಸವರ್ಣೀಯ ತಪ್ಪು ಮಾಡಿದಾಗ ಆ ತಪ್ಪು ಮಾಡಿದ ವ್ಯಕ್ತಿಯನ್ನು ಮಾತ್ರ ಹಿಡಿದುಕೊಳ್ಳುತ್ತದೆ. ಆದರೆ ಅದೇ ತಪ್ಪನ್ನು ಒಬ್ಬ ದಲಿತ ಮಾಡಿದರೆ ಆ ತಪ್ಪು ಮಾಡಿದ ದಲಿತನನ್ನು ಮಾತ್ರ ಹಿಡಿದುಕೊಳ್ಳದೆ, ಆತ ಹುಟ್ಟಿದ ದಲಿತ ಜನಾಂಗವನ್ನೂ ಹಿಡಿದುಕೊಳ್ಳಲು ಹವಣಿಸುತ್ತದೆ– ನಡಾವಳಿ ಇರುವುದು ಹೀಗೆ.

ಆದ್ದರಿಂದಲೇ ದಲಿತ ಒಂದು ತಪ್ಪು ಮಾಡಿದರೂ ಅದೇ ಹತ್ತಾಗಿ ರಾವಣನ ರೂಪದಲ್ಲಿ ಈ ಸಮಾಜಕ್ಕೆ ಕಾಣಿಸಿಕೊಳ್ಳುತ್ತದೆ. ಹೀಗಿರುವಾಗ ಒಬ್ಬ ದಲಿತ ವಿದ್ಯಾರ್ಥಿಯು ಸವರ್ಣೀಯ ಅಧ್ಯಾಪಕನನ್ನು ಬೆದರಿಸಿ ಬಲಾತ್ಕಾರದಿಂದ ಹೆಚ್ಚು ಅಂಕ ಹಾಕಿಸಿಕೊಂಡರೆ– ಹೀಗೆ ಭಯದಿಂದ ಹೆಚ್ಚು ಅಂಕ ನೀಡಿದ ಅಧ್ಯಾಪಕನು ತನ್ನ ಸೇವಾವಧಿ ಮುಗಿಯುವವರೆಗೂ ತನ್ನ ಪರಿಧಿಯೊಳಗೆ ಮುಂದೆ ಬರುವ ದಲಿತ ವಿದ್ಯಾರ್ಥಿಗಳಿಗೆ ನಗುವಿನೊಡನೆ ಹೇಗೇಗೆ ಎಷ್ಟೆಷ್ಟು ಮುಗಿಸಬಹುದೊ ಅಷ್ಟಷ್ಟು ಮುಗಿಸುತ್ತಾ ಸೇವೆ ಸಲ್ಲಿಸುತ್ತಾನೆ.

ಮಿಗಿಲಾಗಿ ಇಲ್ಲಿ ದಲಿತ ವಿದ್ಯಾರ್ಥಿಯೊಬ್ಬ ಸವರ್ಣೀಯನೊಬ್ಬನಿಗೆ ಹೊಡೆದ ಏಟು ಗರಿಗೆದರಿಕೊಂಡು ರಣಹದ್ದಾಗಿ ರೂಪಾಂತರಗೊಂಡು ಹಳ್ಳಿಗಾಡಿನ ಒಂಟಿ ದಲಿತನ ಜೋಪಡಿಯ ಮೇಲೆ ಇದಕ್ಕೆಲ್ಲಾ ಸಂಬಂಧವೇ ಇಲ್ಲದ ದಲಿತನ ಬಲಿಗಾಗಿ, ಅಲ್ಲಿ ಯಾವುದಾದರೂ ಜಾತಿ ಜಗಳದ ನೆಪಕ್ಕಾಗಿ ಕಾಯುತ್ತಾ ಸುತ್ತುತ್ತಿರುತ್ತದೆ. ಹೀಗೆ ಕಾಣಿಸುವ ತಲ್ಲಣದಿಂದಾಗಿ ನಾನು ಅಲ್ಲಾಡುವೆ.

ಅದಕ್ಕಾಗೇ ದಲಿತ ವಿದ್ಯಾರ್ಥಿಗಳು ತಾವೂ ಒಳಗಾಗಬಹುದಾದ ತಾರತಮ್ಯವಿಲ್ಲದ 'ಸಮಾನ ನ್ಯಾಯ'ಕ್ಕಾಗಿ ಹೆಜ್ಜೆ ಇಟ್ಟರೆ ಮಾತ್ರ ತಾವೂ ಉಳಿದು ಇತರರನ್ನೂ ಉಳಿಸಬಲ್ಲರು.

ಹೀಗೆ ನಾನು ಹೇಳುವುದು ಮತ್ತೂ ಗೊಂದಲಕ್ಕೆ ಕಾರಣವಾದರೆ ನನಗೆ ಹೇಗೆ ಹೇಳಬೇಕೋ ತಿಳಿಯದು. ಕನ್ನಡ ನಾಡಿನ ಮಣ್ಣಿನಲ್ಲಿ ಒಬ್ಬ ನಾಡಾಡಿ ಕಟ್ಟಿದ 'ದೈಹಿಕವಾಗಿ ದುರ್ಬಲನಾದ ಶೋಷಿತನ ನಿಜದ ಎದುರು ದೈಹಿಕ ಪ್ರಬಲನಾದ ಶೋಷಕ ತಂತಾನೇ ಕುಸಿಯುತ್ತಾನೆ' ಎಂಬ ಸತ್ಯವನ್ನು ತನ್ನ ಗರ್ಭದಲ್ಲಿ ಇಟ್ಟುಕೊಂಡ ಗೋವಿನ ಕಥೆಯು ಪಂಡಿತರಿಗೇ ಅರ್ಥವಾಗದಿರುವ ಪರಿಸ್ಥಿತಿ ಇರುವಾಗ ಹೇಗೆ ಹೇಳಬೇಕೋ ತಿಳಿಯದಾಗಿದೆ.

## ಅಶೋಕಪುರಂ ಗೋವಿಂದರಾಜುವಿಗೆ ಹೆಣ್ಣಿಲ್ಲ?

ಮೈಸೂರು ಅಶೋಕಪುರಂನಲ್ಲಾಗುತ್ತಿದ್ದ ಗೀತಾ ಪ್ರವಚನವು ಪ್ರತಿಭಟನೆಗೆ ಸಿಕ್ಕು ಅರ್ಧಕ್ಕೆ ನಿಂತದ್ದು ಇನ್ನೂ ನೆನಪಿನಿಂದ ಒಣಗಿಲ್ಲ. ಆಗ ಗೀತಾ ಪ್ರವಚನ ನಡೆಸಿದರೆ ತಪ್ಪೇನು ಎಂದು ಕೇಳಲಾಗುತ್ತಿತ್ತು. ಇಂದು ನಾವು ಜೀವಿಸುತ್ತಿರುವ ಕಾಲವು, 'ದೇವರೇ ಚಾತುರ್ವರ್ಣವನ್ನು ಸೃಷ್ಟಿಸಿದ' ಎಂದೆನ್ನುವ ಗೀತೆಯೊಡನೆ ಹೊಡೆದಾಡಿ ರಕ್ತ ಸುರಿಸಿ 'ಚಾತುರ್ವರ್ಣ ಜಾತಿಗಳು ಮಾನವ ಮಾಡಿಕೊಂಡಿದ್ದು' ಎಂಬ ನಂಬಿಕೆಯನ್ನು ಕಷ್ಟಪಟ್ಟು ಸಂಪಾದಿಸಿಕೊಂಡಿದೆ. ಅದುವರೆಗಿನ ಕಾಲದ ನಡಿಗೆಯಲ್ಲಿ 'ಜಾತಿ ದೇವರ ಸೃಷ್ಟಿ' ಎಂದು ನಂಬಿದ ತುಳಿಯುವವರೂ ಚೆನ್ನಾಗಿ ತುಳಿದು; 'ಜಾತಿ ದೇವರ ಕಟ್ಟಳೆ' ಎಂದು ನಂಬಿದ ತುಳಿಸಿಕೊಳ್ಳುವವರೂ ಚೆನ್ನಾಗಿ ತುಳಿಸಿಕೊಂಡು ಇದರಿಂದಾಗಿ ಚೆಲ್ಲಿದ ರಕ್ತವು ಹರಿದರೆ ನದಿಯಷ್ಟು, ನಿಂತರೆ ಸರೋವರದಷ್ಟು. ಇಷ್ಟೊಂದು ಸಾಲದೆ? ಈಗಾಗಲೇ ಸವರ್ಣೀಯ ಗೀತಾ ಪ್ರವಚನಕಾರರಿಗೆ ಅಶೋಕಪುರಂನ ಗೋವಿಂದರಾಜುರು 'ನಿಮ್ಮ ಹೆಣ್ಣುಗಳ ನಮಗೆ ಕೊಡ್ತೀರಾ?' ಎಂದು ಕೇಳಿದರು. ಪ್ರವಚನಕಾರರೇನು ಉತ್ತರಿಸಿದಂತೆ ಕಾಣಲಿಲ್ಲ. ಈ ಪರಿಸ್ಥಿತಿಯಲ್ಲಿ ಅಸ್ಪೃಶ್ಯ ಗೋವಿಂದರಾಜುವಿಗೆ ಸವರ್ಣೀಯ ಹೆಣ್ಣು ಸಿಗಬಹುದೇ ಎಂದು ಗೀತೆಯಲ್ಲೆಲ್ಲಾ ಹುಡುಕಾಡಿದಾಗ ಗೀತೆ ಹೇಳುತ್ತದೆ:

**ಕುಲಕ್ಷಯೇ ಪ್ರಣಶ್ಯಂತಿ**
**ಕುಲಧರ್ಮಾ ಸನಾತನಃ।**
**ಧರ್ಮೇ ನಷ್ಟೇ ಕುಲಂಕೃತ್ಸ್ನಂ**
**ಅಧರ್ಮೋಽಭಿಭವತ್ಯುತ॥**

ಅಂದರೆ, 'ಕುಲವು ಕೆಟ್ಟರೆ ಸನಾತನ ಕುಲಧರ್ಮಗಳು ನಾಶವಾಗುತ್ತದೆ. ಧರ್ಮವು ಹಾಳಾದರೆ ಅಧರ್ಮವು ವ್ಯಾಪಿಸುತ್ತದೆ' – ಹೀಗೆ ಕುಲಗೆಟ್ಟ ಸನಾತನ ಧರ್ಮ ನಾಶವಾಗಿ ಅಧರ್ಮ ಹೆಚ್ಚಿದರೆ ಮಾತ್ರ ಶ್ರೀ ಗೋವಿಂದರಾಜುವಿಗೆ ಛಾನ್ಸು ಇದೆ. ಯಾಕೆಂದರೆ,

**ಅಧರ್ಮಾಭಿ ಭವಾತ್ ಕೃಷ್ಣ**
**ಪ್ರದುಷ್ಯಂತಿ ಕುಲಸ್ತ್ರೀಯಃ।**
**ಸ್ತ್ರೀಷು ದುಷ್ಟಾಸು ವಾರ್ಷ್ಣೇಯ**
**ಜಾಯತೆ ವರ್ಣಸಂಕರಃ॥**

ಅಂದರೆ 'ಅಧರ್ಮವು ಪ್ರಬಲವಾದರೆ ಕುಲಸ್ತ್ರೀಯರು ಕೆಟ್ಟು ಹೋಗುವರು. ಸ್ತ್ರೀಯರು ಕೆಟ್ಟರೆ ಜಾತಿ ಸಂಕರವು ಏರ್ಪಡುತ್ತದೆ'.

ಈ ಪ್ರಕಾರವಾಗಿ ಮೇಲ್ಕಂಡ ಗೋವಿಂದರಾಜುವಿಗೆ ಸವರ್ಣೀಯ ಹೆಣ್ಣು ಸಿಗಬೇಕಾದರೆ ಅಧರ್ಮವು ಪ್ರಬಲವಾಗಬೇಕು. ಸ್ತ್ರೀಯರು ಕೆಡಬೇಕು. ಪರಿಣಾಮವಾಗಿ ಜಾತಿ ಸಂಕರವು ಏರ್ಪಡಬೇಕು.

ಇಲ್ಲಿ ತಿಳಿದುಬರುವ ನೀತಿಯೆಂದರೆ ಸವರ್ಣೀಯರಿಗೆ ತಮ್ಮ ಹೆಂಗಳೆಯರ ಬಗ್ಗೆ ಇರುವ ಅಪನಂಬಿಕೆಯೇ ಗೋವಿಂದರಾಜುರಂಥವರಿಗೆ ಉಳಿದಿರುವ ಏಕೈಕ ನಂಬಿಕೆಯಾಗಿದೆ.

ಆಯಿತು, ಅದೆಲ್ಲಾ ಆಗಿಯೂ ಅಸ್ಪೃಶ್ಯ ಗೋವಿಂದರಾಜುವಿಗೆ ಸವರ್ಣೀಯ ಹೆಣ್ಣು ಸಿಕ್ಕಿದರೂ ಅಲ್ಲಿಗೇ ಮುಗಿಯುವುದಿಲ್ಲ. ನಮ್ಮೆದುರು ನರಕವಿದೆ. ಗೀತೆ ಹೇಳುತ್ತದೆ:

**ಸಂಕರೋ ನರಕಾಯೈವ**
**ಕುಲಘ್ನಾನಂ ಕುಲಸ್ಯಚ**

ಅಂದರೆ, 'ವರ್ಣ ಸಂಕರವು ಏರ್ಪಟ್ಟರೆ ಕುಲಕ್ಕೆ ಮತ್ತು ಕುಲನಾಶಕರಿಗೆ ನರಕವುಂಟಾಗುವುದು' ಎಂದು!

ಆದ್ದರಿಂದ ಪ್ರೀತಿಯ ಗೋವಿಂದರಾಜು, ಸವರ್ಣೀಯ ಅಮಾನವೀಯರು ಕಟ್ಟಿರುವ ನರಕವನ್ನು ನಾಶಮಾಡಿರಿ, ಗೀತಾ ಎಂಬ ಹೆಸರಿನ ಸವರ್ಣೀಯ ಹುಡುಗಿಯು ನಿಮ್ಮವಳಾಗಲಿ.

## ಆರ್ಮುಗಂ, ಪ್ರಸಾದ್‌ಗೆ ನಿದ್ದೆ ಬಾರದಿರಲಿ

ಫೆಬ್ರವರಿ ಇಪ್ಪತ್ತೇಳರ ರಾತ್ರಿ ಇಡೀ ನನಗೆ ನಿದ್ದೆ ಬರಲಿಲ್ಲ. ನನ್ನ ದೇಹ ಸಂಕಟ ತುಂಬಿ ಯಾತನೆ ಪಡುತ್ತಿತ್ತು. ದಲಿತನ ಗರೀಬನ ಬೆಳಕಾದ ದಸಂಸವು ಕರ್ನಾಟಕದ ದಲಿತ ಮಂತ್ರಿ ಶಾಸಕರ ಮನೆಯ ಮುಂದೆ ಫೆಬ್ರವರಿ ಇಪ್ಪತ್ತೇಳರಂದು ಧರಣಿ ನಡೆಸಿದಾಗ, ಕೆ.ಜಿ.ಎಫ್ ನಲ್ಲಿ ಆರ್ಮುಗಂ ಬೆಂಬಲಿಗರು ಹಾಗೂ ಮೈಸೂರಿನಲ್ಲಿ ಶ್ರೀನಿವಾಸ ಪ್ರಸಾದ್‌ರವರು ಸತ್ಯಾಗ್ರಹಿಗಳ ಮೇಲೆ ಕೈ ಮಾಡಿ ಏಳೇಳು ಸಮುದ್ರದ ನೀರು ತಂದು ತೊಳೆದರೂ ಅಳಿಸಲಾರದ ಪಾಪವನ್ನು ತಮ್ಮಗಳ ಕೈಗೆ ಅಂಟಿಸಿಕೊಂಡರು. ಈ ಪಾಪದ ಕೈಯಂತಹ ರಾಜಕೀಯದಲ್ಲಿ ಸಾವಿರ ಸಾವಿರ ದಲಿತರ ಮೇಲೆ ಹಲ್ಲೆ ಕೊಲೆಗಳಾದರೂ ಕಂಡೂ ಕಣ್ಮುಚ್ಚಿರುವ ದಲಿತ ಮಂತ್ರಿ ಶಾಸಕರ ಸತ್ತತನವನ್ನು ಎಚ್ಚರಿಸುವುದಕ್ಕಾಗಿ ಧರಣಿಯಾಗಿತ್ತು. ಈ ಮಂತ್ರಿ ಶಾಸಕರಾಗಿ ದಲಿತರೆನ್ನಿಸಿಕೊಂಡವರು ಒಂದೇ ಒಂದು ಸಲವಾದರೂ ಒಟ್ಟಾಗಿ ದಲಿತರ ಕೊಲೆ ಹಲ್ಲೆ ಇನ್ನು ಸಹಿಸೆವು ಎಂದಿದ್ದರೆ ಕೇವಲ ಅಂದಿದ್ದರೆ– ಬೆಂಕಿಗೆ ಎಸೆಯಲ್ಪಟ್ಟ ಎಷ್ಟೋ ಕಂದಮ್ಮಗಳು ಇಂದು ಉಳಿದು ಉಸಿರಾಡುತ್ತಿದ್ದವು. ದಲಿತರಾಗಿ ಈ ಧರೆ ಮೇಲೆ ಹುಟ್ಟಿದ್ದಕ್ಕೆ ದೇಹ ಎನ್ನುವುದನ್ನು ತುಂಡು ತುಂಡಾಗಿ ಕತ್ತರಿಸಲ್ಪಟ್ಟಿದ್ದರಿಂದ ಉಸಿರು ಕಳೆದುಕೊಂಡ ಎಷ್ಟೋ ಜೀವಿಗಳು ಜೀವಂತವಾಗಿರುತ್ತಿದ್ದವು. ಇಂದು ಗಾಳಿಯಲ್ಲಿ ತೇಲಾಡುತ್ತಿರುವ ಅತ್ಯಾಚಾರಕ್ಕೆ ಒಳಗಾದ ನಮ್ಮ ಅಕ್ಕ ತಂಗಿಯರ ನಿಟ್ಟುಸಿರು ಆಕ್ರಂದನಗಳು ಇರುತ್ತಿರಲಿಲ್ಲ. ಇಷ್ಟಿದ್ದೂ ಇವೆಲ್ಲವುಗಳಿಂದಲೂ ದಲಿತ ಮಂತ್ರಿ ಶಾಸಕರ ಕಠೋರ ಜಡಸ್ಥಿತಿಯನ್ನು ಮುಂದಿಟ್ಟು ಅವರ ಹೊಣೆಯನ್ನು ಹೆಚ್ಚಿಸಲು ಹೊರಟರೆ, ಆರ್ಮುಗಂ ಪ್ರಸಾದ್‌ರು ಅರಿವಿಲ್ಲದವರಾದರು. ದಲಿತರನ್ನು ಇತರರು

ಕೊಲ್ಲುವುದೂ, ಇವರು ದಲಿತ ಜನಪ್ರತಿನಿಧಿಗಳಾಗಿ ದಲಿತರ ಮೇಲೆ ಕೈ ಮಾಡುವುದೂ ಎರಡೂ ಸಮಾನ. ಮೈಸೂರಿನಲ್ಲಿ ಪ್ರಸಾದ್ ಮನೆಯ ಮುಂದೆ ನಡೆಯುತ್ತಿದ್ದ ಧರಣಿ ಮಧ್ಯಾಹ್ನ ನಿಂತು ಬಿಕೋ ಅಂದಾಗ ಸ್ವಲ್ಪ ದುಡುಕು ಸ್ವಭಾವದ ಪ್ರಸಾದ್‌ರ ತಮ್ಮ ಗಲಾಟೆ ಮಾಡಿ ಈ ರೀತಿಯಾಗಿರಬೇಕು ಎಂದುಕೊಂಡೆ. ಆಮೇಲೆ ನಿಂತ ಧರಣಿಯನ್ನು ಮುಂದುವರೆಸಿ ರಾತ್ರಿಯಾದ ಮೇಲೆ ಪ್ರಸಾದರೇ ಕೈ ಮಾಡಿದ್ದಾರೆಂದು ತಿಳಿದು ತಲ್ಲಣಿಸಿ ಹೋದೆ. ಆ ಇಡೀ ರಾತ್ರಿ ಇಡೀ ಕೋಪವಿಲ್ಲದೆ, ಸೇಡಿಲ್ಲದೆ, ದ್ವೇಷವಿಲ್ಲದೆ ನಮ್ಮ ಸ್ಥಿತಿಗೆ ಸಂಕಟವೇ ನಾನಾಗಿ ಉರಿದಂತೆ ಉರಿದೆ.

ಹಿಂದೊಂದು ಕಾಲದಲ್ಲಿ ಆರ್ಮುಗಂ ಯುವಕರಾಗಿದ್ದಾಗ ದಲಿತ ಜನಾಂಗದ ಯಾತನಾ ಬಾಳಿಗೆ ಪ್ರತಿನಿಧಿ ಎನ್ನಿಸಿದ್ದರು. ದಲಿತರ ಮೇಲಿನ ಅನ್ಯಾಯ ಅತ್ಯಾಚಾರ ಪ್ರತಿಭಟಿಸುತ್ತಿದ್ದುದಕ್ಕಾಗಿ ಆ ಮಾಜಿ ತರುಣ ಆರ್ಮುಗಂ ಮೈಮೇಲೆ, ಮುಖದ ಮೇಲೆ ಹೊಡೆತ ಬಡಿತಗಳು ಬಿದ್ದು, ಆ ಗಾಯಗಳಿಂದಾದ ಗುರುತುಳಿತಗಳನ್ನು ಈಗ ಹಾಲಿ ಆರ್ಮುಗಂರು ತಮ್ಮ ದೇಹದ ಗಾಯದ ಗುರುತನ್ನು ಸೂಟಿನಿಂದಲೂ, ಮುಖದ ಗಾಯದ ಗುರುತನ್ನು ಗಡ್ಡದ ಕೂದಲುಗಳಿಂದಲೂ ಮುಚ್ಚಿಕೊಂಡು, ಹೀಗೆ ಮುಚ್ಚಿಕೊಂಡಂತೆಲ್ಲಾ ಇವರು ತಮ್ಮನ್ನು ತಾವು ಬಂದ ಸ್ಥಳವನ್ನು ಮರೆತು ಕಣ್ಮುಚ್ಚಿದರು. ಇದರಿಂದಾಗಿ 'ದಲಿತರ ಕೊಲೆ ತಪ್ಪಿಸಿ' ಎಂಬ ಕೂಗಿಗೇ ಕೈ ಮಾಡುವಂತಾದರು. ಇತ್ತ ಶ್ರೀನಿವಾಸಪ್ರಸಾದ್ ಇನ್ನೂ ಆರ್ಮುಗಂ ಆಗಿಲ್ಲದಿದ್ದರೂ ದಲಿತರ ದನಿ ಮೇಲೆಯೇ ಕೈಎತ್ತಿ ಆರ್ಮುಗಂ ದಿಕ್ಕಿನಲ್ಲಿ ಹೆಜ್ಜೆ ಇಟ್ಟರು.

ಈಗ ಆರ್ಮುಗಂ ತಮ್ಮ ಈ ಸ್ಥಿತಿಯನ್ನು ಸುಟ್ಟುಕೊಂಡು ಹದಿನೆಂಟು ವಯಸ್ಸಿನ ಕೂದಲಿರದ ಮುಖದ ಮೇಲೆ ಗಾಯದ ಗುರುತುಗಳುಳ್ಳ ತರುಣ ಆರ್ಮುಗಂ ಆಗಬಲ್ಲರೇ? ಹಾಲಿ ಆರ್ಮುಗಂ ಆಗುವ ದಿಕ್ಕಿನಲ್ಲಿ ಹೊರಟಿರುವ ಪ್ರಸಾದ್ ತಾವು ಇಟ್ಟ ಹೆಜ್ಜೆ ಹಿಂದಕ್ಕೆ ತೆಗೆದುಕೊಂಡು ಉಳಿಯಬಲ್ಲರೇ? ಉಳಿಯಲಿ ಎಂದು ನನ್ನ ಆಸೆ. ಅದಕ್ಕಾಗಿ ಬೀಸುತ್ತಿರುವ ಗಾಳಿಯಲ್ಲಿ ನಿಟ್ಟುಸಿರಿಡುತ್ತಿರುವ ಬೆಂಕಿಗೆಸೆಯಲ್ಪಟ್ಟ ಕಂದಮ್ಮಗಳ ಸುಟ್ಟಮಾಂಸದ ವಾಸನೆಯ ಚೀರಾಟ; ದಲಿತರಾಗಿ ಹುಟ್ಟಿದ್ದಕ್ಕಾಗಿ ಕತ್ತರಿಸಲ್ಪಟ್ಟ ದೇಹಗಳ ಮಾಂಸದ ರೋದನಗಳು ಆರ್ಮುಗಂ ಪ್ರಸಾದರಂತಹವರ ಕಿವಿಗೆ ಕೇಳಿಸಲಿ, ಕಣ್ಮುಂದೆ ಕಟ್ಟಿದಂತಿರಲಿ, ಎದೆಯಲ್ಲಿ ಸಂಕಟ ತುಂಬಿ ಅರಿವಾಗಿ ನಿದ್ದೆ ಬಾರದಿರಲಿ. ಅರ್ಥಾತ್ ಸದಾ ಎಚ್ಚರವಿರುವ ನಾಯಕರಾಗಿ ಉಳಿಯಲಿ.

# ಜೀತ ಬಿಡುಗಡೆಯಲ್ಲಿ ಬಿದ್ದ ಕನಸು

**ಭಾಗ 1**

ಒಂದು ಹೋಬಳಿಯಂಥ ಊರು ಅದು. ಆ ಊರಲ್ಲಿ ಇತ್ತೀಚೆಗೆ ಜೀತಗಾರರ ಬಿಡುಗಡೆಯಾಗಿತ್ತು. ಒಂದು ಬಹಿರಂಗ ಸಭೆ ಮಾಡಿ ಆ ಊರಿನ ಜೀತಗಾರರನ್ನೆಲ್ಲ ಒಟ್ಟು ಸೇರಿಸಿ ಅವರಿಗೆಲ್ಲ ಬಿಡುಗಡೆಯಾಗಿದೆ ಎಂದು ಸಾರಲಾಯ್ತು. ಜೀತಗಾರರು ತಮ್ಮ ಸವೆದುಹೋದ ತಲೆಯನ್ನು ಸವರಿಕೊಂಡು, ಮನೆಯಿದ್ದವರು ತಂತಮ್ಮ ಮನೆಗೊ ಅಥವಾ ಮನೆಯಿಲ್ಲದವರು ಮಾಮೂಲು ಮಲಗುವ ಛಾವಡಿಯಲ್ಲೋ ಉಪಸ್ಥಿತರಾಗಿದ್ದರು. ಛಾವಡಿಯಲ್ಲಿ ಸೇರಿದ್ದ ಕೆಲವರು ಪದ ಹೇಳುತ್ತಿದ್ದರು. ಕೆಲವರು ಹರಟುತ್ತಿದ್ದರು. ಕೆಲವರು ಮಲಗಿದ್ದರು. ಕೆಲವರು ಮಲಗಲು ರೆಡಿಯಾಗುತ್ತಿದ್ದರು. ಕೆಲವರು ಅವರವರ ಒಡೆಯರಿಗೆ ತಮ್ಮ ಜೀತ ಬಿಡುಗಡೆಯಿಂದ ಉಂಟಾದ ನಷ್ಟ ಎಷ್ಟು ಎಂದು ಎಣಿಸಿ ಎಣಿಸಿ ಖುಷಿಪಡುತ್ತಿದ್ದರು! ತಾವು ಒಡೆಯರಿಂದ ಪಡೆದ ಇನ್ನೂರು ಮುನ್ನೂರಕ್ಕೆ ಹುಟ್ಟಿದಾರಭ್ಯ ಜೀತ ಮಾಡುತ್ತಾ ಬಂದಿದ್ದರೂ ಕೂಡ, ಈಗ ಬಿಡುಗಡೆಯಾಗಿರುವುದು ತಮ್ಮ ಒಡೆಯರಿಗೆ ನಷ್ಟ ಎಂದೇ ಅವರು ಎಣಿಸುತ್ತಿದ್ದರು. ಅವರ ತಲೆಯೊಳಗಿನ ಈ ಭಾಗದ ಮೆದುಳನ್ನು ಕತ್ತರಿಸಿ ಹೊರಹಾಕಬೇಕಿತ್ತು. ಹೇಗೆಂದು ತಿಳಿಯದೆ ಏನೂ ತೋಚದೆ ನಾನಿದ್ದೆ.

ಕೊನೆಗೆ ಅವರೊಡನೆ ಮಾತನಾಡಿದೆ. ಅವರು ತುಂಬಾ ಉಲ್ಲಸಿತರಾಗಿದ್ದರು. ಇವರ ನಾಳೆಗೇನು? ನಾನು ಯೋಚಿಸುತ್ತಿದ್ದೆ. ಅವರು ಅದರ ಬಗ್ಗೆ

ಯೋಚಿಸುತ್ತಿದ್ದಂತೆ ಕಾಣುತ್ತಿರಲಿಲ್ಲ. ಅಷ್ಟು ಉತ್ಕಟವಾಗಿ ಅವರು ಆ ಬಿಡುಗಡೆಯ ಕ್ಷಣದಲ್ಲಿ ಇದ್ದರು. ಅದನ್ನು ಕಂಡುಂಡು ನನಗೆ ಅನ್ನಿಸಿತು 'ಜೀತಪದ್ಧತಿ ರದ್ದು– ಆದರೆ ನಾಳೆಗೆ ಏನು?' ಈ ಪ್ರಶ್ನೆ ಇದ್ದೇ ಇದೆ. ಇಂಥಾ ಪ್ರಶ್ನೆಗಳು ನೂರು ಇರಲಿ, ನೂರೇ ಬರಲಿ ಆದರೆ ಜೀತಪದ್ಧತಿ ರದ್ದಾಗಲಿ. ನಾವು ಜೀತ ಮಾಡುವಾಗಲೂ ಕತ್ತಲಲ್ಲಿ ಇದ್ದೆವು. ಈಗ ಜೀತ ರದ್ದಾದಾಗಲೂ ದಿಕ್ಕಿಲ್ಲದೆ ಕತ್ತಲಲ್ಲೇ ಇರಬೇಕಾಗಬಹುದು. ಈ ಎರಡು ಕತ್ತಲುಗಳಲ್ಲಿ ಎರಡನೆಯ ಕತ್ತಲೆಯೇ ಇರಲಿ.

## ಭಾಗ 2

ಕೆಲ ದಿನಗಳಾದ ಮೇಲೆ ಅದೇ ಊರಿನ ಅದೇ ಸ್ಥಳಕ್ಕೆ ಹೋದೆ. ಜೀತ ಬಿಡುಗಡೆ ದಿನ ನಾನು ಕಂಡಿದ್ದ ಉಲ್ಲಾಸಕ್ಕೆ ಮಂಕು ಬಡಿದಿತ್ತು. ಎಲ್ಲರೂ ನಿಸ್ಸಾರರಾಗಿದ್ದರು. ಮೊದಲಿನಷ್ಟು ಜನರೂ ಸೇರಿರಲಿಲ್ಲ. ಉಳಿದವರೆಲ್ಲಾ ಎಲ್ಲಿ ಹೋದರು? ಎಂದು ಕೇಳಿದೆ. ಹೊಟ್ಟೆಯಾಪ್ತಿಗೆ ಕಾಫಿ ತೋಟದ ಕಡೆಗೆ ದೇಶಾಂತರ ಹೋಗವರೆ ಎಂದು ತಿಳಿದುಬಂತು. ಯಾಕೆ ಇಲ್ಲಿ ಕೆಲಸ ಸಿಗುತ್ತಿಲ್ಲವಾ? ಎಂದು ಕೇಳಿದೆ. ನನ್ನ ಪ್ರಶ್ನೆ ಕೇಳಿ ಅವರು ತಳಮಳಿಸತೊಡಗಿದರು. ಆಮೇಲೆ ತಿಳಿದು ಬಂತು, ಜೀತ ಬಿಡುಗಡೆಯಾದ ದಿನದಿಂದ ಯಾರನ್ನೂ ಕೆಲಸಕ್ಕೆ ಕರೆಯುತ್ತಿರಲಿಲ್ಲ. ತಮ್ಮ ಹಂಗು ತೊರೆದು ಜೀತದಿಂದ ಬಿಡುಗಡೆಯಾದವರು ಹೇಗೆ ಬದುಕುವರೋ ನೋಡುವ ಎಂಬ ಒಡೆಯರ ಕಿಚ್ಚಿಗೆ ಮಾಜಿ ಜೀತಗಾರರು ತತ್ತರಿಸಿದ್ದರು.

ಈ ಜಿದ್ದು ಯಾಕೆಂದು ಅರ್ಥಮಾಡಿಕೊಳ್ಳಲು ಬಹಳ ಕಷ್ಟಪಟ್ಟೆ. ದಲಿತರ ಬಗ್ಗೆ ಈ ಜಿದ್ದು ಅಸಹನೆ ರಕ್ತಗತವಾಗಿರುವುದಕ್ಕೆ ಕಾರಣವೇನೆಂದು ಬಹಳ ಯೋಚಿಸಿದೆ. ಈ ಜಾತೀಯ ದೇಹದಲ್ಲಿ ಹಾಲಿ ಇರುವ ರಕ್ತವನ್ನು ಸಂಪೂರ್ಣ ಹೊರತೆಗೆದು ಹೊಸರಕ್ತ ಕೊಟ್ಟರೆ ಈ ಜಿದ್ದು ಅಸಹನೆ ಹೋಗುವುದೇ? ನಾ ಅರಿಯೆ.

ಜೀತಪದ್ಧತಿ ರದ್ದಾದ ಕೂಡಲೇ ಸೇಡಿನ ಭೂಮಾಲೀಕರು ಒಂದು ಕೆಲಸ ಮಾಡಿದ್ದರು, ಅದೇನೆಂದರೆ ಅವರೆಲ್ಲ ಸೇರಿ ಸಹಕಾರ ಸಂಘದಿಂದ ಮಾರಿಹಲುಬೆ, ಟ್ರಾಕ್ಟರ್ ಇತ್ಯಾದಿ ತಂದು ಜೀತಗಾರರಿಗೆ ಕೂಲಿ ಸಿಗದಂತೆ ಮಾಡಿದ್ದರು. ಜೀತದಿಂದ ಬಿಡುಗಡೆಯಾದವರಿಗೆ ಕೂಲಿಯಾದರೂ ಸಿಗುತ್ತಲ್ಲ ಎಂಬ ನನ್ನ ಎಣಿಕೆ ಉಲ್ಟಾ ಆಗಿತ್ತು. ಮಾರಿಹಲುಬೆ ಟ್ರಾಕ್ಟರು ಇತ್ಯಾದಿ ಬಂದು

ಕೆಲಸಗಾರರ ಕೈಕಾಲುಗಳಿಗೆ ಕೆಲಸ ಸಿಗದಂತೆ ಮಾಡಿ ಅವರನ್ನು ಕಂಗೆಡಿಸಿತ್ತು. ಟ್ರಾಕ್ಟರ್‌ನಂಥ ಮಿಷನ್ನುಗಳು ಬರುವುದೆಂದರೆ ಕೆಲಸಗಾರರ ಕೈಕಾಲುಗಳನ್ನು ಕತ್ತರಿಸಿದಂತೆಯೇ ಎಂಬುದನ್ನು ಕಣ್ಣಾರೆ ಕಂಡೆ. ಕೆಲಸಗಾರರ ಜೀವ ಇರುವ ಹೊಟ್ಟೆಯ ಮೇಲೆ ಈ ಜೀವರಹಿತ ಮಿಷನ್ನು ಕ್ರೂರವಾಗಿ ಹರಿದಿತ್ತು.

**ಭಾಗ 3**

ರಾತ್ರಿ ಬಹಳ ಹೊತ್ತಿನವರೆಗೆ ನನಗೆ ನಿದ್ರೆ ಬರಲಿಲ್ಲ. ಬೆಳಗಿನ ಜಾವದಲ್ಲಿ ಒಂದು ಕನಸು ಬಿತ್ತು. ಅದೇನೆಂದರೆ ಜೀತದಾಳುಗಳು ಕೆಲಸಗಾರರು ಸೇರಿ ಭೂಮಾಲೀಕರ ಹಾಲಿ ಭೂಮಿಯನ್ನು ಆಕ್ರಮಿಸಿಕೊಂಡಿದ್ದರು. ತಮ್ಮನ್ನೆಲ್ಲಾ ಬೀದಿಪಾಲು ಮಾಡಿದ ಅಮಾನುಷ ಟ್ರಾಕ್ಟರ್, ಮಾರಿಹಲುಬೆ ಇತ್ಯಾದಿ ಮಿಷನ್ನುಗಳನ್ನು ಪುಡಿಪುಡಿ ಮಾಡಿ ಸದೆಬಡಿಯುತ್ತಿದ್ದರು. ಎಚ್ಚರವಾದ ಮೇಲೆ ಅನ್ನಿಸಿತು– ಉಳಿಯಬೇಕಾದರೆ ಈ ಕನಸು ನನಸಾಗಬೇಕು.

## ನಾಳೈ ನಮದೈ

ಇದೇ ಸಭಾಂಗಣದಲ್ಲೆ, ಇಲ್ಲೆ ಬಹುಶಃ ದಸಂಸದ ಒಡಕಿನ ಸಂದರ್ಭದಲ್ಲಿ ಕೆಲವು ಮಾತುಗಳನ್ನಾಡಿದ್ದೆ. ಇಲ್ಲಿ ಒಂದು ಸಭೆ ನಡೆಯುತ್ತಿದ್ದರೆ ಇನ್ನೆಲ್ಲೊ ಇನ್ನೊಂದು ಬಣದ ಸಭೆ ನಡೆಯುತ್ತಿತ್ತು. ಅಂದು ಮಾತಾಡಿದ್ದು ಈಗ ನೆನಪಿಗೆ ಸಿಗುತ್ತಿರುವುದು ಇಷ್ಟು: ಗೆಳೆಯರೇ, ಒಂದು ಸಿನಿಮಾ ಹಾಡು ಇದೆ. ನಾಳೈ ನಮದೈ ಅಂತ. ತಮಿಳು ಹಾಡು ಇದು. ಅಶೋಕಪುರಂನಲ್ಲಿ ನಮ್ಮ ಮನೆಯಿದ್ದಾಗ ಸಿದ್ಧಾರ್ಥ ಹಾಸ್ಟಲ್ ಮುಂದೆ ಬಂದಾಗ, ಒಂದು ಹುಡುಗ ನಾಳೈ ನಮದೈ ಹಾಡನ್ನು ಉತ್ಕಂಠಿತನಾಗಿ ಹಾಡುತ್ತಿದ್ದ. ಹಾಡು ಮುಗಿಯುವವರೆಗೂ ನಿಂತು ಕೇಳಿದ್ದೆ. ಅಷ್ಟು ತುಂಬಿಕೊಂಡು ಹಾಡುತ್ತಿದ್ದ. ಆ ಹುಡುಗನ ಹೆಸರು ಕೇಳಿದಾಗ ಮಲ್ಲಿಕಾರ್ಜುನಸ್ವಾಮಿ ಅಂತ ತಿಳೀತು. ಇದೂ ನೆನಪಿದೆ. ಈ ಹಾಡು ಎಷ್ಟೋ ಕಾಲ ನನ್ನನ್ನು ಹಿಂಬಾಲಿಸುತ್ತಿತ್ತು.

ಹೋರಾಟಗಾರರು ಆದರ್ಶವಾದಿಗಳು ಇನ್ನೂ ಹುಟ್ಟದ 'ನಾಳೆ'ಗಳಲ್ಲಿ ಹೆಚ್ಚಾಗಿ ಜೀವಿಸುತ್ತಿರುತ್ತಾರೆ. ಅವರು 'ಇಂದು' ಹೆಚ್ಚಾಗಿ ಬದುಕುತ್ತಿರುವುದಿಲ್ಲ. ಈ ನಾಳೆಗಳವರಲ್ಲಿ ಒಬ್ಬೊಬ್ಬರಲ್ಲೂ ಒಂದೊಂದು ನಾಳೆಗಳಿದ್ದು ಅವೂ ಜಗಳ ಆಡುತ್ತಿರುತ್ತವೆ. ಆದ್ದರಿಂದ ದಯವಿಟ್ಟು ಇಂದು ಜೀವಿಸಿ. ಮುಖಾಮುಖಿಯಾದರೆ ನಮ್ಮ ಎಷ್ಟೋ ಸಮಸ್ಯೆಗಳು ಜಗಳಗಳು ತಂತಾನೆ ಕರಗಬಹುದು ಎಂದಿದ್ದೆ. ಯಾಕೆಂದರೆ ನಾಳೆಗಳಲ್ಲಿ ಜೀವಿಸುವವರು ಪಾದವಿಲ್ಲದೆ ಚಲಿಸಿದಂತೆ– ಎಂದೂ ಅಂದಿದ್ದೆ.

ಇಂದು ಏನಾಗಿದೆ? 'ನಿನ್ನೆ' ಅಂದರೆ ಗತಕಾಲದಲ್ಲಿ ಜೀವಿಸುವವರ ಕಾಟ ಹೆಚ್ಚಾಗಿದೆ. ನಾಳೆ ಜೀವಿಸುತ್ತಿರುವವರಂತೆಯೇ ನೆನ್ನೆ ಅಂದರೆ

ಗತಕಾಲದಲ್ಲಿ ಜೀವಿಸುತ್ತಿರುವವರೂ ಇದ್ದಾರೆ. ಇವರೂ ಹೆಚ್ಚಾಗಿ ಇಂದು ಬದುಕುತ್ತಿರುವುದಿಲ್ಲ. ನೆನ್ನೆ ಬದುಕುತ್ತಿರುವವರ ಪಾದ ಹಿಂದಕ್ಕಿರುತ್ತದೆ. ಹಾಗಾಗಿ ಇವರ ಕಾಟ ಜಾಸ್ತಿ. ಇದು ಭೂತ ಪ್ರೇತ ಕಾಟ. ಈಗಿನ ಉದಾಹರಣೆ ನೋಡಿ. ಕನ್ನಡ ಸಂಸ್ಕೃತಿಯನ್ನು ಚಿಗುರಿಸುತ್ತಿರುವ ಹಂಪಿ ವಿಶ್ವವಿದ್ಯಾನಿಲಯದ ಜಾಗವನ್ನು ಕಿತ್ತು ಗತ ಕೃಷ್ಣದೇವರಾಯನ ಸ್ಮಾರಕ ಮಾಡಲು ಖಾಸಗಿಯವರಿಗೆ ಕೊಡಲಾಗುತ್ತಿದೆಯಂತೆ. ಇದು ಸ್ಮಶಾನ ವೈಭವೀಕರಿಸಿದಂತೆ ಅಲ್ಲವೆ? ಸಂಸ್ಕೃತಿ ಹೆಸರಲ್ಲಿ ಮಾಡುತ್ತಿರುವ ಈ ಕೃತ್ಯ ಸಂಸ್ಕೃತಿ ಹೀನ ಕೆಲಸ ಅಲ್ಲವೆ? ಈ ಜಾಗ ಪಡೆಯಲು, ಬಿಜೆಪಿ ಅನಂತಕುಮಾರ್‌ರ ಪತ್ನಿ ಇರಬೇಕು, ವೀರಗಚ್ಚೆ ಹಾಕಿಕೊಂಡು ಧಾಳಿ ಮಾಡುತ್ತಿದ್ದಾರೆ. ನನಗೆ ಒಂದೊಂದು ಸಲ ಅನ್ನಿಸುತ್ತೆ– ಹಿಂದೆ ಭಾರತದ ಮೇಲೆ ಧಾಳಿ ಮಾಡಿ ದೋಚುತ್ತಿದ್ದ ಧಾಳಿಕೋರರು ದೋಚಿಕೊಂಡು ಹೋಗುವಾಗ ಏನೊ ಹೆಚ್ಚುಕಮ್ಮಿ ಮಾಡಿ ಹುಟ್ಟಿದ ಸಂತಾನವೇನೋ ಇವರು! ಅದಕ್ಕಾಗಿ ಭೂಮಿಯ ಹೊರಮೈ ಒಳಮೈ ಎಲ್ಲವನ್ನೂ ಧ್ವಂಸ ಮಾಡಿ ದೋಚುತ್ತಿದ್ದಾರೆ ಅನ್ನಿಸುತ್ತದೆ. ಈ ನೆನ್ನೆ ಬದುಕುವರಲ್ಲೂ ನನ್ನ ಪ್ರಾರ್ಥನೆ: ದಯವಿಟ್ಟು ವರ್ತಮಾನದಲ್ಲಿ ಬದುಕಿರಿ.

ನಿನ್ನೆ ನಾಳೆಗಳು ಬೇಡ. ಇಂದು ಜೀವಿಸೋಣ.

## ದೊಂಬಿದಾಸ್!

ಈ ದೊಂಬಿದಾಸರ ಸಭೆಯಲ್ಲಿ ಭಾಗವಹಿಸಿ ಬಂದಂಥ ಕೆ.ರಾಮದಾಸ್ ಪರಮಾನಂದದಿಂದ ಸಂಭ್ರಮಿಸುತ್ತಿದ್ದಾರೆ. ದೊಂಬಿದಾಸ ಎಂಬ ಹೆಸರು ಕೇಳಿಯೇ ಪುಲಕಿತರಾಗಿಬಿಟ್ಟಿದ್ದಾರೆ! ತಾವು ಮಾಡುತ್ತಿರುವ ಕೆಲಸ 'ದೊಂಬಿ' ಎಂದುಕೊಂಡು ಈ ಖುಷಿಯೊ ಅಥವಾ ತಮ್ಮ ಹೆಸರಿನ ಮುಂದೆ 'ದಾಸ' ಇರುವುದು ಕಾರಣವೊ ನನಗೆ ತಿಳಿಯದು.

ಅವರ ಈ ಸಂಭ್ರಮ ಕಂಡು, ರಾಮದಾಸ್‌ಗೆ ಇಷ್ಟ ಇದ್ದರೆ– ಈ ಸ್ವತಂತ್ರ ಭಾರತದಲ್ಲಿ ಇದಕ್ಕಾಗಿ ಸ್ವತಂತ್ರ ಕಾನೂನು ಕಟ್ಟಳೆಗಳು ಯಾಕೆ ಆಗಬಾರದು? ಅನ್ನಿಸುತ್ತಿದೆ.

ಸ್ವಾತಂತ್ರ್ಯ ಪೂರ್ವದ ಮನು ಸಂವಿಧಾನದ ಸಾಮಾಜಿಕ ಕಟ್ಟುಕಟ್ಟಳೆಗಳಲ್ಲಿ ಹುಟ್ಟು ಮತ್ತು ಜಾತಿ ಬೇರ್ಪಡಲ್ಲ. ಒಂದು ಜಾತಿಗೆ ಇನ್ನೊಂದು ಜಾತಿಯು ಮದುವೆಯಾಗಿ ಕೂಡಿ ಹುಟ್ಟುವ ಶಿಶು ಸಂತಾನವೂ ಹೊಸದೊಂದು ಜಾತಿಯಾಗಿಬಿಡುತ್ತಿತ್ತು. ಆ ರೀತಿ ಆಗುತ್ತಿದ್ದುದು ಈಗ ನಿಂತಿದೆ. ಆದರೆ ಸ್ವಾತಂತ್ರ್ಯ ನಂತರದ ಸಂವಿಧಾನದಲ್ಲಾದರೂ ಹುಟ್ಟಿನಿಂದ ಜಾತಿಯನ್ನು ಯಾಕೆ ಬೇರ್ಪಡಿಸಬಾರದು? ಜಾತಿಯೂ ಯಾಕೆ ಆಯ್ಕೆಯಾಗಬಾರದು? ಉದಾ: ಕೆ.ರಾಮದಾಸ್‌ರಿಗೆ ದೊಂಬಿದಾಸರಾಗಬೇಕೆಂದು ಅವರು ಅದನ್ನು ಡಿಕ್ಲೇರ್ ಮಾಡಿಕೊಳ್ಳುವ ಹಕ್ಕಿರಲಿ. ಇದು ಸಂವಿಧಾನಾತ್ಮಕ ಹಕ್ಕಾಗಲಿ.ಇದರಿಂದ ಕೆಲವು ಜಾತಿ ಅನುಕೂಲ ಇರುತ್ತೆ, ಅದಕ್ಕಾಗಿ ಕೆಲವರು ಆಗಬಹುದು ಎಂಬ ಅನುಮಾನ ಸಹಜ. ಅದಕ್ಕಾಗಿ ರಾಮದಾಸ್ ಮೊಮ್ಮಗ/ಮೊಮ್ಮಗಳಿಗೆ ಅಂದರೆ ಮೂರನೆಯ ಜನರೇಷನ್‌ಗೆ ಆ ಅನುಕೂಲದ ಹಕ್ಕು ದೊರೆಯುವಂತಾಗಲಿ.

ಇದಕ್ಕೆ ಆಯಾಯ ಜಾತಿಯ ಕುಲಸ್ಥರು ಒಪ್ಪದೇ ಇರಬಹುದು. ಆದರೆ ಸಂವಿಧಾನದ ಹಕ್ಕಾಗಲು ಏನಂತೆ?

ಇದರಿಂದ ಎರಡು ಮೂರು ಬದಲಾವಣೆ ಆಗುತ್ತೆ: ಜಾತಿಗೂ ಹುಟ್ಟಿಗೂ ಸಂಬಂಧ ಇಲ್ಲ; ನಿಲ್ಲಿಸಿದ ಏಣಿಯಂತಿರುವ ಜಾತಿಯ ಸಾಮಾಜಿಕ ಮೆಟ್ಟಿಲನ್ನು ನಿರಾಕರಿಸಿದಂತೆ; ಏಣಿಯಂತೆ ನಿಂತಿರುವ ಸಾಮಾಜಿಕ ತಾರತಮ್ಯದ ಜಾತಿಯನ್ನು ಮಲಗಿಸಿದರೆ ಆಗ ಜಾತಿಗಳು ಒಂದೊಂದು ಸಾಂಸ್ಕೃತಿಕ ಸಮುದಾಯವಾಗಿ ವರ್ತಿಸಬಹುದು. ಜೊತೆಗೇ ಹುಟ್ಟು ಮದುವೆ ಸಾವುಗಳಲ್ಲಿನ ಆಚರಣೆ, ಉಡುಪು ಆಹಾರ ಇತ್ಯಾದಿಗಳಲ್ಲಿ ಯಾರ್‍ಯಾರಿಗೆ ಯಾವಾವ ರೀತಿ ಇಷ್ಟವೊ ಅದದಾಗಲು ಏನು ಅಡ್ಡಿಯಾಗಿದೆ?

ಈ ರೀತಿ ಹೇಳುವ ನನ್ನನ್ನು ಜಾತಿಪರ ಎಂದು ತಪ್ಪಾಗಿ ಅರ್ಥ ಮಾಡಿಕೊಳ್ಳಬೇಡಿರಿ. ಏಣಿಯಂತೆ ಒಬ್ಬರ ಮೇಲೊಬ್ಬರು ನಿಂತಿರುವ ಜಾತಿಯನ್ನು ಮಲಗಿಸಿ ಅದು ಮೇಲು ಕೀಳಿಲ್ಲದೆ ಒಡನಾಡಲು ಸಾಧ್ಯವೆ ಎಂದು ಹುಡುಕುತ್ತಿದ್ದೇನೆ. ಇನ್ನೂರು ವರ್ಷದ ಕೆಳಗೆ ಅಬ್ರಾಹ್ಮಣ ಜಾತಿಯೊಂದು ತಾನು ಬ್ರಾಹ್ಮಣ ಎಂದು ಹೋರಾಡಿ ಹೋರಾಡಿ ಈಗ ಬ್ರಾಹ್ಮಣ ಎಂದೇ ಒಪ್ಪಿತವಾಗಿರುವಾಗ ಇದು ಯಾಕೆ ಆಗಬಾರದು? ಇತ್ತೀಚೆಗೆ ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ಈಡಿಗರನ್ನು ಒಕ್ಕಲಿಗರೆಂದೇ ಪರಿಗಣಿಸಿ ಈಗ ಕೊಟ್ಟು ತಂದು ಮಾಡುವುದೂ ನಡೆಯುತ್ತಿದೆ. ಹೀಗಿರುವಾಗ ಇದು ಯಾಕೆ ಆಗಬಾರದು?

ಇಲ್ಲಿ ನನ್ನ ಆಶಯವನ್ನಷ್ಟೆ ಪರಿಗಣಿಸಿರಿ. ಜಾತಿಗೂ ಹುಟ್ಟಿಗೂ ಸಂಬಂಧ ಇರುವುದರ ಹುಟ್ಟಡಗಿಸಬೇಕಾಗಿದೆ.

# ಎಂಡಿಎನ್ ಈಜು

ಹಾಲಿ ಖ್ಯಾತ ಹಿರಿಯ ವಕೀಲ ಗೆಳೆಯ ರವಿವರ್ಮಕುಮಾರ್ ಈಗ ಮಾತ್ರವಲ್ಲ ಅವರು ಹುಟ್ಟಿದಾಗಲಿಂದಲೂ ನೀರು ಕಂಡರೆ ಬಟ್ಟೆ ಕಳಚಿ ನೀರಿಗೆ ಬೀಳುತ್ತಾರೆ. ಆಗ ಸಮಾಜವಾದಿ ಯುವಜನ ಸಭಾ ಕಾಲ. ಆಗ ತರುಣ ರವಿವರ್ಮಕುಮಾರ್, ಪ್ರೌಢ ಪ್ರೊ. ಎಂ. ಡಿ. ನಂಜುಂಡಸ್ವಾಮಿಯವರು ಒಂದು ಕಾರು ಇದ್ದ ಕಾರಣಕ್ಕಾಗಿ ಕರ್ನಾಟಕದ ಉದ್ದಗಲಕ್ಕೂ ಸುತ್ತುತ್ತ ಸಂಘಟನೆ ಮಾಡುತ್ತ ಹೀಗೇ ಸಾಗುತ್ತ ಒಂದು ಕಡೆ ಒಂದು ಹೊಳೆ ಎದುರಿಗೆ ಬರುತ್ತದೆ. ಆಗ ರವಿ 'ಸಾರ್ ಸಾರ್ ಒಂದೈದು ನಿಮಿಷ ಕಾರು ನಿಲ್ಲಿಸಿ' ಎಂದು ದೈನ್ಯದಿಂದ ಎಂಡಿಎನ್‌ಗೆ ಯಾಚಿಸುತ್ತಾರೆ. ಏನೊ ಒಂದಾ ಎರಡಾ ಇರಬೇಕು ಅಂತ ಪ್ರೊ. ಎಂಡಿಎನ್ ಕಾರು ನಿಲ್ಲಿಸುತ್ತಾರೆ. ರವಿ ಇಳಿದು ಸರಸರ ಓಡುತ್ತಾರೆ. ಎಂಡಿಎನ್ ತಮ್ಮಷ್ಟಕ್ಕೆ ಸಿಗರೇಟು ಹಚ್ಚಿ ಕೂರುತ್ತಾರೆ. ಕೆಲವೇ ಕ್ಷಣ ಅಷ್ಟೇ– ಢಮಾರ್ ಶಬ್ದ ಕೇಳಿ ಎಂಡಿಎನ್ ಸಿಗರೇಟು ಧ್ಯಾನದಿಂದ ಎಚ್ಚೆತ್ತು ಬೆಚ್ಚಿ ನೋಡಿದರೆ–

ರವಿಯ ಬಟ್ಟೆಗಳು ದಡದಲ್ಲಿವೆ, ರವಿ ನೀರಿಗೆ ಬಿದ್ದಿದ್ದಾರೆ, ಅವರ ಕೈಕಾಲುಗಳು ಬಡಿಯುತ್ತಿವೆ, ಆದರೆ ರವಿ ಮುಖ ಆನಂದವಾಗಿದೆ. ಎಂಡಿಎನ್‌ಗೆ ಗಾಬರಿಯಾಗಿ ಹತ್ತಿರ ಬಂದು–

'ರವಿ, ರವಿ, ಏನ್ ಆಯ್ತು?' ಎಂದು ಕೇಳಿ, ರವಿ 'ಈಜುತ್ತಿದ್ದೇನೆ ಸಾರ್' ಎಂದು ಹೇಳಿದಾಗ ಸಮಾಧಾನವಾಗಿ ಅಲ್ಲಿ ರವಿ ಬಿಚ್ಚಿಟ್ಟಿದ್ದ ಬಟ್ಟೆ ಪಕ್ಕ ರೂಢಿಯಂತೆ ಕೂತು ತಮ್ಮ ಸಿಗರೇಟು ಧ್ಯಾನ ಮುಂದುವರಿಸುತ್ತಾ ಈಜನ್ನು ತದೇಕ ನೋಡುತ್ತಾ ಎಂಡಿಎನ್ ಕೂರುತ್ತಾರೆ.

‘ರವಿಈಜ’ನ್ನೇ ನೋಡುತ್ತ ಕೂತಿದ್ದ ಎಂಡಿಎನ್ ಇದ್ದಕ್ಕಿದ್ದಂತೆ ‘ರವಿ ಏನ್ ಮಾಡ್ತಾ ಇದ್ದೀರಿ’ ಎಂದು ಕೇಳುತ್ತಾರೆ. ರವಿ ‘ಈಜುತ್ತಿದ್ದೇನೆ ಸಾರ್’ ಅಂತಾರೆ. ಅದಕ್ಕೆ ಎಂಡಿಎನ್ ನಕ್ಕು ‘ಈಜೇನು ಅದು? ಕೈಕಾಲು ಬಡಿಯುತ್ತಿದ್ದೀರಿ ಅಷ್ಟೆ. ಯಾರ್ ಹೇಳ್‌ಕೊಟ್ರು ನಿಮಗೆ?’ ಅಂದಾಗ ರವಿ ಪೆಚ್ಚಾಗಿ ನೋಡುತ್ತಾರೆ. ಎಂಡಿಎನ್ ನಕ್ಕು– ‘ಎಲ್ಲಿ, ಮುಖವನ್ನು ಎಡಕ್ಕೆ ತಿರುಗಿಸಿ, ಬಲಗೈಯನ್ನು ಇದ್ದಷ್ಟು ಮುಂದಕ್ಕೆ ಚಾಚಿ ನೀರನ್ನು ಬಾಚುತ್ತ ಆ ಕೈ ಕೆಳಕ್ಕೆ ಹೋಗಲಿ, ಮುಖ ಬಲಕ್ಕೆ ತಿರುಗಿಸಿ ಎಡಗೈಯಿಂದ ಮೊದಲಿನ ಹಾಗೆ ಮಾಡಿ. ನೀರನ್ನು ಬಾಚಿ ಹಿಂದಕ್ಕೆ ಎಳೆಯುವಾಗ ಕಾಲುಗಳಿಂದ ನೀರನ್ನು ಒದ್ದು ಮುಂದಕ್ಕೆ ಚಿಮ್ಮಿರಿ... ಹೀಗೆ ಸಮಾಜವಾದಿ ಪಾಠ ಮರೆತು ಈಜಿನ ಪಾಠ ನಡೆಯುತ್ತ ಮುಂದೆ ಆ ಸ್ವಿಮ್ಮು ಈ ಸ್ವಿಮ್ಮು ಬಟರ್‌ಫ್ಲೈ ಸ್ವಿಮ್ಮು, ಅಂಗಾತ ಸ್ವಿಮ್ಮು ಹೀಗೆ ಜರುಗತೊಡಗುತ್ತದೆ.

ಇದ್ದಕ್ಕಿದ್ದಂತೆ ರವಿಗೆ ಕೈಕಾಲು ಬಡಿಯುವುದು ನಿಂತು ಅದು ಲಯಬದ್ಧವಾಗಿ, ವೇಗ ಹೆಚ್ಚಿ, ಈಜು ಸಲೀಸಾಗಿಬಿಡುತ್ತದೆ! ಎಂಡಿಎನ್ ರಾಜಕೀಯವಾಗಿ ಮಾತ್ರವಲ್ಲ ಈಜಿನಲ್ಲೂ ಪರಮ ಗುರು ಎಂದು ರವಿಗೆ ಅನ್ನಿಸಿ ಅವರು ಎಂಡಿಎನ್ ದೇಶ ವಿದೇಶಗಳ ಕೆರೆ ಹೊಳೆಗಳಲ್ಲೆಲ್ಲಾ ಈಜು ಹೊಡೆದ ಮಹಾನ್ ಈಜುಗಾರರಂತೆ ಕಾಣತೊಡಗುತ್ತಾರೆ. ಹೀಗೆ ನೀರಿಗೆ ಇಳಿಯದೆ ಈಜು ಕಲಿಸುವ ಎಂಡಿಎನ್‌ರ ಈಜು ಪಾಂಡಿತ್ಯಕ್ಕೆ ಬೆರಗಾಗಿ ಎಂಡಿಎನ್‌ರಂಥ ಈಜು ಪ್ರವೀಣ ಹೇಗೆ ಈಜಬಹುದು ಎಂಬುದ ನೋಡುವ ಆಸೆ ಚಿಗುರಿ ರವಿ ‘ಸಾರ್, ನೀವು ಬನ್ನಿ ಸಾರ್. ಒಂದು ಈಜು ಹೊಡೆದರೆ ರಿಲ್ಯಾಕ್ಸ್ ಆಗುತ್ತೆ. ಯುವಜನ ಸಭಾ ಕೆಲ್ಸ ಇನ್ನೂ ಚೆನ್ನಾಗಿ ಮಾಡಬಹುದು’ ಅನ್ನುತ್ತಾರೆ. ಎಂಡಿಎನ್ ಕಟುವಾಗಿ ‘ನೊ’ ಅನ್ನುತ್ತಾರೆ. ರವಿ 'ಸಾರ್‌ಸಾರ್ ಪ್ಲೀಸ್’ ಅನ್ನುತ್ತಾ ಎಂಡಿಎನ್ ಹತ್ತಿರ ಬರತೊಡಗಿದಾಗ ಎಂಡಿಎನ್ ಮತ್ತಷ್ಟೂ ಕಟುವಾಗಿ ‘ಆಗಲ್ಲ. ಒಂದ್ಸಲ ಹೇಳಿದ್ರೆ ನಿಮಗೆ ಗೊತ್ತಾಗದಿಲ್ಲೇನು?’ ಅಂತ ಅಲ್ಲಾಡದೆ ಹೇಳುತ್ತಾರೆ.

ರವಿಗೆ ಎಂಡಿಎನ್‌ರ ಪ್ರಚಂಡ ಈಜನ್ನು ನೋಡಬೇಕೆಂಬ ಆಸೆ ಒಳಗೆ ಗುದ್ದುತ್ತಿರುವಾಗ ಹೇಗೆ ತಾನೇ ಸುಮ್ಮನಾಗುತ್ತಾರೆ? ರವಿ ನೀರಿಂದ ಎದ್ದು ಎಂಡಿಎನ್‌ಗೆ ದುಂಬಾಲು ಬೀಳಲು ಹತ್ತಿರ ಬರತೊಡಗಿದಾಗ ಎಂಡಿಎನ್– ‘ನನಗೆ ಈಜು ಬರಲ್ಲ’ ಅಂತ ತಣ್ಣಗೆ ಹೇಳುತ್ತಾರೆ. ರವಿಗೆ ಗರ ಬಡಿದಂತೆ ಆಗುತ್ತದೆ. ‘ಹಾಗಾದರೆ ನೀವು ನನಗೆ ಹೇಳಿಕೊಟ್ಟಿದ್ದೆಲ್ಲಾ?’ ಎಂದು ರವಿ

ಪ್ರಶ್ನಿಸಿದಾಗ ಎಂಡಿಎನ್ 'ಓ, ಅದಾ? ನಾನು ಚಿಕ್ಕವನಿರ್ತ ನಮ್ಮಣ್ಣ ಎಲ್ಲೇ ಕೆರೆ ಹೊಳೆ ಸಿಕ್ಕಿದರೂ ಬಟ್ಟೆ ಕಳಚಿಟ್ಟು ಆ ಬಟ್ಟೆ ಕಾಯಲು ನನ್ನನ್ನು ಕೂರಿಸಿ ಈಜುತ್ತಿದ್ದ. ನನಗೆ ಅದನ್ನು ನೋಡಿ ನೋಡಿ ಬಂತು' ಎಂದಾಗ, ರವಿ ನೋಡಿದಾಗ ಪ್ರೊ. ಎಂಡಿಎನ್ ಅವರು ರವಿ ಕಳಚಿಟ್ಟ ಬಟ್ಟೆಯ ಪಕ್ಕದಲ್ಲೆ ಕಾಯುತ್ತ ಕೂತಿರುವುದು ಕಂಡುಬಂತು!

ನೋಡಿ ನೋಡಿ ಓದಿ ಓದಿ ಪಾಠ ಪ್ರವಚನ ವಿದ್ಯೆ ವೈಚಾರಿಕತೆ ಇಂದು ನೀರಿಗೆ ಇಳಿಯದ ಈಜಿನಂತೆ ನಡೆಯುತ್ತಿದೆ. ಎಂಡಿಎನ್ ಅವರ ಈ ಒಂದು ಘಟನೆಯಿಂದ ಈ ಮಾತನ್ನು ತೆಗೆದುಕೊಂಡಿದ್ದರೂ ಇದು ಅವರಿಗೆ ಅನ್ವಯವಾಗುವುದಿಲ್ಲ. ಯಾಕೆಂದರೆ ವಿಚಾರ, ಅನುಭವ, ಕ್ರಿಯಾಶೀಲತೆ ಅವರೊಳಗೆ ಸಮನಾಗಿತ್ತು.

## ಹುಟ್ಟುತ್ತ ವಿಶ್ವಮಾನವ

'ಇಂದು ಚಿಕ್ಕವನು, ನಾಳೆಗೆ ದೊಡ್ಡವನು', 'ಇಂದಿನ ಮಕ್ಕಳು, ನಾಳಿನ ಪ್ರಜೆಗಳು'–ಇಂದು ಚಿಕ್ಕವರಾದ ನೀವೂ ಕೂಡ, ಬೆಳೆದಂತೆ ದೊಡ್ಡ ವ್ಯಕ್ತಿಯಾಗುವ ಕನಸು ಕಾಣ್ತೀರಿ. ಇದು ಲೋಕಾರೂಢಿ. ರವಿ ಕಂಡ ಸತ್ಯ. ಆದರೆ ಕವಿ ಕಂಡ ಸತ್ಯ ಬೇರೆ ಇದೆ. ಮಹಾಕವಿ ಕುವೆಂಪು ಮಾತೊಂದಿದೆ– 'ಹುಟ್ಟುತ್ತಾ ವಿಶ್ವಮಾನವ, ಬೆಳೆಯುತ್ತ ಅಲ್ಪಮಾನವ'– ಈ ಕವಿ ಕಂಡ ಸತ್ಯವು ರವಿ ಕಂಡ ಸತ್ಯವನ್ನು ಉಲ್ಟಾ ಮಾಡಿಬಿಡುತ್ತದೆ. ರವಿ ಕಂಡ ಸತ್ಯ ಮಗು ಬೆಳೆದಂತೆ ದೊಡ್ಡವನು ಎಂದುಕೊಂಡರೆ, ಕವಿ ಕಂಡ ಸತ್ಯ– ಮಗು ಬೆಳೆಯುತ್ತ ಅಲ್ಪ ಅಂದರೆ ಚಿಕ್ಕವನು ಆಗ್ತಾನೆ– ಅಂತಿದೆ. ಯಾವುದು ಸತ್ಯ?

ಕವಿ ಕಂಡ ಸತ್ಯ ಏನಿರಬಹುದು? ಶಿಶು ಭೂಮಿಗೆ ಬಿದ್ದಾಗ ಅದಕ್ಕೆ ಇಂಥ ಜಾತಿ ಅಂತ ಇರುವುದಿಲ್ಲ. ಇಂಥ ಧರ್ಮ ಅಂತ ಇರುವುದಿಲ್ಲ. ಇಂಥ ಭಾಷೆ ಅಂತಾನೂ ಇರುವುದಿಲ್ಲ. ಅಷ್ಟೇಕೆ? ಇಂಥ ಪ್ರದೇಶ ಅಂತಾನೂ ಇರುವುದಿಲ್ಲ. ವಿಶ್ವದಲ್ಲಿ ಹುಟ್ಟಿದ ಎಲ್ಲಾ ಶಿಶುಗಳನ್ನು ಅದಲು ಬದಲು ಮಾಡಿದರೂ ಅಂಥ ವ್ಯತ್ಯಾಸವೂ ಆಗುವುದಿಲ್ಲ. ಶಿಶುವಿನಲ್ಲಿ ಬೇರೆ ಇರುವುದಿಲ್ಲ. ಭಿನ್ನ ಭಾವವೂ ಇರುವುದಿಲ್ಲ. ಅವು ಜೀವಿಗಳು ಮಾತ್ರ. ಈ ಶಿಶು ಸ್ಥಿತಿಯನ್ನೆ ಕವಿ ವಿಶ್ವಮಾನವ ಅನ್ನುತ್ತಾರೆ. ಆದರೆ ಬೆಳೆದಂತೆ? ದೇಹ ದೊಡ್ಡದು ಆಗುತ್ತಾ ಆಗುವುದೇನು? ನಾನು ಇಂಥ ಜಾತಿಗೆ ಸೇರಿದವನು, ಇಂಥ ಧರ್ಮಕ್ಕೆ ಸೇರಿದವನು, ಇಂಥ ಭಾಷೆಗೆ ಇಂಥ ಪ್ರದೇಶಕ್ಕೆ ಇತ್ಯಾದಿ ಇತ್ಯಾದಿ ಚಿಂದಿ ಆಗುತ್ತಾನೆ. ಇದನ್ನೆ ಕವಿ ಬೆಳೆಯುತ್ತ ಅಲ್ಪನಾದ ಅನ್ನುತ್ತಾರೆ.

ಈಗ ಒಂದು ಪ್ರಯೋಗ ಮಾಡೋಣ. ನೀವು ಎಳೆಯರು. ನಿಮಗೆ ಕಲ್ಪನೆ ಹೆಚ್ಚು. ಕಲ್ಪನೆಯ ಪ್ರಯೋಗವನ್ನು ಮಾಡೋಣ. ಈಗ ಕಣ್ಮುಚ್ಚಿ ನಿಧಾನವಾಗಿ ಉಸಿರಾಡಿ. ನಿಮ್ಮೊಳಕ್ಕೆ ನೀವು ಹೋಗಿ. ನೀವು ದಲಿತರಾಗಿದ್ದರೆ ಬ್ರಾಹ್ಮಣರ ಮನೆಯಲ್ಲಿ ಹುಟ್ಟಿದ್ದಾಗಿ ಕಲ್ಪಿಸಿಕೊಳ್ಳಿ. ಅಲ್ಲೇ ನೀವು ಒಂದು ಬ್ರಾಹ್ಮಣ ಹುಡುಗ/ಹುಡುಗಿಯಾಗಿಯೋ ಆಗಿ ಒಡನಾಡಿ. ಹಾಗೇ ನೀವು ಬ್ರಾಹ್ಮಣರಾಗಿದ್ದರೆ ಒಂದು ದಲಿತರ ಮನೆಯಲ್ಲಿ ಹುಟ್ಟಿದಂತೆ ಕಲ್ಪಿಸಿಕೊಳ್ಳಿ. ನೀವೂ ಒಂದು ದಲಿತ ಹುಡುಗ/ಹುಡುಗಿಯಂತೆ ಅಲ್ಲಿ ಒಡನಾಡಿ. ಹಾಗೇ ಮುಸ್ಲಿಮರ ಮನೆಯಲ್ಲಿ ಹುಟ್ಟಿದಂತೆ ಒಡನಾಡಿ. ನೀವು ಮುಸ್ಲಿಮರಾಗಿದ್ದರೆ ತನ್ನದಲ್ಲದ ಜಾತಿ ಧರ್ಮದಲ್ಲಿ ಹುಟ್ಟಿದಂತೆ. ಹೀಗೆ ದಿನಕ್ಕೆ ಕೇವಲ ಐದು ನಿಮಿಷ ಸಾಕು. ಏನಾಗುತ್ತದೆ? ಮುತಾಲಿಕ್ ತನ್ನನ್ನು ಒಬ್ಬ ಮುಲ್ಲಾ ಆಗಿ ಕಲ್ಪಿಸಿಕೊಂಡು ನೋಡಿದ್ದರೂ ಒಬ್ಬ ಮುಲ್ಲಾ ತನ್ನನ್ನು ಮುತಾಲಿಕ್ ಆಗಿ ಕಲ್ಪಿಸಿಕೊಂಡಿದ್ದರೂ ಎಷ್ಟೋ ಜೀವಗಳು ಉಳಿಯುತ್ತಿದ್ದವು. ಅಸ್ಪೃಶ್ಯತೆ ಎನ್ನುವುದು ಎಷ್ಟೋ ಕಮ್ಮಿಯಾಗುತ್ತಿತ್ತು.

ಜೊತೆಗೆ ಈ ಪ್ರಯೋಗಕ್ಕೆ ನೀವು ಒಳಗಾದರೆ, ನಿಮ್ಮೊಳಗೊಬ್ಬ ಕವಿ, ಅಂದರೆ ಬೇರೆ ಜೀವಿಗಳ ಒಳ ಹೊಕ್ಕು ಸ್ಪಂದಿಸಿ ಬರುವಂತಹ ಕವಿ, ನಿಮ್ಮೊಳಗೇ ಇರುವ ಕವಿ ಎಚ್ಚರಗೊಳ್ಳುತ್ತಾನೆ. ಈ ಎಚ್ಚರಗೊಂಡ ಕವಿ ಬದುಕುಳಿಯಬೇಕಾದರೆ, ಕುವೆಂಪು ಅವರೇ ಹೇಳುತ್ತಾರೆ– 'ಎದೆಯ ಗೂಡಲ್ಲಿ ಒಂದು ತೊಟ್ಟಿಲು ಕಟ್ಟಿ, ಅದರೊಳಗೊಂದು ಪುಟ್ಟ ಮಗುವನ್ನೊಂದಿಟ್ಟು ತೂಗುತ್ತಿರಬೇಕು' ಅಂತ. ಬೆಳೆಯುತ್ತ ನಾವು ನಮ್ಮ ಮಗುತನ ಕಳೆದುಕೊಳ್ಳುತ್ತೇವೆ. ಅಂದರೆ ನಮ್ಮ ಮುಗ್ಧತೆ ನಮ್ಮ ಬೆರಗು ಕಳೆದುಕೊಳ್ಳುತ್ತೇವೆ. ದೊಡ್ಡವರಾಗುತ್ತ ಒಡಕಾಗುತ್ತೇವೆ. ಬುದ್ಧಿ ಬೇರೆ, ಭಾವ ಬೇರೆ ಛಿದ್ರರಾಗುತ್ತೇವೆ. ಇಡಿಯಾಗಿ ಒಂದಾಗಿ ನಾವು ಇರುವುದಿಲ್ಲ. ಕಾವ್ಯ ಎಂದರೆ 'ಬುದ್ಧಿ ಭಾವಗಳ ವಿದ್ಯುದಾಲಿಂಗನ' – ಇದೂ ಅದೇ ಕವಿ ಮಾತು. ನಮ್ಮ ಎದೆಯ ಗೂಡಲ್ಲಿ ಒಂದು ತೊಟ್ಟಿಲು ಕಟ್ಟಿ ಅಲ್ಲೊಂದು ಪುಟ್ಟ ಮಗುವಿಟ್ಟು ತೂಗಿದರೆ ಬುದ್ಧಿ ಭಾವಗಳ ಕೂಡಿಕೆ ಆಗುತ್ತದೆ.ಆಗ ಅಲ್ಲಿ ಕಾಣುತ್ತದೆ, ಅಲ್ಲಿ ಹುಟ್ಟುತ್ತದೆ.

ಆಟವಾಡುತ್ತಿದ್ದಾಗ ನಿಮ್ಮ ಗೆಳೆಯನಿಗೆ ಬಿದ್ದು ರಕ್ತ ಬಂತು. ಎಲ್ಲಾ ನಕ್ಕರು. ಇಲ್ಲಿ ನಿಮ್ಮ ಗೆಳೆಯ ಬಿದ್ದ, ಗಾಯವಾಯ್ತು, ರಕ್ತ ಬಂತು, ನಕ್ಕೆವು– ಎಂದರೆ ವಿಚಾರ. ಅದೇ ಇದನ್ನು ಸ್ಪಂದಿಸಿ ಒಂದು ಕತೆಯಾಗಿ ಮೂಡಿದರೆ, ಆ ಸುರಿದ ರಕ್ತ, ಆ ಗಾಯ, ಅನುಭವಿಸಿದ ನೋವು– ಅದು ನಿಮ್ಮದೂ ಆಗುತ್ತದೆ. ನನ್ನದೂ ಆಗುತ್ತದೆ. ಯಾಕೆಂದರೆ ಅದು ಕಲೆಯಾಗಿ ಮೂಡಿರುತ್ತದೆ.

## ಅರುಳುಮರುಳು ಕಣ್ಣಲ್ಲಿ– ದಸಂಸ

ದಸಂಸ ಹುಟ್ಟಿ ಹತ್ತತ್ತಿರ ನಲವತ್ತು ವರ್ಷಗಳಾಗುತ್ತ ಬರುತ್ತಿದೆ. ಹಾಗಾಗಿ ದಲಿತ ಸಂಘರ್ಷ ಸಮಿತಿ ಹುಟ್ಟು ಹಾಕಿದವರಿಗೂ ಆಜುಬಾಜೂ 60 ವರ್ಷ ಆಗುತ್ತಿದೆ. ಜೊತೆಗೆ ಇಂದು ದಲಿತ ಸಂಘರ್ಷ ಸಮಿತಿ ನಾಕಾರು ಬಣಗಳೂ ಆಗಿಬಿಟ್ಟಿದೆ. ಯಾರ್ಯಾರು ಯಾವ ಬಣ ಬಣ್ಣಗಳಲ್ಲಿದ್ದಾರೆ ಎಂಬುದೂ ತಕ್ಷಣಕ್ಕೆ ತಿಳಿಯುವುದಿಲ್ಲ. ದಲಿತ ಸಂಘರ್ಷ ಸಮಿತಿಯ ಆರಂಭದ ತಲೆಮಾರಿಗೆ ಸೇರಿದ, ವಯಸ್ಸು 60 ಮೀರಿರುವ ನನಗೆ, ನನ್ನಂಥವರಿಗೆ ಇಂದಿನ ದಸಂಸಗಳ ಹೊಸ ಮುಖಗಳನ್ನು ನೋಡಿದರೆ ಕಾಣುವುದು ಹೇಗೆ?

ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳು ಆದ ವಯಸ್ಸಾದವರೊಬ್ಬರು ತಮ್ಮ ಮುಂದೆ ಓಡಾಡುವ ಎಳೆಯರನ್ನು ಗುರುತಿಸುವಂತೆ ದಸಂಸ ಮೊದಲ ತಲೆಮಾರಿಗೆ ಸೇರಿದವರು ಕಣ್ಮುಂದಿನ ದಲಿತ ಸಂಘರ್ಷ ಸಮಿತಿಯವರನ್ನು ಗುರುತಿಸಬೇಕಾಗಿದೆ! ಇದೊಂದು ರೀತಿ ಕಣ್ಣು ಮಸುಕಾದ ಹಿರಿಯನೊಬ್ಬನು ತನ್ನ ಸಂತಾನಗಳ ಬಗ್ಗೆ ವಿಚಾರಿಸಿದಂತೆ. ಇದು ನನ್ನ ಕಣ್ಮುಂದೆ ಒಂದು ದೃಶ್ಯವಾಗಿ ಓಡಾಡತೊಡಗಿತು. ಹೀಗೆ:

'ಅದೇ, ಸಾಗರ್ನ ಜೊತೆ ಜಗಳ ಮಾಡ್ಕಂಡು ಪಾಲು ತಕ್ಕಂಡು ಊರೂರು ತಿರುಗ್ತಾ, ಹೋದ್ ಕಡೆಯೆಲ್ಲಾ ಸುದ್ದಿ ಮಾಡ್ತಾನಲ್ಲಾಪ್ಪ, ಆ ಲಕ್ಷ್ಮಿನಾರಾಯಣ ಅನ್ನೋನು... ಅವ್ನುವೆ ಸಾಗರ್ನುವೆ ಈಗ್ಲಾರೂ ಮುಖಕ್ಕೆ ಮುಖಕೊಟ್ಟು ಮಾತಾಡೀರ?'

'ಆ ಮಾವಳ್ಳಿ ಶಂಕರ್ನುವೆ ಅದೇ ಲಕ್ಷ್ಮಿನಾರಾಯಣ್ಣುವೆ ವ್ಯಾಜ್ಯ ಮಾಡ್ಕಂಡು ಆಫೀಸ್‌ಗೆ ಬೀಗ ಹಾಕ್ಸಿ ಮುಚ್ಚಿಸಿಬುಟ್ರಂತಲ್ಲಪ್ಪಾ. ಯಾವಾಗ್ಲೋ ಒಂದ್ಸಲ

ಇಬ್ರುಗೂ ಬುದ್ಧಿಬಂದು ಒಟ್ಟಾಗಿ ಬಾಗ್ಲು ತೆಗಿಸ್ತೀವಿ ಅಂತಿದ್ರಂತಲ್ಲಾ... ಅದು ನಿಜವೆ? ಆಫೀಸಿನ ಬೀಗ ತೆಗೀತೆ?'

'ಆ ಬಾಯಿಬುಟ್ಟರೆ ಸಂಕಟದ ಯೆಂಕ್ಟೇಸನೂವೆ ಆ ಗುರುವೆ, ಅದೇಯಪ್ಪ ಮಂಡ್ಯದಾಚೆಗೆ ಒಂದ್ ಹೆಜ್ಜೆ ಕಿತ್ತಿಡದ ರಾಜ್ಯದ ನಾಯ್ಕ, ಅವ್ನು, ಆ ಗುರು ಅನ್ನೋನು... ಆ ಇಬ್ರೂವೆ ಜೊತೇಲೆ ಇರ್ತೀವಿ ಅಂತ ಹೋದ್ರಲ್ಲಾ ಅವ್ರು... ಅವ್ರಿನ್ನೂ ಜೊತೇಲೆ ಇದ್ದಾರ? ಅಥ್ವಾ ಅವ್ರೂ ಬೇರೆ ಬೇರೆ ಆಗ್ಬುಟ್ರಾ?'

'ಅದಿರ್ಲಿ ಕಣಪ್ಪಾ... ಆ ಹುಲಿಯಂಗೆ ಅಬ್ಬರಿಸ್ತಿದ್ದ ಆ ಸೀಯೆಮ್ ಸೀಯೆಮ್ಮು ಅಂತ ಮುನಿಯಪ್ಪ ಅಂತಿದ್ನಲ್ಲಪ್ಪಾ, ಅವ್ನೆ ಬೇರೆಯವರ ಮನೆ ಕಿದ್ದಂಡೆ ಸೇರ್ಕಂಡುಬುಟ್ನಂತಲ್ಲಾ! ನಿಜವೆ?'

'ಅಕ್ಕನ ಮನೆ ಸೇರ್ಕಂಡು ಅಲ್ಲೆ ಏಳ್ಗೆ ಆಯ್ತೀನಿ ಅಂತ ಹೋದ್ನಲ್ಲಪ್ಪಾ... ಆ ದುಗ್ಗದ ಜಯಣ್ಣ, ಈಗ ಎಲ್ ಅವ್ನೆ, ಹೆಂಗ್ ಅವ್ನೆ? ಅಕ್ಕನ ಜೊತೆ ಹೊಂದ್ಕಂಡು ಹೋಗ್ತಾ ಇದ್ದಾನ...'

'ಮೊಟ್‌ಮೊದ್ಲು ನಮ್ಮಟ್ಟಿಯಿಂದ ಕಾಲೆತ್ತಿ ಆಚೆ ಇಟ್ನಲ್ಲಪ್ಪಾ... ಯಾರ... ಅವ್ನ ಹೆಸ್ರೇನಾ... ಆ ಯಂಕ್ಟಸ್ವಾಮಿ, ದೊಡ್ಡಪ್ಪನ ಮನೆ ಸೇರ್ಕಂಡು ನಮ್ಮ ಮನೆತನದ ಹೆಸರನ್ನೂ ಉಳಿಸ್ತೀನಿ ಅಂತಿದ್ದನಂತಲ್ಲಾ... ಅವ್ನೂವೆ ಹೆಂಗಿದ್ದಾನು?'

'ನಿಂತ್‌ಕಡೆ ನಿಲ್ದೆ ಯಾವಾಗ್ಲೂ ಸಿಡಿಮಿಡಿಗುಟ್ತಿದ್ದನಲ್ಲಪ್ಪ.. ಅದಿಯಾ ಆ ರಾಮ.. ರಾಮ ಅನ್ನೋನು... ಈಗ ಬೆಟ್ಟದ ಮೇಲೆ ಮಠ ಕಟ್ಕಂಡು ಇದ್ದಾನಂತಲ್ಲಾ! ಈಗ್ಲಾರು ವಸಿ ಸಮಾಧಾನವಾಗಿದ್ದಾನ?'

'ಅಯ್ಯಯೊ... ಆ ಸಿದ್ಲಿಂಗಪ್ಪನಿಗೆ ನಡೆಯಾಕೆ ಆಗ್ದೆ ಕಾರ್ಲೆ ಓಡಾಡ್ತನಂತಲ್ಲಪ್ಪಾ... ಅಷ್ಟೋ ಇಷ್ಟೋ ಕೋಲ್ ಹಿಡ್ಕಂಡು ನಡೆದಾಡು ಅನ್ನು! ಆರೋಗ್ಯಕ್ಕೆ ಒಳ್ಳೇದು'

'ಎಲ್ಲಾ ಇರ್ಲಿಕಣಾ! ಆ ದ್ಯಾವನೂರಪ್ಪನಿಗೆ ಏನ್ ಬಂತಪ್ಪಾ? ವಯಸ್ಸಿದ್ದಾಗ ಸುಮ್ನಿದ್‌ಬುಟ್ಟು ಇಳಿವಯಸಲ್ಲಿ ಮದ್ವೆ ಆಗೋ ಥರ ಈಗ ರಾಜಕೀಯ ಮಾಡೋಕೆ ಹೊಂಟವ್ನಂತಲ್ಲಾ! ಯಾರಾರು ಅವ್ನ್‌ಗೆ ಒಂದು ಬುದ್ಧಿ ಮಾತು ಹೇಳಾಕಾಗಲ್ವೆ?'

...ಬಹುಶಃ ಹೀಗೆ....

ಆ ದೇವನೂರ ಮಹಾದೇವ ಬರೆದ ಅಮಾಸ ಎಂಬ ಕತೆಯಲ್ಲಿನ ಕುರಿಯಯ್ಯನ ಸ್ಥಿತಿಯೇ ದಸಂಸ ಮೊದಲ ತಲೆಮಾರಿಗೆ ಸೇರಿದವರ ಸ್ಥಿತಿಯೂ ಆದಂತೆ ಕಾಣುತ್ತದೆ.

ಹೀಗೆ ಈ ರೀತಿಯ ದೃಶ್ಯಾವಳಿಗಳು ಕಾಣುತ್ತಿರುವುದಕ್ಕೆ– ಈ ಹಿಂದೆ ರಾಜಕಾರಣಿಗಳಿಗೆ ತಮ್ಮ ವೇದಿಕೆ ನೀಡಲು ಸಂಕೋಚಗೊಳ್ಳುತ್ತಿದ್ದ ದಸಂಸವು ಈಗ, ಬೆಂಗಳೂರಿನಲ್ಲಿ ಕಾಂಗ್ರೆಸ್ಸಿನ ಒಂದು ಬಣದೊಟ್ಟಿಗೆ ಗುರುತಿಸಿಕೊಂಡು ದಲಿತರ ಸ್ಥಿತಿಗತಿ, ರಾಜಕಾರಣ ಇತ್ಯಾದಿ ಸಮಾರಂಭ ಮಾಡಿದರೆ, ದಸಂಸದ ಇನ್ನೊಂದು ಬಣವು ಮೈಸೂರಿನಲ್ಲಿ ಕಾಂಗ್ರೆಸ್ಸಿನ ಇನ್ನೊಂದು ಬಣದೊಟ್ಟಿಗೆ ಗುರುತಿಸಿಕೊಂಡು ದಲಿತರ ಸ್ಥಿತಿಗತಿ, ರಾಜಕಾರಣ ಇತ್ಯಾದಿ ಸಮಾರಂಭ ಮಾಡುವ ಸ್ಥಿತಿಗೆ ತಲುಪಿರುವುದು ಕಾರಣವಾಗಿರಬಹುದು.

## ಗಂಡಭೇರುಂಡ ಪಕ್ಷಿ ಕಥೆ

ಎಲ್ಲೋ ಎಂದೋ ಓದಿದ ಗಂಡಭೇರುಂಡ ಪಕ್ಷಿಯ ಕಥೆಯು ನನ್ನ ತಲೆಯಲ್ಲಿ ಆಗಾಗ ಹಾರಾಡುತ್ತಿರುತ್ತದೆ. ಆ ಗಂಡಭೇರುಂಡ ಪಕ್ಷಿ ಹಾರುತ್ತ ವಿಹರಿಸಿಕೊಂಡು ಬಂದು ಒಂದು ನದೀ ದಡದಲ್ಲಿ ಕೂತು, ಅದರ ಒಂದು ತಲೆ ಒಂದು ಕಡೆ, ಇನ್ನೊಂದು ತಲೆ ಇನ್ನೊಂದು ಕಡೆ ನೋಡುತ್ತ ಆನಂದಿಸುತಿಹುದು. ಅಷ್ಟರಲ್ಲಿ ಆ ಹರಿಯೋ ನದೀಲಿ ತೇಲುತ್ತ ಒಂದು ಫಲವು ಆ ಪಕ್ಷಿ ನೋಡಿತೋ ಎಂಬಂತೆ ದಡಕ್ಕೆ ಬಂದು ನಿಂತಿತು. ಇದ ಕಂಡ ಆ ಪಕ್ಷಿಯ ಒಂದು ತಲೆಯು ಇನ್ನೇನು ಆ ಫಲವನ್ನು ಕುಕ್ಕಿ ತಿನ್ನಬೇಕು ಅನ್ನುವಷ್ಟರಲ್ಲಿ, ಆ ಪಕ್ಷಿಯ ಇನ್ನೊಂದು ತಲೆಯು 'ನಿಲ್ಲಿಸು ತಿನ್ನಬೇಡ' ಎಂದಿತು. ತೊಗಟೆಗೆ ಕೊಕ್ಕು ಸಿಕ್ಕಿಸಿದ್ದ ಈ ತಲೆಯು, ಸುರಿಯುವ ಜೊಲ್ಲು ಉಗತು 'ಯಾಕೆ ತಿನ್ನಬಾರದು?' ಎಂದು ಕಿಡಿ ಕಿಡಿಯಾಗಿ ಕೇಳಿತು. ಇನ್ನೊಂದು ತಲೆಯು ಇನ್ನಷ್ಟು ಕಿಡಿಯಾಗಿ

'ಯಾಕೆ ಅಂದರೆ? ನಾನೂ ತಿನ್ನಬಾರದೆ?'

'ಮೊದಲು ನೋಡಿದ್ದು ನಾನಲ್ಲವೆ?'

'ನಮ್ಮ ದೇಹ ಒಂದೇ ಅಲ್ಲವೆ?'

'ದೇಹ ಒಂದೇ ಆದರೂ ತಿನ್ನುವ ಬಾಯಿ ಬೇರೆ ಬೇರೆ ಅಲ್ಲವೆ?'

–ಹೀಗೆ ವಾಗ್ವಾದ ನಡೆದು ಮೊದಲು ಹಣ್ಣು ಕಂಡ ಆ ತಲೆಯೇ ಪೂರ್ತ ಹಣ್ಣು ತಿಂದಿತು. ಅದು ತಿನ್ನುವುದನ್ನು ನೋಡಲಾಗದೆ ಕಣ್ಣು ಮುಚ್ಚಿಕೊಂಡಿದ್ದ ಈ ತಲೆಯು ಕಣ್ಣು ತೆರೆದರೆ ಕಂಡದ್ದೇನು? ಇನ್ನೊಂದು ಫಲವು ನದೀಲಿ

ತೇಲಿಕೊಂಡು ಬರುತಲಿದೆ. ಮೊದಲು ಹಣ್ಣು ತಿಂದಿದ್ದ ಆ ತಲೆಯು 'ಅದನ್ನು ತಿನ್ನಬೇಡ ವಿಷಫಲ' ಎಂದಿತು. ಇದರಿಂದ ಈ ತಲೆಗೆ ಸಂತೋಷವೇ ಆಗಿ 'ನನ್ನ ಬಾಯಿ ನನ್ನ ತಲೆ, ನಾನು ತಿಂತೇನೆ ನಿಂಗೇನು?' ಎಂದಾಗ, ಆ ತಲೆಯು 'ನೀನೇ ತಿಂದರೂ ನಮ್ಮ ದೇಹ ಒಂದೇ ಅಲ್ಲವೇ?' ಅಂದುದಕ್ಕೆ ಈ ತಲೆಯು 'ದೇಹ ಒಂದಾದರೂ ತಿನ್ನುವ ಬಾಯಿ ಬೇರೆ ಬೇರೆ ಅಲ್ಲವೆ?' ಎಂದು ಹಣ್ಣನ್ನು ತಿಂದೇ ತಿಂದಿತು.

ಹೀಗೆ ತಿಂದಾದ ಮೇಲೆ ಇಡೀ ದೇಹಕ್ಕೆ ಬೆಂಕಿ ಕೆಂಡವ ಸುರಿದಂತಾಗಿ ಆ ಉರಿಗೆ ದೇಹ ವಿಲಿ ವಿಲಿ ಒದ್ದಾಡಿ ಮತ್ತು ಕೊನೆಯದಾಗಿ ಆ ಪಕ್ಷಿಯು ಸತ್ತಿತು.

ಪ್ರೀತಿಯ ಸ್ನೇಹಿತರೇ ಕೇಳಿ, ಅಸ್ಪೃಶ್ಯತೆಗೆ ದೇಹ ಒಂದೇ ಆದರೂ ತಲೆ ನೂರೆಂಟು. ಎಡಗೈ, ಬಲಗೈ, ಈ ಎಡಗೈ ಹೆಬ್ಬೆರಳು, ಕಿರುಬೆರಳು, ಬಲ ಹೆಬ್ಬೆರಳು, ಕಿರುಬೆರಳು ಹೀಗೆ ನೂರೆಂಟು. ಸ್ವಾರ್ಥ ದಲಿತ ರಾಜಕಾರಣಿಗಳು ಹೊಣೆಗೇಡಿ ದಲಿತ ನೌಕರರು ತಮ್ಮ ಅಹಂ, ಅಧಿಕಾರಕ್ಕಾಗಿ ಇರುವ ಭಿನ್ನತೆಯನ್ನು ಹೆಚ್ಚಿಸುತ್ತಿರುವರು. ಆದರೆ ನೆನಪಿರಲಿ, ಗಂಡಭೇರುಂಡ ಪಕ್ಷಿಯಂತೆ ಸಾಯುವವರು ಒಟ್ಟಿಗೆ ದೇಹವಾದ ನಾವು. ಕಾಲಾವಕಾಶವಿರುವಾಗಲೇ ಊರಾಚೆ ಬಿದ್ದಿರುವ, ಊರಾಚೆಗೆ ಎಸೆಯಲ್ಪಡುತ್ತಿರುವ ಸಣ್ಣ ಪುಟ್ಟ ಜಾತಿಗಳೊಳಗಿನ ಭಿನ್ನತೆಯನ್ನು ಮೊದಲು ಕಿತ್ತೆಸೆದರೆ ಮಾತ್ರ ನಮ್ಮ ಉಳಿವು.

ಈಗ ಗಂಡಭೇರುಂಡ ಕತೆಯು ನಿಮ್ಮ ತಲೆಯೊಳಗೆ ಹಾರಾಡಲಿ.

## ಉದ್ಘಾಟನೆಯಾದ ಸಮಾರೋಪ!

ಯಾವಾಗ ನೆನಪಿಲ್ಲ, ಬಹಳ ಹಿಂದೆ ಅರಳಾಳುಸಂದ್ರದ ಸಮತಾ ವಿದ್ಯಾಲಯದಲ್ಲಿ 'ಸಮಾಜವಾದದ ವಿಚಾರಧಾರೆಗಳು ಹಾಗೂ ಪ್ರಸ್ತುತತೆ' ಎಂಬ ಬಗ್ಗೆ ವಿಚಾರ ಸಂಕಿರಣವೊಂದು ನಡೆಯಿತು. ಅಲ್ಲಿ ನಾನು ಸಮಾರೋಪ ಭಾಷಣ ಮಾಡಬೇಕಿತ್ತು. ಹೆಚ್ಚೂಕಮ್ಮಿ ಕಾಲಕ್ಕೆ ಸರಿಯಾಗಿಯೇ ನಾನು ಅರಳಾಳುಸಂದ್ರದ ಬಸ್ ನಿಲ್ದಾಣದಲ್ಲಿ ಇಳಿದಾಗ ಅಲ್ಲಿ ಒಂದಿಬ್ಬರು ಶಿಬಿರಾರ್ಥಿಗಳು ಬ್ಯಾಗು ನೇತಾಕಿಕೊಂಡು ಊರಿಗೆ ಹೊರಡಲು ನಿಂತಿದ್ದವರು ನನ್ನನ್ನು ನೋಡಿ ಬಸ್ ಹತ್ತದೆ ನಿಂತರು. ಏನು ಸಮಾಚಾರ ಎಂದು ಕೇಳಿದೆ. 'ನೀವು ಬರುವುದಿಲ್ಲವೇನೊ ಎಂದು ಭಾವಿಸಿ ಸಭೆ ಮುಗಿಸಿಬಿಟ್ಟೆವು!' ಎಂದರು. 'ಆಯ್ತು, ನೀವು ಹೊರಡಿ. ಹೇಗೂ ಬಂದಿದ್ದೇನೆ, ಎಲ್ಲರನ್ನೂ ನೋಡಿಕೊಂಡು ಬರುವೆ' ಎಂದು ನಡೆದೆ. ಅವರೂ ನನ್ನ ಜೊತೆಯಲ್ಲೆ ಬರತೊಡಗಿದರು.

ನಡೆಯುತ್ತಾ ಮಾತಾಡುತ್ತಾ ನನಗೆ ತಿಳಿದು ಬಂತು– ಶಿಬಿರವು ಉದ್ಘಾಟನೆ ಆದಾಗಲಿಂದಲೇ ವಾದ ವಿವಾದ ನಡೆದೂ ನಡೆದೂ ವಿಚಾರಗಳು ಸುಸ್ತಾಗಿವೆ ಎಂದು! ಗಾಂಧಿ, ಜೆಪಿ, ಲೋಹಿಯಾ, ಅಂಬೇಡ್ಕರ್, ವಿನೋಬಾ ಹೀಗೆ ಇವರು, ಇವರ ಚಿಂತನೆಗಳನ್ನು ಆಯುಧ ಮಾಡಿಕೊಂಡು ಶಿಬಿರಾರ್ಥಿಗಳು ಬಡಿದಾಡಿದ್ದರು. ನಾನು 'ಏನಾರು ನಮ್ಮ ನಾಗ್ ಈ ವಿಚಾರ ಸಂಕಿರಣದ ಉದ್ಘಾಟನೆ ಮಾಡಿಬಿಟ್ಟನಾ, ಹೇಗೆ?' ಎಂದು ಜೋಕ್ ಮಾಡಿದೆ. ಅವರು ನಕ್ಕರು.

ಶಿಬಿರ ನಡೆಯುತ್ತಿದ್ದ ಸ್ಥಳಕ್ಕೆ ನಾವು ತಲುಪಿದಾಗ ಶಿಬಿರಾರ್ಥಿಗಳು ಗಂಟು ಮೂಟೆ ಕಟ್ಟುತ್ತಿದ್ದರು. 'ಏನ್ರಪ್ಪಾ, ಏನೋ ಅಪರೂಪಕ್ಕೆ ನಾನು ಸಮಾರೋಪ

ಭಾಷಣ ಮಾಡಲು ಬಂದರೆ ನೀವು ಮುಗಿಸಿಯೇ ಬಿಟ್ಟಿದ್ದೀರಲ್ಲಾ!' ಎಂದೆ. 'ಆಯ್ತು, ಹೇಗೂ ಬಂದಿದ್ದೀರಿ, ಮಾತಾಡಿ' ಅಂದರು. ವಾತಾವರಣ ಬಿಗಿದುಕೊಂಡೇ ಇತ್ತು.

ನಾನು ಮಾತಾಡಿದ್ದು ಬಹುಶಃ ಇಷ್ಟೆ: 'ಗಾಂಧಿ– ಕಾಠಿಣ್ಯದ ತಂದೆಯಂತೆ. ಜೆಪಿ– ಅಸಹಾಯಕ ತಾಯಿ. ವಿನೋಬಾ– ಮದುವೆಯಾಗದ ವ್ರತನಿಷ್ಠ ಅಕ್ಕನಂತೆ. ಲೋಹಿಯಾ– ಊರೂರು ಅಲೆಯುವ ಮನೆ ಸೇರದ ಅಲೆಮಾರಿ ಮಗ. ಅಂಬೇಡ್ಕರ್– ತಾರತಮ್ಯಕ್ಕೆ ಒಳಗಾಗಿ ಮುನಿಸಿಕೊಂಡು ಮನೆ ಹೊರಗೆ ಇರುವ ಮಗ' – ಇದು ನಮ್ಮ ಕುಟುಂಬ. ನಾವು ಇಲ್ಲಿನ ಸಂತಾನ. ಇದನ್ನು ಹೀಗಲ್ಲದೆ ಹೇಗೆ ನೋಡಬೇಕು? ಹೇಳಿ, ನಾವು ಈಗ ಏನು ಮಾಡಬೇಕು?

ಈ ಸಮಾರೋಪ ಭಾಷಣ! ಮುಗಿದ ಮೇಲೆ ಸಭೆ ಮುಗಿಯಲಿಲ್ಲ!!

# ಮಹಾಂಧರ ಮೆದುಳೊಳಗೆ

# ಮತಾಂಧರ ಮೆದುಳೊಳಗೆ ಕೆಲವು ಕ್ಷಣಗಳು

ನನ್ನೊಳಗೆ ಹಾದುಹೋಗುತ್ತಿರುವ ಅನಿಸಿಕೆಗಳನ್ನು ಹಾಗಾಗೇ ಹಿಡಿದುಕೊಡಲು ಯತ್ನಿಸುವೆ. ಇತ್ತೀಚೆಗೆ, ಮಂದಿರ ಮಸೀದಿ ನೆಪದಲ್ಲಿ ಭೂತವು ಎದ್ದು ನಮ್ಮ ಸುತ್ತಲೂ ನಾಲಿಗೆ ಚಾಚುತ್ತಿದ್ದಾಗ, ರಾತ್ರಿ ದೂರದ ಹೆಜ್ಜೆ ಸಪ್ಪಳಗಳೂ ಬೆಚ್ಚಿಸುತ್ತಿದ್ದವು. ನಾಯಿ ಬೊಗಳಿದರೆ ನಾನಾರ್ಥ ಆಗುತ್ತಿದ್ದವು. ನಿದ್ದೆಬಾರದೆ ಒದ್ದಾಡುತ್ತಿದ್ದೆ. ಕೊಲೆ ಸುಲಿಗೆಗಳಿಲ್ಲದೆ ಹಗಲು ಬರುತ್ತಿರಲಿಲ್ಲ.

ಒಟ್ಟಲ್ಲಿ ಬೀಸುವ ಗಾಳಿಯಲ್ಲೇ ನೆಮ್ಮದಿ ಕೆಟ್ಟಿತ್ತು. ಇಂಥ ನೆಮ್ಮದಿ ಕೆಟ್ಟಂಥ ಸ್ಥಿತಿಯಲ್ಲಿ ಕೆಲವರಿಗೆ ನೆಮ್ಮದಿ ಸಮಾಧಾನ ಉಂಟಾಗಿರಬಹುದೇ ಹೇಗೆ? ಈ ಪ್ರಶ್ನೆ ಬಿಡದೆ ಕಾಡುತ್ತಿದೆ. ಹಿಂದೊಮ್ಮೆ, ಯಾರೋ ಒಬ್ಬ ಒಂದು ಕೊಲೆ ಮಾಡಿ, ಆ ಕೊಲೆ ಮಾಡಿದ ಸ್ಥಳದಲ್ಲೇ ನಿದ್ರಿಸಿದ್ದು ಸುದ್ದಿಯಾಗಿತ್ತು. ಆ ಕೊಲೆಗಾರನ ನೆಮ್ಮದಿಯ ಆಳವೇನು? ತಿಳಿಯದೆ ಬೆಚ್ಚಿಸುತ್ತದೆ. ಹೀಗೇ ನನ್ನ ಪರಿಚಿತರೊಬ್ಬರಿದ್ದಾರೆ. ಅವರ ಸುತ್ತಲೂ ನೆಮ್ಮದಿ ಇದ್ದಾಗ ಚಡಪಡಿಸುತ್ತಾರೆ. ಆಗ ಅವರು ಒಂದಲ್ಲಾ ಒಂದು ನೆಪ ತೆಗೆದು ಸೂತ್ರ ಕಿತ್ತುಬಿಡುತ್ತಾರೆ. ಆಗ ಸುತ್ತಲೂ ನೆಮ್ಮದಿ ಕೆಡಲು ತೊಡಗಿದಾಗ ಅವರೊಳಗೆ ನೆಮ್ಮದಿ ಉಂಟಾಗತೊಡಗುತ್ತದೆ. ಆಗ ಅವರೇ ಸೂತ್ರಧಾರರಂತಾಗುತ್ತಾರೆ. ಅವರು ಹೇಳಿದ್ದು ನಡೆಯುತ್ತದೆ. ಹೀಗೆ ಮಂದಿರ ಮಸೀದಿ ನೆಪ ತೆಗೆದು ಭಾರತದ ನೆಮ್ಮದಿಯನ್ನು ಕೆಡಿಸಿದ ಆರ್‌ಎಸ್‌ಎಸ್, ಬಿಜೆಪಿಗಳ ನೆಮ್ಮದಿಯೂ ಹೀಗೆ ಇರಬಹುದೆ? ಆರ್‌ಎಸ್‌ಎಸ್‌ನ ನೆಮ್ಮದಿಯ ಪ್ರಾಣಪಕ್ಷಿ ಎಲ್ಲಿ ಚಟಪಟಗುಟ್ಟುತ್ತಿದೆ? ಶ್ರೀ ಗೋಲ್ವಾಳ್ಕರ್‌ರ ಹೃದಯ ಬಗೆದು ನೋಡಿದರೆ ಅದು ಕಾಣುತ್ತದೆ. 'ಚಾತುರ್ವರ್ಣಕ್ಕೆ ಒಳಪಡುವ ಯಾವ ಹಿಂದೂ ಜನತೆ

ಇದೆಯೋ ಅದೇ ನಮ್ಮ ದೇವರು' ಎಂದು ಗೋಲ್ವಾಳ್ಕರ್ ಬರೆಯುತ್ತಾರೆ. ಅಂದರೆ ಚಾತುರ್ವರ್ಣರ ಆಚೆ ಇರುವ ಅಸ್ಪೃಶ್ಯರು ಇವರಿಗೆ ದೆವ್ವವೆ? ಒಟ್ಟಿನಲ್ಲಿ ಶೂದ್ರರು ಸೇವಕರಾಗುವುದು ಇವರಿಗೆ ದೈವ. ಒಟ್ಟಿನಲ್ಲಿ, ಈ ದೈವ ಸಾಕ್ಷಾತ್ಕಾರ ಆಗುವವರೆಗೂ ಇವರಿಗೆ ನೆಮ್ಮದಿ ಇಲ್ಲ. ಇವರು ಚಡಪಡಿಸುತ್ತ ಅದಕ್ಕಾಗಿ ಸಮಾಜದ ನೆಮ್ಮದಿ ಕೆಡಿಸುತ್ತಲೇ ಇರುತ್ತಾರೆ. ನೂರೆಂಟು ವೇಷ ಕಟ್ಟುತ್ತಾರೆ. ಚಾತುರ್ವರ್ಣಕ್ಕೆ ವಿರೋಧಿಯಾದ ಮಂಡಲ್ ವರದಿಯನ್ನು ಪ್ರತಿಭಟಿಸುವಾಗ ಒಂದು ಶಾಲಾ ಬಾಲಕಿಯನ್ನು ಬೆಂಕಿಗೆಸೆದು ಹುತಾತ್ಮಳನ್ನಾಗಿಸಿದರು. ಸಾವಿರಾರು ಸಾಧುಸಂತರೆಂಬ ಭ್ರಮಾಧೀನರಿಗೆ ಗಾಂಜಾ ಕುಡಿಸಿ ಆತ್ಮಾಹುತಿಯನ್ನೂ ಮಾಡಿಸುವರು. ಅಷ್ಟೇ ಅಲ್ಲ, ತಮ್ಮ ಭೂತ ತೃಪ್ತಿಗೆ ದೇವರನ್ನೂ ಬಲಿಕೊಡುವರು. ಸದ್ಯಕ್ಕೆ ಪಾಪದ ರಾಮನನ್ನು ತಮ್ಮ ಬಾಣ ಮಾಡಿಕೊಂಡಿರುವರು– ಹೀಗಿದೆ!

ಈ ಸಂಚಿಗೆ ಆರ್‌ಎಸ್‌ಎಸ್ ಕೊಡುವ ಪರ್ಯಾಯ ಹೆಸರುಗಳೋ ಭಯಂಕರವಾಗಿವೆ– ದೇಶಭಕ್ತಿ, ರಾಷ್ಟ್ರಪ್ರೇಮ, ಧರ್ಮ, ತ್ಯಾಗ, ಬಲಿದಾನ ಇತ್ಯಾದಿ ಇತ್ಯಾದಿ. ಇವರಿಗೆ ಇವೆಲ್ಲ ನಿಜವಾಗೂ ಇದ್ದಿದ್ದರೆ ಅವರು ಇವನ್ನೆಲ್ಲ ಜಪಿಸುವಂತೆ ಹೇಳುತ್ತಿದ್ದರೆ ಎಂಬ ಪ್ರಶ್ನೆ ನನ್ನ ಮನಸ್ಸಿಗೆ ಸಿಕ್ಕಿಕೊಂಡಿದೆ. ಸಂತಾನವಿಲ್ಲದವರು ದತ್ತು ತೆಗೆದುಕೊಂಡ ಪ್ರಚಲಿತ ಕತೆ ನಿಮಗೆ ತಿಳಿದಿರಬಹುದು. ಮಕ್ಕಳಿಲ್ಲದ್ದಕ್ಕಾಗಿ ಮಗು ದತ್ತು ತೆಗೆದುಕೊಂಡ ದಂಪತಿಗಳಿಗೆ ಆಮೇಲೆ ಒಂದು ಮಗು ಹುಟ್ಟುತ್ತದೆ, ಬೆಳೆದಂತೆ ಆ ದಂಪತಿಗಳಿಗೆ ಹುಟ್ಟಿದ ಮಗು ಸಂದರ್ಭಕ್ಕೆ ತಕ್ಕಂತೆ ಅಪ್ಪ ಅಮ್ಮ ಎಂದರೆ ಅದೇ ದತ್ತು ಮಗ, ಮಾತುಮಾತಿಗೂ ಅಪ್ಪಅಮ್ಮ, ಅಪ್ಪಅಮ್ಮ ಅನ್ನುತ್ತಿರುತ್ತದಂತೆ– ಜಪಿಸುವಂತೆ. ಈ ರೀತಿಯೇ ಇದೆಯಲ್ಲವೆ ಆರ್‌ಎಸ್‌ಎಸ್ ಪರಿವಾರದ ದೇಶಭಕ್ತಿ ಜಪ? ಇದು ಏನನ್ನು ಹೇಳುತ್ತದೆ? ದೇಶಭಕ್ತಿ, ರಾಷ್ಟ್ರಪ್ರೇಮ, ಧರ್ಮ ಇಲ್ಲದವರು ಅದು ಇಲ್ಲದ್ದಕ್ಕಾಗಿ ತಮ್ಮನ್ನು ತಾವೇ ದೃಢಪಡಿಸಿಕೊಳ್ಳಲು ನಡೆಸುತ್ತಿರುವ ಒಂದು ಪ್ರಯತ್ನ ಅಂತಲೊ ಅಥವಾ ಇದೊಂದು ಗೀಳು ಅಂತಲೊ ಅಥವಾ ಅವರ ದೈವವಾದ 'ಚಾತುರ್ವರ್ಣ'ದ ಸಾಕ್ಷಾತ್ಕಾರಕ್ಕಾಗಿ ಅಂತಲೊ?

ಹೀಗೆ ತಮ್ಮ ಭೂತ ತೃಪ್ತಿಗಾಗಿ ಸಮಾಜದ ನೆಮ್ಮದಿಯನ್ನು ಕೆಡಿಸುವ ಇಂಥವರು ಬಿತ್ತುವ ಸುದ್ದಿ ಕಲ್ಪನೆಗಳ ಆಳ ಅಗಲವೂ ತಿಳಿಯದೆ ಅವೂ ಕಂಗಾಲಾಗಿಸುತ್ತವೆ. ಹಿಂದೊಂದು ಸಲ ಅಶೋಕಪುರಂ ದಲಿತರಿಗೂ ಸವರ್ಣೀಯರಿಗೂ ಗಲಭೆಯಾದಾಗ ಒಂದು ಸುದ್ದಿ ಕಿಚ್ಚಾಗಿ ಹಬ್ಬತೊಡಗಿತು– ದಲಿತರ ಗುಂಪೊಂದು ವಿದ್ಯಾರಣ್ಯಪುರಂ ಸವರ್ಣೀಯರ ಮದುವೆ

ಛತ್ರಕ್ಕೆ ನುಗ್ಗಿತಂತೆ, ಅಲ್ಲಿದ್ದ ಹೆಂಗಸರ ಸೀರೆ ಎಳೆದಾಡಿದರಂತೆ, ಒಬ್ಬಳು ಬೆತ್ತಲಾದಳಂತೆ, ಆ ಗುಂಪು ಆ ಮಹಿಳೆಯ ಮಾನಭಂಗಕ್ಕೂ ಪ್ರಯತ್ನಿಸಿತಂತೆ –ಹೀಗಿತ್ತು ಆ ಸುದ್ದಿಗಳು. ಕೇಳಿ ನಾನು ಕುಗ್ಗಿಹೋದೆ.

ಈ ಸುದ್ದಿಗೆ ಮೈಸೂರಿನ ಪತ್ರಿಕೆಯೊಂದು ಸುಣ್ಣ ಬಣ್ಣ ಹಚ್ಚಿ ಪ್ರಕಟಿಸಿ ಕಿಚ್ಚೆಬ್ಬಿಸಿತು. ಈ ಗಲಾಟೆಯಲ್ಲಿ ನಿಜವೆಷ್ಟು ಎಂದು ತಿಳಿಯಲು ಶ್ರೀ ಪ್ರಾಣೇಶ್‌ರಾವ್, ಡಾ.ಯು.ಆರ್.ಅನಂತಮೂರ್ತಿ, ಪ.ಮಲ್ಲೇಶ್, ತುಳಸಿದಾಸ್ ದಾಸಪ್ಪ, ಅನಂತರಂಗಾಚಾರ್, ಪಟ್ಟಾಭಿರಾಮನ್, ದೇವಯ್ಯ ಹರವೆ ಪ್ರಯತ್ನಿಸಿದರು. ಇವರು, ಆರ್‌ಎಸ್‌ಎಸ್ ಶ್ರೀಪಾದರಾವ್ ಅವರನ್ನು ಕಂಡಾಗ ಅವರು ತುಂಬಾ ದುಃಖಿತರಾಗಿದ್ದರು. ಅಶೋಕಪುರಂನವರು ಮದುವೆ ಛತ್ರಕ್ಕೆ ನುಗ್ಗಿ ಮಹಿಳೆಗೆ ಮಾನಭಂಗ ಮಾಡುತ್ತಿರುವಾಗ ತಾವು ಇದ್ದರೆಷ್ಟು ಸತ್ತರೆಷ್ಟು ಎನ್ನುವಂತಿದ್ದರು. ಅಶೋಕಪುರಂನವರು ಛತ್ರದೊಳಕ್ಕೆ ನುಗ್ಗಿ ಹೆಂಗಸರನ್ನು ಎಳೆದಾಡಿದ್ದನ್ನೂ ಒಬ್ಬಾಕೆಯ ಸೀರೆ ಎಳೆದದ್ದನ್ನೂ ಇನ್ನೊಬ್ಬಾಕೆಯ ತೊಡೆ ಮುಟ್ಟುತ್ತಿದ್ದುದನ್ನೂ ಮುಂದಿನದನ್ನು ಬಾಯಿಂದ ಉಚ್ಚರಿಸಲು ಆಗದವರಂತೆ ಕಷ್ಟಪಡುತ್ತಾ ವರ್ಣಿಸಿದರು.

ಶ್ರೀಪಾದರಾವ್‌ರವರ ವರ್ಣನೆ ಕೇಳಿ ಇವರು ಛತ್ರದಲ್ಲೇ ಇದ್ದಿರಬೇಕು ಅನ್ನಿಸಿತು. 'ಇವೆಲ್ಲಾ ನಡೆಯುವಾಗ ನೀವು ಅಲ್ಲೇ ಇದ್ದಿರಾ?' ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಉತ್ತರಿಸಿದರು. 'ಅಂದು ನಡೆದ ಮದುವೆ ಯಾರದ್ದೆಂದು ಗೊತ್ತೇ?' ಎಂದು ಕೇಳಿದಾಗ 'ಗೊತ್ತಿಲ್ಲ' ಅಂದರು. ನೀವು ಕಣ್ಣಾರೆ ಕಂಡಿದ್ದೆಷ್ಟು ಎಂದು ಕೇಳಿದ್ದಕ್ಕೆ 'ಕಂಡಿಲ್ಲ' ಅಂದರು. ಆ ಛತ್ರದ ಪಕ್ಕದ ಮನೆಯ ಸ್ವಾತಂತ್ರ್ಯ ಹೋರಾಟಗಾರ ಶ್ರೀ ತಗಡೂರು ರಾಮಚಂದ್ರರಾಯರು ತಿಳಿಸಿದಂತೆ 'ಗುಂಪು ನುಗ್ಗಲು ಬಂದಾಗ ತಕ್ಷಣ ಬಾಗಿಲು ಮುಚ್ಚಿಸಿದರು. ಗುಂಪು ಕಾರಿನ ಗಾಜೊಡೆದು ಅಲ್ಲಿಂದ ಮುಂದಕ್ಕೆ ಹೋಯಿತು' ಎಂಬುದಾಗಿತ್ತು. ಬಹುಶಃ ಇದು ನಿಜವಾಗಿತ್ತು.

ಯಾಕೆ ಮತಾಂಧರು, ಮಾನಭಂಗಗಳ ಸುದ್ದಿಗಳನ್ನು, ಅದರಲ್ಲೂ ತಮ್ಮ ಪಾಪದ ಹೆಂಗಸರನ್ನು ಅಸ್ಪೃಶ್ಯರೊ, ಮುಸ್ಲಿಮರೊ ಅಪಹರಿಸಿಕೊಂಡು ಹೋದಂತೊ ರೇಪ್ ಮಾಡಿದಂತೊ ಅಥವಾ ಕೈ ಆಡಿಸಿದಂತೊ ಕಲ್ಪಿಸಿಕೊಂಡು ಅದನ್ನು ವಿವರವಾಗಿ ವರ್ಣಿಸಿಕೊಂಡು ದುಃಖಿಸುತ್ತಾರೆಂಬುದು ನನಗೆ ಅರ್ಥವಾಗದೆ ಉಳಿಯಿತು. ಇಂಥದೆಲ್ಲಾ ನಡೆದಿಲ್ಲವಾದರೂ ಅಂಥದೆಲ್ಲ ಅನೇಕರ ಮನಸ್ಸಲ್ಲಿ ಜರುಗುತ್ತಿತ್ತು! ಕೆಲವರ ಕಣ್ಣುಗಳಲ್ಲಿ ನೀರು ಬಂದಿತ್ತು.

ಕೆಲವರ ಕಣ್ಣುಗಳಲ್ಲಿ ರಕ್ತ ಬಂದಿತ್ತು. ಒಬ್ಬರಾದ ಮೇಲೆ ಒಬ್ಬರು, ಸೀರೆ ಎಳೆದಾಟವಾದ ಹೆಂಗಸರು ಬೆತ್ತಲಾದ ಆ ದೃಶ್ಯಗಳನ್ನು ರವಾನಿಸುತ್ತಿದ್ದರು. ಹೀಗೆಯೇ ಇತ್ತೀಚಿನ ಹಿಂದೂ ಮುಸ್ಲಿಂ ಗಲಭೆ ಸಮಯದಲ್ಲೂ ಇಂಥವೇ ಸುದ್ದಿಗಳು ತುಂಬಿದ್ದವು. ದೇವಸ್ಥಾನಗಳನ್ನು ಮುಸ್ಲಿಮರು ಕೆಡವಿದರಂತೆ ಅಂತ ಹಿಂದೂಗಳು ಸುದ್ದಿ ಮಾಡುತ್ತಿದ್ದರು. ಹಾಗೆ ಮಸೀದಿಗಳನ್ನು ಹಿಂದೂಗಳು ಕೆಡವಿದರಂತೆ ಅಂತ ಮುಸ್ಲಿಮರು ಸುದ್ದಿ ಮಾಡುತ್ತಿದ್ದರು. ಕಾಶ್ಮೀರದಲ್ಲಿ ನೂರಾರು ದೇವಸ್ಥಾನಗಳ ನೆಲಸಮ ಎಂಬ ಸುಳ್ಳಿನ ಸುರಿಮಳೆಯಾಯ್ತು. ಅತ್ಯಾಚಾರದೊಡನೆ ಹಾಲಿಗೂ ನೀರಿಗೂ ವಿಷ ಬೆರೆಸಿ ಹರಡುತ್ತಿದ್ದರು. ಇವರುಗಳು ಮಾಡುತ್ತಿದ್ದುದಾದರೂ ಏನನ್ನು? ಅವರವರುಗಳಿಗೆ ಇಷ್ಟವಾದುದನ್ನು ಅವರವರುಗಳೇ ಅವರ ಮನಸ್ಸಿನಲ್ಲಿ ಧ್ವಂಸ ಮಾಡಿಕೊಳ್ಳುತ್ತಿದ್ದರು. ಅದನ್ನು ಕಣ್ಣಿಗೆ ಕಟ್ಟಿಕೊಂಡು ಹೃದಯಕ್ಕೆ ತುಂಬಿಕೊಂಡು ಅನುಭವಿಸಿ ಅನುಭವಿಸಿ ಬಿತ್ತನೆ ಮಾಡುತ್ತಿದ್ದರು.

ಇದೇನು? ಇದು ಯಾಕಾಗಿ? ಇದೇನು ಅವರುಗಳ ಸುಪ್ತ ಮನಸ್ಸಿನ ಬಯಕೆಯೇ ಅನ್ನಿಸಿ ದಿಗಿಲಾಗುತ್ತದೆ. ಅಥವಾ ಅವರ ಯಾವುದೊ ಒಂದು ಬಯಕೆಯನ್ನು ಕೈಗೂಡಿಸಿಕೊಳ್ಳುವ ಸಲುವಾಗಿ ಇಂಥವುಗಳೆಲ್ಲ ಆಗಲಿ ಎಂದು ಆಶಿಸುವ ಅವರ ಈ ಮನಃಸ್ಥಿತಿ ಎಂತಹುದು? ಅಥವಾ ಇನ್ನೇನು? ಅರ್ಥಮಾಡಿಕೊಳ್ಳಲು ಹೊರಟಷ್ಟೂ ಇದರ ಆಳ ಇನ್ನೂ ಆಳವೇ ಆಗುತ್ತ ಹೋಗುತ್ತದೆ. ತರಂಗದಲ್ಲಿ ಶ್ರೀ ಎಂ.ವಿ.ಕಾಮತ್ ಬರೆಯುತ್ತ 'ಹಿಂದೂಗಳ ಕನಸಿನಲ್ಲಿ ಬಂದು ಹೆದರಿಸುವ ಘಜನಿಯೋ ಘೋರಿಯೋ ಹುಟ್ಟದಿದ್ದರೆ ಚೆನ್ನಾಗಿತ್ತು' ಅನ್ನುತ್ತಾರೆ. ಈ ರೀತಿ ಅಂದೂ ಅಂದೂ ದುಃಸ್ವಪ್ನ ಹುಟ್ಟಿಸುವ ಪಿತೂರಿ ಇದು! ಮುಗ್ಧ ಜನಸಮುದಾಯದ ಮನಸ್ಸೊಳಗೆ ಇಂಥ ಗಾಬರಿಗಳನ್ನು ಬಿತ್ತನೆ ಮಾಡಿದರೆ ಏನಾಗುತ್ತದೆ? ಕಂಡ ಕಂಡವರೆಲ್ಲಾ ಘಜನಿ ಘೋರಿಗಳಾಗಿ ಕಾಣತೊಡಗುತ್ತಾರೆ. ಭೀತಿ ಆಳ್ವಿಕೆ ಮಾಡತೊಡಗುತ್ತದೆ. ವಿವೇಕ ವಿವೇಚನೆ ಮರೆಯಾಗುತ್ತವೆ. ಇದು ಯಾಕೆ ಯಾರಿಗೆ ಬೇಕಾಗಿದೆ? ಈ ಮುಸ್ಲಿಮರು ಪರಕೀಯರೆಂಬ ಭೀತಿಯನ್ನು ಎಬ್ಬಿಸುತ್ತಿರುವುದಾದರೂ ಯಾಕಾಗಿ? ತಾವು ಆರ್ಯರ ಪಳೆಯುಳಿಕೆ ಎಂಬ ಪರಕೀಯ ಭೀತಿಯಿಂದ ನರಳುತ್ತಿರುವ ಕೆಲವರು ಅದನ್ನು ಮುಚ್ಚಿಹಾಕಲು ಮುಸ್ಲಿಮರು ಪರಕೀಯರೆಂಬ ಭೀತಿಯನ್ನು ಎತ್ತಿ ಕಟ್ಟುತ್ತಿರಬಹುದೆ? ಒಂದನ್ನು ಎತ್ತಿಕಟ್ಟಿ ಅಂಥದೇ ಇನ್ನೊಂದನ್ನು ಮರೆಸಲು ಪ್ರಯತ್ನಿಸಿದರೆ ಏನಾಗುತ್ತದೆ? ಮರೆಯುವುದರ ಬದಲು ಮರೆಯದಿರುವುದು ತಾನೇ ಆಗುವುದು?

ಉತ್ತರ ಪ್ರದೇಶದ ಆರ್‌ಎಸ್‌ಎಸ್ ಶಾಲಾ ಪಠ್ಯಪುಸ್ತಕಗಳಲ್ಲಿ 'ಆರ್ಯರು ಭಾರತದ ಮೂಲನಿವಾಸಿಗಳು' ಎಂದು ಸೇರಿಸಿರುವುದಕ್ಕೂ ಈ ಭೀತಿಯೇ ಕಾರಣವಲ್ಲವೆ? ಇದೆಲ್ಲ ಎಲ್ಲಿಗೆ ತಂದು ನಿಲ್ಲಿಸುತ್ತದೆ? ಇಬ್ಬರೂ ಪರಕೀಯರೂ ಎಂಬಲ್ಲಿಗೆ ತಾನೆ? ಇದು ಬೇಕಾಗಿರಲಿಲ್ಲ. ಇಂಥ ದೊಂಬರಾಟದ ಬದಲು ಐಕ್ಯತೆಗಾಗಿ ತುಡಿದರೆ ಈ ಪರಕೀಯ ಭಾವನೆಯೇ ಲಯವಾಗುವುದಿಲ್ಲವೆ? ಇಂದು ಇದು ಬೇಕಾಗಿದೆ.

ಈ ಭೀತಿಗ್ರಸ್ತರಿಗೆ ಮತ್ತೆರಡು– ಸ್ತ್ರೀಭೀತಿ ಕಾಟ ಮತ್ತು ಅಸ್ಪೃಶ್ಯಭೀತಿ ಕಾಟ ಸೇರಿಕೊಂಡು ಅಟ್ಟಾಡಿಸುತ್ತ ಕನಸಲ್ಲಿ ಬಂದು ಸಾಕಷ್ಟು ನೆಮ್ಮದಿ ಕೆಡಿಸುತ್ತಿರುವಂತಿದೆ. ಉತ್ತರ ಪ್ರದೇಶದ ಸಮಾಜಶಾಸ್ತ್ರ ಪುಸ್ತಕದಲ್ಲಿ 'ಈ ಸ್ತ್ರೀ ಸ್ವಾತಂತ್ರ್ಯದ ದೆಸೆಯಿಂದಾಗಿ ಸಂಸಾರದಲ್ಲಿ ಕಲಹ ಉಂಟಾಗುತ್ತಿದೆ. ಈ ಕಾರಣದಿಂದಾಗಿ ಅನೇಕ ಸಂಸಾರಗಳು ಛಿದ್ರವಾಗಿವೆ' ಎಂದು ಶಾಲಾ ಮಕ್ಕಳಿಗೆ ಬೋಧಿಸುವ ಇವರ ಕನಸಲ್ಲಿ ಹೆಣ್ಣು ಹೇಗೆ ಕಾಣಿಸಿಕೊಂಡಿರಬೇಕು? ಮಹಿಳೆಯು ಮನೆ ಸೇರದೆ ಬೀದಿಬೀದಿ ಅಲೆಯುವಂತೆ ಇವರಿಗೆ ದುಃಸ್ವಪ್ನ ಬೀಳುತ್ತಿರಬೇಕು. ಇದಕ್ಕೆ ಮಹಿಳೆಯರೆಲ್ಲ ಕುಪಿತರಾಗಿ ಇಂಥ ಗಂಡಸರ ಸಹವಾಸವೇ ಬೇಡ ಎಂದು ಪ್ರತ್ಯೇಕ ರಾಜ್ಯ ಕೇಳಿದರೆ ಗತಿ ಏನು? ಬ್ರಹ್ಮಚಾರಿಗಳು ಹೆಚ್ಚಾಗಿರುವ ಆರ್‌ಎಸ್‌ಎಸ್‌ಗೆ ಈ ಸಮಸ್ಯೆಯ ಪರಿವೆ ಇದ್ದಂತಿಲ್ಲ! ಚಾತುರ್ವರ್ಣ ದೈವ ಸಾಕ್ಷಾತ್ಕಾರ ಅಂದುಕೊಂಡಿರುವ ಆರ್‌ಎಸ್‌ಎಸ್‌ಗೆ ಶೂದ್ರರನ್ನು ಪಳಗಿಸಿ ತಲೆಬೋಳಿಸಿ ನಾಮವಿಕ್ಕಿ ತಮ್ಮ ಸೇವಕರನ್ನಾಗಿಸಿಕೊಳ್ಳಬಹುದಾದ ಆತ್ಮವಿಶ್ವಾಸವಿದೆ. ಆದರೆ ತಲೆತಲಾಂತರದಿಂದಲೂ ಚಾತುರ್ವರ್ಣದ ಕಟ್ಟಳೆ ಒಪ್ಪದೆ ಹೊರಗಿರುವ ಅಸ್ಪೃಶ್ಯಭೀತಿ ಹೆಚ್ಚಾಗಿ ಕಾಡುತ್ತಿರುವಂತಿದೆ. ಈ ಅಸ್ಪೃಶ್ಯಭೀತಿ ಇವರ ಕನಸಲ್ಲಿ ಹೇಗೆ ಕಂಡಿರಬೇಕು? ಅಸ್ಪೃಶ್ಯನು ಅವರ ಅಡುಗೆಮನೆ ಹೊಕ್ಕಿ ಎಂಜಲು ಮಾಡುತ್ತಿರುವಂತೆ, ಗರ್ಭಗುಡಿ ಒಳಗೆ ಕೂತಿರುವಂತೆ, ಹೀಗೆ.

ಹೀಗೆ ಇಷ್ಟೆಲ್ಲಾ ಭೀತಿಮಯವಾದವರು ಸಮಾಜದಲ್ಲಿ ಭೀತಿಗಳನ್ನು ಬಿತ್ತನೆ ಮಾಡಿ ಚಾತುರ್ವರ್ಣದ ತಮ್ಮ ದೈವ ಸಾಕ್ಷಾತ್ಕಾರಕ್ಕಾಗಿ ರಾಮನೆಂಬ ದೇವರನ್ನು ಬಲಿಕೊಟ್ಟು ಹೊರನೋಟಕ್ಕೆ ಮಸೀದಿಯನ್ನು ಧ್ವಂಸ ಮಾಡಿದರು. ಆದರೆ ನಿಜವಾಗಿ ಆದದ್ದು ಏನು? ಶೂದ್ರರು ಸೇವಕರಾಗುವತ್ತ ಸ್ವಯಂ ಉತ್ಸಾಹದಿಂದ ದಾಪುಗಾಲು ಇಟ್ಟರು. ಜೊತೆಗೇ ಭಾರತದ ನೈತಿಕತೆ ಕುಸಿಯಿತು. ಬಾಬರಿ ಮಸೀದಿಯನ್ನು ಮಾತ್ರವಲ್ಲ ಅದರೊಡನೆ ಇನ್ನೂ ನಾಕಾರು ಮಸೀದಿಗಳನ್ನು ಸೇರಿಸಿ ಅವಕ್ಕೆಲ್ಲ ಯಾರೋ ಒಂದಿಬ್ಬರು ಮತಾಂಧ

ಹಿಂದೂ ಭ್ರಮಾಧೀನರು ಬಾಂಬ್ ಹಾಕಿ ನಾಶಪಡಿಸಿದ್ದಲ್ಲಿ ಭಾರತದ ನೈತಿಕತೆ ಇಷ್ಟೊಂದು ಕುಸಿಯುತ್ತಿರಲಿಲ್ಲ. ಆಗ ಇದು ಒಂದಿಬ್ಬರು ಪಾತಕಿಗಳ ಕೃತ್ಯ ಎಂದಾಗುತ್ತಿತ್ತು. ಎಲ್ಲೊ ಕಾಶ್ಮೀರದಲ್ಲಿ ನಾಕಾರು ದೇವಸ್ಥಾನಗಳನ್ನು ಜಖಂ ಮಾಡಿದ್ದಕ್ಕೆ ಪ್ರತಿಯಾಗಿ ಇದೂ ಆಯ್ತು ಅಂದುಕೊಳ್ಳಬಹುದಿತ್ತು. ದೇವಸ್ಥಾನ ನಾಶಕರೋ ಮಸೀದಿ ನಾಶಕರೊ ಅವರೆಲ್ಲ ಸಮಾಜದ ಕಣ್ಣಿಗೆ ಕೇಡಿಗರಂತೆ ಕಾಣುತ್ತಿದ್ದರು. ಆದರೆ ಈಗ ಆದದ್ದು ಏನು? ಆರ್‌ಎಸ್‌ಎಸ್, ಬಿಜೆಪಿ ಕೇಡಿಗರು ತಮ್ಮ ಕೃತ್ಯಕ್ಕೆ ಇಡೀ ಸಮಾಜವೇ ಭಾಗಿ ಎಂಬಂತೆ ಸಂಚುಮಾಡಿಬಿಟ್ಟರು. ಅಸ್ಪೃಶ್ಯನೊಬ್ಬ ಸಂವಿಧಾನ ಬರೆದದ್ದನ್ನು ಸಹಿಸಲಾರದವರು ಏನು ಬೇಕಾದರೂ ಮಾಡಬಲ್ಲರು.

ನಾಕಾರು ಜನ ಕೇಡಿಗರು ಮಸೀದಿಯನ್ನೊ ದೇವಸ್ಥಾನವನ್ನೊ ಧ್ವಂಸ ಮಾಡಿದ್ದರೆ, ಒಬ್ಬ ಕೊಲೆಗಾರ ಕದ್ದೂ ಮುಚ್ಚಿ ತನ್ನ ಕೃತ್ಯ ಮಾಡಿ ಸಮಾಜದ ಎದುರು ಮುಖ ಇಲ್ಲದವನಾಗುವಂತೆ ಇದಾಗುತ್ತಿತ್ತು. ಆದರೆ ಬಾಬರಿ ಮಸೀದಿ ಧ್ವಂಸದಲ್ಲಿ ಕೊಲೆಗಾರ ಗುಂಪಿನೊಡನೆ ಮೆರವಣಿಗೆಯಲ್ಲಿ ಹೋಗಿ ಕೊಲೆ ಮಾಡಿ ಜೈ ಜೈ ಅನ್ನಿಸಿಕೊಂಡಂತಾಗಿ, ಮುಖ ಮರೆಸಿಕೊಂಡು ತಿರುಗಬೇಕಾದವನು, ತಲೆ ಎತ್ತಿ ತಿರುಗುವಂತಾಗಿ ಆ ಕೊಲೆಗಾರ ತನ್ನೊಡನೆ ಸಮಾಜವನ್ನು ಪಾತಕಿಯನ್ನಾಗಿ ಮಾಡಿಬಿಟ್ಟ. ಹೇಳಿ, ಹೇಗೆ ಉಳಿಯುವ?

ಈ ಜಾತಿ ಮತ ಗಲಭೆ ಹುಟ್ಟಿಸುತ್ತಿರುವವರೇ ಆಯಾಯ ಜಾತಿಮತಗಳಿಗೆ ರಕ್ಷಕರಂತೆ ಕಾಣುವುದು– ಒಟ್ಟಿನಲ್ಲಿ ಇದು ಗೋಜಲಾಗಿದೆ. ಇತ್ತೀಚೆಗೆ ಸರಗೂರಲ್ಲಿ ದಲಿತ–ಸವರ್ಣೀಯ ಗಲಭೆಯಾದಾಗ 'ಆ ಗಲಭೆಗೆ ಕಾರಣರಾದ ದಲಿತರು ಇದ್ದಲ್ಲಿ ಅವರನ್ನು ನೀವೇ ಬಹಿರಂಗಪಡಿಸಿ ಹೊರಹಾಕಿ' ಎಂದು ನನ್ನ ದಲಿತ ಸಂಘರ್ಷ ಸಮಿತಿ ಗೆಳೆಯರಿಗೆ ಸಲಹೆ ಮಾಡಿದೆ. ಹೀಗೆ ಮಾಡಿದರೆ ದಲಿತರ ಮೇಲೆ ಇನ್ನೂ ಹೆಚ್ಚಿಗೆ ಕೊಲೆ ಸುಲಿಗೆ ಆಗುತ್ತದೆಂಬ ಆತಂಕ ಅವರದಾಗಿತ್ತು. ಅವರು ಹಿಂಜರಿದರು. ಯಾವುದೇ ಕೋಮುಗಲಭೆಗಳಲ್ಲೂ ಕೇಡಿಗರೇ ತಾವು ರಕ್ಷಕರು ಎಂಬಂತೆ ಭ್ರಮಿಸಿಕೊಂಡಿರುವರು. ಅಲ್ಲದೆ ಆಯಾಯ ಜಾತಿಮತಗಳೂ ಕೇಡಿಗರನ್ನೇ ತಮ್ಮ ರಕ್ಷಕರು ಎಂಬಂತೆ ಭ್ರಮಿಸಿರುವುವು.

ಹೇಳಿ, ಹೇಗೆ ಉಳಿಯುವ?

## ರಾಮನನ್ನು ಹುಡುಕಬೇಕಾಗಿದೆ!

ಚಂದಮಾಮದಲ್ಲಿ ಆಗಾಗ ಬರುವ ಒಂದು ಜಾಹೀರಾತು ನಿಮಗೂ ಕಾಣಿಸಿರಬೇಕು. 'ಸಹನೆ ಮತ್ತು ಪ್ರೀತಿ ನನ್ನ ಧರ್ಮ' ಎಂಬ ಗಾಂಧೀಜಿಯ ನುಡಿಯೇ ಆ ಜಾಹೀರಾತು. ಇದು ಕಣ್ಣಿಗೆ ಕಂಡಾಗಲೆಲ್ಲಾ ಸುಮ್ಮನಾದರೂ ನೋಡುತ್ತೇನೆ. ನೋಡಿದಾಗಲೆಲ್ಲಾ ಅದು ನನ್ನ ಅರಿವನ್ನು ಹಿಗ್ಗಿಸುತ್ತಾ ಹೋಗಿದೆ.

ನಾವು ಇಷ್ಟಪಡುವ ವ್ಯಕ್ತಿ, ವಸ್ತು ವಿಚಾರಗಳ ಬಗ್ಗೆ ನಮಗೆ ಪ್ರೀತಿ ಇದ್ದೇ ಇರುತ್ತದೆ. ಇಲ್ಲಿ ತಪ್ಪಾದರೂ ಸರಿಯಾಗೇ ಕಾಣಿಸಬಹುದು! ಆದರೆ ನಾವು ಇಷ್ಟಪಡದ ವ್ಯಕ್ತಿ, ವಸ್ತು ವಿಚಾರಗಳ ಬಗ್ಗೆ ಪ್ರೀತಿ ಇರುವುದಿಲ್ಲ. ಆದ್ದರಿಂದಲೇ ನಾವು ಅವುಗಳ ಬಗ್ಗೆ ಇಲ್ಲಿ ಸಹನೆಯಿಂದಲಾದರೂ ಇರುವುದನ್ನು ಕಷ್ಟಪಟ್ಟು ಅಭ್ಯಾಸ ಮಾಡಬೇಕಾಗುತ್ತದೆ. ಸಹನೆಯನ್ನು ನಾವು ರೂಢಿಸಿಕೊಳ್ಳಬೇಕಾದುದು– ನಾವು ಇಷ್ಟಪಡದ ವ್ಯಕ್ತಿ, ವಸ್ತು ವಿಚಾರಗಳ ಹಿತದೃಷ್ಟಿಯಿಂದ ಅಲ್ಲ. ನಾವು ಸಹನೆಗೆಟ್ಟ ಕ್ಷಣ ನಾವು ಅಧರ್ಮಿಗಳಾಗುತ್ತೇವೆ, ಕುಬ್ಜರಾಗುತ್ತೇವೆ. ಡಿಸೆಂಬರ್ 6ರಂದು ಹಿಂದೂಗಳೆನ್ನಿಸಿಕೊಂಡ ಕೆಲವರು ಸಹನೆಗೆಟ್ಟು ಮಸೀದಿ ಧ್ವಂಸಿಸಿ ಧರ್ಮದಿಂದ ದೂರವಾದರು. ಇದರಿಂದ ಮುಸ್ಲಿಮರಿಗೆ ಆಘಾತವಾಗಿರಬಹುದು. ಆದರೆ ಆ ಹಿಂದೂಗಳು ಧರ್ಮಹೀನರಾದರು. ಇದರಿಂದಾಗಿ ಒಟ್ಟಾರೆ ಭಾರತೀಯತೆ ತಲೆತಗ್ಗಿಸುವಂತಾಯ್ತು.

ಇದು ನಮ್ಮ ಕಣ್ಣೆದುರೇ ನಡೆದುಬಿಟ್ಟಿತು. ಕಾರಣಗಳಿಗೆ ತಡಕಾಡುತ್ತಿರುವೆ. ಸ್ಥೂಲವಾಗಿ ಎಲ್ಲಾ ಧರ್ಮಗಳಲ್ಲೂ ಆಧ್ಯಾತ್ಮಧರ್ಮಿಗಳು,

ಕುಟುಂಬಧರ್ಮಿಗಳು, ವ್ಯಭಿಚಾರಿಧರ್ಮಿಗಳು ಎಂಬ ಮೂರು ಗುಂಪು ಇದ್ದಂತೆ ಕಾಣುತ್ತದೆ. ಆಧ್ಯಾತ್ಮಧರ್ಮಿಗಳೆಂದರೆ ದೇಹವನ್ನೇ ದೇಗುಲ ಮಾಡಿಕೊಂಡ ಧ್ಯಾನಚಿಂತನೆಯ ಸಂತರು. ಕುಟುಂಬಧರ್ಮಿಗಳೆಂದರೆ ಧರ್ಮ ದೇವರುಗಳನ್ನು ಸಮಾಧಾನಕ್ಕಾಗಿ ಎಷ್ಟು ಬೇಕೋ ಅಷ್ಟು ಇಟ್ಟುಕೊಂಡು ಜೀವನ ಸಾಗಿಸುವ ಬಹುಸಂಖ್ಯಾತ ಜನಸಮುದಾಯ. ವ್ಯಭಿಚಾರಿಧರ್ಮಿಗಳೆಂದರೆ ಯಾರು ಧರ್ಮ ದೇವರುಗಳ ಹೆಸರನ್ನೆ ಬಂಡವಾಳ ಮಾಡಿಕೊಂಡು ಅಧಿಕಾರ ರಾಜಕೀಯ ಹಣಮಾಡಲು ಬಳಸುವರೋ ಅವರು.

ಹೀಗಿರುವಾಗ ಯಾವಾಗ ಕುಟುಂಬಧರ್ಮಿಗಳ ನೋಟ ಆಧ್ಯಾತ್ಮಧರ್ಮಿಗಳ ಕಡೆಯಿರುತ್ತದೋ ಆಗ ಸಹನೆ ಮತ್ತು ಪ್ರೀತಿ ಹೆಚ್ಚು ಇರುತ್ತದೆ. ಯಾವಾಗ ಕುಟುಂಬಧರ್ಮಿಗಳನ್ನು ವ್ಯಭಿಚಾರಿಧರ್ಮಿಗಳು ಸೆಳೆದುಕೊಳ್ಳುತ್ತಾರೋ ಆಗ ಅಸಹನೆ ಮತ್ತು ದ್ವೇಷ ಭುಗಿಲೇಳುತ್ತದೆ. ಅಧರ್ಮ ತಾಂಡವವಾಡುತ್ತದೆ. ಡಿಸೆಂಬರ್ 6 ಇದಾಯ್ತು. ಕೆಲವರು ಧರ್ಮ ಮತ್ತು ದೇವರ ಹೆಸರನ್ನು ತಮ್ಮ ರಾಜಕೀಯ, ಹಣ, ಅಧಿಕಾರಕ್ಕಾಗಿ ಬಳಸಿಕೊಂಡು ಧರ್ಮವನ್ನೆ ವ್ಯಭಿಚಾರಕ್ಕೆ ಎಳೆದುಬಿಟ್ಟರು.

ಇದನ್ನೇ ಮತ್ತೂ ಮನದಟ್ಟುಮಾಡಲು ಪ್ರಯತ್ನಿಸುವೆ. ರಾಮ ಆಧ್ಯಾತ್ಮಧರ್ಮಿಗಳ ಎದುರು ಪ್ರತ್ಯಕ್ಷನಾದರೆ ಅವರು ಏನು ಮಾಡಬಹುದು? 'ನನ್ನೊಳಗೂ, ಸಕಲೆಂಟು ಜೀವಿಗಳ ಒಳಗೂ ನಿನ್ನನ್ನೇ ಕಾಣುತ್ತಿರುವಾಗ ನೀನೇಕೆ ಬೇರೆ ಅವತರಿಸಿದೆ? ಹೋಗಯ್ಯ' ಎಂದು ಅವರು ಅನ್ನಲೂಬಹುದು. ಕುಟುಂಬಧರ್ಮಿಗಳಿಗೆ ರಾಮ ಪ್ರತ್ಯಕ್ಷನಾದರೆ ಅವರು ಕುಣಿದು ಕುಪ್ಪಳಿಸಿ, ಸಂಭ್ರಮಿಸಿ ಪೂಜಿಸಬಹುದು. ಅದೇ ರಾಮ ವ್ಯಭಿಚಾರಿಧರ್ಮಿಗಳ ಎದುರು ಪ್ರತ್ಯಕ್ಷನಾದರಂತೂ ಅವನ ಕಥೆ ಅಲ್ಲಿಗೆ ಚುಕ್ತವಾದಂತೆಯೇ ಲೆಕ್ಕ. ರಾಮನನ್ನು ಕೊಂದು ಗುಡಿಕಟ್ಟುತ್ತಾರೆ. ಯಾಕೆಂದರೆ ವ್ಯಭಿಚಾರಿಧರ್ಮಿಗಳಿಗೆ ರಾಮ ಬೇಕಿಲ್ಲ. ರಾಮನ ಹೆಸರು ಮಾತ್ರ ಬೇಕು. ಆ ಹೆಸರಲ್ಲಿ ಅವರು ಹಣ ಮಾಡಬೇಕು. ಆ ಹೆಸರಲ್ಲಿ ಅವರು ಅಧಿಕಾರ ಸಂಪಾದಿಸಬೇಕು. ಹೀಗಿದೆ ವ್ಯಾಪಾರ.

ರಾಮ ಹೋಗಲಿ, ಇವರಿಗೆ ರಾಮನ ಮೌಲ್ಯವೂ ಬೇಕಾಗಿಲ್ಲ. ರಾಮನ ಮೌಲ್ಯ ಇರುವುದು ಆತನ ವಚನ ಪಾಲನೆಯಲ್ಲಿ. ವಚನವನ್ನು ತಾನು ಕೊಡದಿದ್ದರೂ ತನ್ನ ಅಪ್ಪನು ಕೊಟ್ಟ ವಚನವನ್ನೇ ನಡೆಸಿದ ವಚನಪಾಲನೆಯ ಸಂಕೇತ

ಆತ. ಹೀಗಾಗಿ, ನ್ಯಾಯಾಲಯಕ್ಕೆ ಕೊಟ್ಟ ವಚನವನ್ನು ಪಾಲನೆ ಮಾಡದ ವಚನಭ್ರಷ್ಟ ಭಾರತೀಯ ಜನತಾಪಕ್ಷವು ದಿನಕ್ಕೆ ಸಾವಿರ ಸಲ 'ಜೈ ಶ್ರೀರಾಮ್' ಹೇಳುತ್ತಿದ್ದರೂ ಅದರ ಪಾಪ ಪರಿಹಾರವಾಗದೇನೊ!

ನನಗನಿಸುತ್ತದೆ– ಈ ವಚನಭ್ರಷ್ಟರ 'ಜೈ ಶ್ರೀರಾಮ್' ಕೇಳಲಾರದೆ ವಚನಪಾಲಕ ರಾಮನ ಆತ್ಮ ಇದ್ದರೆ ಅದು ಅಯೋಧ್ಯೆಯಿಂದ ಈಗಾಗಲೇ ಫೇರಿ ಕಿತ್ತಿರುತ್ತದೆ. ಈಗ ನಾವು ರಾಮನನ್ನು ಹುಡುಕಬೇಕಾಗಿದೆ.

## ಮಂದಿರ ಅಗೆದರೆ ಒಳಗೆ ಮಂಡಲ್!
## ಹಾಗೂ ಒಂದು ಡಿಎನ್ಎ ಪರೀಕ್ಷೆ

ಮೊನ್ನೆ ನನ್ನ ಗೆಳೆಯರೊಬ್ಬರ ಭಾಷಣ ಕೇಳಿದೆ. ಅವರು ಹೇಳಿದರು– ರಾಮಾಯಣದಲ್ಲಿ ಶೂದ್ರನು ತಪಸ್ಸು ಮಾಡಿದ್ದಕ್ಕಾಗಿ ರಾಮನು ಕೊಲ್ಲುತ್ತಾನೆ, ಅಂಥ ರಾಮನನ್ನು ಧಿಕ್ಕರಿಸಬೇಕು, ಆ ರಾಮನಿಗೆ ಮಂದಿರ ಕಟ್ಟಲು ಬೆಂಬಲಿಸಬಾರದು ಇತ್ಯಾದಿ. ಇದು ನನ್ನ ಮನಸ್ಸಿನಲ್ಲಿ ಸಿಕ್ಕಿಕೊಂಡಿತು. ಇದೇನು ಅಂತ? ರಾಮಾಯಣ ಬರೆದವನು ವಾಲ್ಮೀಕಿ. ವಾಲ್ಮೀಕಿ ಬೇಡರವನು, ಶೂದ್ರ ತಪಸ್ವಿ. ಭಾರತದ ಪ್ರತಿಭೆಗೆ ದೇಹವಾಗಿ ಮೂಡಿದವನು. ಇಂಥವನು ಸ್ವಯಂ ಶೂದ್ರನಾಗಿ ತನ್ನ ಕೃತಿಯಲ್ಲಿ ಶೂದ್ರನು ತಪಸ್ಸು ಮಾಡಿದ್ದಕ್ಕಾಗಿ ಹೇಗೆ ಕೊಲ್ಲಿಸಲು ಸಾಧ್ಯ? ಇದು ತನ್ನನ್ನೇ ಕೊಂದುಕೊಂಡಂತಲ್ಲವೇ? ಇಷ್ಟು ಸರಳವಾದುದನ್ನೂ ನಾವು ತಿಳಿಯದೆ ಒದ್ದಾಡುತ್ತೇವೆ ಯಾಕೆ? ಅಥವಾ ಹೀಗಿರಬಹುದು– ದಲಿತ ವಿದ್ಯಾರ್ಥಿ ಒಕ್ಕೂಟದ ನಾಯಕ ದೇವೇಂದ್ರ ಹೆಗ್ಗಡೆ ಒಂದು ಪ್ರಸಂಗವನ್ನು ಹೇಳಿದರು. ಏನೆಂದರೆ ಮಂಡಲ್ ವರದಿ ವಿರೋಧಿ ಮೆರವಣಿಗೆಯೊಂದು ಹೋಗ್ತಾ ಇತ್ತಂತೆ. ನೋಡಿದರೆ ಆ ಮೆರವಣಿಗೆಯಲ್ಲಿ ದಲಿತ ವಿದ್ಯಾರ್ಥಿ ಒಕ್ಕೂಟದ ವಿದ್ಯಾರ್ಥಿಗಳೂ ಇದ್ದರಂತೆ. ಇವರು ಗಾಬರಿಯಾಗಿ ಅವರನ್ನು ಕರೆದು ಕೇಳಿದ್ದಕ್ಕೆ ಆ ಹುಡುಗರು 'ಕೆಲವು ಹುಡುಗಿಯರು ಹಾಸ್ಟೆಲ್‌ಗೆ ವ್ಯಾನ್‌ನಲ್ಲಿ ಬಂದು– ಡಿಯರ್ ಫ್ರೆಂಡ್ಸ್, ಮೆರವಣಿಗೆ ಹೋಗ್ತಾ ಇದೆ, ವ್ಯಾನ್ ಹತ್ತಿ ಅಂದರು. ಅದಕ್ಕೆ ನಾವು ವ್ಯಾನ್ ಹತ್ತಿದೊ. ಇನ್ನೇನು ಮಾಡೋಣ?' ಎಂದು ತಮ್ಮ ಅಸಹಾಯಕತೆ ತೋಡಿಕೊಂಡರಂತೆ! ಹೇಳಿ ಏನು ಮಾಡೋಣ?

ಆ ವ್ಯಾನ್‌ಗೆ ನಾವೂ ನೀವೂ ಹತ್ತಿರಲಿಲ್ಲ, ಆ ಮೆರವಣಿಗೆಯಲ್ಲಿ ನಾವೆಲ್ಲರೂ ಇರಲಿಲ್ಲ ಎನ್ನುವುದಕ್ಕೆ ನಮಗೆ ಗ್ಯಾರಂಟಿ ಇದೆಯೇ? ಯಾವುದೇ ಸಮಸ್ಯೆಯ ಮೂಲ ಗುರುತಿಸದಿದ್ದರೆ ನಾವೂ, ನಮ್ಮ ಚಿಂತನೆಗಳೂ ದಿಕ್ಕಾಪಾಲಾಗುತ್ತವೆ. ವ್ಯಾನ್ ಹತ್ತಿದ ಹುಡುಗರ ಕತೆಯೇ ನಮ್ಮದೂ ಆಗುತ್ತದೆ. ಈಗ ಆಗಿರುವುದೂ ಅದೇ. ಇಲ್ಲದಿದ್ದರೆ, ರಾಮಾಯಣದಲ್ಲಿ ರಾಮನು ಶೂದ್ರನೊಬ್ಬ ತಪಸ್ಸು ಮಾಡಿದ್ದಕ್ಕಾಗಿ ಕೊಂದ ಪ್ರಸಂಗವು 'ಸೇರ್ಪಡೆ'ಯಾಗಿ ನಮಗೆ ಕಾಣಬೇಕಾಗಿತ್ತು. ಅದು ಸಂಚು ಎಂದು ಅನ್ನಿಸಬೇಕಿತ್ತು. ಆ ತ್ರೇತಾಯುಗದ ಸಂಚೇ ಈ ಕಲಿಯುಗದಲ್ಲಿ ರೂಪಾಂತರ ಪಡೆದುಕೊಂಡು ಅವತರಿಸಿರುವುದು ಗೋಚರಿಸುತ್ತಿತ್ತು. ಹೇಳಿ, ಮಂಡಲ್ ವರದಿ ಪ್ರಸ್ತಾಪವಾದಾಗೆಲ್ಲ ಬಾಬರಿಮಸೀದಿ–ರಾಮಮಂದಿರಗಳ ಪ್ರಶ್ನೆ ಭುಗಿಲೇಳುತ್ತದೆ ಯಾಕೆ? ಈ ಬಾಬರಿಮಸೀದಿ–ರಾಮಮಂದಿರಗಳ ಪ್ರಶ್ನೆ ಭುಗಿಲೆದ್ದಾಗೆಲ್ಲಾ ಮಂಡಲ್ ವರದಿಯ ಪ್ರಶ್ನೆ ತಳ ಸೇರುತ್ತದೆ ಯಾಕೆ? ಹಾಗಾದರೆ ಬಾಬರಿಮಸೀದಿ, ರಾಮಮಂದಿರಗಳ ವಿವಾದದ ಮೂಲ ಎಲ್ಲಿದೆ? ಮಂಡಲ್ ವರದಿಯನ್ನು ತುಳಿಯುತ್ತಿರುವುದು ಹಾಗೂ ಅಧಿಕಾರ ಗಳಿಸಲು ನಡೆಸುತ್ತಿರುವ ಹುನ್ನಾರವಲ್ಲದೆ ಇದು ಮತ್ತೇನು? ಹಿಂದೆ ತ್ರೇತಾಯುಗದಲ್ಲಿ ರಾಮನ ಬಾಣ ಮಾತ್ರ ದುರುಪಯೋಗವಾಗಿತ್ತು. ಈಗ ಕಲಿಯುಗ ನೋಡಿ! ಆದ್ದರಿಂದ ಪಾಪ ರಾಮನನ್ನೇ ಬಾಣ ಮಾಡಿ, ಬಾಬರಿಮಸೀದಿ ನೆಪ ತೋರಿಸುತ್ತ ಮಂಡಲ್ ವರದಿ ಧ್ವಂಸ ಮಾಡಲು ಬಿಟ್ಟಿದ್ದಾರೆ. ಅದು ಇಂದು ದೇಶದ ಉದ್ದಗಲಕ್ಕೂ ಸುತ್ತಾಡುತ್ತಿದೆ. ಬಲಿಪೀಠಕ್ಕೆ ಸಂಭ್ರಮಿಸಿ ಹೋಗುವ ಕುರಿಮರಿಯಂತೆ ನಾವು ಮೆರವಣಿಗೆಯಲ್ಲಿದ್ದೇವೆ. ಇಲ್ಲದಿದ್ದರೆ ಬಾಬರಿಮಸೀದಿ ನೆಲಸಮವಾಗುತ್ತಿರಲಿಲ್ಲ. ಶ್ರೀ ಕುವೆಂಪು ಅವರ 'ಶೂದ್ರ ತಪಸ್ವಿ'ಯಲ್ಲಿನ ಬಾಣವು ಬಿಟ್ಟವರ ಕಡೆಗೇ ಹೋಗುವಂತೆ ತಿರುಗೇಟು ಹೊಡೆಯುತ್ತಿತ್ತು. ಆ ಬಾಣವು ಇದಕ್ಕೆಲ್ಲಾ ಮೂಲ ಕಾರಣರಾದ ಆರ್‌ಎಸ್‌ಎಸ್, ಬಿಜೆಪಿಗಳನ್ನು ಅಟ್ಟಾಡಿಸಿಕೊಂಡು ಓಡಾಡುತ್ತಿತ್ತು. ಆರ್‌ಎಸ್‌ಎಸ್, ಬಿಜೆಪಿಗಳು ನೆಲಸಮವಾಗುತ್ತಿತ್ತು. ಅಥವಾ ವೇಷ ಬದಲಿಸಿಕೊಂಡು ಅಧಿಕಾರ ಗಳಿಸಿ ಆಮೇಲೆ ಸದೆಬಡಿಯಲು ಮಂಡಲ್ ವರದಿಯನ್ನೇ ಮುಂದಿಟ್ಟುಕೊಂಡು ಹೊಸತಾಗಿ ತಮ್ಮ ಆಟಾಟೋಪ ಆರಂಭಿಸುತ್ತಿತ್ತು.

ಹೀಗಿರುವಾಗ ಬಿಜೆಪಿ, ಆರ್‌ಎಸ್‌ಎಸ್‌ಗಳಿಗೆ ಒಂದೇ ಒಂದು ಪ್ರಾರ್ಥನೆ ಮಾಡುವ– ಏನಂತ? ನಮಗೆ ಈ ಮೀಸಲಾತಿಯ ಸಹವಾಸವೇ ಬೇಡ. ಬಡತನ ನಮಗೆ ರೂಢಿಯಾಗಿದೆ. ನಮಗೆ ಒಂದಾದರೆ ಸಾಕು. ಏನೆಂದರೆ–

'ಹಿಂದೂ ಒಂದು' ಎನ್ನುವ ನಿಮ್ಮ ನುಡಿಯನ್ನು ನಡೆಯಲ್ಲಿ ತನ್ನಿ. ಅದಕ್ಕಾಗಿ ಬಿಜೆಪಿ ಅಧಿಕಾರಕ್ಕೆ ಬಂದರೆ– 'ಹಿಂದೂ ಒಂದು' ಮಾಡುವುದಕ್ಕಾಗಿ 'ಸ್ವಜಾತಿ ಮದುವೆ ಕಾನೂನುಬಾಹಿರ' ಎಂಬುದನ್ನು ಜಾರಿಗೆ ತರುತ್ತೇವೆ ಎಂದು ಬಿಜೆಪಿ ಘೋಷಿಸಬೇಕು. ಆರ್‌ಎಸ್‌ಎಸ್ ಇದಕ್ಕಾಗಿ ಪ್ರಚಾರ ಮಾಡಬೇಕು. ಇಂದು ಜಾತಿಯ ಒಳಗೆ ಮದುವೆ ಆಗಿ ಆಗಿ, ಜಾತಿ ಎನ್ನುವುದು ಕುಲದ ಸ್ಥಿತಿಗೆ ಇಳಿದಿದೆ. ಒಂದೇ ಕುಲದೊಳಗೆ ಮದುವೆ ಧರ್ಮಬಾಹಿರ, ಹಿಂದೂ ಪದ ಉಚ್ಚಾರ ಮಾಡುವ ಶ್ರೀ ಪೇಜಾವರ ಮಠಾಧಿಪತಿಗಳು ಇತರ ಮಠಾಧಿಪತಿಗಳನ್ನು ಕಟ್ಟಿಕೊಂಡು 'ಸ್ವಜಾತಿ ಮದುವೆ ಧರ್ಮ ನಿಷಿದ್ಧ' ಎಂದು ಮನೆಮನೆಗೂ ಹೋಗಿ ಮನ ಒಲಿಸಿದರೆ ಆಗ 'ಹಿಂದೂ ಒಂದು' ಎನ್ನುವುದೂ ಒಂದು ಧರ್ಮ ಆಗುತ್ತದೆ. ಆಗ ಹಿಂದೂ ಒಂದಾಗಲು ಪ್ರಾರಂಭಿಸುತ್ತದೆ. ಆಗ ಈ ಹುಳುಗಳಂತಿರುವ ಮಠಾಧಿಪತಿಗಳು ಚಿಟ್ಟೆಗಳಾಗುತ್ತಾರೆ. ನಾನು ಅವರಿಗೆ ಕೈಜೋಡಿಸಿ ನಮಸ್ಕರಿಸುತ್ತೇನೆ. ಇಂತಹ ಐಕ್ಯತೆಯ ಭಾವನೆಯ ವಾತಾವರಣದಲ್ಲಿ ಬಾಬರಿ ಮಸೀದಿಯೂ ನೆಲಸಮವಾಗುವುದಿಲ್ಲ.

ಈ ದಿಕ್ಕಿನಲ್ಲಿ ಚಲಿಸಲು ಆರ್‌ಎಸ್‌ಎಸ್, ಬಿಜೆಪಿ, ಮಠಾಧಿಪತಿಗಳಿಗೆ ಸಾಧ್ಯವಾಗುತ್ತದೋ ಇಲ್ಲವೋ ಊಹಿಸಿ ಹೇಳಲು ನನಗೆ ಕಷ್ಟವಾಗುತ್ತಿದೆ. ಆದರೆ ಒಂದಂತೂ ಆಗಬಹುದು. ಇದನ್ನು ನೆನೆಸಿಕೊಂಡರೇನೇ 'ಹಿಂದೂ ಒಂದು' ಎನ್ನುವ ಕೆಲವರು ಗೊಟಕ್ ಎನ್ನುತ್ತಾರೆ. ಅನೇಕರಿಗೆ ಹೃದಯಾಘಾತವಾಗುತ್ತದೆ. ಕೆಲವು ಗಟ್ಟಿಪಿಂಡಗಳು ಇದು ನೆನಪಾದಾಗಲೆಲ್ಲಾ ಸ್ನಾನ ಮಾಡಿಕೊಂಡು ಹಾಗೂ ಹೀಗೂ ಉಳಿಯುವುವು. ಪರಿಸ್ಥಿತಿ ಹೀಗಿದೆ.

ಕೊನೆಯದಾಗಿ ಮಂಡಲ್ ವರದಿ ವಿವರಗಳ ಬಗ್ಗೆ ನನಗೆ ಹೆಚ್ಚಿಗೆ ಗೊತ್ತಿಲ್ಲ. ಆದರೆ ಮೀಸಲಾತಿಯ ಬಗ್ಗೆ ಯಾವ ಧೋರಣೆ ನಮಗಿದ್ದರೆ ಒಳ್ಳೆಯದು? ಮೀಸಲಾತಿ ಎಂಬುದು ಇದ್ದುದ್ದರಲ್ಲೇ ಹಂಚಿಕೊಂಡು ತಿನ್ನುವ ವ್ಯವಸ್ಥೆ. ವಂಚಿತರಿಗೂ ಸ್ವಲ್ಪ ದಕ್ಕುವಂತೆ ಮಾಡುವ ಸಮಾಜದ ಋಣ ಪರಿಹಾರ. ಆದರೆ ಇದನ್ನೆ ಶಾಶ್ವತಗೊಳಿಸುವತ್ತ ನಾವೂ ಯೋಚಿಸಬಾರದು. ಇದೊಂದು ಪ್ರೀತಿಯ ಕ್ರಿಯೆಯಾಗಿ ಜಾತಿಯ ವಿಷದ ಕಟ್ಟುಗಳನ್ನು ಸಡಿಲಗೊಳಿಸಿ ಮಾನವೀಯ ದಾರದ ಮೂಲಕ ಸಂಬಂಧ ಕೂಡಿಸುವ ಎಳೆಯಾಗಬೇಕು. ಇಂದು ಭಾರತವನ್ನು ಬಡತನ ಕಿತ್ತು ತಿನ್ನುತ್ತಿರುವುದರಿಂದ ಸಣ್ಣದೂ ದೊಡ್ಡದಾಗಿ ಕಾಣಿಸತೊಡಗುತ್ತದೆ. ಮೀಸಲಾತಿ ಒಳಗೆ ಕಣ್ಣಿಗೆ ರಾಚುವಂಥವು ಇದ್ದರೆ ಅವುಗಳನ್ನು ಮೀಸಲಾತಿ ಪಡೆಯುವವರೇ ಕಿತ್ತು ಹಾಕಬೇಕು.

ಹಾಗೂ ಮೀಸಲಾತಿ ಪಡೆಯುವ ಗುಂಪುಗಳು ತಂತಮ್ಮ ಕೆಟಗರಿಯೊಳಗೇನೇ ಅಂತರ್ಜಾತೀಯ-ಅಂತರ್ಮತೀಯ ವಿವಾಹಿತರಿಗೆ ಉದ್ಯೋಗದಲ್ಲಿ ಆದ್ಯತೆಗೆ ಒತ್ತಾಯಿಸುವಂತಾದರೆ ಅದು ಮೀಸಲಾತಿಗೆ ಹೆಚ್ಚು ಅರ್ಥ ತಂದುಕೊಡುತ್ತದೆ.

## ಒಂದು ಡಿ.ಎನ್.ಎ ಪರೀಕ್ಷೆ!

ಭಾರತದ ಯಾವುದೇ ಮಂದಿರ ಮಸೀದಿಯನ್ನು ಅಗೆದು ಅದರ ಡಿ.ಎನ್.ಎ ಪರೀಕ್ಷೆ ಮಾಡಿದರೆ ಭಾರತದ ಹಾಲಿ ಇರುವ ಎಲ್ಲಾ ಧರ್ಮಗಳ ಪೂಜಾಸ್ಥಳಗಳಲ್ಲಿ ಶೇಕಡ ತೊಂಬತ್ತರಷ್ಟು ಬೇರೆ ಬೇರೆ ಮತ ಪಂಥಗಳ (ಬಹುತೇಕ ಬೌದ್ಧ ಮತ್ತು ಜೈನ) ಪೂಜಾ ಸ್ಥಳಗಳಾಗಿರುವುದು ಇತಿಹಾಸ. ಋಷಿ ಮೂಲದಂತೆ ಇದರ ಮೂಲವನ್ನೂ ಹುಡುಕಹೋಗಬಾರದು. ಈಗ ನಾವು ನೋಡುತ್ತಿರುವ ಯಾವ ಪೂಜಾಸ್ಥಳದ ಮೂಲವೂ ಅದೇ ಆಗಿರುವುದಿಲ್ಲ. ಸ್ವತಂತ್ರ ಭಾರತಕ್ಕೆ ಈ ಮೂಳೆಗಳ ಪತ್ತೆ ಕಾರ್ಯ ಕೇಡೇ ಹೊರತು ಶುಭವಲ್ಲ. ಮಂದಿರ ಮಸೀದಿ ದೇವರು ಧರ್ಮ ಕುರಿತ ವಿವಾದಗಳನ್ನು ಅಂಗವಿಕಲರನ್ನಾಗಿಸಿಯೋ ಕುಷ್ಠರೋಗಿಗಳನ್ನಾಗಿಸಿಯೋ ಮಾಡಿಕೊಂಡು, ಅದನ್ನು ತೋರಿಸುತ್ತಾ ಓಟು ಭಿಕ್ಷೆ, ಧನ ಭಿಕ್ಷೆ, ಅಧಿಕಾರ ಭಿಕ್ಷೆ ಯಾಚಿಸುವ ಅನಾರೋಗ್ಯಕರ ದರಿದ್ರ ಸ್ಥಿತಿಯಿಂದ ನಾವು ಇನ್ನಾದರೂ ಹೊರಬರಬೇಕು.

1949ರಲ್ಲಿ ರಾತ್ರೋ ರಾತ್ರಿ ರಾಮಲಾಲನ ವಿಗ್ರಹವಿಟ್ಟ ಪ್ರಕರಣ- ಇಡಿಸಿಕೊಂಡ ಆ ದೇವರಿಗೂ ಗೌರವ ತರುವುದಿಲ್ಲ, ಪೂಜಿಸುವ ಈ ಭಕ್ತರಿಗೂ ಗೌರವ ತರುವುದಿಲ್ಲ. ಇದನ್ನು ಕಾನೂನುಗೊಳಿಸಿದರೆ ಆ ಕಾನೂನೂ ತನ್ನನ್ನೂ ತಾನು ಗೌರವಿಸಿಕೊಂಡಂತಾಗುವುದಿಲ್ಲ. ಈ ಸೂಕ್ಷ್ಮ ಸಮಸ್ಯೆಯನ್ನು ಕಾನೂನು ವ್ಯಾಪ್ತಿಗೆ ತರದೆ ಮಾತುಕತೆಯ ಮೂಲಕ ಬಗೆಹರಿಸಿಕೊಂಡಿದ್ದರೆ ಚೆನ್ನಾಗಿತ್ತು.

## ‘ದೇಶಭಕ್ತಿ’ಯಲ್ಲಿ ನನ್ನ ಕಾಡುತ್ತಿರುವ ಶಂಕೆ

ನಾನು ದಸಂಸ ರಾಜ್ಯ ಸಂಚಾಲಕನಾಗಿದ್ದಾಗ, ಜಿಲ್ಲಾ ಸಂಚಾಲಕರೊಬ್ಬರು ಹಣ ದುರುಪಯೋಗ ಮಾಡಿರುವ ಆರೋಪ ಬಂತು. ವಿಚಾರಣೆಯಲ್ಲಿ ಹಣ ದುರುಪಯೋಗವನ್ನು ಅವರೇ ಒಪ್ಪಿಕೊಂಡರು. ತಪ್ಪು ಒಪ್ಪಿಕೊಂಡಿದ್ದರಿಂದ ಕಮ್ಮಿ ಶಿಕ್ಷೆ ಕೊಡಲಾಗಿ ಆ ಶಿಕ್ಷೆಗೆ ತಪ್ಪಿತಸ್ಥರೂ ಒಪ್ಪಿಕೊಂಡಿದ್ದರು. ಆದರೆ ಇದಾದ ಮೇಲೆ ವ್ಯಾಪಕವಾಗಿ ರಾಜ್ಯದಾದ್ಯಂತ ದೇವನೂರ ಮಹಾದೇವ ಭ್ರಷ್ಟಾಚಾರಿ ಎಂದು ಸುದ್ದಿ ಹರಡಿಸಿದರು. ಇದರೊಡನೆ ನಮ್ಮ ಜೊತೆಗೆ ಇದ್ದ ಭ್ರಷ್ಟಾಚಾರಿ ಕೃಷಿ ಅಧಿಕಾರಿಯೊಬ್ಬರು ನನ್ನನ್ನು ಭ್ರಷ್ಟಾಚಾರಿ ಎಂದು ವ್ಯವಸ್ಥಿತವಾಗಿ ಪ್ರಚಾರ ಮಾಡಿದರು.

ಈ ಸಂಗತಿ ಏನನ್ನು ಹೇಳುತ್ತದೆ?

ಯಾವನು ಭ್ರಷ್ಟಾಚಾರಿ ಆಗಿರುತ್ತಾನೋ ಅವನು, ತಾನೇ ಇನ್ನೊಬ್ಬನನ್ನು ಭ್ರಷ್ಟಾಚಾರಿ ಎಂದು ಅಬ್ಬರಿಸಿ ತನ್ನ ಭ್ರಷ್ಟಾಚಾರವನ್ನು ಮುಚ್ಚಿಕೊಳ್ಳುವ ಆತ್ಮರಕ್ಷಣೆಯ ಉಪಾಯವೇ ಇದು?

ಈ ವಿಚಾರ ಇಲ್ಲಿ ನನಗೆ ಯಾಕೆ ನೆನಪಾಗುತ್ತಿದೆ ಎಂದರೆ ಮೊನ್ನೆ ಶ್ರೀ ಪ್ರಮೋದ್ ಮಹಾಜನ್‌ರವರನ್ನು ‘ಎಚ್ಚರ ವಹಿಸದೆ ಕಾರ್ಗಿಲ್ ಯುದ್ಧವನ್ನು ನೀವೇ ತಂದುಕೊಂಡಿದ್ದಲ್ಲವೆ?’ ಎಂದು ಪ್ರಶ್ನಿಸಿದ್ದಕ್ಕೆ ಆತ ‘ಪ್ರಶ್ನೆ ಎತ್ತುವವರು ದೇಶದ್ರೋಹಿಗಳು’ ಎಂದುಬಿಟ್ಟರು! ಇದನ್ನು ಕೇಳಿದಾಕ್ಷಣವೇ ನನಗೆ ಕಾರ್ಗಿಲ್ ಯುದ್ಧ ಮಧ್ಯಂತರ ಚುನಾವಣೆಗೆ ಉದ್ದೇಶಪೂರ್ವಕವಾಗಿ ತಂದುಕೊಂಡ ಯುದ್ಧ ಅನ್ನಿಸಿಬಿಟ್ಟಿತು! ಶ್ರೀ ಪ್ರಮೋದ್ ಮಹಾಜನ್‌ರವರಿಗೆ, ಕಾರ್ಗಿಲ್ ಯುದ್ಧ ತಂದುಕೊಂಡದ್ದು ದೇಶದ್ರೋಹಿ ಕೃತ್ಯ ಎಂಬ ಒಳ ಅಳುಕೂ ಇದೆ

ಅನ್ನಿಸಿತು. ಇನ್ನೊಬ್ಬರು ಅವರನ್ನು ದೇಶದ್ರೋಹಿ ಅನ್ನುವುದಕ್ಕೆ ಮೊದಲೇ ಅವರೇ ಇನ್ನೊಬ್ಬರಿಗೆ ದೇಶದ್ರೋಹಿ ಅಂದು ಅವರು ಹೊಟ್ಟೆ ಒಳಗೆ ಇರುವುದನ್ನು ಮರೆಮಾಚಲು ಪ್ರಯತ್ನಿಸುತ್ತಿದ್ದಾರೆ ಅನ್ನಿಸಿತು.

ಇದಾದ ಸ್ವಲ್ಪ ದಿನಗಳಲ್ಲೇ ಔಟ್ ಲುಕ್ ಪತ್ರಿಕೆಯಲ್ಲಿ ಕಾರ್ಗಿಲ್ ಯುದ್ಧದ ಬಗ್ಗೆ ಬಂದ ವರದಿ ನನ್ನ ಅನುಮಾನವನ್ನು ನಿಜ ಮಾಡಿತು. ಆ ಪತ್ರಿಕೆ ಮೊದಮೊದಲು ಬಿಜೆಪಿಗೆ ಪರವಾಗಿದ್ದ ಪತ್ರಿಕೆಯಂತೆ. ಆ ಪತ್ರಿಕೆಯೇ ಬಿಜೆಪಿಗೆ ತಿರುಗಿಬಿದ್ದಿತ್ತು. ಮತಾಂಧರ ಒಳ ಪಾಪಕೃತ್ಯಗಳನ್ನು ಕಂಡು ಬೆಚ್ಚುವುದು ಅದರ ಮುಗ್ಧ ಬೆಂಬಲಿಗರಿಗೇ ಹೆಚ್ಚಾಗಿ ಆಗುತ್ತದೆ. ನಮಗೆ ಮತಾಂಧರ ಬಗ್ಗೆ ಅನುಮಾನವಾದರೂ ಇರುವುದರಿಂದ ಆಘಾತ ಅವರಿಗಾಗುವಷ್ಟು ಆಗುವುದಿಲ್ಲ.

ಸೈನ್ಯ ಮತ್ತು ಯುದ್ಧವನ್ನು ಕಾಂಗ್ರೆಸ್ ಎಂದೂ ಬಿಜೆಪಿಯಂತೆ ತನ್ನ ಉಳಿವಿಗೆ, ಅಧಿಕಾರ ದಾಹಕ್ಕೆ ದುರುಪಯೋಗಪಡಿಸಿಕೊಂಡದ್ದು ಅದರ ದೀರ್ಘಾವಧಿ ಆಡಳಿತದಲ್ಲೂ ಕಂಡುಬರುವುದಿಲ್ಲ. ಕಾಂಗ್ರೆಸ್‌ನವರಿಗೆ ತಾವು ನ್ಯಾಯಾಲಯ ಮತ್ತು ಸಂಸತ್‌ಗಿಂತ ಸಣ್ಣವರು ಎಂಬ ತಿಳಿವಳಿಕೆಯಾದರೂ ಇದೆ. ಅದಕ್ಕಾಗೆ ಬಿಜೆಪಿಗೆ ಹೋಲಿಸಿದರೆ ಕಾಂಗ್ರೆಸ್‌ಗೆ ಆಳ್ವಿಕೆ ನಡೆಸಲು ಇರಬೇಕಾದ ಕನಿಷ್ಠ ಅರ್ಹತೆಯಾದರೂ ಇರುವಂತೆ ಕಾಣಿಸುತ್ತದೆ.

ಭಾರತವು ಜಾತಿ ಮತಾಂಧತೆಗಳಿಂದ ಜರ್ಜರಿತವಾಗಿದೆ. ಜಾತಿ ಎಂಬುದು ಭಾರತ ಎಂಬ ವೃಕ್ಷದ ಕೊಂಬೆಗಳನ್ನು ಕತ್ತರಿಸುತ್ತಿದ್ದರೆ ಮತಾಂಧತೆ ಎಂಬುದು ವೃಕ್ಷದ ಬೇರುಗಳನ್ನು ಕತ್ತರಿಸುತ್ತಿದೆ. ನಮ್ಮೊಳಗೇ ಇರುವ ಈ ಜಾತಿ ಮತಾಂಧತೆಗಳಿಂದ ನಾವು ತಪ್ಪಿಸಿಕೊಂಡು ದೇಶ ಉಳಿಸಬೇಕಾಗಿದೆ. ಆಮೇಲೆ ದೇಶಭಕ್ತಿ! ಅಥವಾ ಇದೇ ದೇಶಭಕ್ತಿ.

# ಹಿಂದೂ ಸಮಾಜೋತ್ಸವ ಮತ್ತು ಆರ್‌ಎಸ್‌ಎಸ್

ಆರ್‌ಎಸ್‌ಎಸ್ ಗುರೂಜಿ ಶ್ರೀ ಗೋಲ್ವಾಳ್ಕರ್‌ರ ಜನ್ಮಶತಾಬ್ಧಿ ಅಂಗವಾಗಿ ಹಿಂದೂ ಸಮಾಜೋತ್ಸವ ಆಚರಣೆಗಾಗಿ ಯಾವ ಕಡೆ ನೋಡಿದರೂ ಬಾವುಟ, ಬ್ಯಾನರ್, ಪ್ರಚಾರ ಭರಾಟೆಗಳು ಯಾರದೋ ದುಡ್ಡನ್ನು ಯದ್ವಾತದ್ವಾ ಚೆಲ್ಲಾಡಿದಂತೆ ಕಂಡುಬರುತ್ತಿದೆ. ಇದು ಅನೇಕ ಅನುಮಾನಗಳನ್ನು ಹುಟ್ಟುಹಾಕುತ್ತಿದೆ. ಯಾಕೆಂದರೆ ಶ್ರೀ ಗೋಲ್ವಾಳ್ಕರ್ ಹಿಂದೂಧರ್ಮದ ಅಸಮಾನತೆ, ಮೇಲು–ಕೀಳು ಪದ್ಧತಿಗಳನ್ನು ಪ್ರತಿಪಾದಿಸಿದವರು. ಇವರ 'ಚಿಂತನ ಗಂಗಾ' ಕೃತಿಯಲ್ಲಿ ಉದ್ದಕ್ಕೂ ಮೇಲು ಕೀಳು ಅಸಮಾನತೆಗಳ ಪ್ರತಿಪಾದನೆಗಳೇ ಇವೆ. ಇಂಥ ವ್ಯಕ್ತಿಯ ಜನ್ಮಶತಾಬ್ಧಿ ಆಚರಣೆ ಸಂದರ್ಭದಲ್ಲಿ ಮೇಲು ಕೀಳು ಪದ್ಧತಿಯ ಧರ್ಮ 'ಹಿಂದೂವಾಗಿ ಸಾಯಲಾರೆ' ಎಂದ ಅಂಬೇಡ್ಕರ್‌ರ ಭಾವಚಿತ್ರವನ್ನೂ, ಹಿಂದೂ ಸಮಾಜದ ಮೇಲು–ಕೀಳುಗಳಿಂದ ಅತೀತನಾದ ಬಸವಣ್ಣನವರ ಭಾವಚಿತ್ರವನ್ನೂ ಗೋಲ್ವಾಳ್ಕರ್ ಜತೆ ಜೊತೆಗೂಡಿಸಿ ಪ್ರಚಾರ ಮಾಡಲಾಗುತ್ತಿದೆ. ಗಾಂಧಿಯನ್ನು ಕೊಂದ ನೆನಪು ಇನ್ನೂ ಜೀವಂತ ಇರುವುದರಿಂದಲೇನೋ ಗಾಂಧಿ ಬಚಾವಾಗಿದ್ದಾರೆ.

ಈ ಹಿಂದೂ ಸಮಾವೇಶದ ಸಂದರ್ಭದಲ್ಲಿ ಶ್ರೀ ಗೋಲ್ವಾಳ್ಕರ್ ಜತೆ ಯಾವ ರೀತಿಯಲ್ಲೂ ಸಾಮ್ಯ ಸಾಮರಸ್ಯವಿಲ್ಲದ ಬಸವ, ಅಂಬೇಡ್ಕರ್‌ರನ್ನು ಜೊತೆಗೂಡಿಸಿರುವುದರ ಅರ್ಥವೇನು? ಬಸವ, ಅಂಬೇಡ್ಕರರ ಹೆಸರನ್ನು ಉಚ್ಚಾರ ಮಾಡಿದರೂ ಅದು ಸಮಾನತೆಯನ್ನೇ ಉಸಿರಾಡುತ್ತದೆ. ಇಂಥವರ ಜೊತೆ ಮೇಲು ಕೀಳಿನ ಗೋಲ್ವಾಳ್ಕರ್‌ರನ್ನು ಕೂಡಿಸಿರುವುದರ ಜೊತೆಗೆ ಈಗ

ಗೋಲ್ವಾಳ್ಕರ್ ಅನುಯಾಯಿಗಳು 'ಮಮ ಮಂತ್ರಃ ಸಮಾನತಾ' ಎಂದು ಈ ಸಂದರ್ಭದಲ್ಲಿ ಘೋಷಣೆ ಮಾಡಿದ್ದಾರೆ! ಅಂದರೆ ಗೋಲ್ವಾಳ್ಕರ್‌ರ ಅಸಮಾನತೆಯ ಚಿಂತನೆಗಳನ್ನು ಅವರ ಅನುಯಾಯಿಗಳು ಕೈಬಿಟ್ಟರು ಎಂದೇ ಇದರ ಅರ್ಥವಲ್ಲವೇ? ಹಾಗಾಗಿ ಇದು ಗುರುವಂದನಾ ಕಾರ್ಯಕ್ರಮವಾಗದೆ ಗುರುಹತ್ಯಾ ಕಾರ್ಯಕ್ರಮವಾಗಿಬಿಡುವುದಿಲ್ಲವೆ?

ಯಾರಿಂದಲೇ ಆಗಲಿ ಅಸಮಾನತೆ, ಮೇಲು-ಕೀಳು ಚಿಂತನೆಗಳ ಅವಸಾನವಾಗುವುದನ್ನು ಸ್ವಾಗತಿಸಬಹುದಾದರೂ ಅಧಿಕಾರ ಹಿಡಿಯುವುದಕ್ಕಾಗಿ ಹಣ ದೋಚುವುದಕ್ಕಾಗಿ ಈ ಗೋಲ್ವಾಳ್ಕರ್ ಗುರೂಜಿಯವರ ಹತ್ಯೆಯನ್ನು, ಅವರು ಹುಟ್ಟುಹಾಕಿದ ಸಂತಾನವೇ ಮಾಡುತ್ತಿರುವಂತೆ ಕಾಣಿಸುತ್ತಿದೆ.

ಇದು ವಂಚನೆಯ ಪರಮಾವಧಿ. ಅಧಿಕಾರ ಹಣಕ್ಕಾಗಿ ಗುರು ವಿಚಾರ ಹತ್ಯೆಯನ್ನು ಮಾಡಲು ಹೇಸದವರು, ನಾಳೆ ಅಧಿಕಾರಕ್ಕೆ ಬಂದರೆ ಯಾವುದಕ್ಕೂ ಹೇಸರು. ಈ ಸುಳಿವು ಹಿಡಿದು ಎಚ್ಚರವಹಿಸಬೇಕಾಗಿದೆ.

## ಗೋಹತ್ಯೆಯ ನಿಷೇಧ ಕಾಯಿದೆಯೊಳಗೆ

ಶ್ರೀ ಜಯದೇವ ಪೂಜಾರ್ ಅವರ ಆಕ್ಷೇಪಣಾ ಪತ್ರಕ್ಕೆ ಈ ವಿವರಣೆ ನೀಡುತ್ತಿರುವೆ.

**1**. ನನ್ನಂಥವರು 'ಅಸ್ಪೃಶ್ಯತೆಯನ್ನು ಬಂಡವಾಳದ ವೇದಿಕೆ ಮಾಡಿಕೊಂಡು ಆ ವೇದಿಕೆ ಕುಸಿಯದಂತಿರಲು ಬಯಸುತ್ತಾರೆ' ಎಂದು ಶ್ರೀ ಪೂಜಾರ್ ಆರೋಪಿಸುತ್ತಾರೆ. ಅಸ್ಪೃಶ್ಯತೆ ಅಳಿಯಲಿ, ವೇದಿಕೆ ಇದ್ದರೆ ಕುಸಿಯಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಇದಿಷ್ಟೇ ನಾನು ಹೇಳಲು ಶಕ್ತ. ನನ್ನ ಪ್ರಾರ್ಥನೆ ಫಲಿಸಲಿ ಎಂದು ಶ್ರೀ ಪೂಜಾರ್ ಅವರೂ ಪ್ರಾರ್ಥಿಸಲಿ.

**2**. 'ಗತಕಾಲದ ಶೋಷಣೆಯ ಮಂತ್ರವನ್ನು ಇಂದಿನವರೆಗೂ ಹೇಳಿಕೊಂಡು ಬಂದಿರುವುದೂ ಕೂಡ ದಲಿತರ ಹಿಂದುಳಿಯುವಿಕೆಗೆ ಕಾರಣ' ಎಂದು ಅವರು ಹೇಳುತ್ತಾರೆ. ಈ ಒಂದೇ ಉದಾಹರಣೆ ಸಾಕು– ತಲೆಯೆತ್ತಿ ನಡೆದ ಕಾರಣಕ್ಕಾಗಿ ಖೈರ್ಲಾಂಜೆಯಲ್ಲಿ ನಡೆದ, ನೆನೆಸಿಕೊಳ್ಳಲೂ ಭಯಾನಕವಾದ, ಇಡೀ ಊರು ಭಾಗಿಯಾಗಿ ತಾಯಿ ಮಗಳನ್ನು ಬೆತ್ತಲೆಗೊಳಿಸಿ ಅತ್ಯಾಚಾರವೆಸಗಿ ಕೊಂದು ಆ ಸತ್ತ ದೇಹಗಳಿಗೂ ಅಮಾನುಷವಾದ ಹಿಂಸೆ ಮಾಡಿ ಆ ತಾಯಿಯ ಎರಡು ಗಂಡು ಮಕ್ಕಳ ಮರ್ಮಾಂಗ ಕತ್ತರಿಸಿ ಕೊಂದು ಚೆಂಡಾಡಿದರೂ ಇನ್ನೂ ನ್ಯಾಯ ಸಿಗದ ಭೀಕರ ಸ್ಥಿತಿಗೆ ಈ ಒಂದೇ ಉದಾಹರಣೆ ಸಾಕು. ಇವುಗಳೆಲ್ಲಾ ಇವರಿಗೆ ಗತಕಾಲ. ಇವು ಗತಕಾಲವಾಗುವುದಾದರೆ ನಾವೇನಾದರೂ ಸತ್ತವರೊಂದಿಗೆ ಸಹಜೀವನ ನಡೆಸುತ್ತಿರಬಹುದೇ ಎಂದು ಗಾಬರಿಯಾಗುತ್ತದೆ.

**3**. ‘ದೇವನೂರ ಮಹಾದೇವರ ಸುಪ್ತಮನಸ್ಸಿನಲ್ಲಿ ಅಸ್ಪೃಶ್ಯತೆ ತುಂಬಿಕೊಂಡುಬಿಟ್ಟಿದೆ’ ಎನ್ನುತ್ತಾರೆ ಶ್ರೀ ಪೂಜಾರ್. ನನ್ನ ಮನದ ಅಸ್ಪೃಶ್ಯತೆಯಲ್ಲಿ ಆಚರಣೆಯ ಅಸ್ಪೃಶ್ಯತೆ ಇಲ್ಲ; ಆದರೆ ಸಮಾಜ ಆಚರಿಸುವ ಅಸ್ಪೃಶ್ಯತೆಯಿಂದಾದ ಗಾಯಗಳು ತುಂಬಿಕೊಂಡಿವೆ. ಯಾಕೆಂದರೆ, ಭಾರತದಲ್ಲಿ ದಲಿತರ ಮೇಲೆ ಹಲ್ಲೆ ಕೊಲೆ ಅವಮಾನ ಅತ್ಯಾಚಾರಗಳು ನಡೆಯದ ಯಾವುದಾದರೂ ಒಂದು ದಿನವಾದರೂ ಇದೆಯೇ?

ಶ್ರೀ ಪೂಜಾರ್ ಅವರು ‘ಸುಪ್ತ ಮನಸ್ಸಿನ ಅಸ್ಪೃಶ್ಯತೆ’ಯ ಬಗ್ಗೆ ಹೇಳಿರುವುದರಿಂದ, ಜನ್ಮಕರ್ಮ ಸಿದ್ಧಾಂತವು ನಿಜವಿದ್ದಲ್ಲಿ, ಕಳೆದ ಜನ್ಮದಲ್ಲಿ ನಾನು ಅಸ್ಪೃಶ್ಯತೆ ಆಚರಣೆ ಮಾಡಿದ ಕಾರಣವಾಗಿ ಈ ಜನ್ಮದಲ್ಲಿ ಕರ್ಮಕಳೆಯಲು ಅಸ್ಪೃಶ್ಯನಾಗಿ ಹುಟ್ಟಿದ್ದಲ್ಲಿ, ಶ್ರೀ ಪೂಜಾರ್ ಹೇಳುವ ಅಸ್ಪೃಶ್ಯತೆ ನನ್ನ ಸುಪ್ತ ಮನಸ್ಸಿನಲ್ಲಿದ್ದಲ್ಲಿ, ಅದು ನನಗೆ ಗೊತ್ತಿಲ್ಲ.

**4**. ‘ದನದ ಮಾಂಸವನ್ನು ದಲಿತರ ಆಹಾರ, ದಲಿತರ ಆಹಾರಸಂಸ್ಕೃತಿಯ ಹಕ್ಕು’ ಎಂದು ನಾನು ಹೇಳಿದ್ದಾಗಿ ಶ್ರೀ ಪೂಜಾರರು ಬರೆಯುತ್ತಾರೆ! ನಾನೆಲ್ಲಿ ಹೇಳಿದ್ದೇನೆ? ಗೋಮಾಂಸ ನಮ್ಮ ಋಷಿಮುನಿಗಳ ಆಹಾರವಾಗಿತ್ತು ಎಂದು ಹೇಳಿರಬಹುದು ಅಷ್ಟೇ. ಯಾಕೆಂದರೆ ನಾನು ಕಂಡಿದ್ದೇನೆ– ಗೋಮಾಂಸ ಸೇವಿಸುವ ಬ್ರಾಹ್ಮಣರೂ ಇದ್ದಾರೆ. ಯಾವುದೇ ಮಾಂಸಾಹಾರ ಸೇವಿಸದ ದಲಿತರೂ ಮುಸ್ಲಿಮರೂ ಇದ್ದಾರೆ. ಜಾತಿಗೂ ಆಹಾರಕ್ಕೂ ನೂರಕ್ಕೆ ನೂರು ಥಳಕು ಹಾಕಿದರೆ ಅದು ಸತ್ಯದಿಂದ ದೂರವಾಗುತ್ತದೆ. ಇಲ್ಲಿ ಆಹಾರದ ಬಗ್ಗೆ ತಳೆಯಬೇಕಾದ ದೃಷ್ಟಿಕೋನದ ಬಗ್ಗೆ ಹೇಳುತ್ತಿದ್ದೇನೆಯೇ ಹೊರತು, ದಲಿತರ ಆಹಾರದ ಪ್ರಸ್ತಾಪವೇ ಬರುವುದಿಲ್ಲ. ಇಂದು ಬಹುತೇಕ ದಲಿತರು ಗೋಮಾಂಸ ಸೇವನೆಯನ್ನು ಮಾಡುತ್ತಲೂ ಇಲ್ಲ, ಸಮಸ್ಯೆ ಇದಲ್ಲ.

ಇನ್ನೂ ಒಂದು ಉದಾಹರಣೆ ಕೊಡುವೆ, ಅಮೆರಿಕಾದಲ್ಲಿರುವ ಭಾರತೀಯರ ಮಾಂಸಾಹಾರ ಸೇವನೆ ಬಗ್ಗೆ ಒಂದು ಮಾತಿದೆ– ಭಾರತದಲ್ಲಿ ಹಂದಿ ಮತ್ತು ಗೋಮಾಂಸ ಸೇವನೆ ಮಾಡದ ಶೂದ್ರರು ಅಮೆರಿಕಾದಲ್ಲೂ ಸೇವನೆ ಮಾಡುವುದಿಲ್ಲ. ಆದರೆ ಸಸ್ಯಾಹಾರಿಗಳಾದ ಬ್ರಾಹ್ಮಣರು ಏನಾದರು ಮಾಂಸಾಹಾರಿಗಳಾದರೆ ಹಂದಿ ದನ ಎರಡನ್ನೂ ತಿನ್ನುವರು ಎಂಬ ಮಾತಿದೆ. ಹೀಗೆಲ್ಲಾ ಇರುವುದರಿಂದ ಗೋಮಾಂಸ ಸೇವನೆಗೂ ಅಸ್ಪೃಶ್ಯತೆಗೂ ಥಳಕು ಹಾಕಬೇಡಿ ಎಂದು ಅವರಲ್ಲಿ ವಿನಂತಿಸುವೆ. ಹೀಗಿದ್ದರೆ ಯೂರೋಪ್ ರಷ್ಯಾ

ಅಮೆರಿಕಾ ಜಪಾನ್ ಚೈನಾ ಎಲ್ಲಾ ಅಸ್ಪೃಶ್ಯ ರಾಷ್ಟ್ರಗಳಾಗಬೇಕಿತ್ತು. ನಮ್ಮ ಶತಮಾನದ ಮಹೋನ್ನತ ಮನುಷ್ಯ ಪರಮಹಂಸರು ಗೋಮಾಂಸ ಸೇವನೆ ಮಾಡಿರುವುದನ್ನಾದರೂ ಸಹಾನುಭೂತಿಯಿಂದ ನೋಡಿ ಎಂದು ವಿನಂತಿಸುವೆ.

**5**. 'ಗೋಮಾಂಸ ತಿನ್ನುವವರ ಬುದ್ಧಿಶಕ್ತಿಯನ್ನು ಪರೀಕ್ಷೆಗೆ ಒಳಪಡಿಸಬೇಕು' ಎಂದು ನಾನು ಬೇಡಿಕೆ ಇಟ್ಟಿರುವುದಾಗಿಯೂ ಇದು ಸ್ತುತ್ಯ ಎಂದೂ ಶ್ರೀ ಪೂಜಾರರು ಪ್ರಶಂಸಿಸಿ ತಿರುಚಿ ಉತ್ತರ ಕೊಟ್ಟಿದ್ದಾರೆ. ನನ್ನ ಆ ಮಾತಿನ ಉದ್ದೇಶ ಹೀಗಿದೆ– ಹಿಂದೆ, ಭಾರತದ ಋಷಿಮುನಿ ಕವಿ ಕಲಾವಿದ ಪ್ರತಿಭಾವಂತರು ಗೋಮಾಂಸ ಸೇವನೆ ಮಾಡುತ್ತಿದ್ದ ಆ ಕಾಲಮಾನದ ಬುದ್ಧಿಮತ್ತೆ, ಸೃಷ್ಟ್ಯಾತ್ಮಕತೆಗಳನ್ನು ಗಮನಿಸಿಯಾದರೂ ನಮ್ಮ ಆಹಾರದ ಬಗ್ಗೆ ಆರೋಗ್ಯಕರ ನಿಲುವು ತಾಳಬೇಕು ಎಂಬುದಷ್ಟೇ ನನ್ನ ಆಶಯ. ಇಂದಿಗೂ ಪ್ರತಿಷ್ಠಿತ ನೊಬೆಲ್ ಪ್ರಶಸ್ತಿ ಪಡೆದವರಲ್ಲಿ ಶೇಕಡ 95ರಷ್ಟು ಗೋಮಾಂಸಾಹಾರಿಗಳು ಅನ್ನುವುದನ್ನಾದರೂ ಗಮನಿಸಲಿ. ಇದರಿಂದಲಾದರೂ ಆಹಾರಕ್ಕೆ ಅಂಟಿಸುತ್ತಿರುವ ಕಳಂಕ ಕಳೆಯಬೇಕು. ಈ ಕಳಂಕ ಕಳೆಯಲೆಂದೇ ಗೋಮಾಂಸ ಭಕ್ಷ್ಯ 'ವಾಜಪೇಯೀ ಖಾದ್ಯ' ಎಂದಾಯಿತು.

**6**. ಶ್ರೀ ಪೂಜಾರ್ ಅವರ 'ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಸಾವಿರಾರು ಜಾತಿಗಳನ್ನು ಸೃಷ್ಟಿಸಿಕೊಂಡಿದ್ದಾನೆ', 'ನಿಷೇಧ ಎನ್ನುವುದಕ್ಕೆಲ್ಲಾ ವಿರೋಧವಿದೆ', 'ಜನರನ್ನು ಜಾಗೃತಗೊಳಿಸಿ ಸ್ವ-ಇಚ್ಛೆಯಿಂದ ಮಾಂಸಾಹಾರವನ್ನು ನಿಷೇಧಿಸುವಂತೆ ಮಾಡಬೇಕು' ಇತ್ಯಾದಿ ಅಭಿಪ್ರಾಯಗಳಿಗೆ ನನ್ನದೂ ಸಹಮತವಿದೆ.

ನನ್ನ ಆತಂಕ, ವಿರೋಧ ಇರುವುದು ನಿಷೇಧಕ್ಕೇನೇ ಎಂಬುದನ್ನು ಅವರೂ ಅರ್ಥ ಮಾಡಿಕೊಳ್ಳಬೇಕು. 'ಗೋಹತ್ಯಾ ನಿಷೇಧವು ನರಹತ್ಯೆಗೆ ಕಾರಣವಾಗುತ್ತದೆ' ಎಂದರೆ ಏನರ್ಥ ಎಂದು ಪ್ರಶ್ನಿಸುವವರೂ ಇದ್ದಾರೆ. ಗೋವಿನ ಚರ್ಮ ಸುಲಿದದ್ದಕ್ಕಾಗಿ ಹರಿಯಾಣದಲ್ಲಿ ನಾಲ್ಕು ಜನರನ್ನು ಬಲಿ ತೆಗೆದುಕೊಂಡ ಉದಾಹರಣೆ ಇರುವಾಗ, ಗೋಸಾಗಾಣಿಕೆ ಮಾಡುತ್ತಿದ್ದವನನ್ನು ಬತ್ತಲೆಗೊಳಿಸಿ ಅವಮಾನಿಸಿರುವ ಘಟನೆಯಂಥವು ನಮ್ಮ ಕಣ್ಣ ಮುಂದೆ ಇರುವಾಗ ಇದಕ್ಕೆ ಏನರ್ಥ ಎಂದು ಕೇಳುವವರು ಮುಗ್ಧರೋ ದಡ್ಡರೋ

ಧೂರ್ತರೋ ತಿಳಿಯದಾಗಿದೆ. ಈಗಿರುವ ಕಾನೂನಿನಡಿಯಲ್ಲೇ ಲಾಟಿ–ಕಲ್ಲುಗಳಿಂದಲೇ ಇಷ್ಟೆಲ್ಲಾ ಅನಾಹುತಗಳು ಜರುಗುತ್ತಿರುವಾಗ ಹೊಸ ನಿಷೇಧ ಕಾನೂನು ಬಂದರೆ, ಮರಿಪಿಶಾಚಿಗಳ ಕೈಗೆ ಚಾಕು ಚೂರಿ ಕೊಟ್ಟಂತೆ ಆಗುವುದಿಲ್ಲವೇ?

**7.** ಶ್ರೀ ಪೂಜಾರರು 'ದಮನಕಾರೀ, ಹಿಂಸೆ, ಕೊಲ್ಲುವ ಸಂಸ್ಕೃತಿಯನ್ನು ನಾವೆಲ್ಲ ವಿರೋಧಿಲೇಬೇಕು' ಎನ್ನುತ್ತಾರೆ. ಇದು ನಿಜ. ನನ್ನ ಆತಂಕವೇನೆಂದರೆ ಗೋಹತ್ಯೆನಿಷೇಧ ಕಾನೂನಿನ ಒಳಗೂ ದಮನಕಾರೀ, ಹಿಂಸೆ, ಕೊಲ್ಲುವ ಸಂಸ್ಕೃತಿಯ ಕೊಲೆಗಾರರು ಮರೆಮಾಚಿ ಕುಳಿತಿದ್ದಾರೆ. ದಯವಿಟ್ಟು ಕಾಣಿ ಎಂದಷ್ಟೆ ನನ್ನ ವಿನಂತಿ.

ಮುಂದೊಮ್ಮೆ ಇದೇ ಥರದ ಒಂದು ದುಷ್ಟ ಸರ್ಕಾರ ರಾಜಕಾರಣಕ್ಕೋ ಸೇಡಿಗೋ ಯಾವುದಾದರೂ ಸಸ್ಯಾಹಾರವನ್ನು ನಿಷೇಧ ಮಾಡಿದರೂ ನನ್ನ ನಿಲುವು ಆ ನಿಷೇಧದ ವಿರುದ್ಧವಾಗಿಯೇ ಇರುತ್ತದೆ. ಇದು ಇಲ್ಲಿಗೂ ಸಲ್ಲಲಿ ಎಂದು ಆಸೆ ಪಡುವುದು ತಪ್ಪಲ್ಲ ಅಂದುಕೊಂಡಿರುವೆ.

## ಬೇಕಾದುದು– ವೈಷ್ಣವ ದೀಕ್ಷೆಯಲ್ಲ; ತ್ರಿಜ ದೀಕ್ಷೆ

ಮಧ್ವ ಸಿದ್ಧಾಂತದ ಬಗ್ಗೆ ಕುವೆಂಪು ಅಸಹನೆಯನ್ನು* ಮನುಷ್ಯರಾದರೆ ಸಾಕು ಅರ್ಥ ಮಾಡಿಕೊಳ್ಳಬಹುದು. ಮಧ್ವ ಸಿದ್ಧಾಂತದ ನಿತ್ಯ ಮುಕ್ತ, ನಿತ್ಯ ಸಂಸಾರಿ, ನಿತ್ಯ ನಾರಕಿ– ಎಂಬ ಈ ದೃಷ್ಟಿಕೋನದಲ್ಲಿ– ಜಗತ್ತು, ಮನುಷ್ಯ ಬದಲಾಗುವುದಿಲ್ಲ, ಎಲ್ಲವೂ ನಿತ್ಯ ಅಂದರೆ ಶಾಶ್ವತ ಎಂದು ಸಮಾಜವನ್ನು ಜಡಗೊಳಿಸಿ ಚಲನರಹಿತ ಮಾಡಿ, ನರಕವನ್ನೇ ತಾರತಮ್ಯವನ್ನೇ ಸಿದ್ಧಾಂತಗೊಳಿಸಿಬಿಟ್ಟಿದೆ.

ಇಂಥ ಕಡೆ ವಿಶ್ವೇಶ್ವರತೀರ್ಥರು ಹುಟ್ಟಿದ್ದಾರೆ. ಈ ಸಿದ್ಧಾಂತದ ಮಠಕ್ಕೆ ಶ್ರೀಗಳಾಗಿದ್ದಾರೆ. ಆದರೆ ಚಲನೆಯನ್ನು ಬಯಸುವಂತೆ ಕಾಣುತ್ತಾರೆ. ಹಾಗಾಗಿ, ತನ್ನ ಸಿದ್ಧಾಂತದ ಚೌಕಟ್ಟನ್ನು ಮೀರಲು ಇವರು ಒದ್ದಾಡುತ್ತಿರುವಂತೆ ಕಾಣಿಸುತ್ತಿದೆ. ಈ ಒದ್ದಾಟ, ಬಲೆಗೆ ಸಿಕ್ಕಿಕೊಂಡು ಕೈಕಾಲು ಬಡಿಯುತ್ತಿರುವ ಒಂದು ಗುಬ್ಬಚ್ಚಿಯ ಒದ್ದಾಟದಂತಿದೆ. ಇದನ್ನು ನೋಡಿದಾಗ ಇವರು ಅಲ್ಲಿರಬೇಕಾದವರಲ್ಲ, ನಮ್ಮ ಜೊತೆ ಇರಬೇಕಾದವರು ಅಂತ ಒಂದೊಂದು ಸಲ ಅನ್ನಿಸುತ್ತದೆ.

ಆದರೆ ಇವರ ಒದ್ದಾಟವು ಆಳವಾದ ಧಾರ್ಮಿಕತೆಯಿಂದ ಬಂದುದೇ? ಅಂತರಂಗದ್ದೇ? ಎಂದು ಪ್ರಶ್ನಿಸಿಕೊಂಡಾಗ– ಧೈರ್ಯವಾಗಿ ಹೌದು ಎಂದು ಹೇಳಲು ಕಷ್ಟವಾಗುತ್ತದೆ. 'ಕೀಳಿಂಗಲ್ಲದೆ ಹಯನು ಕರೆಯದು' ಎಂದರೆ, ತಾನು ತನ್ನ ಅಹಂಅನ್ನು ಅಲ್ಪವಾಗಿಸದೆ ಮೋಕ್ಷವಿಲ್ಲ– ಎಂಬ ತುಡಿತದಿಂದಾಗಿ ಅಹಂ ಅಲ್ಪವಿರುವ, ಮೇಲರಿಮೆ ಇಲ್ಲದ ಅಸ್ಪೃಶ್ಯ ಸಮುದಾಯವನ್ನು ಶ್ರೇಷ್ಠವೆಂದು ಭಾವಿಸಿದ ವಚನಕಾರರ ನಡೆ ಕಂಡಾಗ, ಶ್ರೀ ಪೇಜಾವರರ ಪಾದಯಾತ್ರೆ

ಧಾರ್ಮಿಕವಲ್ಲವೇನೋ ಧರ್ಮರಾಜಕಾರಣವಿರಬೇಕು ಎಂಬ ಅನುಮಾನ ಹುಟ್ಟಿಸುತ್ತದೆ. 'ತಮ್ಮ ಮಠಕ್ಕೆ ಉತ್ತರಾಧಿಕಾರಿಯಾಗಿ ಕುರುಬರನ್ನೇನಾದರೂ ಮಾಡುತ್ತೀರಾ' ಎಂದು ಕೇಳಿದರೆ, 'ಬ್ರಾಹ್ಮಣರನ್ನು ಮಾತ್ರ ಕೇಳುತ್ತೀರಿ? ಕ್ರಿಶ್ಚಿಯನ್ನರನ್ನು ಕೇಳುತ್ತೀರಾ? ಲಾಮಾ ಮಾಡು ಎಂದು ಬೌದ್ಧರನ್ನು ಕೇಳುತ್ತೀರಾ?' ಎಂದು ಪೇಜಾವರರು ಸಹನೆ ಕಳೆದುಕೊಳ್ಳುತ್ತಾರೆ!.

'ನಾನು ಕ್ರಿಶ್ಚಿಯನ್, ನಾನು ಮುಸ್ಲಿಮ್, ನಾನು ಬೌದ್ಧ, ನಾನು ಯಾಕೆ ಮಠಾಧಿಪತಿಯಾಗಬಾರದು?' ಎಂದು ಆ ಧರ್ಮಗಳಲ್ಲಿರುವ ಯಾರೇ ಪ್ರಶ್ನಿಸಬಹುದು. ಇದಕ್ಕೆ ಆ ಧರ್ಮಗಳಲ್ಲಿ ಅವಕಾಶವಾದರೂ ಇದೆ. ಕೆಲವು ಕಡೆ ಸಾಧ್ಯವೂ ಆಗಿದೆ. ಹಿಂದೂ ಎಂದುಕೊಂಡಿರುವ ಜಾತಿಧರ್ಮದಲ್ಲಿ ಇದು ಸಾಧ್ಯವೇ? ಉಡುಪಿ ಕೃಷ್ಣನ ಗುಡಿಯ ಹೊರಗೆ ನಿಂತಿರುವ ಕನಕದಾಸನ ಕುರುಬರು ನಿಮ್ಮ ಸಮಾಜಕ್ಕೆ ಸೇರಿಲ್ಲವೇ? ಅವರ ಧರ್ಮವೇ ಬೇರೆಯೇ? ಅಥವಾ ಪ್ರತಿ ಜಾತಿಯೂ ಒಂದೊಂದು ಧರ್ಮವೇ?

ಹಾಗಾದರೆ ಧರ್ಮ ಎಂದರೇನು? ಜಾತಿಗಳ ಮೇಲು-ಕೀಳು ನಿಷಿದ್ಧಗಳ ಕಟ್ಟಳೆಗಳೇ ಇಲ್ಲಿ ಧರ್ಮವಾಗಿದೆ. ಅದಕ್ಕೇ ಪೇಜಾವರರನ್ನು ತಿರುಪತಿಯಲ್ಲಿ ಪೂಜೆಗೆ ಬಿಡುವುದಿಲ್ಲ ಎಂದರೆ- ನಾವೆಂಥ ಕ್ಷುದ್ರಜೀವಿಗಳು ಎಂದು ನಮಗನಿಸುವುದಿಲ್ಲ. ಈ ನಮ್ಮ ಮಠ, ದೇವಸ್ಥಾನ, ಪೂಜಾಸ್ಥಳಗಳು ಈ ಅಂಧಃತಮಸ್ಸಿನಿಂದ ಹೊರಬರಲು ಇನ್ನೆಷ್ಟು ವರ್ಷಗಳು ಕಾಯಬೇಕು? 'ನಿನ್ನನ್ನು ನನ್ನ ಮಠದ ಉತ್ತರಾಧಿಕಾರಿಯನ್ನಾಗಿ ಮಾಡುತ್ತೇನೆ, ಮತಾಂತರ ಆಗಬೇಡ' ಎನ್ನಲು ಬಾಯಿಬಾರದ ಮಠಾಧಿಪತಿ 'ಮತಾಂತರ ಆಗಬಾರದು' ಎಂದು ನೈತಿಕತೆ ಕಾಡದೆ ಹೇಳಿದರೂ ಅದರೊಳಗಿನ ನಿರ್ಲಜ್ಜತೆ ನಮಗೆ ಕಾಣಿಸುವುದಿಲ್ಲ. 'ನೀನು ಹೊರಗಿರುವುದೇ ನಮ್ಮ ಸಂಪ್ರದಾಯ' ಎನ್ನುವುದರ ಕ್ರೌರ್ಯವೂ ನಮಗೆ ತಟ್ಟುವುದಿಲ್ಲ.

ಈಗ ಪೇಜಾವರ ಶ್ರೀಗಳು ದಲಿತರಿಗೆ ವೈಷ್ಣವ ದೀಕ್ಷೆ ಕೊಡಲು ಹೊರಟಿದ್ದಾರೆ. ಈಗಾಗಲೇ ವೈಷ್ಣವ ದೀಕ್ಷೆ ಪಡೆದ ಅನೇಕ ದಲಿತ ದಾಸ ಒಕ್ಕಲುಗಳು ಇವೆ. ಶಂಖ-ಜಾಗಟೆಯನ್ನು ಪ್ರತ್ಯೇಕವಾಗಿ ಮಡಿಯಾಗಿ ಇಟ್ಟುಕೊಂಡು, ಆ ಇಟ್ಟಿರುವ ಜಾಗಕ್ಕೆ ಉಳಿದವರಿಗೆ ಪ್ರವೇಶ ಕೊಡದೆ, ದಾಸ ಒಕ್ಕಲುಗಳಲ್ಲೇ ಮದುವೆಗೆ ಹೆಣ್ಣು ಗಂಡು ಹುಡುಕುತ್ತಿವೆ. ಈ ದೀಕ್ಷೆ ದಲಿತರಲ್ಲಿ ಭೇದವನ್ನು ಹೆಚ್ಚಿಸಿರುವುದೇ ಹೊರತು ಐಕ್ಯತೆಯನ್ನಲ್ಲ. ಪೇಜಾವರ ಶ್ರೀಗಳ ಪಾದಯಾತ್ರೆಯಿಂದ ದಲಿತರಲ್ಲಿ ಇನ್ನಷ್ಟು ದಾಸರು ಹೆಚ್ಚಾಗಬಹುದು.

ಶಂಖಜಾಗಟೆ ಬಾರಿಸಬಹುದು! ಎಷ್ಟೇ ಶಂಖ-ಜಾಗಟೆ ಬಾರಿಸಿದರೂ ಅವರ ಅಸ್ಪೃಶ್ಯ ಸ್ಥಿತಿಯಿಂದ ಚಲನೆ ಕಾಣದು. ಯಾಕೆಂದರೆ ವೈಷ್ಣವ ದೀಕ್ಷೆ ಎಂದರೆ ಸೇವಕತನದ ದಾಸ ದೀಕ್ಷೆ.

ಹೀಗಿರುವಾಗ ಶ್ರೀ ಪೇಜಾವರರು ವೈಷ್ಣವದೀಕ್ಷೆಯನ್ನು ಪುನರ್‌ಪರಿಶೀಲಿಸುವುದು ಒಳಿತೇನೋ. ಬದಲಾಗಿ ದ್ವಿಜರಿಗೆ ತ್ರಿಜ ದೀಕ್ಷೆ ಕೊಡುವುದು ನಮ್ಮ ಸಮಾಜದ ಆರೋಗ್ಯ ಐಕ್ಯತೆ ಸಮತೋಲನಕ್ಕೆ ಅಗತ್ಯವೇನೋ ಅನ್ನಿಸುತ್ತದೆ. ಹಾಲಿ ದ್ವಿಜ ದೀಕ್ಷೆಯ ಗಾಯತ್ರೀ ಮಂತ್ರದಲ್ಲಿ, ಮುಖ್ಯವಾಗಿ ಬುದ್ಧಿ ಪ್ರಚೋದನೆಯಾಗಲಿ ಎಂಬ ಆಶಯವಿದೆ. ಬುದ್ಧಿಯಿಂದ ಒಡಕು ವಂಚನೆ ಮೇಲರಿಮೆ ಕೀಳರಿಮೆ ಇತ್ಯಾದಿಗಳು ಹೆಚ್ಚಲೂಬಹುದು. ಭಾರತದ ಸಮಾಜಕ್ಕೆ ಇಂದು ತುರ್ತಾಗಿ ಬೇಕಾಗಿರುವುದು- ಕರುಳು ಅಂದರೆ ಅಂತಃಕರಣ, ಅಂದರೆ ಬಂಧುತ್ವ. ಇದರ ಪ್ರಚೋದನೆಗಾಗಿ, ಅಂದರೆ ಕಾರುಣ್ಯದ ಪ್ರಚೋದನೆಯಾಗಲಿ ಎಂಬ ಆಶಯದ ತ್ರಿಜದೀಕ್ಷೆ ಅಂದರೆ ನೆತ್ತಿಗೊಂದು ಮುತ್ತು ಕೊಟ್ಟು ಮತ್ತೆ ಮಗುತನದ ಬಂಧುತ್ವದ ಅಭೇದದೀಕ್ಷೆ ಭಾರತಕ್ಕೆ ಅರ್ಜೆಂಟಾಗಿ ಬೇಕಾಗಿದೆ.

ಭಾರತವು ಏನೇನೋ ಹುಟ್ಟುಹಾಕಿದೆ. ಹುಟ್ಟಿಸುವುದರಲ್ಲಿ ನಾವು ನಿಸ್ಸೀಮರು. ಚಾತುರ್ವರ್ಣ ಜಾತಿಭೇದದ ತಾರತಮ್ಯದ ಕಾನೂನು ಕಟ್ಟಳೆಗಳನ್ನು ಧರ್ಮವಾಗಿಸಲು ದೇವರುಗಳನ್ನೇ ರೌಡಿಗಳನ್ನಾಗಿಸಿದ ದೇಶ ಇದು. ಇತ್ತೀಚೆಗೆ ಆ್ಯಕ್ಸಿಡೆಂಟ್ ಗಣೇಶನನ್ನೂ ಹುಟ್ಟುಹಾಕಿದೆ. ಈಗ ಒಂದು ಹೊಸ ಹುಟ್ಟಿಗಾಗಿ ಪೇಜಾವರ ಶ್ರೀಗಳ ಮುಂದೆ ಸಲಹೆಯೊಂದನ್ನಿಡುವೆ. ನಮ್ಮದು ಜನ್ಮಾಂತರಗಳನ್ನು ನಂಬುವ ದೇಶ. ಈ ಜನ್ಮದ ತರ್ಕಕ್ಕೆ- 'ಕಳೆದ ಜನ್ಮದಲ್ಲಿ ಅಸ್ಪೃಶ್ಯತೆ ಆಚರಿಸಿದವರೇ ಈ ಜನ್ಮದಲ್ಲಿ ಅದನ್ನು ಅನುಭವಿಸಲು ಅಸ್ಪೃಶ್ಯರಾಗಿ ಹುಟ್ಟಿದ್ದಾರೆ. ಈ ಜನ್ಮದಲ್ಲಿ ಅಸ್ಪೃಶ್ಯತೆ ಆಚರಿಸುವವರು ಮುಂದಿನ ಜನ್ಮದಲ್ಲಿ ಅಸ್ಪೃಶ್ಯರಾಗಿ ಹುಟ್ಟುವರು' ಎಂದು ಜನಜನಿತ ಮಾಡಿದರೆ ನಮ್ಮ ಜಡ ಸಮಾಜವು ಸ್ವಲ್ಪವಾದರೂ ಚಲಿಸಬಹುದಲ್ಲವೇ? ಜನ್ಮ ನಿಜವಿದ್ದರೆ ಆ ಜನ್ಮಾಂತರದ ಕರ್ಮಫಲವನ್ನು ಉಣ್ಣಬೇಕಾದ್ದೂ ನಿಜವಿರಬಹುದಲ್ಲವೇ?

ಏನೇನೋ ಹುಟ್ಟುಹಾಕುವವರು ಇದನ್ನೂ ಯಾಕೆ ಹುಟ್ಟುಹಾಕಬಾರದು?! ಯಾಕೆ ಮಠಾಧೀಶರುಗಳು ಇದನ್ನು ಪ್ರಚಾರ ಮಾಡಬಾರದು? ತಾರತಮ್ಯಕ್ಕಾಗಿ ತರ್ಕಿಸಿ ಸಾಯುವ ಭಾರತದ ಮನಸ್ಸು ಐಕ್ಯತೆಗಾಗಿ ಯಾಕೆ ತರ್ಕಿಸಬಾರದು? ಇದನ್ನೇ ಅಸ್ಪೃಶ್ಯರೊಳಗಿನ ತಾರತಮ್ಯಕ್ಕೂ- ಈ ಜನ್ಮದಲ್ಲಿ ಯಾರನ್ನಾದರು ಕೀಳಾಗಿ ಕಂಡಿದ್ದರೆ ಮುಂದಿನ ಜನ್ಮದಲ್ಲಿ ಕೀಳಾಗಿ ಹುಟ್ಟಿಯೇ ಕರ್ಮಫಲವನ್ನು ಕಳೆದುಕೊಳ್ಳಬೇಕಾಗುತ್ತದೆ- ಎಂಬಲ್ಲಿಯವರೆಗೂ ವ್ಯಾಪಿಸಬಹುದು.

ಸುಸ್ತಾಗುತ್ತಿದೆ. ಯಾಕೋ ಮುಗಿಯುತ್ತಿಲ್ಲ. ಪ್ರೀತಿ–ಸಮಾನತೆಯ ಆಸೆ ಇಟ್ಟುಕೊಂಡು ಇತಿಹಾಸಕಾಲದಿಂದಲೂ ಜೀವಿಸುತ್ತಿದ್ದೇವೆ. ಪೇಜಾವರಶ್ರೀಗಳ ಪಾದಯಾತ್ರೆಯಿಂದಾಗಿ ಕೆಲವರಾದರೂ ಎಳೆಯ ದ್ವಿಜರು ತ್ರಿಜರಾಗಿ ತ್ರಿಜತ್ವ ಪಡೆದು ತಮ್ಮದಲ್ಲದ ಜಾತಿಯಲ್ಲಿ ಮದುವೆಯಾಗಿ ಹೊಸ ಮನುಷ್ಯ ಸಂತಾನ ಹುಟ್ಟಲು ಶ್ರೀ ಪೇಜಾವರರ ಈ ಪಾದಯಾತ್ರೆ ಪ್ರಚೋದನೆಯನ್ನು ಉಂಟುಮಾಡಲಿ ಎಂದು ಕನಸು ಕಾಣುವೆ. ನನ್ನ ಕನಸು ನನಸಾಗಲಿ.

*ಕುವೆಂಪು ಅವರ ಸಂದರ್ಶನವೊಂದರಲ್ಲಿ ಶ್ರೀಕೃಷ್ಣ ಆಲನಹಳ್ಳಿಯವರು ಕುವೆಂಪು ಅವರಿಗೆ ಒಂದು ಪ್ರಶ್ನೆ ಕೇಳಿದರು– 'ಮಧ್ವಸಿದ್ಧಾಂತ ನೀಚ ಸಿದ್ಧಾಂತವೇ ಸರ್?' ಅಂತ. ಅದಕ್ಕೆ ಕುವೆಂಪು– 'ನೀಚ? ಪರಮ ನೀಚ' ಅಂದರು. ಆಲನಹಳ್ಳಿ ನಕ್ಕೂ ನಕ್ಕೂ ಆ ನಗುವಿನ ಅಲೆ ನನ್ನ ಕಿವಿಯಲ್ಲಿ ಇನ್ನೂ ಇದೆ.

## ಮಠಕ್ಕೂ ಒಂದು ಪತ್ರ

ಮಠಮಾನ್ಯರೇ,
ಬಸವಕಲ್ಯಾಣದಿಂದ ಹೊರಡುವ ದಿನ ನಾನು ಅನುಭವ ಮಂಟಪ ನೋಡಿದೆ. ಅಲ್ಲಿ ಅಲ್ಲಮನ ಬದಲು ಬಸವಣ್ಣ ಹಾಗೂ ಅಕ್ಕಪಕ್ಕದಲ್ಲಿ ನಾಗಲಾಂಬಿಕೆ ಗಂಗಾಂಬಿಕೆ ನೋಡಿ ಅವಕ್ಕಾದೆ. ಶ್ರೀಮತಿ ಮಾತೆ ಮಹಾದೇವಿಯವರು ಬಸವಣ್ಣನವರ ಅಂಕಿತ ತಿದ್ದಿ ದಡ್ಡತನ, ಮೂರ್ಖತನ ತೋರಿಸಿಕೊಂಡಿದ್ದರೆ ಬಸವಕಲ್ಯಾಣದ ಅನುಭವ ಮಂಟಪದಲ್ಲಿ ಅಲ್ಲಮನ ಸ್ಥಾನದಲ್ಲಿ ಬಸವಣ್ಣನನ್ನು ಇಟ್ಟು ವಚನಯುಗದ ಜೀವ(ಸ್ಪಿರಿಟ್)ತಿದ್ದಿ ವಿರೂಪಗೊಳಿಸಲಾಗಿದೆ ಅನ್ನಿಸಿತು. ಮಾತೆ ಮಹಾದೇವಿಯವರು ಮಾಡಿದ ಕಳಂಕದ ನೂರರಷ್ಟು ಇದು ಅನ್ನಿಸಿತು.

ಆಮೇಲೆ ವಚನಗಳಲ್ಲಿ ಮೂಡುವ ಧರ್ಮಪ್ರವರ್ತಕ ಬಸವಣ್ಣನಿಗೂ ಈಗ ಫೋಟೋಗಳ ಮೂಲಕ ಹೆಚ್ಚು ಪ್ರಚಲಿತಗೊಳಿಸುತ್ತಿರುವ ಕಿರೀಟಿ ಬಸವಣ್ಣನಿಗೂ ಏನೇನೂ ಸಂಬಂಧವಿಲ್ಲ ಅನ್ನಿಸುತ್ತದೆ. ಪಂಚಾಚಾರ್ಯರ ಕಿರೀಟದ ಮುಂದೆ ತಮ್ಮವನದೂ ಕಮ್ಮಿಯಿಲ್ಲ ಎಂಬ ಅಸಹಾಯಕತೆ ಕೀಳರಿಮೆಯಿಂದ ಹುಟ್ಟಿಕೊಂಡ ವ್ಯಕ್ತಿಚಿತ್ರ ಕಿರೀಟಿ ಬಸವಣ್ಣ ಇರಬೇಕು. ಕಿರೀಟದವರು ಈ ಭೂಮಿ ಮೇಲೆ ಕೋಟಿ ಕೋಟಿ ಆಗಿ ಹೋಗಿರಬಹುದು. ಆದರೆ ಉಳಿದಿರುವವರು ಬೆತ್ತಲೆಗೆ ಹತ್ತಿರದವರು ಎಂಬುದು ತಮಗೆ ತಿಳಿದಿದೆ. ನನಗೆ ಕೊಟ್ಟಿದ್ದ ಬಸವಣ್ಣನ ಫೋಟೋ ಅಲ್ಲೆ ಬಿಟ್ಟುಬಂದೆ, ಕ್ಷಮಿಸಿ.

ಈ ಸಂದರ್ಭದಲ್ಲಿ, ಅಸಾಧ್ಯವಲ್ಲ ಎಂದುಕೊಂಡು ನನ್ನ ಒಂದೆರಡು ಅನಿಸಿಕೆಗಳನ್ನು ತಮ್ಮ ಮುಂದಿಡುವೆ.

**1**. ತಮ್ಮ ಸಂಸ್ಥೆಗಳಲ್ಲಿ ಅಂತರ್ಜಾತಿ ವಿವಾಹಿತರು, ಅವರ ಮಕ್ಕಳುಗಳಿಗೆ ಉದ್ಯೋಗ ಶಿಕ್ಷಣದಲ್ಲಿ ಕನಿಷ್ಠ 5%ರಷ್ಟು ಮೀಸಲಾತಿ ತಂದು ಸರ್ಕಾರಕ್ಕೂ ತಾವು ಮಾರ್ಗದರ್ಶಿಯಾಗಲು ಸಾಧ್ಯವೆ?

**2**. ಹಿಂದೆ ಇಡೀ ಸಮಾಜವನ್ನು ಬ್ರಾಹ್ಮಣ ಮಠಗಳು ಪ್ರತಿನಿಧಿಸುತ್ತಿದ್ದವು. ಇತ್ತೀಚೆಗೆ ಮಧ್ಯಮ ಜಾತಿಗಳ ಮಠಗಳು ಪ್ರಬಲಗೊಂಡು ಬಹುಸಂಖ್ಯಾತ ಜನ ಈ ಮಠಗಳಿಗೆ ನಡೆದುಕೊಳ್ಳುತ್ತಿರುವುದರಿಂದ ಬ್ರಾಹ್ಮಣ ಮಠಗಳ ಅಹಂಗೆ ಪೆಟ್ಟು ಬೀಳುತ್ತಿದೆ ಅನ್ನಿಸುತ್ತಿದೆ. ಅದಕ್ಕಾಗಿ ಬ್ರಾಹ್ಮಣ ಮಠಗಳ ಅಹಂ ಇಡೀ ಸಮಾಜವನ್ನು ತಾನು ಪ್ರತಿನಿಧಿಸಬೇಕೆಂಬ ಮೇಲರಿಮೆ ಹುನ್ನಾರವಾಗಿ ಭಜರಂಗದಳ, ಸಂಘಪರಿವಾರಕ್ಕೆ ಆಶೀರ್ವಾದ ಮಾಡುತ್ತಿರುವಂತೆ ಕಾಣುತ್ತಿದೆ. ಹಿಂದುತ್ವ ಪರಿಕಲ್ಪನೆ ಪ್ರಬಲವಾದರೆ ಭಾರತದ ನೂರಾರು ಧರ್ಮಗಳು ಸಾವಿರಾರು ಸಂಪ್ರದಾಯಗಳು ತಂತಾನೇ ನಾಶವಾಗುವುದರಿಂದ ಮತ್ತೆ ಬ್ರಾಹ್ಮಣಶಾಹಿ ತನ್ನ ಮೇಲರಿಮೆ ಕಾಪಾಡಿಕೊಳ್ಳುವುದರ ಹವಣಿಕೆಯಾಗಿ ಇದು ನನಗೆ ಕಾಣಿಸುತ್ತಿದೆ. ಶ್ರೀ ಪೇಜಾವರರ ಚಲನವಲನಗಳೂ ನನಗೆ ಹೀಗೆ ಅನ್ನಿಸಲು ಕಾರಣವಾಯ್ತು.

ಈ ಬಿಕ್ಕಟ್ಟಿನಲ್ಲಿ ಮೂಲಭೂತವಾದಿಗಳ ಕ್ರಿಯೆಗಳಿಗೆ ಪ್ರತಿಕ್ರಿಯೆ ಪ್ರತಿಕಾರ್ಯಕ್ರಮ ತೋರಿಸುತ್ತ ಏತಿಗೆ ಪ್ರೇತಿ ಅನ್ನುವುದು ಮೂಲಭೂತಗಳು ನಮ್ಮನ್ನೇ ಆಹಾರವಾಗಿಸಿಕೊಂಡು ಇನ್ನೂ ಕೊಬ್ಬಲು ಕಾರಣವಾಗಬಹುದು.

ಬದಲಾಗಿ, ಇಂದು ದಿಕ್ಕಿಲ್ಲದ ನಿರುದ್ಯೋಗಿ ಜನಸಮುದಾಯ ಎತ್ತಗೆ ಬೇಕಾದರೂ ಎಳೆದ ಕಡೆ ಹೋಗುವ ಪರಿಸ್ಥಿತಿ ಇರುವುದರಿಂದ ಹಳ್ಳಿಗಳಲ್ಲಿ ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಉದಾ: ಆಯಾ ಊರಿನ ಜಲಸಂವರ್ಧನೆ, ಆಯಾ ಊರಿನ ಕಸಗೊಬ್ಬರದ ಪುನರ್‌ರಚನೆ, ಆಯಾ ಊರಿನ ಗ್ರಂಥಾಲಯ, ಪ್ರಾಥಮಿಕ ಶಿಕ್ಷಣ, ಆಸ್ಪತ್ರೆ–ನಿಗಾ ಕಾರ್ಯಕ್ರಮ; ಆಯಾ ಊರಿನ ಮಹಿಳಾ ಸ್ವಸಹಾಯ ಸಂಘಗಳಿಗೆ ಒತ್ತಾಸೆ, ಇತ್ಯಾದಿ, ತಾಲ್ಲೂಕಿಗೆ ಒಂದು ಊರು ಆಯ್ದು ಆರಂಭಿಸಬಹುದು.

ಅನ್ನ ಅಕ್ಷರ ದಾಸೋಹ ಪರಂಪರೆಗೆ ಇದು ಸಾಧ್ಯವಿಲ್ಲವೆ?

## ‘ಇಂಥ ಪರಿಸ್ಥಿತಿ ಬರಬಾರದಾಗಿತ್ತು’

‘ದ್ವೇಷ ಬಿಟ್ಟು ದೇಶ ಕಟ್ಟು’ ಆಂದೋಲನಕ್ಕಾಗಿ ಇಂದು ಮೈಸೂರಿನ ಹಿರಿಯ ಜೀವಿಗಳು ಅಂದರೆ ಮೈಸೂರಿನ ವಿವೇಕ ಇಲ್ಲಿ ಸೇರಿದೆ. ಈ ಹಿರಿಯ ಜೀವಿಗಳು ಒಕ್ಕೊರಲಿನಿಂದ ಎಲ್ಲ ಜಾತಿ ಧರ್ಮಗಳ ಜನರೂ ಸಹನೆ ಪ್ರೀತಿಯ ಸಹಬಾಳ್ವೆ ಮಾಡುವಂತೆ ಕೈ ಮುಗಿದು ಕೇಳಿವೆ.

ಇಂಥ ಪರಿಸ್ಥಿತಿ ಬರಬಾರದಿತ್ತು– ಅಂದರೆ ದೊಡ್ಡವರು ಹೀಗೆ ಕೈ ಮುಗಿದು ಕೇಳಿಕೊಳ್ಳುವಂತಹ ಪರಿಸ್ಥಿತಿಯನ್ನು ಯುವಜನತೆ ಹಾಗೂ ನಾಗರಿಕರು ತಂದುಕೊಳ್ಳಬಾರದಿತ್ತು. ಇಂದು ಕುಣಿಯುತ್ತಿರುವ ಮತಾಂಧತೆ– ಹಿಂದೂ ಮುಸ್ಲಿಂ ಕ್ರಿಶ್ಚಿಯನ್ ಅಥವಾ ಯಾವುದೇ ಜಾತಿ ಜನಾಂಗದ್ದೇ ಇರಲಿ– ಇವುಗಳೆಲ್ಲ ಒಂದೇ ತಾಯಿಯ ಸಂತಾನ. ಇವುಗಳ ಬಹಿರಂಗ ಬೇರೆ ಬೇರೆಯಾಗಿ ಕಾಣಬಹುದು. ಆದರೆ ಇವುಗಳ ಅಂತರಂಗ ಒಂದೇ. ಯಾರದೇ ಮತಾಂಧತೆಯು ತಿಂದು ಹಾಕುವುದು ಮಾನವತೆಯನ್ನು ಮಾತ್ರ. ಹಿಡಿಯಷ್ಟು ಇರುವ ಮತಾಂಧತೆಗೆ ಸುಮ್ಮನೆ ವೀಕ್ಷಕರಾಗಿರುವ ಬಹುಸಂಖ್ಯಾತ ಜನ ಸಮುದಾಯ ಬೆಚ್ಚಿ ಅಸಹಕಾರ ತೋರಿದರೆ ಮಾತ್ರ ಈಗ ಉಳಿಗಾಲವಿದೆ. ಇಲ್ಲದಿದ್ದರೆ ಯಾವುದೇ, ಯಾರದೇ ಮತಾಂಧತೆಯು ಮೊದಲು ಮಾಡುವುದು ತನ್ನವರ, ತನಗೆ ಸೇರಿದವರ ಕಣ್ಣುಗಳನ್ನು ಕಿತ್ತು ಅಂಧರನ್ನಾಗಿಸುವುದು. ಆಮೇಲೆ ಮಿದುಳು ಕಿತ್ತು ವಿವೇಕಶೂನ್ಯರನ್ನಾಗಿಸುವುದು. ನಂತರ ಹೃದಯ ಕಿತ್ತು ಕ್ರೂರಿಗಳನ್ನಾಗಿಸುವುದು. ಆಮೇಲೆ ನರಬಲಿ ಕೇಳುವುದು. ಇಂದು ಇದು ಹೆಚ್ಚುತ್ತಿದೆ.ಬಹಳ ತುರ್ತಾಗಿ ನಮ್ಮ ಮಕ್ಕಳ ಕಣ್ಣು ಹೃದಯ ಮಿದುಳುಗಳನ್ನು ಮತಾಂಧತೆಯ ದವಡೆಯಿಂದ ರಕ್ಷಿಸಬೇಕಾಗಿದೆ. ಇಂಥ ಸಂದರ್ಭದಲ್ಲಿ ಇಲ್ಲಿ ಸೇರಿರುವ ದೊಡ್ಡಜೀವಗಳ ತುಡಿತಕ್ಕೆ ಕೃತಜ್ಞತೆ ಸಲ್ಲಿಸುವೆ.

# ಹೀಗೇ
# ಮುಂದುವರೆದರೆ

# ಹೀಗೇ ಮುಂದುವರೆದರೆ

ಹೀಗೇ ಮುಂದುವರೆದರೆ, ಈ ಅಂತಃಕರಣ ಇಲ್ಲದ ಖಾಸಗೀಕರಣ, ಜಾಗತೀಕರಣ, ಉದಾರೀಕರಣ ಹೀಗೇ ಮುಂದುವರಿದರೆ, ಕಾರ್ಪೋರೇಟ್ ಸೆಕ್ಟರ್ ದವಡೆಗೆ ಸಿಕ್ಕಿರುವ ಭಾರತ ತನ್ನನ್ನು ಬಿಡಿಸಿಕೊಂಡು ಬಚಾವಾಗದಿದ್ದರೆ, ನಾಳಿನ ಭಾರತ ಹೇಗಿರಬಹುದು? ಹೀಗೆ ಯಾಕಾದರೂ ಅಂದುಕೊಂಡೆನೋ ಅಂತ ಈಗ ಅನ್ನಿಸುತ್ತಿದೆ. ಆ ರೀತಿ ಅಂದುಕೊಂಡಿದ್ದಕ್ಕಾಗಿ ಎರಡು ದುಃಸ್ವಪ್ನಗಳು ಈಗ ನನ್ನ ಕಣ್ಮುಂದೆ ಬಂದು ಕೂತಿವೆ.

ಒಂದು: ಮುಂಬೈನಲ್ಲಿ ಸಾವಿರಾರು ಗುಡಿಸಲುಗಳ ನಡುವೆ ಒಂದು ಅರಮನೆ ಇದೆ. ಈ ಅರಮನೆ ಕಾರ್ಪೋರೇಟ್ ಕುಳ ಅಂಬಾನಿಯದು. ನಾಳೆ ಇಡೀ ಭಾರತವೇ ಹೀಗಾಗಿಬಿಡಬಹುದೆ? ಇನ್ನೊಂದು: ನಮ್ಮ ಬಳ್ಳಾರಿ ಜಿಲ್ಲೆ–ಇಲ್ಲಿ ಅದಿರು ತೆಗೆದೂ ತೆಗೆದೂ ಇಡೀ ಭೂಮಿ ಹಳ್ಳಗಳಾಗಿವೆ. ಇಲ್ಲಿ ಗಾಳಿ, ನೀರೂ ಕೆಂಪಾಗಿವೆ. ನಾಳೆ ಇಡೀ ಭಾರತವೇ ಹೀಗಾಗಿಬಿಡಬಹುದೆ?

ಭೂಮಿ ನಲುಗ್ತಾ ಇದೆ; ನರಳ್ತಾ ಇದೆ. ಅಸಮಾನತೆ, ಬಡವ ಬಲ್ಲಿದರ ನಡುವೆ ಅಂತರ ಎಂದೂ ಇಲ್ಲದಷ್ಟು ಉಲ್ಬಣಗೊಳ್ಳುತ್ತಿದೆ. ಆದರೆ ಸಮಾನತೆಗಾಗಿ ಹೋರಾಡಬೇಕಾದ ಸಂಘಟನೆಗಳು, ಸಮುದಾಯಗಳು ತೆವಳುತ್ತಿವೆ. ಉಳಿಗಾಲ? ಗೊತ್ತಾಗುತ್ತಿಲ್ಲ. ಹೀಗೇ ಮುಂದುವರಿದರೆ ಆ ಸ್ಲಂ ಜೋಪಡಿ ಜನರ ರೋಗ–ರುಜಿನ ಹಸಿವಿನ ಆಕ್ರಂದನ ಹತಾಶೆ ನೋಡಲಾಗದೆ 'ಮಾನವೀಯ ದೃಷ್ಟಿ' ಯಿಂದ ಅವರನ್ನೆಲ್ಲಾ ಗಣಿ ಗುಂಡಿಗಳಿಗೆ ತುಂಬಿ ಮಣ್ಣುಮುಚ್ಚಿ ಮಣ್ಣುಮಾಡುವುದರತ್ತ ಭಾರತದ ಅಭಿವೃದ್ಧಿ ಸಾಗುತ್ತಿದೆಯೇನೋ ಎಂಬ ಭಯವಾಗುತ್ತದೆ. ಜನರಿಂದ, ಜನರಿಗಾಗಿ,

ಜನರಿಗೆ ಅಧಿಕಾರ, ಯಾರಿಗೆ? ಎಲ್ಲವೂ ಮಾರಿಕೆಯ ಸರಕುಗಳಾಗಿ– ಪ್ರಜಾಪ್ರಭುತ್ವ, ಜನತಂತ್ರ ವ್ಯವಸ್ಥೆ, ನ್ಯಾಯ, ದೇವರು, ಎಲ್ಲವೂ. ಇನ್ನು ಉಳಿದಿದ್ದೇನು?

ಹೀಗಿದ್ದೂ ನಮಗೆ ಕಾಣುತ್ತಿಲ್ಲ, ನಮ್ಮ ಸಂಘಟನೆಗಳ ಕಣ್ಣಿಗೆ ಪೊರೆ ಕಟ್ಟಿದೆ ಎಂಬುದಕ್ಕೆ ಒಂದೆರಡು ಉದಾಹರಣೆ– ಸರ್ಕಾರ ನೂರಾರು ದಲಿತ ಹಾಸ್ಟೆಲ್ಲುಗಳನ್ನು ಮುಚ್ಚಲು ಹೊರಟಿದೆ. ಈ ಸಂದರ್ಭದಲ್ಲಿ ದಲಿತ ಸಂಘಟನೆಗಳು ತಾನು ಹುಟ್ಟಿ ಬೆಳೆದ ಸ್ಥಳವನ್ನಾದರೂ ನೆನಪಿಸಿಕೊಳ್ಳಬೇಕಿತ್ತು. 1973–74ರ ಸಾಲಿನಲ್ಲಿ ದಲಿತ ಸಂಘರ್ಷ ಸಮಿತಿ ತನ್ನ ಹೆಸರು ಪಡೆಯುವ ಮುನ್ನ ಮೈಸೂರಿನ ಅಶೋಕಪುರಂನ ಸಿದ್ಧಾರ್ಥ ಹಾಸ್ಟೆಲ್‌ನಲ್ಲಿ ರಾಜ್ಯದ ಹತ್ತಾರು ಸಂಘಟನೆಗಳು ಸಭೆ ಸೇರಿ ಇಡೀ ರಾಜ್ಯಕ್ಕೆ ಒಂದೇ ಸಂಘಟನೆಗಾಗಿ ತುಡಿಯುತ್ತವೆ. ಈ ತುಡಿತ ಹುಟ್ಟುವುದು ಒಂದು ವಿದ್ಯಾರ್ಥಿನಿಲಯದಲ್ಲಿ. ಮುಂದೆ ದಲಿತ ಸಂಘರ್ಷ ಸಮಿತಿ ಹೆಸರಾಗಿ ದಸಂಸ ಕಣ್ಣುಬಾಯಿ ಬಿಡುವುದು, ನಡೆದಾಡುವುದು ರಾಜ್ಯದ ಮೂಲೆ ಮೂಲೆಗಳ ವಿದ್ಯಾರ್ಥಿ ನಿಲಯಗಳಲ್ಲೆ. ಈಗ ಸರ್ಕಾರ ನೂರಾರು ದಲಿತ ವಿದ್ಯಾರ್ಥಿನಿಲಯಗಳನ್ನು ಮುಚ್ಚಲು ಹೊರಟಿದೆ. ದಲಿತ ಸಂಘರ್ಷ ಸಮಿತಿಗಳು ತಾನು ಹುಟ್ಟಿದ ಸ್ಥಳವನ್ನೇ ಮರೆತು ಕೂತಿವೆ!

ಈ ಹಿಂದೆ ಒಂದೇ ದಲಿತ ಸಂಘರ್ಷ ಸಮಿತಿ ಇತ್ತು. ಹೆಚ್ಚೆಂದರೆ ಇಡೀ ರಾಜ್ಯದಲ್ಲೆ ಸಾವಿರದಷ್ಟು ಕಾರ್ಯಕರ್ತರು ಇದ್ದರು. ಆಗ ದಲಿತ ಸಂಘರ್ಷ ಸಮಿತಿ ಇದೆ ಅನ್ನಿಸುತ್ತಿತ್ತು. ಈಗ ಹತ್ತಾರು ದಲಿತ ಸಂಘರ್ಷ ಸಮಿತಿಗಳೇ ಇವೆ. ಲಕ್ಷಾಂತರ ಕಾರ್ಯಕರ್ತರೂ ಇದ್ದಾರೆ. ಈಗ ದಲಿತ ಸಂಘರ್ಷ ಸಮಿತಿ ಇದೆ ಎಂದು ಹೇಳುವ ಧೈರ್ಯವಾಗುತ್ತಿಲ್ಲ. ಯಾಕೆ? ಇದನ್ನು ನಾವು ಯೋಚಿಸಬೇಕಾಗಿದೆ.

ಇನ್ನು ನಾವು ಬದುಕುತ್ತಿರುವ ಸಮಾಜವೋ? ಯಾವ ಶತಮಾನಗಳಲ್ಲಿ ಅದಿದೆಯೋ ಅದೂ ತಿಳಿಯದು. ರಾಣಿಬೆನ್ನೂರು ತಾಲ್ಲೂಕಿನಲ್ಲಿ ಹೊಸಮನೆಯ ಶನಿಮೂಲೆಯನ್ನು ಸಂತೃಪ್ತಿಗೊಳಿಸಲು ಒಂದು ದಲಿತ ಹುಡುಗನ ನರಬಲಿ ಆಗಿದೆ. ದಲಿತ ಸಂಘರ್ಷ ಸಮಿತಿಗಳು ಮಲಗಿ ಬಿಟ್ಟಿವೆ. ಉಸಿರಾಡುತ್ತಿವೆಯೋ ಇಲ್ಲವೊ ತಿಳಿಯುತ್ತಿಲ್ಲ. ಇಲ್ಲೆ ಮಂಡ್ಯ ಜಿಲ್ಲೆಯಲ್ಲಿ ದಲಿತ ಹುಡುಗನನ್ನು ಪ್ರೇಮಿಸಿದ್ದಕ್ಕಾಗಿ ಒಂದು ಹುಡುಗಿಯ ಹತ್ಯೆ ಆಕೆಯನ್ನು ಹುಟ್ಟಿಸಿದವರಿಂದಲೇ ಜರುಗಿದೆ. ಇದನ್ನು 'ಮರ್ಯಾದಾ ಹತ್ಯೆ' ಎಂದು

ಬೇರೆ ಕರೆಯುತ್ತಿದ್ದಾರೆ. ಇದನ್ನು 'ಮರ್ಯಾದಾ ಹತ್ಯೆ' ಎಂದು ಉಚ್ಚರಿಸುವ ನಮಗೆ ಮೊದಲು ಮಾನ ಮರ್ಯಾದೆ ಇಲ್ಲ ಅಷ್ಟೆ. ಇದು ಪೈಶಾಚಿಕ ಹತ್ಯೆ. ಭಾರತದ ಸಮಾಜದ ಪ್ರತಿಯೊಂದರಲ್ಲೂ- ಹಿಂದಿನಿಂದಲೂ ನಡೆದುಕೊಂಡು ಬಂದದ್ದು, ನಮ್ಮ ಪೂರ್ವಿಕರು ಮಾಡಿಕೊಂಡು ಬಂದದ್ದು ಇಂಥವೇ ತುಂಬಿದೆ. ಭಾರತೀಯ ಸಮಾಜ ಜೀವನದ ಬಹುತೇಕ ನಿರ್ಧಾರ, ಆಳ್ವಿಕೆಗಳು ಸತ್ತವರಿಂದ ನಡೆಯುತ್ತಿದೆ. ಒಟ್ಟಿನಲ್ಲಿ ಸತ್ತವರ ಕೈಯಲ್ಲಿ ಬದುಕಿರುವವರ ಜುಟ್ಟಿದೆ. ಸತ್ತವರು ಬದುಕಿದ್ದಾರೋ ಅಥವಾ ಬದುಕಿರುವವರು ಸತ್ತಿದ್ದಾರೋ ಒಂದೂ ತಿಳಿಯುತ್ತಿಲ್ಲ.

ಇಂಥ ಪರಿಸ್ಥಿತಿಯಲ್ಲಿ ದಲಿತ ಸಂಘಟನೆಗಳು ಛಿದ್ರವಾಗಿವೆ. ದಲಿತ ಸಮಾಜವೂ ಛಿದ್ರವಾಗಿದೆ. ಅಷ್ಟೇ ಅಲ್ಲ ಪರಸ್ಪರ ದ್ವೇಷಿಸುತ್ತಿದೆ. ಹೀಗೇ ಮುಂದುವರಿದರೆ ಇದರ ಫಲವೇನು? ಊರಾಚೆ ಇರುವ ದಲಿತರು ಊರಾಚೆಯೇ ಇರಬೇಕಾಗುತ್ತದೆ. ಊರೊಳಗೆ ಇರುವ ಬಡವರು ತಳಸಮುದಾಯದವರು ಊರಾಚೆಗೊ, ಸ್ಲಂಗೊ ನೂಕಲ್ಪಡುತ್ತಾರೆ. ಈಗ ನಮ್ಮ ಕಣ್ಣೆದುರು ಆಗುತ್ತಿರುವುದನ್ನೇ ನೋಡಿದರೆ, ಊರಾಚೆ ಇರುವ ದಲಿತ ಸಮುದಾಯದ ಜನಪ್ರತಿನಿಧಿಗಳ ಪ್ರಾತಿನಿಧ್ಯ ದಿನದಿನಕ್ಕೂ ಕಮ್ಮಿಯಾಗುತ್ತಿದೆ. ಊರಾಚೆ ಇರುವವರು ರಾಜಕಾರಣದ ಊರಾಚೆಯೇ ಇರಬೇಕಾಗಿ ಬರಬಹುದೇನೊ ಎಂದೂ ಅನ್ನಿಸುತ್ತಿದೆ. ಇದಕ್ಕೆ ಏನು ಕಾರಣ ಅಂತ ಶಾಸ್ತ್ರ ಕೇಳಬೇಕಾಗಿಲ್ಲ, ದಲಿತ ಸಂಘಟನೆಗಳ ಛಿದ್ರತೆ, ದಲಿತ ಸಮುದಾಯಗಳ ಛಿದ್ರತೆ ಇಲ್ಲಿಗೆ ತಂದಿಟ್ಟಿದೆ.

ಈಗ ಏಕಾಏಕಿ ದಲಿತ ಸಂಘಟನೆಗಳೆಲ್ಲಾ ಒಂದಾಗಲಿ ಎಂದು ಆಸೆ ಪಡುವ ಪರಿಸ್ಥಿತಿಯಲ್ಲೂ ನಾವಿಲ್ಲ. ಯಾಕೆಂದರೆ ಆಗ ಹತ್ತಾರು ಜನ ಹೆಂಡತಿಯರನ್ನು ಕಟ್ಟಿಕೊಂಡು ನಿಭಾಯಿಸಲಾಗದ ಜರ್ಜರಿತ ಸ್ಥಿತಿ ದಲಿತ ನಾಯಕತ್ವಕ್ಕೆ ಬಂದು ಬಿಡಬಹುದು. ಅದಕ್ಕಾಗಿ ಒಂದಾಗುವತ್ತ ಮೊದಲ ಹೆಜ್ಜೆಯಾಗಿ ದಲಿತ ಸಂಘಟನೆಗಳು ಒಕ್ಕೂಟದ ಮನೋಭಾವ, ಒಕ್ಕೂಟದ ಕಾರ್ಯಚಟುವಟಿಕೆ ಪಡೆದುಕೊಳ್ಳುವುದು ಇಂದಿನ ತುರ್ತಾಗಿದೆ.

ಈ ದಿಕ್ಕಿನಲ್ಲಿ ಒಂದು ಹೆಜ್ಜೆ- ಪ್ರತಿ ಹೊಸ ವರ್ಷದ ಜನವರಿ ತಿಂಗಳಲ್ಲಿ ಹೊಸ ವರ್ಷದ ಒಂದನೇ ತಾರೀಖಿನಿಂದ ಇಡೀ ತಿಂಗಳು 'ಸಂವಿಧಾನವೇ ಭಾರತದ ಧರ್ಮ' ಎಂಬ ತಿಂಗಳಾಚರಣೆ. ಇದಕ್ಕಾಗಿ ದಲಿತ ಸಂಘರ್ಷ ಸಮಿತಿಗಳು ತಮ್ಮೊಡನೆ ರೈತಸಂಘ, ಜತೆಗೆ ಎಲ್ಲಾ ಪ್ರಗತಿಪರರೂ ಹಾಗೂ ಅರ್ಥದಷ್ಟಿರುವ

ಮಹಿಳಾ ಸಮುದಾಯದ ಕಾಲುಭಾಗವನ್ನಾದರೂ ಒಳಗೊಳ್ಳುತ್ತಾ 'ನಂನಮ್ಮ ಧರ್ಮಗಳು ನಂನಮ್ಮ ಮನೆಯೊಳಗಿರಲಿ; ಸಂವಿಧಾನವೇ ಭಾರತದ ಧರ್ಮವಾಗಲಿ' ಎಂಬ ಉಳಿವಿನ ವಾಕ್ಯವನ್ನು ಮನೆಮನೆಗೂ ತಲುಪಿಸಲು ಪ್ರತಿ ಹೊಸ ವರ್ಷದ ಇಡೀ ಜನವರಿ ತಿಂಗಳು ರಾಜ್ಯದ ಉದ್ದಗಲಕ್ಕೂ ಜಾಥಾ, ಮೆರವಣಿಗೆ, ಸಂಕಿರಣ, ಇದಕ್ಕಾಗಿ ಹಾಡು, ಲಾವಣಿ, ನಾಟಕ, ತಮ್ಮಟೆ ಪ್ರಚಾರ– ಇತ್ಯಾದಿ ಇತ್ಯಾದಿ.

ಇದನ್ನು– ಸ್ಪರ್ಧೆ ಇಲ್ಲದೆ ಮಾಡುವುದನ್ನು, ಹಂಚಿಕೊಂಡು ಮಾಡುವುದನ್ನು ಹಾಗೂ ಒಟ್ಟಾಗಿ ಮಾಡುವುದನ್ನು ನಾವು ಕಷ್ಟಪಟ್ಟು ಪಳಗಿಸಿಕೊಂಡರೆ, ನಾವು ಉಳಿಯಬಹುದು.

## ಶಾಪವಿಮೋಚನೆಗಾಗಿ

'ನಮ್ಮನ್ನೂ ಒಂದ್ಸಲ ನೋಡಿ ನಮ್ಮನ್ನೂ ಒಂದ್ಸಲ ನೋಡಿ' ಅನ್ನುತ್ತಿದ್ದ ಬಿಜೆಪಿ ಭೂತದ ಬಾಯ್ಗೆ, ಒಂದ್ಸಲ ನೋಡೇಬಿಡುವ ಅನ್ನುವ ಮತದಾರನ ಮನಸ್ಸಿನ ಚಪಲಕ್ಕೆ ಕರ್ನಾಟಕವು ಸಿಕ್ಕಿಕೊಂಡು ಈಗ ಒದ್ದಾಡುತ್ತಿದೆ. ಈ ಭೂತದ ಬಾಯಿಂದ ಕರ್ನಾಟಕವನ್ನು ಬಚಾವು ಮಾಡಬೇಕಾಗಿದೆ.

ಅಧಿಕಾರಕ್ಕೆ ಬಂದ ಈ ಭೂತವು ಮಾಡಿದ ಮೊದಲ ಕೆಲಸ– ಸಾರ್ವಜನಿಕ ಜೀವನದಲ್ಲಿ ಲಜ್ಜೆಯನ್ನು ಕೊಂದುಬಿಟ್ಟಿತು. ಇದರಿಂದಾಗಿ, ಇಂದು ಏನೇ ಮಾಡಿದರೂ ಎಂಥ ಅಸಹ್ಯಕ್ಕೂ ನಾಚಿಕೆ ಆಗದು. ಸಂಸ್ಕೃತಿ ಸಂಸ್ಕೃತಿ ಅಂತ ಜಪಮಾಡುತ್ತಾ ಲಜ್ಜಾಹೀನ ಸಂಸ್ಕೃತಿಯನ್ನು ಸಾರ್ವಜನಿಕ ಜೀವನದಲ್ಲೂ ವಿಧಾನಸೌಧದ ಒಳಗೂ ಪ್ರತಿಷ್ಠಾಪಿಸಿಬಿಟ್ಟಿತು. ಒಂದು ಕಡೆಯಿಂದ ಶಾಲೆ ಮುಚ್ಚುತ್ತಾ ಇನ್ನೊಂದು ಕಡೆಯಿಂದ ಹಾಸ್ಟೆಲ್‌ಗಳನ್ನು ಮುಚ್ಚುತ್ತಾ ಸಮಾನ ಶಿಕ್ಷಣಕ್ಕೂ ಎಳ್ಳು ನೀರು ಬಿಡುತಾ– ಹೀಗೆ ಮುಚ್ಚುತ್ತಾ ಎಳ್ಳುನೀರು ಬಿಡುತ್ತಾ ವಿಧಾನಸೌಧವನ್ನೂ ಹೆಚ್ಚುಕಮ್ಮಿ ಮುಚ್ಚಿಬಿಟ್ಟಿದೆ. ಆಡಳಿತಕ್ಕೂ ಎಳ್ಳುನೀರು ಬಿಟ್ಟಿದೆ. ಆಳ್ವಿಕೆ ನಡೆಸಲು ಅನರ್ಹರಾದವರು ಅಧಿಕಾರಕ್ಕೆ ಬಂದರೆ ಏನಾಗುತ್ತದೋ ಅದು ನಮ್ಮಗಳ ಕಣ್ಮುಂದೆ ಈಗ ಜರುಗುತ್ತಿದೆ. ಇವರಿಗೆ ಮಾತೃಭೂಮಿಯ ಪ್ರೇಮ ಎಷ್ಟಿದೆ ಎಂದರೆ– ಭೂಮಿಯ ಮಣ್ಣನ್ನೇ ಬಗೆದು ನುಂಗುತ್ತಾರೆ ಅಥವಾ ಸ್ವಾಧೀನಪಡಿಸಿಕೊಂಡು ಸ್ವಂತ ಮಾಡಿಕೊಳ್ಳುತ್ತಾರೆ– ಹೀಗೆ ಇನ್ನೆಷ್ಟೋ.

ಮೊನ್ನೆ ವಾಕಿಂಗ್ ಮಾಡುವಾಗ ನಾನೂ ಕೇಳಿಸಿಕೊಂಡೆ– ಪರಪ್ಪನ ಅಗ್ರಹಾರದಲ್ಲಿ ಇರಬೇಕಾದವರಲ್ಲಿ ಎಷ್ಟೋ ಜನ ವಿಧಾನಸೌಧದಲ್ಲಿ ಇದ್ದಾರೆ– ಅಂತ. ಈ ವಾಕಿಂಗ್ ಟಾಕ್ ಕರ್ನಾಟಕದ ತುಂಬಾ ನಡೆದಾಡುತ್ತಿದೆ.

ಕಳೆದ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಸ್ಥಳೀಯ ಪತ್ರಿಕೆಗಳಲ್ಲಿ ಮೈಸೂರಿನಲ್ಲಾದ ಒಂದು ಘಟನೆಯ ವರದಿ ಬಂದಿತ್ತು. ಅದು ಹೀಗಿದೆ:

ವಯೋವೃದ್ಧರೊಬ್ಬರು ಪೇಪರ್ ಓದುತ್ತಾ ಸಾಗುತ್ತಿದ್ದರು. ಎಂದಿನಂತೆ ಬಿಜೆಪಿ ಶಾಸಕ ಎ. ರಾಮದಾಸ್ ಆ ವೃದ್ಧರನ್ನು ಬಿಜೆಪಿಗೆ ಮತ ನೀಡುವಂತೆ ಮನವಿ ಮಾಡಿದರು. ಒಡನೆಯೇ ಕಿಡಿಕಿಡಿಯಾದ ನಿವೃತ್ತ ಸರ್ಕಾರಿ ನೌಕರರಾದ ಆ ವಯೋವೃದ್ಧರು 'ಯಾವ ಬಿಜೆಪಿ? ನಾನೂ ಬಿಜೆಪಿಯವನೇ. ತುಂಬಾ ನೋವಾಗುತ್ತಿದೆ. ಮೊದಲು ಆಪರೇಷನ್ ಕಮಲ ನಿಲ್ಸಿ. ಇಲ್ಲದಿದ್ದರೆ ಬಿಜೆಪಿ ಸರ್ವನಾಶವಾಗುತ್ತದೆ' ಎಂದು ಕೋಪದಿಂದ ನುಡಿದಾಗ ಆ ಅವರನ್ನು ಮುಟ್ಟಿ ಸಮಾಧಾನಿಸಲು ರಾಮದಾಸ್ ಮುಂದಾದಾಗ ಆ ವೃದ್ಧರು– 'ದೂರ ಸರಿಯಿರಿ. ನನ್ನ ಮುಟ್ಟಬೇಡಿ. ಮೈಲಿಗೆಯಾಗುತ್ತೆ' ಎಂದು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು. ರಾಮದಾಸ್ ಅವರೊಂದಿಗಿದ್ದ ಆರ್‌ಎಸ್‌ಎಸ್ ಸಂಘ ಪರಿವಾರದ ಸಕ್ರಿಯ ಕಾರ್ಯಕರ್ತ ದಾಮೋದರ್ ಬಾಳಿಗ ಅವರು 'ಕೋಪ ಮಾಡ್ಕೊಬೇಡಿ' ಎಂದು ಸಂಧಾನ ಮಾಡಲು ಮುಂದಾದಾಗ ಆ ವೃದ್ಧರು 'ನೀನೂ ಹೊಲಸಾಗಿದ್ದೀಯಾ, ದೂರ ಸರಿ. ಆಪರೇಷನ್ ಕಮಲ ಬೇಡ ಎಂದು ಬಿಜೆಪಿಯವರಿಗೆ ಬುದ್ಧಿ ಕಲಿಸಲಾಗುವುದಿಲ್ಲವೆ? ನನ್ನ ಮುಟ್ಟಬೇಡ' ಎಂದು ಬಿರಬಿರನೆ ಹೊರಟು ಹೋದರು.

ಇದು ವರದಿ. ಇದು ರಾಷ್ಟ್ರೀಯ ಸುದ್ದಿಯಾಗಬೇಕಿತ್ತು. ರಾಜ್ಯದ ರಾಜಕಾರಣವನ್ನು ಆಪರೇಷನ್ ಕಮಲದಿಂದ ಕೊಳಕು ಮಾಡಿದ ಬಿಜೆಪಿಗೆ ಶಾಪ ಕೊಡುವ ಋಷಿಮುನಿಯಂತೆ ಆ ವೃದ್ಧರು ಕಂಡರು. ಈ ಶಾಪ, ಇಂಥ ಕೃತ್ಯವೆಸಗುವ ಎಲ್ಲಾ ಪಕ್ಷಗಳಿಗೂ ತಟ್ಟುತ್ತದೆ. ಈ ಹಿನ್ನೆಲೆಯಲ್ಲಿ ಆ ವೃದ್ಧರಿಗೆ ಆಪರೇಷನ್ ಕಮಲವು 'ಕಮಲವ್ಯಾಧಿ'ಯಾಗಿ ಕಂಡಿರಬೇಕು. ಜತೆಗೆ, ಇಂಥ ಪಕ್ಷ ಸಂಸಾರಸ್ಥರ ಮನೆಯಂತೆ ಕಂಡಿರಲಾರದು. ಯಾರೋ ಬರ್ತಾನೆ, ರಾತ್ರಿ ಮಲಗಿರ್ತಾನೆ, ಬೆಳಿಗ್ಗೆ ಎದ್ದು ಇನ್ನೊಂದು ಮನೆಗೆ ಹೋಗುತ್ತಾನೆ, ನಾಳೆ ಇನ್ನೊಬ್ಬ ಬರ್ತಾನೆ. ಮನೆಯ ಯಜಮಾನ ಹಲ್ಲುಗಿಂಜುತ್ತ ಕೈಹೊಸಕುತ್ತ ಬರುವವರನ್ನೆಲ್ಲ ಸಂಭ್ರಮದಿಂದ ಸ್ವಾಗತಿಸುತ್ತಾ ಇರುತ್ತಾನೆ. ಹೀಗೆ ಕಂಡಿದ್ದರಿಂದಲೇ ಆ ವೃದ್ಧರಿಗೆ ಅಸಹ್ಯ ಹುಟ್ಟಿದೆ. ಇನ್ನೇನು ಹುಟ್ಟುತ್ತದೆ?

ಇಂಥ ಸಾತ್ವಿಕರು ಎಲ್ಲಾ ಪಕ್ಷಗಳಲ್ಲೂ ಸಾವಿರಾರು ಜನ ಇರಬಹುದು. ಅವರು ಈಗಲಾದರೂ ತಮ್ಮ ಸಿಟ್ಟನ್ನು ತೋರಿಸಬೇಕಾಗಿದೆ.

## ಬೇಕಿದೆ ಒಂದು ರಥಯಾತ್ರೆ

ಮಾಯಾವಿ ಮಾಂತ್ರಿಕ ತನ್ನ ಪ್ರಾಣವನ್ನು ಯಾವುದೋ ಪಕ್ಷಿಯಲ್ಲಿ ಇಟ್ಟಿರುತ್ತಾನಂತೆ. ಜಾಗತೀಕರಣದ ಜೀವ ಎಲ್ಲಿರಬಹುದು? ನನ್ನ ಮನಸ್ಸು ಹುಡುಕಾಡುತ್ತಿದೆ.

ಯಾಕೆಂದರೆ, ಕೆಲವು ವಿದ್ಯಮಾನಗಳು ನನಗೆ ಭೀತಿ ಉಂಟುಮಾಡಿವೆ. ಇತ್ತೀಚೆಗೆ ಅಮೆರಿಕಾದಲ್ಲಿ ಆರ್ಥಿಕ ಕುಸಿತ ಉಂಟಾಯಿತು. ಅವರಿಗೂ ಭ್ರಮನಿರಸನ ಉಂಟಾಗಿರಬೇಕು. ಅದಿರಲಿ, ಅಮೆರಿಕಾದ ಬಾಲಾಂಗೋಚಿಯಂತೆ ಆಡುತ್ತಿರುವ ಭಾರತಕ್ಕೆ ಅಂಥ ಸ್ಥಿತಿ ಉಂಟಾಗಿದ್ದರೆ– ಉಳಿಗಾಲ ಎಲ್ಲಿ ಇತ್ತು? ನೆನೆಸಿಕೊಳ್ಳಲೂ ಭಯವಾಗುತ್ತದೆ. ಅಮೆರಿಕಾದಂಥ ದೇಶವೇನೋ ಬೇರೆಯವರ ತಲೆಯೊಡೆದು ಬಚಾವಾಗಬಹುದು. ನಮ್ಮಂಥವರ ಕಥೆ ಏನು? ಈ ಸಂದರ್ಭದಲ್ಲಿ ಕಮ್ಯುನಿಸ್ಟ್ ಪಕ್ಷಗಳು–ಅವುಗಳ ಬಗ್ಗೆ ಎಷ್ಟೇ ಭಿನ್ನಾಭಿಪ್ರಾಯವಿದ್ದರೂ– ಬ್ಯಾಂಕ್, ಜೀವವಿಮೆ, ಇತ್ಯಾದಿಗಳಲ್ಲಿ ಖಾಸಗೀ ಮತ್ತು ವಿದೇಶೀ ಸಹಭಾಗಿತ್ವ ಮೇಲುಗೈ ಪಡೆಯದಂತೆ ತಡೆದು– ದೇಶವನ್ನು ಬಚಾವು ಮಾಡಿದಂತೆ ಕಾಣುತ್ತದೆ.

ಇತ್ತೀಚೆಗೆ ಒಂದು ಪತ್ರಿಕಾ ವರದಿ ತಲ್ಲಣಗೊಳಿಸಿತು. ಈ ಜಾಗತೀಕರಣದ ಪರಿಣಾಮವಾಗಿ ಪುರಾತನ ನಾಗರಿಕತೆಯ ಗ್ರೀಸ್ ದೇಶಕ್ಕೆ ಸರ್ಕಾರ ನಡೆಸಲು ಆಗದೆ, ಸರ್ಕಾರಿ ಸ್ವಾಮ್ಯದ ಆಸ್ತಿಪಾಸ್ತಿ ಮಾರಿ ಅದು ಜೀವ ಹಿಡಿದುಕೊಂಡಿದೆಯಂತೆ. ಯಾವಾಗ ಜೀವ ಹೋಗುತ್ತೋ ಗೊತ್ತಿಲ್ಲ. ಇನ್ನೂ ಒಂದು ದಯನೀಯ ಸ್ಥಿತಿ ಅಂದರೆ, ಗ್ರೀಸ್ ದೇಶದ ಆಸ್ತಿಯನ್ನು ಕೊಂಡುಕೊಳ್ಳಲೂ ಯಾವ ಯೂರೋಪು ರಾಷ್ಟ್ರಕ್ಕೂ ಶಕ್ತಿ–ಆಸಕ್ತಿ ಇಲ್ಲವಂತೆ.

ಅದಕ್ಕಾಗಿ ಗ್ರೀಸ್ ದೇಶವು ತನ್ನ ಆಸ್ತಿಯನ್ನು ಕೊಂಡುಕೊಳ್ಳುವಂತೆ ಚೈನಾವನ್ನು ಯಾಚಿಸುತ್ತಿದೆ. ಆ ಸರ್ಕಾರದ ಸಚಿವರು ಇರಬೇಕು, ಒಂದು ಹೇಳಿಕೆ ನೀಡಿದ್ದಾರೆ– ಗ್ರೀಸ್ ದೇಶದ ಮಕ್ಕಳು, ಜನರು ಚೀನೀ ಭಾಷೆ ಕಲಿಯಬೇಕು ಅಂತ. ಇಂಥ ಪರಿಸ್ಥಿತಿ ಯಾರಿಗೂ ಬರಬಾರದು.

ಬಡತನ ಹಿಂದೆಯೂ ಇತ್ತು, ಮುಂದೂ ಇರಬಹುದು. ಆದರೆ ಆಗ ಬಡತನದಲ್ಲಿ ದೈನ್ಯತೆ ಅಷ್ಟಾಗಿ ಇರಲಿಲ್ಲ. ಹಿಂದೆ ರೈತ ತಾನು ಮಾಡುತ್ತಿರುವುದು ಘನತೆಯ ಕೆಲಸ, ತಾನು ಹಿಡಿದಿರುವುದು ಉಳುಮೆಯ ಮೇಳಿ, ತಾನೇನು ಸರ್ಕಾರಿ ತೇಪೇದಾರಿ ಕೆಲಸ ಮಾಡುತ್ತಿಲ್ಲ, ಹಾಗಾಗಿ ತಾನು ಯಾರಿಗೂ ತಲೆ ತಗ್ಗಿಸಬೇಕಿಲ್ಲ, ತಾನು ಸ್ವತಂತ್ರ ಅಂದುಕೊಂಡಿದ್ದ. ಹಾಗೆ ದುಡಿದು ತಿನ್ನುವ ಬಡವನೂ ಕೂಡ, ತನ್ನ ರಟ್ಟೆ ಬಲ ತನಗೆ ರೊಟ್ಟಿ ಕೊಡುತ್ತದೆ, ತಾನು ಯಾರ ಹಂಗಲ್ಲೂ ಇಲ್ಲ ಅಂದುಕೊಳ್ಳುತ್ತಿದ್ದ. ಬಡತನ ಇತ್ತು. ನಿಜ. ಆದರೆ ದೈನ್ಯತೆ ಇರಲಿಲ್ಲ. ಈಗ ಈ ಜಾಗತೀಕರಣದಿಂದಾಗಿ ಬಡತನಕ್ಕೆ ದೈನ್ಯತೆ ಬಂದು ನಡುಗುತ್ತಿದೆ. ಇದು, ಈ ಜಾಗತೀಕರಣ, ಮನುಷ್ಯರನ್ನು ಮನುಷ್ಯರನ್ನಾಗಿ ಉಳಿಯಗೊಡಿಸುವುದಿಲ್ಲವೇನೋ. ಡ್ರಗ್ ಅಡಿಕ್ಟ್ ಅಂದರೆ ಮಾದಕವ್ಯಸನಿಯು ಅದಿಲ್ಲದಾಗ ಏನು ಬೇಕಾದರೂ ಮಾಡುವಂತೆ ಇಂದು ಜಗತ್ತು ಆಡುತ್ತಿದೆ. ಇಂದು ಕ್ರೌರ್ಯ ಎಷ್ಟು ಕಠೋರವಾಗಿದೆಯೆಂದರೆ ಬಡತನವನ್ನು ಅಳತೆಮಾಡಲು, ಬಡತನದ ರೇಖೆ ನಿರ್ಧರಿಸುವಾಗ, ಮನುಷ್ಯರು ತಿನ್ನುವ ಆಹಾರದ ಪ್ರಮಾಣವನ್ನೇ ಖೋತಾ ಮಾಡಿ ಬಡತನದಿಂದ ಮೇಲೆತ್ತುವ ಅಮಾನವೀಯ ಕೃತ್ಯ ಜರುಗಿದೆ.

ಇಲ್ಲಿಗೆ ಬಂದರೆ, ಇತ್ತೀಚೆಗೆ ಖೇಣಿ ನೈಸ್ ರಸ್ತೆಗೆ ಸರ್ಕಾರ ಹೆಚ್ಚುವರಿಯಾಗಿ ಕೊಟ್ಟಿದ್ದ ಭೂಮಿಯನ್ನು ಆಯಾಯ ರೈತರಿಗೇ ಹಿಂದಿರುಗಿಸಿ ಎಂಬ ಚಳವಳಿಯಲ್ಲಿ ನಾನು ಭಾಗವಹಿಸಿದ್ದೆ. ಆಗ ಒಂದು ಒಳಮಾತು ಕೇಳಿಸಿತು– ಸರ್ಕಾರಕ್ಕೆ ಕಷ್ಟ. ಯಾಕೆಂದರೆ ಎಂಟು ಹತ್ತು ಜನ ಎಂ.ಎಲ್.ಎ.ಗಳು ಖೇಣಿಯ ಕೈಲಿದ್ದಾರೆ ಅಂತ. ಅಯ್ಯೋ ದೇವರೇ, ಹಾಗಾದರೆ ರಾಜ್ಯದಲ್ಲಿ ಇಂಥಾ ಎಂಟು ಹತ್ತು ಜನ ಖೇಣಿಗಳಿದ್ದರೆ ಸರ್ಕಾರ ಯಾರ ಕೈಲಿದೆ? ವಿಧಾನಸೌಧ ಯಾರದು? ನಾವು ಬೆಚ್ಚಿ ಬೆದರುತ್ತಿಲ್ಲ.

ಒಟ್ಟಿನಲ್ಲಿ ನಾವು ಆಯ್ಕೆ ಮಾಡಿದ ಜನಪ್ರತಿನಿಧಿಗಳು ಜನರನ್ನು ಪ್ರತಿನಿಧಿಸುತ್ತಿಲ್ಲ. ಜನರ ಮಾತನ್ನು ಜನಪ್ರತಿನಿಧಿಗಳು ಕೇಳಬೇಕಾಗಿಲ್ಲ. ಯಾಕೆಂದರೆ ಬಹುತೇಕ ಜನರ ಮತಗಳು ಹಣ, ಆಮಿಷಗಳಿಗೆ ಬಿಕರಿಯಾದದ್ದು. ಚಿಲ್ಲರೆಯಾಗಿ

ಮತಗಳನ್ನು ಕೊಂಡು ಜನಪ್ರತಿನಿಧಿಯಾದವನು ಸಗಟಾಗಿ ತನ್ನನ್ನು ಮಾರಾಟ ಮಾಡಿಕೊಳ್ಳುತ್ತಿದ್ದಾನೆ. ಇದರಿಂದಾದ ಸರ್ಕಾರವೂ ತನ್ನನ್ನು ಹೋಲ್‌ಸೇಲಾಗಿ ಮಾರಾಟ ಮಾಡಿಕೊಳ್ಳುತ್ತಿದೆ. ಉಳಿಗಾಲವಿಲ್ಲ ಎಂಬ ಕಡೆಗೆ ನಮ್ಮ ನಡಿಗೆ ಇದೆ. ಇದಕ್ಕೆ ನಾವು ಬೆಚ್ಚಿ ಬೆದರಬೇಕಿದೆ.

ಕೊನೆಯ ಮಾತು– ಕರ್ನಾಟಕದ ಬಳ್ಳಾರಿ ಬಹುಶಃ ನಾಳಿನ ಭಾರತ. ಬಳ್ಳಾರಿಯಲ್ಲಿ ಏನಿಲ್ಲ! ಭಾರತದ ಯಾವ ಜಿಲ್ಲೆಯಲ್ಲೂ ಇಲ್ಲದಷ್ಟು ಬ್ಯಾಂಕುಗಳಿವೆ. ಬ್ಯಾಂಕಿನ ತುಂಬಾ ಹಣವಿದೆ. ವಿಮಾನ ನಿಲ್ದಾಣ ಆಗುತ್ತಿದೆ. ಮಹಲುಗಳಿವೆ. ಸ್ಟಾರ್‌ಹೊಟೇಲುಗಳ ಸಂಖ್ಯೆ ಹೆಚ್ಚುತ್ತಿದೆ. ಖಾಸಗಿ ಹೆಲಿಕಾಪ್ಟರ್‌ಗಳಿವೆ. ಕರ್ನಾಟಕದ ಅರ್ಧ ಹಣ ಬಳ್ಳಾರಿಯಲ್ಲೇ ಇದೆ ಎಂದು ಅಂದಾಜಿಸಬಹುದು. ಇಂಥ ಜಿಲ್ಲೆಗೆ ನಾನೊಂದು ಸಲ ಅದಿರು ಸಾಗಾಣಿಕೆ ಪ್ರತಿಭಟಿಸಲು ಹೋಗಿದ್ದೆ. ನೋಡಿದಾಗ ಅನ್ನಿಸಿತು– ಊರುಬಿಟ್ಟು ಹೋಗುವಾಗ ಎಲ್ಲಾ ಸಾಮಾನುಗಳನ್ನು ಗಂಟು ಮೂಟೆ ಕಟ್ಟಿ ರೆಡಿಯಾದಂತೆ, ಬಳ್ಳಾರಿಯ ಮನುಷ್ಯರು ತಮ್ಮ ಭೂಮಿಯನ್ನು ಬಗೆದು ದೋಚಿ ಬೇರೆ ಗ್ರಹಗಳಲ್ಲಿ ವಾಸಿಸಲು ತಯಾರಾಗಿ ತುದಿಗಾಲಲ್ಲಿ ನಿಂತಿರುವಂತೆ ಕಾಣಿಸಿತು.

ಹೀಗೇ ಮುಂದುವರೆದರೆ ಕರ್ನಾಟಕದ ಬಳ್ಳಾರಿ ಬಹುಶಃ ನಾಳಿನ ಭಾರತ? ಕ್ಷಮಿಸಿ. ನಮಗೆ ಬೇರೆ ಗ್ರಹಗಳಿಲ್ಲ, ಈ ಹಿಂದೆ ಸುಲಿಗೆ ಮಾಡಿ ಸಂಪಾದಿಸಲೂ ವರ್ಷಾನುಗಟ್ಟಲೆ ಹಿಡಿಯುತ್ತಿತ್ತು, ಅದಕ್ಕೆ ಶ್ರಮವನ್ನೂ ಪಡಬೇಕಿತ್ತು. ಇಂದು ಹಾಗಿಲ್ಲ. ಈ ಗೋಲ್‌ಮಾಲ್ ಅಲೆಯಲ್ಲಿ ಕಣ್ಣು ಮುಚ್ಚಿ ಕಣ್ಣು ಬಿಡುವುದರೊಳಗಾಗಿ ಏನೆಲ್ಲಾ ಆಗಿಬಿಡಬಹುದು, ಉದಾಹರಣೆಗೆ ಅನಿಲ್ ಅಂಬಾನಿಗೆ ಕೇವಲ ಹಸ್ತಾಂತರದಿಂದ ಇಪ್ಪತ್ತು ಸಾವಿರ ಕೋಟಿ ರೂಪಾಯಿ ಲಾಭವಾಗುವ ತೈಲಕ್ಕಾಗಿ ಧಾನ್ಯ ವ್ಯವಹಾರವೇ ಸಾಕು. ಇದು ವ್ಯಾಪಾರವೇ? ಇದು ಲಾಭವೇ? ಇದು ದರೋಡೆಯೇ? ವಿದೇಶಿ ದಾಳಿಕೋರರೂ ಹೀಗೆ ಸಂಪತ್ತನ್ನು ಲೂಟಿ ಮಾಡಿರಲಿಲ್ಲವೇನೊ.

ನಾವು ನಿಂತು ಯೋಚಿಸಬೇಕು– ಅಸಮಾನತೆ ಮತ್ತು ಪ್ರಜಾಪ್ರಭುತ್ವ ಜೊತೆಯಾಗಿ ಬಾಳುವುದಿಲ್ಲವೇನೋ. ಈಗಲಾದರೂ ನೆನಪಿಸಿಕೊಳ್ಳೋಣ– ಸಮತೆ ಮತ್ತು ಸಂಪತ್ತಿನ ಅಭಿವೃದ್ಧಿ ಇವು ಒಂದೇ ರಥದ ಎರಡು ಚಕ್ರಗಳು– ಇದು ಲೋಹಿಯಾ ಮಾತು. ಇಂದು ಅಭಿವೃದ್ಧಿ ಎಂದರೆ ಸಮತೆ ಚಕ್ರ ಇಲ್ಲದ ರಥ. ಇಂದಿನ ಈ ಅಭಿವೃದ್ಧಿ ರಥ ಒಂಟಿ ಚಕ್ರದಲ್ಲೆ ಯದ್ವಾತದ್ವಾ ನಾಗಾಲೋಟದಲ್ಲಿ ಓಡುತ್ತಿದೆ. ಎಲ್ಲಿ ಬೀಳುತ್ತದೋ ಎಲ್ಲಿ ನಿಲ್ಲುತ್ತದೋ ಜೀವ ಕೈಲಿಡಿದು ಉಸಿರುಗಟ್ಟಿ ನೋಡುವಂತಾಗಿದೆ.

ನಾವು ಉಸಿರಾಡಬೇಕಾದರೆ ಭಾರತ ರಥಯಾತ್ರೆ ಕೈಗೊಳ್ಳಬೇಕಿದೆ. ಅದರ ಒಂದು ಚಕ್ರಕ್ಕೆ ಸಮತೆ ಬರೆಯಬೇಕಿದೆ. ಇನ್ನೊಂದು ಚಕ್ರಕ್ಕೆ ಅಭಿವೃದ್ಧಿ ಬರೆಯಬೇಕಿದೆ. ಅಂದರೆ– ಜಾಗತೀಕರಣ, ಖಾಸಗೀಕರಣ, ಉದಾರೀಕರಣಗಳನ್ನು ಸಮತಾಕರಣಿಸಬೇಕಾಗಿದೆ. ಜೊತೆಜೊತೆಗೆ ಉಳಿಗಾಲದ ಉಪಾಯಗಳನ್ನೂ ಹುಡುಕಬೇಕಾಗಿದೆ– ನೈಸರ್ಗಿಕ ಕೃಷಿ, ಪರ್ಯಾಯ ಔಷಧಿ ಇತ್ಯಾದಿ.

ಜೆನ್ನಿ ಸಭೆಗೆ ಮೊದಲು 'ಗುರುವೇ ನಿನ್ನ ಆಟ ಬಲ್ಲವರ್ಯಾರಪ್ಪ' ಎಂಬ ಒಂದು ಹಾಡು ಹೇಳಿದರು. ಕುಂಬಾರ ಗುಂಡಯ್ಯನೋ ಮತ್ತೊಬ್ಬನೋ ಕೆಲಸ ಮಾಡುತ್ತಿದ್ದರೆ ಊಟ ಮಾಡುತ್ತಿದ್ದರೆ ಅಲ್ಲಿ ಶಿವ ಸಂತೋಷ ಪಡುತ್ತಾನೆ ಎಂಬುದು ಅವರ ಹಾಡಿನ ಸಾರ. ಅಂದರೆ ದುಡಿಮೆ ಮತ್ತು ಪ್ರಕೃತಿ ನಡುವೆ ಕರುಳ ಬಳ್ಳಿ ಸಂಬಂಧ ಇದ್ದಾಗ ಪ್ರಕೃತಿ ನಳನಳಿಸುತ್ತದೆ, ಶಿವ ನಗುತ್ತಾನೆ, ಶಿವ ಕುಣಿಯುತ್ತಾನೆ. ಆದರೆ ಇವತ್ತು ಶಿವ ಕುಣಿತಾ ಇಲ್ಲ, ನಗ್ತಾ ಇಲ್ಲ.

ಈಗಲಾದರೂ ಮನುಷ್ಯನಿಗೆ ವಿವೇಕ ಬರಬೇಕಾಗಿದೆ.

# ಜೈ ಅಹಿಂದ್

ಇಂದು ಕರ್ನಾಟಕದಲ್ಲಿ ಮಳೆಬಿದ್ದು ನೆಲ ತಂಪಾಗಿದ್ದರೂ ರಾಜಕೀಯ ಕ್ಷೇತ್ರಕ್ಕೆ ಬೆಂಕಿ ಬಿದ್ದು ಕಿಚ್ಚಾಗಿ ಉರಿಯುತ್ತಿದೆ. ಈ ನಡುವೆ ಈ ರಾಜಕೀಯ ಲೆಕ್ಕಾಚಾರಕ್ಕೂ ಮೀರಿ ತಂತಾನೆ ಜನಸಮುದಾಯದಲ್ಲಿ ಒಂದು ಚಲನೆ ಜರುಗುತ್ತಿದೆ. ಅದೆಂದರೆ ಈ ಹಿಂದೆ, ತಾರತಮ್ಯ ಮೌಲ್ಯದ ಭಜರಂಗದಳದಲ್ಲಿದ್ದ ಬಹುತೇಕ ಹಿಂದುಳಿದ ವರ್ಗದ ಯುವಕರು ಈಗ ಪ್ರೀತಿ, ಸಮಾನತೆ ಆಶಯದ ಅಹಿಂದ ಕಡೆ ಚಲಿಸುತ್ತಿದ್ದಾರೆ. ಈ ಬೆಳವಣಿಗೆಯನ್ನು ನಾನು ಸ್ವಾಗತಿಸುತ್ತೇನೆ.

ಜಾತ್ಯತೀತ ಜನತಾದಳದ ಒಳಗೆ ನಡೆಯುತ್ತಿರುವುದು, ಅಂದರೆ ಶ್ರೀ ಸಿದ್ಧರಾಮಯ್ಯ, ಡಾ.ಎಚ್.ಸಿ.ಮಹಾದೇವಪ್ಪ, ಶ್ರೀ ಜಾರಕಿಹೊಳಿ ಅವರು ಪದಚ್ಯುತಗೊಂಡಿರುವುದರ ಮೂಲಕಾರಣ– ಕುಟುಂಬ ರಾಜಕಾರಣದ ಯಜಮಾನಿಕೆಯದಾಗಿದೆ. ಅಂದರೆ ಕುಟುಂಬ ರಾಜಕಾರಣ ಮತ್ತು ಯಜಮಾನಿಕೆಗೆ ಸವಾಲಾಗಿದ್ದವರನ್ನು ನಿವಾರಿಸಿಕೊಳ್ಳಲಾಗಿದೆ. ಒಂದು ವೇಳೆ ಈ ಕುಟುಂಬ ರಾಜಕಾರಣದ ಯಜಮಾನಿಕೆಗೆ ಒಕ್ಕಲಿಗ ಜನಾಂಗಕ್ಕೆ ಸೇರಿದವರೇ ಸವಾಲಾಗಿದ್ದರೂ ಅವರನ್ನೂ ಇಷ್ಟೂ ಕಷ್ಟಪಡದೇ ಲೆಕ್ಕಕ್ಕೇ ತೆಗೆದುಕೊಳ್ಳದೇ ಎಂದೋ ನಿವಾರಿಸಿಕೊಳ್ಳಲಾಗುತ್ತಿತ್ತು. ಆದ್ದರಿಂದ ಸಿದ್ಧರಾಮಯ್ಯ ಮತ್ತವರ ಗೆಳೆಯರ ಪದಚ್ಯುತಿಯನ್ನು ಅಹಿಂದದವರು ಕುಟುಂಬ ರಾಜಕಾರಣದ ಯಜಮಾನಿಕೆಗೆ ಮಾತ್ರ ಸೀಮಿತಗೊಳಿಸಬೇಕೆಂದೂ ಹಾಗೆಯೇ ಒಕ್ಕಲಿಗರಾದಿಯಾಗಿ ಯಾವುದೇ ಜನಾಂಗದವರು ಅಹಿಂದದ ಹೋರಾಟವನ್ನು ತಮ್ಮ ವಿರುದ್ಧದ ಹೋರಾಟವೆಂದು ಗ್ರಹಿಸಬಾರದೆಂದು ವಿನಂತಿಸುತ್ತೇನೆ. ಈ ಎಚ್ಚರ ಇಂದು ಅಗತ್ಯವಾಗಿದೆ.

ಇದು ಶ್ರೀ ದೇವೇಗೌಡರ ಕುಟುಂಬದ ಯಜಮಾನಿಕೆಯ ರಾಜಕೀಯವಾಗಿದ್ದರೂ ಮೇಲ್ಕಂಡ ನಾಯಕರ ಪದಚ್ಯುತಿಯು ಸಮಾಜದ ಮೇಲೆ ಬೇರೆಬೇರೆ ಪರಿಣಾಮ ಉಂಟುಮಾಡಿ ನಾನಾ ತಿರುವು ಪಡೆದುಕೊಂಡಿದೆ. ಇದಕ್ಕೆ ಕಾರಣ– ಪದಚ್ಯುತಿಗೊಂಡ ನಾಯಕರು ತಳಸಮುದಾಯದ ಅವಮಾನಿತ ಅಸಹಾಯಕರ ಪ್ರತಿನಿಧಿಗಳು, ಜೊತೆಗೆ ಉತ್ತಮ ಕೆಲಸ ಮಾಡಿಯೂ ಪದಚ್ಯುತಿಗೊಂಡವರು. ಆದ್ದರಿಂದ ಸಿದ್ಧರಾಮಯ್ಯ, ಎಚ್.ಸಿ. ಮಹಾದೇವಪ್ಪ, ಜಾರಕಿಹೊಳಿ ಪದಚ್ಯುತಿಯು ಸಮಾಜದಲ್ಲಿ ತಲ್ಲಣ ಉಂಟುಮಾಡಿದೆ. ಜೊತೆಗೆ ಈ ಪದಚ್ಯುತಿಯು ಜಾತಿಯು ಹೆಪ್ಪುಗಟ್ಟಿದ ಹಳ್ಳಿಗೆ ಬಂದಾಗ ಅದು 'ನಿಮ್ಮ ಜಾತಿಯ ಅಂತಹ ಬಲಿಷ್ಠನನ್ನೇ ತೆಗೆದು ಎಸೆದೆ. ನೀ ಇನ್ನು ಯಾವ ಲೆಕ್ಕ' ಎಂದು ಅಬ್ಬರಿಸಬಹುದಾದ ಅಹಂಗೆ, ಠೇಂಕಾರಕ್ಕೆ ಕಾರಣವಾಗುತ್ತದೆ. ಇದರಿಂದ ಈಗಾಗಲೇ ಸಸ್ತಾ ಆಗಿರುವವರು ಮತ್ತೂ ಸಸ್ತಾ ಆಗಿ, ಅವಮಾನಿತರು ಮತ್ತೂ ಅವಮಾನಿತರಾಗಲು ಕಾರಣವಾಗುತ್ತದೆ. ಈ ಪದಚ್ಯುತಿಗಿಂತಲೂ ಪದಚ್ಯುತಿಯ ಪರಿಣಾಮ ಜಾತೀಯ ಸಮಾಜದಲ್ಲಿ ಘೋರ. ಈ ಕಾರಣಕ್ಕೆ ಸಿದ್ಧರಾಮಯ್ಯ ಮತ್ತವರ ಗೆಳೆಯರ ಪದಚ್ಯುತಿಯನ್ನು ಪಕ್ಷಾತೀತವಾಗಿ, ಜಾತ್ಯತೀತವಾಗಿ ಎಲ್ಲರೂ ಖಂಡಿಸಬೇಕಾಗಿದೆ.

ಈಗ ಅಹಿಂದವು ತನ್ನ ಕೋಪತಾಪ ಅವಮಾನ ಆಕ್ರೋಶಗಳನ್ನೆಲ್ಲಾ ಗುಣಾತ್ಮಕಗೊಳಿಸಿಕೊಳ್ಳಬೇಕಾಗಿದೆ. ಈ ದಿಕ್ಕಲ್ಲಿ ಮೊದಲ ಹೆಜ್ಜೆಯಾಗಿ ಪ್ರತಿಕೃತಿ ದಹನ, ಬಂದ್‌ಕರೆ ಇತ್ಯಾದಿ ಕೋಪಶಮನದ ಅಲ್ಪತೃಪ್ತಿಯನ್ನು ಕೈಬಿಟ್ಟು, ಪ್ರೀತಿ ಸಮಾನತೆಯ ರಾಜಕೀಯ ಇಚ್ಛಾಶಕ್ತಿ ಹೆಚ್ಚಿಸಿಕೊಳ್ಳುವತ್ತ ನಡೆಯಬೇಕಾಗಿದೆ.

ಅಸಹಾಯಕ ಶೋಷಿತ ಜನಸಮುದಾಯದ ಬಗ್ಗೆ ಅಂತಃಕರಣ ಉಳ್ಳವರಾದ ಇವರ ಪದಚ್ಯುತಿಗೆ ನಾವು ಜೊತೆಗಿದ್ದೇವೆಂದು ಹೇಳಲು ಇಲ್ಲಿ ಲಕ್ಷಗಟ್ಟಲೆ ಜನಸಾಗರ ಸೇರಿದೆ. ಹೊರನೋಟಕ್ಕೆ ಈ ತಳ ಜನಾಂಗಗಳು ತಮಗಾಗುತ್ತಿರುವ ತಾರತಮ್ಯ, ಅಸಮಾನತೆ, ಅನ್ಯಾಯಕ್ಕೆ ಕೋಪತಾಪ ಆಕ್ರೋಶದಿಂದ ಕುದಿಯುತ್ತಿರುವಂತೆ ಕಾಣಿಸುತ್ತವೆ. ಕೆಲವು ಸಲ ದ್ವೇಷದಂತೂ ಕಾಣಬಹುದು. ಆದರೆ ಈ ಕೋಪತಾಪ, ಆಕ್ರೋಶ ದ್ವೇಷದ ಆಳದಲ್ಲಿ ಇರುವುದಾದರೂ ಏನು? ಪ್ರೀತಿಯ ಒಂದು ಹನಿ ನೀರಿಗಾಗಿ, ಸಮಾನತೆಯ ಒಂದು ಚೂರಿಗಾಗಿ ಹಾತೊರೆಯುತ್ತಿರುವುದು ಇವುಗಳ ಆಳದಲ್ಲಿದೆ. ಹಾಗಾಗಿ ಇದನ್ನು ಹಂಚಿಕೊಂಡು ಉಣ್ಣುವುದಕ್ಕಾಗಿ ಇರುವ ಅಭಿವ್ಯಕ್ತಿ ಎಂದೇ ನಾವು ಭಾವಿಸಬೇಕು.

ಹೀಗಿದ್ದೂ ತಳಸಮುದಾಯವು ಬಹುಸಂಖ್ಯಾತರಾಗಿದ್ದೂ ಯಾಕೆ ಇಲ್ಲಿ ಪ್ರೀತಿ ಸಮಾನತೆಗಳು ತಬ್ಬಲಿಗಳಾಗಿವೆ? ಈ ಪ್ರಶ್ನೆಗೆ ಉತ್ತರ ಕಷ್ಟ. ಆದರೂ ಒಂದು ಮಾತು– 'ಹಿಂದುಳಿದ ವರ್ಗಗಳ ಸ್ವಭಾವ ತಕ್ಕಡಿಯಲ್ಲಿ ಇಟ್ಟ ಕಪ್ಪೆಗಳಂತೆ. ಅವು ಯಾವಾಗಲೂ ಕುಪ್ಪಳಿಸುತ್ತ ಒಕ್ಕಡೆ ಇರಲಾರವು' ಎಂಬ ಮಾತಿದೆ. ಈ ಮಾತಿನೊಳಗಿನ ಗಂಟು ಬಿಡಿಸಬೇಕಾಗಿದೆ. ಉದಾ: ಒಬ್ಬ ತಳಜನಾಂಗದವನು ತನಗಾದ ಅವಮಾನ ತಾರತಮ್ಯಕ್ಕೆ ಕುಪಿತನಾಗಿ ಪ್ರತಿಭಟಿಸುತ್ತಾನೆ. ಆದರೆ ದುರಂತವೆಂದರೆ ಅದೇ ಕ್ಷಣದಲ್ಲಿ ತನಗಾದ ಆ ಅವಮಾನ ತಾರತಮ್ಯಗಳನ್ನೇ ತನಗಿಂತ ತಳಮಟ್ಟದವನಿಗೆ ಮಾಡುತ್ತಿರುತ್ತಾನೆ. ದಲಿತರೊಳಗೂ ಹೀಗಾಗುತ್ತಿದೆ. ಇದಕ್ಕೆ ಕಾರಣ– ಜಾತಿ ಪದ್ಧತಿಯ ರೋಗವು ನಮ್ಮ ಅಂತಃಸಾಕ್ಷಿಯನ್ನು ತಿಂದುಹಾಕಿಬಿಟ್ಟಿದೆ. ಅದಕ್ಕೇ ಇಲ್ಲಿ ಪ್ರೀತಿ ಸಮಾನತೆಗಳು ತಬ್ಬಲಿಗಳಾಗಿವೆ. ಅದಕ್ಕೆ ಇಲ್ಲಿ ಪರಸ್ಪರ ಮುಟ್ಟಿದರೂ ಅಪರಾಧವಾಗುತ್ತದೆ. ಇನ್ನು ಹಂಚಿಕೊಂಡು ತಿನ್ನುವುದೆಂದರೆ ಇಲ್ಲಿ ಕಿತ್ತುಕೊಂಡು ತಿನ್ನುವಂತೆ ಭಾಸವಾಗುತ್ತದೆ. ಇಲ್ಲಿ ನ್ಯಾಯವೂ ತನಗೊಂದು ಪರರಿಗೊಂದು. ಆದರೆ ನಮ್ಮ ಅಂತಃಸಾಕ್ಷಿ ಎಚ್ಚರಗೊಂಡರೆ ಆಗ ತಳಸಮುದಾಯಗಳ ಆಶಯ, ಕೂಗು ಈ ಸಮುದಾಯಗಳ ಹಕ್ಕಾಗಿ ಮಾತ್ರ ಕಾಣುವುದಿಲ್ಲ, ಅದು ಇಡೀ ಸಮಾಜವನ್ನು ಸುಸಂಸ್ಕೃತಗೊಳಿಸುವ ಹಾಗೂ ಇಡೀ ಸಮಾಜಕ್ಕೆ ಘನತೆ ತಂದುಕೊಡುವ ತಾತ್ವಿಕ ಧ್ವನಿಯಾಗಿಬಿಡುತ್ತದೆ. ಈ ತಾತ್ವಿಕತೆಯಿಂದಾಗಿ ತಳ ಸಮುದಾಯದೊಳಗೆ ಒಗ್ಗಟ್ಟು ಕಣ್ಣು ಮಿಟುಕಿಸುವಷ್ಟರಲ್ಲಿ ತಂತಾನೆ ಜರುಗಿ ಪ್ರೀತಿ ಸಮಾನತೆಗಳು ಈ ನೆಲದಲ್ಲೆ ತಲೆ ಎತ್ತಿ ನಡೆದಾಡಲೂಬಹುದು.

ಇಂಥದು ಒಂದು ಸಲ, ಇಲ್ಲೆ ಈ ನೆಲದಲ್ಲೆ ಸಂಭವಿಸಿತ್ತು. ಅದು ಹನ್ನೆರಡನೆಯ ಶತಮಾನದ ವಚನಯುಗ. ಅಲ್ಲಿ ಇದ್ದವರು ಯಾರ್‍ಯಾರು? ಚಪ್ಪಲಿ ಹೊಲಿಯುವವನು, ದನಕಾಯುವವನು, ಬೀದಿಯಲ್ಲಿ ಬಿದ್ದ ಅಕ್ಕಿ ಆಯುವವಳು, ಇಂತಿಂಥ ನೂರಾರು ತಳಸಮುದಾಯಗಳು ಹೆಣ್ಣುಗಂಡೆನ್ನದೆ ಅಪಮಾನ ತಾರತಮ್ಯ ಸಂಕೋಚಗಳಿಂದ ಬಿಡುಗಡೆ ಪಡೆದು ಅಕ್ಕಪಕ್ಕದಲ್ಲಿ ಕೂತು ಪರಸ್ಪರ ಹಂಚಿಕೊಳ್ಳುತ್ತ, ದೇಹಗಳು ಮಾತ್ರ ಬೇರೆ ಎಂಬಂತೆ ಇದ್ದಂತಹ ಕಾಲ. ಇದು ನಮಗೆ ಬೆಳಕಾಗಲಿ.

## ಇಂಗದ ದಾಹದ ಇತ್ತೀಚಿನ ರಾಜಕೀಯ

ಕರ್ನಾಟಕದ ಇತ್ತೀಚಿನ ರಾಜಕೀಯ ದಿನಕ್ಕೊಂದು ತಿರುವು ಪಡೆಯುತ್ತ ಈಗ ಕ್ಲೈಮ್ಯಾಕ್ಸ್ ಹಂತ ತಲುಪಿದೆ. ಏನಾಗುತ್ತದೋ ಗೊತ್ತಿಲ್ಲ. ಆದರೆ ಒಂದಂತು ಆಯ್ತು– ಚುನಾವಣಾ ರಾಜಕೀಯವೇ ಹೊಣೆಗೇಡಿಯಾಗಿ ನಗೆಪಾಟಲು ಆಯ್ತು. ಪ್ರಜಾಪ್ರಭುತ್ವವು ಅರ್ಥಹೀನವಾಗಿ ಕುಸಿದುಬಿಡಬಹುದೇನೋ ಎಂಬ ಆತಂಕ ಹೆಚ್ಚಿತು.

ಇದುವರೆಗೂ ನಾವು ಪಕ್ಷ ರಾಜಕಾರಣದಲ್ಲಿ ತಾತ್ವಿಕತೆ ಕಮ್ಮಿ ಆಗುತ್ತಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸುತ್ತಿದ್ದೆವು. ಈಗ ಇನ್ನೂ ಪಾತಾಳಕ್ಕೆ ಇಳಿದು ಪಕ್ಷ ರಾಜಕಾರಣದಲ್ಲಿ ಪಕ್ಷಗಳೇ ಇಲ್ಲವೇನೋ ಎಂಬಂತಹ ಸ್ಥಿತಿಗೆ ತಲುಪಿದ್ದೇವೆ. ಉದಾಹರಣೆಗೆ, ಕಾಂಗ್ರೆಸ್ ಪಕ್ಷವು ಪ್ರಗತಿಪರ ಜನತಾದಳದ ಜೊತೆ ಸೇರಿ ಜಿಲ್ಲಾ ಪಂಚಾಯ್ತಿ ಮಾಡದಿದ್ದರೆ ಕಾಂಗ್ರೆಸ್‌ನೊಳಗೆ ಒಡಕಾಗಬಹುದು ಅಂತ ಒಂದು ಸುದ್ದಿ ಬಂತು. ಇನ್ನೊಂದು ಕಡೆ ಜೆಡಿಎಸ್ ಜತೆ ಸೇರಿ ಸರ್ಕಾರ ಮಾಡದಿದ್ದರೆ ಬಿಜೆಪಿಯ ಯಡಿಯೂರಪ್ಪ ಗುಂಪು ಬಿಜೆಪಿ ತ್ಯಜಿಸಿ ಜೆಡಿಎಸ್‌ಗೆ ಸೇರಿ ಸರ್ಕಾರ ಮಾಡ್ತಾರಂತೆ ಅಂತ ಸುದ್ದಿ ತೇಲಿತು. ಹಾಗೇನೆ ಜೆಡಿಎಸ್‌ನ ಸುಮಾರು 30 ಜನ ಶಾಸಕರು ಪ್ರಗತಿಪರ ಜನತಾದಳ ಸೇರ್ತಾರಂತೆ ಅಂತ ಸುದ್ದಿ ಹರಡಿತು. ಈ ಕಾರಣಕ್ಕಾಗಿಯೇ ಕುಮಾರಸ್ವಾಮಿಯವರು ತಕ್ಷಣ ಎಚ್ಚೆತ್ತು ಕಾಂಗ್ರೆಸ್‌ಗೆ ಬೆಂಬಲ ಹಿಂತೆಗೆದು ಬಿಜೆಪಿ ಸಖ್ಯಕ್ಕೆ ಬಿದ್ದು ಪಕ್ಷ ಉಳಿಸಿದರು ಅಂತಾರೆ. ಇಲ್ಲಿ ಪಕ್ಷ ಉಳಿಸುವುದೇನು ಬಂತು? ಪಕ್ಷವೇ ಎಲ್ಲಿದೆ? ಪಕ್ಷದ ಬದಲು ಬಿಕರಿಗೆ ಇರುವ ಗುಂಪಿದೆ ಅಷ್ಟೆ. ನಾವು ಆಯ್ಕೆ ಮಾಡಿದ ಪ್ರತಿನಿಧಿಗಳು ಮಾರಾಟದ ಸರಕಾಗಿದ್ದಾರೆ. ಯಾರು ಬೇಕಾದರು

ಕೊಂಡುಕೊಳ್ಳಬಹುದು. ಕೊಂಡುಕೊಂಡವರು ಇನ್ನೊಂದು ಕಡೆಗೆ ಮಾರಾಟ ಮಾಡಬಹುದು. ಎಚ್ಚರ ವಹಿಸಬೇಕಾದ್ದು ಇಷ್ಟೆ. ಕೊಂಡುಕೊಂಡವರು, ಜನಪ್ರತಿನಿಧಿಗಳೆಂಬ ಈ ಮಾಲುಗಳನ್ನು ಬೋನಿನಲ್ಲಿಟ್ಟು ಉಣ್ಣಿಸಿ ತಿನ್ನಿಸಿ ಕುಡಿಸಿ ಕಾಪಾಡಿಕೊಳ್ಳಬೇಕು. ಇದು ಆಗುತ್ತಿರುವುದು. ಇದೂ ಒಂದು ರಾಜಕೀಯವೇ? ಇದೂ ಒಂದು ರಾಜಕಾರಣವೇ?

ಕರ್ನಾಟಕದ ನೆಲದಲ್ಲಿ ಈ ದುರಂತವನ್ನು ತಪ್ಪಿಸಬಹುದಾಗಿತ್ತು. ಮಾಜಿ ಪ್ರಧಾನಿಗಳಾದ ಹೆಚ್.ಡಿ. ದೇವೇಗೌಡರು ತಾವು ಮಾಜಿ ಪ್ರಧಾನಿಗಳಾಗಿದ್ದವರು ಎಂಬ ಕಾರಣಕ್ಕಾಗಿಯಾದರೂ ಪ್ರಧಾನಿಗಳಾಗಿದ್ದಾಗ ದೇಶದ ಪ್ರತಿಷ್ಠಿತ ನಾಯಕರಾಗಿ ಹೆಸರು ಮಾಡಿದರು ಎಂಬ ಕಾರಣಕ್ಕಾಗಿಯಾದರೂ ತಮ್ಮ ವರ್ಚಸ್ಸನ್ನು ಉಳಿಸಿಕೊಳ್ಳಬೇಕಾಗಿತ್ತು. ದೇವೇಗೌಡರು ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿ ತಾವೇ ನೇಮಿಸಿದ ರಾಜ್ಯ ಅಧ್ಯಕ್ಷ ತಿಪ್ಪಣ್ಣರನ್ನು ವಜಾ ಮಾಡಿದ್ದರೂ ಈ ಬೆಳವಣಿಗೆ ಆಗುತ್ತಿರಲಿಲ್ಲ. ಕುಮಾರಸ್ವಾಮಿಯವರನ್ನು ಆರಂಭದಲ್ಲೇ ಅಮಾನತ್ತಿನಲ್ಲಿಟ್ಟಿದ್ದರೂ ಸಾಕಾಗಿತ್ತು ಅಥವಾ ಕುಮಾರಸ್ವಾಮಿ ಮತ್ತು ಅವರ 35ಜನ ಜೆಡಿಎಸ್ ಪಕ್ಷದ ಬೆಂಬಲಿಗರ ಮನವಿಗೆ ಮಾನ್ಯತೆ ನೀಡಬೇಡಿ ಅಂತ ರಾಜ್ಯಪಾಲರಿಗೆ ವಂಚನಾ ಪತ್ರ ಬರೆಯುವ ಬದಲು ಅದೇ ಮನವಿಯನ್ನು ತಮ್ಮನ್ನು ಭೇಟಿ ಮಾಡಲು ಬಂದ ಸಂಬಂಧಪಟ್ಟ ಸ್ಪೀಕರ್ ಕೃಷ್ಣ ಅವರಿಗೆ ಕೊಟ್ಟಿದ್ದರೂ ಈ ಅನಾಹುತ ತಡೆಯಬಹುದಾದ ಸಾಧ್ಯತೆ ಇತ್ತು. ಒಟ್ಟಿನಲ್ಲಿ ಕುಮಾರಸ್ವಾಮಿ ಹೇಗಾದರೂ ಸರಿ ಅಧಿಕಾರ ಹಿಡಿಯುವುದನ್ನು ತಪ್ಪಿಸದಂತೆ ದೇವೇಗೌಡರ ನಡವಳಿಕೆ ಇತ್ತು. ಇದಕ್ಕೆ ಇಂಗ್ಲಿಷ್ ದೂರದರ್ಶನದಲ್ಲಿ ಸಂದರ್ಶನ ವಾರ್ತೆ ಒಂದರಲ್ಲಿ– 'ದೇವೇಗೌಡರು ಅಳುತ್ತಿದ್ದರೆ, ಜನ ನಗುತ್ತಿದ್ದಾರೆ' ಅಂತ ಬಂತು. ಈ ಸ್ಥಿತಿ ಯಾರಿಗೂ ಬರಬಾರದು.

ಆದರೆ ಕುಮಾರಸ್ವಾಮಿ ಹೇಳ್ತಾರೆ– ಅಪ್ಪನಿಗೆ ಕಾಂಗ್ರೆಸ್‌ನವರು ಅವಮಾನ ಮಾಡಿದರು ಅಂತ. ಕಾಂಗ್ರೆಸ್‌ನವರು ದೇವೇಗೌಡರ ಮನಸ್ಸಿಗೆ ಘಾಸಿ ಮಾಡಿರಬಹುದು. ಆದರೆ ಕುಮಾರಸ್ವಾಮಿಯವರು ಮಾಡಿದ್ದೇನು? ದೇವೇಗೌಡರು ಬಹಿರಂಗದಲ್ಲಿ ಹೇಳುತ್ತಿರುವುದೆಲ್ಲಾ ನಿಜವೇ ಆಗಿದ್ದರೆ ಕುಮಾರಸ್ವಾಮಿಯವರು ದೇವೇಗೌಡರ ಆತ್ಮಕ್ಕೆ ಘಾಸಿ ಮಾಡಿದಂತೆ ಆಗುವುದಿಲ್ಲವೇ? ಅಪ್ಪನನ್ನು ಅಲ್ಪನನ್ನಾಗಿಸಿದಂತಲ್ಲವೆ? ಸಿದ್ಧರಾಮಯ್ಯ ತನ್ನ ತಂದೆಯ ರುಮಾಲು ಕಿತ್ತರು ಅಂತ, ಕಾಂಗ್ರೆಸ್‌ನವರು ತಮ್ಮ ತಂದೆಯ ಟವಲ್ ಕಿತ್ತರು ಅಂತ, ತಂದೆಯ ಮಾನ ಉಳಿಸುವುದಕ್ಕೆ

ಅಂತ ಕುಮಾರಸ್ವಾಮಿಯವರು ತಂದೆಯ ಅಂಗಿ, ಚಡ್ಡಿಯನ್ನೆ ಕಿತ್ತು ಬೆತ್ತಲೆ ಮಾಡಿದಂತೆ ಅಲ್ಲವೆ?

ಈಗ ಕುಮಾರಸ್ವಾಮಿಯವರು ಬೆಂಕಿಯೊಡನೆ ಸರಸಕ್ಕೆ ಬಿದ್ದಿದ್ದಾರೆ. ಸಾಮರಸ್ಯ ಕೆಡಿಸಿ ಗದ್ದಲ ಗಲಾಟೆ ಹಬ್ಬಿಸಿ ಕಿಚ್ಚು ದ್ವೇಷದಲ್ಲೇ ಅಧಿಕಾರ ಹಿಡಿಯುವ ಸ್ವಭಾವದ ಬಿಜೆಪಿ ಸಖ್ಯಕ್ಕೆ ಬಿದ್ದಿದ್ದಾರೆ. ಎಷ್ಟೇ ದೇವಸ್ಥಾನ ಸುತ್ತಿದರೂ ಕಷ್ಟವೆನಿಸುತ್ತದೆ. ಈ ವಿಷದ ರಾಜಕೀಯದವರೊಡನೆ ಈ ಅಪಕ್ವ ತುಂಡುಗುಂಪು ಸೇರಿ ರಾಜ್ಯವೇನಾಗುತ್ತದೋ ಎಂಬ ಭಯ ಹೆಚ್ಚುತ್ತಿದೆ. ಇಂಥವರೇ 'ದರಿದ್ರ ನಾರಾಯಣ ರ್‍ಯಾಲಿ' ಮಾಡುತ್ತಿದ್ದಾರೆ! 'ದರಿದ್ರ ನಾರಾಯಣ' ಪರಿಕಲ್ಪನೆ ಸ್ವಾಮಿ ವಿವೇಕಾನಂದರ ಕಾಣ್ಕೆ. ಬಡವರು, ನಿರ್ಗತಿಕರು, ಗರೀಬರು, ದೀನ ದಲಿತರಿಗೆ ಹೊಟ್ಟೆಗೆ ಒಂದಿಷ್ಟು ಅನ್ನ ವ್ಯವಸ್ಥೆಯಾದರೆ ಅಷ್ಟರಲ್ಲೇ ಅವರ ದರಿದ್ರ ಇಂಗುತ್ತದೆ. ಅವರ ದಾಹ ಇಷ್ಟರಲ್ಲೇ ತೀರುವುದರಿಂದ ಅವರು ತೃಪ್ತರು. ಅದಕ್ಕಾಗಿ ಅವರು ದೇವರ ಸಮಾನ ಎಂಬುದು ಈ ಪರಿಕಲ್ಪನೆಯ ಆಳದಲ್ಲಿನ ಕಾಣ್ಕೆ.

ಆದರೆ ಇಂದು ಕಾಣುತ್ತಿರುವುದೇನು? 'ದರಿದ್ರ ನಾರಾಯಣ' ರ್‍ಯಾಲಿ ಮಾಡುತ್ತಿರುವ ರಾಜಕಾರಣಿಗಳಲ್ಲಿ ಇರುವುದಾದರೂ ಏನು? ಇಂಗದ ಅಧಿಕಾರ ದಾಹ ಹಾಗೂ ಹಣದ ದಾಹ. ಇಂಗಬಹುದಾದ ದಾಹದ ದರಿದ್ರರು, 'ದರಿದ್ರ ನಾರಾಯಣ'ರಾಗುವುದಾದರೆ ದಾಹವೇ ಇಂಗದವರನ್ನು ಏನೆಂದು ಕರೆಯಬೇಕು? ಅವರು 'ದರಿದ್ರ ಪಿಶಾಚಿ'ಗಳಲ್ಲವೇ? ಇಂದು ಎಲ್ಲೆಲ್ಲೂ ದರಿದ್ರ ಪಿಶಾಚಿಗಳು ದರಿದ್ರ ನಾರಾಯಣರನ್ನು ಉದ್ಧಾರ ಮಾಡಲು ಹೊರಟಿವೆ. ಇದರಿಂದ ಬಚಾವಾಗುವುದೇ ಇಂದಿನ ಸವಾಲಾಗಿದೆ.

# ಒಂದು ಪತ್ರಿಕಾಗೋಷ್ಠಿ

ಈಗ ನಮ್ಮ ಮುಂದೆ ಇರುವ ಚುನಾವಣೆ ನಿರ್ಣಾಯಕವಾಗಿದೆ. ಯಾಕೆಂದರೆ, ಪ್ರಭುತ್ವ ಜನರ ಕೈಲಿರಬೇಕೋ ಅಥವಾ ಮಾಫಿಯಾಗಳ ಕೈಲಿ ಇರಬೇಕೋ ಎಂಬುದನ್ನು ಈ ಚುನಾವಣೆ ನಿರ್ಧರಿಸುತ್ತದೆ.

ಈ ಹಿಂದೆಯೂ ಲಾಬಿ ಅಂದರೆ ಹೆಂಡ, ಸಕ್ಕರೆ, ಕೈಗಾರಿಕೆ, ವಿದ್ಯಾಸಂಸ್ಥೆ ಇತ್ಯಾದಿಗಳ ಲಾಬಿ ಇತ್ತು. ಆದರೆ ಅವು ಹಿನ್ನೆಲೆಯಲ್ಲಿದ್ದು ರಾಜಕೀಯ ವ್ಯಕ್ತಿ ಪಕ್ಷಗಳಿಗೆ ಹಣ ಸರಬರಾಜು ಮಾಡಿ ತಮ್ಮ ಹಿತಾಸಕ್ತಿ ಕಾಪಾಡಿಕೊಳ್ಳುತ್ತಿದ್ದವು.

ಈಗ? ಯಾವಾಗ ಬಿಜೆಪಿ ಜೆಡಿಎಸ್ ಪಕ್ಷಗಳು ಜನಸಾಮಾನ್ಯರಿಗೆ ಚುನಾವಣಾ ಸಂದರ್ಭದಲ್ಲಿ ಕೊಟ್ಟಿದ್ದ ವಚನವನ್ನು ತಾವೇ ತುಳಿದು ಹಾಕಿ ಸಂಚಿನಿಂದ ಅಧಿಕಾರ ಹಿಡಿದವೋ ಆವಾಗಲಿಂದ ಗಣಿ ಮತ್ತು ರಿಯಲ್ ಎಸ್ಟೇಟ್ ಮಾಫಿಯಾ ರಾಜಕಾರಣಕ್ಕೆ ಲಗ್ಗೆ ಹಾಕಿತು. ಹಿಂದೆ ಲಾಬಿ ಪರೋಕ್ಷ ರಾಜಕಾರಣ ಮಾಡುತ್ತಿದ್ದರೆ ಈಗ ಈ ಮಾಫಿಯಾ ಪ್ರತ್ಯಕ್ಷ ರಾಜಕಾರಣಕ್ಕೇ ಇಳಿದಿದೆ. ಮಾಫಿಯಾದವರೇ ರಾಜಕಾರಣಿಗಳಾಗುತ್ತಿದ್ದಾರೆ. ರಾಜಕೀಯ ಪಕ್ಷಗಳು ಎಂದರೆ ಈ ಮಾಫಿಯಾಗಳ ಮುಖವಾಡದಂತೆ ಆಗಿಬಿಟ್ಟಿವೆ. ವಿಧಾನಸೌಧದ ನೆತ್ತಿ ಮೇಲೆ ಮಾಫಿಯಾ ಕತ್ತಿ ತೂಗಾಡುತ್ತಿದೆ.

ಕೇಂದ್ರ ಗುಪ್ತಚರ ಇಲಾಖೆಯು ಈ ಚುನಾವಣೆಯಲ್ಲಿ ಸಹಸ್ರಾರು ಕೋಟಿ ಗಣಿ ಹಣ ಹರಿಯುವುದು ಎಂಬ ವರದಿ ಮಾಡಿದೆ. ಈ ಹಣ ಹರಿದ ಕಡೆಗೆಲ್ಲಾ ರಕ್ತ ಮತ್ತು ಕಣ್ಣೀರು ಹರಿಯುತ್ತದೆ, ನೆನಪಿರಲಿ.

ಈ ಮಾಫಿಯಾಗಳೇ ನೇರ ರಾಜಕಾರಣಕ್ಕೆ ಬಂದರೆ ನಾಳೆ ಏನಾಗಬಹುದು? ಕ್ರಿಕೆಟ್‌ನಲ್ಲಿ ಈಗ ಆಟಗಾರರನ್ನು ಹರಾಜು ಹಾಕಿ ಕೊಂಡುಕೊಳ್ಳುತ್ತಿರುವಂತೆ ಶಾಸಕರನ್ನು ಮಾಫಿಯಾದವರು ಹರಾಜಿನಿಂದ ಕೊಂಡುಕೊಳ್ಳುವ ಸ್ಥಿತಿ ಬರಬಹುದು. ಈ ಮಾಫಿಯಾಗಳು ಗೆದ್ದರೆ ರಾಜ್ಯದ ನೈಸರ್ಗಿಕ ಸಂಪತ್ತನ್ನು ತಮ್ಮ ಖಾಸಗಿ ಮಾಡಿಕೊಂಡು ಜನರಿಗೆ ಅದು ಉಚಿತ ಇದು ಉಚಿತ ಎಂದು ಬಿಸಾಕಿ ಸಾಮಾನ್ಯ ಜನರಲ್ಲಿ ದೈನ್ಯತೆ, ಅಸಹಾಯಕತೆ, ನಿರುದ್ಯೋಗ, ಪರಾವಲಂಬನೆ ಹೆಚ್ಚಿಸಬಹುದು. ಬಡವ-ಬಲ್ಲಿದರ ನಡುವೆ ಅಂತರ ಮತ್ತೂ ಹೆಚ್ಚಬಹುದು. ನಾಳೆ ಇದು ನಾಡು ನುಡಿ ನೆಲ ಜಲದ ಜೊತೆಗೇ ಚುನಾವಣೆ ವ್ಯವಸ್ಥೆಯನ್ನೂ ಪ್ರಜಾಪ್ರಭುತ್ವವನ್ನೂ ಬುಡಮೇಲು ಮಾಡುವ ಆತಂಕ ಉಂಟುಮಾಡಿದೆ. ರಾಜಕೀಯ ಪಕ್ಷಗಳೂ ಪಕ್ಷಗಳಾಗಿ ಉಳಿಯಲಾರವು. ಈ ಸುಳಿಯಿಂದ ತಪ್ಪಿಸಿಕೊಂಡು ರಾಜಕೀಯ ಪಕ್ಷಗಳೂ ಉಳಿಯಬೇಕಾಗಿದೆ.

## ಕನ್ನಡಕ್ಕೂ ಒಂದು 'ರಾಷ್ಟ್ರೀಯತೆ'?

ವಾಚಕರ ವಾಣಿಯಲ್ಲಿ ನಾನೊಂದು ಪತ್ರ ಬರೆದಿದ್ದೆ– ಈ ದೇಶದಲ್ಲಿ ಬ್ರಾಹ್ಮಣರಿಗೇನೆ ಒಂದು ರಾಜ್ಯ ಕೊಟ್ರೂವೆ ಅಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಮತ್ತಿನ್ಯಾವುದೋ ಹುಟ್ಕಂಡು ನೂರೆಂಟು ಭಿನ್ನಾಭಿಪ್ರಾಯಗಳು ಆ ಬ್ರಾಹ್ಮಣರ ರಾಜ್ಯದಲ್ಲೇ ಬರುತ್ತೆ. ಅಲ್ಲಿ ಜರುಗುವ ವಾಗ್ವಾದ, ಗೇಲಿ, ಅವಹೇಳನ, ಆತ್ಮಹತ್ಯೆಗಳು ಆ ರಾಜ್ಯದ ಸಹಜ ಕ್ರಿಯೆಗಳಾಗಬಹುದು. ಹಾಗೇನೆ ದಲಿತರಿಗೇನೆ ಒಂದು ರಾಜ್ಯ ಕೊಟ್ಟರೂನು ಅಲ್ಲೂ ಕೂಡಾ ಬಲಗೈ, ಎಡಗೈ, ಎಡಗೈನ ಹೆಬ್ಬೆರಳು, ಬಲಗೈನ ಹೆಬ್ಬೆರಳು ಅಥವಾ ಕಿರುಬೆರಳು ಹಿಂಗೆ ವಿವಾದ, ಜಗಳ, ಮತ್ತೆ ಕೊಲೆಗಳು ಈ ರಾಜ್ಯದ ದಿನನಿತ್ಯ ಜರುಗುವ ಕ್ರಿಯೆಗಳಾಗಬಹುದು.

ಇದು ಯಾಕೆಂದರೆ ಸಮಾನತೆ ಹಾಗೂ ಸಹಬಾಳ್ವೆ ನಮಗೆ ರೂಢಿಯಾಗಿಲ್ಲ. ಅಸಮಾನತೆ ಮತ್ತು ಅಸಹಾಯಕ ಸಹಬಾಳ್ವೆ ರೂಢಿಯಾಗಿಬಿಟ್ಟಿದೆ. ಸಮಾನತೆ ಹಾಗೂ ಸಹಬಾಳ್ವೆ ಅಭ್ಯಾಸ ಮಾಡಿ ರೂಢಿಸಿಕೊಳ್ಳಬೇಕಾದ ಕ್ರಿಯೆಯಾಗಿದೆ. ಇದು ಕಷ್ಟ, ಯಾಕೆಂದರೆ ಎಲ್ಲೆಲ್ಲೂ ಬಣ್ಣ, ಭಾಷೆ, ಜಾತಿ, ಮತ, ಗಂಡು, ಹೆಣ್ಣು ಹೀಗೆ ಭಿನ್ನ ಭಾವದ ಪೂರ್ವಿಕರ ಭಿನ್ನಭಾವದ ಕಟ್ಟಿಟ್ಟ ಬುತ್ತಿ ಉಣ್ಣುತ್ತಿದ್ದೇವೆ. ತಲೆತಲಾಂತರದಿಂದ ಇದು ಹರಿದು ಬಂದಿದ್ದಾದ್ದರಿಂದ ಒಬ್ಬ ವ್ಯಕ್ತಿ ಪ್ರಜ್ಞಾಪೂರ್ವಕವಾಗಿ ತನ್ನ ಸುಪ್ತ ಮನಸ್ಸನ್ನು ನೋಡಿಕೊಂಡು ಎಚ್ಚರವಹಿಸಿ ಈ ಸುಳಿಯಿಂದ ಪಾರಾಗಬೇಕಾಗಿದೆ. ಹಾಗಾಗಿಯೇ ಇದು ಕಷ್ಟ, ನಿಜ, ಆದರೆ ಅಸಾಧ್ಯವಲ್ಲ. ಉದಾ: ಹಿಂದೆ ಒಂದ್ಹೆಣ್ಣು ಐದ್ಗಂಡು ಇತ್ತು. ಅಂದ್ರೆ ಒಂದು ಹೆಣ್ಣು ಐದಾರು ಗಂಡನ್ನು ಮದ್ವೆಯಾಗೋ ಪದ್ಧತಿ ಇತ್ತು. ಅದನ್ನು

ಬಿಟ್ಟು ಆಮ್ಯಾಲೆ ಒಂದ್ಗಂಡು ಐದಾರ್ಹೆಣ್ಣು ಅಥವಾ ಎಷ್ಟೆಷ್ಟೋ ಹೆಣ್ಣುಗಳನ್ನು ಮದ್ವೆ ಆಗೋದು ಬಂತು. ಈಗ ಅದನ್ನೂ ಬಿಟ್ಟು ಒಂದು ಗಂಡಿಗೆ ಒಂದು ಹೆಣ್ಣು ಪಳಗಿಸಿಕೊಳ್ಳುತ್ತಿದ್ದೇವೆ. ಇದೇ ಥರಾನೆ ಸಮಾನತೆ ಮತ್ತು ಸಹಬಾಳ್ವೆಗೂ ನಾವು ಪಳಗಬೇಕಾಗಿದೆ.

ಅದಕ್ಕಾಗಿ ಪು.ತಿ.ನ ಅವರ ಒಂದು ಮಾತನ್ನು ನೆನಪಿಸುವೆ– 'ದೇಶ ಅಂದ್ರೆ ಏನನ್ಕೊಂಡ್ಬಿಟ್ಟಿದ್ದೀರಯ್ಯಾ? ಅದೇನು ಮಣ್ಣಾ ಕಲ್ಲಾ, ಮರಗಿಡ್ಗಳಾ? ಜನ, ದೇಶ ಅಂತಂದ್ರೆ ಜನ'. ಈ ನುಡಿಯು ಹಣತೆ ಬೆಳಕಿನಂತಿದೆ. ಈ ಎಳೆ ಹಿಡಿದು ನಾವು ಉಳಿಯಬಹುದು.

ಒಂದು ಪ್ರದೇಶದಲ್ಲಿ ಅಲ್ಲಿ ಮನುಷ್ಯರೇ ಇಲ್ಲದಿದ್ದರೆ ಅದು ದೇಶ ಅನ್ನಿಸಿಕೊಳ್ಳುವುದಿಲ್ಲ. ಆ ಪ್ರದೇಶದಲ್ಲಿ ವಾಸಿಸುವ ಜನರ ಮೊತ್ತವೇ ದೇಶ ಅನ್ನಿಸಿಕೊಂಡರೆ ಆಗ ಅಲ್ಲಿನ ಪ್ರತಿಯೊಂದು ಜೀವಕ್ಕೂ ಬೆಲೆ ಬರುತ್ತಿತ್ತು. ಆಗ ಅಲ್ಲಿ ಅಸ್ಪೃಶ್ಯತೆ, ಜಾತಿ ಮತ, ಭಾಷೆಗಾಗಿ ಇಷ್ಟೊಂದು ರಕ್ತ ಸುರಿಯುತ್ತಿರಲಿಲ್ಲವೇನೊ.

ಪಂಜಾಬ್ ಪ್ರತ್ಯೇಕತೆಯ ಬೆಂಕಿಯಲ್ಲಿ ಉರಿಯುತ್ತಿದೆ. ಅಲ್ಲಿನ ಜನ ತುಂಬಾ ಒಳ್ಳೆಯವರು, ಶ್ರಮಜೀವಿಗಳು, ಸರಳವಾದವರು. ಇಂಡಿಯಾ ಐವತ್ತು ವರ್ಷ ಕಷ್ಟಪಟ್ಟರೆ ಆರ್ಥಿಕವಾಗಿ ಪಂಜಾಬ್ ಮಟ್ಟಕ್ಕೆ ಹೋಗಬಹುದು ಅಷ್ಟು ಸಂತೃಪ್ತವಾದ ರಾಜ್ಯ. ಪ್ರತ್ಯೇಕತೆಯ ಕಿಡಿಯಿಂದ ಅಲ್ಲಿ ಹೊಡೆದಾಟ, ಬಡಿದಾಟ, ಸಾವು–ನೋವು ಉಂಟಾಯ್ತು. ಅಂಥ ಸಂಪತ್ತಿನ ರಾಜ್ಯದಲ್ಲೇ ಈ ಕತೆಯಾದರೆ ಇದನ್ನು ಅರ್ಥ ಮಾಡಿಕೊಳ್ಳುವುದು ಹೇಗೆ?

ಇನ್ನು ಭಾಷೆ ಬಗ್ಗೆ ಮಾತಾಡೋದಾದ್ರೆ ಇದು ಧರ್ಮಕ್ಕಿಂತ ಕಮ್ಮಿ ಅಪಾಯಕಾರಿಯಾದರೂ, ಇಂಥ ಯಾವುದನ್ನೇ ಹಿಡ್ಕಂಡು ಹೊರಟರೂ ಹುಲಿ ಸವಾರಿ ಮಾಡ್ದಂಗೇ ಆಗುತ್ತೆ. ಭಾಷೆಯನ್ನು ಆಡಳಿತ ಮತ್ತು ಜನಗಳ ನಡುವೆ ಅಂತರ ಕಮ್ಮಿ ಮಾಡಲು ಇರುವ ಒಂದು ಗೆರೆಯಂತೆ ನೋಡಿದರೆ ಕ್ಷೇಮ. ಅದಕ್ಕಿಂತ ಹೆಚ್ಚು ಅನ್ಕಂಡ್ರೆ ಅದಕ್ಕೆ ಕಣ್ಣು ಕಾಣಲ್ಲ, ಕಿವಿ ಕೇಳ್ಸಲ್ಲ. ಕನ್ನಡ ನಾಡನ್ನು ಎರಡು ಕೋಟಿಗೊಂದು ರಾಜ್ಯದ ಥರ ಮೂರು ರಾಜ್ಯ ಮಾಡೋದಾದ್ರೆ ಅದರಿಂದ ಒಳ್ಳೆಯ ಆಡಳಿತ ಸಿಕ್ಕಿ ಜನರ ಜೀವನ ಮಟ್ಟ ಹೆಚ್ಚುವುದಾದರೆ ಯಾಕಾಗಬಾರದು? ಅಥವಾ ಸಾಮಾಜಿಕ ನ್ಯಾಯವನ್ನು ಎಚ್ಚರವಾಗಿ ಅಳವಡಿಸಿಕೊಂಡು, ಜಿಲ್ಲೆಗಳನ್ನೇ ಅಧಿಕಾರ ಕೇಂದ್ರ ಮಾಡಿ ರಾಜ್ಯವನ್ನು ಸಮನ್ವಯ ಆಡಳಿತ ಸಂಸ್ಥೆಯನ್ನಾಗಿಸಿದರೆ

ಅಂದರೆ– ವಿಕೇಂದ್ರೀಕರಣದತ್ತ ಒಂದು ಹೆಜ್ಜೆ– ಇದೇ ಪ್ರಾದೇಶಿಕ ತಾರತಮ್ಯ ಹೋಗಲಾಡಿಸಲು ಮದ್ದಾಗುವುದಿಲ್ಲವೆ? ರಾಜ್ಯ ಮತ್ತು ಜಿಲ್ಲೆಗಳ ವಿಂಗಡಣೆಯನ್ನು ಆಯಾಯ ಪ್ರದೇಶದ ಪ್ರಮುಖ ಬೆಳೆ ಆದರಿಸಿ ವಿಂಗಡಿಸುವುದು ಒಳ್ಳೆಯದೇನೊ. ಇಂಥವುಗಳಿಂದ ಸ್ವಲ್ಪ ಮಟ್ಟಿಗೆ ಪ್ರತ್ಯೇಕತಾ ಪ್ರವೃತ್ತಿಯನ್ನು ಮೊಟಕುಗೊಳಿಸಿದಂತೆ ಆಗಬಹುದು.

ಜೊತೆಗೆ ಮನುಷ್ಯ ಮನುಷ್ಯರ ನಡುವೆ ದೂರ ಕಮ್ಮಿಯಾಗಿಸುವತ್ತ, ಅಂದರೆ ನಮ್ಮ ಜಾತಿಪದ್ಧತಿಯಿಂದಾಗಿ ಒಂದು ಹಳ್ಳಿ ಒಳಗೇನೆ ಒಬ್ಬ ಮೇಲ್ಜಾತಿ ಅನ್ನಿಸಿಕೊಂಡವನಿಗೂ, ಕೆಳಜಾತಿ ಅನ್ನಿಸಿಕೊಂಡವನಿಗೂ ಇರೋ ದೂರವು ಹಳ್ಳಿಗೂ ದಿಲ್ಲಿಗೂ ಇರುವಷ್ಟಾಗುತ್ತಿದ್ದು ಈ ದೂರವನ್ನೂ ಕಮ್ಮಿ ಮಾಡುವತ್ತಲೂ ನಮ್ಮ ನಡಿಗೆ ಇರಬೇಕು.

ಈಗ ಕುಣಿದು ಕುಪ್ಪಳಿಸುತ್ತಿರುವ ಜಾಗತೀಕರಣ ಕೂಡ ಜನ ಆಧಾರಿತವಾದರೆ ಅಂದರೆ, ಆಸ್ಟ್ರೇಲಿಯಾ ಖಾಲಿಯಿದೆಯಪ್ಪ, ಅಲ್ಲಿಗೆ ಒಂದು ಹಂತದವರೆಗೆ ಯಾವ ದೇಶದವರೇ ವಾಸಿಸಲು ಹೋಗಿ ಅಲ್ಲಿನವರಾದರೆ ಅದೇ ಜಾಗತೀಕರಣ.

ವಸ್ತು ಓಡಾಟ, ವ್ಯಾಪಾರ, ಜಾಗತೀಕರಣ ಅಲ್ಲ. ಇಂದಿನ ವ್ಯಾಪಾರೀ ಜಾಗತೀಕರಣ ಯುದ್ಧವಲ್ಲದೇ ಮತ್ತೇನು ಅಲ್ಲ. ಇದೊಂದು ನವ ಯುದ್ಧ. ಆಯುಧವನ್ನು ಬಳಸದೇ ಇರುವ ಯುದ್ಧ. ಆದರೆ ಈ ವ್ಯಾಪಾರಿ ಜಾಗತೀಕರಣದ ಕುಣಿದಾಟ ಹಾರಾಟ ಮುಗಿದ ಮೇಲೆ ಏನೇನು ಕಾಣುತ್ತೇವೆ? ಒಂದು ಯುದ್ಧ ಮುಗಿದ ಮೇಲೆ ಏನೇನು ಫಲಿತಾಂಶಗಳು ಪರಿಣಾಮಗಳು ಉಂಟಾಗಬಹುದೊ ಅದೆಲ್ಲಾ ಕಾಣುತ್ತದೆ– ನಿರುದ್ಯೋಗ, ಬಡತನ, ಬಡವ–ಬಲ್ಲಿದರ ನಡುವೆ ಅಂತರ, ಆಹಾರ ಅಭಾವ ಇತ್ಯಾದಿ.

ಹೀಗಿದ್ದೂ ಇದು ‘ವ್ಯಾಪಾರ’ವೇ? ಇದು ವ್ಯಾಪಾರವಲ್ಲ. ಈ ವ್ಯಾಪಾರಿ ಜಾಗತೀಕರಣ ಅಂದರೆ ಸದ್ದಿಲ್ಲದ ಆಯುಧವಿಲ್ಲದ ಯುದ್ಧಗಳ ತಾಯಿ. ಈಗ ನಾವು ಜೀವ ಕೈಲಿಡಿದುಕೊಂಡು ಉಳಿಯುವ ಉಪಾಯಗಳನ್ನು ಹುಡುಕಬೇಕಾಗಿದೆ.

## ಆಕಾಶದಲ್ಲಿ ರಣಹದ್ದುಗಳು

ಇರಾಕನ್ನು ಧ್ವಂಸ ಮಾಡಿದ ಮೇಲೆ ಅಮೆರಿಕಾದ ಪೆಂಟಗನ್ ಹೇಳಿಕೆ: 'ಮನಸ್ಸು ಮಾಡಿದರೆ ಎಲ್ಲಿಗೆ ಬೇಕಾದರೂ ತೆರಳಲು ಸಿದ್ಧ ಎಂದು ನಾವು ತೋರಿಸಿಕೊಟ್ಟಿದ್ದೇವೆ' ಎಂದಿದೆ. ತಮಗೆ ಸಾಮರ್ಥ್ಯ ಇದೆ ಅನ್ನೋ ಅರ್ಥದಲ್ಲಿ ಪೆಂಟಗನ್ ಈ ಹೇಳಿಕೆ ನೀಡಿದೆ. ನಿಜ, ಸಾಮರ್ಥ್ಯವೇನೊ ಇದೆ. ಜೊತೆಗೆ ಈ ಹೇಳಿಕೆಯಲ್ಲಿ, ಅವರ ಕ್ರಿಯೆಗಳಿಗೆ ಇನ್ನೂ ಒಂದು ಅರ್ಥವಿದೆ. ಅಂದರೆ 'ನಮಗೆ ನೀತಿ ನಿಯಮ ಏನೂ ಇಲ್ಲ. ಹೇಳೋರು ಕೇಳೋರು ಯಾರೂ ಇಲ್ಲ. ಜನಾಭಿಪ್ರಾಯವೂ ನಮಗೆ ಲೆಕ್ಕಕ್ಕೆ ಇಲ್ಲ. ನಾವು ಡಕಾಯಿತರು, ಗೂಂಡಾಗಳು. ಮನಸ್ಸು ಮಾಡಿದರೆ ಎಲ್ಲಿಗಾದರೂ ನುಗ್ಗಿ ದೋಚುತ್ತೇವೆ. ನಾವು ಬಲಿಷ್ಠರು. ನಾವು ಹೇಳಿದ್ದೇ ನ್ಯಾಯ. ನಡೆದದ್ದೇ ದಾರಿ' – ಈ ಅರ್ಥವೂ ಇದೆ.

ಇವರು ಬಲಿಷ್ಠರು, ನಿಜ. ಎಷ್ಟು ಬಲಿಷ್ಠರು ಎಂದರೆ ಈ ಇರಾಕ್ ಯುದ್ಧದಿಂದಾಗಿ ಚರಿತ್ರೆಯನ್ನೇ ತುಂಬಾ ಹಿಂದಕ್ಕೆ ತಳ್ಳಿಬಿಟ್ಟರು. ರಾಸಾಯನಿಕ ಶಸ್ತ್ರಾಸ್ತ್ರ ಇರಾಕ್‌ನಲ್ಲಿದೆ ಎಂಬ ಕಾರಣ ನೀಡಿ ಧಾಳಿ ಮಾಡಿ, ಅವು ಇಲ್ಲ ಎಂದು ತಿಳಿದುಬಂದ ಮೇಲೂ ಅವರಿಗೆ ನಾಚಿಕೆ, ಪಶ್ಚಾತ್ತಾಪ ಆಗಲಿಲ್ಲ. ಪ್ರಜಾಪ್ರಭುತ್ವದ ಮುಖವಾಡದಲ್ಲಿ ತಾನು ಅನಾಗರಿಕ ಸರ್ವಾಧಿಕಾರಿ ಎಂಬುದನ್ನು ಅಮೆರಿಕಾ ಜಗತ್ತಿಗೆ ಸಾರಿ ಹೇಳಿದಂತಾಯಿತು. ಕೇವ್‌ಮ್ಯಾನ್, ಬುಷ್‌ಮ್ಯಾನ್ ಅಂತ ಹಿಂದೆ ಬೇಟೆಯಾಡುತ್ತಿದ್ದ, ಧಾಳಿ ಮಾಡುತ್ತಿದ್ದ ಕಾಲಕ್ಕೆ ಚರಿತ್ರೆಯನ್ನು ಹಿಂದಕ್ಕೆ ತಳ್ಳಿಬಿಟ್ಟರು. ಕ್ರಿಸ್ತ ಹುಟ್ಟಿಲ್ಲ ಅನ್ನಿಸಿಬಿಟ್ಟರು. ಇನ್ನು ಬುದ್ಧ ಎಲ್ಲಿ?

ಒಂದು ಕಿಡಿ ನುಡಿ: 'ಬಲಿಷ್ಠ ರಾಷ್ಟ್ರಗಳು ಗೂಂಡಾಗಳಂತೆ ವರ್ತಿಸುತ್ತಿವೆ. ಬಡ ರಾಷ್ಟ್ರಗಳು ಬೆಲೆವೆಣ್ಣುಗಳಂತೆ ವರ್ತಿಸುತ್ತಿವೆ' –ಇರಾಕ್ ಯುದ್ಧದ ಈ ಸಂದರ್ಭದಲ್ಲಿ ಇದು ನಿಜವೆನ್ನಿಸುವುದಿಲ್ಲವೆ? ನಮ್ಮಂಥ ಬಡರಾಷ್ಟ್ರಗಳು ಹೋಗಲಿ, ಒಂದು ಕಾಲಕ್ಕೆ ಜಗತ್ತನ್ನೆ ಆಳ್ವಿಕೆ ನಡೆಸಿದ ಪರಂಪರೆಯ ಇಂಗ್ಲೆಂಡ್‌ನ ಬ್ಲೇರ್ ಸಡಗರದ ಬೆಲೆವೆಣ್ಣಿನಂತೆ ಆಡಬಾರದಿತ್ತು ಅನ್ನಿಸುತ್ತೆ. ಅಮೆರಿಕಾ ಎಂಬ ಕಾಡು ಪ್ರಾಣಿಯು ಇರಾಕ್ ನಾಡನ್ನು ಸಿಗಿದು ತಿನ್ನುತ್ತಿದೆ. ಇಂಗ್ಲೆಂಡ್ ತಾನೂ ಪಾಲು ಪಡೆಯಲು ನಲಿಯುತ್ತಿದೆ. ಟರ್ಕಿ ಕುರಿ ಜೊಲ್ಲು ಸುರಿಸುತ್ತ ತಾನೂ ಬರುತ್ತೇನೆ ಅಂತ ಸುತ್ತುತ್ತಿದೆ. ಭಾರತದಲ್ಲೊಬ್ಬ ದುಷ್ಟ, ಧ್ವಂಸಗೊಂಡ ಇರಾಕ್‌ನ ಕಂಟ್ರಾಕ್ಟ್ ಕೆಲಸಕ್ಕಾಗಿ ಕಾಯುತ್ತಿದ್ದಾನೆ.

ಈ ಯುದ್ಧದ ಅಂತಿಮ ಫಲಿತಾಂಶ ಏನು? ಕೇವಲ ಇರಾಕ್‌ನ ಪತನವೆ? ವಿಶ್ವಸಂಸ್ಥೆ ಎಂಬ ಚಿಗುರುತ್ತಿದ್ದ ಕನಸಿನ ಪತನವಾಗೂ ಇದು ಕಾಣಿಸುತ್ತದೆ. ಈ ಬುಷ್‌ಮ್ಯಾನ್ ಈ ಕೇವ್‌ಮ್ಯಾನ್‌ಗಳು ಜಗತ್ತಿಗೆ ಒಂದೇ ನೀತಿ ನಿಯಮ ಹೇಳಬೇಕಾದ ವಿಶ್ವಸಂಸ್ಥೆ ಎಂಬ ಹಸುಳೆಯ ಎಳೆಯ ನಾಲಿಗೆ ಕೈಕಾಲುಗಳನ್ನೆ ಕತ್ತರಿಸಿಬಿಟ್ಟರು.

ಆಕಾಶದಲ್ಲಿ ರಣಹದ್ದುಗಳು ಹಾರಾಡದೆ ಮತ್ತೇನು ಮಾಡಬೇಕು?

# ಅಂದಿನ ಬಾಯಾರಿಕೆ
# ಮತ್ತು ಇಂದಿನ ದಾಹ

ನಾನು ಇಲ್ಲಿಗೆ ಬಂದದ್ದೇ ಸಾಯಿನಾಥ್‌ರನ್ನು ನೋಡಲು, ಅವರ ಮಾತು ಕೇಳಲು. ಹಾಗಾಗಿ ಕೆಲ ನಿಮಿಷಗಳಲ್ಲೆ ಮಾತು ಮುಗಿಸುತ್ತೇನೆ. ನಾನು ಈ ಪತ್ರಿಕಾ ಕ್ಷೇತ್ರದ ಕೌಂಟರ್ ಮೀಡಿಯಾ ಪ್ರಶಸ್ತಿ ಪ್ರದಾನ ಮಾಡಲು ಯಾವ ರೀತಿ ಅರ್ಹನೊ ಗೊತ್ತಿಲ್ಲ. ಪ್ರಜಾವಾಣಿಗೆ ನಾನು ಒಂದು ದಿನದ ಸಂಪಾದಕನಾಗಿದ್ದುದೂ ಕಾರಣವಾಗಿರಬಹುದು. ಆ ಸಂದರ್ಭದಲ್ಲಿ ದಿನೇಶ್ ಅಮೀನಮಟ್ಟು ಅವರಿಗೆ ಒಂದು ಪ್ರಶ್ನೆ ಕೇಳಿದ್ದೆ– ಪತ್ರಿಕೆಗಳು ಸಾಯಿನಾಥ್ ಪ್ರವೃತ್ತಿ ಇರುವಂಥಹ ಎಳೆಯರನ್ನು ಹುಡುಕಬೇಕಲ್ಲವೆ? ಅಂತ. ಆಗ ಒತ್ತಡದಲ್ಲಿ ಮಾತು ಮುಂದುವರಿಯಲಿಲ್ಲ. ತಮ್ಮ ಬರವಣಿಗೆಯೊಂದರಲ್ಲಿ, ಜಿ.ಎನ್. ಮೋಹನ್ ಅವರು ಸಾಯಿನಾಥ್ ಹೆಜ್ಜೆಯಲ್ಲೇ ಅಷ್ಟೊ ಇಷ್ಟೊ ಹೆಜ್ಜೆ ಇಡುತ್ತಿರುವ ಎಳೆಯ ಪತ್ರಕರ್ತರನ್ನು ಉದಾಹರಿಸುತ್ತಾರೆ. ಈಗ ಅಂಥವರಿಗೆ ಸಾಯಿನಾಥ್ ಕೌಂಟರ್ ಮೀಡಿಯಾ ಪ್ರಶಸ್ತಿ ಕೊಡುತ್ತಿರುವುದು ಪತ್ರಿಕಾ ಕ್ಷೇತ್ರದಲ್ಲಿ ಕನಸು ಬಿತ್ತುವ ಬಿತ್ತನೆ ಬೀಜದಂತೆ ಕಾಣಿಸುತ್ತದೆ.

ಪತ್ರಕರ್ತರು ವರ್ತಮಾನವನ್ನು ಹಿಡಿಯುವವರು. ಓಡುತ್ತಿರುವ ಕಾಲವನ್ನು ಒಂದು ಟೆಲಿವಿಷನ್ ಜಾಹೀರಾತು ತುಂಬಾ ಚೆನ್ನಾಗಿ ಕಟ್ಟಿಕೊಡುತ್ತದೆ. ಆ ಜಾಹೀರಾತು ಸ್ಪ್ರೈಟ್ ಡ್ರಿಂಕ್ಸ್ ಅಂತಾರಲ್ಲ ಆ ಕುಡಿತದ್ದು. ಆ ಜಾಹೀರಾತಿನ ಹೆಸರು 'ಚತುರ ಕಾಗೆ' ಅಂತ. ಮೊದಲು ನಾನು ಓದಿದ್ದ ತಿಳಿದಿದ್ದ ಕಾಗೆ ಪರದೆ ಮೇಲೆ ಬರುತ್ತದೆ. ಕಾಗೆಗೆ ಬಾಯಾರಿಕೆ. ಆದರೆ ಒಂದು ಬಾಟಲ್‌ನಲ್ಲಿ ಅರ್ಧದಷ್ಟು ನೀರು ಇರುತ್ತದೆ. ಅದು ಕೊಕ್ಕಿಗೆ ಎಟುಕುತ್ತಿರುವುದಿಲ್ಲ. ಅದು ಸುತ್ತಮುತ್ತಲಿದ್ದ ಕಲ್ಲುಗಳನ್ನು ಹೆಕ್ಕಿ ತಂದು ನೀರನ್ನು ಮೇಲಕ್ಕೆ ಬರಿಸಲು

ಪ್ರಯತ್ನಿಸಿ ಸುಸ್ತಾಗಿ ಕೈಚೆಲ್ಲಿ ಕೂರುತ್ತದೆ. ಆಗ ಇನ್ನೊಂದು ಚಿನ್ನದ ಸರದ ಶ್ರೀಮಂತ ದೈತ್ಯ ಕಾಗೆ ಧೂಮಕೇತುವಿನಂತೆ ನೀರಿನ ಬಾಟಲಿ ಹತ್ತಿರ ಬರುತ್ತದೆ. ಅದಕ್ಕೋ ದಾಹ. ಅದು ಪಕ್ಕದಲ್ಲಿದ್ದ ಕಲ್ಲಲ್ಲಿ ಕೊಕ್ಕನ್ನು ಮಸೆದುಕೊಳ್ಳುತ್ತದೆ. ನಂತರ ಅಲ್ಲಿದ್ದ ಸ್ಪ್ರೈಟ್ ಬಾಟಲನ್ನೆ ಕುಕ್ಕಿ ತೂತು ಮಾಡಿ, ಚಿಮ್ಮಿದ ಆ ಡ್ರಿಂಕ್ಸ್ ಕುಡಿದು ಗರ್ವದಿಂದ ಹಾರಿ ಹೋಗುತ್ತದೆ. ಇದು ಈ ಕಾಲದ ಜಾಹೀರಾತು.

ನಾನು ಚಿಕ್ಕವನಾಗಿದ್ದಾಗ ಮೊದಲ ಕಾಗೆಯ ಪಾಠವಿತ್ತು. ಆ ಕಾಗೆಗೂ ನೀರು ಸಿಕ್ಕಿ ಅದು ಕಾಗೆಯ ಜಾಣತನ, ಕಾಗೆಯ ವಿವೇಕ ಎಂಬ ನೀತಿಗೆ ಆ ಕತೆ ಹೆಸರಾಗಿತ್ತು. ಇಂದು ಆ ಜಾಣತನ ವಿವೇಕ ಧ್ವಂಸಗೊಂಡಿವೆ. ಕಾರ್ಪೊರೇಟ್, ಖಾಸಗೀ ದೈತ್ಯ ಕಾಗೆಗಳ ದಾಹ, ನಾಳೆಗೆ ಉಳಿಯದಂತೆ ಯಾವುದನ್ನು ಧ್ವಂಸ ಮಾಡಿಲ್ಲ? ಭೂಮಿ, ಆ ಭೂಮಿಯ ಒಳ ಹೊರಗಿನ ನೀರು, ಕಾಡು, ಅದಿರು, ಬೆಳೆ ಬೆಳೆಯುವ ಹೊಲಗದ್ದೆ, ಕೊನೆಗೆ ಗಾಳಿ ಯಾವುದು ಉಳಿದಿದೆ? ಭಿಕ್ಷುಕರನ್ನು ಇಲ್ಲಿ ಮೇಲೆತ್ತಲಾಗಿದೆ, ಬಡತನ ರೇಖೆಯನ್ನೇ ಕೆಳಕ್ಕಿಳಿಸಿ ಭಿಕ್ಷುಕರನ್ನು ಇಲ್ಲಿ ಮೇಲೆತ್ತಲಾಗಿದೆ!

ಹೀಗಿದ್ದೂ ನಮ್ಮ ಉಳಿವಿಗೆ, ಇಂದು ಬಿಡುಗಡೆಯಾದ ತಮ್ಮ ಪುಸ್ತಕದ ಮುನ್ನುಡಿಯಲ್ಲಿ ಸಾಯಿನಾಥ್‌ರವರು ಹೇಳಿರುವ 'ಭಾರತದ ಬಡತನದ ಸ್ಥಿತಿಯನ್ನು ಒಂದು 'ಪ್ರಕರಣ'ವಾಗಲ್ಲ; ಬದಲಿಗೆ ಒಂದು 'ಪ್ರಕ್ರಿಯೆ'ಯಾಗಿ ನೋಡಬೇಕು' ಎಂಬ ಒಂದು ಮಾತೂ ದಾರಿ ತೋರಿಸಬಹುದು. ಈ ದೃಷ್ಟಿ ನಮ್ಮ ಕಣ್ಣಿಗೆ ಬಂದರೆ, ಮುಖ್ಯವಾಗಿ ಪತ್ರಿಕೋದ್ಯಮಕ್ಕೆ ಬಂದರೆ, ಉದ್ಯಮಕ್ಕೆ ಕಷ್ಟವೇನೋ ಆದರೆ ಒಂದಿಷ್ಟು ಪತ್ರಕರ್ತರಿಗಾದರೂ ಬಂದರೂ ಕೂಡ ಆಗುವ ಬದಲಾವಣೆ ಅಷ್ಟಿಷ್ಟಲ್ಲ. ಆಗ ಟಾಲ್‌ಸ್ಟಾಯ್‌ಗೆ ಕಂಡಂತೆ ನಮಗೂ ಕಾಣಿಸಬಹುದು. ಟಾಲ್‌ಸ್ಟಾಯ್ ಹೇಳಿದ್ದು: ಒಬ್ಬನ ಭುಜದ ಮೇಲೆ ಇನ್ನೊಬ್ಬ ಕೂತಿದ್ದಾನೆ. ಮೇಲೆ ಕೂತಿರುವವನು ತನ್ನನ್ನು ಹೊತ್ತವನ ಭಾರವನ್ನು ತಾನೇ ಹೊತ್ತಿರುವುದು ಎಂದು ಆ ಭಾರ ಹೊತ್ತವನಿಗೇ ನಂಬಿಸುತ್ತಿದ್ದಾನೆ! ದುರಂತವೆಂದರೆ ಅದನ್ನೇ ತಾನೂ ನಂಬುತ್ತಿದ್ದಾನೆ!! –ಹೀಗೆ ಟಾಲ್‌ಸ್ಟಾಯ್‌ಗೆ ಕಂಡಂತೆ ಹೀಗೆ ನಮಗೂ ಸುಲಿಗೆಯ ಲಕ್ಷಣಗಳು ಗೋಚರಿಸಬಹುದು.

ಆಗ ಒಂದಿಷ್ಟು ದಾರಿಗಳೂ ಕಾಣಬಹುದು. ಇಂದು ಅಸಮಾನತೆಯ ಧಾಳಿಗೆ ಚುನಾವಣಾ ವ್ಯವಸ್ಥೆಯು ತನ್ನನ್ನು ಬಿಕರಿಗೆ ಇಟ್ಟುಕೊಂಡು ಅಳಿವಿನ ಅಂಚಿನಲ್ಲಿದೆ. ಇಲ್ಲಿ ಸರಿಯಾದ ಚುನಾವಣಾ ಪದ್ಧತಿಯೊಂದನ್ನು

ರೂಪುಗೊಳಿಸುವುದನ್ನು ಪತ್ರಿಕೆಗಳು ತನ್ನ ಕೆಲಸ ಅಂದುಕೊಳ್ಳಬಹುದು, ಇದಾಗುವುದು ತಾನು 'ಸ್ಥಿತಿಯ' ವರದಿಗಾರ ಎಂದು ತನ್ನನ್ನು ಭಾವಿಸದೆ, ವಿದ್ಯಮಾನಗಳನ್ನು 'ಪ್ರಕ್ರಿಯೆ' ಎಂದು ನೋಡಿದಾಗ ಸಾಧ್ಯವಾಗಬಹುದು. ಹಾಗೆಯೇ ಭಾರತದ ಛಿದ್ರ ಸಮಾಜದಲ್ಲಿ ಎಲ್ಲಾ ಜಾತಿಮತ ಅಂತಸ್ತುಗಳ ಎಳೆಯ ಮಕ್ಕಳು ಒಂದು ಕಡೆ ಸೇರಿ ಒಡನಾಡಿ ಶಾಲೆಯಲ್ಲಿ ಕಲಿಯುವುದೇ, ಈ ಸೇರಿ ಒಡನಾಡುವ ಕ್ರಿಯೆಯೇ ಬಲುದೊಡ್ಡ ಶಿಕ್ಷಣ ಎಂದೂ ಕಾಣಿಸಬಹುದು.

ಅದಕ್ಕಾಗಿ ಎಳೆಯ ಮಕ್ಕಳ ಶಿಕ್ಷಣದಲ್ಲಾದರೂ ತಾರತಮ್ಯ ಪಂಚವರ್ಣ ಶಿಕ್ಷಣ ಪದ್ಧತಿಯನ್ನು ಕೈಬಿಟ್ಟು ಏಕರೂಪ ಸಮಾನ ಶಿಕ್ಷಣಕ್ಕಾಗಿ ಇಡೀ ಸಮಾಜ ಹಾತೊರೆಯುವಂತೆ ಅದಕ್ಕಾಗಿ ಕೂಗುವಂತೆ ಪತ್ರಿಕೆಗಳು ಅಭಿಪ್ರಾಯ ರೂಪಿಸಬಹುದು. ನೋಡುವ ಕ್ರಮ ಬದಲಾಗುವುದಾದರೆ, ಬದಲಾವಣೆಯ ದಾರಿಗಳೂ ತಂತಾನೆ ತೆರೆದುಕೊಳ್ಳಬಹುದು. ಆಗ ಪತ್ರಿಕೆಗಳು ಜೀವಂತ ಪತ್ರಿಕೆ ಆಗಿಬಿಡುತ್ತವೆ. ಇದಾಗಲು, ಸಾಯಿನಾಥ್ ಸಂತಾನ ಇಂದು ಹೆಚ್ಚಬೇಕಾಗಿದೆ.

# ಬೇಸಾಯದಲಿ ಬದುಕುಳಿಯಲು

ಮೊನ್ನೆ ಕುವೆಂಪುನಗರದ ಸರ್ಕಲ್ ಬಳಿ ಹೋದಾಗ ಅಲ್ಲಿ ನೂರಾರು ಜನ ಹಳ್ಳಿಗಳಿಂದ ಕೂಲಿಗಾಗಿ ಧಾವಿಸಿ ಬಂದವರು, ಅವ್ರ ಕಣ್ಣಲ್ಲಿ ಕಣ್ಣಿಟ್ಟು ನೋಡೋ ಧೈರ್ಯ ನನಗೆ ಬರ್ಲಿಲ್ಲ. ವೆಸ್ಟ್‌ಇಂಡೀಸ್‌ನಲ್ಲಿ ಭಾರತೀಯ ಸಂಜಾತರನ್ನು ಕೂಲಿಗಳು ಅಂತ ಕರೆಯುತ್ತಾರಂತೆ. ಭಾರತೀಯ ಅನ್ನುವುದು ಅಲ್ಲಿ ಕೂಲಿ ಎಂದಾಗಿಬಿಟ್ಟಿದೆ. ಇಲ್ಲೂ ಭಾರತದಲ್ಲೂ ಈ ಜಾಗತೀಕರಣ ಇದೇ ರೀತಿ ಮುಂದುವರಿದರೆ ಹಳ್ಳಿಗರನ್ನು ಹಳ್ಳಿಗರೆಂದಲ್ಲ, 'ಕೂಲಿಗಳು' ಎಂದು ಕರೆಯುವ ದಿನ ಬಹಳ ದೂರವಿಲ್ಲ ಎಂದು ಅನಿಸತೊಡಗಿತು.

ಇಂದು ಬದಲಾವಣೆಯ ವೇಗ ಜಾಸ್ತಿ ಆಗಿದೆ. ಹಿಂದೆ ಒಂದು ಬದಲಾವಣೆಗೆ ಹತ್ತು ವರ್ಷ ತಗೊಂಡ್ರೆ, ಈಗ ಅದೇ ಬದಲಾವಣೆಗೆ ಒಂದು ವರ್ಷ ಮಾತ್ರ ಸಾಕು. ಇದು ನನಗೆ ಬಹಳ ಯಾತನೆ ಕೊಟ್ಟಿತು.

ಇಷ್ಟು ಹೊತ್ತಿಗಾಗಲೆ ಹಳ್ಳಿಗಳು ದಿವಾಳಿಯೆದ್ದು ಹೋಗಬೇಕಾಗಿತ್ತು. ಆದ್ರೆ ಗ್ರಾಮೀಣ ಭಾರತದ ಮಹಿಳೆಯರು ಹಳ್ಳಿಗಳ ನೊಗ ಹೊತ್ತು ನಿಂತ ಪರಿಣಾಮ ಹಳ್ಳಿಗಳು ಉಳಿದುಕೊಂಡಿವೆ. ಮಹಿಳೆಯರು ಸಂಘ ಸಂಸ್ಥೆಗಳನ್ನು ಮಾಡ್ಕೊಂಡು, ಸಣ್ಣಪುಟ್ಟ ರಚನಾತ್ಮಕ ಕೆಲಸಗಳನ್ನು ಮಾಡ್ಕೊಂಡು, ಪರಸ್ಪರ ಆರ್ಥಿಕ ಸಹಕಾರ ಮಾಡ್ಕೊಂಡು ಹಳ್ಳಿಗಳ ಮಾನ ಉಳಿಸಿದರು, ಹಳ್ಳಿಗಳ ಗಂಡಸರ ಮಾನ ಕೂಡ ಕಾಪಾಡಿದರು. ಇಲ್ದೆ ಹೋಗಿದ್ರೆ ಇಷ್ಟೊತ್ತಿಗೆ ಹಳ್ಳಿಗಳು ಪಾಪರ್ ಆಗುತ್ತಿದ್ದವೇನೊ.

ಇವತ್ತು ಶೇಕಡ 70 ಭಾಗ ಭಾರತವು ಗ್ರಾಮೀಣ ಭಾರತವಾಗಿದೆ. ಈ ಗ್ರಾಮೀಣ ಭಾರತವು ಮಲಗಿದೆ. ಇದನ್ನು ಬಡಿದು ಎಬ್ಬಿಸಬೇಕಾಗಿದೆ. ಚಾವಟಿ

ಏಟು ಕೊಟ್ಟು ಎಬ್ಬಿಸಬೇಕಾಗಿದೆ. ಈ ಚಾವಟಿ ಏಟು ಕೊಡುವಂಥ ಕೆಲಸವನ್ನು ಹಳ್ಳಿಗಳಲ್ಲಿ ರಚನಾತ್ಮಕ ಕೆಲಸ ಮಾಡ್ತಿರೊ ಮಹಿಳಾ ಸಂಘ ಸಂಸ್ಥೆಗಳೇ ಮಾಡಿ ಕಾಪಾಡಬೇಕಾಗಿದೆ.

ಇವತ್ತು ವ್ಯವಸಾಯ ತುಂಬಾ ನಷ್ಟದ ವ್ಯವಹಾರ ಆಗಿದೆ. ಇಂದು ಇಡೀ ಹಳ್ಳಿಗೆ ಹಳ್ಳೀನೆ ತನಗೆ ತಾನೇ ನೇಣು ಹಾಕಿಕೊಳ್ಳೊ ಪರಿಸ್ಥಿತಿ ಇದೆ. ಆದರೆ ಪ್ರಕೃತಿ ಯಾವ ಯಾವ ರೂಪದಲ್ಲಿ ಕಾಪಾಡುತ್ತೊ ಹೇಳಕ್ಕಾಗಲ್ಲ. ಇದೀಗ ಆ ಕಾಪಾಡುವ ಪ್ರಕೃತಿ ಪಾಳೇಕರ ರೂಪದಲ್ಲಿ ಕಾಣಿಸಿಕೊಂಡಿದೆ.

ಪಾಳೇಕರರ ಈ ನೈಸರ್ಗಿಕ ಕೃಷಿಯನ್ನು ಯಾವ ರೀತಿಯಲ್ಲಿ, ಯಾವ ಮಾತುಗಳಲ್ಲಿ ಅರ್ಥೈಸಿ ಹೇಳಬೇಕೊ ತಿಳಿಯುತ್ತಿಲ್ಲ. ಇದನ್ನು ಪವಾಡ ಅನ್ನಬೇಕೊ? ಅಥವಾ ವರ ಅನ್ನಬೇಕೊ? ಯಾಕೆಂದರೆ ನಿನ್ನೆ ತಾನೆ ಬನ್ನೂರು ಕೃಷ್ಣಪ್ಪನವರ ತೋಟ ನೋಡಲು ಹೋಗಿದ್ದೆ. ಅಲ್ಲಿ ಬಾಳೆಯ ಎರಡನೆಯ ಕೂಳೆ ಬೆಳೆ ನೋಡ್ದೆ. ರಾಸಾಯನಿಕ ಗೊಬ್ಬರ ಅಲ್ಲಿಗೆ ಸೋಕಿಸಿಲ್ಲ. ಎರೆಗೊಬ್ಬರ, ತಿಪ್ಪೆ ಗೊಬ್ಬರವನ್ನೂ ಅಲ್ಲಿಗೆ ಹಾಕಿಲ್ಲ. ಕ್ರಿಮಿನಾಶಕ, ಕಳೆನಾಶಕ ಬಳಸಿಲ್ಲ. ಮಿಗಿಲಾಗಿ ನೀರಿನ ಬಳಕೆ–ನಾವು ಸಾಮಾನ್ಯವಾಗಿ ಬಾಳೆ ಬೆಳೆಯಲು ಬಳಸುತ್ತೀವಲ್ಲ, ಅದರ ಹತ್ತನೇ ಒಂದು ಭಾಗ ಮಾತ್ರ ಬಳಸಿದೆ. ಆದರೆ ಫಸಲು ಎಷ್ಟಿತ್ತೆಂದರೆ ಸರಾಸರಿ ಕನಿಷ್ಠ ಹದಿನೈದು ಕೆಜಿ ಮತ್ತು ಅಪರೂಪದ ಗೊನೆಗಳು ಮೂವತ್ತು ಕೆ.ಜಿ. ವರೆಗೂ ಇತ್ತು. ಈ ಪವಾಡ ಹೇಗಾಯ್ತು?

ನಾನಿದರ ನಾಡಿ ಹಿಡಿದು ಹೇಳುವುದಿಷ್ಟೇ– ಸಗಣಿ ಬಿದ್ದಿರೊ ಜಾಗವನ್ನು ತಾವು ನೋಡಿರಬಹುದು. ಒಂದು ದಿನ ಬಿಟ್ಟು ಸಗಣಿಯನ್ನು ಪಕ್ಕಕ್ಕೆ ಸರಿಸಿ ನೋಡಿ. ಆ ಜಾಗದಲ್ಲಿ ಸಣ್ಣ ಸಣ್ಣ ತೂತುಗಳು ಕಾಣಿಸುತ್ತವೆ. ಅಂದ್ರೆ ಅಲ್ಲಿ ಭೂಮಿಯ ಅಂತರಂಗಕ್ಕೂ ಭೂಮಿಯ ಬಹಿರಂಗಕ್ಕೂ ನಡುವೆ ದಾರಿಗಳು ಉಂಟಾಗಿರುತ್ತವೆ. ಅದಷ್ಟು ಮಾಡಿದರೆ ಸಾಕು, ಆ ಉಂಟಾಗುವ ದಾರಿಗಳಿಂದ ಗಿಡಕ್ಕೆ ಬೇಕಾದ ರಂಜಕ ಸಿಗುತ್ತೆ, ಪೊಟಾಷ್ ಸಿಗುತ್ತೆ, ಇನ್ನೂ ಏನೇನೊ ಎಲ್ಲವೂ ಸಹಜವಾಗಿ ಸಿಗುವಂತಾಗುತ್ತದೆ.

ನಾವು ರಾಸಾಯನಿಕ ಬಳಸೀಬಳಸಿ ಭೂಮಿಯ ಕಣ್ಣು ಮುಚ್ಚಿಕೊಂಡಿದೆ. ನಮ್ಮ ರೈತ ಕೂಡ ಕಣ್ಣು ಮುಚ್ಚಿಕೊಂಡಿದ್ದಾನೆ. ಅವನ ಕಣ್ಣು ತೆರೆಸುವ ಕೆಲಸ ಈ ಮೂಲಕ ಆಗಬೇಕು. ರೈತನ ಕಣ್ಣು ಮತ್ತು ಭೂಮಿಯ ಕಣ್ಣು ಎರಡನ್ನೂ ತೆರೆಸುವ ಕೆಲಸ ಆದಾಗ ಈ ಪವಾಡ ಸಂಭವಿಸುತ್ತೆ. ಈ ಕೃಷಿಯಿಂದ ಅರ್ಧ ಎಕರೆ, ಒಂದು ಎಕರೆ ಬೇಸಾಯ ಮಾಡಿದರೂ ಸಾಕು– ರೈತ ಅತ್ಯಂತ

ಗೌರವಯುತವಾಗಿ, ಸ್ವಾವಲಂಬಿಯಾಗಿ ಬದುಕನ್ನು ನಿರ್ವಹಿಸಬಹುದು. ಇದು ಬೆಲೆ ಕಟ್ಟಲಾಗದ ಕೊಡುಗೆ. ಎಲ್ಲರೂ ಈ ಕೃಷಿಯ ಬೆರಗನ್ನು ನೋಡಬೇಕು. ಮಾಧ್ಯಮದವರು ದಯವಿಟ್ಟು ಇದನ್ನು ಪ್ರಚಾರ ಮಾಡಬೇಕು. ಈ ಸಾರ್ಥಕವಾದ ಕೆಲಸಕ್ಕೆ ಎಲ್ಲರೂ ಜೊತೆಗೂಡಬೇಕು.

ಎಲ್ಲರಿಗೂ ಗೊತ್ತು, ಬೇಸಾಯ ಕುರಿತ ಈ ಗಾದೆ– 'ಬೇಸಾಯ ಅಂದ್ರೆ, ನಾಸಾಯ, ನೀಸಾಯ, ಮನೆಮಂದಿಯೆಲ್ಲ ಸಾಯ' ಅಂತ. ಈ ಗಾದೇನ ಈ ನೈಸರ್ಗಿಕ ಕೃಷಿ ಸುಳ್ಳು ಮಾಡುತ್ತೆ ಅನ್ನೋ ನಂಬಿಕೆ ನನಗಿದೆ. ನಾವಿದನ್ನ ವ್ಯಾಪಕಗೊಳಿಸಿದ್ರೆ ಸಾಯುವವನು ಅಥವಾ ಆತ್ಮಹತ್ಯೆ ಮಾಡಿಕೊಳ್ಳುವವನು ರೈತ ಅಲ್ಲ. ಬದಲಿಗೆ ಇಲ್ಲಿ ರಸಗೊಬ್ಬರ ಆತ್ಮಹತ್ಯೆ ಮಾಡಿಕೊಳ್ಳುತ್ತೆ, ಕ್ರಿಮಿನಾಶಕಗಳು ಆತ್ಮಹತ್ಯೆ ಮಾಡಿಕೊಳ್ಳುತ್ತವೆ, ಸಾವಯವ ಗೊಬ್ಬರಗಳು, ಹೈಬ್ರಿಡ್ ಬೀಜಗಳು, ಸಾಲಗಳೂ ಆತ್ಮಹತ್ಯೆ ಮಾಡಿಕೊಳ್ಳುತ್ತವೆ.

ಸದ್ದಿಲ್ಲದ ಕ್ರಾಂತಿ ಇದು. ಈ ಕ್ರಾಂತಿಯಿಂದ ರಸಗೊಬ್ಬರ, ಬಿತ್ತನೆ ಬೀಜ, ಕ್ರಿಮಿನಾಶಕಗಳ ಬಹುರಾಷ್ಟ್ರೀಯ ಕಂಪನಿಗಳು ತಂತಾನೆ ನಾಶವಾಗುತ್ತವೆ. ಈ ಸ್ಥಳೀಯತೆಯ ಒಳಗೆ ಉತ್ತರ, ದಾರಿ, ಉಸಿರು ಎಲ್ಲವೂ ಅಡಗಿದೆ. ಇದಕ್ಕೆ ಕಾರಣರಾದ ಸುಭಾಷ್ ಪಾಳೇಕರರ ದಾರ್ಶನಿಕತೆಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುವೆ.

ಜೊತೆಗೆ ನನ್ನ ಕೃತಜ್ಞತೆಗಳು ಸ್ವಾಮಿ ಆನಂದ್‌ರವರಿಗೂ ಸಲ್ಲುತ್ತವೆ. ಒಂದು ದಿನ ಫೋನ್ ಮಾಡಿದ ಆನಂದ್ 'ಅಯ್ಯಯ್ಯೋ ನಿಮ್ಮ ಸಮಸ್ಯೆಗಳೆಲ್ಲ ಬಗೆಹರಿಯಿತು ಸಾರ್' ಅಂದರು. ನನಗೆ ಗಾಬರಿ ಆಯಿತು. ಏನು ಸಮಾಚಾರ ಎಂದು ಕೇಳಿದೆ. ಅವರಿಂದ ನೇರ ಉತ್ತರ ಬರಲಿಲ್ಲ. ಬದಲಾಗಿ 'ನಿಮ್ಮ ಭೂಮಿಯಲ್ಲಿ ಈಗ ಚಿನ್ನ ಬೆಳೆಯಬಹುದು' ಎಂದರು. 'ಅಯ್ಯಯ್ಯೋ ಭೂಮೀನ ನೀವೇ ತಕ್ಕೊಂಡು ಸ್ವಲ್ಪ ಚಿನ್ನ ಕೊಡಿ' ಅಂದೆ. ನನ್ನ ಮಾತನ್ನು ಲೆಕ್ಕಕ್ಕೆ ತೆಗೆದುಕೊಳ್ಳದ ಆನಂದ್ ಸಂಭ್ರಮದಿಂದ ಪಾಳೇಕರ್‌ರವರ ನೈಸರ್ಗಿಕ ಕೃಷಿ ವಿವರಿಸಿದರು ಹಾಗೂ ಬನ್ನೂರು ಕೃಷ್ಣಪ್ಪನವರ ತೋಟವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದರು. ಆನಂದ್ ಎಷ್ಟೇ ಹೇಳಿದರೂ ಅನುಮಾನ ನನಗೆ ಇದ್ದೇ ಇತ್ತು. ಆದರೆ ಯಾವಾಗ ಬನ್ನೂರು ಕೃಷ್ಣಪ್ಪನವರ ತೋಟ ನೋಡಿದೆನೋ ನನಗೂ ಆನಂದ್ ತರವೇ ಆಯಿತು.

ಆ ಗಳಿಗೆಯಿಂದಲೂ ಆನಂದ್‌ರವರನ್ನು ನೋಡುತ್ತಿದ್ದೇನೆ. ದೇವರನ್ನು ಪ್ರತ್ಯಕ್ಷ ಮಾಡಿಕೊಳ್ಳುವ ಸಾಧಕನ ತುರ್ತಿನಲ್ಲಿ ಆನಂದ್ ನೈಸರ್ಗಿಕ ಕೃಷಿಗೆ

ತಹತಹಿಸಿದ್ದಾರೆ. ಅವರ ನಿದ್ರೆಯಲ್ಲೂ ಸಹಜ ಕೃಷಿ ತುಂಬಿರುವಂತಿದೆ. ಈ ತಮ್ಮ ಸ್ಥಿತಿಯನ್ನು, ಈಗ ಕೃತಿಯ ಮೂಲಕ ಅಭಿವ್ಯಕ್ತಿಗೊಳಿಸಿದ್ದಾರೆ. ನೈಸರ್ಗಿಕ ಕೃಷಿಯ ನಾಡಿ ಹಿಡಿಯಲು ಪ್ರಯತ್ನಿಸಿದ್ದಾರೆ. ಈ ಕೃತಿಯನ್ನು ನಾಡಿನ ಉದ್ದಗಲಕ್ಕೂ ತಲುಪುವಂತೆ ಮಾಡಿದರೆ ನಮ್ಮ ರೈತಾಪಿ ಬದುಕು ಉಸಿರಾಡುತ್ತದೆ.

## ಇಂಗ್ಲಿಷ್‌ನೊಡನೆ ಗುದ್ದಾಟದಲಿ....

ಭಾರತದ ಜಾತಿಪದ್ಧತಿಯಿಂದಾಗಿ ನಮಗೆ ತಾರತಮ್ಯಗಳು ಕಾಣುವುದೇ ಇಲ್ಲ. ಕಂಡರೂ ಆ ತಾರತಮ್ಯಗಳು ಸಹಜ ಅನ್ನಿಸಿ ಅವು ನಮ್ಮನ್ನು ಬೆಚ್ಚಿ ಬೀಳಿಸುವುದೂ ಇಲ್ಲ. ಉದಾಹರಣೆಗೆ, ಪ್ರಾಥಮಿಕ ಶಿಕ್ಷಣದಲ್ಲಿ ಪಂಚವರ್ಣ ಶಿಕ್ಷಣ ಪದ್ಧತಿ ಇದೆ. ಜೊತೆಗೆ ಮಾತೃಭಾಷೆಯು 4ನೇ ತರಗತಿಯವರೆಗೆ ಶಿಕ್ಷಣ ಮಾಧ್ಯಮ ಎಂದು ಹೆಸರಿಗಿದೆ. ಖಾಸಗಿ ಶಾಲೆಗಳು ಕಾನೂನು ವಂಚಿಸಿ ಕದ್ದೂಮುಚ್ಚಿ ಮಾತೃಭಾಷಾ ಮಾಧ್ಯಮದ ಬದಲು ಮಾಮೂಲಿ ಇಂಗ್ಲಿಷ್ ಮಾಧ್ಯಮದಲ್ಲೇ ಹೆಚ್ಚು ಕಮ್ಮಿ ಪಾಠ–ಪ್ರವಚನ ಮಾಡುತ್ತಿವೆ. ಇದಕ್ಕೆಲ್ಲಾ ನಾವು ಸುಮ್ಮನಿದ್ದೇವೆ.

ಪರ ರಾಜ್ಯದಿಂದ ವರ್ಗಾವಣೆಯಾಗಿ ಬರುವ ನೌಕರರ ಮಕ್ಕಳಿಗಾಗಿ ಇರುವ ಕೇಂದ್ರೀಯ ಪಠ್ಯದ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಇಲ್ಲಿನ ರಾಜ್ಯದ ಮಕ್ಕಳೇ ಸೇರುತ್ತಿದ್ದಾರೆ. ಇಂಗ್ಲಿಷ್ ಮಾಧ್ಯಮದ ಮೋಹಕ್ಕಾಗಿ ಕೇಂದ್ರೀಯ ಪಠ್ಯಶಾಲೆ ನುಸುಳುವಿಕೆ ಹೆಚ್ಚಾಗುತ್ತಿದೆ. ಅದರ ಉದ್ದೇಶವೇ ದುರುಪಯೋಗವಾಗುತ್ತಿದೆ. ಆದರೂ ನಾವು ಸುಮ್ಮನಿದ್ದೇವೆ.

ಇದರಿಂದಾಗಿ ನಮ್ಮ ಎಳೆ ಮಕ್ಕಳಿಗೆ ನಾವು ಪಾಠದ ಜೊತೆಗೆ ಕೊನೆಗೂ ಕಲಿಸಿದ ನೀತಿಯಾದರೂ ಏನು?– ಕಾನೂನು ವಂಚಿಸುವುದನ್ನು, ಉದ್ದೇಶ ದುರುಪಯೋಗಿಸುವುದನ್ನು. ಇದನ್ನು ಕಲಿತ ಮಗು, ದೊಡ್ಡವನಾದ ಮೇಲೆ ಕಾನೂನು ವಂಚಿಸುವುದನ್ನು, ಉದ್ದೇಶ ದುರುಪಯೋಗಿಸುವುದನ್ನು– ಇಂಥ ವಂಚನೆ ದ್ರೋಹಗಳನ್ನು ಯಾವುದೇ ಅಪರಾಧಿ ಪ್ರಜ್ಞೆ ಇಲ್ಲದೆ ಮಾಡುವುದನ್ನು

ಕಲಿಸಿದಂತೂ ಆಗುವುದಿಲ್ಲವೇ? ಈ ಅಳುಕು ನಮಗಿಲ್ಲ. ಇದು ನನಗೆ ಎಲ್ಲಕ್ಕಿಂತ ಹೆಚ್ಚಿನ ಕೇಡಾಗಿ ಕಾಣಿಸುತ್ತಿದೆ.

ಮಕ್ಕಳ ಶಿಕ್ಷಣದಲ್ಲೇ ತಾರತಮ್ಯ ಇರುವ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಒಟ್ಟಾರೆಯಾಗಿ ಈ ಭಾಷೆ ಆ ಭಾಷೆ ಅನ್ನದೆ ಬಹುತೇಕ ಎಲ್ಲಾ ದೇಸೀಯ ಭಾಷಿಕರೂ, ವಿದ್ಯಾಸಂಸ್ಥೆಗಳೂ ಹಳ್ಳಿದಿಳ್ಳಿ ಅನ್ನದೆ ಇಂಗ್ಲಿಷ್ ಮಾಧ್ಯಮಕ್ಕಾಗಿ ದಾಹ ಪಡುತ್ತಿವೆ. ಅದಕ್ಕಾಗಿ ನಾನಾ ಕಳ್ಳ ಉಪಾಯಗಳನ್ನು ಹುಡುಕುತ್ತಿವೆ. ಇಂಥ ಸಂದರ್ಭದಲ್ಲಿ ಒಂದನೆಯ ತರಗತಿಯಿಂದ ಒಂದು ಭಾಷೆಯಾಗಿ ಇಂಗ್ಲಿಷ್ ಅನ್ನು ಕಲಿಸಬೇಕೆ ಬೇಡವೆ ಎಂದು ಚರ್ಚೆಯಾಗುತ್ತಿದೆ. ಖಾಸಗಿ ಶಾಲೆಗಳು ನರ್ಸರಿಯಿಂದಲೂ ಇಂಗ್ಲಿಷ್ ಕಲಿಸುತ್ತ ಹಾಗೂ ಒಂದನೇ ತರಗತಿಯಿಂದಲೇ ಒಳಗೊಳಗೇ ಕಾನೂನು ವಂಚಿಸಿ ಇಂಗ್ಲಿಷ್ ಮಾಧ್ಯಮದ ಪಾಠ–ಪ್ರವಚನ ಮಾಡುತ್ತಿರುವಾಗ, ಸರ್ಕಾರಿ ಶಾಲೆಗಳು ಒಂದು ಭಾಷೆಯಾಗಿ ಇಂಗ್ಲಿಷನ್ನು ಒಂದನೇ ತರಗತಿಯಿಂದ ಕಲಿಸುವುದಕ್ಕೆ ತಕರಾರು ಯಾಕೆ? ಅರ್ಥ ಮಾಡಿಕೊಳ್ಳಬಹುದಾದ ಒಂದು ಆತಂಕ ಎಂದರೆ ಕೆಲವೆಡೆ ಏಕ ಉಪಾಧ್ಯಾಯ ಶಾಲೆ, ಹಳ್ಳಿಗಳಲ್ಲಿ ಇಂಗ್ಲಿಷ್ ಕಲಿಸುವ ಉಪಾಧ್ಯಾಯರಿಲ್ಲ– ಇತ್ಯಾದಿ. ಈ ಸಮಸ್ಯೆ ಇದೆ ನಿಜ. ಆದರೆ ಅಂಥ ಕಡೆ ಕನ್ನಡವನ್ನೂ ಸರಿಯಾಗಿ ಕಲಿಸುತ್ತಿಲ್ಲ ಎಂಬ ಆರೋಪಗಳೂ ಇವೆ. ಹಾಗಂತ ಕನ್ನಡವೂ ಬೇಡ ಅನ್ನಲಾಗದು. ಈ ಸಮಸ್ಯೆಯೇ ಬೇರೆ. ಇದನ್ನು ಕಲಿಕಾ ನೀತಿಗೆ ಬೆರೆಸಿ ನೋಡಬಾರದು. ಅಗತ್ಯವಿರುವ ತರಬೇತಿ ನೀಡಬೇಕಷ್ಟೇ. ಆದ್ದರಿಂದ ಮಾತೃಭಾಷೆಯು ಶಿಕ್ಷಣ ಮಾಧ್ಯಮ ಆಗುವುದಾದರೆ ಒಂದು ಭಾಷೆಯಾಗಿ ಇಂಗ್ಲಿಷನ್ನು ಒಂದನೇ ತರಗತಿಯಿಂದಲೇ ಕಲಿಸುವುದು ಹೆಚ್ಚು ಉಪಯುಕ್ತ ಎಂದೇ ನನಗನ್ನಿಸುತ್ತದೆ.

ಯಾಕೆಂದರೆ ಈ ಅವಕಾಶ ಇಲ್ಲದಿದ್ದರೆ– ನಮ್ಮ ಸಮಾಜದೊಳಗಿರುವ ಇಂಗ್ಲಿಷ್ ದಾಹವು ಮಾತೃಭಾಷಾ ಶಿಕ್ಷಣ ಮಾಧ್ಯಮವನ್ನೇ ತಿಂದು ಹಾಕಿಬಿಡುವ ಅಪಾಯ ಇದೆ ಅನ್ನಿಸುತ್ತದೆ. ಅಂದರೆ ಇಂಗ್ಲಿಷ್ ಮತ್ತೆ ಪ್ರಾಥಮಿಕ ಹಂತದಲ್ಲಿ ಶಿಕ್ಷಣ ಮಾಧ್ಯಮವಾಗಿ ಕನ್ನಡವು ಕಾಟಾಚಾರಕ್ಕೆ ಕಲಿಯುವ ಭಾಷೆಯಾಗಿ ಉಳಿದುಬಿಡುವ ಒತ್ತಡ ಉಂಟಾಗಬಹುದು. ಆದ್ದರಿಂದ ಇಂಗ್ಲಿಷ್ ಬಾಯಾರಿಕೆಯನ್ನು ಒಂದು ಭಾಷೆಯಾಗಿ ಪ್ರಾಥಮಿಕ ಹಂತದಲ್ಲೇ ಕಲಿಸುತ್ತ ತಣಿಸಿಕೊಂಡು, ಮಾತೃಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿ ಉಳಿಸಿಕೊಂಡು ಮುಂದುವರಿಯುವುದು ಸಮಾನ ಶಿಕ್ಷಣದ ಕಡೆಗೆ ಇಟ್ಟ ಒಂದು ಹೆಜ್ಜೆ ಎಂದು ನನಗನ್ನಿಸುತ್ತದೆ. ಮುಂದೆ ಕನಿಷ್ಠ 10ನೇ

ತರಗತಿಯವರೆಗೆ ಹಂತಹಂತವಾಗಿ ಮಾತೃಭಾಷಾ ಶಿಕ್ಷಣ ಮಾಧ್ಯಮಕ್ಕಾಗಿ ಇದರ ಜೊತೆಗೆ ಈಗಿರುವುದಕ್ಕಿಂತಲೂ ಹೆಚ್ಚಿನ ಆದ್ಯತೆ ಕೊಟ್ಟು ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸಿದರೆ ಆಗ ಮಾತ್ರ ಮಾತೃಭಾಷಾ ಶಿಕ್ಷಣ ಮಾಧ್ಯಮ ಉಳಿಯಬಹುದೇನೋ? ಮಾತೃಭಾಷಾ ಶಿಕ್ಷಣ ಮಾಧ್ಯಮದ ಉಳಿವಿಗಾಗಿಯೂ ಈ ರೀತಿಯು ಅಗತ್ಯವಿದೆ ಅನ್ನಿಸುತ್ತದೆ.

ಈಗ ನಮ್ಮ ನಮ್ಮಲ್ಲೆ ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸುವುದು ಒಂದನೇ ತರಗತಿಯಿಂದಲೋ ಅಥವಾ ಎರಡನೇ ತರಗತಿಯಿಂದಲೋ ಅಥವಾ ಮೂರನೇ ತರಗತಿಯಿಂದಲೋ ಎಂಬುದು ಚರ್ಚಿತವಾಗುತ್ತಿದೆ. ಇದೇನೂ ಭಿನ್ನಾಭಿಪ್ರಾಯವಲ್ಲ. ಒಂದು ಹೆಜ್ಜೆ ಹಿಂದು ಮುಂದು ಅಷ್ಟೆ. ಖಾಸಗಿ ನರ್ಸರಿಗಳಲ್ಲಿ ಕಲಿಸುವ ಇಂಗ್ಲಿಷ್ ಅನ್ನೇ ಸರ್ಕಾರಿ ಶಾಲೆಗಳು ಒಂದು ಮತ್ತು ಎರಡನೇ ತರಗತಿಗಳಲ್ಲಿ ಕಲಿಸಿ ಅದಕ್ಕೆ 'ಇಂಗ್ಲಿಷ್ ಭಾಷಾ ಪರಿಚಯ' ಎಂದು ಹೆಸರಿಟ್ಟು, ಮೂರನೇ ತರಗತಿಯಿಂದ ಇಂಗ್ಲಿಷ್ ಭಾಷಾ ಕಲಿಕೆ ಆರಂಭಿಸಿದರೂ ಆಗುತ್ತದೆ. ಭಾಷಾ ಕಲಿಕಾ ಕೌಶಲ್ಯಕ್ಕೆ ಎಳೆತನ, ಬಾಲ್ಯವು ಸಹಜ ಮತ್ತು ಪೂರಕ ಮನಃಸ್ಥಿತಿ ಎಂಬುದನ್ನು ನಾವು ಇಲ್ಲಿ ಮನಸ್ಸಲ್ಲಿಟ್ಟುಕೊಂಡರೆ ಸಾಕು.

ಆದರೆ ನಾಳೆ, ಪ್ರಾಥಮಿಕ ಶಿಕ್ಷಣದಲ್ಲೇ ಇಂದಿಗಿಂತಲೂ ಹೆಚ್ಚು ಅಸಮಾನತೆಯನ್ನು ಉಂಟುಮಾಡುವ ಇಂಗ್ಲಿಷ್ ಮಾಧ್ಯಮದ ಕೇಂದ್ರೀಯ ಪಠ್ಯಶಾಲೆಗಳು ಗವಾಕ್ಷಿಯಲ್ಲಿ ಬಂದು ಕೂರುತ್ತಿವೆ. ಮಾತೃಭಾಷಾ ಶಿಕ್ಷಣ ಮಾಧ್ಯಮದ ಬಗ್ಗೆ ನಿಜವಾದ ಬದ್ಧತೆ ಇಲ್ಲದ ಸರ್ಕಾರವು, ಈ ಕಡೆ ಪ್ರಾಥಮಿಕ ಶಿಕ್ಷಣ ಮಾಧ್ಯಮಕ್ಕೆ ಮಾತೃಭಾಷೆ ಎಂದು ತೋರಿಸಿ ಆ ಕಡೆ ಕೇಂದ್ರೀಯ ಪಠ್ಯದ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ 'ಅಭ್ಯಂತರವಿಲ್ಲ' ಎಂದು ಅನುಮತಿ ನೀಡಿ ವಂಚಿಸುತ್ತಿದೆ. ಈ ಕೈಲಿ ಕೊಟ್ಟಂತೆ ಮಾಡಿ, ಆ ಕೈಲಿ ಕಿತ್ತುಕೊಳ್ಳುತ್ತಿದೆ. ಇದಕ್ಕೂ ನಾವು ಸುಮ್ಮನಿದ್ದೇವೆ. ಒಟ್ಟಿನಲ್ಲಿ ನಾವು ಕನ್ನಡಿಗರು, ಕನ್ನಡ ಹೋರಾಟಗಾರರು ದಡ್ಡರೋ ಅಥವಾ ಮುಗ್ಧರೋ ಅಥವಾ ಇಂಗ್ಲಿಷ್ ಮಾಧ್ಯಮದ ಆಶೆ ನಮ್ಮ ಒಳಗೊಳಗೇ ಇದೆಯೋ ನನಗಂತೂ ಅರ್ಥವಾಗದೇ ಉಳಿದಿದೆ.

## ಮುಚ್ಚಿ ವಿಲೀನ ಎಂದರೆ ಕೊಂದು ಸ್ವರ್ಗಕ್ಕೆ ಕಳುಹಿಸಲಾಯಿತು ಎಂದಂತೆ

ಈಗ ಮೂರು ಸಾವಿರ ಚಿಲ್ಲರೆ ಸರ್ಕಾರಿ ಶಾಲೆಗಳನ್ನು ಮುಚ್ಚಲು ಸರ್ಕಾರ ತುದಿಗಾಲಲ್ಲಿ ನಿಂತಿದೆ. ಇದನ್ನು ಸರ್ಕಾರ 'ಮುಚ್ಚುವುದಲ್ಲ ಬದಲಿಗೆ ವಿಲೀನ' ಎಂದು ಕರೆಯುತ್ತಿದೆ. ಇದು– 'ಕೊಂದದ್ದನ್ನು ಕೊಲೆಯಲ್ಲ; ಸ್ವರ್ಗಕ್ಕೆ ಕಳುಹಿಸುವುದು' ಎಂದಂತೆ.

ಈಗಾಗಲೇ ಕಳೆದ ಹತ್ತು ವರ್ಷದಿಂದ ಸಾವಿರಾರು ಸರ್ಕಾರೀ ಪ್ರಾಥಮಿಕ ಶಾಲೆಗಳನ್ನು ವಿಲೀನಗೊಳಿಸಿ ಸ್ವರ್ಗಕ್ಕೆ ಕಳುಹಿಸಲಾಗಿದೆ. ಇದನ್ನು ಮಕ್ಕಳ ಕೊರತೆಯ ಕಾರಣ ಕೊಟ್ಟು ಸರ್ಕಾರ ಸಮರ್ಥಿಸಿಕೊಳ್ಳುತ್ತಿದೆ. ಸರಾಸರಿ ಲೆಕ್ಕಕ್ಕೆ ಬಂದರೆ ಒಂದು ಸರ್ಕಾರಿ ಶಾಲೆಯಲ್ಲಿ 120 ಮಕ್ಕಳಿದ್ದರೆ, ಅದೇ ಒಂದು ಖಾಸಗಿ ಶಾಲೆಯಲ್ಲಿ 229 ಮಕ್ಕಳು ಇದ್ದಾರೆ. ಇದರ ಅರ್ಥ ಏನು? ಖಾಸಗಿ ಶಾಲೆಯಲ್ಲಿ ವಿದ್ಯಾರ್ಥಿಗಳ ಕೊರತೆಯಾಗದಂತೆ ಕಾಪಾಡಲು ಖಾಸಗಿ ಹಿತಕ್ಕೆ ಬಲಿಯಾದ ಸರ್ಕಾರ ಮತ್ತು ಅಧಿಕಾರಶಾಹಿಯ ಒಳಸಂಚಲ್ಲವೇ ಇದು? ಜೊತೆಗೆ ಅನಧಿಕೃತ ಶಿಕ್ಷಣ ವ್ಯಾಪಾರಿಗಳೂ ರಾಜ್ಯದ ತುಂಬಾ ಹುಟ್ಟಿಕೊಳ್ಳುತ್ತಿದ್ದಾರೆ. ಈ ಸರ್ಕಾರವೋ ಇದೆಯೋ ಇಲ್ಲವೋ ಎಂಬಂತಿದೆ.

ಒಂದು ನಿಜವಾದ ಸರ್ಕಾರ ಇದ್ದಿದ್ದರೆ ಏನು ಮಾಡ್ತಾ ಇತ್ತು? ತನ್ನ ಮುಖಕ್ಕೆ ತಾನೇ ಉಗಿದುಕೊಳ್ಳುವ ಇಂಥ ಕೆಲಸ ಮಾಡ್ತಾ ಇರಲಿಲ್ಲ. ಬದಲಾಗಿ ಖಾಸಗಿ ಶಿಕ್ಷಣ ವ್ಯಾಪಾರಿಗಳ ಅನಧಿಕೃತ ಶಾಲೆಗಳನ್ನು ಇಲ್ಲವಾಗಿಸುತ್ತಿತ್ತು. ಜೊತೆಗೆ, ಕನ್ನಡ ಮಾಧ್ಯಮಕ್ಕೆ ಎಂದು ಅನುಮತಿ ಪಡೆದು ಗುಟ್ಟಾಗಿ ಇಂಗ್ಲಿಷ್ ಮಾಧ್ಯಮ ಬೋಧಿಸುವ ಖಾಸಗಿ ಶಾಲೆಗಳ ಮೇಲೆ ಕಟ್ಟುನಿಟ್ಟಿನ ಕ್ರಮ ಜರುಗಿಸಿದ್ದರೂ

ಸರ್ಕಾರಿ ಶಾಲೆಗಳಿಗೆ ಮಕ್ಕಳ ಸಂಖ್ಯೆಯ ಕೊರತೆ ಬರುತ್ತಿರಲಿಲ್ಲ. ಇದು ಯಾರಿಗೆ ಗೊತ್ತಿಲ್ಲ?

ಈಗಲೂ ಕಾನೂನು ಕಣ್ಣಿಗೆ ಮಣ್ಣೆರಚುವ ಖಾಸಗಿ ಶಿಕ್ಷಣ ವ್ಯಾಪಾರೀ ಶಾಲೆಗಳನ್ನು ಮುಚ್ಚಿದರೆ ಮಕ್ಕಳ ಹೆಚ್ಚಳದಿಂದ ಮೂರು ಸಾವಿರ ಶಾಲೆಗಳನ್ನು ಮುಚ್ಚುವ ಮಾತಿರಲಿ, ಈಗಾಗಲೇ ಮುಚ್ಚಿರುವ ಸಾವಿರಾರು ಶಾಲೆಗಳನ್ನೂ ಪುನಃ ತೆಗೆಯಬೇಕಾಗಿ ಬರುತ್ತದೆ. ಬಹುಶಃ ಇದೂ ಸಾಲದೆ ಬರಬಹುದು. ಆದ್ದರಿಂದ ಸರ್ಕಾರಕ್ಕೆ ನಾವು ಈಗ ಒಕ್ಕೊರಲಿನಿಂದ ಸರ್ಕಾರಿ ಶಾಲೆಗಳ ಮೇಲೆ ಕಾಗೆ ಹಾರಿಸಬೇಡಿ ಎಂದು ಕೂಗಿ ಹೇಳಬೇಕಾಗಿದೆ. ಮೂರು ಸಾವಿರ ಶಾಲೆಗಳನ್ನು ಮುಚ್ಚಬೇಡಿ ಎಂದು ಮಾತ್ರವಲ್ಲ: ಈಗಾಗಲೇ ಮುಚ್ಚಿರುವ ಶಾಲೆಗಳನ್ನು ಮತ್ತೆ ತೆಗೆಯಿರಿ ಎಂದೂ ಕೇಳಬೇಕಾಗಿದೆ.

ಜೊತೆಗೆ, 'ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ'ಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದು ಹೆಚ್ಚುಕಮ್ಮಿ ಎಲ್ಲಾ ರಾಜ್ಯಗಳೂ ಅಳವಡಿಸಿಕೊಂಡಿದ್ದರೂ ನಮ್ಮ ರಾಜ್ಯ ಮಾತ್ರ ಶಾಸ್ತ್ರ ಕೇಳುತ್ತ ಕೂತಿದೆ. ನ್ಯಾಯಾಲಯ ಈ ಕಾಯ್ದೆಯನ್ನು ಜಾರಿಗೊಳಿಸುವಂತೆ ಆದೇಶಿಸಿದ್ದರೂ ಸರ್ಕಾರ ನ್ಯಾಯಾಲಯಕ್ಕೂ ಬೆಲೆ ಕೊಡುತ್ತಿಲ್ಲ. ಸರ್ಕಾರದ ಉದ್ದೇಶ ಏನು, ಸರ್ಕಾರ ಯಾಕಿದೆ ಎಂಬುದು ಅರ್ಥವಾಗದ ಪರಿಸ್ಥಿತಿಯಲ್ಲಿ ನಾವಿದ್ದೇವೆ.

ತಾರತಮ್ಯದ ರೋಗಕ್ಕೆ ತುತ್ತಾದ ಭಾರತದಲ್ಲಿ, ಮಕ್ಕಳ ನಡುವೆಯಾದರೂ ಭಿನ್ನ ಭೇದವಿಲ್ಲದ ಏಕರೂಪ ಶಿಕ್ಷಣಕ್ಕಾಗಿ ಒಂದು ಜನಾಂದೋಲನಕ್ಕಾಗಿ ಈ ನೆಲ ಕಾಯುತ್ತಿದೆ. ಇದನ್ನೆಲ್ಲಾ ಸರ್ಕಾರ ಗಮನಿಸಿ ಕಾರ್ಯಪ್ರವೃತ್ತವಾಗಬೇಕು. ಇಲ್ಲದಿದ್ದರೆ 'ಮಾತೃಭೂಮಿಯನ್ನೇ ಮಾರ್ಕಂಡು ತಿನ್ನುವವರಿಗೆ ಮಾತೃಭಾಷೆ ಯಾವ ಲೆಕ್ಕ' ಎಂಬ ಅಪವಾದದಿಂದ ಈ ಸರ್ಕಾರಕ್ಕೆ ತಪ್ಪಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲವೇನೋ.

# ಸರ್ಕಾರ ಕಣ್ಬಿಡಲಿ

ನಡೆ ಮತ್ತು ನುಡಿಗೆ ತಾಳಮೇಳವಿಲ್ಲದೆ ಈ ಸರ್ಕಾರದ ಮರ್ಮವೇ ತಿಳಿಯದಾಗಿದೆ. ಶಿಕ್ಷಣ ಹಕ್ಕು ಕಾಯ್ದೆಯನ್ನು ದೇಶದ ಎಲ್ಲಾ ರಾಜ್ಯಗಳು ಅನುಷ್ಠಾನಗೊಳಿಸಿ ಎಷ್ಟೋ ಕಾಲವಾದ ಮೇಲೆ ಈ ನಮ್ಮ ಸರ್ಕಾರ ತಾನು ಹಿಂದಾಗಿ ಒತ್ತಾಯಕ್ಕೆ ಸಿಕ್ಕಿ ಅಸಹಾಯಕವಾಗಿಯೇನೋ ಎಂಬಂತೆ ಈಗಷ್ಟೇ ಜಾರಿಗೆ ತಂದಿತು.

ಶಿಕ್ಷಣ ಹಕ್ಕು ಕಾಯ್ದೆ ಜಾರಿಗೆ ತಂದ ಮೇಲಾದರೂ ಸರ್ಕಾರಕ್ಕೆ ಕಿಂಚಿತ್ ಹೃತ್ಪೂರ್ವಕತೆ ಇದ್ದಿದ್ದರೆ ಒಂದು ಲಕ್ಷಕ್ಕೂ ಮೇಲ್ಪಟ್ಟು ಶಾಲೆಯಿಂದ ಹೊರಗುಳಿದಿರುವ ಮಕ್ಕಳು ಕಣ್ಣಿಗೆ ಬೀಳಬೇಕಿತ್ತು. ತನ್ನ ಕೆಂಪುದೀಪದ ಕಾರು ಓಡಾಡುವ ರಾಜಧಾನಿಯ ಬೀದಿಗಳಲ್ಲೇ ಬೀದಿಗೆ ಬಿದ್ದಿರುವ ಹತ್ತು ವರ್ಷ ಒಳಗಿನ ನಲವತ್ತು ಸಾವಿರಕ್ಕೂ ಹೆಚ್ಚಾದ ಈ ಮಕ್ಕಳು, ಚಿಂದಿ ಆಯುತ್ತ ಭಿಕ್ಷಾಟನೆಯಲ್ಲಿ ತೆವಳುತ್ತಿರುವ ಈ ಮಕ್ಕಳೂ ಸಹ ಕಾಣಿಸಬೇಕಿತ್ತು. ಇದ್ಯಾವುದೂ ಸರ್ಕಾರಕ್ಕೆ ಕಂಡಿಲ್ಲ.

ಅಥವಾ ಸರ್ಕಾರ ಕಣ್ಮುಚ್ಚಿಕೊಂಡಿದೆ. ಸರ್ಕಾರ ಕಣ್ಣು ತೆರೆದಿದ್ದರೆ ಇದು ಕಾಣುತ್ತಿತ್ತು. ಸರ್ಕಾರಕ್ಕೆ ಪ್ರಾಮಾಣಿಕತೆ ಇದ್ದಿದ್ದರೆ ಈ ಮಕ್ಕಳಿಗೂ ಶಿಕ್ಷಣ ಕೊಡುವುದು ತನ್ನ ಬಾಧ್ಯತೆ ಎಂದು ಸರ್ಕಾರ ಪರಿಗಣಿಸುತ್ತಿತ್ತು.

ಆದರೆ ನಮ್ಮ ಸರ್ಕಾರ ಕಣ್ಮುಚ್ಚಿದೆ. ಕಣ್ಮುಚ್ಚಿದ ಸರ್ಕಾರ ಸುಮ್ಮನಾದರೂ ಕುಳಿತಿಲ್ಲ. ಕುರುಡು ನಿರ್ಧಾರಗಳನ್ನೂ ತೆಗೆದುಕೊಳ್ಳುತ್ತಿದೆ. ಅರಿವಾಗದೋಪಾದಿಯಲ್ಲಿ ಸಾವು ಬರುವಂತೆ ಶಾಲೆಗಳನ್ನು ಮುಚ್ಚುತ್ತಾ

ಬರುತ್ತಿದ್ದ ಸರ್ಕಾರ ಈಗ ಅಪಘಾತ ಮಾಡಿದಂತೆ ಮೂರು ಸಾವಿರಕ್ಕೂ ಹೆಚ್ಚು ಶಾಲೆಗಳನ್ನು ಮುಚ್ಚಿ ಕೊಂದುಹಾಕಲು ಹೊರಟಿದೆ!

ಇದೇ ಅರ್ಥವಾಗದ ಪ್ರಕ್ರಿಯೆ– ಒಂದು ಕಡೆ ಲಕ್ಷಾಂತರ ಮಕ್ಕಳು ಶಾಲೆಗೆ ಸೇರದೆ ಬೀದಿಗೆ ಬಿದ್ದಿರುವಾಗ, ಈಗ ಶಿಕ್ಷಣ ಹಕ್ಕು ಕಾಯ್ದೆ ಜಾರಿಗೆ ಬಂದಿದ್ದು ಈ ಕಾಯ್ದೆಯಂತೆ ಪ್ರತಿ ಒಂದು ಕಿಲೋಮೀಟರಿಗೆ ಕಿರಿಯ ಪ್ರಾಥಮಿಕ ಶಾಲೆ ಹಾಗೂ ಪ್ರತಿ ಮೂರು ಕಿಲೋಮೀಟರಿಗೆ ಒಂದು ಹಿರಿಯ ಪ್ರಾಥಮಿಕ ಶಾಲೆ ಬೇಕೆಂದಿರುವಾಗ, ಜೊತೆಗೆ ಕೇಂದ್ರ ಸಂಪನ್ಮೂಲ ಸಚಿವಾಲಯದ ಅಧಿಕಾರಿಗಳ ಕಾರ್ಯತಂಡವು 'ಶಾಲಾ ದಾಖಲಾತಿ ಸಂಪೂರ್ಣ ಯಶಸ್ವಿಯಾಗಬೇಕಾದರೆ ಕರ್ನಾಟಕದಲ್ಲೆ ಮುಂದಿನ ಐದು ವರ್ಷಗಳಲ್ಲಿ ಇನ್ನು 1241 ಸರ್ಕಾರಿ ಶಾಲೆ ತೆಗೆಯಬೇಕಾಗುತ್ತದೆ' ಎಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವಾಗ – ಹೀಗಿದ್ದೂ ಈಗ ಇರುವ ಸರ್ಕಾರಿ ಶಾಲೆಗಳನ್ನು ಹೇಗೆ ತಾನೆ ಮುಚ್ಚಲು ಸಾಧ್ಯ? ಇದರ ಜೊತೆಗೆ ಒಂದೊಂದಾಗಿ ದಲಿತ–ಹಿಂದುಳಿದ ವರ್ಗದ ಮಕ್ಕಳ ಹಾಸ್ಟೆಲ್‌ಗಳು, ಅಷ್ಟೇ ಅಲ್ಲ, ಅಲೆಮಾರೀ ಮಕ್ಕಳ ಆಶ್ರಮ ಶಾಲೆಗಳನ್ನೂ ಈ ಸರ್ಕಾರ ಮುಚ್ಚುತ್ತಾ ಬರುತ್ತಿದೆ. ಒಟ್ಟಿನಲ್ಲಿ ಇದು ಮುಚ್ಚುವ ಸರ್ಕಾರವಾಗಿಬಿಟ್ಟಿದೆ. ಅದಕ್ಕಾಗೇ ಈ ಸರ್ಕಾರದ ಮರ್ಮವೇ ತಿಳಿಯದಾಗಿದೆ.

ಸರ್ಕಾರವು ಹೀಗಿದ್ದರೆ, ಇನ್ನೊಂದು ಕಡೆ ಖಾಸಗಿ ಶಿಕ್ಷಣೋದ್ಯಮ ತನ್ನ ಶಾಲೆಗಳಲ್ಲೂ 25% ಮೀಸಲಾತಿ ಕೊಡಬೇಕಾಗಿ ಬಂದಿರುವುದನ್ನು ನುಂಗಲಾರದೆ ಒದ್ದಾಡುತ್ತಿದೆ. ಈ ಮೀಸಲಾತಿ ನೀತಿಯಿಂದ ಬಚಾವಾಗುವುದಕ್ಕಾಗಿ ಈ ಶಿಕ್ಷಣ ಉದ್ಯಮದವರು ಇನ್ನು ಮುಂದೆ ಅನಧಿಕೃತ ಶಾಲೆಗಳನ್ನು ತಾವೆ ತೆರೆದು ತಂತಮ್ಮ ದಂಧೆ ಮುಂದುವರೆಸುವುದು ಸಹಜ ತಾನೆ? 'ಈ ಇರುವ ಅನಧಿಕೃತ ಖಾಸಗಿ ಶಾಲೆಗಳನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ' ಎಂದು ಶಿಕ್ಷಣ ಸಚಿವ ಶ್ರೀ ಸಿ.ವಿಶ್ವೇಶ್ವರ ಹೆಗಡೆ ಕಾಗೇರಿಯವರೇ ಹೇಳಿದರೆ ಉಳಿಯುವುದೇನು?

ಈ ಮಾತು ಏನನ್ನು ಹೇಳುತ್ತದೆ? ಅಧಿಕಾರ ನಡೆಸಲು ಅರ್ಹತೆ ಇಲ್ಲದವರು ಅಧಿಕಾರಕ್ಕೆ ಬಂದರೆ ಸಹಜವಾಗಿ ಜರುಗುವ ಪ್ರಕ್ರಿಯೆಯಂತೆ ಕಾಣುವುದಿಲ್ಲವೆ ಇದು? ಈ ಸರ್ಕಾರದ ಪಕ್ಷದ ಅಧ್ಯಕ್ಷರಾದ ಶ್ರೀ ಈಶ್ವರಪ್ಪನವರು 'ಸರ್ಕಾರ ಉರುಳಿದರೂ ಶಾಲೆ ಮುಚ್ಚಲ್ಲ' ಎಂದು ರಾಜಾರೋಷವಾಗಿ ಹೇಳುತ್ತಾರೆ! ಇದು ನಿಜವೇ ಆಗಿದ್ದರೆ ಈಗಾಗಲೇ ಸರ್ಕಾರ ಉರುಳಿ ಹೋಗಬೇಕಿತ್ತಲ್ಲವೆ? ಇದು, ಈ ರೀತಿ ಮಾತನಾಡುವುದು ಕಣ್ಮುಚ್ಚಿ ಕುಳಿತಿರುವ ಸರ್ಕಾರದ ಪಕ್ಷದ ಅಧ್ಯಕ್ಷರಿಗೆ ನಾಲಿಗೆಯೂ ಇಲ್ಲ ಎಂಬಂತಾಗಿಬಿಡುವುದಿಲ್ಲವೆ?

ಸರ್ಕಾರ ತಾನು ಅಸ್ತಿತ್ವದಲ್ಲಿದೆ ಎಂದು ತೋರಿಸಿಕೊಳ್ಳುವುದಕ್ಕಾಗಿಯಾದರೂ, ಒಂದು– ಅನಧಿಕೃತ ಖಾಸಗಿ ಶಾಲೆಗಳನ್ನು ಮುಚ್ಚಲಿ. ಎರಡು– ಮಾತೃಭಾಷಾ ಶಿಕ್ಷಣಕ್ಕಾಗಿ ಅನುಮತಿ ಪಡೆದು ಇಂಗ್ಲಿಷ್ ಮಾಧ್ಯಮವನ್ನು ಕಳ್ಳತನದಲ್ಲಿ ಕಲಿಸುತ್ತಾ ಜೊತೆಗೆ ಹೀಗೆ ಮಾಡುವುದರಿಂದ ಕಾನೂನು ಕಣ್ಣಿಗೆ ಮಣ್ಣೆರಚುವ ನೀತಿಯನ್ನು ಎಳೆಯ ಮಕ್ಕಳಿಗೆ ಉಣಿಸುತ್ತಿರುವುದನ್ನಾದರೂ ನಿಲ್ಲಿಸಿ ಮಕ್ಕಳನ್ನು ಬಚಾವು ಮಾಡಲಿ. ಮೂರು– ಶಿಕ್ಷಣ ಹಕ್ಕು ಕಾಯ್ದೆಯ 'ಅಕ್ಕ ಪಕ್ಕ ಶಾಲಾ ಪದ್ಧತಿ'ಗೆ ಹೆಚ್ಚು ನಿಗಾ ಇಡಲಿ.. ಕನಿಷ್ಟ ಇಷ್ಟಾದರೂ ಮಾಡಬೇಕಾಗಿದೆ.

ಸರ್ಕಾರ ಕಣ್ಬಿಡಲಿ

ಅದರ ನುಡಿಯ ಮುಖ ಮುಂದಕ್ಕಿದೆ. ಅದರ ನಡೆಯ ಪಾದಗಳು ಹಿಂದಕ್ಕಿವೆ!

ಈಗಲಾದರೂ ಸರ್ಕಾರ ಬೇಗ ಕಣ್ಬಿಡಲಿ.

# ನೃಪತುಂಗ ಪ್ರಶಸ್ತಿ ಪಡೆಯಲೋಸುಗ

ಅಧ್ಯಕ್ಷರು,
ಕನ್ನಡ ಸಾಹಿತ್ಯ ಪರಿಷತ್ತು,
ಬೆಂಗಳೂರು ಇವರಿಗೆ.

ಮಾನ್ಯರೇ
ವಿಷಯ: ನೃಪತುಂಗ ಪ್ರಶಸ್ತಿ ಪಡೆಯಲೋಸುಗ
ಉಲ್ಲೇಖ: ಕಸಾಪ/ದತ್ತಿ/ಬಿ.ಎಂ.ಟಿ.ಸಿ/2010–11/ 8–54

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ನೃಪತುಂಗ ಸಾಹಿತ್ಯ ಪ್ರಶಸ್ತಿಗೆ ಕನ್ನಡ ಸಾಹಿತ್ಯ ಪರಿಷತ್ತು ನನ್ನನ್ನು ಆಯ್ಕೆ ಮಾಡಿರುವುದಕ್ಕಾಗಿ ಕೃತಜ್ಞತೆ ಸಲ್ಲಿಸುತ್ತಾ ಈ ಸಂದರ್ಭದಲ್ಲಿ– ಒಂದು ವಿನಂತಿಯನ್ನು ತಮ್ಮ ಮುಂದಿಡುವೆ: ಉನ್ನತ ಶಿಕ್ಷಣದವರೆಗೂ ಕನ್ನಡ ಮಾಧ್ಯಮವಾಗುವುದನ್ನೇ ಹಂಬಲಿಸುತ್ತಾ, ಅದನ್ನು ಕಾಣದೆ ಕಣ್ಮುಚ್ಚಿದ ಮಹಾಕವಿ ಕುವೆಂಪು ಅವರನ್ನು ನೆನೆಸಿಕೊಳ್ಳುತ್ತಾ, ಹಾಗೇ 'ಕನ್ನಡ ಶಿಕ್ಷಣ ಮಾಧ್ಯಮಕ್ಕಾಗಿ ಚಿಕ್ಕ ಹುಡುಗನಾಗಿದ್ದಾಗ ಪ್ಲೆಕಾರ್ಡ್ ಹಿಡಿದುಕೊಂಡು ಕೂಗಾಡುತ್ತಿದ್ದೆ. ಈಗ ವಯಸ್ಸಾದ ಮೇಲೆ ಕೋಲು ಹಿಡಿದುಕೊಂಡು ಅದೇ ಬೇಡಿಕೆ ಕೇಳುತ್ತಿದ್ದೇನೆ, ಪರಿಸ್ಥಿತಿಯಲ್ಲಿ ಏನೂ ವ್ಯತ್ಯಾಸವಾಗಲಿಲ್ಲ, ನನಗೆ ವಯಸ್ಸಾದದ್ದೊಂದನ್ನು ಬಿಟ್ಟು' ಎನ್ನುತ್ತಿದ್ದ ಡಾ. ಹಾ.ಮಾ. ನಾಯಕರ ಮಾತುಗಳೂ ಅವರೊಡನೇ ಕಾಲವಶವಾಗಿವೆ.

ಈಗಿನ ಕನ್ನಡದ ಪರಿಸ್ಥಿತಿ ನೋಡಿದರಂತೂ ಕನ್ನಡವು ಶಿಕ್ಷಣ ಮಾಧ್ಯಮವಾಗದೆ ಕನ್ನಡದ ಪಾದಗಳು ಶಕ್ತಿಹೀನವಾಗಿ, ನಡೆಯಲು

ಕಷ್ಟಪಡುತ್ತ ಕಂಕುಳುಕೋಲು ಹಿಡಿದುಕೊಂಡು ಯಾತನಾಮಯವಾಗಿ ನಡೆಯುತ್ತಿರುವಂತೆ ಕಾಣುತ್ತದೆ. ಇಲ್ಲಿಯವರೆಗಿನ ಎಲ್ಲಾ ಸರ್ಕಾರಗಳೂ ಕನ್ನಡದ ಬಗ್ಗೆ ಜುಟ್ಟಿಗೆ ಮಲ್ಲಿಗೆ ಹೂ ಮಾತಾಡಿಕೊಂಡೇ ಬಂದಿವೆ.

ಹೀಗಿರುವಾಗ– ಕನ್ನಡ ಸಂಘವೋ ಅಥವಾ ಕನ್ನಡ ಸಾಹಿತ್ಯ ಪರಿಷತ್ತೋ ಕೊಡಮಾಡುವ ಯಾವುದೇ ಪ್ರಶಸ್ತಿ ಪಡೆಯುವುದು ಅಥವಾ ಅವು ನಡೆಸುವ ಯಾವುದೇ ಸಮ್ಮೇಳನಗಳಲ್ಲಿ ಭಾಗವಹಿಸುವುದು ನನಗೆ ಕಸಿವಿಸಿಯಾಗುತ್ತದೆ. ಇಂದಿನ ವ್ಯಾವಹಾರಿಕ ಕಾರಣಕ್ಕಾಗಿ ಒಂದು ಭಾಷೆಯಾಗಿ ಒಂದನೆಯ ತರಗತಿಯಿಂದಲೇ ಇಂಗ್ಲಿಷ್ ಕಲಿಕೆಯನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಮಾಧ್ಯಮವನ್ನು ಮಾತೃಭಾಷೆಯನ್ನಾಗಿಸುವ ವಿಚಾರ ವಿವೇಕವಾಗದೆ ನಗೆಪಾಟಲಾಗಿರುವ ದುರಂತಕ್ಕೆ ಕಾರಣರು ಯಾರು?

ಆದ್ದರಿಂದ ನನ್ನ ಬೇಡಿಕೆ– ಈಗಲಾದರೂ ನಮ್ಮ ಸರ್ಕಾರ ಹೃತ್ಪೂರ್ವಕತೆ ಮತ್ತು ಇಚ್ಛಾಶಕ್ತಿ ಪಡೆದು– 'ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ರಾಜ್ಯ ಭಾಷೆ ಅಥವಾ ಮಾತೃಭಾಷೆಯ ಶಿಕ್ಷಣ ಮಾಧ್ಯಮ ಜಾರಿಗೆ ತರುತ್ತೇನೆ' ಎಂದು ಘೋಷಿಸಿದರೆ ಅಥವಾ ಕನ್ನಡ ಸಾಹಿತ್ಯ ಪರಿಷತ್ 'ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ರಾಜ್ಯ ಭಾಷೆ ಅಥವಾ ಮಾತೃಭಾಷೆಯ ಶಿಕ್ಷಣ ಮಾಧ್ಯಮವನ್ನು ಜಾರಿಗೆ ತರುವವರೆಗೂ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸದೆ, ರಾಜ್ಯಭಾಷೆ ಅಥವಾ ಮಾತೃಭಾಷೆ ಎಂದರೆ ಕನ್ನಡ ಶಿಕ್ಷಣ ಮಾಧ್ಯಮಕ್ಕಾಗಿ ಹೋರಾಡುತ್ತದೆ' ಎಂದು ಘೋಷಿಸಿದ ನಾಳೆಗೇ ಕನ್ನಡ ಸಾಹಿತ್ಯ ಪರಿಷತ್ ಕಛೇರಿಗೆ ಬಂದು ನಾನು ಈ ಪ್ರಶಸ್ತಿ ಪಡೆಯುತ್ತೇನೆ, ಜೊತೆಗೇ ಈ ಕನ್ನಡ ಶಿಕ್ಷಣ ಮಾಧ್ಯಮದ ಹೋರಾಟದಲ್ಲಿ ನಾನೂ ನಿಮ್ಮೊಂದಿಗೆ ಜೊತೆಗೂಡುತ್ತೇನೆ. ಇದಕ್ಕೆ ಅವಕಾಶ ಕಲ್ಪಿಸಿಕೊಡಿ ಎಂದು ವಿನಂತಿಸುತ್ತೇನೆ. ಅಲ್ಲಿಯವರೆಗೂ ಕ್ಷಮೆ ಇರಲಿ.

ಇತಿ, ವಂದನೆಗಳೊಂದಿಗೆ,
ದೇವನೂರ ಮಹಾದೇವ

ಗಮನ:
ತಾವು ಪ್ರಕಟಣೆಗಾಗಿ ಕೇಳಿರುವ ನನ್ನ ಒಂದು ಕೃತಿಯನ್ನು ಈ ಮನವಿ ಪತ್ರದೊಂದಿಗೆ ಕಳುಹಿಸುತ್ತಿದ್ದೇನೆ.

# ಮುತ್ತು ಮುಳುಗ
# ಮತ್ತು ಇತರ

## ಒಂದು ಸ್ವಾಗತ ಭಾಷಣ!

ಲಂಕೇಶ್, ಅನಂತಮೂರ್ತಿ, ತೇಜಸ್ವಿ ಈ ಮೂವರನ್ನು ಈ ಸಭೆ ಒಟ್ಟಿಗೆ ಕೂರಿಸಿದೆ. ನಾನೀಗ ಇವರನ್ನು ಒಟ್ಟಿಗೆ ಸ್ವಾಗತಿಸಬೇಕಿದೆ. ಈ ಮೂವರನ್ನು ಒಂದು ಎಳೆ ಹಿಡಿದು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿ ಸಾಕಾಗಿ ನನ್ನ ಸೋಮಾರಿ ಮನಸ್ಸಿಗೆ ಕೊನೆಗೂ ಒಂದು ಎಳೆ ಸಿಕ್ಕಿತು. ಈ ಮೂವರು ಇಂದಿನ ವಿಷವಾಗಿರುವ ಜಾತಿ, ಧರ್ಮಗಳನ್ನು ಹೇಗೇಗೆ ಎದುರಿಸುತ್ತಾರೆ ಎಂಬುದನ್ನು ಹಿಡಿದು ಹೋಲಿಕೆ ಮಾಡತೊಡಗಿದೆ.

ಲಂಕೇಶರಿಗೆ ಹಿಂದೂ ಇರಲ್ಲ, ಮುಂದೂ ಇರಲ್ಲ. ತನ್ನ ಎದುರಿಗಿರುವುದು ಹೇಗಿದೆಯೋ ಹಾಗೆ ನಿಟ್ಟಿಸಿ ಎದುರಿಸುತ್ತಾರೆ, ಮತ್ತು ಒಂದು ತಾತ್ವಿಕ ಚಿಂತನೆಯಲ್ಲಿ ಆ ತತ್ವ ಏನು ಎತ್ತ ಅಂತ ನೋಡಲ್ಲ. ಅದರ ನಡಾವಳಿ ಏನು, ಅದರ ಸ್ವಭಾವ ಏನು ಇದನ್ನು ನೋಡ್ತಾರೆ. ಬುದ್ಧ ಇರಬಹುದು, ಬಸವಣ್ಣ ಇರಬಹುದು, ತನ್ನ ಸುತ್ತಲಿನವರೊಡನೆ ಯಾವ ರೀತಿ ನಡೆದುಕೊಳ್ತಾ ಇದ್ರು, ಒಬ್ಬ ಹುಷಾರಿಲ್ಲದೇ ಇದ್ರೆ ನೋಡದಿಕ್ಕೆ ಅವನ ಹತ್ರ ಹೋಗ್ತಿದ್ರಾ– ಇವನ್ನೆಲ್ಲ ಗಮನಿಸುತ್ತಾರೆ. ಇದು ಬಹುಶಃ ಧರ್ಮ ತನ್ನ ಹುಟ್ಟನ್ನು ಪಡೆದುಕೊಂಡು ಕೈಕಾಲು ಆಡಿಸುವಂತಹ ಸ್ಥಿತಿಯನ್ನು ಕಾಣುವ ಕಣ್ಣು.

ಅದೇ ಯು.ಆರ್. ಅನಂತಮೂರ್ತಿಯವರು ಜಾತಿ, ಧರ್ಮದ ಕೊಳಕನ್ನು ಅಕ್ಕಪಕ್ಕ ಸರಿಸಿ ಅದರಲ್ಲಿರೋ ತಿಳಿಜಲವನ್ನು ಉಳಿಸಿಕೊಳ್ಳಬೇಕು ಎನ್ನುವ ಮನಸ್ಸಿನಿಂದ ಪ್ರಯತ್ನಪಡ್ತಾರೆ. ಅದಕ್ಕೇ ಅವರು ಆರ್.ಎಸ್.ಎಸ್.ನ ಶಿವಾಜಿಯ ಹಿಂದೂ ಧರ್ಮವನ್ನು ಇಷ್ಟಪಡಲಿಲ್ಲ. ಋಷಿಗಳ ಕಾಲದಲ್ಲಿ ಯಾವುದಿತ್ತೋ ಅದರ ಕಡೆಗೆ ಅವರ ಕಣ್ಣು ಇರುತ್ತದೆ. ಅದೇ ತೇಜಸ್ವಿ

ಇವುಗಳ ಸಹವಾಸವೇ ಬೇಡ ಅಂದುಬಿಟ್ಟು ನಿರಾಕರಿಸಿ 'ಚಿದಂಬರ ರಹಸ್ಯ' ಕಾದಂಬರಿಯಲ್ಲಿ ಅವರು ಮಾಡಿದಂತೆ ಪ್ರೀತಿ ಉಳಿಸೋದಕ್ಕಾಗಿ, ಎಲ್ಲವನ್ನು ಧ್ವಂಸ ಮಾಡೋದಕ್ಕೆ ಕೂಡ ತಯಾರಾಗುತ್ತಾರೆ.

ಹೀಗೆ ಅನ್ನಿಸಿದ ಮೇಲೆ ಯಾಕೋ ಇದು ನಮ್ಮ ಸೃಷ್ಟಿ, ಸ್ಥಿತಿ, ಲಯಕ್ಕೆ ಸೆಟ್ ಆಗ್ತಾ ಇದೆಯಲ್ಲ ಅಂತ ಕಾಣತೊಡಗಿತು! ನನ್ನ ಚೇಷ್ಟೆಯ ಮನಸ್ಸು ಈ ಮೂವರಿಗೂ ಸಂಬಂಧಪಟ್ಟ ಧಿರಿಸು ಹಾಕಿಸಿ ನೋಡಿತು. ಯಾವುದೂ ಕೂಡ ಹೆಚ್ಚಿಗೆ ಕಷ್ಟಕೊಡಲಿಲ್ಲ. ಹತ್ತು ತಲೆ ಲಂಕೇಶರಿಗೆ ಆರು ತಲೆ ತೆಗೆದಿಟ್ಟರೆ ಅದೇನು ಕಷ್ಟ ಆಗಲಿಲ್ಲ. ಹತ್ತು ತಲೆ ಪರಿಣಾಮ ಮಾಡಿದವರು ಅವರು. ಆಮೇಲೆ ಅನಂತಮೂರ್ತಿಯವರಿಗೆ ಇರೋ ಡ್ರೆಸ್‌ಗೆ ಒಂದು ವಜ್ರದ ಹಾರ ಹಾಕಿದರೂ ಸಾಕಾಗುತ್ತೆ ಮತ್ತು ತೇಜಸ್ವಿಯವರಿಗೆ ಜೀನ್ಸ್ ಪ್ಯಾಂಟ್ ಕಿತ್ತಾಕಿ ಬದಲಾಗಿ ಚರ್ಮ ಸುತ್ತಿಬಿಟ್ಟರೂನೂ ಅಂಥಾ ಕೆಟ್ಟದಾಗೇನೂ ಕಾಣಲ್ಲ, ವ್ಯತ್ಯಾಸಾನೂ ಗೊತ್ತಾಗಲ್ಲ.

ನನ್ನ ಮೇಲೆ ಪರಿಣಾಮ ಮಾಡಿದ ಈ ನಮ್ಮ ಕಾಲಮಾನದ ಆದಿ, ಸ್ಥಿತಿ, ಅಂತ್ಯದಂತಿರುವ ಈ ಮೂವರನ್ನು ಎಲ್ಲರ ಪರವಾಗಿ ಸ್ವಾಗತಿಸುತ್ತೇನೆ.

## ಹುಟ್ಟಿನ ಜಾಡು ಹಿಡಿದು

ನಾನು ಇಲ್ಲಿ ಓದಿದವನು, ಇಲ್ಲೇ ಪರೀಕ್ಷೆ ಬರೆದವನು, ಹಾಗಾಗಿ ಇಲ್ಲಿ ಮಾತಾಡಲು ಪರೀಕ್ಷೆ ಭಯ ಸುಳಿದಾಡುತ್ತಿದೆ! ಪಾಸೋ ಫೇಲೋ ಒಂದಿಷ್ಟು ಮಾತಾಡುವೆ: ನಾವು, ನಮ್ಮ ಮನಸ್ಸು ಯಾವಾಗಲೂ ಒಂದು ಜಾಡಿಗೆ ಒಳಗಾಗುತ್ತಲೇ ಇರುತ್ತದೆ ಅಂತ ಕಾಣುತ್ತೆ. ನಡೆದ ದಾರಿ ರೂಢಿಯಾಗಿಬಿಡುವುದು. ಆಗ ಕಣ್ಣು ಮುಚ್ಚಿಕೊಂಡು ನಡಿಗೆ ನಡೆದುಬಿಡುತ್ತದೆ. ಆ ರೂಢಿ, ಆ ಜಾಡಿನಿಂದ ತಪ್ಪಿಸಿಕೊಂಡಾಗ ನಿಜ, ಕಕ್ಕಾಬಿಕ್ಕಿಯಾಗಬಹುದು, ದಿಕ್ಕು ಕಾಣದಾಗಬಹುದು, ಆದರೆ ಅಲ್ಲೆ ಆಗಲೇ ಒಂದು ಹೊಸತು ಹುಟ್ಟಿಗೆ ಅದೇ ಕಾರಣವಾಗಬಹುದು.

ಒಂದು ಕಲಾಕೃತಿ ಹುಟ್ಟಲ್ಲೂ ಹೀಗೇ ಇರಬೇಕಲ್ಲವೆ? ಕೆಲವು ಸಲ, ಕೆಲವು ಸಲವೇನು ಹೆಚ್ಚಿನ ಸಲ ನಾವು ಸೃಷ್ಟಿಸಿದ ನಮ್ಮ ಕೃತಿಯ ಜಾಡಿಗೆ ನಾವೇ ಹೆಚ್ಚು ಬೀಳುತ್ತೇವೆ! ಜಾಡಿನಿಂದ ತಪ್ಪಿಸಿಕೊಳ್ಳಲು ಕಷ್ಟ ಇರುವುದು ಇಲ್ಲೆ ಕಾಣುತ್ತದೆ. ಅದಕ್ಕಾಗಿ ಇರಬೇಕು, ಮತ್ತೆ ಮಗುವಾದ ಮಹಾನ್ ಚಿತ್ರಕಲಾವಿದ ವ್ಯಾನ್‌ಗೋ– 'ನೀನೊಬ್ಬ ಕಲಾವಿದನಲ್ಲ ಅನ್ನಿಸಿದಾಗ, ನೀನು ಕಲಾಸೃಷ್ಟಿಯನ್ನು ಆರಂಭಿಸು, ಆಗ ನಿನ್ನೊಳಗೊಬ್ಬ ಕಲಾವಿದ ಹುಟ್ಟುತ್ತಾನೆ' –ಎಂದು ಒಗಟಾಡುತ್ತಾನೆ.

ನಾನೊಮ್ಮೆ ಮಂಗಳೂರಿನಲ್ಲಾದ ಮುಸ್ಲಿಂ ಲೇಖಕರ ಸಮಾವೇಶ ಉದ್ಘಾಟನೆಯಲ್ಲಿ ಆಡಿದ ಮಾತುಗಳು ಹೀಗೆ: ಒಂದು ಕಲಾಕೃತಿಯ ಸೃಷ್ಟಿಯ ಪ್ರಕ್ರಿಯೆಯಲ್ಲಿ ಸ್ಥೂಲವಾಗಿ ಅಂದರೆ ತುಂಬಾ ಸ್ಥೂಲವಾಗಿ ಎರಡು ಬಗೆ ಗುರುತಿಸುವುದಾದರೆ– ತಾನು, ತನ್ನ ಸುತ್ತಲಿನ ಒಳಕ್ಕೆ ಇಳಿಯುವ ದಲಿತನೋ

ಮುಸ್ಲಿಮನೋ ಬ್ರಾಹ್ಮಣನೋ ಇನ್ನಾವನೋ ಯಾರೋ ಒಬ್ಬ ಲೇಖಕ ಕಲಾವಿದ ತನ್ನ ಆಳಕ್ಕೆ ಅಂದರೆ ತನ್ನ ಸುಪ್ತ ಮನಸ್ಸಿಗೆ ಇಳಿದಂತೆಲ್ಲಾ ದಲಿತ–ಮುಸ್ಲಿಂ–ಬ್ರಾಹ್ಮಣ ಈ ಹೊರ ಪೊರೆ ಕಳಚಿ ಮಾನವೀಯವಾಗಿ ಇನ್ನೂ ಹೆಚ್ಚೆಂದರೆ ಜೀವ ಸಂಕುಲದ ಸ್ಪಂದನವಾಗಿ ನಿಲ್ಲಬಹುದು. ಈ ಸ್ಪಂದನಕ್ಕೆ ತನ್ನ ಸುತ್ತಲ ಪರಿಸರ ಕಚ್ಚಾವಸ್ತುಗಳಂತೆ ತೊಡಗಬಹುದು. ಇರುವುದೆಲ್ಲಾ ಒಂದೇ ಜೀವ ಅನ್ನಿಸಿಬಿಡಲೂಬಹುದು.

ಅಥವಾ ಒಂದು ಕೃತಿಯ ಸೃಷ್ಟಿ ಪ್ರಕ್ರಿಯೆಯಲ್ಲಿ ಲೇಖಕ ಕಲಾವಿದ ತನ್ನೊಳಗೆ ಇನ್ನೊಂದು ಜೀವ ಮತ್ತೊಂದು ಮಗದೊಂದು ಜೀವ ಕಾಣುತ್ತ ಭಾವಿಸುತ್ತ ಹೋಗುವುದರಲ್ಲಿ ಈ ಹೋಗುವಿಕೆಯಲ್ಲಿ ಬ್ರಾಹ್ಮಣ ಮುಸ್ಲಿಂ ಆಗಲೂಬೇಕಾಗುತ್ತದೆ, ಮುಸ್ಲಿಂ ಬ್ರಾಹ್ಮಣನಾಗಲೂಬೇಕಾಗುತ್ತದೆ, ದಲಿತ ಮತ್ತೊಬ್ಬನೂ ಆಗಲೇಬೇಕಾಗಿದೆ, ಊರಾಚೆಯವನ ಕತೆ ಬರೆಯಲು ಹೊರಟ ಊರೊಳಗಿನ ಇತರೆಯವನು, ಅಸ್ಪೃಶ್ಯರನ್ನು ತನ್ನ ಒಳಬಿಟ್ಟುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಹುಟ್ಟು ಇರುವುದಿಲ್ಲ. ತನ್ನೊಳಕ್ಕೆ ಬಿಟ್ಟುಕೊಳ್ಳದಿದ್ದರೆ ಅದು ಮಡಿಯಾಗಿ ಮಡಿದ ಸ್ಥಿತಿಯಾಗಿಬಿಡುತ್ತದೆ. ಅಲ್ಲಿ ಹುಟ್ಟು ಇರುವುದಿಲ್ಲ.

ಒಡಲಾಳದ ಸಾಕವ್ವನ ಬಗ್ಗೆ ಮೈಸೂರಿನ ಶಾರದಾ ವಿಲಾಸ ಕಾಲೇಜಿನ ಬ್ರಾಹ್ಮಣ ಉಪಾಧ್ಯಾಯರೊಬ್ಬರು ಹೇಳಿದ್ದು: 'ನಾನು ತುಂಬಾ ಸಂಪ್ರದಾಯಸ್ಥ. ಯಾರೊಬ್ಬ ಅಸ್ಪೃಶ್ಯನನ್ನೂ ಮುಟ್ಟಿಸಿಕೊಂಡಂಥವನಲ್ಲ. ಒಡಲಾಳ ಓದಿದೆ. ಆ ಸಾಕವ್ವ, ನನ್ನ ಅಜ್ಜಿ ಅನ್ನಿಸಿಬಿಟ್ಟಳು. ನನ್ನೊಳಗೆ ನೆಲೆಸಿಬಿಟ್ಟಳು'. ಮುಟ್ಟುವುದೆಂದರೆ ಬಹುಶಃ ಇದೇ ಅಲ್ಲವೆ?

ನಮ್ಮ ಸಾಮಾಜಿಕ ಕಾರಣವಾಗಿ ಸಾಹಿತ್ಯದಲ್ಲೂ ಎದ್ದು ಕಾಣುವಂತೆ ಮಹಿಳೆ, ದಲಿತ, ಮುಸ್ಲಿಂ ಇತ್ಯಾದಿ ವಿಂಗಡಣೆಗಳು ಇದೆ. ಇದು ಎಷ್ಟಿರಬೇಕು? ಎಲ್ಲಿವರೆಗೆ ಇರಬೇಕು? ಇದನ್ನು ಕೋಳಿಯೊಂದು ತನ್ನ ಮೊಟ್ಟೆಗೆ ಕಾವು ಕೊಡುವ ಕಾಲಾವಧಿಯವರೆಗೆ ಮಾತ್ರ ಸಾಕು– ಎಂದು ಹೇಳಬಹುದೆ? ಅಥವಾ ಪ್ರಾಥಮಿಕ ಶಾಲೆವರೆಗೆ ಮಾತ್ರ. ಇಲ್ಲದಿದ್ದರೆ ಗಡ್ಡ ಬೆಳ್ಳಗಾಗಿ ಮುದುಕನಾದರೂ ಪ್ರಾಥಮಿಕ ಶಿಕ್ಷಣವನ್ನೇ ಮಾಡುವಂತೆ, ಹಾಗೇ ಇಲ್ಲೂ?

ಆದರೆ ಸಮಾಜ ಹೀಗೆ ನೋಡುತ್ತಿಲ್ಲ. ಅರ್ಥ ಮಾಡಿಸುವುದಕ್ಕಾಗಿ ಉಲ್ಟಾ ಮಾಡಿ ಹೇಳುವೆ. ಈಗ, 'ಬ್ರಾಹ್ಮಣ ಲೇಖಕರಲ್ಲಿ ಶಿವರಾಮ ಕಾರಂತರ ನಂತರ ಅಡಿಗರು ತುಂಬಾ ಮಹತ್ವದ ಲೇಖಕರು'– ಎಂದರೆ ಇದು ಏನು

ಅನ್ನಿಸುತ್ತದೆ? ಹೇಗೆ ಕಾಣಿಸುತ್ತದೆ? ಕಾರಂತರದು ಯಾವ ಯಾವುದೋ ದಕ್ಷಿಣ ಕನ್ನಡ ಜಿಲ್ಲೆ ಕೆರೆ ಮಣ್ಣು. ಕುವೆಂಪು ಯಾವು ಯಾವುದೋ ಮಲೆನಾಡ ಕೆರೆ ಮಣ್ಣು, ಮತ್ತೊಬ್ಬರು ಮತ್ಯಾವುದೋ ಕೆರೆ ಮಣ್ಣು ಹದ ಮಾಡಿ ವಿಗ್ರಹಗಳನ್ನು ಮಾಡಿದರೆ ನಾವು ನೋಡುವಾಗ ಹೋಲಿಸುವಾಗ ಮಣ್ಣನ್ನು ಹೋಲಿಸುತ್ತೇವೆಯೆ? ಆ ವಿಗ್ರಹಗಳು ಅದರೊಳಗೆ ಆಡುವ ಜೀವ, ಕಾಣಿಸುವ ಕಾಣ್ಕೆಯನ್ನಲ್ಲವೆ ನಾವು ಕಾಣಬೇಕಾದುದು? ಆದರೆ ಯಾಕೋ ಮುಸ್ಲಿಮರು ದಲಿತರು ಮಹಿಳೆಯರ ಸೃಷ್ಟ್ಯಾತ್ಮಕತೆಗೆ ಬಂದಾಗ ವಿಗ್ರಹ ಮಾಡಲು ಬಳಸುವ ಮಣ್ಣಿನ ಕಡೆಗೆ ಅಂದರೆ ಜಾತಿ ಮತ ಪ್ರತ್ಯೇಕತೆ ಇತ್ಯಾದಿಗಳಿಗೆ ಸಂಬಂಧಿಸಿದ ಸಾಮಗ್ರಿ ಕಡೆಗೆ ನೋಡಲಾಗುತ್ತಿದೆಯೇನೋ ಅಂತ ಒಂದೊಂದು ಸಲ ಅನ್ನಿಸುತ್ತದೆ. ಇದು ನಿಜವೇ ಆಗಿದ್ದರೆ ಭಾರತದ ಪಟ್ಟಭದ್ರ ಮನಸ್ಸು ಹೆಣ್ಣು–ದಲಿತ–ಮುಸ್ಲಿಮರನ್ನು ತನ್ನ ಮನದಾಚೆ ಇಟ್ಟಿರಬಹುದೇ?– ಈ ಅನುಮಾನ ಹುಟ್ಟುತ್ತದೆ.

ಹುಟ್ಟಿನಂತೆಯೇ ಒಂದು ಕಲಾಕೃತಿ ಹುಟ್ಟುವುದೂ ಹೇಗೋ ಏನೊ! ಯಾವುದೋ ಒಂದು ನಮ್ಮೊಳಗೆ ವಾಸಿಸುತ್ತ ಕಂಪನ ತರಂಗ ಎಬ್ಬಿಸುತ್ತ ರೂಪಾಂತರ ಪಡೆದು ಒಡಮೂಡಲೂಬಹುದು. ಇದು ನಮ್ಮನ್ನು ಆವರಿಸಿಕೊಳ್ಳಲೂಬಹುದು. ಬೇಡನೊಬ್ಬ ಕ್ರೌಂಚಜೋಡಿಗೆ ಬಾಣಬಿಟ್ಟ. ಒಂದು ಸತ್ತು ಇನ್ನೊಂದು ರೋದಿಸಿತು. ಆ ಅಗಲಿಕೆಯ ಅನುಭವವನ್ನಷ್ಟೆ ವಾಲ್ಮೀಕಿ ಬರೆದಿದ್ದರೆ ಅದೊಂದು ಶೋಕಗೀತೆಯೋ ಭಾವಗೀತೆಯೊ ಆಗಿಬಿಡುತ್ತಿತ್ತು. ಆ ಅಗಲಿಕೆಯ ಭಾವವನ್ನು ಭೂಮಿ ಒಳಗೆ ಹರಿಯುವ ಅಂತರಗಂಗೆಯಾಗಿಸಿ ಅದಕ್ಕೆ ಭೂಮಿ ಮೇಲಿನ ಅಗಲಿಕೆಯ ವಿದ್ಯಮಾನಗಳ ಕೂಡಿಸಿದಾಗ ಅದು ರಾಮಾಯಣ ಆಯ್ತು. ಮಹಾಕಾವ್ಯವಾಯ್ತು. ಹಾಗಾದರೆ ಅನುಭವ ಎಂದರೇನು? ಈ ಪ್ರಶ್ನೆ ನನ್ನನ್ನು ತುಂಬಾ ಎಳೆದಾಡಿದೆ!

ಆಯ್ತು, ಈ ಮುಗಿಯದ ಕತೆಗೆ ನನ್ನ ಕಾವ್ಯಮೀಮಾಂಸೆ ಏನು ಎಂದು ತಿಳಿಸಿ ಮುಗಿಸುತ್ತೇನೆ. ಧರ್ಮರಾಯನೇ ತಪ್ಪು ಮಾಡಿದಾಗ ಕುಮಾರವ್ಯಾಸ 'ಸದ್ಗುಣಕ್ಕೆ ಸಿವಿರೆದ್ದಂತಾಯ್ತು' ಎಂದು ಉದ್ಗಾರ ಮಾಡುತ್ತಾನೆ. 'ದುರ್ಗುಣಕ್ಕೆ ಸಿವಿರೆದ್ದಂತಾಯ್ತು' ಎಂದರೆ ಸಹಜ ಅನ್ನಿಸಿಬಿಡುತ್ತಿತ್ತು. ದುರ್ಗುಣಕ್ಕೆ ಸಿವಿರೇಕೆ, ಚಕ್ಕೆ ಎದ್ದರೂ ತುಂಡು ತುಂಡಾಗಿಸಿದರೂ ಏನೇನೂ ಅನ್ನಿಸುತ್ತಿರಲಿಲ್ಲ. ಆದರೆ ಸದ್ಗುಣಕ್ಕೆ ಸಣ್ಣ ಸಿವಿರೆದ್ದರೂ ಅದು ಮನಸ್ಸಿಗೇ ಚುಚ್ಚಿದಂತಾಗುವುದು ಹೆಚ್ಚು ಪರಿಣಾಮಕಾರಿ ಎಂಬುದು;

ಬೇಂದ್ರೆ ತಾನು ಹುಟ್ಟಿದ ಮನೆ ತೋರಿಸುತ್ತ ತನ್ನ ಬಾಲ್ಯದ ಪ್ರತಿ ವಿವರಗಳನ್ನೂ ತನ್ನ ಗೆಳೆಯನಿಗೆ ವಿವರಿಸಿ ವಿವರಿಸಿ ಹೇಳುತ್ತಿದ್ದಾಗ ಆ ಗೆಳೆಯ 'ಇವೆಲ್ಲಾ ನಿಮ್ಮ ಪದ್ಯಗಳಲ್ಲಿ ಇಲ್ಲವಲ್ಲ' ಎಂದಾಗ ಬೇಂದ್ರೆ ಹೇಳಿದ ಮಾತು– 'ಆ ವಿವರಗಳನ್ನೆಲ್ಲಾ ಸುಟ್ಟು ಎನರ್ಜಿ ಮಾಡಿ ಕಾವ್ಯ ಮಾಡಿದ್ದು' ಎಂದದ್ದು;

ಅಭಿಮನ್ಯುವಿನ ಸಾವಿನ ಪ್ರಸಂಗದಲ್ಲಿ ಭೀಮನ ಕಣ್ಣಂಚಿನಲ್ಲಿ ಬಂದ ಒಂದೆರಡು ಕಣ್ಣಹನಿಗಳು ಕುಮಾರವ್ಯಾಸನಿಗೆ 'ಒಳಗುರಿವ ಹಸಿಮರನ ಈ ತುದಿಯೊಳಗೆ ಜಲವುಗುವವೊಲು' ಕಾಣುವ ಬಗೆ;

ಈ ಕಾಣ್ಕೆ ಜೊತೆಗೇ ಕುವೆಂಪು ಅವರ 'ಸತ್ಯಸ್ಯ ಸತ್ಯ' ಇವು, ಇಂಥವು.

# ಹಿರಿಯ ವಿದ್ಯಾರ್ಥಿಗಳ ಬೀಳ್ಕೊಡುತ್ತಾ ಪಂಪನ ಜೊತೆ

ಕನ್ನಡ ಕಿರಿಯ ಎಂ.ಎ. ವಿದ್ಯಾರ್ಥಿಗಳ ಒಂದು ದಂಡು ಬಂದು, ಹಿರಿಯ ವಿದ್ಯಾರ್ಥಿಗಳಿಗೆ ಬೀಳ್ಕೊಡಲು ನನ್ನನ್ನು ಕರೆದಾಗ ನಿಜವಾದ ಅರ್ಥದಲ್ಲಿ ನಾನೂ ಕಿರಿಯ ವಿದ್ಯಾರ್ಥಿಯಾಗಿದ್ದೆ. ಪಂಪಭಾರತದ ಗದ್ಯಾನುವಾದ ಓದುತ್ತಿದ್ದೆ.

ಹಳಗನ್ನಡ ಓದಲು ಬಾರದ ಕಿರಿಯ ವಿದ್ಯಾರ್ಥಿಯಾದ ನನಗೆ ಪಂಪ ತಿಳಿದಿದ್ದುದು ಕೇವಲ ಕೆಲವು ಉದ್ಧರಿಸುವ ವಾಕ್ಯಗಳಿಂದ ಮಾತ್ರ– ಸೂಳ್‌ಪಡೆಯಲಪ್ಪುದು ಕಾಣಾ ಮಹಾಜಿರಂಗದೊಳ್, ಬೇಡುವೊಡೆ, ನೀನೊಲಿದ ರಾಜ್ಯಲಕ್ಷ್ಮಿ, ನೆತ್ತಮನಾಡಿ, ಮಾನವಜಾತಿ ತಾನೊಂದೇ ವಲಂ, ಆರಂಕುಶ ಇಟ್ಟೊಡಂ....' ಇಂಥವು. ಪಂಪನ ಬಗ್ಗೆ ಚರ್ಚಿತವಾಗುತ್ತಿದುದು ಕೂಡ ನನಗೆ ತಿಳಿದಂತೆ ಆತನ ವರ್ಣನಾಕೌಶಲ್ಯ, ಪಾತ್ರ ಚಿತ್ರಣ, ಮೂಲದೊಡನೆ ಹೋಲಿಕೆ ಇತ್ಯಾದಿ.

ಇಷ್ಟು ಮಾತ್ರ ಅಂದಾಜಿದ್ದ ನಾನು, ಪಂಪನ ಗದ್ಯಾನುವಾದ ಓದುತ್ತ ಬೆರಗಾಗತೊಡಗಿದೆ. ಪ್ರೊ. ಎಲ್.ಬಿ. ಅವರು ಪಂಪನ ಲಯ ಹಿಡಿದು ಅನುವಾದ ಮಾಡಿದ್ದಾರೆ. ಪಂಪನ ಆಂತರ್ಯ ಬಚ್ಚಿಟ್ಟುಕೊಂಡಿರುವುದೇ ಆತನ ಲಯದಲ್ಲಿ, ಈ ಲಯದ ಕನ್ನಡ ಇಲ್ಲಿ ನರ್ತಿಸಿದೆ. ಗಂಭೀರ ಪಾಂಡಿತ್ಯದೊಳಗೆ ಮುಕ್ತ ಸೃಷ್ಟ್ಯಾತ್ಮಕತೆಯ ಚೆಲುವಿರುವ ಪ್ರತಿಭೆ– ಗುರುಗಳಾದ ಎಲ್.ಬಿ. ಅವರು ಅನ್ನಿಸಿತು. ಪಂಪನ ಪುಲಿಗೆರೆಯ ತಿರುಳ್ ಕನ್ನಡದ ಎಲಾಸ್ಟಿಕ್‌ತನ ಹೇಗಿದೆ ಅಂದರೆ, ಈ ಕನ್ನಡವನ್ನು ದ್ರವ್ಯ ಮಾಡಿಕೊಂಡರೆ ಈ ಯುಗದ ಕನ್ನಡ ಮಾಧ್ಯಮದ ಮೆಡಿಕಲ್, ಲಾ, ಇಂಜಿನಿಯರಿಂಗ್ ವಿಜ್ಞಾನಕ್ಕೂ

ಅಳವಡಿಸಬಹುದಾದ ಸಾಧ್ಯತೆ ಉಳ್ಳದ್ದು ಅನ್ನಿಸಿತು. ಪಂಪನ ಭಾಷೆ ಬಗ್ಗೆ ಇಲ್ಲೇ ಒಂದು ಮಾತು. ಪಂಪ ಬಳಸಿರುವುದು ಯಥಾವತ್ ಪುಲಿಗೆರೆ ಕನ್ನಡ ಅಲ್ಲ. ಪುಲಿಗೆರೆಯ ಕನ್ನಡವನ್ನು ಜರಡಿಯಾಡಿಸಿ ಕಾಯಿಸಿ ಭಟ್ಟಿ ಇಳಿಸಿ ಅದರ ತಿರುಳ ದನಿ ತೆಗೆದು ಆ ನುಡಿಗಟ್ಟಿನ ನಾಡಿ ಹಿಡಿದು ನಡೆಸುತ್ತಾನೆ, ಸವಾರಿ ಮಾಡುತ್ತಾನೆ, ಹಿಗ್ಗಾಮುಗ್ಗಾ ದೌಡಾಯಿಸುತ್ತಾನೆ.

ಹಾಗೇ ಪಂಪನ ಕಾವ್ಯ, ಓದುಗನ ಸ್ಪಂದನ ಸಾಮರ್ಥ್ಯವನ್ನು ಹೆಚ್ಚಿಗೆ ಕೇಳುತ್ತದೆ. ಉದಾಹರಣೆಗೆ ಪಂಪಭಾರತದಲ್ಲಿ–ಅರ್ಜುನ ಇಂದ್ರಲೋಕವನ್ನು ಯಾಗಕ್ಕಾಗಿ ದೋಚುತ್ತಾನೆ. ಎಲ್ಲವನ್ನೂ ದೋಚಿ ನಡೆಯುವಾಗ ಇಂದ್ರಾಣಿಯ ಕನ್ನಡಿಯನ್ನು ಮಾತ್ರ ಅವಳ ಬಳಿಯೇ ಬಿಟ್ಟು ನಡೆಯುತ್ತಾನೆ. ಪಂಪ ಇದನ್ನು ಒಂದು ವಾಕ್ಯದಲ್ಲಿಟ್ಟು ನಡೆಯುತ್ತಾನೆ. ಓದುಗನ ಸ್ಪಂದನ ಸಾಮರ್ಥ್ಯಕ್ಕೆ ಅನುಗುಣವಾಗಿ ಈ ಒಂದು ವಾಕ್ಯ ಸ್ಪಂದಿಸುತ್ತಿರುತ್ತದೆ. ಇಂದ್ರಾಣಿ ಹತ್ತಿರ ಕನ್ನಡಿ ಮಾತ್ರ ಇದೆ. ಉಳಿದುದೆಲ್ಲಾ ದೋಚಲ್ಪಟ್ಟಿದೆ. ಮೂಗುಬೊಟ್ಟು ಇಲ್ಲ. ಓಲೆ ಇಲ್ಲ. ತಲೆ ಕತ್ತಿಗೆ ಹಾಕಿಕೊಳ್ಳೋ ಸರ ಪರ ಇಲ್ಲ. ಕನ್ನಡಿ ಮಾತ್ರ ಇದೆ. ಆಕೆ ಆ ಕನ್ನಡಿಯಲ್ಲಿ ಮುಖ ನೋಡಿಕೊಳ್ಳಲು ಸಾಧ್ಯವೆ? ನೋಡಿಕೊಂಡರೆ ಕಾಣುವುದೇನು? ನೋಡಿಕೊಂಡರೆ ದುರಂತವನ್ನು ನೋಡಿಕೊಂಡಂತಾಗುತ್ತದೆ. ಇಡೀ ದುರಂತವನ್ನು ಕನ್ನಡಿ ಮೂಡಿಸುತ್ತದೆ. ಈ ಒಂದು ವಾಕ್ಯವು ಗ್ರೀಕ್ ದುರಂತ ನಾಟಕದ ಬಿತ್ತನೆ ಬೀಜದಂತೆ ಸತ್ವ ಪಡೆದಿದೆ ಅನ್ನಿಸಿತು.

ಪಂಪಭಾರತ ಮುಗಿಸಿ ಆದಿಪುರಾಣ ಆರಂಭಿಸಿ ಸುಮಾರು ನೂರು ಪುಟ ಓದುವುದರೊಳಗೇನೆ ಆದಿಪುರಾಣವೇ ಹೆಚ್ಚು ಸತ್ವಯುತವಾದುದು, ಹೆಚ್ಚಿನ ಸವಾಲು ಸಾಧ್ಯತೆ ಇರುವುದು ಅನ್ನಿಸಿತು. ಈ ಸಂದರ್ಭದಲ್ಲೇ ಯಾವುದಕ್ಕೋ ಡಾ. ಯು.ಆರ್. ಅನಂತಮೂರ್ತಿ ಅವರಿಗೆ ಫೋನ್ ಮಾಡಿದಾಗ ಆದಿಪುರಾಣದ ಬಗ್ಗೆ ಈ ನನ್ನ ಅನಿಸಿಕೆ ತಿಳಿಸಿದೆ. ಅನಂತಮೂರ್ತಿಯವರು– 'ಕುವೆಂಪು ಅವರಿಗೂ ಇದೇ ಅಭಿಪ್ರಾಯವಿತ್ತು' ಎಂದುದು ಕೇಳಿ ಖುಷಿ ಆಯ್ತು. ಆಮೇಲೆ ಅವರು 'ಆದರೆ ಆದಿಪುರಾಣದಲ್ಲಿ ಜೈನಧರ್ಮದ ಪ್ರಸ್ತಾಪ ಹೆಚ್ಚಿರಬಹುದಲ್ಲವೇ?' ಅಂದರು. ಅದಕ್ಕೆ ನಾನೆಂದೆ– 'ಹಾಗಂತ ತಿಳ್ಕಂಡು ಮಿಸ್ ಮಾಡ್ಕೋಬೇಡಿ. ದೇವಸ್ಥಾನದೊಳಗೆ ಏನೇ ಮಾಡಿದರೂ, ಎಷ್ಟೇ ಮಾಡಿದರೂ ಯಾರೂ ಅಪಾರ್ಥ ಮಾಡಿಕೊಳ್ಳಲಾರರು ಅಂತ ಆದಿಪುರಾಣದಲ್ಲಿ ಪಂಪನು ಕಾಮ, ಪ್ರೇಮ ಹೆಣ್ಣುಗಳನ್ನು ತುಂಬಿ ತುಳುಕಾಡಿಸಿದ್ದಾನೆ!' ಅಂದೆ.

ಆದಿಪುರಾಣದಲ್ಲಿ ಅಲ್ಲಲ್ಲಿ ಬರುವ ಜೈನ ಧರ್ಮಶಾಸ್ತ್ರದ ವಾಕ್ಯ, ಸಾರಾಂಶಗಳನ್ನು ಆಧ್ಯಾತ್ಮಿಕತೆ ಎಂದು ನಾನು ಅಂದುಕೊಳ್ಳಲಾರೆ. ಮುಂದೆ ಆದಿಪುರಾಣ ಓದುತ್ತಾ ನನಗನ್ನಿಸಿತು– ಭರತ, ಬಾಹುಬಲಿ ಬೇರೆ ಬೇರೆ ಅಲ್ಲ. ಬಾಹುಬಲಿಯ ಬಹಿರಂಗವೇ ಭರತ ಅನ್ನಿಸಿತು, ಭರತನ ಅಂತರಂಗವೇ ಬಾಹುಬಲಿ ಅನ್ನಿಸಿತು. ಅಂತರಂಗ ಬಹಿರಂಗ ಬೇರೆಯಾದರೆ ಒಬ್ಬ ವ್ಯಕ್ತಿಯೊಳಗೇ ಯುದ್ಧವಾಗುತ್ತದೆ. ಅದೇ ಪ್ರಖ್ಯಾತ ಭರತ ಬಾಹುಬಲಿ ಯುದ್ಧ. ಅಂತರಂಗ ಬಹಿರಂಗ ಒಂದಾದರೆ, ಅಂದರೆ ಭರತ ಬಾಹುಬಲಿ ಒಂದಾದರೆ ತಂದೆ ವೃಷಭನಾಥನಂತೆ ಪೂರ್ಣ ಆಗುತ್ತಾರೆ. ಅಲ್ಲಿ ಯುದ್ಧ ಇರುವುದಿಲ್ಲ. ಕಾವ್ಯದೊಳಗಿಂದಲೇ ಇಂಥ ಆಧ್ಯಾತ್ಮಿಕತೆಯು ಒಡಮೂಡುತ್ತದೆ. ಇನ್ನೂ ಅನೇಕ ಕಡೆ ಭೂಗತವಾಗಿವೆ. ಮತ್ತೊಂದು ಉದಾಹರಣೆ ಎಂದರೆ ನೀಲಾಂಜನೆಯ ನೃತ್ಯ. ಈ ನೃತ್ಯ ಸೂರ್ಯಪ್ರಕಾಶದಂತೆ ನಮ್ಮನ್ನು ಮರೆಸುವಂತಿದೆ. ಲೋಕದ ಮೋಹಗಳ ಸೆಳೆತದಂತೆ ಈ ನೃತ್ಯ ಎಲ್ಲರನ್ನೂ ತನ್ನ ಸುಳಿಯೊಳಗೆ ಸೆಳೆದುಕೊಂಡು ಆ ಇಂದ್ರನ ಆಸ್ಥಾನದಲ್ಲಿ ಲೋಕವೇ ಕುಣಿಯುವಂತೆ ನರ್ತಿಸುತ್ತಾ ಇರುವಾಗ ನೀಲಾಂಜನೆ ಕಾಲವಶವಾಗಿಬಿಡುತ್ತಾಳೆ. ಇದನ್ನು ಅರಿತ ಇಂದ್ರ ರಸಭಂಗವಾಗದಂತೆ ಯಾರ ಅರಿವಿಗೂ ಬಾರದಂತೆ ಯಂತ್ರದ ಭ್ರಮಾನೀಲಾಂಜನೆಯಿಂದ ನೃತ್ಯ ಮುಂದುವರಿಸುತ್ತಾನೆ. ಈ ಕೈಚಳಕ ಯಾರಿಗೂ ಅರಿವಾಗುವುದಿಲ್ಲ. ಆ ನೃತ್ಯದ ಪ್ರಖರತೆಯ ಮಿಥ್ಯದ ನಡುವೆ, ಹಣತೆಯ ಬೆಳಕಿನಂತೆ ಇರುವ ಸತ್ಯ ಯಾರಿಗೂ ಅರಿವಾಗುವುದಿಲ್ಲ. ಆದರೆ ಅರಿವು ಪಡೆದ ಪೂರ್ಣದೃಷ್ಟಿಯ ತೀರ್ಥಂಕರನಾಗುವ ವೃಷಭನಾಥನಿಗೆ ಮಾತ್ರ ಕಾಣಿಸುತ್ತದೆ. ಈ ಕಾಣಿಸುವಿಕೆ ಆತನ ಜೀವನದರ್ಶನಕ್ಕೆ, ವೈರಾಗ್ಯಕ್ಕೆ ಕಾರಣವಾಗುತ್ತದೆ. ಇದ್ದರೆ, ಆಧ್ಯಾತ್ಮಿಕತೆ ಹೀಗಿದೆ.

ಆಮೇಲೆ, ಪಂಪನ ಬಗ್ಗೆ ಕಲಿ ಮತ್ತು ಕವಿ ಎಂದು ಎಲ್ಲರೂ ಹೇಳುವುದು ಜನಪ್ರಿಯ ಮಾತು. ಆತ ಕವಿಯೇನು? ಮಹಾಕವಿಯೇ. ಆದರೆ ಕಲಿ ಅನ್ನುವುದರ ಬಗ್ಗೆ ನನಗ್ಯಾಕೋ ಡೌಟು. ಆತ ಯುದ್ಧರಂಗಕ್ಕೆ ಹೋಗುತ್ತಿದ್ದ, ಅನುಮಾನವಿಲ್ಲ. ಅಲ್ಲಿ ರಾಜನ ಅಕ್ಕಪಕ್ಕ ಕ್ಷೇಮವಾಗಿ ಕೂತು ಯುದ್ಧ ನೋಡುತ್ತಿದ್ದ, ಯುದ್ಧಕ್ಕಿಂತ ಹೆಚ್ಚಾಗಿ ಆನೆಗಳನ್ನು, ಆನೆಯ ಮದೋದಕವನ್ನು ನೋಡುತ್ತಿದ್ದ ಎಂದೇ ನನ್ನ ಅಂದಾಜು. ಜೊತೆಗೆ ಕನ್ನಡಿಯಲ್ಲಿ ತನ್ನನ್ನು ತಾನೇ ನೋಡಿಕೊಳ್ಳುವ ಗೀಳು ಪಂಪನಿಗೆ ಇದ್ದಂತೆ ಇದೆ. ಪಂಪ ಈಗೇನಾದರೂ ಬದುಕಿದ್ದರೆ ಅಂಚಿಕಡ್ಡಿ ಊರ್ವಶಿಯರು ಮಾತ್ರ ಆಯ್ಕೆ ಆಗುವಂತಿರುವ

ವಿಶ್ವಸುಂದರಿ ಮಾನದಂಡಗಳನ್ನು ಪ್ರತಿಭಟಿಸುತ್ತಿದ್ದ ಹಾಗೂ ಟಿ.ವಿ.ಯಲ್ಲಿ ಬರುವ ಎಫ್ ಚಾನಲ್ ಆಫ್ ಮಾಡಿಬಿಡುತ್ತಿದ್ದ ಎಂದು ಕಾಣುತ್ತದೆ. ಈ ಅಭಿರುಚಿಯಲ್ಲಿ ಪಂಪ ದಕ್ಷಿಣ ಧ್ರುವವಾದರೆ ನಮ್ಮ ಲಂಕೇಶ್ ಉತ್ತರಧ್ರುವದಲ್ಲಿ ನಿಲ್ಲುತ್ತಾರೆ. ಇಬ್ಬರೂ ಪರಸ್ಪರ ಸಂಧಿಸಿದ್ದರೆ 'ಛೇ ಇವನಿಗೆ ಒಳ್ಳೇ ಟೇಸ್ಟ್ ಇಲ್ಲ' ಅಂತ ಪರಸ್ಪರ ಅಂದುಕೊಂಡಿರಲೂಬಹುದು.

ಇಷ್ಟಿದ್ದೂ ಪಾಪ ಪಂಪ, ತನ್ನ ಜೀವಿತಾವಧಿಯಲ್ಲಿ ಪ್ರಸಿದ್ಧಿ ಪಡೆದಿರಲಾರನೆಂದೇ ನನಗನ್ನಿಸುತ್ತದೆ. ಕುಮಾರವ್ಯಾಸ ದೇಸಿಯನ್ನು ಬಳಸಿಕೊಂಡಿದ್ದರೆ ಪಂಪ ದೇಸಿಯೇ ತಾನಾಗುತ್ತಾನೆ. ಹಳ್ಳಿಗನೊಬ್ಬ ತನ್ನ ಹಳ್ಳಿಗತನದಲ್ಲೇ ಚಕ್ರವರ್ತಿಯ ಗಾಂಭೀರ್ಯ ಘನತೆ ಪಡೆದದ್ದು ಪಂಪನ ದೇಸಿಯತೆ. ಇದನ್ನು ಕಂಡು ಆ ಕಾಲದ ಧಾರ್ಮಿಕರು, ಪಂಡಿತರು ಛೀ ಥೂ ಅಂದಿರುತ್ತಾರೆ. ಆ ಕಾಲದಲ್ಲಿ ಪಂಪ ಅರ್ಥವಾಗಿದ್ದರೆ ರನ್ನನಂಥ ಕವಿಗಳಿಗೆ ಹಾಗೂ ಇದ್ದಿರಬಹುದಾದ ಬೆರಳೆಣಿಕೆಯ ಕೆಲವು ಸಹೃದಯಕ್ಕೆ ಮಾತ್ರ ಅನ್ನಿಸುತ್ತದೆ.

ಹಿರಿಯ ವಿದ್ಯಾರ್ಥಿಗಳಿಗೆ ಹಾರೈಕೆ ಅಂತ ನಾನು ಮಾತಾಡಬೇಕಿತ್ತು. ಏನೆಂದು ಹಾರೈಸಲಿ? ನನ್ನಂತೆ ಕಿರಿಯ ವಿದ್ಯಾರ್ಥಿಯಾಗಿಯೇ ಉಳಿಯಿರಿ ಎಂದು ಹಾರೈಸುವೆ.

## ಖಾಸನೀಸ ಮುಖೇನ ಸಣ್ಣಕಥೆ

ಮಾಸ್ತಿ ಅನಂತರದ ಕನ್ನಡದ ಸಣ್ಣ ಕಥೆಗೆ ಅನಂತಮೂರ್ತಿಯವರೂ ಚಿತ್ತಾಲರೂ ರಕ್ತದಂಥವರು. ಮಾಸ್ತಿಯವರೇ ವಿಕಸಿತವಾಗಿ ಬರೆದಂತೆ ಚಿತ್ತಾಲರ ಕಥೆಗಳು ಕಾಣಬರುತ್ತವೆ. ಚಿತ್ತಾಲರು ಕನ್ನಡದ ಸಣ್ಣಕಥೆಯ ರೂಪಕ್ಕೆ ಕಟ್ಟುಹಾಕಿದರು ಎಂದು ಯಾವ ಮಗನೂ ಹೇಳಬೇಕು ಹಾಗೆ ಅವರ ಕಥೆಗಳಿವೆ. ಅವರ ಕಥೆಗಳು ತುಂಬಾ ಕರಾರುವಾಕ್ಕು ಹಾಗೂ ಕುಶಲ ನಿಪುಣತೆಗಳಿಂದ ಮೂಡುತ್ತ ಅದಕ್ಕಾಗಿ, ಬರುವ ಸಂಗತಿಗಳೂ ಪದ ಪದಗಳೂ ಕೆಲಸ ಮಾಡುತ್ತವೆ. ಉದಾಹರಣೆಗೆ 'ಛಲ' ಹೆಸರಿನ ಕಥೆಯಲ್ಲಿ ಛಲ ಇಮ್ಮಡಿಗೊಂಡು ಬೆಳೆದು ನಿಲ್ಲುತ್ತದೆ. 'ಸೆರೆ' ಕಥೆಯಲ್ಲಿ ಸೈಕಾಲಜಿ ಥಿಯರಿಯೊಂದು ಆ ಕಥೆಯೊಳಗೇ ಹುಟ್ಟಿದಂತೆ ಪ್ರತಿಪಾದಿತವಾಗಿದೆ. ಅಂದರೆ ಆಯಾಯ ಕಥೆ ಹೆಸರುಗಳು ನಿರೀಕ್ಷೆ ಮೀರಿಸಿಕೊಂಡು ರುಜುವಾತು ಆಗುತ್ತವೆ. ಕಥೆ ಓದಿ ಮುಗಿಸಿದ ಮೇಲೆ ಕಥೆ ಹರಳಿನ ಆಕೃತಿ ಪಡೆದುಕೊಂಡು ಕಣ್ಣಮುಂದೆ ನಿಲ್ಲುತ್ತದೆ. ಇಷ್ಟು ಇದ್ದೂ ಚಿತ್ತಾಲರ ಕಥೆಗಳು ನನಗೆ ಕೇವಲ ಚಂದದ ಕಥೆಗಳಾಗಿ ಕಾಣುತ್ತವೆ.

ಅನಂತಮೂರ್ತಿಯವರು ಕನ್ನಡದ ಸಣ್ಣಕಥೆಗೆ ಅಭಿವೃದ್ಧಿಯನ್ನು ತಂದುಕೊಟ್ಟಂಥವರು. ಅವರ ಕಥೆಗಳೆಲ್ಲ ಚಿಂತನದ ಎಳೆ ಹಿಡಿದುಕೊಂಡು ಜರುಗುತ್ತವೆ. ಚಿತ್ತಾಲರಲ್ಲಿ ಕಾಣದ್ದನ್ನು ಇಲ್ಲಿ ಕಾಣಬಹುದು. ಅನಂತಮೂರ್ತಿಯವರ ಸ್ವಸಮೃದ್ಧಿಯಾದ ಅನುಭವಗಳು ತಮ್ಮದೇ ಆದ ಇಕ್ಕಟ್ಟಲ್ಲಿ ಸಿಲುಕುವಲ್ಲಿ ಅವರ ಚಿಂತನೆ ಮೇಲೆ ಬರುತ್ತವೆ. ಈಗಲೊಡನೆ ಸಮಾನಾಂತರವಾದ ಹಿಂದಲನ್ನು ಕೂಡಿಕೊಂಡು ಅನುಭವದ ಎದುರು

ಮುಖಕ್ಕೆ ಮುಖಕೊಟ್ಟು ಅವರು ಘರ್ಷಿಸುವ ರೀತಿ ಅವರೇ ಅದಕ್ಕೆ ಮೈಕೊಟ್ಟರೇನೊ ಎಂಬಷ್ಟು ಸ್ವರೀತಿಯದು.

ಮೇಲಣ ಎರಡನ್ನೂ ಕೂಡಿಕೊಂಡು ಒಂದು ಕಥೆ ಹಿಗ್ಗಲು ಎಷ್ಟೆಲ್ಲಾ ಸೂರೆ ಮಾಡಬಹುದೊ ಅಷ್ಟೆಲ್ಲಾ ಸೂರೆ ಮಾಡಿದ ಕಥೆ ಖಾಸನೀಸರು ಬರೆದ 'ತಬ್ಬಲಿಗಳು' ಎಂಬ ಕಥೆ. ಅದಕ್ಕಾಗೇ ಈ ಕಥೆಯ ಅರ್ಥ ಮಾಡಿಕೊಳ್ಳಲು ಹವಣಿಸುತ್ತ ಹಾಗೇ ಸಣ್ಣಕಥೆ ಹರಿಯುವ ದಿಕ್ಕ ಹಿಡಿಯಲೂ ಯತ್ನಿಸುವೆ: ತಂದೆ ತಾಯಿ ತಮ್ಮ ತಂಗಿ –ಇವರಿಷ್ಟೂ ಒಂದೇ ಮೂಲದಿಂದ ಬಂದವರಾದರೂ ಒಡಕಾದವರು. ತಂದೆ ತಾಯಿ ತಮ್ಮ ತಂಗಿ ಅನ್ನುವ ಕಾರಣಕ್ಕೆ ಒಟ್ಟಿಗೆ ಬದುಕುವ ಯತ್ನದಲ್ಲಿ ತೊಡಗಿದವರು. ಸವಾಲಾಗಿ ಸತ್ತಂತೆ ಸತ್ತ ತಮ್ಮನ ಹೆಂಡತಿ ಸಾವನ್ನು ಹೊತ್ತು ಹೊರಲಾರದೆ ಹೊರುತ್ತಿರುವಂಥವರು ಮತ್ತು ತಮ್ಮನ ಸತ್ತ ಹೆಂಡತಿ ನಿಯಂತ್ರಣಕ್ಕೇ ಒಳಪಟ್ಟವರು. ಅವರು ಮಂತ್ರಾಲಯದ ನಂಬುಗೆ ಎದುರು ತಂತಮ್ಮ ಆಳದ ನಿಜಕ್ಕೆ ಇಳಿಯುವರು. ಆ ನಂಬುಗೆ ಅವರನ್ನು ನಡೆಸಿಕೊಂಡು ಹೋಗುವಲ್ಲೆ ಕ್ರೂರಗತಿಯೊಳಗೆ ಸಿಗುವಂತೆ ಏರ್ಪಡಿಸಿ ದಿಕ್ಕಾಪಾಲು ಮಾಡಿಬಿಡುತ್ತದೆ. ಒಬ್ಬರ ಕೈಯಿ ಒಬ್ಬರಿಗೆ ಸಿಗದೆ ಇವರನ್ನೆಲ್ಲ ಹಿಡಿದಿದ್ದ ಕೈಯೂ ತಪ್ಪಿ ಎಲ್ಲರೂ ಜೋಲಿ ತಪ್ಪುತ್ತಾರೆ. ಅಲ್ಲಿ ನಂಬುಗೆಯ ಮಿಥ್ಯೆ ಪ್ರಕಟಗೊಂಡುಬಿಡುತ್ತದೆ. ಮೊದಲೇ ಒಡೆದುಕೊಂಡು ಇದ್ದ ಅವರು ಕೊನೆಗೂ ನಿಷ್ಠುರ ವಾಸ್ತವದ ಎದುರಾ ನಿಷ್ಠುರವಾಗಿ ಒಡೆದುಕೊಂಡು ರಕ್ತದ ಕೆಂಪಿನ ಕ್ರೂರತೆ ಮತ್ತು ರಥದ ಗಾಲಿಯ ಕ್ರೂರಗತಿ ಮಾತ್ರ ಉಳಿಯುತ್ತದೆ.

ಇಂಥ ಒಂದರ ಕಥೆ ಆಗಿಸುವ ಸವಾಲನ್ನು ಪೂರ್ತಿ ಎದುರಿಸಿದಂತೆ ಕಥೆ ಆಗಿದೆ. ಅದಕ್ಕಾಗಿ ಬಳಸುವ ಪ್ರತಿಯೊಂದು ವಿವರವೂ ಕಥೆಯ ಮೈಯನ್ನು ಸಮಾ ತುಂಬಿ ಗಟ್ಟಿಮುಟ್ಟು ಮಾಡುತ್ತದೆ. ಎಲ್ಲವೂ ಕಥೆ ಒಳಗೆ ಒಡಮೂಡಿದಂತೆ ಕಥೆಯೊಳಗೇ ಹುಟ್ಟುತ್ತ, ಹೆಚ್ಚಿನ ತುಯ್ತಕ್ಕೆ ಹವಣಿಸುತ್ತದೆ. ಕಥೆಯ ಶುರುವೇ ಅದು ಹೇಳಬೇಕು ಎಂದಿರುವ ದುರಂತಕ್ಕೆ ಸುಳಿವು ಕೊಡುವುದ ಕಾಣಬಹುದು. ಆ ಸುಳಿವು ಸೂಕ್ಷ್ಮವಾಗಿದ್ದು ಅಲ್ಲಾಗುವ ಘಟನಾ ಕ್ರಮದೊಳಗೆ ವ್ಯಕ್ತ ಆಗುತ್ತದೆ. 'ನೀರಿಗೆ ಸಾಕಷ್ಟು ಸೆಳವೂ ಇತ್ತು', 'ನೀರು ನಿಮಿಷ ನಿಮಿಷಕ್ಕೆ ಏರತೊಡಗಿದೆ' –ಇಂಥದು ಅಲ್ಲೇ ಹುಟ್ಟಿ ಅಷ್ಟಕ್ಕೇ ನಿಲ್ಲದೆ ಅದಕ್ಕೂ ಮೀರಿದ ಅರ್ಥ ಪಡೆದುಕೊಳ್ಳಲು ಚಾಚುತ್ತದೆ. ಮುಂದೆ ಕಥೆ ಜರುಗುವ ಕ್ರಮದಲ್ಲೇ ಅವರವರ ಸಂಬಂಧಗಳು ನಕ್ಷೆಗೊಳ್ಳುತ್ತವೆ.

ಕಥೆಯು ಮಂತ್ರಾಲಯದ ಆವರಣದೊಳಗೆ ಜರುಗುತ್ತದೆ. ಕಥೆಯ ಒಳ ಸೆಳೆತಕ್ಕೊಳಪಟ್ಟು ಹೊರ ವಿವರಗಳು ಬರುತ್ತವೆ. ಉದಾಹರಣೆಗೆ– ಕಂಡಕ್ಟರನ ಬಯ್ಯುವ ಮುದುಕಿ ವ್ಯಕ್ತವಾಗುವಲ್ಲೆ ಆಕೆ ವೃಥಾ ಆಗುತ್ತಾಳೆ. ಬಸ್ಸಲ್ಲಿ ಕುಂತ ಹೆಂಗಸೂ ಹೇಗೆ ವೃಥಾ ಆಗುತ್ತಾಳೆ ಕಾಣಬಹುದು. 'ಹಣೆಯ ಮೇಲೆ ಬಹಳ ದೊಡ್ಡ ಕುಂಕುಮವಿದೆ. ಅವಳಿಗೆ ಏನಾದರೂ ರೋಗವಿರಬೇಕು.' –ಎರಡು ವಾಕ್ಯಗಳ ನಡುವೆ ಕಂದಕ ದುರಂತವಿದೆ. ಕಥೆ ಹೇಳುವುದೂ ಇಂಥದೆ ಒಂದಾದ್ದರಿಂದ ಇದೂ ಕಥೆಗೆ ಕೂಡಿಕೊಳ್ಳುತ್ತದೆ. ಮಂತ್ರಾಲಯದ ಮುತ್ತೈದೆ ಹೇಳುವ ಕಥೆ ಎಲ್ಲರಿಗೂ ಜೀವದಾನದಂತೆ ಕೇಳುತ್ತದೆ. ಆಕೆ ವೈದಿಕಿ ಆದ್ದರಿಂದ ವ್ಯಾಪಾರವೂ ಆಗುತ್ತದೆ. ಹೀಗೆ ಆಗುವಲ್ಲೆ ಕಥೆ ಹೇಳುವುದರ ಯಾಂತ್ರಿಕ ಚಲನೆಯನ್ನೂ ಅದು ಹೇಳುತ್ತದೆ. ಇದು ಚಲಿಸಿ ನಿಷ್ಠುರತೆಗೆ ಗುದ್ದಿದಂತೂ ಅನ್ನಿಸುತ್ತದೆ. ಉದಾಹರಣೆಗೆ ವೈದಿಕಿ ಕಥೆ ನಡುವೆಯೆ ಬರುವ ವಿವರ: 'ತುಂಗಭದ್ರಾ ನದಿಯು ಮೌನವಾಗಿ ಟಿಸಿಲು ಟಿಸಿಲಾಗಿ ಹರಿಯುವುದು ಕಾಣಿಸುತ್ತಿತ್ತು. ಸುಣ್ಣ ಬಳಿದ ಮಠದ ದೊಡ್ಡ ದೊಡ್ಡ ಗೋಡೆಗಳು ಸರಿದು ಸಮೀಪಕ್ಕೆ ಬರುವಂತೆನಿಸುತ್ತಿತ್ತು' –ಹೀಗೆ ಅವೆರಡನ್ನೂ ಕೊಟ್ಟುಬಿಡುವ ಕ್ರಮದೊಳಗೇ ಜೀವ ಮತ್ತು ಜಡ ಎರಡಕ್ಕೂ ತಂತಾನೆ ಘರ್ಷಣೆ ಉಂಟಾಗುತ್ತದೆ. ಬರುವ ಬಹಳ ಹೊರ ವಿವರಗಳೂ ಹೊರ ಮತ್ತು ಒಳ ಎರಡೂ ಆಗಿ ಪರಿಣಮಿಸುತ್ತ ಹೋಗುತ್ತವೆ.

ಹೀಗೆ ಪ್ರಕಟವಾಗುತ್ತ ಆಗುತ್ತ ಕ್ರೂರಗತಿಯತ್ತ ಚಲನೆ ಧಾವಿಸುತ್ತದೆ. ತಮ್ಮನು ಸುಮ್ಮನೆ ಹಾಕುವ ಪ್ರದಕ್ಷಿಣೆಯ ಗತಿಯೇ ಕಥೆಯ ಗತಿಯೂ ಆಗುತ್ತದೆ. ತಂಗಿಯಂತೂ ಎಲ್ಲರ ಒಡಕಿನ ಅಂಶಗಳನ್ನು ಕೂಡಿಸಿಕೊಂಡು ಪ್ರತಿಫಲಿಸುತ್ತಾಳೆ. ರೈಲಿಗೆ ಸಿಕ್ಕಿ ತುಣುಕು ತುಣುಕಾಗಿ ಬಿದ್ದಿದ್ದ ತಮ್ಮನ ಹೆಂಡತಿ ದೇಹ ಎಲ್ಲರ ತಲೆಗಳಲ್ಲು ಕುಳಿತು ಆಡಿಸುತ್ತದೆ. ಇಂಥ ಒಂದನ್ನು ಉದ್ವಿಗ್ನವಿಲ್ಲದೆ ನಿರ್ವಹಿಸಿರುವ ಬಗೆಯೇ ಅಪೂರ್ವದ್ದು. ನಿರ್ವಹಣಾ ಕ್ರಮದೊಳಗೇ ಸತ್ತ ತಮ್ಮನ ಹೆಂಡತಿ ಮೂಡುವ ಬಗೆ, ತಾಯಿಯ ಹಠಮಾರಿತನ, ತಂಗಿಯ ಹುಚ್ಚು, ತಂದೆಯ ಹಿಂಗದ ಹಸಿವು, ತಮ್ಮನ ತೀರದ ಬಯಕೆ ಎಲ್ಲವೂ ಎದುರು ಬರುವ ನಿರ್ಣಯ ಕ್ಷಣದ ರೌದ್ರತೆಗೆ 'ಬಲಿಪಶು'ವಿನಂತೆ ನಿಲ್ಲುತ್ತವೆ. ಎಲ್ಲಾ ರಥ ಎಳೆಯುವ ನೂಕುನುಗ್ಗಲಿನಲ್ಲಿ ಸಿಕ್ಕಿಬೀಳುತ್ತಾರೆ. ಮುಂದೆ ಬರುವ ಹೊರ ಕ್ರಿಯೆಗಳೆಲ್ಲ ಕಥೆ ಒಳಗೂ ಆಗುತ್ತಾ ಹೋಗುತ್ತವೆ. ಉದಾ: ರಥ ಎಳೆಯುವ ಅಲ್ಲಿನ ಕುರುಡುತನ ಮತ್ತು ಕ್ರೂರ ಚಲನೆ ಅದನ್ನೂ ಹೇಳಿ ಜೀವನ ಗತಿಯನ್ನೂ ಹೇಳುತ್ತದೆ. ಅಲ್ಲಿ ಸಿಕ್ಕಿದ ಅವರು

ಅನಿವಾರ್ಯ ಎಂಬಂತೆ ಆ ಸೆಳವಿಗೆ ಒಪ್ಪಿಸಿ ಒಬ್ಬರನ್ನೊಬ್ಬರು ಕಳೆದುಕೊಂಡು ಬಿಡುವರು. ಹೀಗಾಗಿ ಅರ್ಥವಿಲ್ಲದ ಸಂಬಂಧಗಳು ನಿರರ್ಥಕವಾಗಿ ಕೊನೆಗೂ ನಿಜವಾದ ಒಂಟಿಯಾಗಿ ತಳ ಕಾಣುವುವು. ಅಷ್ಟು ಹೇಳಲು ಕಥೆಯ ಹೊರ ವಿವರಗಳು ಹೊರಗಿನದನ್ನೂ ಮೂಡಿಸುತ್ತ ಅದರೊಳಗೇ ಒಳಗಿನ ತಳವನ್ನೂ ಕಾಣಿಸುತ್ತ ಹೋಗುವುದು. ಹೀಗೆ ಹಿಡಿಯುವ ಕ್ರಮದಲ್ಲೇ ಕಾಣಬೇಕಾದ್ದು ಪ್ರಚಂಡವಾಗಿ ಹೊಳೆಯುವುದು.

ನಮ್ಮನ್ನು ಪೂರ್ಣವಾಗಿ ಕಾಡಿಲ್ಲದ ಏಕಾಂಗಿತನ, ಅನಾಥ ಪ್ರಜ್ಞೆ, ನಿರರ್ಥಕತೆ ಇಂಥ ನವ್ಯ ಬರಹಗಳು ಎಲಿಯಟ್, ಕಾಮು, ಕಾಫ್ಕ, ಸಾರ್ತ್ರೆ ಹುಟ್ಟಿದಲ್ಲಿ ಹುಟ್ಟಬೇಕಾದಂಥವುಗಳು ಎಂಬ ಮಾತಿದೆ. ಇದನ್ನು ಕಡೆಗಣಿಸಬೇಕಿಲ್ಲ. ಇಂಥವು ಕೃತಿಯಾಗಲು ಹೊರಟರೆ ಅದು ಇಲ್ಲಿನ ಮಯ್ಯಿ ಪಡೆದಿದ್ದರೂ ಕೂಡ ಪೂರ್ಣವೆ ನಿಜವಾಗದೆ ಹೋಗಬಹುದು. ಅಥವಾ ಅಂಥ ತಿಳಿವು ವಿಕಸಿತ ಆಗುವುದರ ಬಗೆಗೆ ಶಂಕೆ ಉಂಟಾಗಬಹುದು. ಆ ಕಾರಣಕ್ಕಾಗೆ ನಮ್ಮ ರಕ್ತವು ಪೂರ್ಣ ಸಂವೇದಿಸುವಂತಹದನ್ನೆ ಹಿಡಿಯ ಹೊರಡುವುದು ಇಂದು ಆಗಬೇಕಾದ್ದು. ಇಲ್ಲೇ ರಾಜೀವ ತಾರಾನಾಥರು ಕೃಷ್ಣನ ಉದಾಹರಣೆ ಕೊಟ್ಟು ದ್ವಾರಕೆ ಮುಳುಗಿದಾಗ ಆತ ಅನುಭವಿಸಿದ್ದು ಏಕಾಂಗಿತನ ನಿರರ್ಥಕತೆಗಳನ್ನೆ ಎಂಬ ಅವರ ಮಾತು ಭಾರತೀಯ ಸಂವೇದನೆಗೆ ಸ್ಪಂದಿಸಿದಂತೆ ಕಾಣುತ್ತದೆ.

ಮತ್ತೂ ಅಂದರೆ ಭಿನ್ನವಾಗಿ ಕನ್ನಡದ ಸಣ್ಣಕಥೆಗೆ ಅಪರೂಪದ ಅಂಶಗಳನ್ನು ಕೂಡಿಸಿದವರು ಪ್ರಮುಖವಾಗಿ ಪಿ.ಲಂಕೇಶ್. ಉದಾಹರಣೆಗೆ– ಕಾವ್ಯದಷ್ಟೇ ಹೊಳಪಿನ ಭಾಷೆ ಬಳಸಿದ್ದು, ಈ ಕ್ಷಣವನ್ನು ಹಿಡಿದಿದ್ದು, ಮನುಷ್ಯನ ಒಳಗಿನ ಕೆಡಕನ್ನು ದಿಟ್ಟಿಸಿ ನೋಡುವ ಧೈರ್ಯ ಮಾಡಿದ್ದು –ಇಂಥವುಗಳು.

ಹಿಂದೆ, ನಮ್ಮ ರಕ್ತವು ಪೂರ್ಣ ಸಂವೇದಿಸುವಂತಹ ಎಂಬ ಒಂದು ಮಾತು ಬಂತು. ಅಂತಹದೆ ಕಥೆಗಳು ಒಂದಿಷ್ಟು ನಮ್ಮಲ್ಲಿ ಉಂಟು. ಉದಾ: ಅನಂತಮೂರ್ತಿಯವರ 'ಮೌನಿ', ತೇಜಸ್ವಿಯವರ 'ಅಬಚೂರಿನ ಪೋಸ್ಟಾಫೀಸು' ಮತ್ತು 'ಅವನತಿ', ಲಂಕೇಶರ 'ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ' ಇವು ಈ ಮಣ್ಣಿನಿಂದ ಒಡೆದು ಮೂಡಿ ಬಂದಂಥ ಕಥೆಗಳು.

ಕಥೆ 'ಮೌನಿ' ಮನುಷ್ಯ ನಿಜಗಳೊಡನೆ ವರ್ತಿಸುತ್ತದೆ. ವಿರೋಧಕ್ಕೆ ಕಾರಣವಾದ ಪರವನ್ನೂ ಕೂಡಿಕೊಂಡು ಬೆಳೆದು ನಿಂತ ಸ್ಥಿತಿಯ ನಿಜಸ್ತರವು ತೆರಕೊಳ್ಳುವ ಬಗೆ ಕಥೆ ಒಳಗೆ ಫಲಿಸುತ್ತದೆ. ಇದನ್ನು ಸ್ಪಷ್ಟಪಡಿಸಲು 'ಅಬಚೂರಿನ ಪೋಸ್ಟಾಫೀಸು' ಕಥೆ ಕಡೆಗೆ ನೋಡಬಹುದು. ಅಲ್ಲಿನ ವ್ಯಕ್ತಿಯ

ಕೊನೆ ವರ್ತನೆಗೆ 'ಮೌನಿ' ಕಥೆಯಲ್ಲಿ ಸಿಕ್ಕಂತೆ ಬಲ ಸಿಗುವುದಿಲ್ಲ. ಆದರೆ 'ಅಬಚೂರಿನ ಪೋಸ್ಟಾಫೀಸು' ಸೋತರೂ ಕೂಡ ಹೆಚ್ಚಿಗೆ ಹಿಡಿಯಲು ಹೋಗಿ ಸೋಲುತ್ತದೆ. ಯಾಕೆಂದರೆ ಟೊಳ್ಳು ಹೊರ ಪ್ರಭಾವವೊಂದು ಟೊಳ್ಳಾಗಿದ್ದೂ ಗುಮಾನಿ ಮತ್ತು ಮಿಥ್ಯಾಕರ್ಷಣೆಯೇ ಕಾರಣವಾಗಿ ಅದರ ಹಿಡಿತ ವ್ಯಕ್ತಿ ಕುಟುಂಬ ಸಮಾಜವನ್ನು ಒಡೆದುಬಿಡುವಂಥ ಇಂದಿನ ನಿಜವ ಕಾಣುವ ಕಣ್ಣು ಕಥೆ ಒಳಗೆ ಕೆಲಸ ಮಾಡಿದೆ. 'ಅವನತಿ' ಕತೆಯಲ್ಲಿ ಸೃಷ್ಟ್ಯಾತ್ಮಕತೆ ಇಲ್ಲದ ಕಾರಣವಾಗಿ ಹೆಂಗೆ ರಾಜಕೀಯ ಸಮಾಜ ವ್ಯಕ್ತಿ ಹೀಗೆ ಎಲ್ಲವೂ ಕೂಡ ಸ್ಥಗಿತಗೊಂಡುಬಿಡುವುದು ಎಂಬ ನಮ್ಮ ಇಂದಿನ ದಾರುಣ ಕಥೆಯು, ಕಥೆಯ ಮಯ್ಯ ಹರವಿನೊಳಗೇ ಏಳುತ್ತದೆ. ಲಂಕೇಶರ 'ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ'ಯಂತೂ ಸಂಕೀರ್ಣವಾಗಿ ಈ ನೆಲದ ತಲ್ಲಣಗಳನ್ನು ಸಂವೇದಿಸುತ್ತದೆ.

ಇಂದು ಟೀಬಿ ರೋಗಿಯ ಹಾಗೆ ನವ್ಯ ಸಣ್ಣಕಥೆಗಳು ಸೊರಗುತ್ತಿದ್ದರೂ ಅದರೊಟ್ಟಿಗೆ ನಯನಾಜೂಕು ವಂಚನೆ ಇಲ್ಲದೆ ಎಲ್ಲೂ ಹುಸಿಯಾಗದ ಮೇಲಣ ಮಣ್ಣಿನ ಕಥೆಗಳು ಹೊಸ ಹುಟ್ಟು ಹುಟ್ಟಿಸುವಂತೆ ಇವೆ.

## ವೈಶಾಖದೊಳಗೆ...

ಒಂದು ಸಾಹಿತ್ಯ ಕೃತಿ ಬಗ್ಗೆ ಈ ರೀತಿ ಬರೆಯಬಹುದೋ ಅಥವಾ ಬರೆಯಬಾರದೋ ನನಗೆ ತಿಳಿಯುತ್ತಿಲ್ಲ. ಆದರೆ ಚದುರಂಗರ ಬಗೆಗಿನ ಮೋಹದಿಂದಾಗಿ ನಾನಾಗಿದ್ದರೆ ವೈಶಾಖದಲ್ಲಿ ಏನು ಮಾಡುತ್ತಿದ್ದೆ ಎತ್ತ ಮಾಡುತ್ತಿದ್ದೆ ಈ ಬಗೆಯಲ್ಲಿ ನನ್ನ ಮನಸ್ಸಿಗೆ ಆ ಕೃತಿ ಬಂದು ನಿಲ್ಲುತ್ತದೆ.

ನಾನು ದ್ಯಾವನೂರು, ಒಡಲಾಳ ಕತೆಗಳನ್ನು ಬರೆಯುವಾಗ ನನ್ನದೇ ನೇರ ಅನುಭವ ಅಂತ ಏನಿರುತ್ತದೊ ಅದಕ್ಕೆ ಸಿಕ್ಕಿಕೊಂಡು ಬರೆಯುತ್ತಿದ್ದೆ. ಇದು ನವ್ಯದ ವಾತಾವರಣದಿಂದಾಗಿ ಕಾಣುತ್ತದೆ. ಆದರೆ ಕುಸುಮಬಾಲೆ ಬರೆಯುವಾಗ ನನ್ನದೇ ನೇರ ಅನುಭವ ಅನ್ನುವಂಥಹದು ಅಷ್ಟಾಗಿ ಇರಲಿಲ್ಲ ಅನ್ನಿಸುತ್ತಿತ್ತು. ನಾನು ಹೆಚ್ಚಾಗಿ ಒಂದು ಮಾಧ್ಯಮದಂತಿದ್ದೆ. ಯಾವ ಯಾವುದೊ ಯಾರದೊ ಅನುಭವಗಳು ಬಂದು ಹೋಗುತ್ತಿದ್ದವು. ಇಂಥ ಗುಣ ವೈಶಾಖದಲ್ಲಿ ಹೆಚ್ಚಾಗಿವೆ. ನನ್ನದೇ ನೇರ ಅನುಭವ ಅಂತ ಕತ್ತಿಗೆ ಹಗ್ಗ ಕಟ್ಟಿಕೊಂಡು ಒಂದು ಪರಿಧಿಯೊಳಗೆ ಮೇಯುವ ಪ್ರವೃತ್ತಿಯನ್ನು ಬಿಡಿಸಿಕೊಳ್ಳಲು ಈ ಕೃತಿ ಕಲಾವಿದರಿಗೆ ಪ್ರೇರಣೆ ನೀಡುತ್ತದೆ. ಮತ್ತೆ, ವೈಶಾಖದಲ್ಲಿ ಬರುವ ಕೆಲವು ಪ್ರಸಂಗಗಳು ಒಳ್ಳೆಯ ಕಾವ್ಯದ ರೂಪಕದಂತೆ ಅರ್ಥ ಹೊಳೆಯಿಸುತ್ತ ಸೆಳೆಯುತ್ತವೆ. ಉದಾಹರಣೆಗೆ– ಬಸುರಿ ಹೆಣ, ಚಿತ್ರಮೂಲನ ಕೋಟೆ, ಪುರುಷರತ್ನ ಸೊಪ್ಪಿನ ಹುಡುಕಾಟ, ಬಿಸಿರೊಟ್ಟಿ ಹೊಟ್ಟೆಗಿಟ್ಟುಕೊಂಡ ತಾಯಿ... ಇಂಥವು. ಈ ಕೃತಿಯೊಳಗೆ ಇಂಥ ಅದ್ಭುತ ಸತ್ವಗಳು ಇದ್ದೂ, ಮಾಗಿದ ಚದುರಂಗರು ವೈಶಾಖವನ್ನು ಮಾಗಿಸದೆ ಕಾಯದೆ ಈ ಕಾರಣದಿಂದಾಗಿ ವೈಶಾಖ ಕೊಡಬಹುದಾಗಿದ್ದ ಪರಿಣಾಮವನ್ನು ಅರ್ಧಕ್ಕೆ ಕುಗ್ಗಿಸಿಬಿಟ್ಟರು ಅನ್ನಿಸುತ್ತದೆ. ಚದುರಂಗರು ಬರೆದಾದ ಮೇಲೆ ನವ್ಯರಂತೆ ಕಸುಬು ಮಾಡಬೇಕಿತ್ತೇನೊ.

## ‘ಮುತ್ತು ಮುಳುಗ’ ಪ್ರೊ. ಎಲ್. ಬಸವರಾಜು

ನಾನು ಬಿ.ಎ. ಓದುತ್ತಿರುವಾಗಲೇ ಅವರ ಬಗ್ಗೆ, ಅವರ ಹುಚ್ಚು ಅಕ್ಕರೆ ಹಾಗೂ ಪ್ರತಿಭೆಯ ಬಗ್ಗೆ ಆಲನಹಳ್ಳಿಯವರಿಂದ ಕೇಳಿದ್ದೆ. ಎಂ.ಎ.ಗೆ ಸೇರಿದಾಗ ಅವರ ನೇರ ವಿದ್ಯಾರ್ಥಿಯಾದಾಗ ಅವರ ಅಕ್ಕರೆಯ ಮಹಾಪೂರ ಹಾಗೂ ಅವರ ಪ್ರತಿಭಾ ವಿಲಾಸದಲ್ಲಿ ತೇಲಿಹೋಗಬೇಕಾಯ್ತು.

ಪ್ರೊ. ಎಲ್.ಬಸವರಾಜು ಅವರು ನನಗೆ ಹೇಗೆ ಕಾಣುತ್ತಿದ್ದರು? ಪರ್ಲ್‌ಡೈವರ್‌ನಂತೆ. ಸಮುದ್ರದ ಆಳಕ್ಕೆ ಉಸಿರು ಬಿಗಿಹಿಡಿದು ಮುಳುಗಿ ಮುತ್ತುಗಳನ್ನು ಕೈಲಿ ಹಿಡಿದು ಹೊರಬರುವವನಂತೆ. ಅವರಿಗೆ ಪಂಪನ ಕೃತಿಗಳೋ ಅಲ್ಲಮನ ವಚನಗಳೋ ಸಮುದ್ರದಂತೆ. ಅದರೊಳಗೆ ಮುಳುಗೆದ್ದು ಮುತ್ತು ತಂದಂತೆ ಅವರ ಗ್ರಂಥಸಂಪಾದನೆ ಇರುತ್ತಿತ್ತು. ಅವರು ತಮ್ಮ ಕೈಲಿ ಹಿಡಿದ ಕೃತಿಗಳಲ್ಲೇ ವಾಸಮಾಡುತ್ತಿದ್ದರೇನೋ, ಅಲ್ಲೇ ನಿದ್ರೆಯನ್ನೂ ಅನಿಸುತ್ತಿತ್ತು. ಅವರು ಮೈಸೂರಲ್ಲಿ ಇದ್ದರು, ಒಂದು ಮನೆಯಲ್ಲಿ ವಾಸಮಾಡುತ್ತಿದ್ದರು ಎಂದರೆ ಅದು ನಿಜವಿರಲಾರದೇನೋ.

ಪ್ರೊ. ಎಲ್.ಬಿ ಅವರ ಕೃತಿಸಂಪಾದನಾ ವೈಖರಿಯ ಪ್ರತಿಭಾ ವಿಲಾಸಕ್ಕೆ ಒಂದು ಉದಾಹರಣೆ:

**ಮೃದುಪದಗತಿಯಿಂ ರಸಭಾವದ ಪೆರ್ಚಿಂ ಕೃತಿ ಪಣ್ಯವನಿತೆಯ**
**ವೋಲ್ ಸೌಂದರ್ಯದ ಚಾತುರ್ಯದ ಕಣಿಯೆನೆ**
**ವಿದಗ್ಧ ಬುಧಜನಮನಮನಲೆಯಲೆ ವೇಡಾ**

ಇಲ್ಲಿ, ಕವಿ ಪಂಪ ಕಾವ್ಯವನ್ನು ವನಿತೆಯೊಡನೆ ತಳಕು ಹಾಕುತ್ತಾನೆ. ಹಿಂದಿನ

ಗ್ರಂಥಸಂಪಾದನಾಕಾರರೆಲ್ಲ **ಪುಣ್ಯವನಿತೆಯೋಲ್** ಎಂದು ಅಂದರೆ **ಪತ್ನಿಯಂತೆ** ಎಂಬ ಪಾಠವನ್ನು ಇಟ್ಟುಕೊಂಡಿದ್ದರೆ ಪ್ರೊ. ಎಲ್.ಬಿ. ಅವರು **ಪಣ್ಯವನಿತೆ** ಅಂದರೆ **ವಾರಾಂಗನೆ** ಎಂಬ ಪಾಠವನ್ನು ಆಯ್ಕೆ ಮಾಡಿಕೊಂಡು 'ಪುಣ್ಯ'ವನ್ನು 'ಪಣ್ಯ' ಮಾಡಿಬಿಡುತ್ತಾರೆ! ಅದೂ ಎಲ್ಲಿ? ಧಾರ್ಮಿಕ ಕಾವ್ಯ ಆದಿಪುರಾಣದಲ್ಲಿ. ಇದು ಸಂಪ್ರದಾಯಸ್ಥ ಗ್ರಂಥಸಂಪಾದನಾಕಾರರಿಗೆ ಹೇಗೆ ಕಂಡಿರಬೇಕು? ಒಬ್ಬ ಪುಂಡ ಬುಡಮೇಲು ಕೃತ್ಯ ಎಸಗುತ್ತಿದ್ದಾನೆ ಎಂದು ಕಂಡಿದ್ದರೆ ಅದೇನೂ ಸೋಜಿಗವಲ್ಲ. ಹೀಗೆ 'ಪುಣ್ಯ'ವನ್ನು 'ಪಣ್ಯ' ಮಾಡುವುದು ಯಾರಿಗೆ ಸಾಧ್ಯ? ಯಾಂತ್ರಿಕ ಗ್ರಂಥಸಂಪಾದನಾಕಾರರಿಗಂತೂ ಅಲ್ಲ. ಆ ಕೃತಿಯನ್ನು ಅರೆದು ಕುಡಿದು ಆ ಕೃತಿಕಾರನ ಮನಸ್ಸನ್ನೇ ಮನೆ ಮಾಡಿಕೊಂಡವನಿಗೆ ಮಾತ್ರ ಸಾಧ್ಯವೇನೋ! ಇಲ್ಲೆ ಒಂದು ಪಠ್ಯಕ್ಕೆ ಐಲು ಪ್ರತಿ ಎಂದು ಹೆಸರು ಕೊಟ್ಟಿದ್ದಾರೆ. ಹೀಗೆ, ಆ ಪಠ್ಯಗಳ ಜತೆ ಜಗಳವಾಡಿದವನಿಗೆ ಮಾತ್ರ ಅವೇ ಅವರ ಚುಡಾಯಿಸಬಹುದಾದ ಜೊತೆಗಾರರಂತಾಗಬಹುದು

ಇದೇನು? ಹಳೆಗನ್ನಡ ಕೃತಿ ಬಗ್ಗೆ ಇವ ಹೀಗೆ ಎಲ್ಲ ಮಾತನಾಡುತ್ತಾನಲ್ಲ, ಮಹಾದೇವನೂ ಹಳೆಗನ್ನಡದಲ್ಲಿ ಪಂಟರ್ ಇರಬೇಕು ಎಂದುಕೊಂಡರೆ ನೀವು ಮೋಸ ಹೋಗುತ್ತೀರಿ. ಮೇಲಿನ ಪದ್ಯವನ್ನು ಗೆಳೆಯ ಹಾಡುಪಾಡು ರಾಮು ಜೊತೆ ಮಾತಾಡುತ್ತ ಆಗ ಹೊಳೆದಿದ್ದನ್ನು ಹೇಳುತ್ತಿದ್ದೇನೆ, ಅಷ್ಟೇ.

ಜೊತೆಗೆ ಅವರೊಳಗೆ ಬೆರಗೂ ಇತ್ತು. ಒಂದು ದಿನ ಅವರು ನನ್ನ ಕೈ ಹಿಡಿದು– 'ನಾನೂ ಗಂಡು ನೀವೂ ಗಂಡು. ನಾವು ಕೈಕೈ ಸ್ಪರ್ಶಿಸಿದರೆ ಏನೂ ಅನ್ನಿಸುವುದಿಲ್ಲ. ಆದರೆ ಅದೇ ಒಂದು ಹೆಣ್ಣನ್ನು ಮುಟ್ಟಿದರೆ ವಿದ್ಯುತ್ ಸ್ಪರ್ಶಿಸಿದಂತೆ ಆಗುತ್ತಲ್ಲ! ಏನು ಸೋಜಿಗ' ಎಂದು ಬೆರಗು ಕಣ್ಣು ಮಾಡಿ ನಕ್ಕಿದ್ದರು. ಅವರೊಳಗೆ ಕವಿಯೊಬ್ಬ ಇದ್ದನು.

ಪ್ರೊ. ಎಲ್.ಬಸವರಾಜು ಅವರಿಗೆ ಗ್ರಂಥಸಂಪಾದನೆ ಎಂದರೆ– ನಿಜವನ್ನು ಎತ್ತಿ ನಿಲ್ಲಿಸುವುದೂ ಆಗಿತ್ತು. ಅಲ್ಲಮನನ್ನು ನಟುವ ಮೂಲದವನೆಂದು ಹೇಳಿದ್ದು ಸಾಮಾನ್ಯ ಸಂಗತಿಯೇನಲ್ಲ. ಈ ಒಂದು ಕಾಣ್ಕೆ ವಚನಾಂದೋಲನವನ್ನು ನೋಡುವ ನೆಲೆಯನ್ನೇ ಬದಲಿಸಿಬಿಟ್ಟಿತು. ಬಹುಶಃ ಜಗತ್ತಿನ ಎಲ್ಲ ಧರ್ಮಗಳಿಗೂ– ಒಬ್ಬ ಪ್ರವಾದಿ– ಉಳಿದವರೆಲ್ಲ ಅನುಯಾಯಿಗಳು. ಆದರೆ ಹನ್ನೆರಡನೇ ಶತಮಾನದ ವಚನಾಂದೋಲನದಲ್ಲಿ ಒಬ್ಬ ಪ್ರವಾದಿಯೂ ಇಲ್ಲ, ಅವನ ಅನುಯಾಯಿಗಳೂ ಇಲ್ಲ, ಅಲ್ಲಿ ಎಲ್ಲರೂ ತಂತಮ್ಮ ಪ್ರಜ್ಞೆಯನ್ನೇ ತಮ್ಮ ದೈವ ಮಾಡಿಕೊಂಡು ಸಮೂಹವಾಗಿ ಅರಳುವ ಒಂದು ಅದ್ಭುತ,

ಜಗತ್ತಿನಲ್ಲಿ ಎಲ್ಲೂ ಇಲ್ಲದ್ದು ಈ ನೆಲದಲ್ಲಿ ಸಂಭವಿಸಿಬಿಟ್ಟಿತು. ಕೇಂದ್ರವಿಲ್ಲದ ಬಯಲು ವ್ಯಕ್ತಿತ್ವದ ಅಲ್ಲಮನು ವಚನಾಂದೋಲನದ ಕೇಂದ್ರದಂತೆ ಇದ್ದುದು ಇದಕ್ಕೆ ಕಾರಣವೇ? ಈಗ ಬಸವಣ್ಣನನ್ನು ಪ್ರವಾದಿಯಂತೆ ಕೇಂದ್ರ ಮಾಡಿ ವಚನಾಂದೋಲನದ ಅಪೂರ್ವತೆಗೆ ಗರ ಬಡಿದಿದೆ. ಬಾದಾಮಿ ಗೋಡಂಬಿ ತಿನ್ನುತ್ತಾ ಕಾಂಟೆಸಾ ಕಾರಿನಲ್ಲಿ ಓಡಾಡುತ್ತಿರುವ ವಚನಗಳನ್ನು ಬೀದಿಗೆ ಎಳೆದು ತಂದು ನಿಲ್ಲಿಸಬೇಕಾಗಿದೆ...

ನನ್ನ ಅವರ ಸಂಬಂಧ ಹೇಗಿತ್ತು? ಕುಸುಮಬಾಲೆ, ಒಡಲಾಳಗಳನ್ನು ಅವರು ಓದಿ, ಅವರ ಹಸ್ತಾಕ್ಷರದಲ್ಲಿ ಒಂದು ಪದವನ್ನೂ ಬಿಡದೆ ಬರೆದು ಲಯಾಕಾರ ಮಾಡಿ ನನ್ನ ಕೈಗಿತ್ತ ಸಂದರ್ಭವನ್ನು ಹೇಳುವುದು ಕಸಿವಿಸಿ ಸಂಕೋಚ, ಈ ಬಗ್ಗೆ ನನ್ನಲ್ಲಿ ಪದಗಳಿಲ್ಲ. ಅದಿರಲಿ, ಅವರ ಮನೆಗೆ ಹೋದಾಗಲೆಲ್ಲಾ ಪ್ರತಿ ಸಾರಿಯೂ ವಿಶಾಲಾಕ್ಷಮ್ಮನವರು 'ಮಾದೇವು, ನಿಮ್ಮನ್ನು ನೋಡಿದಾಗಲೆಲ್ಲಾ ನಮ್ಮ ಪ್ರಭು ನೆನಪಾಗುತ್ತಾನೆ' ಎಂದು ಅವರು ತೀರಿಕೊಂಡ ತಮ್ಮ ಮಗನನ್ನು ನೆನೆಸಿಕೊಳ್ಳುತ್ತಿದ್ದರು. ಇದು ಒಂದು ಸಲವೂ ತಪ್ಪುತ್ತಿರಲಿಲ್ಲ. ಪ್ರೊಫೆಸರ್ ಅವರಿಗೂ ಹಾಗೆ ಅನ್ನಿಸಿರಬಹುದೇ? ಗೊತ್ತಿಲ್ಲ. ಆ ಸಂದರ್ಭದ ಪ್ರತಿಸಲವೂ ಅವರು ಪಿಳಿಪಿಳಿ ಕಣ್ಣುಬಿಟ್ಟು ನನ್ನನ್ನು ನೋಡುತ್ತಿದ್ದರು. ಅವರಿಗೂ ಅನ್ನಿಸಿರಬೇಕೇನೋ! ಅವರು ಆಸ್ಪತ್ರೆಯಲ್ಲಿದ್ದಾಗ ನೋಡಿ ಮಾತಾಡಿಸಿ ಹೊರಟು ಬಾಗಿಲ ಹತ್ತಿರ ಬಂದಾಗ ಅವರು– 'ಮಾದೇವು ಸ್ವಲ್ಪ ಬನ್ನಿ, ಎತ್ತಿ ಕೂರಿಸುತ್ತೀರಾ' ಅಂದರು. ನಾನೂ ನನ್ನ ಅಳಿಯ ಎತ್ತಿ ಕೂರಿಸಿ ಹೊರಬಂದಾಗ ಸುಮಿತ್ರಾ 'ನಿನ್ನನ್ನ ಸ್ಪರ್ಶಿಸಲು ಅವರು ಹಾಗೆ ಮಾಡಿದ್ದು' ಎಂದಾಗ ನನಗೂ ಹಾಗೇ ಅನ್ನಿಸಿತ್ತು.

ಒಂದು ಗ್ರಂಥದ ಸಮುದ್ರದ ಒಳಗೆ ಮುಳುಗದೆ ಅವರು ಲೌಕಿಕಕ್ಕೆ ಬಂದು ಒಂಟಿಯಾದಾಗ ನೀರಿನಿಂದ ತೆಗೆದ ಮೀನಿನಂತೆ ಚಡಪಡಿಸುತ್ತಿದ್ದರು. ಆಗ ಅವರ ಗತಿಸಿದ ಮಗ ಪ್ರಭು ಅವರ ಕಣ್ಮುಂದೆ ಬರುತ್ತಿದ್ದ ಅಂತ ಕಾಣುತ್ತೆ. ಮಗ ಅಲ್ಲಿ ಒಬ್ಬನೇ ಮಲಗಿದ್ದಾನೆ ಎಂಬ ಒಡಲ ತಳಮಳವ ಹತ್ತಿಕ್ಕಲಾಗದೆ ಅನ್ನ ನೀರು ಬಿಟ್ಟು ಅವರೂ ಅಲ್ಲಿಗೆ ಹೊರಟುಬಿಟ್ಟರು ಕಾಣಿಸುತ್ತದೆ.

## ಲಂಕೇಶ್ ಎಂಬ ತಲ್ಲಣಿಸುವ ಜೀವ

Lovely darlingಗೆ 75 ವರ್ಷ ಆಯ್ತು. ಅವರ ಸಾರ್ಥಕತೆ ಕಾಣ್ಕೆ ನೆನಪಿಸಿಕೊಳ್ಳುವ ಎಷ್ಟೋ ಇವೆ. ಅವುಗಳನ್ನೆಲ್ಲಾ ಒಕ್ಕಡೆ ಇಟ್ಟು– ಸಂಕ್ರಾಂತಿ, ಗುಣಮುಖ, ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ– ಇಷ್ಟನ್ನು ಕಣ್ಣು ಮುಂದೆ ತಂದುಕೊಂಡರೂ ಸಾಕು, ಲಂಕೇಶ್ ಸಾಹಿತ್ಯದ ಎಲ್ಲೆಗಳನ್ನು ವಿಸ್ತರಿಸುವ ಸೃಷ್ಟಿಕರ್ತರಾಗಿ ನನಗೆ ಕಾಣುತ್ತಾರೆ. ಇವು ಕನ್ನಡಕ್ಕೆ ಬೆಲೆ ಹೆಚ್ಚಿಸಿದ ಕೃತಿಗಳು.

ತೇಜಸ್ವಿ ಅಥವಾ ರಾಮದಾಸ್ ಇಬ್ಬರಲ್ಲಿ ಯಾರೋ ಒಬ್ಬರು ಇರಬೇಕು, ಲಂಕೇಶರನ್ನು 'ಹುಚ್ಚು ಫಿರಂಗಿ' ಎಂದು ಕರೆಯುತ್ತಿದ್ದರು. 'ಸಹವಾಸ ಸಹವಾಸ ಅಲ್ಲ ಕಣ್ರಿ. ಎತ್ತಗೆ ಢಮಾರ್ ಅನ್ನುತ್ತೊ ಗೊತ್ತಾಗಲ್ಲ. ನಮ್ಮ ಕಡೇನೂ ಬೀಳಬಹುದು ಬಾಂಬು' ಅಂತಿದ್ದರು. ಈ ಲೇವಡಿಯಲ್ಲಿ ಸತ್ಯವೂ ಇದೆ. ಲಂಕೇಶರ ವ್ಯಕ್ತಿತ್ವವೂ ಇದೆ. ಲಂಕೇಶ್ ಒಂದು ಎನರ್ಜಿ ಆಗಿದ್ದರು. 'ಎತ್ತಗೆ ಢಮಾರ್ ಅನ್ನುತ್ತೊ ಗೊತ್ತಾಗಲ್ಲ' ಇದೂ ನಿಜವೇ ಅಂದರೆ ಲಂಕೇಶ್ ತರ್ಕಾತೀತರಾಗಿದ್ದರು. ನೀವು ಇಂಗ್ಲಿಷ್‌ನಲ್ಲಿ unpredictable ಅಂತೀರಲ್ಲ ಅದು.

ಇದನ್ನು ನಾನು ಬಹಳ ಹಿಂದೆಯೇ ಸಭ್ಯವಾಗಿ ಬರೆದಿದ್ದೆ– ಮುಸ್ಸಂಜೆ ಕಥಾಪ್ರಸಂಗದ ಮೊದಲ ಆವೃತ್ತಿಗೆ ಬೆನ್ನುಡಿ. ಆ ನುಡಿಗಳ ಅಂದಾಜು ಹೀಗಿದೆ– 'ಲಂಕೇಶರನ್ನು ಇಷ್ಟೇ ಎಂದು ಹೇಳಿ ಅಂದರೆ ಕತೆಗಾರ, ಕಾದಂಬರಿಕಾರ, ಕವಿ, ನಟ ಇನ್ನೂ ಹತ್ತಾರು ಪಟ್ಟಿಕೊಟ್ಟು ಕಟ್ಟು ಹಾಕಿದರೆ ಮೂರ್ಖತನವಾಗುತ್ತದೆ. ತರ್ಕಾತೀತವಾದ ಸೃಷ್ಟಾತ್ಮಕತೆ ಇದು'– ಬಹುಶಃ

ಹೀಗೇ ಇರಬೇಕು, ಬರೆದಿದ್ದೆ. ನನಗೆ ಅರ್ಥವಾಗದೇ ಇರುವುದು ಎಂದರೆ ಈ ಎನರ್ಜಿಯ ಚೈತನ್ಯ ಉಕ್ಕಿ ಹರಿಯಲು ಲಂಕೇಶ್‌ಗೆ ಒಂದು ಹುಲ್ಲುಕಡ್ಡಿಯಾದರೂ ವೈರಿಯಾಗಿ ಅವರ ಎದುರಿಗೆ ಬಂದು ತಲೆ ಕುಣಿಸಬೇಕಿತ್ತು! ತೊಡೆ ತಟ್ಟಬೇಕಿತ್ತು! ಇದು ಯಾಕೆ ಅಂತ ನನಗೆ ಈಗಲೂ ಅರ್ಥವಾಗ್ತಿಲ್ಲ.

ಯಾವುದೇ ಭಾಷೆಯ ಯಾವುದೇ ಲೇಖಕರು ಬಹುತೇಕ ಬಾಲ್ಯವನ್ನೇ ಬಂಡವಾಳ ಮಾಡಿಕೊಂಡಿದ್ದರೆ ಲಂಕೇಶ್ ಹೆಚ್ಚಾಗಿ ವರ್ತಮಾನದ ಲೇಖಕರಾಗಿದ್ದರು. 'ಈ ಕ್ಷಣದಲ್ಲಿ ಇಡಿಯಾಗಿ ಇರುವುದೇ ಧ್ಯಾನ' ಅಂತ ಎಲ್ಲೋ ಓದಿದ ನೆನಪು. ಇದು ನಿಜವೇ ಆದರೆ ಲಂಕೇಶ್ ಧ್ಯಾನಿಯಾಗಿದ್ದರು. ಇದೇ ಮಾತನ್ನು ಬಹಳ ಹಿಂದೆ ಆಂದೋಲನ ಪತ್ರಿಕೆಯ ವಿಸ್ತರಣೆ ಸಂದರ್ಭದಲ್ಲಿ ಹೇಳಿದ್ದೆ– 'ಪತ್ರಿಕೋದ್ಯಮ ಕ್ಷೇತ್ರದಲ್ಲಿ ರಾಜಶೇಖರ ಕೋಟಿ ಒಂಟಿ ಕಾಲಿನ ತಪಸ್ವಿಯಾದರೆ ಲಂಕೇಶ್ ಧ್ಯಾನಿಯಂತೆ. ಈ ಇಬ್ಬರೂ ಯಶಸ್ವಿಯಾಗಿ ಅನೇಕ ಪತ್ರಿಕೆಗಳ ಹುಟ್ಟಿಗೂ ಸಾಹಸಗಳಿಗೂ ಪ್ರೇರಕರೂ ಆಗಿದ್ದಾರೆ. ಇವರೊಡನೆ ಸ್ಪರ್ಧೆಗಿಳಿಯುವವರೂ ಕೂಡ ಇವರನ್ನು ಗುರುವಾಗಿ ನೋಡಬೇಕು. ಅರ್ಜುನ ಯುದ್ಧದಲ್ಲಿ ಎದುರಾಳಿಯಾಗಿದ್ದ ದ್ರೋಣನ ಪಾದಕ್ಕೆ ನಮಸ್ಕರಿಸಿ ಯುದ್ಧ ಮಾಡಿದಂತೆ ಸ್ಪರ್ಧಿಸಬೇಕು' ಎಂದಿದ್ದೆ. ಈ ಕೃತಜ್ಞತೆಯು ಪತ್ರಿಕೋದ್ಯಮ ಕ್ಷೇತ್ರಕ್ಕೆ ಇರಬೇಕಾಗಿದೆ.

ಜೊತೆಗೆ ಲಂಕೇಶರದು ಎಚ್ಚರದ ತೀಕ್ಷ್ಣ ಪ್ರಜ್ಞೆ ಕೂಡ. ಹಾಗಾಗಿ ತನ್ನ ಕಾಲಮಾನದ ಸಮುದಾಯವನ್ನು ಎಚ್ಚರಿಸುತ್ತಿದ್ದರು, ಪ್ರಭಾವಿಸುತ್ತಿದ್ದರು. ಈ ಬಗೆಯಲ್ಲಿ ವರ್ತಮಾನದ ತಲ್ಲಣಗಳಿಗೆ ಪ್ರತಿಕ್ರಿಯಿಸಿ ಪ್ರಭಾವಿಸಿದ ಲೇಖಕ ಕನ್ನಡದಲ್ಲಿ ಇವರೊಬ್ಬರೇ ಅನ್ನುವಷ್ಟು ಪ್ರಭಾವಿಸಿದ್ದಾರೆ. ಪತ್ರಿಕೋದ್ಯಮದಲ್ಲಿ ಇವರ ಕಾಣ್ಕೆ ಅಂದರೆ–ಸಮಾಜವು ದಲಿತರನ್ನು ಅವಮಾನಿಸಿ ನೋಡುತ್ತಿತ್ತು, ಮುಸ್ಲಿಮರನ್ನು ಅನುಮಾನಿಸಿ ನೋಡುತ್ತಿತ್ತು– ಲಂಕೇಶ್ ಇವೆಲ್ಲವನ್ನೂ ಆರೋಗ್ಯಕರವಾಗಿ ನೋಡುವ ಒಂದು ನೋಟ ಕೊಟ್ಟರು. ಮತ್ತು ಇಷ್ಟೇ ಅಲ್ಲ.

ಒಂದು ಜೋಕ್ ಹೇಳುವೆ. ಲಂಕೇಶ್ ಯಾವಾಗಲೂ ಜಯಮಾಲರನ್ನು 'ನನ್ನ ತಮ್ಮ' ಎಂದು ಬರೆದುಕೊಳ್ಳುತ್ತಿದ್ದರು. ಇದನ್ನು ಚೇಷ್ಟೆ ಮಾಡಬೇಕು ಅನ್ನಿಸಿತು ನನಗೆ. ಪತ್ರಿಕೆಯ ಪ್ರಶ್ನೋತ್ತರ ವಿಭಾಗಕ್ಕೆ ಒಂದು ಹುಡುಗಿ ಹೆಸರಲ್ಲಿ ಒಂದು ಪ್ರಶ್ನೆ ಕಳಿಸಿದೆ. ಆದರೆ ನಾನೇ ಈ ಪ್ರಶ್ನೆ ಕಳಿಸಿದ್ದು ಎಂದು ಜೊತೇಲಿ ಬರೆದಿದ್ದೆ. ಪ್ರಶ್ನೆ ಈ ರೀತಿ: ಜಯಮಾಲರನ್ನು ನೀವು ತಮ್ಮ

ಎಂದು ಕರೆಯುವಂತೆ ನಾನು ನಿಮ್ಮನ್ನು ಅತ್ತೆ ಅಂದರೆ ಲಂಕೇಶತ್ತೆ ಎಂದು ಕರೆಯಬಹುದೆ? ನಾನು ಬಹುಮಾನಿತ ಪ್ರಶ್ನೆಯಲ್ಲಿ ಆಯ್ಕೆಯಾಗಬಹುದು ಎಂದು ನಿರೀಕ್ಷೆಯಲ್ಲಿ ಇದ್ದರೆ ಲಂಕೇಶ್ ಪ್ರಶ್ನೆಯನ್ನು ರೂಪಾಂತರಿಸಿಬಿಟ್ಟಿದ್ದರು! ಅವರ ಪ್ರಶ್ನೆಯ ರೂಪಾಂತರ: ನಾನು ನಿಮ್ಮನ್ನು ಆಂಟಿ ಎಂದು ಕರೆಯಬಹುದೇ? ಉತ್ತರ: ಆಂಟಿ (Aunty) ಎಂದು ಕರೆಯಿರಿ, ಆದರೆ ಯ್ಯಾಂಟಿ (Anti) ಆಗದಿದ್ದರೆ ಸಾಕು. ಲಂಕೇಶ್ ಪ್ರಶ್ನೆಯನ್ನು ಮುಚ್ಚಿಹಾಕಿಬಿಟ್ಟಿದ್ದರು. ನಾನು 'ಲಂಕೇಶತ್ತೆ' ಎಂಬುದನ್ನು ಲಂಕೇಶ್ ಪತ್ರಿಕೆ ಕಛೇರಿಯಲ್ಲಿ ಬಿತ್ತನೆ ಮಾಡಬೇಕೆಂದಿದ್ದೆ! ಆದರೆ ಲಂಕೇಶ್ ಪತ್ರಿಕೆ ಕಛೇರಿಯ ಮೇಲೆ ನನಗೆ ವಿಶ್ವಾಸ ಬರಲಿಲ್ಲ. ಕಛೇರಿ ಸಿಬ್ಬಂದಿ ನಾಡಿನಾದ್ಯಂತ 'ಲಂಕೇಶತ್ತೆ' ಮಾಡಿಬಿಡಬಹುದೆಂಬ ಆತಂಕದಿಂದ ಆಗ ಸುಮ್ಮನಾದೆ.

ಅದೇ ತಲ್ಲಣಕ್ಕೆ ಬಂದರೆ ಲಂಕೇಶ್ ತಲ್ಲಣಿಸುವ ಜೀವ. ಅವರು ತೀರಿಕೊಂಡಮೇಲೆ ನಾಡಿನ ತಲ್ಲಣ ಯದ್ವಾತದ್ವಾ ಹೆಚ್ಚಾಗಿಬಿಟ್ಟಿವೆ. ಯಾರು ಏನೇ ಮಾಡಿದರೂ ಎರಡೆರಡು ಸಲ ಯೋಚನೆ ಮಾಡಿ ಮಾಡಬೇಕಾದ ಭಯವನ್ನು ಅವರ ಇರುವಿಕೆ ಉಂಟುಮಾಡಿತ್ತು. ಈ ಭಯದಿಂದಾಗಿ ಒಳ್ಳೇದು, ಕೆಟ್ಟದೂ ಎರಡೂ ಆಗಿದೆ. ಆದರೆ ಆಗಿರುವ ಒಳ್ಳೇದರ ಮುಂದೆ ಕೆಟ್ಟದು ನಗಣ್ಯ.

ಲಂಕೇಶ್ ಇದ್ದಿದ್ದರೆ ಹಂಪಿಯಲ್ಲಿ ಭೂತಕಾಲದ ಸ್ಮಶಾನ ನಿರ್ಮಿಸಲು ಹೊರಟಿರುವ ಸರ್ಕಾರ ಸ್ವಲ್ಪ ತಡೆದು ನಿರ್ಧಾರ ತೆಗೆದುಕೊಳ್ಳುತ್ತಿತ್ತೇನೊ. ಮತಾಂತರ ನಿಷೇಧ ಕಾನೂನು ತರುವ ಸರ್ಕಾರದ ಬಯಕೆ ಸ್ವಲ್ಪವಾದರೂ ಅಳುಕುತ್ತಿತ್ತೇನೊ.

ಈ ಮಠಾಧಿಪತಿಗಳು, ಸ್ವಾಮೀಜಿಗಳು ಕೆಲವರು ಮತಾಂತರ ನಿಷೇಧಕ್ಕೆ ಒತ್ತಾಯಿಸುತ್ತಾರೆ. ಸ್ವಜಾತಿ ಮದುವೆ ಧರ್ಮಬಾಹಿರ ಎಂದಾಗಲಿ ಅಥವಾ ಸರ್ವಜಾತಿಗೂ ನಮ್ಮ ಮಠದಲ್ಲಿ ಪರ್ಯಾಯ ಪೀಠಾಧಿಪತಿ ಸ್ಥಾನಮಾನ ಇದೆಯೆಂದಾಗಲಿ ತಾತ್ವಿಕ ಮಟ್ಟದಲ್ಲಾದರೂ ನಿರ್ಣಯಿಸಿ ಹೇಳದೆ, ಮತಾಂತರ ನಿಷೇಧ ಆಗಲಿ ಎಂದು ಹೇಳುವವರನ್ನು ಮನುಷ್ಯರು ಎಂದು ಕರೆಯಲು ಕಷ್ಟವಾಗುತ್ತದೆ. ಅಥವಾ ಪ್ರೇತಗಳು ಎಂದು ಕರೆಯುವುದಕ್ಕೆ ಮನಸ್ಸಾಗದು. ಇಂಥ ಸಂದಿಗ್ಧ ಸ್ಥಿತಿಯನ್ನು ಸರ್ಕಾರವೂ ಮಠಾಧಿಪತಿಗಳು ತಂದೊಡ್ಡಬೇಡಿ ಎಂದು ಪ್ರಾರ್ಥಿಸುವೆ.

ಲಂಕೇಶ್ ಇದ್ದಿದ್ದರೆ 'ಗೋಹತ್ಯೆ ನಿಷೇಧ' ಎಂಬ ನರಹತ್ಯೆ ಹಿಡೆನ್ ಅಜೆಂಡಾ ಕಾನೂನು ಬಗ್ಗೆ ಹೇಗೆ ಗ್ರಹಿಸುತ್ತಿದ್ದರು, ಹೇಗೆ ಪ್ರತಿಕ್ರಿಯಿಸುತ್ತಿದ್ದರು ಎಂದು ಒಂದು ಕ್ಷಣ ನೋಡಿದರೆ ನನಗೆ ಹೀಗೆ ಅನ್ನಿಸುತ್ತೆ: ಲಂಕೇಶ್ ಗೋಮಾಂಸ ಸೇವನೆಗೆ 'ವಾಜಪೇಯಿ ಖಾದ್ಯ' ಎಂದು ಹೆಸರಿಟ್ಟು ರಾಜ್ಯದ ತುಂಬಾ ಪ್ರಸಿದ್ಧಿಗೆ ತಂದು ಸಮಸ್ಯೆ ಬಗೆಹರಿಸುತ್ತಿದ್ದರು ಅನ್ನಿಸುತ್ತದೆ. ಯಜ್ಞಯಾಗಗಳಲ್ಲಿ ಗೋಮಾಂಸ ಅರ್ಪಿಸುತ್ತಿದ್ದುದ್ದರಿಂದಲೂ, ವಾಜಪೇಯಿ ಗೋಮಾಂಸ ಸೇವನೆ ಮಾಡಿದರೆಂಬ ಸುದ್ದಿ ಎಲ್ಲವೂ ಕೂಡಿ ಈ ಒಂದು ಪದದೊಳಗೆ ಇರುತ್ತಿತ್ತು.

ಕೊನೆಯದಾಗಿ, 80ರ ದಶಕದಲ್ಲಿ ನಡೆದ ಮೀಸಲಾತಿ ಸೆಮಿನಾರ್‌ನಲ್ಲಿ ಲಂಕೇಶ್ 'ದಲಿತರು ಈ ಸಮಾಜದ ಕಡೆ ನೋಡುತ್ತಿರುವುದು ಪ್ರೀತಿಗಾಗಿ ಕೂಡ. ಇದಕ್ಕೆ 'ಒಂದು ಮುಗುಳ್ನಗೆ ಸಾಕು' ಎಂದಿದ್ದರು. ಆ ಸೆಮಿನಾರ್ ವಿವರಗಳು, ಒತ್ತಾಯಗಳು ಎಲ್ಲವೂ ಇಂದು ಮರೆತುಹೋಗಿದೆ. ಆದರೆ ಅವರ ನುಡಿ 'ಒಂದು ಮುಗುಳ್ನಗೆ ಸಾಕು' ಎಂಬುದು ಲಂಕೇಶ್ ಮುಗುಳ್ನಗೆಯಾಗಿಯೂ ನಮ್ಮೊಡನೆ ಇದೆ.

## ಅರಸು ಚಕ್ರವರ್ತಿಯಂತೆ...

ಭಾರತದ ಸಾಮಾಜಿಕ ಸಂಕೀರ್ಣತೆಯಲ್ಲಿ ಒಂದು ವೈಚಿತ್ರ್ಯ ಕುತೂಹಲಕಾರಿಯಾಗಿದೆ. ಯಾವ ಜನಾಂಗದವರು ಬೆರಳೆಣಿಕೆಯಷ್ಟು ಇರುತ್ತಾರೋ ಅಂಥವರು ಹೆಚ್ಚಾಗಿ ಚಕ್ರವರ್ತಿಗಳಾಗಿದ್ದಾರಂತೆ. ಉದಾ: ಕೃಷ್ಣದೇವರಾಯ ಅಗಸರಂತೆ, ಮೈಸೂರು ಅರಸರು ಕುಂಬಾರರಂತೆ, ಹೀಗೆ ಚಂದ್ರಗುಪ್ತ ಮೌರ್ಯ, ಅಶೋಕ. ಆದರೆ ಬಹುಸಂಖ್ಯಾತ ಜಾತಿಗೆ ಸೇರಿದವರು– ಹೆಚ್ಚಾಗಿ ಪಾಳೆಗಾರರು ಅಥವಾ ಹೆಚ್ಚೆಂದರೆ ರಾಜರು. ಈ ಬಗೆಯ ನೆಲದ ಆಯ್ಕೆಯ ಕಾಣ್ಕೆ ಅಲ್ಪಸಂಖ್ಯಾತ ಸಮುದಾಯದ ವ್ಯಕ್ತಿ ಅನಿವಾರ್ಯವಾಗಿ ಹೆಚ್ಚು ನ್ಯಾಯಸಮ್ಮತನಾಗಿರುತ್ತಾನೆ, ಆತ ಬಹುಸಂಖ್ಯಾತ ಜನಸಂಖ್ಯೆಗೆ ಸೇರಿದವನಲ್ಲವಾದ್ದರಿಂದ ಪಕ್ಷಪಾತವೂ ಮಿತಗೊಂಡಿರುತ್ತದೆ ಎಂದಿರಬಹುದೆ?

ಅರಸು ಚಕ್ರವರ್ತಿಯಂತೆ ನಡೆದುಕೊಂಡರು. ಅವರಿಗೆ ಅಪಾರವಾದ ಆತ್ಮವಿಶ್ವಾಸವಿತ್ತು. ಇದನ್ನು ಅವರ ಮಂತ್ರಿಮಂಡಲದಲ್ಲಿದ್ದ ಘಟಾನುಘಟಿಗಳ ಆಯ್ಕೆ ಹೇಳುತ್ತದೆ. ಆತ್ಮವಿಶ್ವಾಸ ಇದ್ದವನು ಮಾತ್ರ ತನಗಿಂತ ಮಿಗಿಲಾದವರನ್ನು ಆಯ್ಕೆ ಮಾಡಿಕೊಳ್ಳಬಲ್ಲ. ನಾನೂ ಒಂದು ಸಲ ವಿಧಾನಸಭೆಯ ಕಲಾಪದಲ್ಲಿ ಅರಸು ಅವರನ್ನು ನೋಡಿದ್ದೆ. ಹೈಕೋರ್ಟ್‌ನಲ್ಲಿ ನಾನು, ಸುಮಿತ್ರಾ ಒಂದೆರಡು ಸಲ ನ್ಯಾಯಮೂರ್ತಿ ಭೀಮಯ್ಯ ಅವರ ಕಲಾಪ ನೋಡಿದ್ದೆವು. ಈ ಎರಡನ್ನೂ ನನಗೆ ಮರೆಯಲಾಗುತ್ತಿಲ್ಲ. ಈ ಇಬ್ಬರೂ ದಾರ್ಶನಿಕ ಅಂತಃಸತ್ವದವರು ಅನಿಸುವಂತಿದ್ದರು.

ಶ್ರೀ ದೇವರಾಜ ಅರಸು ಅವರ ಬಗ್ಗೆ ಅವರ ಬಾಲ್ಯಕಾಲದ ಸಖ

ಚದುರಂಗರು ಹಿಡಿದಿಟ್ಟ ಉಪಮೆಯೇ ಕರಾರುವಾಕ್ಕಾಗಿ ಅರಸು ಅವರ ವ್ಯಕ್ತಿತ್ವವನ್ನು ಕಡೆದಿಡುತ್ತದೆ ಅನಿಸುತ್ತದೆ.

"ರಾಮಾಯಣದ ಹನುಮಂತ, ಶಯ್ಯಾಗೃಹದಲ್ಲಿ ಮಂಡೋದರಿಯೊಡನೆ ಮಲಗಿದ್ದ ರಾವಣನ ಕಂಡು ಹೀಗೆ ತನಗೆ ತಾನೇ ಅಂದುಕೊಳ್ಳುತ್ತಾನಂತೆ: 'ಸೀತಾಪಹರಣದ ಕಳಂಕ ಇಲ್ಲದಿದ್ದರೆ ರಾವಣ ದೇವರಿಗೆ ಅರ್ಪಿಸಬೇಕಾದ ಹಾರ. ಎಂಥಾ ಮಹಾತ್ಮ!' – ಈ ನುಡಿಗಳನ್ನು ಅರಸು ಅವರಿಗೆ ಕೂಡಿಸಿ ಭ್ರಷ್ಟಾಚಾರದ ಕಳಂಕ ಇಲ್ಲದಿದ್ದರೆ ದೇವರಾಜ ಅರಸು ದೇವರಿಗೆ ಅರ್ಪಿಸಬೇಕಾದ ಹಾರ" ಎಂದು ಚದುರಂಗ ಅಂತಾರೆ. ಈ ಉಪಮೆಯಲ್ಲಿಯೇ ಎಲ್ಲವೂ ಅಡಗಿದೆ.

ಭ್ರಷ್ಟಾಚಾರವು ಅರಸು ಅವರ ಪೂರ್ವದಲ್ಲಿ ಇರಲಿಲ್ಲ ಅಂತಲ್ಲ ಇತ್ತು. ಆದರೆ ಅರಸು ಅವರ ಕಾಲದಲ್ಲಿ ಅದು ಬೀದಿಗೆ ಬಂತು. ಇದಿದ್ದೂ ಕೂಡ ಇದನ್ನು ಮರೆತುಬಿಡುವಷ್ಟು ಚಾಲನೆ ಅರಸು ಅವರಿಂದ ಹಿಂದುಳಿದ ವರ್ಗಕ್ಕೆ ಸಿಕ್ಕಿತು. ಅರಸು ಅಸಹಾಯಕ ಜನಾಂಗಗಳನ್ನು ಎತ್ತಿ ನಿಲ್ಲಿಸಿದರು. ಒಂದು ಪವಾಡದಂತೆ, ಯಾರೂ ಕೇಳದಿದ್ದ ಹೆಸರಿಲ್ಲದಿದ್ದ ತಳ ಜನಾಂಗಗಳಿಗೆ ಚಲನೆ ಬಂತು.

## ಕೊನೆಯದಾಗಿ, ಗಾಯತ್ರಿ ಮಂತ್ರ!

ನಾನೀಗ ಅನಂತಮೂರ್ತಿಯವರ ಲೇಖನ ಸಂಗ್ರಹ ಬಿಡುಗಡೆ ಮಾಡಬೇಕಾಗಿದೆ. ಅವರು ಉದಯೋನ್ಮುಖ ಲೇಖಕನಂತೆ ಸಂಭ್ರಮಿಸುತ್ತ ವೇದಿಕೆ ಮೇಲೆ ರಾರಾಜಿಸುತ್ತಿದ್ದಾರೆ. ಅವರ ಎಳೆತನಕ್ಕೆ ಬೆರಗಾಗಿದ್ದೇನೆ.

ಅವರ ಪರಿಚಯವಾದಾಗ ನಾನು ಎಳೆ ಹುಡುಗ, ಪಿಯುಸಿ ಫೇಲಾಗಿದ್ದೆ. ಅವರೂ ಪಿಯುಸಿ ಫೇಲಾದವರಾಗಿದ್ದು ನಮ್ಮಂಥಹ ಫೇಲು ಪರಂಪರೆಯವರಿಗೆ ಸೀನಿಯರ್ ಆಗಿ ಒಂದು ಭರವಸೆಯ ಬೆಳಕಾಗಿದ್ದರು. ಯಾಕೆಂದರೆ ಅವರು ಆಗಲೇ ವಿಜೃಂಭಿಸುವ ಲೇಖಕರಾಗಿದ್ದರು.

ನನಗೆ ಇನ್ನೂ ನೆನಪಿದೆ. ಸಂಸ್ಕಾರ ಚಿತ್ರ ಬ್ಯಾನ್ ಆದುದಕ್ಕೆ ನಡೆದ ಪ್ರತಿಭಟನೆ. ಹೆಚ್ಚು ಕಮ್ಮಿ ನೂರು ಜನರಿದ್ದ ಮೆರವಣಿಗೆ ಅದು. ಇದರಲ್ಲಿ ಭಾಗವಹಿಸಿದ್ದವರೆಲ್ಲರೂ ಆ ಮೆರವಣಿಗೆಯನ್ನು ಮಾಡುತ್ತಿರುವುದು ತಮಗಾಗೇ ಎಂಬಂತೆ ಇದ್ದರು. ಅಲ್ಲಿ ಬುದ್ಧಿಭಾವ ತಾತ್ವಿಕತೆ ಬೇರ್ಪಡಿಸಲಾಗದಂತೆ ಇತ್ತು. ಇದು ಕಳೆದು ಹೋದುದಕ್ಕೆ ಹಳಹಳಿಸುವ ಮನಸ್ಥಿತಿ ಅನ್ನಿಸುತ್ತಿದೆ, ನಿಜ. ಆದರೆ ಆ ಮೆರವಣಿಗೆಯ ದ್ರವ್ಯ ಇಂದು ನಮಗೆ ಹೆಚ್ಚು ಬೇಕಾಗಿದೆ.

ಆಗ ನನ್ನಂಥವರಿಗೆ ಶಿಕ್ಷಣವಾಗಿದ್ದುದು ಕಾಲೇಜು ಪಠ್ಯವಲ್ಲ. ಮುಖ್ಯವಾಗಿ ಅನಂತಮೂರ್ತಿ ಲಂಕೇಶ್‌ರ ನಡುವಿನ ವಾಗ್ವಾದಗಳು ಶಿಕ್ಷಣವಾಗಿತ್ತು. ಯುವ ಜನರನ್ನು ರೂಪಿಸುತ್ತಿತ್ತು. ನಾನು ಅನಂತಮೂರ್ತಿ ಲಂಕೇಶರನ್ನು ಕನ್ನಡ ಸಾಹಿತ್ಯದ ಸವತಿಯರು ಎಂದು ಚುಡಾಯಿಸಿದ್ದೆ. ಆಗ ಲಂಕೇಶರನ್ನು ಯಂಗ್ ಅಂಡ್ ಚಾರ್ಮಿಂಗ್ ಎಂದು ಹೇಳಿದ್ದ ನೆನಪು.

ಇವರ ಲೇಖನಗಳು ಎಷ್ಟು ಪ್ರಭಾವಿಸುತ್ತಿದ್ದವು ಎಂಬುದಕ್ಕೆ ಒಂದು ಉದಾ: ಇವರ ಲೇಖನವೊಂದು ಬಹುಶಃ ಸಾರ್ತ್ರೆ ಬಗ್ಗೆ ಏನೊ– 'ನಮ್ಮ ಆಯ್ಕೆಗಳು ನಮ್ಮ ಬದುಕನ್ನು ರೂಪಿಸುತ್ತವೆ' ಎಂಬ ಮಾತು ಕನ್ನಡ ಎಂಎ ಓದುತ್ತಿದ್ದ ಹುಡುಗಿಗೆ ಬೇರೆ ಜಾತಿ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳಲು ಧೈರ್ಯ ತುಂಬಿತ್ತು.

ಆವರಿಸಿಕೊಂಡು ಪ್ರಭಾವಿಸುವ ಗುಣ ಇವರ ಲೇಖನಗಳ ಸಾಧಾರಣ ಸಂಗತಿಯಾಗಿದೆ. ಹಾಗಾಗೇ ನನಗೆ ಇವರ ಕೆಲವು ಲೇಖನಗಳು ಇವರ ಕಾವ್ಯಕ್ಕಿಂತಲೂ ಮಿಗಿಲು, ಕೆಲವು ಲೇಖನಗಳಂತೂ ಇವರ ಕತೆಗಳಿಗೆ ಸಮಸಮ ಎಂಬಂತೆ ಇವೆ. ಬ್ರಹ್ಮ ತನ್ನ ಸೃಷ್ಟಿಗೆ ತಾನೇ ಮೋಹಗೊಳ್ಳುವ ಮೋಹಕತೆ ಇವರ ಲೇಖನಗಳಲ್ಲಿರುವುದು ಇದಕ್ಕೆ ಕಾರಣವೇನೊ ಅಥವಾ ಹಾಡುಗಾರನೊಬ್ಬನ ತನ್ಮಯ ಗುಣವೂ ಇರಬಹುದು.

ಅವರ ವಿವಾದಾತ್ಮಕವಾದ– ಜಾತಿ, ಬಹುತ್ವ, ಸೃಜನಶೀಲತೆಯನ್ನು ನಾನು ಗ್ರಹಿಸುತ್ತಿದ್ದ ಬಗೆಯನ್ನು ಹೇಳಿದರೆ ಇಲ್ಲಿಗೆ ಸಾಕು ಅನ್ನಿಸುತ್ತದೆ. ಅವರ ಈ ದೃಷ್ಟಿಕೋನ ತಪ್ಪು ಅರ್ಥಕ್ಕೂ ಕಾರಣವಾಗುತ್ತಿತ್ತು. ತಪ್ಪು ಅರ್ಥ ಮಾಡಿಕೊಂಡವರದು ತಪ್ಪು ಎಂದು ಸಾರಾಸಗಟಾಗಿ ಹೇಳಲಾಗದ ಸಂದಿಗ್ಧತೆಯನ್ನು ಅವರ ಲೇಖನಗಳೇ ಉಂಟುಮಾಡುತ್ತಿದ್ದವು. ಇದಕ್ಕೆ ಕಾರಣ ಅವರ ಲೇಖನಗಳಲ್ಲಿನ ಓಘ. ಅವರ ಲೇಖನಗಳು ನಿಂತ ನೀರಿನ ಕೊಳವಾಗಿರಲಿಲ್ಲ. ಅಥವಾ ಜಲ ಜಿನುಗಿಸುವ ಜಲದ ಕಣ್ಣಾಗಿಯೂ ಆಗಿರಲಿಲ್ಲ. ಅದು ಅನೇಕ ಝರಿಗಳನ್ನು ಕೂಡಿಕೊಂಡು ವೇಗದಲ್ಲಿ ಹರಿಯುವ ನದಿಯಂತೆ. ಹಾಗಾಗಿ ಸ್ವಲ್ಪ ಅತ್ತ ಇತ್ತ ಇರುತ್ತಿತ್ತು. ಜೊತೆಗೆ ಅವರು ಇಲ್ಲಿದ್ದರೆ, ಇನ್ನೊಂದು ಕಡೆಗೆ ಕಣ್ಣು ಹೊಡೆಯುತ್ತಿದ್ದರು. ಈ ಕಣ್ಣು ಹೊಡೆವುದನ್ನು ಅಪಾರ್ಥ ಮಾಡಿಕೊಳ್ಳುವುದು ಬೇಡ, ಎಲ್ಲವನ್ನೂ ಒಳಗೊಳ್ಳಬೇಕೆಂಬ ಅವರ ಹಂಬಲ ಅಷ್ಟೆ.

ನಾನು ಒಟ್ಟಾಗಿ ಗ್ರಹಿಸಲು ಪ್ರಯತ್ನಿಸುತ್ತಿದ್ದೆ– ಅವರು ಒಂದು ಸಂದರ್ಶನದಲ್ಲಿ 'ಮೀಸಲಾತಿ ಬೇಕು. ಅದು ಸಮುದ್ರದಲ್ಲಿ ಮೀನು ಹಿಡಿದಂತೆ' ಅನ್ನುತ್ತಾರೆ. ಇದು ಕಾಣ್ಕೆ ನುಡಿಯಂತೆ ನನಗೆ ಕಾಣಿಸುತ್ತದೆ. ಎಲ್ಲರಿಗೂ ಅವಕಾಶವಿರುವ ವಾತಾವರಣದಲ್ಲಿ ಮಿಗಿಲಾದ ಪ್ರತಿಭೆಗಳು ಅರಳುತ್ತವೆ, ಅದಕ್ಕಾಗಿ ಮೀಸಲಾತಿ ಬೇಕು ಎನ್ನುವ ಇವರ ಇಂಥ ಅದ್ಭುತ ಸಮರ್ಥನೆಯನ್ನು ನಾನೆಲ್ಲೂ ಕೇಳಿಲ್ಲ. ಅದೇ ಲೇಖನದಲ್ಲಿ ಅವರು– 'ನಾನು ಮಡಿಬಿಟ್ಟೆ, ಮೈಲಿಗೆಯಾದೆ

ಹಾಗಾಗಿ ಲೇಖಕನಾದೆ' ಅನ್ನುತ್ತಾರೆ. ಈ ಮಾತು ಸೃಜನಶೀಲತೆಗೆ ಭಾರತ ಏನಾಗಬೇಕೆಂದು ಹೇಳುತ್ತದೆ. ಮೊಟ್ಟೆಯೊಡೆದು ಜೀವ ತಳೆದು ಹೊರಬಂದ ಮರಿಯಂತೆ ಈ ಮಾತಿದೆ. ನಾನು ಈ ಹಿನ್ನೆಲೆಯಿಂದ ಗ್ರಹಿಸುತ್ತಿದ್ದೆ.

ಕೊನೆಯದಾಗಿ, ಗಾಯತ್ರಿ ಮಂತ್ರ! ಅನಂತಮೂರ್ತಿಯವರ ಆರೋಗ್ಯ ಬಿಗಡಾಯಿಸಿ ದೆಹಲಿ ಆಸ್ಪತ್ರೆಯಲ್ಲಿ ಅರೆಪ್ರಜ್ಞಾವಸ್ಥೆ ಸ್ಥಿತಿಯಲ್ಲಿದ್ದಾಗ, ಅವರು ನನಗೆ ಗಾಯತ್ರಿ ಮಂತ್ರವನ್ನು ಹೇಳಿಕೊಟ್ಟಂತೆ ಬೋಧೆಯಾಯ್ತಂತೆ. ಅವರು ಇದನ್ನು ನನಗೆ ಹೇಳಿದಾಗ ನಾನೆಂದೆ– 'ಸಾರ್, ಇದು ಮಾಮೂಲಿ ನಡಿಗೆ. ಅರೆಪ್ರಜ್ಞಾವಸ್ಥೆ ಸ್ಥಿತಿಯಲ್ಲಾದರೂ ನಾನು ನಿಮಗೆ ಗಾಯತ್ರಿ ಮಂತ್ರ ಹೇಳಿಕೊಟ್ಟಂತೆ ಬೋಧೆಯಾಗಿದ್ದರೆ ಭಾರತದ ಮನಸ್ಸಿಗೆ ಚಲನೆ ಬರುತ್ತಿತ್ತಲ್ಲವೆ?' ಎಂದು. ಅವರು ಮೌನವಾದರು. ಇದನ್ನೂ ಸ್ವೀಕರಿಸಿ ದಕ್ಕಿಸಿಕೊಂಡು ಬೆಳೆಯುವ ಹದ ಅವರ ವ್ಯಕ್ತಿತ್ವದಲ್ಲಿದೆ. ಇದು ತುಂಬಾ ದೊಡ್ಡದು ಅನ್ನಿಸುತ್ತದೆ.

## ಎಂಡಿಎನ್ ಸಂದರ್ಶನ

ನಾನು ನಂಜುಂಡಸ್ವಾಮಿಯವರ ಸಂದರ್ಶನ ಮಾಡಲು ಬಯಸಿರಲಿಲ್ಲ. ಯಾಕೆಂದರೆ ಇಸವಿ 1968. ನಂಗಿನ್ನೂ ಮೀಸೆ ಬಂದಿರಲಿಲ್ಲ. ನಂಜನಗೂಡು ಕೋರ್ಟಿನಲ್ಲಿ ಒಬ್ಬ ಲಾಯರು ಕನ್ನಡದಲ್ಲಿ ವಾದಿಸುತ್ತಿದ್ದರು. ಹೊರಗೊಬ್ಬ ಸೂಟುಬೂಟಿನ ಗಡ್ಡಧಾರಿ ಬಹುಶಃ ಆ ಗಡ್ಡದ ಒಂದು ಕೂದಲೂ ಕೊಳೆ ಇಲ್ಲದಂತಹದು, ಹಣೆಗಂಟಿಕ್ಕಿ ಸಿಗರೇಟು ಸೇದುತ್ತ ನಿಂತಿತ್ತು. ದೇವರ ದಯದಿಂದ ಆಗ ನನ್ನ ಜೇಬಲ್ಲೊಂದು ಸಿಗರೇಟಿತ್ತು. ಆ ವ್ಯಕ್ತಿಯ ಹಣೆಗಂಟನ್ನು ಇನ್ನೂ ಹೆಚ್ಚಿಸಬೇಕೆಂದು ನಾನು ಆತನ ಬಳಿಗೆ ಹೋಗಿ ಸಿಗರೇಟು ಮುಂದೊಡ್ಡಿ ಬೆಂಕಿ ಕೇಳಿದೆ. ಆ ವ್ಯಕ್ತಿಯ ಮುಖದಲ್ಲಿ ಯಾವ ವಿಕಾರವೂ ಕಂಡುಬರದೆ ತಾನೆ ಬೆಂಕಿಕಡ್ಡಿ ಗೀರಿ ನನ್ನ ಸಿಗರೇಟಿಗೆ ಹಚ್ಚಿತು. ಆತನ ಮುಖದ ಹಣೆಗಂಟು ಮಾಯವಾಗಿ ಪ್ರಸನ್ನತೆ ಮೂಡಿತು! ಆತನ ಹಣೆಗಂಟು ನನ್ನ ಹಣೆಗೆ ಬರುವಂತದಾಯ್ತು.

**ಆರ್‌ಎಸ್‌ಎಸ್‌ನಿಂದ ಸಮಾಜವಾದಕ್ಕೆ**

ಆರ್‌ಎಸ್‌ಎಸ್‌ನಲ್ಲಿ ಇದ್ದ ನನ್ನನ್ನು, ನಿಜಗುರು ಸೂ. ರಮಾಕಾಂತ ಸಮಾಜವಾದಿ ಪಕ್ಷಕ್ಕೆ ತಂದ ಮೇಲೆ ತಿಳಿಯಿತು– ಕನ್ನಡದಲ್ಲಿ ವಾದಿಸುತ್ತಿದ್ದ ಲಾಯರು ಟಿ.ಎನ್. ನಾಗರಾಜ್‌ರವರು, ಆ ಗಡ್ಡಧಾರಿಯೇ ಪ್ರೊ. ನಂಜುಂಡಸ್ವಾಮಿಯವರು ಅಂತ. ಅಂದಿನಿಂದ ನಂಜುಂಡಸ್ವಾಮಿಯವರೊಡನೆ ಒಡನಾಡಿದ್ದೇನೆ. ಆಗಲೇ ಅಂದರೆ ಪಿಯುಸಿ ಫೇಲಾದ ನನ್ನನ್ನು, ಆ ಚಿಕ್ಕ ಹುಡುಗನನ್ನು, ತನ್ನ ಸಮಾನವಾಗಿ ಕಂಡ ದೊಡ್ಡ ಮನುಷ್ಯ ಆತ. ಇತರರೊಡನೆ ಕಟುವಾದ ಆತ ಯಾಕೊ ನನಗೆ ಸ್ವಲ್ಪ ರಿಯಾಯಿತಿ

ಕೊಟ್ಟಂತಿದೆ. ಎಷ್ಟೋ ಸಲ, ನಾನು ಮಹಾ ದೊಡ್ಡವನಂತೆ ಆತನನ್ನು ಸುಮ್ಮನಿರಿಸಿದ್ದೇನೆ.

**ನಾನು ಅತ್ತೆನು**

ನಂಜುಂಡಸ್ವಾಮಿಯವರ ಬಗ್ಗೆ ನಾನು ಇನ್ನೂ ತಾಳಿಕೊಳ್ಳಲಾರದ್ದು ಒಂದು ಮಾತ್ರವೇ. ಊರು ಬಿಟ್ಟ ರಮೇಶ್ ಬಂದಗದ್ದೆ ಬಗ್ಗೆ 'ಹೊಟ್ಟೆಗೆ ಗತಿ ಇಲ್ಲದೆ ಓಡಾಡಿಕೊಂಡಿದ್ದಾನೆ' ಎಂದದ್ದು ನನ್ನ ಹೊಟ್ಟೆಯನ್ನು ಕಿವುಚುತ್ತಿದೆ. ನಮ್ಮಂಥ ಹೊಟ್ಟೆಗಿಲ್ಲದವರೇ ಸಮಾಜವಾದಿ ಪಕ್ಷವಾಗದಿದ್ದರೆ ಇನ್ನಾರು ಆಗಬೇಕು? ನಾನು ಅತ್ತೆ. ಕರ್ನಾಟಕದಲ್ಲಿ ಸಂಯುಕ್ತ ಸಮಾಜವಾದಿ ಪಕ್ಷವೂ ಎರಡಾಗಿ ಒಂದಾಗುವಾಗ ಸೂ.ರಮಾಕಾಂತರೇ ಅದನ್ನು ಕೆಡಿಸಿದರು. ನಾನು ಅತ್ತೆ. ಇದನ್ನು ನಂಜುಂಡಸ್ವಾಮಿ ಓದಿದರೆ 'ನೀವು ಅಳುತ್ತಲೇ ಇರಬೇಕಾಗುತ್ತೆ. ಗೊತ್ತೇನು?' ಅಂತಾರೆ. ಆದರೆ ಈ ಜಗದ ಮಾನವ ಕೋಟಿಯನ್ನು ಏಕಮಾನವನನ್ನಾಗಿಸಲು ಕನಸು ಕಾಣುವ ನಮಗೆ ಸಹಿಸುವ ಸಹನೆ ಇಲ್ಲದಿದ್ದರೆ ಹೇಗೆ?

**ತೇಜಸ್ವಿ ತಪಸ್**

ಸಮಾಜವಾದಿಗಳ ಗಲುಗುಗದ್ದಲ ಜಗಳಕ್ಕೆ ಆ ತೇಜಸ್ವಿ ಮಾತ್ರ 'ಇವ್ರ ಸಾವಾಸಾನೆ ಬ್ಯಾಡ ಮಾರಾಯ' ಅಂತ ಒಂಟಿಯಾಗಿ ಚಿಂತಿಸುತ್ತ ಮೀನು ಹಿಡಿಯುತ್ತ ತಪಸ್ಸು ಮಾಡುತ್ತ ಸಿದ್ಧಿಗಾಗಿ ಆ ಸಿದ್ಧಿಯಾದ ಯೋಗಾನಿದ್ದಾವು ಸಿಗುತ್ತೋ ಅಥವಾ ಸಿಗುವುದಿಲ್ಲವೊ ಎಂಬಂಥ ಆತಂಕದಿಂದ ಕಾಯುತ್ತಿರುವವರು. ಯಾವ ತೇಜಸ್ವಿಯು ಯಾವ ಯೋಗಾನಿದ್ದಾ ಸಿದ್ಧಿಗಾಗಿ ತಪಸ್ಸಾಚರಣಾ ಮಾಡುತ್ತಿರುವರೊ ಆ ಯೋಗಾನಿದ್ದಾವು ನನ್ಮಗಂದು ಅದಾವ ತಪಸ್ಸಿಲ್ಲದೆ ನನಗೆ ಹುಟ್ಟುಟ್ಟುತ್ತಲೇ ಸಿದ್ಧಿಸಿಬಿಟ್ಟು ನಾನೂ ನಿದ್ದೆಯಲ್ಲಿರುವೆ!

**ದ+ರೈ ನಾಡ ಕಟ್ಟಬಲ್ಲವೆ?**

ಇಷ್ಟೆಲ್ಲಾ ಇದ್ದೂ ಪ್ರೊ. ನಂಜುಂಡಸ್ವಾಮಿ ಮಾತುಗಳು ತಮ್ಮ ಕಟುತ್ವ ಕಳೆದುಕೊಂಡು ಹಣ್ಣಾಗಿರುವುದು, ಆಲೋಚನೆಯಲ್ಲಿ ತಾವು ಇರುವಂಥ ಸಂಘಟನೆಯೇ ಅಲ್ಲಾಡುವಂಥ ಎದೆಗಾರ ನುಡಿಗಳನ್ನು ಆಡಿರುವುದು ಅವರ ನುಡಿ ನಡೆಯಾಗುವುದಾದರೆ ನಾವೆಲ್ಲ ಒಂದಾಗುವುದರ ಚಿಗುರು. ಆದರೆ ರೈತ ಸಂಘವು ಅಸ್ಪೃಶ್ಯ ಕೂಲಿ ನಾಯಕತ್ವ ಪಡೆಯದೆ, ಹಾಗೆ ದಲಿತ ಸಂಘವು ಜಲಗಾರ ನಾಯಕತ್ವ ಪಡೆಯದೆ, ಅವು ಎಷ್ಟೇ ಬೊಬ್ಬೆ ಹಾಕಿದರೂ ಅಷ್ಟೋ

ಇಷ್ಟೋ ದಕ್ಕಿಸಿಕೊಳ್ಳಬಹುದೇ ಹೊರತು, ಅಂದರೆ ಅರೆಹೊಟ್ಟೆಯ ರೈತ ಸಂಘ ಮುಕ್ಕಾಲು ಹೊಟ್ಟೆ ತುಂಬಿಸಿಕೊಳ್ಳಬಹುದೇ ಹೊರತು, ಹಾಗೆ ಹೊಟ್ಟೆಗಿಲ್ಲದ ದಲಿತ ಸಂಘ ಕಾಲು ಹೊಟ್ಟೆ ತುಂಬಿಸಿಕೊಳ್ಳಬಹುದೇ ಹೊರತು ಈ ನಾಡ ಕಟ್ಟುವ ಸಂಘಟನೆಗಳಾಗವು. ದ+ರೈ ನಾಡ ಕಟ್ಟಬಲ್ಲವೆ? ಈ ದಿಕ್ಕಲ್ಲಿ ಒಂದಿಷ್ಟು ಮಾತು:

**ದೇವನೂರ ಮಹಾದೇವ:** ರೈತ ಸಂಘದಲ್ಲಿ ಲಿಂಗಾಯತ, ಒಕ್ಕಲಿಗ ಸಮುದಾಯ ಹೆಚ್ಚಾಗಿದ್ದು, ಈ ರೈತ ಜನಸ್ತೋಮವು ಅಸ್ಪೃಶ್ಯ ಜನಾಂಗವನ್ನು ಅವಮಾನಿಸುತ್ತ, ವಂಚಿಸುತ್ತ, ತುಳಿಯುತ್ತ, ಕೊಲ್ಲುತ್ತ ಬರುತ್ತಿರುವ ಜಟಿಲ ಪರಿಸ್ಥಿತಿಯನ್ನು ಮಾನವೀಯಗೊಳಿಸುವ ಕಡೆ ತಮ್ಮ ಚಿಂತನೆ, ಕಾರ್ಯಕ್ರಮಗಳೇನು?

**ನಂಜುಂಡಸ್ವಾಮಿ:** ನಮ್ಮ ಹಳ್ಳಿಯ ಆಸ್ತಿ ಸಂಬಂಧವನ್ನು ಬದಲಾವಣೆ ಮಾಡೋದೆ ನಿಮ್ಮ ಪ್ರಶ್ನೆಗೆ ಉತ್ತರ. ಸಾಮಾಜಿಕ ಅಸಮಾನತೆ ನಿವಾರಣೆಗೆ ಶೋಷಕ-ಶೋಷಿತ ಇಬ್ಬರಿಗೂ ಶಿಕ್ಷಣದ ಅವಶ್ಯಕತೆ ಇದೆ.

**ದೇ.ಮ:** ಹಳ್ಳಿಯ ಆಸ್ತಿ ಸಂಬಂಧಪಟ್ಟ ಬದಲಾವಣೆ ಅಂತಂದ್ರೆ?

**ನಂ.ಸ್ವಾಮಿ:** ಭೂಮಿ ಅಥವಾ ಕೈಗಾರಿಕಾ ಘಟಕ ಅಥವಾ ವ್ಯಾಪಾರಿ ಘಟಕ ಯಾವುದೇ ಆಗಿರಲಿ, ಕೂಲಿ ಆವಶ್ಯಕತೆ ಇಲ್ಲದಷ್ಟು ಉತ್ಪಾದನಾ ಸಾಧನ ಉಳಿಸಿಕೊಳ್ಳುವಂಥ ಒಂದು ವ್ಯವಸ್ಥೆಗಾಗಿ ಹೋರಾಡುವುದು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗುವುದಾದರೆ, ಈಗ ಕರ್ನಾಟಕದ ಮೂರು ಕೋಟಿ ಜನರು ಎರಡು ಕೋಟಿ ಎಕರೇನ ವ್ಯವಸಾಯ ಮಾಡ್ತಾ ಇದ್ದೀವಿ. ತಲಾ 20 ಗುಂಟೆ ವ್ಯವಸಾಯ ಖಾಸಗಿ ಒಡೆತನದ ಆಧಾರದ ಮೇಲೆ ಬೇಸಾಯ ಮಾಡಿದರೆ ಲುಕ್ಸಾನು ಆಗುವುದರಿಂದ ಸಾಮಾಜಿಕ ಒಡೆತನದ ಬೇಸಾಯದತ್ತ ನಡೆಯುವುದು ನಮ್ಮದಾಗಬೇಕು.

**ದೇ.ಮ:** ಹಳ್ಳಿಗಳಲ್ಲಿ ಅನೇಕ ಜಾತಿ ಇದ್ದೂ ಅಣ್ಣ-ತಮ್ಮಂದಿರಂತೆ ಬಾಳಿಕೊಂಡು ಬರುತ್ತಿದ್ದರು ಅಂತಾರಲ್ಲ, ಈ ಬಗ್ಗೆ?

**ನಂ.ಸ್ವಾಮಿ:** ನಂಗಂತೂ ಕಂಡಿಲ್ಲಪ್ಪ. ಜಾತಿ ಇರುವಾಗ ಸಾಮರಸ್ಯ ಇರುತ್ತೇನು? ಯಾವ್ದೇ ಕಾಲದಲ್ಲೂ ನಿಜವಾದ

ಅರ್ಥದಲ್ಲಿ ಅಣ್ಣತಮ್ಮಂದಿರಂತೆ ಇದ್ದಿರುವುದನ್ನು ಇತಿಹಾಸದ ದಾಖಲೆಗಳೂ ತಿಳಿಸುವುದಿಲ್ಲ.

**ದೇ.ಮ:** ಹೀಗಿರುವಾಗ ದಲಿತನೇನಾದರೂ ಧ್ವನಿ ಎತ್ತರಿಸಿದರೆ, ರೈತ ಸಂಘ ಬಯಸುವ 'ಹಳ್ಳಿಯೆ ಒಂದು ಘಟಕ' ಎಂಬುದು ನಡೆಯುವುದಿಲ್ಲವಲ್ಲ!

**ನಂ.ಸ್ವಾಮಿ:** ನಿಜ, ದಲಿತ ಸಮಾನತೆಗೆ ನಿಂತಾಗ ಅಲ್ಲಿ ಸಾಮರಸ್ಯ ಹೋಗಿಬಿಡ್ತದೆ. ಸಾಂಪ್ರದಾಯಿಕ ವ್ಯವಸ್ಥೇನ ಒಂದು ಚೂರೂ ಅಲ್ಲಾಡಿಸದೆ ಸ್ವಾಭಾವಿಕವಾಗಿ ಹಳೇ ಸಂಬಂಧ ಮುಂದುವರಿಯುವ ಕಡೆ ಹೀಗಾಗುತ್ತದೆ. ಆದರೆ ಹಳೆ ಸಂಬಂಧ ಕಿತ್ತು ಹಾಕುವುದೂ ನಮ್ಮ ಗುರಿ ತಾನೆ?

**ದೇ.ಮ:** ಹಾಗಾದರೆ 'ಅಸ್ಪೃಶ್ಯನ ಮನೆಯಲ್ಲಿ ಉಂಡವನು ಮಾತ್ರ ರೈತ ಸಂಘದಲ್ಲಿ ಓಟು ಮಾಡಲು ಹಕ್ಕುಳ್ಳವನು' ಎಂದು ಪ್ರಣಾಳಿಕೆಯಲ್ಲಿ ಘೋಷಿಸಿ ಆಚರಣೆಗೆ ತರುವ ತಾಕತ್ತು ರೈತ ಸಂಘಕ್ಕೆ ಇದೆಯೆ?

**ನಂ.ಸ್ವಾಮಿ:** ಸಾವಿರಾರು ವರ್ಷದ ಜಡ್ಡನ್ನು ಒಂದೆರಡು ದಿನಗಳಲ್ಲಿ ನಾಶ ಮಾಡುವ ಆಶಾವಾದವನ್ನು ನಾನು ಇಟ್ಟುಕೊಂಡಿಲ್ಲ. ಮೊದಲು ನಾನು ಉದಾಹರಣೆ ಆಗುವ ಮೂಲಕ...

**ದೇ.ಮ:** ನೀವು ಬ್ಯಾಡ್ರಪ್ಪ, ಒಂದ್ಸಲ ಉಂಡಾದ ಮೇಲೆ ಸಾಕು. ನಾವು ಎಲ್ಲಿಂದ ತಂದಿಕ್ಕುವ? ನಾನು ಕೇಳ್ತಾ ಇರೋದು 'ಅಸ್ಪೃಶ್ಯನ ಮನೆಯಲ್ಲಿ ಉಂಡವನು ಮಾತ್ರ ರೈತ ಸಂಘದಲ್ಲಿ ಓಟು ಮಾಡಲು ಹಕ್ಕುಳ್ಳವನು' ಎಂದು ಆಚರಣೆಗೆ ಹೊರಟರೆ ರೈತ ಸಂಘಕ್ಕೆ ನುಂಗಲಾರದ ತುತ್ತಾಗುವುದಿಲ್ಲವೆ? ರೈತ ಸಂಘವೇ ಇಲ್ಲದಂತಾಗಬಹುದಲ್ಲವೇ?

**ನಂ.ಸ್ವಾಮಿ:** ಆ ಮಟ್ಟಕ್ಕೆ ರೈತ ಸಂಘ ಹೋಗಿಲ್ಲ. ಇದು ನುಂಗಲಾರದ ತುತ್ತಾದರೂ ಮಾಡಲೇಬೇಕು. ಭಯಪಡಬೇಕಾಗಿಲ್ಲ. ಇಂಥದ್ದನ್ನೆಲ್ಲ ಮಾಡ್ದೆ ಸಂಘ ಕಟ್ಟಿದರೆ ದೊಡ್ಡದಾಗಬಹುದು. ಆದರೆ ಅದು ಯಾವುದೇ ನೀತಿನಿಯಮ ಇಲ್ಲದೆ ಕಾಂಗ್ರೆಸ್‌ನಂತೆ ಆಗಬಹುದು. ನಾವು ಬೆಳೆದಿರೋದೇ ಇಲ್ಲ. ಅದಕ್ಕಾಗಿ ಇಂಥ ಕಾರ್ಯಕ್ರಮದಿಂದ ಏನು ಪರಿಣಾಮ ಆಗುತ್ತೆ ಅನ್ನೋದನ್ನು ಆಲೋಚನೆ ಮಾಡದೆ ಮಾಡಬೇಕು.

**ದೇ.ಮ:** ಕೆಲವು ಕಡೆ ರೈತ ಸಂಘದವರೇ ಅಸ್ಪೃಶ್ಯರಿಗೆ ಬಹಿಷ್ಕಾರ ಹಾಕಿರುವುದಾಗಿ ಸುದ್ದಿ ಇದೆಯಲ್ಲ?

**ನಂ.ಸ್ವಾಮಿ:** ಎಲ್ಲಿ ವಿವರ ಕೊಡಿ. We are not allowing such things to happen. We will expel that village from ರೈತ ಸಂಘ, ಗೊತ್ತೇನು?

**ದೇ.ಮ:** 'ಹರಿಜನ-ಗಿರಿಜನರಿಗೆ ಭೂಮಿ ಯಾಕೆ? ಕಡ್ಲೆಪುರಿಗೋ ಹೆಂಡಕ್ಕೋ ಮಾರಿಕೊಳ್ತಾರೆ' ಅಂತ ನೀವೋ ರುದ್ರಪ್ಪನವರೊ ಹೇಳಿದಿರೆಂದು ಕೇಳಿ ಬೇಜಾರಾಯ್ತು...

**ನಂ.ಸ್ವಾಮಿ:** ನಾನಂತೂ ಹೇಳಿಲ್ಲಪ್ಪ. ರುದ್ರಪ್ಪನವರು ಹೇಳಿದ್ದೂ ನನಗೆ ಕಂಡುಬಂದಿಲ್ಲ.

**ದೇ.ಮ:** ಒಳ್ಳೇದು. ನಮ್ಮ ಸಮಾಜದಲ್ಲಿ ಅನೇಕರಿಗೆ ಈ ಭಾವನೆ ಇದೆಯಲ್ಲ?

**ನಂ.ಸ್ವಾಮಿ:** ರಾಜಕೀಯವಾಗಿ, ಸಾಮಾಜಿಕವಾಗಿ ಕಿಂಚಿತ್ತೂ ಅರಿವಿಲ್ಲದವರು ಆಡೋ ಮಾತು ಅದು. ಯಾತಕ್ಕಾಗಿ ಕಡ್ಲೆಪುರಿಗೋ ಹೆಂಡಕ್ಕೋ ಮಾರಿಕೊಳ್ತಾನೆ? ಆ ಕಾರಣ ನಿರ್ಮೂಲನವೇ ನಮ್ಮ ದೇಶದ ರಾಜಕೀಯ.

**ದೇ.ಮ:** ಕೈಗಾರಿಕೆಗೆ ದಕ್ಕುತ್ತಿರುವ ಸವಲತ್ತು ಕಂಡು ಕರುಬುತ್ತ ರೈತ ಸಂಘ ಅಂಥದೇ ಸವಲತ್ತು ಬಯಸುತ್ತಿರುವಂತೆ ಕಂಡುಬರುತ್ತಿದೆಯಲ್ಲ?

**ನಂ.ಸ್ವಾಮಿ:** ನೊ, ನೊ. ರೈತ ಸಂಘದ ಉದ್ದೇಶವೇ ಬೇರೆ. ಎಲ್ಲ ಕ್ಷೇತ್ರಗಳನ್ನು ಕೈಗಾರಿಕಾ ಕ್ಷೇತ್ರ ಹೀಗೆ ಶೋಷಣೆ ಮಾಡ್ತಾ ಇದೆ, ಅಂತಹ ಶೋಷಣೆಗಳನ್ನು ನಾಶ ಮಾಡುವಂತಹ...

**ದೇ.ಮ:** ಅದಿರಲಿ ಟ್ರಾಕ್ಟರ್ ಆದಿಯಾಗಿ ಕೈ ಕೆಲಸ ಕಿತ್ತು ನಮ್ಮ ಗರೀಬರ ಹೊಟ್ಟೆಗೆ ತಣ್ಣೀರು ಬಟ್ಟೆ ಕಟ್ಟಿರುವ ಯಂತ್ರ ಕುಸಂಸ್ಕೃತಿಯೇ ಬೇಡ ಎಂಬುದೇ ರೈತ ಸಂಘದ ಉಸಿರು ಎಂಬುದು ನನ್ನ ಅನಿಸಿಕೆ...

**ನಂ.ಸ್ವಾಮಿ:** ನಿಮ್ಮ ಅನಿಸಿಕೆಯೇ ನನ್ನದೂ ಆಗಿದೆ. ಆದರೆ ಈಗ ಆಗ್ತಾ ಇರೋದು ತಕ್ಷಣದ ಶೋಷಣೇನಾ ನಿಲ್ಲಿಸೋ ಕಾರ್ಯಕ್ರಮ. ಪ್ರಚಾರದ ಮಟ್ಟದಲ್ಲಿ ದೊಡ್ಡ ಕೈಗಾರಿಕೆಗಳನ್ನು ತಿರಸ್ಕರಿಸುವ ಮತ್ತು ಗ್ರಾಮ ಕೈಗಾರಿಕಾ ಧೋರಣೆ ಹೊಂದಿದ್ದೇವೆ.

**ದೇ.ಮ:** ಸಾಮಾಜಿಕ, ಸಾಂಸ್ಕೃತಿಕ ರಚನಾತ್ಮಕ, ಕಾರ್ಯಕ್ರಮಗಳು ರೈತ ಸಂಘದಿಂದ ಹೆಚ್ಚಾಗಿ ನಡೆದಿಲ್ಲ ಯಾಕೆ?

**ನಂ.ಸ್ವಾಮಿ:** ನೋಡಿ, ಹೋದ ಗುಂಡೂರಾಯರ ಸರ್ಕಾರ ಮೂರು ತಿಂಗಳಿಗೊಮ್ಮೆ ಗೋಲಿಬಾರ್ ಮಾಡ್ತಿತ್ತು. ಈ ಆಘಾತದಿಂದ ಚೇತರಿಸಿಕೊಳ್ಳೋಕೆ ವೈಯಕ್ತಿಕವಾಗಿ ನಮಗೇನೇ ಒಂದೂ ಒಂದೂವರೆ ತಿಂಗಳು ಹಿಡೀತಿತ್ತು. ಅನಂತರ ಅಲ್ಲಿ ಹೋಗಿ ಸಂತೈಸೋರು, ಪರಿಹಾರ, ಹಣಕಾಸು ಮುಗ್ಗಟ್ಟು, ಈ ನಡುವೆ ಸಂಘಟನೆ ಆಗುತ್ತಿದ್ದುದರಿಂದ ರಚನಾತ್ಮಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದಿಲ್ಲ.

**ದೇ.ಮ:** (ಮೌನ)

**ನಂ.ಸ್ವಾಮಿ:** ನಿಮ್ಮ ಮುಂದಿನ ಪ್ರಶ್ನೆ– ರೈತ ಸಂಘ ಕೇಳುತ್ತಿರುವ ಸಾಲ ರದ್ದನ್ನು ಸರಿಯಲ್ಲ ಎಂದು ಆಕ್ಷೇಪಿಸಿದ್ದೀರಿ. ರೈತನ ಬೆಳೆಗೆ ಬೆಲೆಯಲ್ಲಿ ಆಗಿರೋ ಮೋಸಕ್ಕಾಗಿ ಸಾಲ ರದ್ದು ಮಾಡಿ ಎಂದು ಕೇಳ್ತಾ ಇದ್ದೀವಿ. ನಮ್ಮ ವ್ಯವಸಾಯದ ವೆಚ್ಚದ ಅರ್ಧ ಬೆಲೆಗೆ ತಗೊಂಡು ಊಟ ಮಾಡಿರೋರು ನೀವು. ಆದ್ದರಿಂದ ಈ ಸಾಲವೇ ಕೃತಕ. ಕಾಗದದ ಲೆಕ್ಕಾಚಾರ. ಈ ಕೃತಕ ಕಾಗದದ ಲೆಕ್ಕಾಚಾರ ರದ್ದಾಗಬೇಕು ಎಂದಷ್ಟೇ ನಾವು ಕೇಳುತ್ತಿರುವುದು.

**ದೇ.ಮ:** ಕೇವಲ ನೂರು ರೂಪಾಯಿ ಸಾಲವನ್ನು ತಿಂಗಳಿಗೆ ಹತ್ತು ರೂಪಾಯಿ ಬಡ್ಡಿಯಂತೆ ಒಕ್ಕಲಿಗ, ಲಿಂಗಾಯತರಿಂದ ಪಡೆದು ಸಾವಿರವಾಗಿ ಸಾಲ ತೀರಿಸಲಾಗದೆ ಕದ್ದು ಕಾಫಿ ತೋಟ ಸೇರುತ್ತಿರುವ ದಲಿತರ ಸಾಲಶೂಲದ ಬಗ್ಗೆ ಏನು ಅನ್ನುತ್ತೀರಿ?

**ನಂ.ಸ್ವಾಮಿ:** ಇದೂ ರದ್ದಾಗಬೇಕು

**ದೇ.ಮ:** ಇದಕ್ಕೂ ಏನಾರು ರೈತ ಸಂಘದಿಂದ ಕಾರ್ಯಕ್ರಮ?

**ನಂ.ಸ್ವಾಮಿ:** ಮಂಡ್ಯ ಜಿಲ್ಲೆಯಲ್ಲಿ ಕೆಲವು ಕಡೆ ಆಗಿದೆ. ವ್ಯಾಪಕ ಮಾಡಬೇಕು.

**ದೇ.ಮ:** ನಾನು ಅರಳಾಳುಸಂದ್ರದಲ್ಲೊಮ್ಮೆ ಧೂಳಲ್ಲಿ ಅಲ್ಲೊಂದು– ಇಲ್ಲೊಂದು ಚೆಲ್ಲಿಕೊಂಡಿದ್ದ ಕಾಳುಗಳನ್ನು ಆಯುತ್ತಿದ್ದ ರೈತ ಸಂಘದ ಸದಸ್ಯನೊಬ್ಬನನ್ನು ನೋಡಿ ಅಳುವಷ್ಟು ಭಾವುಕನಾದೆ. ಈ ಕಡೆ ಸಿರಿವಂತ ರೈತರು ರೈತ ಸಂಘದ ವಿರೋಧಿಗಳಾಗಿರುವುದನ್ನು ಕೇಳಿ

ಖುಷಿಗೊಂಡೆ. ರೈತ ಸಂಘ ಈ ದಿಕ್ಕಲ್ಲೇ ನಡೆಯಬೇಕೆಂದು ನನ್ನ ಆಸೆ. ಈ ದಿಕ್ಕಲ್ಲಿ ನಡೆಯುವ ನಂಬಿಕೆ ನಿಮಗಿದೆಯೆ?

**ನಂ.ಸ್ವಾಮಿ:** ಈ ರೀತಿ ನೀವು ಬಯಸೋದು ತಪ್ಪು ಅಲ್ಲವೇ ಅಲ್ಲ. ಈ ದಿಕ್ಕಲ್ಲಿ ರೈತ ಸಂಘ ನಡೆಸೋ ನಂಬಿಕೆ ನಮಗೆ ಸಂಪೂರ್ಣ ಇದೆ. ಅದಕ್ಕೆ ಕಾರಣಗಳನ್ನು ಹೇಳ್ತೀನಿ. ಕರ್ನಾಟಕದ ಒಟ್ಟು ಹಿಡುವಳಿಗಳಲ್ಲಿ ಸುಮಾರು ನೂರಕ್ಕೆ 60 ಭಾಗ ಎರಡು ಹೆಕ್ಟೇರ್‌ಗಿಂತ ಕಡಿಮೇವು. ಮತ್ತು ನೂರಕ್ಕೆ ತೊಂಬತ್ತು ಭಾಗ ಮಳೆಯಾಧಾರಿತ. ಇಂಥವರೇ ಈಗ ರೈತಸಂಘದ ಸದಸ್ಯರಾಗುತ್ತಿದ್ದಾರೆ. ಜತೆಗೆ ಪ್ರತಿದಿವಸ ರೈತ ತನ್ನ ಭೂಮಿ ಕಳೆದುಕೊಂಡು ಭೂ ಹೀನ ಆಗುತ್ತಿದ್ದಾನೆ. ಕೃಷಿಕರಲ್ಲದವರ ಕೈಗೆ ಭೂಮಿ ಹೋಗ್ತಾ ಇದೆ, ಗೊತ್ತೇನು?

**ದೇ.ಮ:** ಉದಾಹರಣೆಗೆ?

**ನಂ.ಸ್ವಾಮಿ:** ದೂರ ಹೋಗಬೇಡಿ, ಇಣಕಲ್ ರಸ್ತೆಗುಂಟಲೊ, ಬೋಗಾದಿ ರಸ್ತೆಗುಂಟಲೋ ಹೋಗಿ ನೋಡಿ. ಅಥವಾ ಬನ್ನಿ, ಕನಕಪುರ ರೋಡಲ್ಲಿ ತೋರಿಸ್ತೀನಿ. ಸಾವಿರ ಎಕರೇನ ಖೋಡೆ ತಕೊಂಡಿದ್ದಾನೆ.

**ದೇ.ಮ:** ರಾಸಾಯನಿಕ ಗೊಬ್ಬರಕ್ಕೆ ಬೆಲೆ ಕಮ್ಮಿ ಮಾಡಿ ಎಂದು ಕೇಳುವ ಬದಲು ಅದನ್ನು ತಿರಸ್ಕರಿಸುವ ಕಡೆಗೇನೆ...?

**ನಂ.ಸ್ವಾಮಿ:** ಈ ಬಗ್ಗೆಯೂ ಪ್ರಚಾರ ನಡೀತಾ ಇದೆ. ಅಷ್ಟೇ ಅಲ್ಲ, ಸ್ವದೇಶಿ ತಳಿ, ನಾಡಬಿತ್ತನೆ ವೃದ್ಧಿಗೊಳಿಸುವುದನ್ನೂ ನಾವೀಗ ಹೇಳ್ತಾ ಇದ್ದೇವೆ.

**ದೇ.ಮ:** ಕನಿಷ್ಟ ಕೂಲಿಯನ್ನು ರೈತರಿಂದಲೇ ಕೊಡಿಸಲು ರೈತ ಸಂಘವೇ ಯಾಕೆ ಪ್ರಯತ್ನಿಸಬಾರದು?

**ನಂ.ಸ್ವಾಮಿ:** ರೈತ ಸಂಘ ಮಾಡಿಲ್ಲ ಅಂದುಕೊಂಡಿದ್ದೀರೇನು? ಶಿವಮೊಗ್ಗದಲ್ಲಿ ಕಬ್ಬಿನ ಬೆಲೆ ಹೆಚ್ಚಾದಾಗ ಅಲ್ಲಿ ಕೂಲಿನೂ ಹೆಚ್ಚಿಗೆ ಕೊಡಿಸಿದ್ದೀವಿ. ನೀವು ಆಶ್ಚರ್ಯಪಡಬಹುದು. 24 ರೂಪಾಯಿ ಕಬ್ಬಿನ ಕೂಲಿ. ನಿಮ್ಮ ಕನಿಷ್ಟ ಕೂಲಿ ನಿಯಮಕ್ಕೆ ಮೀರಿ ಅಂಥ ಕಡೆ ಕೂಲಿ ಹೆಚ್ಚಿದೆ, ಅದಕ್ಕೆ ರೈತ ಸಂಘವೂ ಪ್ರಯತ್ನಿಸಿದೆ.

**ದೇ.ಮ:** ನೀರಾವರಿ ಇಲ್ಲದ ಕಡೆ ಹೇಗಿದೆ?

**ನಂ.ಸ್ವಾಮಿ:** ಆಗ್ತಾ ಇಲ್ಲ. ಅಲ್ಲಿ ರೈತನಿಗೆ ಕೊಡೋ ಶಕ್ತಿ ಇರೋಲ್ಲ. ಅದನ್ನು ಕೂಲಿಯವನು ಅರ್ಥ ಮಾಡಿಕೊಳ್ಳುತ್ತಾನೆ. ಪರಿಸ್ಥಿತೀನ ಇಬ್ಬರೂ ಅರ್ಥ ಮಾಡಿಕೊಂಡಿದ್ದಾರೆ. ಆರ್ಥಿಕ ಸಂಬಂಧಗಳಲ್ಲಿ ಕೂಲಿಗೂ ರೈತನಿಗೂ ಆರೋಗ್ಯಕರವಾದ ಅರ್ಥ ಮಾಡಿಕೊಳ್ಳುವ ಸಂಬಂಧಾನೆ ಇರೋದು.

**ದೇ.ಮ:** ಯಾಕೋ ನನ್ನ ಮನಸ್ಸು ಒಪ್ತಾ ಇಲ್ಲ. ಯಾಕೆಂದರೆ ಜಗಳಾಟವೂ ನಡೆದಿವೆಯಲ್ಲ?

**ನಂ.ಸ್ವಾಮಿ:** ಅದು ಇಬ್ಬರಲ್ಲೂ ಇಲ್ಲದ್ದಕ್ಕೆ ನಡೀತಿರೋ ಜಗಳಾಟ.

**ದೇ.ಮ:** (ಮೌನ)

**ನಂ.ಸ್ವಾಮಿ:** ಆದರೂ ನಿಮ್ಮೊಳಗೆ ನಮ್ಮ ಸಾಮಾಜಿಕ ಕಾರ್ಯಕ್ರಮದ ಬಗ್ಗೆ ಆತಂಕ ಇನ್ನೂ ಇದ್ದಂತೆ ಇದೆ, ಹೌದೇನು?

**ದೇ.ಮ:** ಪರಿಸ್ಥಿತಿ ಆ ರೀತಿ ಇದೆಯಲ್ಲ!

**ನಂ.ಸ್ವಾಮಿ:** ಅಸ್ಪೃಶ್ಯತೆ ವಿರುದ್ಧವಾಗಿ, ಜಾತೀಯತೆ ವಿರುದ್ಧವಾಗಿ ಸಹಭೋಜನ, ಊರಿಗೆ ಒಂದೇ ಬಾವಿ, ಅಂತರ್‌ಜಾತಿ ವಿವಾಹ, ಅಸ್ಪೃಶ್ಯನ ಮನೆಯಲ್ಲಿ ಉಂಡವನೇ ರೈತ ಸಂಘದಲ್ಲಿ ಓಟು ಹಕ್ಕುಳ್ಳವನು ಇತ್ಯಾದಿ ಕಾರ್ಯಕ್ರಮ ಮಾಡದಿದ್ದರೆ ಅಂಥ ಸಂಘ ಯಾಕೆ ಬೇಕು ಹೇಳಿ? ಅಂಥ ಸಂಘ ಬ್ಯಾಡವೇ ಬೇಡ.

**ದೇ.ಮ:** ನಿಮ್ಮ ಆಲೋಚನೆ ಈ ರೀತಿ ಇರುವಾಗ ರೈತಸಂಘ–ದಲಿತಸಂಘ ಯಾಕೆ ಒಟ್ಟಿಗೆ ಕೆಲಸ ಮಾಡಬಾರದು?

**ನಂ.ಸ್ವಾಮಿ:** ಅದನ್ನೇ ನಾನೂ ಕೇಳೋದು.

**ದೇ.ಮ:** ಅದನ್ನೇ ನಾನೂ ಕೇಳೋದು

# 'ಮಜ್ಬೂ ಇಲ್ಲವಾದ; ಕಾಡು ಗೋಳ್ಗರೆಯುತ್ತಿದೆ'

**ಒಂದು ಅನುವಾದ**
**ಮೂಲ: ತಾರಕೇಶ್ವರಿ ಸಿನ್ಹಾ**

ಡಾ. ಲೋಹಿಯಾರವರ ಬಗ್ಗೆ ಬರೆಯುವುದು ಎಷ್ಟು ಸುಲಭವೂ ಅಷ್ಟೇ ಕಷ್ಟವೂ ಹೌದು. ದೇಶದ ರಾಜಕೀಯ ಕ್ಷೇತ್ರದೊಳಗೆ ಡಾ.ಲೋಹಿಯಾರ ವ್ಯಕ್ತಿತ್ವ ಬಹಳ ಅಪರೂಪವಾಗಿ ಕಾಣಸಿಗುವಂಥದ್ದು. ನಾನಾ ಕೋನಗಳಿಂದ ವೀಕ್ಷಿಸಿದಾಗ ಅವರ ವ್ಯಕ್ತಿತ್ವ ಎದ್ದು ಕಾಣುತ್ತದೆ. ಕೆಲವರಿಗೆ ಯುಗನಿರ್ಮಾಪಕ ಅಥವಾ ಯುಗಪುರುಷನಂತೆ, ಮತ್ತೆ ಕೆಲವರಿಗೆ ಗೊತ್ತು ಗುರಿಯೂ ಇಲ್ಲದ ಬೆಳಕೂ ಕಾಣದ ಪ್ರಯಾಣಿಕನಂತೆ ಕಾಣಿಸಿಕೊಳ್ಳುತ್ತಾರೆ. ಹಲವು ಜನ ಕಾಂಗ್ರೆಸ್ಸಿಗರ ದೃಷ್ಟಿಯಲ್ಲಿ ಲೋಹಿಯಾ, ಸದಾ ಎಲ್ಲರ ಮೇಲೆ ರೇಗುವ ನಿರಾಶೆಗೊಂಡಿದ್ದ ನಾಯಕರಾಗುತ್ತಾರೆ. ಆದರೆ ಇದಕ್ಕೆ ವಿರುದ್ಧವಾಗಿ ಅವರು ಪ್ರೀತ್ಯಾದರಗಳ ಬುಗ್ಗೆಯಾಗಿದ್ದರು. ಸಾಕ್ಷಾತ್ ಶಿವನಂತೆ ಎನ್ನಬಹುದು. ಹತ್ತಿರದ ಗೆಳೆಯರಿಂದ ಅಷ್ಟೊಂದು ಪ್ರೀತ್ಯಾದರ ವಿಶ್ವಾಸ ಗಳಿಸಿಕೊಂಡಿದ್ದ ರಾಜಕೀಯ ವ್ಯಕ್ತಿ ಸಿಗುವುದು ಕಷ್ಟವೆನಿಸುತ್ತದೆ. ಅವರು ದೂರದ ಬೆಟ್ಟ ನುಣ್ಣಗೆ ಅನ್ನುವಂತಿರಲಿಲ್ಲ. ದೂರದಿಂದ ಆಕರ್ಷಿಸಿ, ಹತ್ತಿರ ಹೋದಂತೆಲ್ಲ ನಿರಾಶೆಗೊಳಿಸುವ ಹಲವು ಜನರುಂಟು. ಇದಕ್ಕೆ ಡಾ. ಲೋಹಿಯಾರವರ ವ್ಯಕ್ತಿತ್ವ ತೀರ ವ್ಯತಿರಿಕ್ತವಾದುದು. ಅವರನ್ನು ದೂರದಿಂದ ನೋಡುವವರು ತಪ್ಪು ಕಲ್ಪನೆಗೆ ಒಳಗಾಗುತ್ತಾರೆ. ಆದರೆ ಅವರ ಹತ್ತಿರದ ಗೆಳೆಯರಿಗೆ ಅಸಾಮಾನ್ಯ ಬಂಡಾಯಗಾರ, ಇಂಡಿಯಾದ ಒಡಕುತನದ ವಿಷ ನುಂಗಿ, ಸಮಾಜಕ್ಕೆ ಜೀವ ತುಂಬಲು ನಿಂತ ಸಾಕ್ಷಾತ್ ಮಹಾದೇವನಾಗುತ್ತಾರೆ. ಅವರ

ಬಗ್ಗೆ ಹೀಗೆ ಹೇಳಬಹುದು: ಮೂಲತಃ ಅವರು ಕವಿಯಾಗಿರಲೇಬೇಕು. ಅವರ ನಿಟ್ಟುಸಿರೊಡನೆ ಹಾಡು ಹೊರಟಿರಬೇಕು.

ಅವರ ಲೋಕಸಭೆಯ ಜೀವನ ಸಣ್ಣ ಪ್ರತಿಫಲನವಷ್ಟೆ. ಚುನಾವಣೆ ಮುಗಿದ ತರುವಾಯ ಲೋಕಸಭೆಗೆ ಬಂದಾಗಲೆ ಅವರನ್ನು ನಾನು ಮೊದಲು ನೋಡಿದ್ದು. ಇದಕ್ಕೂ ಮೊದಲು, ನನ್ನ ವಿದ್ಯಾರ್ಥಿದೆಸೆಯಲ್ಲೇ ಅವರ ಬಗ್ಗೆ ಬಹಳಷ್ಟು ಕೇಳಿದ್ದೆ. ನಮ್ಮ ಕಾಲೇಜು ದಿನಗಳಲ್ಲಂತೂ ಲೋಹಿಯಾ ಅಂದರೆ ಮಹಾಕ್ರಾಂತಿಕಾರಿ ಮತ್ತು ಪ್ರಚಂಡ ಸಾಹಸಿ ಎನಿಸಿಕೊಂಡಿದ್ದರು. ಆಗಲೇ ನಾವು ಅವರ ಬಗ್ಗೆ ನಾನಾ ವಿಧದ ಕತೆಗಳನ್ನು ಕೇಳುವುದರಲ್ಲಿ ಕಾಲ ಕಳೆಯುತ್ತಿದ್ದೆವು. ಅವರು ತಮ್ಮ ಅಸಾಮಾನ್ಯ ಮತ್ತು ಉಜ್ವಲ ಜೀವನದಿಂದ ನಮ್ಮನ್ನು ಬದುಕಿನ ಆಳಕ್ಕೆ ಕರೆದೊಯ್ಯುವ ಮಹಾಕ್ರಾಂತಿಕಾರಕರಾಗಿದ್ದರು. ಅವರನ್ನು ನೋಡಬೇಕೆಂಬ ಅಭಿಲಾಷೆ ನನ್ನೊಳಗೆ ತೀವ್ರವಾಗಿತ್ತು. ಅವರು ಲೋಕಸಭೆಗೆ ಬಂದಾಗಲೇ ನನ್ನ ಆಸೆ ಈಡೇರಿದ್ದು. ನನ್ನ ವಿದ್ಯಾರ್ಥಿ ಜೀವನ ಬಹಳ ಕಾಲದ ಹಿಂದೆಯೇ ಮುಗಿದಿತ್ತು. ಹಾಗೆ ಡಾ. ಲೋಹಿಯಾರ ಸಾಹಸಿಗ ಕತೆಗಳೂ ಬಹಳಷ್ಟು ಜನರ ಮನಸ್ಸಿನಲ್ಲಿ ಉಳಿದಿರಲಿಲ್ಲ.

ಲೋಕಸಭೆಯ ಆರಂಭದಲ್ಲಿ ನಾನೂ ಕೂಡ ಅವರ ಬಗ್ಗೆ ತಪ್ಪು ಕಲ್ಪನೆಗೊಳಗಾಗಿದ್ದೆ. ಬರೆ ಜವಾಹರಲಾಲರೊಡನೆ ಆವೇಶಗೊಳ್ಳುವುದರಿಂದಲೆ ಸಮಾಜದಲ್ಲಿ ಕ್ರಾಂತಿಯನ್ನು ಉಂಟುಮಾಡುವವರಂತೆ ಅವರು ಕಾಣುತ್ತಿದ್ದರು. ಕೇವಲ ನೆಹರುರವರನ್ನು ಟೀಕಿಸುವುದರಲ್ಲೆ ತಮ್ಮ ಉತ್ಸಾಹ ಬಳಸುವಂಥ ಓರ್ವ ಕ್ರಾಂತಿಕಾರಿಯನ್ನು ಕಾಣುವುದು ದುಃಖಕರವೆನಿಸಿತ್ತು. ಚುನಾವಣೆ ಮುಗಿದ ಮೇಲೆ ಅವರು ಲೋಕಸಭೆಯಲ್ಲಿ ಪ್ರಮಾಣವಚನ ಸ್ವೀಕರಿಸುವ ದಿನ ನನಗೆ ಅನ್ನಿಸಿತ್ತು– ಇಡೀ ಲೋಕಸಭೆಯ ವಾತಾವರಣ ಕೆಡಿಸುವ ಮತ್ತು ಜವಾಹರರನ್ನು ಟೀಕಿಸುವುದರಲ್ಲಿ ವಾತಾವರಣವನ್ನು ವೈಯಕ್ತಿಕಗೊಳಿಸುವ ವ್ಯಕ್ತಿ ಎಂದು. ಆದರೂ ಕೂಡ ಅವರ ಕಾರ್ಯಕಲಾಪ ನೋಡಲು ಕುತೂಹಲ ಇದ್ದೇ ಇತ್ತು.

ಅವರ ಸ್ವಭಾವ ಎಂಥಹದು? ಇಡೀ ಲೋಕಸಭೆಯೇ ಅವರನ್ನು ನೋಡಲು ಕುತೂಹಲ ತುಂಬಿಕೊಂಡಿತ್ತು! ಆಗ ಲೋಕಸಭೆಯಲ್ಲಿ ಸೋಷಲಿಸ್ಟ್ ಪಾರ್ಟಿ ಒಂದು ಸಣ್ಣ ಗುಂಪಾಗಿತ್ತು. ಜೊತೆಗೆ ಅದಕ್ಕೆ ಅದರದೇ ಆದ ಯಾವ ವ್ಯಕ್ತಿತ್ವವೂ ಇರಲಿಲ್ಲ. ಅಂತಲೇ ಯಾರೂ ಅದರೊಡನೆ ಸಂಬಂಧವನ್ನೂ ಇಟ್ಟುಕೊಂಡಿರಲಿಲ್ಲ. ಇಂಥ ಸ್ಥಿತಿಯಲ್ಲೆ ಡಾ.ಲೋಹಿಯಾರನ್ನು ನಾನು

ಲೋಕಸಭೆಯಲ್ಲಿ ನೋಡಿದ್ದು. ಒಂದು ವ್ಯಕ್ತಿತ್ವದೊಳಗೆ ಎರಡು ಮೂಲಗಳನ್ನಿಟ್ಟುಕೊಂಡ– ಒಬ್ಬ ಸಿದ್ಧಾಂತದ ಹಠವಾದಿಯಂತೆ, ಮತ್ತೆ ಬಲು ದೊಡ್ಡ ಭಾವುಕರಂತೆ ನನ್ನ ಮೊದಲ ನೋಟಕ್ಕೆ ಗೋಚರಿಸಿದರು. ಅವರೊಬ್ಬ ಸಂತರಂತೆ ಕಂಡರೂ ಕೂಡ ಮಹಾ ವಿಗ್ರಹಭಂಜಕ ಮತ್ತು ಬಂಡಾಯಗಾರರಾಗಿದ್ದರು.

ಲೋಕಸಭೆಗೆ ಬಂದ ತರುವಾಯ ಅವರು ಜವಾಹರಲಾಲರನ್ನು ಟೀಕಿಸುವುದಕ್ಕೆ ಶುರುಮಾಡಿದರು. ಹಲವು ವೇಳೆ ನೆಹರೂರ ಮೇಲೆ ಮುಖಾಮುಖಿ ಧಾಳಿ ಮಾಡುವ ಅವಕಾಶವೂ ಸಿಗುತ್ತಿತ್ತು. ಒಂದು ದಿನ ನಾನು ಅವರನ್ನು ಕೇಳಿದೆ: 'ಡಾಕ್ಟರ್ ಸಾಹೇಬ್, ನೀವು ಇಷ್ಟು ದೊಡ್ಡವರಾಗಿ, ತ್ಯಾಗಿ ಹಾಗೂ ಉದಾರಿಗಳಾಗಿದ್ದೂ ಜವಾಹರರ ಬಗ್ಗೆ ಮಾತ್ರ ಹಾಗೇಕೆ?' ಆಗ ಡಾಕ್ಟರ್ ಸಾಹೇಬರು ಏನು ಹೇಳಿದರು ಅಂತ ಇನ್ನೂ ನನ್ನ ನೆನಪಿನಲ್ಲುಳಿದಿದೆ. ಅವರು ಹೇಳಿದರು: 'ತಾರಕೇಶ್ವರಿ, ಜವಾಹರರೊಡನೆ ನನ್ನ ಸಂಬಂಧ ಎಂಥದು ಎಂದು ನಿನಗೆ ಅರ್ಥವಾಗುವುದಿಲ್ಲ. ನಾನು ಅವರನ್ನು ನಾಯಕರನ್ನಾಗಿ ಮಾತ್ರವಲ್ಲ, ದೇವರೆಂದೂ ನೋಡುತ್ತಿದ್ದೆ. ಅವರು ಕ್ರಾಂತಿಯ ಬೆಂಕಿಯನ್ನು ನಂದಿಸಿದ್ದಾರೆ. ಅವರೊಬ್ಬ ಸಮಾಜವಾದಿ ನಾಯಕನೆಂದು ನಾನೂ ನಂಬಿದ್ದೆ. ಆದರೆ, ನಮ್ಮ ಭರವಸೆಗಳನ್ನೆಲ್ಲ ಅವರು ಹಾಳು ಮಾಡಿದ್ದಾರೆ. ನನ್ನ ದುಃಖದಾಳವನ್ನು ನೀನು ಅಳೆಯಲಾರೆ. ಸದಾ ಅರ್ಚನೆ ಮಾಡುವುದರಲ್ಲೇ ಈ ದೇಶ ಕಳೆದಿದೆ. ಈಗ ಜವಾಹರರನ್ನು ಪೂಜಿಸುವುದರಲ್ಲಿ ಅಚ್ಚರಿ ಏನೂ ಇಲ್ಲ. ಇದನ್ನು ಕಿತ್ತೊಗೆಯಬೇಕು. ಅರಳಿ ಮರದ ಸುತ್ತಲಿರುವ ಕಲ್ಲುಗಳನ್ನೇ ಈ ದೇಶದ ಜನ ಪೂಜಿಸುತ್ತಾರೆ. ಈ ತೆರನಾದ ಅಸಹಜ ಕನಸುಗಳನ್ನು ಕಿತ್ತೊಗೆದಾಗಲೇ ದೇಶ ಬದಲಿಸುವುದು'. ಕ್ರಾಂತಿಕಾರಕ ಬದಲಾವಣೆ ಭರಿಸಲು ಸದಾ ಯತ್ನಿಸುತ್ತಿದ್ದ ವ್ಯಕ್ತಿಯ ಮಾತುಗಳು ಇವು. ನನ್ನ ಅಂತರಾಳಕ್ಕೆ ಮುಟ್ಟುವಂತೆ ಅವರ ಜೀವನದ ಸ್ವರೂಪ ದರ್ಶನವಾಯಿತು.

ಡಾಕ್ಟರ್ ಸಾಹೇಬರು ಪಾರ್ಲಿಮೆಂಟಿನಲ್ಲಿ ಮಾತಾಡುವಾಗ ಸಮಸ್ಯೆಯ ಆಳ ಅರಿಯಲು ನಾವು ತಿಂಗಳುಗಟ್ಟಲೆ ಕಳೆಯುತ್ತಿದ್ದೆವು. ಯಾಕೆಂದರೆ– ಅವರು ಯಾವ ವಿಷಯವನ್ನೇ ಎತ್ತಿಕೊಳ್ಳಲಿ, ಅದಕ್ಕೆ ಸಂಬಂಧಿಸಿದ ಅಂಕಿ–ಅಂಶಗಳೆಲ್ಲ ಅವರ ತುದಿಬೆರಳಲ್ಲೆ ಇರುತ್ತಿದ್ದವು. ಅವರ ನಿವಾಸಕ್ಕೆ ಭೇಟಿ ನೀಡುವ ಹಲವು ಸಂದರ್ಭಗಳೂ ನನಗೆ ಒದಗುತ್ತಿತ್ತು. ಅಲ್ಲಿ ಸದಾ ರೈತ ಕಾರ್ಮಿಕರು, ಉಪಾಧ್ಯಾಯರು ಮತ್ತು ಪಕ್ಷದ ಕಾರ್ಯಕರ್ತರು ಗುಂಪುಗೂಡಿರುತ್ತಿತ್ತು. ಅದೇ ಅವರ ಸಂಸಾರವಾಗಿತ್ತು ಕೂಡ. ಆದರೆ ಅದರ ಯಜಮಾನ ಅವರಾಗಿರಲಿಲ್ಲ,

ಎಲ್ಲರಲ್ಲೂ ಒಂದಾಗಿದ್ದರು. ಅವರೆ ಇದನ್ನು ಹೇಳುವುದಾದರೆ– 'ದಣಿದ, ಬಾಯಾರಿದ, ಹೃದಯಛಿದ್ರವಾದ, ಶೋಷಣೆಗೊಳಗಾದ ಸರ್ವರಿಗೂ ಇಲ್ಲಿ ಸ್ವಾಗತ. ಪ್ರೀತ್ಯಾದರಗಳಿಂದ ವಂಚಿತರಾದವರಿಗೆ ನನ್ನ ಪ್ರೀತಿ ಮುಡುಪಾಗಿದೆ.'

ಯಾವುದೇ ವಿಷಯ ಚರ್ಚೆಗೆ ಬಂದರೂ ಸರಿಯೆ, ಅದಕ್ಕೆ ಚಳಿಬಿಡಿಸಿ ವಕೀಲರಂತೆ ಒಳಹೊಕ್ಕು ನೋಡುತ್ತಿದ್ದರು. ಹಲವು ಸಂದರ್ಭಗಳಲ್ಲಿ, ಅವರ ಈ ಕ್ರೂರ ವಕೀಲಿ ವೃತ್ತಿಗೆ ಅದೂ ನನ್ನನ್ನೇ ವಸ್ತುವನ್ನಾಗಿ ಮಾಡಿಕೊಂಡಾಗಲಂತೂ ನನ್ನ ಸಹನೆ ಮೀರುತ್ತಿತ್ತು. ಆದರೆ ಇದೂ ಕೂಡ ಅವರ ಸ್ವಭಾವಗಳಲ್ಲೊಂದು ಎಂಬ ಅರಿವು ನನಗೆ ಮೂಡಿತು. ಪ್ರತಿಯೊಂದು ವಿಷಯದ ಆಳ ಹೊಕ್ಕು ನೋಡುವುದು ಅವರ ನೋಟವಾಗಿತ್ತು. ಜೊತೆಗೆ ಅವರದು ಅಲೆಮಾರಿಯಂತಹ ಜೀವನ. ಅವರು ಒಂದು ವ್ಯಕ್ತಿಯಾಗಿರಲಿಲ್ಲ, ಸಮಷ್ಟಿಯೇ ಅವರಾಗಿದ್ದರು. ಅವರದೇ ಆದ ಯಾವ ಸಂಪತ್ತು ಅಥವಾ ಬ್ಯಾಂಕಿನಲ್ಲಿ ಹಣ ಇರಲಿಲ್ಲ ಅವರಲ್ಲಿದ್ದ ಕಾರ್ಯಕರ್ತರನ್ನು ಬಿಟ್ಟು! ರಾಮಸೇವಕಜಿ ನನಗೊಮ್ಮೆ ಹೀಗೆ ಹೇಳಿದರು– 'ಡಾಕ್ಟರರು ತಮ್ಮ ಹಾಗೂ ಇತರರಲ್ಲಿ ಭೇದ ಎಣಿಸದಿರುವುದು ತಮ್ಮೆಲ್ಲರ ಅಕ್ಕರೆಗೆ ಕಾರಣವಾಗಿದೆ' ಎಂದು. ನಿಜ ಅನಿಸುತ್ತದೆ. ಒಂದು ದಿನ ಇದಾಯಿತು– ನಾನು ಕಾರನ್ನು ಕಾಯುತ್ತ ಪಾರ್ಲಿಮೆಂಟಿನ ಗೇಟಿನ ಬಳಿ ನಿಂತಿದ್ದೆ. ಡಾಕ್ಟರ್ ಸಾಹೇಬರು ಬಂದಾಗ 'ಎಲ್ಲಿಗೆ ಹೋಗುತ್ತಿರುವಿರಿ? ಬಿಟ್ಟುಕೊಡುವೆ' ಎಂದೆ. ಡಾಕ್ಟರರು ಕಾಫೀಹೌಸಿಗೆ ಹೋಗುತ್ತಿರುವೆ ಎಂದು ತಿಳಿಸಿ, ಬಂದು ಕಾರಲ್ಲಿ ಕುಳಿತಮೇಲೆ ನಾನೂ ಪಕ್ಕದಲ್ಲೇ ಕುಳಿತುಕೊಂಡೆ. ಕಾಫಿ ಹೌಸು ಬಂದಾಗ ಅವರು ಇಳಿದು ನನ್ನನ್ನೂ ಕೆಳಗಿಳಿಯಲು ಹೇಳಿದರು. ಅದಕ್ಕೆ ನಾನು 'ಡಾಕ್ಟರ್ ಸಾಹೇಬ್, ನೀವು ಹೋಗುತ್ತಿರುವ ಜಾಗ ಜನಜಂಗುಳಿಯಿಂದ ತುಂಬಿದ್ದು ನಾನಂತೂ ಬರಲಾರೆ' ಎಂದೆ. ನನ್ನ ಈ ಮಾತು ಕೇಳಿದ ಅವರು ಕುಪಿತಗೊಂಡು ಹೇಳಿದರು– 'ನೀನು ಈ ರೀತಿ ಭೇದವೆಣಿಸುವುದು ನನಗೆ ಖೇದವಾಗುತ್ತದೆ. ಅಲ್ಲಿಗೆ ಬರುವವರೆಲ್ಲ ಗುಮಾಸ್ತರು, ಕಾರಿನ ಡ್ರೈವರುಗಳು, ಎತ್ತಿನ ಬಂಡಿಯವರು ಇತ್ಯಾದಿ ಸಾಮಾನ್ಯ ಜನಗಳೇ. ಇಲ್ಲಿಗೆ ಬರುವುದರಿಂದ ನಿನ್ನ ಅಂತಸ್ತಿಗೆ ಕಮ್ಮಿ ಅಂತ ಭಾವಿಸುತ್ತೀಯಾ? ಈ ರೀತಿ ನೀನೇನಾದರೂ ತಿಳಿದುಕೊಂಡರೆ ನಾನು ನಿನ್ನ ಬುದ್ಧಿ ನೆಟ್ಟಗಿಲ್ಲ ಎಂದುಕೊಳ್ಳಬೇಕಾಗುತ್ತದೆ'. ನಾನು ಅವರತ್ತ ನೋಡಿದೆ. ಸಹಿಸಲಾರದಷ್ಟು ಬೇಸರವಾಯಿತು. ಆದರೆ ನನ್ನೊಳಗೆ ಅಂಥದ್ದು ಏನಾದರೂ ಇದ್ದರೆ ಅದರಿಂದ ದೂರ ಉಳಿಯಬೇಕೆಂದೂ ಮನಸು ಮಾಡಿದೆ.

ಗಂಡು ಹೆಣ್ಣಿನ ನಡುವೆ, ವರ್ಗಗಳ ನಡುವೆ, ಯಾವ ರೀತಿಯದೇ ಆದ ಸಮಾನತೆ ವಿಷಯ ಅದಾಗಿರಲಿ, ಅದು ಅವರಿಗೆ ಅತ್ಯಂತ ಪ್ರಿಯವಾಗುತ್ತಿತ್ತು. ಎಲ್ಲ ತೆರನಾದ ಸಮಾನತೆ ತರಲು ಅವಿಶ್ರಾಂತವಾಗಿ ದುಡಿಯುತ್ತಿರುವಂತೆ ತೋರುತ್ತಿದ್ದರು. ಒಂದು ಸಲ ಸೆಂಟ್ರಲ್ ಹಾಲ್‌ನಲ್ಲಿ ಡಾಕ್ಟರ್ ಸಾಹೇಬರು ಕುಳಿತಿದ್ದರು. ಸಾಮಾನ್ಯವಾಗಿ ಅವರು ಇರುವಲ್ಲೆಲ್ಲ ಜನ ಮುತ್ತಿಕೊಂಡಿರುತ್ತಿದ್ದರು. ಆಗ ಅವರೊಡನೆ ಲೋಕಸಭೆ ಸದಸ್ಯರು ಮತ್ತು ಪತ್ರಕರ್ತರು ಸುತ್ತುವರೆದಿದ್ದರು. ಅವರೆಲ್ಲ ಒಟ್ಟಾಗಿ ಕುಳಿತು ಮಧ್ಯೆಮಧ್ಯೆ ನಗುತ್ತಿದ್ದುದು ಕಾಣಿಸಿತು. ಪಾರ್ಲಿಮೆಂಟಿನಲ್ಲಿ ಬಿಗುವಾಗಿದ್ದರೆ ಹೊರಗೆ ಮೃದುವಾಗಿ ವಿನೀತರಾಗಿರುತ್ತಿದ್ದರು. ಎಷ್ಟೊ ಸಲ ಪಾರ್ಲಿಮೆಂಟಿನಲ್ಲಿ ನಮ್ಮನ್ನೇ ಟೀಕಿಸಿದ್ದರೂ ಕೂಡ ಹೊರಗೆ ಮಾತ್ರ ಕಾಫಿಗೆ, ಐಸ್‌ಕ್ರೀಮು ತಿನ್ನಲು ಕರೆಯುತ್ತಿದ್ದರು. ಆ ದಿನ ಶನಿವಾರವಾದ್ದರಿಂದ ಲೋಕಸಭೆ ಮುಚ್ಚಿ ಸೆಂಟ್ರಲ್‌ಹಾಲ್ ಮಾತ್ರ ತೆರೆದಿತ್ತು. ನನ್ನನ್ನು ನೋಡಿದಾಕ್ಷಣ ಕರೆದರು. ಆಗ ಅವರು ಗಂಭೀರವಾದ ಚರ್ಚೆಯೊಂದರಲ್ಲಿ ಮುಳುಗಿದ್ದರು. ಆ ಚರ್ಚೆಯ ನಡುವೆ, ಹಿಂದೊಮ್ಮೆ ನಿರಾಶೆಗೊಂಡಂತಿದ್ದ ಕೆಲವು ಗಂಡಸರಿಗೆ ಬಳೆ ತೊಟ್ಟುಕೊಳ್ಳಿ ಎಂದು ನಾನು ಹೇಳಿದ್ದ ಮಾತನ್ನು ತಿಳಿಸಿದೆ. ಇದರ ಮೇಲೆ ಡಾಕ್ಟರ್ ಸಾಹೇಬರು ತೀವ್ರ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ನನ್ನ ಮಗಳ ಕಡೆ ತಿರುಗಿ 'ನೋಡು, ನಿನ್ನ ಅಮ್ಮನೇ ನಿನ್ನ ವಿರುದ್ಧ ಮಾತಾಡುತ್ತಿದ್ದಾಳೆ. ಬಳೆಗಳು ದೌರ್ಬಲ್ಯಕ್ಕೆ ಸಂಕೇತವೇನು?' ಎಂದರು. ಮತ್ತೆ ಮುಂದುವರಿಸಿ ಅವಳನ್ನೇ ನೋಡುತ್ತ 'ನಿನ್ನನ್ನು ದುರ್ಬಲಗೊಳಿಸಲು ನಿನ್ನ ತಾಯಿಗೆ ಯಾವ ಹಕ್ಕೂ ಇಲ್ಲ' ಎಂದಾಗ ನನ್ನ ಮಗಳು ಅವರ ಮುಖಮುಖ ನೋಡಿದಳು. ಎಲ್ಲರೂ ನಗಲು ಆರಂಭಿಸಿದರು. ಅವಳು ಈ ಶ್ರೇಷ್ಠ ಕ್ರಾಂತಿಕಾರಿಯನ್ನು ಅರಿತುಕೊಳ್ಳಲು ಹವಣಿಸುತ್ತಿದ್ದಳು.

ಡಾ. ಲೋಹಿಯಾರವರು ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಚಳವಳಿ ಮಾಡುತ್ತಿದ್ದಂತೆಯೇ ಭಾರತೀಯ ಭಾಷೆಗಳಲ್ಲಿಯೂ ಸಮಾನತೆ ತರಲು ಹೋರಾಡುತ್ತಿದ್ದರು. ಭಾರತೀಯರು ಅವರವರ ಭಾಷೆಗಳ ಬಗ್ಗೆ ಹೆಮ್ಮೆಪಡಬೇಕೆಂಬುದು ಅವರ ಆಶಯ. ಒಂದು ದೇಶ ನಿಲ್ಲುವುದು ಭಾಷೆಯ ಮೇಲೆಯೇ ಎಂದು ಇಂಗ್ಲಿಷ್‌ನ ಸ್ಥಾನದಲ್ಲಿ ಪ್ರಾದೇಶಿಕ ಭಾಷೆಗಳನ್ನು ತರಲು ಯತ್ನಿಸುತ್ತಿದ್ದರು. ಅವರ ಪಕ್ಷ ಕೇವಲದಷ್ಟಿದ್ದರೂ ಕೂಡ ಈ ಕೆಲಸಕ್ಕಾಗಿ ಚಳವಳಿ ಹಬ್ಬಿಸಿತ್ತು. ಭಾಷೆಯ ಸತ್ಯತೆಯನ್ನು ಅವರ ಪಕ್ಷ ಗುರುತಿಸಿತ್ತು.

ಒಂದು ಸಲ ಪಾರ್ಲಿಮೆಂಟಿನಲ್ಲಿ ಶ್ರೀ ಸ್ವರ್ಣಸಿಂಗರು ಸುಳ್ಳು ಹೇಳಿದರೆಂದು ಲೋಹಿಯಾ ಆರೋಪಿಸಿದರು. ಕಾಂಗ್ರೆಸ್ಸಿಗರು ಇದನ್ನು ವಿರೋಧಿಸಿ, ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು. ಆದರೆ ಡಾ. ಲೋಹಿಯಾ ಇದನ್ನು ತಿರಸ್ಕರಿಸಿದರು. ಮಾತಿನ ಚಕಮಕಿ ನಡೆದ ಮೇಲೆ ಈ ವಿಷಯ ಕೊನೆ ಕಂಡಿತು. ಹೊರಬಂದಾಗ ಅವರಿಗೆ ನಾನು 'ಒಂದು ಮಾತು ಹೇಳಲು ಇಚ್ಛಿಸುತ್ತೇನೆ' ಎಂದೆ. ಏನು ಅಂತ ನನ್ನ ಕೇಳಿದರು. ಅದಕ್ಕೆ ನಾನು 'ನೀವು ದೊಡ್ಡ ವಿದ್ವಾಂಸರು, ಭಾಷೆಯ ಬಗ್ಗೆ ನಿಮಗೆ ಬೇಕಾದಷ್ಟು ಹಿಡಿತವಿದೆ. ಆದರೂ ನೀವೂ 'ಝೂಠ್' (ಸುಳ್ಳು) ಪದ ಉಪಯೋಗಿಸುವುದು ಸರಿಯೆ?' ಎಂದೆ. 'ಅದಕ್ಕೆ ಏನು ಹೇಳಬೇಕಿತ್ತು' ಎಂದು ಕೇಳಿದರು. ನಾನು 'ಶ್ರೀ ಸ್ವರ್ಣಸಿಂಗರು ಅಸತ್ಯ ಹೇಳುತ್ತಿರುವರು ಎನ್ನಬೇಕಿತ್ತು' ಎಂದೆ. ಇದಕ್ಕವರು, 'ತಾರಕೇಶ್ವರಿ, ಅಸತ್ಯವು ನಿಘಂಟಿನ ಮತ್ತು ಅರಮನೆಯಲ್ಲಿ ವಾಸಿಸುವ ನಿನ್ನಂಥ ಜನರಾಡುವ ಮಾತು. ಸಾಮಾನ್ಯ ಜನರು ಖಂಡಿತ ಬಳಸುವುದಿಲ್ಲ' ಎನ್ನುತ್ತಿದ್ದಂತೆ ಅವರ ನುಡಿಯಲ್ಲೆ ಮುಳುಗಿ ತೇಲಿ ಹೋದೆ.

ಅವರ ಮರಣಾನಂತರ ಲೋಕಸಭೆಯಲ್ಲಿ ದುಃಖದ ಛಾಯೆ ಆವರಿಸಿತ್ತು. ನಮ್ಮ ನಡುವೆ ಅಗ್ನಿಪರ್ವತದಂತಿದ್ದು ಹಾಗೆಯೇ ಹೊರಟು ಹೋದರು. ಲೋಕಸಭೆಯಲ್ಲಿ ಅವರು ತಮ್ಮ ಹೆಜ್ಜೆ ಗುರುತುಗಳನ್ನು ಬಿಟ್ಟಿದ್ದಾರೆ. ಅಲ್ಲಿ ಅವರ ಧ್ವನಿಯೂ ಪ್ರತಿಧ್ವನಿಸುತ್ತಿರುತ್ತದೆ. ಅವರಂತೆ ಚಳವಳಿ ನಡೆಸುವ ಮತ್ತಾರೂ ಈ ದೇಶದಲ್ಲಿ ಇಲ್ಲ. ದೇವರನ್ನು ಮತ್ತು ನಾಯಕರನ್ನು ಶ್ರೀಸಾಮಾನ್ಯನ ಮಟ್ಟಕ್ಕೆ ತರಲು ಯತ್ನಿಸಿದವರು ಅವರೊಬ್ಬರೆ. ದೇಶದ ರಾಜಕೀಯ ದಿಗಂತದಲ್ಲಿ ಒಬ್ಬ ಶ್ರೇಷ್ಠ ವ್ಯಕ್ತಿಯಾಗಿ ಪ್ರವೇಶಿಸಿದ್ದರು. ಅವರ ಮರಣಾನಂತರ ಯಾರೋ ಒಬ್ಬರು ಹೀಗೆ ಹೇಳಿದರು: 'ಮಜ್ನು ಇಲ್ಲವಾದ, ಕಾಡು ಗೋಳ್ಗರೆಯುತ್ತಿದೆ'

## ಲೋಹಿಯಾ ನೆನಪಿನ ಸುತ್ತಮುತ್ತ

ದಲಿತ ಸಂಘರ್ಷ ಸಮಿತಿ ಹುಟ್ಟಿದ ಗಳಿಗೆಯಲ್ಲಿ ಮುಖ್ಯವಾಗಿ ಮೂರುಜನರ ಕಡೆ– ಬಿ ಕೃಷ್ಣಪ್ಪ, ಸಿದ್ದಲಿಂಗಯ್ಯ ಮತ್ತು ನನ್ನ ಕಡೆ– ಎಲ್ಲರೂ ನೋಡುತ್ತಿದ್ದರು. ಬಿ.ಕೃಷ್ಣಪ್ಪನವರು ಕಟ್ಟಾ ಅಂಬೇಡ್ಕರ್‌ವಾದಿ ಎಂದೂ, ಹಾಗೆಯೇ ಸಿದ್ದಲಿಂಗಯ್ಯ ಮಾರ್ಕ್ಸ್‌ವಾದಿ ಎಂದೂ, ನಾನು ಲೋಹಿಯಾವಾದಿ ಎಂದು ಗುರುತಿಸಲಾಗುತ್ತಿತ್ತು. ಕೃಷ್ಣಪ್ಪನವರ ಬಗ್ಗೆ ಸಂಘಟನೆಯಲ್ಲಿ ಅಪಾರವಾದ ನಂಬಿಕೆ ಇತ್ತು. ಸಿದ್ದಲಿಂಗಯ್ಯನವರ ಬಗ್ಗೆ ಅಪಾರವಾದ ಪ್ರೀತಿ ಇತ್ತು. ನನ್ನ ಬಗ್ಗೆ ಹೆಚ್ಚು ಗೌರವವಿತ್ತು. ಇದರೊಳಗೊಂದು ಸೂಕ್ಷ್ಮವಾದ ವಿದ್ಯಮಾನವೊಂದು ಗಮನಿಸಿದರೆ ಕಾಣುತ್ತಿತ್ತು. ಒಂದು ಬಾಲಸೈನ್ಯವನ್ನು ಕಟ್ಟಿಕೊಂಡು ಓಡಾಡುತ್ತಿದ್ದ ಸಿದ್ದಲಿಂಗಯ್ಯನವರ ಬಗ್ಗೆ ಇದ್ದ ಪ್ರೀತಿಯ ಒಳಗೆ ಸಖತ್ತು ಗುಮಾನಿಯೂ ಇತ್ತು! ಅವರು ಮಾರ್ಕ್ಸ್‌ವಾದದ ಕಡೆ ದಲಿತ ಸಂಘರ್ಷ ಸಮಿತಿಯನ್ನು ಸೆಳೆದುಕೊಂಡು ಹೋಗಿಬಿಡಬಹುದು ಅಂತ. ಆದರೆ ಏನೂ ಸೈನ್ಯವಿಲ್ಲದ, ಪಾಪ ಒಂಟಿಯಾದ ನನ್ನ ಬಗ್ಗೂ ಗುಮಾನಿ ಇತ್ತು, ಆದರೆ ಸಖತ್ತಲ್ಲ, ನಾನು ದಸಂಸವನ್ನು ಲೋಹಿಯಾವಾದಕ್ಕೆ ಪ್ರಭಾವಿಸಿಬಿಡಬಹುದು ಅಂತ.

ನಿಜ, ನಾವು ಸೈದ್ಧಾಂತಿಕವಾಗಿ ಭಿನ್ನವಾಗಿದ್ದೆವು, ನಿಜ. ವೇದಿಕೆಯ ಮೇಲೆ ಸಿದ್ಧಾಂತಗಳ ಹೆಸರಿನಲ್ಲಿ ಜಗಳವಾಡುತ್ತಿದ್ದೆವು, ನಿಜ. ಆದರೆ ನಾವು ಹುಡುಕಿಕೊಂಡು ಹೋಗುತ್ತಿದ್ದುದು, ನಾನು ಕೃಷ್ಣಪ್ಪನವರ ಬಳಿಗೆ, ಕೃಷ್ಣಪ್ಪನವರು ನನ್ನ ಬಳಿಗೆ, ಸಿದ್ದಲಿಂಗಯ್ಯನವರು ನಮ್ಮಿಬ್ಬರ ಬಳಿಗೆ– ಹೀಗೆ ಪರಸ್ಪರ ಹುಡುಕಿಕೊಂಡು ಹೋಗುತ್ತಿದ್ದೆವು. ಸೈದ್ಧಾಂತಿಕವಾಗಿ ಭಿನ್ನತೆ ಇದ್ದರೂ

ಆಗ ನಾವು ಭಿನ್ನವಾಗಿರಲಿಲ್ಲ. ಹೀಗಾಗೇ ನಾವು ಉಳಿದೆವು. ಜೊತೆಗೆ, ಸಂತೆಗೆ ರಾಸುಗಳನ್ನು ಆಯ್ದುಕೊಂಡು ಹೋಗಲು ಬರುತ್ತಿದ್ದವರಂತೆ ಕಮ್ಯುನಿಷ್ಟರು ಕೇಡರ್‌ಗಳಿಗೆ ಕಣ್ಣಾಕಿಕೊಂಡು ದಲಿತ ಸಂಘರ್ಷ ಸಮಿತಿಯ ಒಳಗೂ ಹೊರಗೂ ಓಡಾಟ ನಡೆಸುತ್ತಿದ್ದರೂ ನಾವು ಉಳಿದೆವು, ದಲಿತ ಸಂಘರ್ಷ ಸಮಿತಿ ಉಳಿಯಿತು. ಆಗ ನಮಗೆ ಸಿದ್ಧಾಂತಗಳು ಅದು ಏನಿದ್ದರೂ ಬದುಕನ್ನು ಹಸನು ಮಾಡಲು ಬೇಕಾದ ಹತಾರಗಳು ಎಂದು ನಾವು ಅಂದುಕೊಂಡಿದ್ದರಿಂದ ಇರಬಹುದು.

ದಾರುಣವಾದ ದಲಿತರ ಬದುಕು ಹಸನಾಗಲು ಮತ್ತಷ್ಟು ಪ್ರೀತಿ ಸಮಾನತೆ ಸ್ವಾವಲಂಬನೆಯ ಹತಾರಗಳು ಬೇಕಾಗಿವೆಯೇನೋ.

ಇರಲಿ, ಪಿಯುಸಿ ಫೇಲಾಗಿದ್ದ ನಾನು ಲೋಹಿಯಾ ಅವರು ತೀರಿಕೊಂಡ ದಿನ ಅವರ ಬಗ್ಗೆ ಬಂದಿದ್ದ ಸುದ್ದಿ ಲೇಖನ ಓದಿ ಲೋಹಿಯಾ ಸೆಳತಕ್ಕೊಳಗಾದೆ– ಅವರ ಭೌತಿಕ ಶರೀರ ಗತಿಸಿದ ದಿನವಾದ್ದರಿಂದ ಬಹುಶಃ ಅವರ ಪ್ರಜ್ಞೆಯೊಡನೆ. ಆಗ ಲೋಹಿಯಾ ಅವರ 'ಜಾತಿ ಪದ್ಧತಿ' ಹಾಗೂ 'ರಾಜಕೀಯದ ಮಧ್ಯೆ ಬಿಡುವು' ಈ ಎರಡೂ ಕೃತಿಗಳು ಕನ್ನಡದ ಲೇಖಕರ, ಚಿಂತಕರ ಹಾಗೂ ಆಸೆಗಣ್ಣಿನ ಯುವಕರ ಮನಗೆದ್ದಿದ್ದವು. ಇವುಗಳ ಪ್ರಭಾವ ನಾಡಿನ ಉದ್ದಗಲಕ್ಕೂ ಹಬ್ಬಿತ್ತು. 'ಜಾತಿ ಪದ್ಧತಿ' ಚರ್ಚಿತವಾಗುತ್ತಿದ್ದರೆ, 'ರಾಜಕೀಯದ ನಡುವೆ ಬಿಡುವು' ಒಬ್ಬ ಮಹಾನ್ ಕಲಾವಿದನ ಅಂತರಂಗದ ಅಭಿವ್ಯಕ್ತಿಯಾಗಿ ಮನಸೂರೆಗೊಂಡಿತ್ತು. ಒಳಗಾದವರಲ್ಲಿ ನಾನೂ ಒಬ್ಬನಾಗಿದ್ದೆ.

ಜಾತಿ ಪದ್ಧತಿಯ ನಾಶ, ಜಾತ್ಯತೀತ ಮನೋಭೂಮಿಕೆ ರೂಪಿಸುವುದು ಇತ್ಯಾದಿಗಳಿಗಾಗಿ ಅಂದು ನಡೆದ ಅನಿವಾರ್ಯವೂ ಅಗತ್ಯವೂ ಆದ ಆ ಆಂದೋಲನದಲ್ಲಿ ಒಂದು ವಿವೇಕದ ಎಚ್ಚರದ ಎಳೆ ಸೇರಿಸಿ ನಾವು ನಡೆಯಬೇಕಾಗಿತ್ತೇನೋ ಎಂದು ಈಗ ಯೋಚಿಸುತ್ತಿರುವೆ. ಈ ವಿವೇಕದ ಎಚ್ಚರ ಈಗಲೂ ನಮಗೆ ಬೇಕಾಗಿದೆ. ಏಕೆಂದರೆ ಜಾತಿವ್ಯವಸ್ಥೆಯಲ್ಲಿ ಮುಳುಗಿದರೆ ನೀರಲ್ಲಿ ಮುಳುಗಿ ಮೂರ್ಛಾವಸ್ಥೆಯಲ್ಲಿ ಇದ್ದಂತೆ. ಜಾತಿವಿರುದ್ಧ ಹೋರಾಡುವುದೆಂದರೆ, ಒಂದು ಕಾಲು ಜಾತಿಯಲ್ಲೂ ಇನ್ನೊಂದು ಕಾಲು ಜಾತ್ಯತೀತತೆಯ ಮೇಲೂ ಇಟ್ಟ ನಡಿಗೆ. ಇದನ್ನು ಹೇಗೆ ನಿಭಾಯಿಸಬೇಕಿತ್ತು ಎಂದು ತುಂಬಾ ಚಿಂತೆ ಮಾಡಿದ್ದೇನೆ. ದ್ವೇಷದ ಸೋಂಕಿಲ್ಲದೆ ಇದನ್ನು ಪ್ರೀತಿಯ ಕ್ರಿಯೆ ಮಾಡುವುದಾದರೂ ಹೇಗೆ? ತುಂಬಾನೇ ಚಿಂತೆ ಮಾಡಿದ್ದೇನೆ.

ವಚನಕಾರರಂತೆ ಸಕಲೆಂಟು ಜಾತಿಗಳು ತಂತಮ್ಮ ಜಾತಿ ಮೀರಿ ತನ್ನ ಒಡನಾಡಿಗಳಿಂದಾಗಿ ತಾನು ಉದ್ಧಾರವಾದೆ ಎಂಬಂತೆ ನಾವು ನಮ್ಮನ್ನೇ ರೂಪಿಸಿಕೊಳ್ಳುತ್ತ ಜಾತಿ ಮೀರುವ ಆಂದೋಲನ ನಡೆದಿದ್ದರೆ...

ಇಂದು ಲೋಹಿಯಾ ಅವರ ನೆನಪನ್ನು ದಸಂಸದ ಒಂದು ಬಣ ಆಚರಿಸುವಷ್ಟಕ್ಕೆ ಬಂದಿದೆ! ನನಗೆ ಇಂದು ಇಲ್ಲಿ ಅನಿಸುತ್ತಿದೆ– ಸಾಲದು! ಗಾಂಧಿಯನ್ನು ಎಷ್ಟು ಕತ್ತರಿಸಿ ಎಷ್ಟು ಉಳಿಸಿಕೊಳ್ಳಬೇಕು ಎಂಬುದಕ್ಕೆ ಲೋಹಿಯಾ, ಯಾರ ನಾಯಕತ್ವ, ಯಾರಿಗೆ ತಲುಪಿಸಬೇಕು ಎಂಬುದಕ್ಕೆ ಅಂಬೇಡ್ಕರ್ ಈ ಮೂವರ ಸಾರವನ್ನೂ ಕರಗಿಸಿ ಒಂದು ಹೊಸ ನಾಣ್ಯವನ್ನು ತಯಾರಿಸಿದರೆ ಈ ಕಾಸು ನಡೆಯಬಹುದೇನೋ ಎಂಬ ಆಸೆಯಾಗುತ್ತಿದೆ. ಸಂಘಟನೆಯ ರಚನೆಯಲ್ಲಿ ಲೋಹಿಯಾ ಸ್ವಚ್ಛಂದತೆಗೆ ಮಿತಿಹಾಕುವುದೂ ಕಮ್ಯುನಿಸ್ಟ್ ಸಂಘಟನೆಯ ಬಿಗಿ ರಚನೆಯನ್ನು ಉದಾರಗೊಳಿಸಿ ಸ್ವೀಕರಿಸುವುದೂ ಅಗತ್ಯವಿದೆ.

ಇದನ್ನು ಹೇಗೆ ಮಾಡಬೇಕು?  ಯಾರು ಮಾಡಬೇಕು? ಹೇಗೆ ಎಂಬುದಕ್ಕೆ ಹೀಗೂ ಇರಬಹುದೇ ಅಂತ ಒಂದು ಉದಾಹರಣೆ ಕೊಡುವೆ. ಹಿಂದ್ ಸ್ವರಾಜ್ ಬಗ್ಗೆ ಓದುತ್ತೇವೆ, ಚರ್ಚಿಸುತ್ತೇವೆ, ವಾದಿಸುತ್ತೇವೆ. ವಿವಾದವೂ ಆಗುತ್ತದೆ. ಇದರ ಬದಲಾಗಿ ಹಿಂದ್ ಸ್ವರಾಜ್ ಅನ್ನು ರೂಪಕವಾಗಿ ಒಳಗಿಟ್ಟುಕೊಂಡು ಆ ಒಳ ನಸುಬೆಳಕಿನಲ್ಲಿ ಹೊರಜಗತ್ತಿನ ಕತ್ತಲನ್ನು ಬೆಳಕಾಗಿಸಲು ಸ್ವಾವಲಂಬನೆ, ಸಮಾನತೆ, ಸ್ವಾತಂತ್ರ್ಯವ ಹೆಚ್ಚಿಸಲು ಒದ್ದಾಡಬಹುದಲ್ಲವೇ? ಈ ಒದ್ದಾಟದಲ್ಲಿ ನಾಗಾರ್ಜುನನ ಬೌದ್ಧಿಕ ಪ್ರಖರತೆಯ ಅಭಿವ್ಯಕ್ತಿಗೆ ಬದಲಾಗಿ ಬುದ್ಧನ ಹೃದಯ ಮಿಡಿತವು ಮಾತುಗಳಾಗುವ ಪರಿಯು ಹೆಚ್ಚು ಮುಟ್ಟಬಹುದಲ್ಲವೇ?

ಹಾಗೇ ಈ ನಾಣ್ಯವನ್ನು ಯಾರು ಮಾಡುತ್ತಾರೆ ಎಂಬುದಕ್ಕೂ, ಒಬ್ಬ ಚಕ್ರವರ್ತಿಗೆ ಕಾಣುವಂತೆ ನನಗೆ ಸದ್ಯಕ್ಕೆ ಕಾಣುವುದು ಡಿ.ಎಸ್.ನಾಗಭೂಷಣ! ಒಮ್ಮೆ ನಾಗಭೂಷಣ ನನ್ನ ಜತೆ 'ಅಯ್ಯೋ ಈ ಸಂಕೀರ್ಣ ಸಿದ್ಧಾಂತಗಳು, ಅಸಮಾಧಾನಕ್ಕಿಂತ ಎಲ್ಲೋ ಒಂದು ಕಡೆ ನನ್ನ ಕುಲಕಸುಬು ಚಿನ್ನಬೆಳ್ಳಿ ಕೆಲಸ ಮಾಡಿಕೊಂಡು ಸರಳವಾಗಿ ನೆಮ್ಮದಿಯಿಂದಾದರೂ ಇರಬಹುದಾಗಿತ್ತು' ಎಂದಿದ್ದರು! ಆ ಚಿನ್ನಬೆಳ್ಳಿ ಕೆಲಸದ ಜೀವನದಲ್ಲೂ ನಾಗಭೂಷಣ್, ತನ್ನ ಸುತ್ತಲಿನ ಕುಲಕಸುಬಿನವರ ಜತೆ 'ಅವರು ಅಪ್ರಾಮಾಣಿಕರೆಂದೂ ತಾನು ಪ್ರಾಮಾಣಿಕನೆಂದೂ' ತೀವ್ರತರವಾದ ಜಗಳವಾಗುತ್ತಾ ಅವು ಬೆಳಗ್ಗೆ ಎದ್ದು

ರಾತ್ರಿ ಮಲಗುತ್ತಿದ್ದವು. ಅಷ್ಟೇಕೆ, ನಾಗಭೂಷಣ್ ಲೋಹಿಯಾ ಅವರ ಸಮಕಾಲೀನರಾಗಿದ್ದರೂ ಅವರಿಗೆ ಲೋಹಿಯಾ ಜತೆಯೂ ಜಗಳವಾಗುತ್ತಿತ್ತು. ಬೇಸತ್ತ ಲೋಹಿಯಾ 'ಯಾರ್ರೀ ಆ ಕರ್ನಾಟಕೀ ಬ್ಲಾಕ್‌ಬಾಯ್! ಏನೇನೋ ಪ್ರಶ್ನೆ ಕೇಳ್ತಾನಲ್ಲ. ನನ್ನನ್ನು ಗಾಂಧಿ ಅಂದ್ಕಂಡಿದ್ದಾನಾ, ಹೇಗೆ? ಮೊದಲು ಅವನನ್ನು ಕರ್ನಾಟಕಕ್ಕೆ ಒಗಾಯಿಸಿ' ಅನ್ನುತ್ತಿದ್ದರು. ಇಂಥ ಮಾತಿಗೇ ಕಾಯುತ್ತಿದ್ದ ರಾಜನಾರಾಯಣ್‌ರು ನಾಗಭೂಷಣರನ್ನು ಕಂಕುಳಲ್ಲಿ ಇರುಕಿ ಹಾರುತ ಬಂದು ಕರ್ನಾಟಕದಲ್ಲಿ ಇಳಿಸಿ ಹೋಗುತ್ತಿದ್ದರು. ಆದ್ದರಿಂದ ಹೀಗೆಲ್ಲಾ ಯೋಚಿಸುವುದನ್ನು ಬಿಟ್ಟು, ನಮ್ಮ ನಾಗ್ ತಮ್ಮ ಕುಲಕಸುಬೇ ಇದು ಎಂದು ಭಾವಿಸಿ–ಗಾಂಧಿ ಅಂಬೇಡ್ಕರ್ ಲೋಹಿಯಾರನ್ನು ಕರಗಿಸಿ ನಾಣ್ಯ ಮಾಡುವ ಕಾಯಕಕ್ಕೆ ಕೈಹಾಕಲಿ ಎಂದೂ, ಇಲ್ಲಿ ಅಂಬೇಡ್ಕರ್‌ಗೆ ಅನ್ಯಾಯವಾಗದಂತೆ ಎಚ್ಚರವಹಿಸಲಿ ಎಂದೂ, ಈ ಕಾರ್ಯದಲ್ಲಿ ರವಿವರ್ಮಕುಮಾರ್, ನಟರಾಜ್ ಹುಳಿಯಾರ್ ಜೊತೆಗೂಡಿದರೆ, ತಾವು ಜೊತೆಗೂಡುವುದನ್ನು ನೆನೆಸಿಕೊಂಡೇ ಈ ಮೂವರು ತಮಗೆ ತಾವೇ 'ಅಯ್ಯಯ್ಯಪ್ಪಾ' ಅಂದುಕೊಳ್ಳದೆ, ಕೂಡಿದರೆ ಇಲ್ಲಿ ಸಮಾಜವಾದಕ್ಕೂ ಸೂಲು ಕೂಡಬಹುದು.

# ಮುಖಾಮುಖಿ

## ಮಾಜಿ ಉಸ್ತಾದರೊಬ್ಬರ ಹಾಲಿ ಜೀವನ

ಬನ್ನಿಕುಪ್ಪೆ ಎಂಬ ಊರು ಮೈಸೂರು–ಹುಣಸೂರು ರಸ್ತೆಯಲ್ಲಿ ನಿಂತು ನೋಡಿದಾಗ ಬಹಳ ಸಂತೃಪ್ತವಾಗಿರುವಂತೆ ಕಾಣುತ್ತದೆ, ಹಸುರಾಗಿದೆ. ಊರಿನ ಒಳಹೊಕ್ಕು ದಲಿತ ಮತ್ತು ನಾಯಕ ಕೋಮಿನ ಬೀದಿಗಿಳಿದಾಗಲೇ ಬಡತನ ಮತ್ತು ಕೊಳಕುತನ ನಮ್ಮ ಕಣ್ಣಿಗೆ ರಾಚುವುದು. ದಲಿತ ಮತ್ತು ನಾಯಕ ಕೋಮಿನ ಬೀದಿಗಳು ಗಲೀಜು ತುಂಬಿಕೊಂಡು ವಕ್ರವಾಗಿದ್ದು ಕೆಲವು ಮನೆಗಳೋ ಅರ್ಧ ಕುಸಿದು ಪೂರ್ತ ಕುಸಿಯಲು ಕಾಯುತ್ತಿರುವಂತೆ ಕಾಣಿಸುವುದು. ಮತ್ತು ಪುರಾತನ ಕಾಲದಿಂದಲೂ ಆ ಮನೆಗಳು ಜೀವಿಸಿದಂತಿದ್ದು, ಗಾಳಿ ಮಳೆ ಬಿಸಿಲಿನ ಹೊಡೆತಕ್ಕೆ ಈಗ ಅವೇ ಬೇಯುತ್ತ ಉರಿಯುತ್ತಾ ಸಹಿಸಿ ನಿಂತಂತೆ ಕಾಣುತ್ತವೆ.

ಮೇಲಿನಂತಹದೇ ಒಂದು ಬೀದಿಯಲ್ಲಿ ಕೆ. ನಿಂಗಯ್ಯ ಇರುವರು. ವಯಸ್ಸು 60ನ್ನು ಮುಟ್ಟುತ್ತಲಿದೆ. ಹೆಂಡತಿ ಮಾದಮ್ಮನಿಗೆ ವಯಸ್ಸು 45 ಇರಬಹುದು. ಇವರಿಗೆ ಅದೃಷ್ಟಕ್ಕೆ ಇಬ್ಬರೇ ಮಕ್ಕಳು, ಆದರೂ ಸಣ್ಣವು. ಒಬ್ಬ ಜವರ, ಸ್ಕೂಲಿಗೆ ಹೋದವನಲ್ಲ. ಇವನನ್ನು ಜೀತಕ್ಕೆ ಇರಿಸಿದ್ದು ಬಿಡಿಸಿಬಿಟ್ಟರು. ಇನ್ನೊಂದು ಹುಡುಗ ಐದು ವರ್ಷದ ಸ್ವಾಮಿಯನ್ನು ಶಿಶುವಿಹಾರಕ್ಕೆ ಕಳುಹಿಸುತ್ತಿರುವರು.

ಈ ಸಂಸಾರ ಜೀವಿಸುತ್ತಿದ್ದ ಮನೆತುಂಬ ಒಂದ್ಸಲ ಕಣ್ಣಾಡಿಸಿದೆ. ಒಂದೇ ನೋಟಕ್ಕೆ ಇಡೀ ಹಟ್ಟಿ ಒಳಗಲನ್ನು ನೋಡಬಹುದಿತ್ತು. ರಾತ್ರಿಯಾಗಿದ್ದರಿಂದ ಒಂದು ಸೀಮೆಯೆಣ್ಣೆ ದೀಪ ಉರಿಯುತ್ತಿದ್ದು ಒಂದಂಕಣದಷ್ಟಿದ್ದ ಆ ರೂಮಿಗೆ ಆ ಬೆಳುಕೇ ಸಾಕಾಗುವಷ್ಟಿತ್ತು, ಅಂದರೆ ಆ ರೂಮು ಅಷ್ಟಗಲವಿತ್ತು. ಆ ರೂಮಿನ ನಡುಭಾಗದಲ್ಲಿ ಒಂದು ಮಂಡಿ ಎತ್ತರದ

ತುಂಡುಗೋಡೆಯೊಂದನ್ನು ಎತ್ತರಿಸಿದ್ದು ಆ ಕಡೆ ಅಡುಗೆ ಕೋಣೆ, ಈ ಕಡೆಯದು ಮಲಗುವ ಕೂರುವ ಇನ್ನಿತರ ಅನುಕೂಲಕ್ಕೆ ಇದ್ದಂಥ ಜಾಗವಾಗಿತ್ತು. ಆ ಅಡುಗೆ ಕೋಣೆಯಲ್ಲಿ ನಾಕಾರು ಮಣ್ಣಿನ ಮಡಕೆ, ಒಂದು ಬಿಂದಿಗೆ, ಒಂದು ಚಂಬು, ಒಂದೆರಡು ಅಲ್ಯೂಮಿನಿಯಂ ಲೋಟ, ಸೌದೆ ಕಡ್ಡಿ– ಇಷ್ಟಿದ್ದವು. ಇದಕ್ಕಿಂತೂ ಹೆಚ್ಚಿಗೆ ಕಂಡುಬರಲಿಲ್ಲ. ಹಾಗೂ ಆ ಮಡಕೆಗಳಲ್ಲಿ ಒಳಗೆ ಏನಿದ್ದವು ಎಂಬುದೂ ಗೊತ್ತಾಗಲಿಲ್ಲ. ಆ ಕೋಣೇಲಿ ಒಲೆ ಮುಂದೆ ಬೆಂಕಿ ಉರುಬುತ್ತಾ ಮನೆಯ ಯಜಮಾನಿ ಮಾದಮ್ಮ ಕೂತಿದ್ದಳು. ಆಕೆ ಸಣ್ಣಗೆ ಕಡ್ಡಿಯಂತಿದ್ದು ಆಕೆಯ ಮಾತುಗಳು ಉಂಡಂಥ ಕಷ್ಟಸಾಗರದ ಸಾರಾಂಶದಂತೆ ಇದ್ದುವು. ಆಕೆ ಅಂದಳು: 'ಈಗ ಕೂಲಿ ಸಿಕ್ಕುವ ಕಾಲವಾದ್ದರಿಂದ ನಮ್ಮ ಮನೆ ಒಲೆ ಉರೀತಾಅದೆಕನ್ನಿ ಸ್ವಾಮೀ'.

ನಾನು ಮತ್ತು ಮನೆಯ ಯಜಮಾನ ಈ ಕಡೆ ಜಾಗದಲ್ಲಿ ಕೂತಿದ್ದೆವು. ನಾನು ಕೂರಲು ಒಂದು ಚಾಪೆಯನ್ನು ಹಾಸಿದ್ದರು. ಏನಾದರೂ ಇನ್ನೊಂದು ಚಾಪೆ ಇದೆಯಾ ಎಂದು ನಾನು ಪ್ರಜ್ಞಾಪೂರ್ವಕವಾಗಿ ನೋಡೂ ಕಂಡು ಬರಲಿಲ್ಲ. ಗೋಡೆಯ ಹಗ್ಗದುರಿಯು ಒಂದೆರಡು ಅಂಗಿ ಚಡ್ಡಿ, ಬಹುಶಃ ಅರ್ಧದಷ್ಟಿದ್ದ ಸೀರೆ, ಎರಡು ರವುಕೆ, ಒಂದು ದುಪ್ಪಟಿ, ಒಂದು ಗೋಣಿ ಚೀಲವನ್ನು ಹಗುರಾಗಿ ಹೊತ್ತುಕೊಂಡಿತ್ತು. ಅಟ್ಟಲು ಇದ್ದು ಅಲ್ಲೇನಾರೂ ಇರಬಹುದಾ ಅನ್ನಿಸಿ ನಾನು ಮೇಲಕ್ಕೆ ನೋಡಿದೆ. ಹೆಂಚುಗಳು ನಕ್ಕವು. ನನ್ನ ಪಕ್ಕದಲ್ಲಿದ್ದ ಟೇಪ್‌ರೆಕಾರ್ಡರ್ ನೋಡ್ತಾ ಅವರ ಮಕ್ಕಳಿಬ್ಬರೂ ಕೂತಿದ್ದವು. ಅವು ಹಾಕಿದ್ದ ಅಂಗಿ ಚಡ್ಡಿ ಅನ್ನುವವು ಅವರ ಅಪ್ಪನವುಗಳಂತೆಯೇ ಹರಿದಿದ್ದು ಹೊಲೆದು ತೇಪೆ ಹಾಕಲಾಗಿತ್ತು. ಅವಕ್ಕೆ ಬೇರೆ ಇನ್ನೊಂದು ಜೊತೆ ಇತ್ತೊ ಇಲ್ಲವೋ ಕೇಳಲು ನನಗೆ ಸಂಕೋಚವಾಯ್ತು. ಆ ನಿಂಗಯ್ಯನವರಿಗೆ ಈ ಮನೆ ಬಿಟ್ಟು ಬೇರೇನು ಆಸ್ತಿ ಎಂದು ಪ್ರಶ್ನಿಸಿದೆ. ಅದಕ್ಕವರು–

'ಈ ಮನೇನೂ ನನ್ನದಲ್ಲ ಸ್ವಾಮಿ'
'ಅಂದ್ರೆ ನಿಮ್ಮದು ಅಂತ ಒಂದು ಮನೆ ಇಲ್ಲ'
'ಇಲ್ಲ ಸ್ವಾಮೀ ನಾವು ಬೇರೆಯವರ ಮನೇಲೇ ಇದ್ಕೊಂಡು ಬದುಕ್ತಿದ್ದೀವಿ'
'ಬಾಡಿಗೆ ಕೊಡ್ತಾ ಇದ್ದೀರಾ?'
'ಬಾಡಿಗೆ ಕೊಡೋಕೆ ನಮಗೆಲ್ಲಾದ್ದು ಸ್ವಾಮಿ, ಊರಿಗೊಂದು ಒಕ್ಕಲು ಬಂದರಲ್ಲ ಅಂತ ಕೇರಿ ಮುಖ್ಯಸ್ಥರು ಮುಫತ್ತು ಕೊಡಿಸಿ ಕೊಟ್ಟವರೆ...'

ಆಗಲೇ ನನಗೆ ತಿಳಿದದ್ದು– ಇವರು ಬನ್ನಿಕುಪ್ಪೆಯವರಲ್ಲ, ಮೂಲತಃ ಮೈಸೂರಿನ ಅಶೋಕಪುರದವರು ಅಂತ. ಅವರು ಇಲ್ಲಿಗೆ ಬಂದು

ನೆಲೆಗೊಂಡು ಹತ್ತಾರು ವರ್ಷಗಳಾಗಿದ್ದುವು. ಸಣ್ಣವರಿದ್ದಾಗ ಕುಸ್ತಿ ಅಂತ ನಿಂತು ಸ್ಕೂಲಿಗೆ ಹೋಗಲಿಲ್ಲ. ರುಜು ಮಾಡಲು ಬರದಿದ್ದರೂ ಅವರ ಹೆಸರಿಗೆ ಇನ್ಸಿಲ್– ಕೆ– ನಿಂತಿದೆ. ಮೈಸೂರು ಮಹಿಮೆ ಇರಬಹುದು. ಮೈಸೂರಲ್ಲಿ ಜೀವನ ಸಾಗಿಸುವುದು ದುಸ್ತರವಾದಾಗ ಹೆಂಡ್ತಿ ಮಕ್ಕಳನ್ನು ಕಟ್ಟಿಕೊಂಡು ಬನ್ನಿಕುಪ್ಪೆಗೆ ಕುಸ್ತಿ ಕಲಿಸಿ ಜೀವನ ಸಾಗಿಸುವ ಅಂದುಕೊಂಡು ಬಂದರು. ನಿಂಗಯ್ಯ ಕುಸ್ತಿಯ ಉಸ್ತಾದ್ ಆಗಿದ್ದರು ಎಂದಾಗ ಅವರ ಅಂಗಾಂಗಗಳನ್ನು ಉದ್ದೇಶಪೂರ್ವಕವಾಗಿ ನಾನು ನೋಡಿದೆ. ಅವರ ಯಾವ ಅಂಗವೂ ಅವರು ಒಂದಾನೊಂದು ಕಾಲದಲ್ಲಿ ಕುಸ್ತಿಯ ಪಟುವಾಗಿದ್ದರು ಎಂಬುದನ್ನು ನನಗೆ ರುಜುವಾತು ಪಡಿಸಲಿಲ್ಲ. ಬಡತನವು ಅವರ ಕುಸ್ತಿಯ ಅಂಗಾಂಗಗಳನ್ನು ನಿರ್ದಯವಾಗಿ ಊಟಮಾಡಿದ್ದಿರಬಹುದು. ಆ ಮಾಜಿ ಕುಸ್ತಿಯ ದೇಹದಲ್ಲಿ ಈಗ ದೈನ್ಯತೆ ಮತ್ತು ನಿಟ್ಟುಸಿರು ಉಳಿದಿದ್ದವು.

ನಾನು ನಿಟ್ಟುಸಿರು ಬಿಟ್ಟು ಒಂದು ಸ್ಟುಪಿಡ್ ಪ್ರಶ್ನೆ ಹಾಕಿದೆ– 'ಈಗಲೂ ಯಾಕೆ ನೀವು ಕುಸ್ತಿ ಕಲಿಸಿಯೇ ಜೀವನ ಸಾಗಿಸಬಾರದು?'. ದೇವರ ದಯದಿಂದ ಅವರು ನಗಲಿಲ್ಲ. ಅವರು ಅಂದರು– 'ಈಗ ನನ್ನ ಕೈಲಿ ಸಾಗಬೇಡ್ವ ಸ್ವಾಮಿ, ಶಕ್ತಿ ಸಾಲಲ್ಲ. ಜನರೂ ಕೂಡ ನಿಮಗೇನೇ ಏಟು ಪಾಟು ಬಿದ್ದಾತು ಸುಮ್ನಿರಿ ಅಂತರೆ' ಅಂದರು. ಇನ್ನೊಂದು ನಿಟ್ಟುಸುರು ಬಿಡುವುದು ನನ್ನ ಪಾಲಿಗಾಯ್ತು. ಅವರು ತಾವು ಹಿಂದೆ ಕಲಿಸುತ್ತಿದ್ದ ಕುಸ್ತಿ ನೆನಪಿಗೆ ಬಿದ್ದರೇನೋ. ನನಗೆ ಮಾತಾಡಲೂ ಬಾಯಿ ನಿಂತೋಗಿತ್ತು.

ಅವರು ಮಿಕಮಿಕ ಕಣ್ಬುಡುತ್ತಾ ಕೂತಿದ್ದರು. ಕುಸ್ತಿ ಕಲಿಸುತ್ತಿದ್ದಾಗ ಅವರು ಹೊಟ್ಟೆಗೆ ಬಟ್ಟೆಗೆ ನೇರವಾಗಿದ್ದರು. ಜನಗಳೂ ಸಹ ಇವರನ್ನು ಗುರುಗಳು ಎಂದು ಪರಿಗಣಿಸಿ ಎರಡು ಹೊತ್ತಿನ ಊಟಕ್ಕೆ ತೊಂದರೆ ಆಗದಂತೆ ನೋಡಿಕೊಳ್ಳುತ್ತಿದ್ದರು. ಕುಸ್ತಿ ಕಲಿಸಲು ಕೈಸಾಗದಾಗ ಗಂಡ ಹೆಂಡತಿ ಕೂಲಿಗೆ ಇಳಿದರು. ಕೂಲಿ ಮತ್ತು ಸಣ್ಣ ಮಕ್ಕಳನ್ನು ಬಿಟ್ಟರೆ ಇವರಿಗೆ ಬೇರೇನೂ ಇಲ್ಲ. ಇವರ ಹೆಂಡ್ತಿ ಮಾದಮ್ಮನ ಮಾತುಗಳಲ್ಲೇ ಹೇಳುವುದಾದರೆ–
'ಕೂಲಿಗೆ ಹೋದ ಜಿನ ಹಿಟ್ಟು, ಇಲ್ಲದಿದ್ದ ಜಿನ ಇಲ್ಲ'

ನನ್ನ ಪ್ರಶ್ನೆ:
'ಹಾಗಾದ್ರೆ ಕೂಲಿ ಸಿಗದ ದಿನಗಳಲ್ಲಿ ಏನ್ಮಾಡ್ತೀರಿ...?'
'ಅತಾಪೆ ಕಷ್ಟ..'
'ಇದುವರ್ಗೂ ಏನ್ಮಾಡಿಕೊಂಡು ಬಂದ್ರಿ..?'

ಅವರ ಹೆಂಡ್ತಿ ಉತ್ತರಿಸಿದರು–
'ನಾವು ಏನ್ತಾನೇ ಮಾಡಕ್ಕಾದ್ದು ಸ್ವಾಮಿ.. ಹಸ್ಕಂಡು ಇರೋದು. ಯಾರಾರೂ ಪುಣ್ಯಾತ್ಮರ ಮನೇಲಿ ಹಿಟ್ಟು ಗಿಟ್ಟು ಈಸ್ಕ ಬಂದು ಕಾಲ ತಳ್ಳೋದು..'

ಗಂಡ ಮುಂದುವರೆಸಿದರು–
'ಹಿಂದೆ ನಮ್ಮ ಗುರುಗಳಾಗಿದ್ದವರು ಅಂದುಕೊಂಡು ಸ್ವಲ್ಪ ಗಟ್ಟುಮುಟ್ಟಾಗಿರುವವರು ಅಷ್ಟು ಇಷ್ಟು ಕರುಣೆ ಇಟ್ಟವರೆ ಸ್ವಾಮಿ'

ಬನ್ನಿಕುಪ್ಪೆ ಸುತ್ತಮುತ್ತ ಗದ್ದೆಗಳೇ ಇರುವುದರಿಂದ ಬೇರೆ ಬಂಜರು ಊರುಗಳಿಗಿಂತ ಈ ಕಡೆ ಕೂಲಿ ಸ್ವಲ್ಪ ಹೆಚ್ಚು ದಿನಗಳು ಸಿಗುತ್ತವೆ. ಬತ್ತ ರಾಗಿ ನಾಟಿ ಕುಯ್ಲಿನ ಕಾಲ, ಕೂಲಿ ಸಿಗುವ ದಿನಗಳು. ಇದು ಬಿಟ್ಟರೆ ಬೇಸಿಗೆ ಪೂರ್ತ ಕೂಲಿ ಇಲ್ಲದೆ ಇರಬೇಕಾಗುತ್ತದೆ. ಬೇಸಿಗೇಲು ಚೂರುಪಾರು ಅದು ಇದು ಕೆಲಸ ಸಿಗುವುದಾದರೂ ಅವರು ಕೊಟ್ಟಷ್ಟು ಇವರು ಈಸಿಕೊಂಡಷ್ಟು... ಹನ್ನೆರಡಾಣೆ ಆಗಬಹುದು ಒಂದು ರುಪಾಯಿ ಆಗಬಹುದು. ಹೆಚ್ಚೆಂದರೆ ಎರಡು ರುಪಾಯಿ ಆಗಬಹುದು. ಆಗ ಅದಾದರೂ ಸಿಕ್ಕರೆ ಸಾಕು ಅನಿಸುವ ಕಾಲ. ವರ್ಷಪೂರ್ತ ಕೂಲಿಯಾದರೂ ಸಿಕ್ಕರೆ ಏನಿಲ್ಲದಿದ್ದರೂ ಹೊಟ್ಟೆ ತುಂಬಿಸಬಹುದಲ್ಲಾ ಎಂಬ ಆಸೆ ಇವರದು.

ಇವರಿಗೆ ಈಗ ಜನತಾ ಮನೆ ಸಿಕ್ಕಿದೆ. ಅದಕ್ಕೆ ಗಿಲಾವ್ ಮಾಡಿಸಿಲ್ಲವಾದ್ದರಿಂದ ಇನ್ನೂ ಅಲ್ಲಿಗೆ ಹೋಗಿಲ್ಲ. ಅಲ್ಲಿಗೆ ಹೋದ ಮೇಲೆ ಇವರದೇ ಆದ ಒಂದು ಸ್ವಂತ ಮನೆ ಆದಂತಾಗುತ್ತದೆ. ಕೂಲಿ ಬಿಟ್ಟು ಮತ್ತಾವ ಉಪಕಸುಬನ್ನೂ ಮಾಡಲಿಕ್ಕಾಗದ ಈ ಸಂಸಾರ ಅಲ್ಲಿಗೆ ಹೋದಮೇಲೆ ಅನುಕೂಲವಾದರೆ ಕೋಳಿ ಕುರಿ ಆಡು ಸಾಕಬೇಕು ಅಂದುಕೊಂಡಿರುವರು. ಈ ಮನೆಯಲ್ಲಿ ಜಾಗವಿಲ್ಲ, ಜೊತೆಗೆ ಬೇರೆಯವರದು. ಹೆಚ್ಚಿಗೆ ನೀರು ಚೆಲ್ಲಿದರೂ 'ಎಲ್ಲಿ ಬಿಟ್ಟುಹೋಗಿ ಎಂದು ಅನ್ನುತ್ತಾರೋ' ಅನ್ನುವ ಭಯದಲ್ಲಿ ವಾಸಿಸುತ್ತಿರುವರು. ಜನತಾ ಮನೆ ಬಿಟ್ಟರೆ, ಇವರಿಗೆ ಜೀತವಿಮೋಚನೆಯ ಹಣ 500ರೂಪಾಯಿ ಸಿಕ್ಕಿದೆ. ಅದು ಸರಿಯಾದ ಟೈಮಲ್ಲಿ ಅಂದರೆ ಬೇಸಿಗೇಲಿ ಸಿಕ್ಕಿದ್ದರಿಂದ ಹೊಟ್ಟೆಗೆ ಬಳಸಿಕೊಂಡರು. ಈ ಜೀತ ವಿಮೋಚನೆಯ ಸಾಲ ಯಾವ ರೀತಿಯದು ಎಷ್ಟು ಬಡ್ಡಿಯದು ಹೇಗೆ ತೀರಿಸಬೇಕು ಅದಾವುದೂ ಇವರಿಗೆ ತಿಳಿದಿಲ್ಲ. ಇದು ಬಿಟ್ಟರೆ ಇವರಿಗೆ ಮತ್ತಾವ ಸಾಲವೂ ಇಲ್ಲ. ಕೈಸಾಲ ಮಾಡಿದರೆ 'ಯಾವ ಮುಂಬಿನಲ್ಲಿ ತೀರಿಸಲು ನಮ್ಮ ಕೈಲಿ ಸಾಧ್ಯ' ಎಂದು ಪ್ರಶ್ನಿಸಿದರು. ನಿಜ, ಇವರಿಗೆ ಬೇಕಾಗಿರುವುದು ಮುಂಬು.

## ಒಂದು ಹೆಬ್ಬೆಟ್ಟು ಕಥೆ

ಹುಣಸೂರು ತಾಲ್ಲೂಕು ಬನ್ನಿಕುಪ್ಪೆ ಗ್ರಾಮದ ದಲಿತ ವರ್ಗಕ್ಕೆ ಸೇರಿದ ಶ್ರೀ ಯಜ್ಜೂರಯ್ಯ ಎಂಬುವವರು ಸಾಮಾನ್ಯವಾಗಿ ಹರಿದಿದ್ದನ್ನು ಕಾಣದಂತೆ ಹೊಲೆದ ಬಿಳಿಬಟ್ಟೆ ಹಾಕಿಕೊಂಡು ಆಗುವುದನ್ನೆಲ್ಲ ಸುಮ್ಮನೆ ನೋಡುವುದು, ಯಾವಾಗಲೊ ಒಂದೊಂದು ಮಾತಾಡುವ ರೀತಿಯವರು. ಸುಮಾರು 50 ವರ್ಷಗಳಷ್ಟಾಗಿರುವ ಇವರಿಗೆ ಓದಲು ಬರೆಯಲು ಬಾರದು. ಇವರು ಮಾಡುವುದು ಹೆಬ್ಬೆಟ್ಟು ಒತ್ತುವುದು. ಈ ಹೆಬ್ಬೆಟ್ಟು ಒತ್ತುವುದೇ ಹೊಟ್ಟೆಗೆ ಬಟ್ಟೆಗೆ ನೇರವಾಗಿದ್ದ ಇವರ ಸಂಸಾರವನ್ನು ನರಕವನ್ನಾಗಿಸಿತು. ಇವರ ಕತೆ, ಬಗೆಹರಿಸುವವರಿಗೆ ಒಂದು ಸವಾಲಾಗಿ ನಿಲ್ಲುತ್ತದೆ.

ಶ್ರೀ ಯಜ್ಜೂರಯ್ಯ ಬನ್ನಿಕುಪ್ಪೆಯವರಲ್ಲ. ಹೆಚ್ಚು ಕಮ್ಮಿ 40 ವರ್ಷಗಳ ಹಿಂದೆ ಇವರು ಈ ಊರಿನ ಒಂದು ಅನುಕೂಲಸ್ಥರ ಮನೆಗೆ ಮನಾಳ್ತನಕ್ಕೆ ದತ್ತು ಬಂದು ಸೇರಿಕೊಂಡವರು. ಆಗ ಇವರ ಜೀವನ ಯಾವುದೇ ಏಳುಬೀಳು ಇಲ್ಲದೆ ನಡೆದುಕೊಂಡಿತ್ತು. ಯಾವಾಗ ಇವರ ಹೆಂಡತಿ ತೀರಿಕೊಂಡರೋ ಆವಾಗ ಇವರನ್ನು, ಮಾವನ ಮನೆಯವರು ಆಸ್ತಿಪಾಸ್ತಿ ಏನೂ ಕೊಡದೆ ಮನೆ ಬಿಡುಸಿ ಅತಂತ್ರ ಮಾಡಿದರು. ಇದರೊಟ್ಟಿಗೇ ಮುಂದೆ ಹೇಳುವ ಇವರ ಭೂಮಿ ಸಮಸ್ಯೆಯೂ ಸೇರಿಕೊಂಡು ಇವರ ಬಾಳು ಜರ್ಜರಿತವಾಯ್ತು.

ಇವರ ಹಿರಿಮಗ ಸುಮಾರು 25 ವರ್ಷಗಳ ಸ್ವಾಮಿಗೆ ಮದುವೆ ಆಗಿದೆ. ಈ ಸಂಸಾರದಲ್ಲಿ ಇವರೊಬ್ಬರಿಗೆ ಮಾತ್ರವೆ ರುಜು ಮಾಡಲು ಬರುತ್ತದೆ. ಸ್ವಾಮಿ, ಸ್ವಾಮಿ ಹೆಂಡತಿ ಮತ್ತು ಅವರ ಮೂರು ವರ್ಷದ ಮಗು, ಬೇರೆ ಮನೆಯಲ್ಲಿ ಇದ್ದಾರೆ. ಆದರೂ ಅಪ್ಪ-ಮಗನಲ್ಲಿ ಹೊಂದಾಣಿಕೆ ಇದೆ.

ಸ್ವಾಮಿಯ ಮಗ ಶಿಶುವಿಹಾರಕ್ಕೆ ಹೋಗುತ್ತಿದೆ. ಯಜ್ಞೂರಯ್ಯನವರ ಇನ್ನೊಬ್ಬ ಮಗ ಸುಮಾರು 20 ವರ್ಷದ ಪಾಪಯ್ಯನು– ಕರ್ನಾಟಕ ಮುಖ್ಯಮಂತ್ರಿಗಳ ಊರಾದ ಕಲ್ಲಳ್ಳಿಯಲ್ಲಿ 'ಜೀತವಲ್ಲ ಕೂಲಿಯಾಳು' ಎಂದು ಹೇಳುವ ಕರಾರಿನ ಮೇಲೆ 400 ರೂಪಾಯಿಗೆ ಜೀತಕ್ಕಿದ್ದಾನೆ. ಈ ನಾನೂರು ರೂಪಾಯಿಗಳಲ್ಲಿ 250 ರೂಪಾಯಿಗಳನ್ನು ಜೀತವಿರುವ ಹುಡುಗನ ಮದುವೆಗಾಗಲಿ ಎಂಬ ಉದ್ದೇಶದಿಂದ, ಅಸಲು ಅಸಲಾಗೆ ಉಳಿದು ನೂರು ರೂಪಾಯಿಗೆ 50 ಸೇರು ಬತ್ತದಂತೆ ಬತ್ತದ ಬಡ್ಡಿಗೆ ಕೊಟ್ಟಿರುವರು. ಉಳಿಕೆ ಹಣವನ್ನು ಹೊಟ್ಟೆಗೆ ಮತ್ತು ಇವರು ಮೋಸಕ್ಕೊಳಗಾದ ಭೂಮಿ ವ್ಯವಹಾರದ ಅರ್ಜಿಗಿರ್ಜಿ ಹಾಗೂ ಅದಕ್ಕಾಗಿ ಹುಣಸೂರು ಸುತ್ತಲು ಬಳಸಿ ಮುಗಿಸಿದರು.

ಹೀಗೆ ಒಂದು ದಿನ ಯಜ್ಞೂರಯ್ಯನವರೊಡನೆ 'ಬನ್ನಿ ನಿಮ್ಮ ಮನೆಗೆ ಹೋಗುವ, ನಿಮ್ಮೊಡನೆ ಒಂದಿಷ್ಟು ಮಾತಾಡಬೇಕಿತ್ತು' ಎಂದೆ. ಅವರು ನನ್ನನ್ನು ಒಂದು ಮನೆಗೆ ಕರೆತಂದು ಕೂರಿಸಿದರು. ಕಣ್ಣಾಡಿಸಿದರೆ ಈ ಮನೆ ಕಡು ಬಡತನದ್ದಲ್ಲ ಅನ್ನಿಸುವಂತಿತ್ತು. ಮಾತಾಡ್ತ ಮಾತಾಡ್ತ ನಾವು ಕುಂತಿದ್ದ ಮನೆ ಅವರದಲ್ಲ ಎಂದು ತಿಳಿದುಬಂತು. ನಾನು ಚಡಪಡಿಸಿ 'ಬನ್ನಿ ಸ್ವಾಮಿ, ನಿಮ್ಮ ಮನೆಗೇ ಹೋಗುವ' ಅಂದೆ. ಅವರು ತುಂಬಾ ಸಂಕೋಚಗೊಂಡರು. ಅಲ್ಲಿ ಬಹಳ ಗಲೀಜು, ಇಲ್ಲೆ ಮಾತಾಡಿ ಎಂದು ವಿನಂತಿಸಿದರು. ನಾನು ಒಪ್ಪದೆ ಅವರನ್ನು ಎಬ್ಬಿಸಿಕೊಂಡು ಅವರ ಮನೆಗೆ ಬಂದೆವು. ಅವರ ಮನೆ ನೋಡಿದಾಗ ಅವರ ಸಂಕೋಚಕ್ಕೆ ಅರ್ಥವಿದೆ ಅನ್ನಿಸಿತು.

ಆ ಮನೆ ವಿಶಾಲವಾದ ಮನೆಯೇ, ನಿಜ. ಮನೆ ತಲೆಯೂ ಮಂಗಳೂರು ಹೆಂಚನ್ನು ಹೊದ್ದಿದೆ. ಗೋಡೆಗಳಿಗೆ ಗಾರೆಗಚ್ಚು ಹಾಕದೆ ಗೋಡೆಗಳು ಕರಗುತ್ತಿರುವಂತೆ ಕಾಣುತ್ತಿತ್ತು. ಅಕ್ಕಪಕ್ಕದಲ್ಲಿದ್ದ ಎರಡು ಕಿಟಕಿಗಳಿಗೆ ಬೂತಾಳೆಪಟ್ಟಿ ಮತ್ತು ಹಳೆ ಗೋಣಿಚೀಲ ಮುಚ್ಚಲ್ಪಟ್ಟಿತ್ತು. ಬಾಗಿಲು ಒಂದಾಗಿದ್ದು ಅದಕ್ಕೊಂದು ತಂತಿಯಲ್ಲಿ ಅನಗತ್ಯವಾಗಿ ಬೀಗ ಹಾಕಲಾಗುತ್ತಿತ್ತು. ಮನೆಯಲ್ಲಿ ಕಂಡು ಬಂದಂಥ ವಸ್ತುಗಳು ಇಷ್ಟು ಮಾತ್ರವೆ : 1) ಮೂಲೇಲಿ ಒಂದಿಷ್ಟು ಸೌದೆ, ಅದರ ಮೇಲಿಂದ ಇಳಿಬಿಟ್ಟಿರುವ ಎರಡು ನೆಲು, ಒಂದು ಖಾಲಿ, ಇನ್ನೊಂದರಲ್ಲಿ ಮೂರು ಮಡಿಕೆ ಇದ್ದವು. ಆ ಮಡಿಕೆಗಳೊಳಗೆ ಏನಿತ್ತೊ ತಿಳಿಯದು. 3) ಒಂದು ಸಿಲ್ವರ್ ತಟ್ಟೆ 4) ಒಂದು ತಪ್ಪಲೆ 5) ಒಂದು ಮಂದಲಿಗೆ 6) ಒಂದು ಖಾರ ಅರೆಯುವ ಕಲ್ಲು–ಗುಂಡು 7) ಒಂದು ಒಲೆ, ಎರಡು ಮಡಕೆ, ಒಂದು ಸೌಟು, ಒಂದು ಹಿಟ್ಟಿನ ದೊಣ್ಣೆ 8) ಒಂದು ಗೋಣಿ

ಚೀಲ, ಇನ್ನೊಂದು ಕೈಚೀಲ 9) ಎರಡು ಶರ್ಟು ಎರಡು ನಿಕ್ಕರು 10) ಒಂದು ಹಿಡಿಗಲು ಅಂದರೆ ಪೊರಕೆ.

ಯಾವಾಗಲಿಂದ ನಿಮಗೆ ಇಂಥ ಬಡಸ್ತನ ಬಂತು ಎಂದು ನಾನು ಕೇಳಿದಾಗ ಅವರು ದುಃಖ ತುಂಬಿಕೊಂಡರು. ಮೂವತ್ತು ವರ್ಷಗಳ ಹಿಂದೆ ಯಜ್ಜೂರಯ್ಯನವರು ಎರಡು ಎಕರೆ ಕಾಡು ತರಿದು ಒಂದು ಹದಕ್ಕೆ ತಂದುಕೊಂಡು ಉತ್ತುಬಿತ್ತು ಯಾವ ತಾಪತ್ರಯವೂ ಇಲ್ಲದೆ ಜೀವನ ಸಾಗಿಸಿಕೊಂಡು ಬರುತ್ತಿದ್ದರು. ಆ ಭೂಮಿ ಫಲವತ್ತಾದ ನೀರಾವರಿ ಭೂಮಿಯಾಗಿದ್ದು ಇವರನ್ನು ಕಾಪಾಡಿಕೊಂಡು ಬರುತ್ತಿತ್ತು. ಈ ರೀತಿಯಾಗಿ ಹದಿನೈದು ವರ್ಷಗಳಾಗಲು ಅಲ್ಲಿಯವರೇ ಅದೇ ಕೋಮಿನ ಸಿದ್ಧಯ್ಯನ ಮಗ ಸಿದ್ಧಯ್ಯ ಎಂಬಾತ ಯಜ್ಜೂರಯ್ಯ ಮಾಡುವ ಭೂಮಿ ತನಗೇ ಸೇರಬೇಕೆಂದು ಹುಣಸೂರು ಕೋರ್ಟಿನಲ್ಲಿ ಲಾಯರು ಕಟ್ಟಿ ವ್ಯಾಜ್ಯ ಹೂಡಿದಾಗ ಯಜ್ಜೂರಯ್ಯನವರ ಪರಿಸ್ಥಿತಿ ಬಿಗಡಾಯಿಸಿತು. ಯಜ್ಜೂರಯ್ಯ ಹಂಗಾಮಿ ಸಾಗುವಳಿ ಪಡೆದು ಕಂದಾಯ ಕಟ್ಟುತ್ತ ಉಳುಮೆ ಮಾಡುತ್ತಿದ್ದ ಭೂಮಿಯನ್ನೆ ಸರ್ಕಾರವು ಸಿದ್ಧಯ್ಯನ ಮಗ ಸಿದ್ಧಯ್ಯನಿಗೂ ಮಂಜೂರು ಮಾಡಿತ್ತೆ? ಗೊತ್ತಿಲ್ಲ. ಯಜ್ಜೂರಯ್ಯನವರಿಗೆ ಕೋರ್ಟು ಹತ್ತಲು ಲಾಯರು ಕಟ್ಟಲು ಹಣಕಾಸು ಇಲ್ಲದೆ ಏನೂ ತೋಚದಂತಾಯ್ತು. ಆಗ ದಿಕ್ಕೆಟ್ಟ ಯಜ್ಜೂರಯ್ಯ ಹಣಕ್ಕಾಗಿ ದೊಡ್ಡೇಗೌಡನ ಮಗ ಡಿ. ಚನ್ನೇಗೌಡ ಎಂಬ ಹಣವಂತನಿಗೆ ಶರಣಾದರು. ಆ ಇಬ್ಬರಲ್ಲೂ ಒಂದು ಕರಾರು ಆಯ್ತು. ಏನೆಂದರೆ, ಯಜ್ಜೂರಯ್ಯ ಕೇಸು ಮುಗಿಯುವವರೆಗೂ ಚನ್ನೇಗೌಡನ ಮನೇಲಿ ಜೀತಕ್ಕಿರುವುದೆಂತಲೂ ಮತ್ತು ಯಜ್ಜೂರಯ್ಯ ಎರಡು ಎಕರೆ ಭೂಮಿಯನ್ನು ಕೇಸು ಮುಗಿಯುವವರೆಗೂ ಚನ್ನೆಗೌಡ ಅನುಭವಿಸುವಂತೂ, ಇದಕ್ಕೆ ಬದಲಾಗಿ ಚನ್ನೇಗೌಡನು ಲಾಯರ್ ಕಟ್ಟಿ ಆ ಕೇಸು ಸಂಬಂಧಿಸಿದ ಖರ್ಚು ವೆಚ್ಚಗಳನ್ನೆಲ್ಲ ನೋಡಿಕೊಳ್ಳುವಂತೆಯೂ ಕೇಸು ಮುಗಿದ ಮೇಲೆ ಯಜ್ಜೂರಯ್ಯ ಜೀತದಿಂದ ಬಿಡುಗಡೆಯಾಗಿ ತನ್ನ ಭೂಮಿಯನ್ನು ಅನುಭವಿಸುವುದೆಂತೂ ಮಾತಾಗಿತ್ತು. ಮಾತಿನ ಪ್ರಕಾರವಾಗಿ ಯಜ್ಜೂರಯ್ಯ ಜೀತಕ್ಕೆ ಬಿದ್ದರು.

ಮೇಲ್ಕಂಡ ಕೇಸನ್ನು ನಿಭಾಯಿಸಲು ಹುಣಸೂರಿನ ಗೋಪಾಲಕೃಷ್ಣ ಎಂಬ ಲಾಯರನ್ನು ಯಜ್ಜೂರಯ್ಯವರ ಪರವಾಗಿ ಕಟ್ಟಲಾಯ್ತು. ಕೇಸು ಯಾವ ಹಂತದಲ್ಲಿ ಇದೆ ಏನು ಎತ್ತ ಎಂಬ ಯಾವುದೂ ಯಜ್ಜೂರಯ್ಯನವರಿಗೆ ಗೊತ್ತಾಗುತ್ತಿರಲಿಲ್ಲ. ಹೀಗೇ ನಡೆಯುತ್ತ ಒಂದು ದಿನ ಚನ್ನೇಗೌಡನ ಎದುರಲ್ಲಿ ಲಾಯರು ಯಜ್ಜೂರಯ್ಯನಿಗೆ 'ನಿನ್ನ ಕೇಸು ಹುಣಸೂರು ಕೋರ್ಟಿಂದ

ಮೈಸೂರು ಕೋರ್ಟಿಗೆ ಹೋಯ್ತು. ಅಲ್ಲಿಗೆಲ್ಲಾ ನೀನು ತಿರುಗಾಡಕ್ಕೆ ಆಗುತ್ತ? ಚನ್ನೇಗೌಡರ ಹೆಸರಿಗೆ ಕ್ರಯ ಮಾಡು. ಅವರು ಮೈಸೂರು ತಿರುಗಾಡಿ ಕೇಸು ಗೆದ್ದಮೇಲೆ ನಿನ್ನ ಹೆಸರಿಗೆ ಕ್ರಯ ಮಾಡುವರು' ಎಂದರು. ಆಗ ಯಜ್ಞೂರಯ್ಯ ಹಿಂದು ಮುಂದು ನೋಡಿದರು. ಲಾಯರು ಮತ್ತು ಗೌಡ ಇಬ್ಬರೂನೂ 'ಕ್ರಯ ಮಾಡದಿದ್ದರೆ ಭೂಮಿ ಕೈ ಬಿಟ್ಟು ಹೋಗುತ್ತೆ' ಎಂದು ಹೆದರಿಸಿದಾಗ ಯಜ್ಞೂರಯ್ಯ ಕ್ರಯಕ್ಕೆ ಒಪ್ಪಬೇಕಾಯ್ತು. ಆರು ಸಾವಿರಕ್ಕೆ ಕ್ರಯವಾಯ್ತು; ಭೂಮಿ ಗೌಡನದಾಯ್ತು. ಕ್ರಯದ ಟೈಮಲ್ಲಿ ಲಾಯರು, ಕ್ರಯವಲ್ಲ ಎಂದು 'ಎದುರು ಪತ್ರ'ವನ್ನು ಗೌಡನಿಂದ ಬರೆಸಿಟ್ಟುಕೊಳ್ಳುವುದಾಗೂ ನಂಬಿಸಿ ಸಮಾಧಾನ ಮಾಡಿದರಂತೆ. ಸಮಾಧಾನದಿಂದ ಯಜ್ಞೂರಯ್ಯ ಹೆಬ್ಬೆಟ್ಟು ಒತ್ತಿದರು. ಲಾಯರು ಆಡಿದ್ದ ಮಾತಿನಂತೆ 'ಎದುರು ಪತ್ರ' ಕೇಳಿದರೆ ಅವನು ತಲೆತಪ್ಪಿಸಿಕೊಳ್ಳುತ್ತಾ, ಗೌಡನಲ್ಲಿ ಭೂಮಿ ಕೇಳಿದರೆ ಪತ್ರದಲ್ಲಿ ಬರೆದಿರುವಷ್ಟು ಹಣ ತಂದು ಮಡುಗು ಅನ್ನುತ್ತಾ ನಡೆದಾಡುತ್ತಿದ್ದ ಯಜ್ಞೂರಯ್ಯ ತೆವಳಾಡುವಂತಾದರು.

ಈ ಅನ್ಯಾಯ ಸರಿಪಡಿಸುವಂತೆ ತಹಸೀಲ್ದಾರು, ಎಸಿ, ಡೀಸಿ, ಮಂತ್ರಿ ಮಾನ್ಯರೆಲ್ಲರಿಗೂ ಯಜ್ಞೂರಯ್ಯ ಅರ್ಜಿ ಬರೆದುಕೊಂಡರು. ಸ್ವೀಕೃತಿ ಪತ್ರ ತಪ್ಪದೆ ಬಂದಿವೆ. ಎಲ್ಲವನ್ನೂ ಕಣ್ಣಿನಂತೆ ಜೋಪಾನವಾಗಿ ಇಟ್ಟಿರುವರು. ಇನ್ನೂರು ರೂಪಾಯಿ ಖರ್ಚು ಮಾಡಿ ಬೆಂಗಳೂರು ಹತ್ತಿ ಮಿನಿಸ್ಟರನ್ನೂ ಕಂಡು 'ಆಗಲಿ ನೋಡುವ' ಭರವಸೆ ಹೊತ್ತು ಊರಿಗೆ ಬಂದರು. ಈಗಲೂ ಇನ್ನೊಂದು ಗಳಿಗೇಗೂ ಇವರು, ಸಂಬಂಧ ಇರಲಿ ಇಲ್ಲದಿರಲಿ ಕಂಡಕಂಡ ಅಧಿಕಾರಿಗಳಿಗೆ ತಮ್ಮ ಗೋಳನ್ನು ಹೇಳಿಕೊಳ್ಳುತ್ತ ಬರುತ್ತಿರುವರು. ಈಗಲೂ ದುಡ್ಡು ಸಿಕ್ಕರೆ ಒಂದು ಹೊತ್ತು ಹಸಿದುಕೊಂಡಾದರೂ ಅರ್ಜಿಯನ್ನು ಟೈಪು ಮಾಡಿಸಿ ಯಾರಿಗಾರು ಅಧಿಕಾರಿಗಳಿಗೆ ರಿಜಿಸ್ಟರ್ ಪೋಸ್ಟ್ ಕಳಿಸುವರು. ಇಂಥದಕ್ಕಾಗಿಯೇ ಹಾಗೂ ಹೀಗೂ ಇವರಿಂದ ನಾನೂರು ರೂಪಾಯಿಗಳಷ್ಟು ಕೈಬಿಟ್ಟಿದೆ.

ದೊಡ್ಡ ತಮಾಷೆ ಎಂದರೆ, ಯಜ್ಞೂರಯ್ಯನವರ ಭೂಮಿ ಕೇಸು ಹುಣಸೂರಿನಲ್ಲೇ ಯಜ್ಞೂರಯ್ಯನವರ ಪರವಾಗಿ ತೀರ್ಮಾನವಾಗಿತ್ತಂತೆ; ಅದು ಮೈಸೂರು ಕೋರ್ಟನ್ನೇನು ಹತ್ತಲಿಲ್ಲವಂತೆ; ಇದು ಬಹಳ ದಿನಗಳಾದ ಮೇಲೆ ಯಜ್ಞೂರಯ್ಯನವರಿಗೆ ತಿಳಿದುಬಂತಂತೆ. ಅವರು ಅಂದರು: 'ಮೋಸದಿಂದ ನನ್ನ ಜಮೀನ ಅಪಹರಿಸಿಬಿಟ್ರು ನಾನು ನನ್ನ ಇರೋ ಏಡು ಮಕ್ಕಳ ಅನ್ನ ಕಿತ್ತುಕೊಂಡುಬಿಟ್ರು... ನನ್ಕತೆ ಮುಗಿದ ಕತೆ ಆಯ್ತು.'

ಕೊನೆಗೆ ನಾನು ಕೇಳಿದೆ : 'ಈಗ ನಿಮ್ಮ ಮನೆಮಂದಿ ಎಲ್ರೂ ಕೂಲಿ ಮಾಡ್ತ ಇದ್ದೀರಿ... ಅದು ನಿಮ್ಮ ಹೊಟ್ಟೆ ಬಟ್ಟೆಗೆ ಸಾಕಾಗುತ್ತಾ...?'

'ಹೆಂಗ್‌ತಾನೆ ಸಾಕಾದ್ದು ಸ್ವಾಮಿ'

'ವರ್ಷ ಪೂರ್ತ ಕೂಲಿ ಸಿಕ್ಕರೆ ನಿಮ್ಮ ಸಂಸಾರ ನಿಭಾಯಿಸ್ಕೊಂಡು ಹೋಗಕ್ಕಾಗುತ್ತ?'

'ಒಂದೇ ಸಮ ಕೂಲಿ ಸಿಕ್ಕಬೇಕಲ್ವ ಬುದ್ಧಿ....'

'ಸಿಕ್ಕರೆ....'

'ಸಿಕ್ಕರೆ ಹಾಗೂ ಹೀಗೂ ನೂಕಬಹುದು ಅನ್ನಿ.... ಸಿಕ್ಕಬೇಕಲ್ವ...'

'ಕೂಲಿ ಸಿಕ್ಕದಿದ್ದಾಗ ಏನ್ಮಾಡ್ತೀರಿ...?'

'ಆಗ ಆ ಜಗದೀಶನೊಬ್ಬನಿಗೇ ಗೊತ್ತು...'

'ಹೊಟ್ಟೆಗೆ ಏನ್ಮಾಡ್ತೀರಿ...'

'ಕೂಲಿ ಸಿಕ್ಕಗಂಟ ಏನ್ಮಾಡಕ್ಕಾದ್ದು.....?'

'ಅದ್ನೆ ನಾನು ಕೇಳ್ತ ಇರೋದು...'

'ಮಾತಾಡಂಗಿಲ್ಲ. ಕೂಲಿಸಿಕ್ಕರೆ ಅನ್ನ. ಏನ್ಮಾಡಕು ಅಸಾಧ್ಯ.'

ಮುಂದಕ್ಕೆ ನಾನು ಮಾತಾಡಲಿಲ್ಲ. ಮಾತು ತಿರುಗಿಸಿದೆ. ಇವರು ಈಗ ಕಟ್ಟಿಸಿರೊ ಮನೆಗಾಗಿ 4,000 ರೂಪಾಯಿ ಸರ್ಕಾರಿ ಸಾಲ ತೆಗೆದುಕೊಂಡಿರುವರು. ಯಾವ ಬಡ್ಡೀದೋ ಯಾವ ರೀತಿ ತೀರಿಸಬೇಕೊ ಅವರಿಗೆ ಗೊತ್ತಿಲ್ಲ. ಯಾವ ರೀತಿ ತೀರಿಸುವರೊ ಎಂಬುದು ನನಗೂ ಗೊತ್ತಿಲ್ಲ. ಈ ಮನೆ ಸಾಲದ ಬಾಬ್ತು ಕೊನೆ ಕಂತು 600 ರೂಪಾಯಿಗಳನ್ನು 'ಯಾಕೆ ಸಾಲ ಏರಿಸ್ಕಳ್ಳದು ಬಡ್ಡಿಗಾರು ವಜವಾಗ್ಲಿ' ಎಂಬ ದೃಷ್ಟಿಯಿಂದ ಕೊನೆ ಕಂತನ್ನು ಇವರು ತಕ್ಕಂಡಿಲ್ಲ. ಈ ಮನೆಯ ಹಿಂಭಾಗ ಹೆಂಚಾಕಿಸದೆ ಬಿದ್ದಿದೆ. ಈ ಮನೆಯ ಸೈಟನ್ನು ಇವರು ಗದ್ದೆ ಮಾಡಿಕೊಂಡು ಅನುಕೂಲವಾಗಿದ್ದಾಗ 250 ರೂಪಾಯಿಗೆ ಕೊಂಡಿದ್ದರು. ಈಗ ತಲಾ 500 ರೂಪಾಯಿಗಳಂತೆ ಒಂದು ಸಾವಿರ ರೂಪಾಯಿಗಳು, ಇವರು ಹಾಗೂ ಇವರ ಮಗನಿಗೆ ಜೀತವಿಮೋಚನಾ ಸಾಲ ಸಿಕ್ಕಿದೆ. ಮೇಲ್ಕಂಡ ವಿಮೋಚನಾ ಹಣವನ್ನೂ ಇವರು ಭೂಮಿ ಸಂಬಂಧಿಸಿದ ಅರ್ಜಿ ಸುತ್ತಾಟ ಹೊಟ್ಟೆಬಟ್ಟೆಗೆ ಖರ್ಚು ಮಾಡಿಕೊಂಡರು.

ನಾನು ಸುಸ್ತಾಗಿ ಕೊನೆಯದಾಗಿ ಪ್ರಶ್ನಿಸಿದೆ– 'ಏನಾದರೆ ನಿಮ್ಮ ಸಂಸಾರ ಎರಡೊತ್ತು ಊಟ ಮಾಡಿಕೊಂಡು ನಡೆಯಬಹುದು?' ಅವರು ಉತ್ತರಿಸಿದರು –'ಕೂಲಿಯಿಂದ ನಮ್ಮ ದರಿದ್ರ ಹತವಾಗಲ್ಲ ಸ್ವಾಮಿ... ಭೂಮಿ ಬೇಕು....'.

## ತಗಡೂರು ಅಸ್ಪೃಶ್ಯ ವಸತಿ ಹೋರಾಟ ಇತಿಹಾಸ

25–5–1940ನೆಯ ಇಸವಿ. ಅಂದು ನಂಜನಗೂಡು ತಾಲ್ಲೂಕು ತಗಡೂರು ಗ್ರಾಮದ ದಲಿತರು ನಿವೇಶನದ ಜಾಗಕ್ಕಾಗಿ ದಿವಾನ್ ಮಿರ್ಜಾ ಇಸ್ಮಾಯಿಲ್ ಸಾಹೇಬರಿಗೆ ಚಪ್ಪರ ಹಾಕಿ ಅರ್ಜಿಕೊಟ್ಟು ವಿನಂತಿಸಿದರು.

ಈ ಅರ್ಜಿಗೆ 1980ಕ್ಕೆ 40 ವರ್ಷಗಳು ತುಂಬುತ್ತದೆ. ಈ ಕಾಲಾವಧಿಯಲ್ಲಿ ಜಗತ್ತಿನ ಇತಿಹಾಸದಲ್ಲಿ ಬಲು ದೊಡ್ಡ ಬದಲಾವಣೆಗಳು ಜರುಗಿವೆ. ಅನೇಕ ರಾಷ್ಟ್ರಗಳು ಸ್ವಾತಂತ್ರ್ಯ ಪಡೆದಿವೆ. ಭಾರತಕ್ಕೂ ಸ್ವಾತಂತ್ರ್ಯ ಬಂದಿದೆ. ರಾಜರ ಕಾಲ ಮುಗಿದು ಅನೇಕ ಪ್ರಧಾನ ಮಂತ್ರಿಗಳು ಆಗಿ ಹೋಗಿದ್ದಾರೆ. ಹಾಗೇನೆ ಅನೇಕ ಮುಖ್ಯಮಂತ್ರಿಗಳು, ಮಂತ್ರಿಗಳು, ಶಾಸಕರು, ರಾಜಕಾರಣಿಗಳು, ಡಿ.ಸಿಗಳು, ಎ.ಸಿಗಳು, ಗುಮಾಸ್ತರು ಇತ್ಯಾದಿ. ಈಗಲೂ ಕೆಲವರು ಬದುಕಿದ್ದರೆ ಬಹುತೇಕರು ಸತ್ತಿದ್ದಾರೆ.

ನಲವತ್ತನೆ ಇಸವೀಲಿ ಹುಟ್ಟಿದವರು ಇಂದು ಆಳುತ್ತಿರಬಹುದು. ಈ ನಡುವೆ ನಮ್ಮ ದೇಶದ ಅರ್ಧದಷ್ಟು ಜನಸ್ತೋಮ ಬಡತನ ರೇಖೆಯ ಕೆಳಕ್ಕೆ ದೂಕಲ್ಪಟ್ಟಿದೆ. ಅನ್ನ ಬಟ್ಟೆಗೆ ಗತಿ ಇಲ್ಲದೆ ನಿಲ್ಲುವ ನೆಲೆಗೂ ಬವಣೆಪಟ್ಟಿದೆ.

ಅದಕ್ಕಾಗಿ ವಾಸದ ನೆಲೆಗಾಗಿ ತಗಡೂರು ದಲಿತರ ಸುಮಾರು ಅರ್ಧ ಶತಮಾನದ ಬವಣೆಯು ಕೇವಲ ವಸತಿ ಸಮಸ್ಯೆಯಾಗಿ ಉಳಿಯುವುದಿಲ್ಲ. ಬಡವರನ್ನು ಗುಟುಕು ಜೀವದಲ್ಲಿರಿಸಿ ಇಂದು, ನಾಳೆ ಶತಮಾನಗಳು ಹೇಗೆ ನಡೆದಾಡುತ್ತಿವೆ ಎಂಬುದರ ಕ್ರೂರ ಬರವಣಿಗೆಯಿದು.

**ಮನೆಗಳೊಳಗೆ ಮನೆಗಳು ಹುಟ್ಟಿ**

ನಲವತ್ತನೆ ಇಸವೀಲಿ ಕೊಟ್ಟ ಅರ್ಜಿಯು ಯಥಾ ಪ್ರಕಾರವಾಗಿ ನಿದ್ದೆ ಮಾಡಿತು. ದಿನದಿನಕ್ಕೆ ಬೀದಿಗೆಸೆಯಲ್ಪಡುತ್ತಿದ್ದ ಜನರು ಆಫೀಸುಗಳಿಗೆ ಅಲೆದದ್ದರಿಂದ 26–6–60ರ ಗೆಜೆಟ್‌ನಲ್ಲಿ ಪ್ರಥಮವಾಗಿಯೂ ಆಮೇಲೆ 6–6–63ರಲ್ಲಿ ಅಂತಿಮ ಗೆಜೆಟ್‌ನಲ್ಲು ಸರ್ವೆ ನಂಬರ್ 337–338ರ ಭೂಮಿಯು ದಲಿತರ ಸೈಟಿಗಾಗಿ ಎಂದು ಪ್ರಕಟಣೆಗೊಂಡು ಟಾಂ ಟಾಂ ಕೂಡಾ ಆಯ್ತು. ಆದರೆ ಹಂಚುವುದನ್ನು ಮಾತ್ರ ಉಳಿಸಿಕೊಂಡು ವರ್ಷಗಳು ಉರುಳಿದವು. ಅನಂತರ ಅದೇ ಭೂಮಿಯು 1965ರಲ್ಲಿ ಹೈಸ್ಕೂಲ್‌ಗೆಂದು ಅಕ್ರಮವಾಗಿ ಕ್ರಯ ನಡೆಯಿತು. ಈ ಅಕ್ರಮವು ದೊಡ್ಡ ಮನುಷ್ಯರುಗಳಿಂದಾದ ಪ್ರಯುಕ್ತ ಅದು ಅಲ್ಲಿಗೆ ತಣ್ಣಗಾಯ್ತು. ಅದುವರೆಗೂ ಮಂತ್ರಿ, ಅವ ಇವ, ಆಫೀಸುಗಳು ಅಂತ ಅಲ್ಲಿನ ಜನರು ತಿರುಗಿದ್ದೆಲ್ಲ ಯಥಾಸ್ಥಿತಿಗೆ ಬಂದು ಕೊನೆಕಂಡಿತು.

ವರ್ಷಗಳಾದಂತೆ ಮಕ್ಕಳಾದಂತೆ ಮನೆಗಳೊಳಗೆ ಮನೆಗಳು ಹುಟ್ಟಿದಂತೆಲ್ಲ ಅಲ್ಲಿನ ಜನರು ಆಫೀಸುಗಳ ಸವೆಸುವುದೂ ಹೆಚ್ಚುತ್ತಿತ್ತು. ಒಂದು ಹೆಂಗಸು ಪುರಾತನ ಕಾಲದ ಗವಿಯಂತಿದ್ದ ತನ್ನ ಜೋಪಡಿ ತೋರಿಸಿ 'ಆ ಡೀಸಿಯಪ್ಪನವರು ಚೆಕ್ಕಿಂಗ್‌ಗೆ ಬಂದಿದ್ದಾಗ ಒಳಕ್ಕೆ ಬರಲಾಗದ್ದಕ್ಕೆ ಇಲ್ಲೇ ನಿಂತಿದ್ದರು ಸ್ವಾಮಿ' ಎಂದು ನಿಂತಿದ್ದ ಜಾಗವನ್ನು ತೋರಿಸಿದಳು. ಅದು ಆರಡಿಯ ಮನುಷ್ಯರು ಮಲಗಲಾರದಷ್ಟಿತ್ತು. ಈ ಥರದಿಂದಾಗಿ ಹಗಲು ಹೊಲಗಳಲ್ಲಿ ಕೂಲಿ, ರಾತ್ರಿ ಚಾವಡಿಯಲ್ಲಿ ನಿದ್ದೆ ನೂರಾರು ಜನರ ಕ್ರಮಬದ್ಧ ಬದುಕಾಗಿಬಿಟ್ಟಿತ್ತು.

**ಕಾಲಜ್ಞಾನಿ ಕಟ್ಟಿಸಿದ ಚಾವಡಿ**

ರಾತ್ರೀಲಿ ಆ ಚಾವಡೀಲಿ ಇರುವೆ ನುಸುಳಲೂ ಜಾಗವಿಲ್ಲದಂತೆ ಜನ ಬಿದ್ದಿತ್ತು. ವಿಶಾಲವಾಗಿ ಈ ಚಾವಡಿ ಕಟ್ಟಿಸಿರುವ ಪುಣ್ಯಾತ್ಮನಿಗೆ ಇಲ್ಲಿನ ಜನಕ್ಕೆ ಸೈಟು ಸಿಗದಿರುವ ಕಾಲಜ್ಞಾನವು ತಿಳಿದಿತ್ತೇನೊ! ಜೊತೆಗೇ ಕೇರಿ ಪಕ್ಕದಲ್ಲಿ ಹರಿಯುವ ನೀರು ಹಳ್ಳವು ಮಳೆಗಾಲದಲ್ಲಿ ತನ್ನುದ್ದಕ್ಕೂ ಮನೆಗಳನ್ನು ಉರುಳಿಸುತ್ತ ದಿಕ್ಕೆಡಿಸುವ ಪರಿಪಾಠವನ್ನಿಟ್ಟುಕೊಂಡಿತ್ತು. ಹಾಗಾಗಿ ಈ ಜನರು ಗೋಡೆ ಉರುಳುವ ಭಯಕ್ಕೆ ತೆಂಗಿನ ಗರಿಯಿಂದ ವಿಶಾಲವಾಗಿ ಜೋಪಡಿ ಕಟ್ಟುವುದನ್ನು ಕಂಡುಹಿಡಿದುಕೊಂಡಿರುವರು. ಈ ಸುತ್ತಮುತ್ತ, ತೆಂಗಿನ ಗರಿ ಜೋಪಡಿಗಳನ್ನು ಆ ಜೋಪಡಿಗಳ ಮುಂದೆ ಮುಂದಿನ ವರ್ಷಕ್ಕಾಗಿ ತೆಂಗಿನ ಗರಿ ಹೆಣೆಯುತ್ತಿರುವುದನ್ನು ಸಾಮಾನ್ಯವಾಗಿ ಕಾಣಬಹುದು.

ಈ ನಡುವೆ ಜನತಾ ಸ್ಕೀಂನಲ್ಲಿ ಎಲ್ಲಾ ಜಾತಿಯ ಬಡಜನರಿಗೂ ಕೆರೆ ಕೋಡಿ ಕಲ್ಲುಹಳ್ಳದ ಪಕ್ಕದಲ್ಲಿ ನಿವೇಶನಗಳನ್ನು ಹಂಚಿದರು. ಆದರೆ ಅಲ್ಲಿ ಮಳೆ ಬಂದಾಗ ಊರಿನ ಎಲ್ಲಾ ಜಾತಿ ಬಡವರೂ ನೀರಲ್ಲಿ ಒಟ್ಟಿಗೆ ಕೊಚ್ಚಿಕೊಂಡು ಹೋಗುವ ವ್ಯವಸ್ಥೆಯಂತೆ ಇದ್ದುದರಿಂದ, ಎಲ್ಲರೂ ತಿರಸ್ಕರಿಸಲು ಅದೂ ಅಲ್ಲಿಗೇ ನಿಂತಿತು.

ಮುಂದೆ 67–68ನೇ ಸಾಲಿನಲ್ಲಿ ವಾಸಕ್ಕೆ ನೆಲೆಸಿಗುವ ಆಶೆಯೊಂದು ಮಿಂಚಿ ಮಾಯವಾಯ್ತು. ಆಗ ಕೆಲವು ಹಿತಾಸಕ್ತಿಗಳು ರಾತ್ರೋ ರಾತ್ರಿ ಸೈಟಿಗೆ ನಿಗದಿಯಾಗಿದ್ದ ಜಾಗದಲ್ಲಿ ಆಲದ ಮರದ ಕೊಂಬೆಗಳನ್ನು ಸಾಲಾಗಿ ನೆಟ್ಟು ಸುತ್ತ ಮುಳ್ಳುಬೇಲಿ ಹಾಕಿ ಆಗ ಸಚಿವರಾಗಿದ್ದ ರಾಚಯ್ಯನವರೊಂದಿಗೆ 'ಮಾರ್ಲಮಿ ಹಬ್ಬವಾದ ನಾಳೆಗೆ ಆ ಜಾಗದಲ್ಲಿ ದೇವರ್ನ ಪೂಜಿಸ್ತೀವಿ. ಅಲ್ಲಿ ಸೈಟಾಗುವುದ ದಯವಿಟ್ಟು ತಪ್ಪಿಸಿಕೊಡಿ. ಬೇರೆ ಎಲ್ಲಾದರೂ ಕೊಡ್ಸಿ' ಎಂದು ಕೇಳಿಕೊಂಡರು. ಸರಿ, ಆಗ ದಲಿತರು ಆಸ್ಪತ್ರೆ ಪಕ್ಕದ ಒಳ್ಳೆ ಜಾಗಕ್ಕೆ ಅರ್ಜಿ ಹಾಕಿದರು. ಒಳ್ಳೆ ಜಾಗದಲ್ಲಿ ವಾಸಿಸುವ ಕನಸು ಕಾಣುತ್ತಾ ಜೀವನ ಮುಂದುವರಿಸಿದರು. ಈ ಕನಸನ್ನು ನಿಜ ಮಾಡಲು ಮತ್ತೆ ಅಲೆದಾಟ ಆರಂಭಿಸಿದರು.

ಈ ಜನ ಎಷ್ಟೆಷ್ಟು ಅಲೆದಾಡಿದರೂ ವರ್ಷಗಳು ಒಂದರ ಮೇಲೊಂದು ನಡೆಯುತ್ತಿದ್ದವು. ಅಂತೂ ಕೊನೆಗೆ ಕಷ್ಟಪಟ್ಟುಕೊಂಡು 76ನೇ ಇಸವೀಲಿ ಪ್ರಥಮವಾಗಿ ಸೈಟಿನ ಭೂ ವಿವರ ಗೆಜೆಟ್ಟಿನಲ್ಲಿ ಪ್ರಕಟವಾಯ್ತು. ಆ ಭೂಮಿಯವರು ನಿವೇಶನಕ್ಕೆ ಭೂಮಿ ನೀಡಲು ಸಮ್ಮತಿ ರುಜುವನ್ನೂ ಹಾಕಿದ್ದರು. ಆದರೆ ತಾಲ್ಲೂಕು ಬೋರ್ಡು ಉಪಾಧ್ಯಕ್ಷ ಟಿ.ಎಸ್. ನಾಗರಾಜ್ ಮತ್ತಿಬ್ಬರು ನಿರಾಕರಿಸಿದ್ದರು.

**ತಡಂಗು ಮಾಡಿದವರಿಗೇ ಓಟು!**

ತಗಡೂರಿನ ಮುದುಕರೊಬ್ಬರು ಮಾತಲ್ಲಿ ನೋವುಕ್ಕಿಸುತ್ತ 'ಆ ನಾಗರಾಜು ನಮ್ಮೂರಿಗೇ ಒಂದನೇ ಕುಳ. ನಮ್ಮ ಭೂಮೀನೆ ಕೊಂಡುಕೊಂಡರು. ನಮ್ಮ ವೋಟಲ್ಲೆ ಗೆದ್ದು ತಾಲ್ಲೂಕು ಬೋರ್ಡು ಉಪಾಧ್ಯಕ್ಷರಾದರು. ನಮ್ಮ ವಾಸಕ್ಕೆ ಬಿಡದೆ ತಡಂಗು ತಂದರು' ಎಂದರು. ಮುಂದೆ ಇದೇ ನಾಗರಾಜ್‌ಗೆ ವೋಟು ಕೇಳಲು ಡಿ.ಎಂ. ಸಿದ್ಧಯ್ಯ, ಟಿ.ವಿ. ಶ್ರೀನಿವಾಸರಾವ್ ಇತ್ಯಾದಿ ಬಂದಿದ್ದಾಗ ಆಗಲೂ ನಿವೇಶನದ ಪ್ರಸ್ತಾಪವಾಗಿತ್ತು. 'ನಿಮ್ಮ ಎಕ್ಕಡ ಬಿಟ್ಟುಕೊಳ್ಳೊ ಅಷ್ಟು

ಜಾಗದಲ್ಲಿ ನಾವು ವಾಸವಾಗಿದ್ದೀವಿ. ಈ ನಾಗರಾಜು ನಮ್ಮ ಸೈಟಾಗದಂತೆ ತಡಂಗು ಮಾಡವರೆ. ಇಂಥವರಿಗೂ ವೋಟು ಕೊಡಬೇಕಾ? ನೀವೇ ಹೇಳಿ ಸ್ವಾಮಿ' ಅಂತ ಒಬ್ಬರು. 'ಸ್ವಾಮಿ ನಂಗೆ ಮೂರು ಜನ ಹೆಣ್ಮಕ್ಕಳು. ಒಂದು ಗಂಡಾಗಲಿ ಅಂತ ಆಸೆಯಿತ್ತು. ಜಾಗ ಸಾಲ್ದೆನೆ ಸುಮ್ಮನಾದೆ' ಅಂತ ಇನ್ನೊಬ್ಬರು ಮುಂತಾಗಿ ಅಂದಿದ್ದರು. ಆಗ ನಗಾಡಿ ಮಾತು ತೇಲಿ ಹೋಗಿತ್ತು. ಯಜಮಾನರು 'ಆದ್ರೂ ಅವನ್ಗೇ ವೋಟು ಕೊಟ್ವೋ ಸ್ವಾಮಿ. ಅರಸು ಬಸುಲಿಂಗಪ್ಪ ವೆಂಕಟರಮಣರ ಮೊಖ ನೋಡಿ ವೋಟು ಕೊಟ್ವೋ' ಅಂದರು.

ಅಂದ ಹಾಗೆ ಮುಖ್ಯಮಂತ್ರಿ ಅರಸುರವರಿಗೆ ಚಪ್ಪರ ಹಾಕಿ ಕೊಂಬು ತಮಟೆ ಸಮೇತವಾಗಿ ಹೋಗಿ ಊರಿಗೆ ಬರಮಾಡಿ ವಾಸದ ನೆಲೆಗೆ ವಿನಂತಿಸಿದ್ದೂ ಇದೆ. ಮುಖ್ಯಮಂತ್ರಿಗಳು ಖಂಡಿತವಾಗೂ ಮಾಡಿಸಿಕೊಡ್ತೀನಿ ಅಂದರಂತೆ. ಬಸವಲಿಂಗಪ್ಪನವರಿಗೆ ಚಪ್ಪರ ಹಾಕಿ ಕೊಂಬು ತಮಟೆ ಸಮೇತವಾಗಿ ಹೋಗಿ ಊರಿಗೆ ಬರಮಾಡಿ ವಾಸದ ನೆಲೆಗಾಗಿ ವಿನಂತಿಸಿದ್ದೂ ಇದೆ. ಬಸವಲಿಂಗಪ್ಪನವರು– '21 ದಿನ ಟೈಮು ಕೊಡಿ ಗ್ಯಾರಂಟಿ ಆಗುತ್ತೆ' ಅಂದರಂತೆ. ಹೀಗೆಯೇ ವೆಂಕಟರಮಣರು 'ಸೈಟು ಭೂಮೀಲಿ ತೆಂಗಿನ ಮರಗಳಿದ್ದರೂ ಕೀಳಿಸಿ ಕಲ್ಲು ನೆಡಿಸಿಕೊಡ್ತೀನಿ' ಅಂದರಂತೆ,

**ಫೈಲು ಪವಾಡ**

ಹೀಗೆ ಇತ್ಯಾದಿ ಇತ್ಯಾದಿ ನಾಯಕರುಗಳ ಸಾಲುಗಳಿಗೆಲ್ಲ ಮನವಿ ನಡೆದಿದೆ. ಆದರೆ ಎಲ್ಲರೂ ಕೂಡ ಅಲ್ಲಿನ ಮಾತುಗಳಲ್ಲೆ ಹೇಳುವುದಾದರೆ 'ಮಾಡಿಕೊಡ್ತೀವಿ ಮಾಡಿಕೊಡ್ತೀವಿ' ಅನ್ನುವುದರ ಮೇಲೆ ಬಂದರೇ ಹೊರತು ಯಾರೂ ಮಾಡಿಕೊಡಲಿಲ್ಲ

ಇತ್ತ ಸಂಬಂಧಪಟ್ಟ ಗುಮಾಸ್ತರು ಅಧಿಕಾರಿಗಳು ಸಂಬಂಧಪಟ್ಟ ಫೈಲನ್ನು ತೋರಿಸದೆ 'ಆಗ್ತದ ಹೋಗ್ರಿ, ಬತ್ತದ ಹೋಗ್ರಿ, ಕೊಟ್ಟಿದ್ದೀವಿ ಹೋಗ್ರಿ, ಕಳಿಸಿದ್ದೀವಿ ಹೋಗ್ರಿ...' ಈ ಥರ ಹೇಳ್ತಲೇ ಬರುತ್ತಿದ್ದರು. ಕೊನೆಗೊಂದು ದಿನ ತಿಳಿದುಬಂತು. ಏನೆಂದರೆ, ಮೈಸೂರು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಆ ಫೈಲ್ ನಾಪತ್ತೆಯಾಗಿತ್ತು. ಅದು ಯಾರದೋ ಹೊಟ್ಟೆಯಲ್ಲಿ ಹಣವಾಗಿ ಮಾರ್ಪಟ್ಟಿತ್ತು. ಅದುವರೆಗೂ ಅಲೆದಾಡುತ್ತಿದ್ದ ಜನ ಕಣ್ಣು ಬಾಯಿ ಬಿಡುವಂಥ ಸ್ಥಿತಿಗೆ ಬಂದು ಮುಟ್ಟಿತು.

**ಕುಟುಂಬ ಯೋಜನೆಯೂ ಬಂತು!**

ಆದರೀಗ ದಲಿತರ ಕೇರಿಗಳಲ್ಲಿ ಮಕ್ಕಳು ಮರಿಗಳು ಸೇರಿ ಸಾವಿರವಾಗಿದೆ. ಅನೇಕರು ಮಲಗಲು ಜಾಗವಿಲ್ಲದೆ ಕುಟುಂಬ ಯೋಜನೆ ಮಾಡಿದರು. ಕೆಲವರು ಮಲಗಲು ಜಾಗವಿಲ್ಲದೆ ಮದುವೆಗಳನ್ನು ಮುಂದೂಡಿದರು. ಆದರೂ ಇಷ್ಟೊಂದು ಜನಸಂಖ್ಯೆಯಾಗಿದೆ. ಒಂದು ಮನೆ ಇದ್ದುದು ಈಗ ಅಲ್ಲಲ್ಲೆ ಭಾಗವಾಗಿ ನಾಕಾರು ಆಗಿವೆ. ಉದಾ: ಅಂಕಿ ಮಾದಯ್ಯನವರ ಮನೆ ಇರೋದು ಒಂದು ಅಂಕಣ. ಅಣ್ಣ ತಮ್ಮಂದಿರು ಇರೋರು ಮೂರು ಜನ. ಭಗವಂತ ಬಂದರೂ ಭಾಗ ಮಾಡಲಾಗದಂತಿದೆ. ಇನ್ನೊಂದು ಮನೆ ಭಾಗವಾಗಿ ಆಗಿ ಈಗ ಒಂದು ಮಾರುದ್ದ ಸ್ಥಿತಿಗೆ ಇಳಿದಿದ್ದರೂ ಇದೂನು ಅಣ್ಣ ತಮ್ಮಂದಿರ ನಡುವೆ ಭಾಗವಾಗಬೇಕಾಗಿದೆ. ಈ ಅಣ್ಣ ತಮ್ಮಂದಿರ ನಡುವೆ ಗೋಡೆ ಹಾಕಿದರೆ ಆರಂಗುಲ ಜಾಗ ಹೋಗುವುದೆಂದು ಹೆದರಿ ಸೂರಲ್ಲಿ ಒಂದು ಕಡ್ಡಿ ಸಿಕ್ಕಿಸಿ ಗುರುತಿಟ್ಟು ಆ ಕಡೆ ಅಣ್ಣನ ಸಂಸಾರ, ಈ ಕಡೆ ತಮ್ಮನ ಸಂಸಾರ ತೆವಳಿದೆ.

ಇಂಥವುಗಳೊಡನೆ ಬೀದಿ ಜಗುಲೀ ಮೇಲೆ ಮತ್ತು ಗೋಡೆಗಂಟಿಕೊಂಡಂತೆ ತಡಿಕೆ ಜೋಪಡಿಗಳು ಕೇರಿ ತುಂಬಾ ತುಂಬಿಕೊಳ್ಳುತ್ತಿವೆ. ಬೇರೆ ಊರುಗಳಲ್ಲಿ ಇರತಕ್ಕ ಮಕ್ಕಳು ಒಟ್ಟಿಗೆ ಊರಿಗೆ ಬಾರದಂತೆ ಎಚ್ಚರಿಕೆವಹಿಸುವ ಪರಿಸ್ಥಿತಿಯೊದಗಿದೆ. ಎಷ್ಟೋ ಜನ ಊರಲ್ಲಿ ನೆಲೆಯಿಲ್ಲದೆ ಕಾಫಿ ತೋಟ ಸೇರಿಕೊಂಡಿರುವರು. ಇಲ್ಲೆ ಹಾಗೂ ಹೀಗೂ ಒದ್ದಾಡುತ್ತಿರುವವರಲ್ಲಿ ಒಬ್ಬರು– 'ಜಾಗಕ್ಕಾಗಿ ಯಾವ ದಿನ ಜಗಳ ನಡೆಯುವುದಿಲ್ಲವೊ ಆ ದಿನ ನಮ್ಮೂರಲ್ಲಿ ಕೋಳಿ ಕೂಗುವುದಿಲ್ಲ'ವೆಂದು ನಗಾಡಿದರು.

**ನ್ಯಾಯಗಳೂ ನಡೆದಿವೆ**

ಉದಾಹರಣೆಗೆ ಅಣ್ಣ ತಮ್ಮ ಇಬ್ಬರು ಪಾಲಾದಾಗ ಆಡು ಕುರಿ ನಾನೆಲ್ಲಿ ಕಟ್ಟಲಿ ತಾನೆಲ್ಲಿ ಕಟ್ಟಲಿ ಅಂತ ರಕ್ತ ಬರೋಗಂಟ ಹೊಡೆದಾಡಿ ನ್ಯಾಯ ಪಂಚಾಯ್ತಿ ನಡೆದಿದೆ. ಯಜಮಾನರು 'ಇರೋ ಆಡು ಕುರಿಗಳನ್ನು ಮಾರಿಬಿಡಿ. ಜಗಳಾಡಿದ್ದಕ್ಕೆ ತಪ್ಪು ಕೊಡಿ' ಎಂದು ತೀರ್ಪುಕೊಟ್ಟರು! ಎಷ್ಟೊ ಜನ ಇದ್ದಬದ್ದ ಆಡು ಕುರಿಗಳನ್ನು ಮಾರಿದ್ದೂ ಇದೆ, ಎತ್ತು ದನ ತರಲು ಶಕ್ತರಾದವರು ಜಾಗವಿಲ್ಲದೆ ತಂದಿಲ್ಲದಿರುವುದೂ ಇದೆ. ಒಬ್ಬರು ತಮ್ಮ ಇರೋ ಒಂದೂವರೆ ಅಂಕಣದ ಮನೆ ತೋರಿಸಿ ಹೇಳುತ್ತಿದ್ದರು. ಅವರು ತೋರಿಸುತ್ತಿದ್ದ ಬೆರಳು ಚಲಿಸುತ್ತಿರಲಿಲ್ಲ. ಆದರೆ ಬಾಯಿ ಹೇಳುತ್ತಿತ್ತು. 'ನೋಡಿ ಸ್ವಾಮಿ, ಊಟ

ಮಾಡದು ಇಲ್ಲಿಯಾ. ಅಡುಗೆ ಮಾಡಾದು ಅಲ್ಲಿಯಾ, ಏಡು ಮಕ್ಕಳ ಹಾಕಿಕೊಂಡು ಮಲಗೋದು ಇಲ್ಲಿಯಾ. ಆಡು ಕುರಿ ಕೋಳಿ ಇರೋದು ಅಲ್ಲಿಯಾ...' ಎಂದು ತೋರಿಸುತ್ತಿದ್ದರು. ಅವರು ಹಾಗೆ ತೋರಿಸುತ್ತಿದ್ದರೂ ಅಲ್ಲಿಗೆ ಇಲ್ಲಿಗೆ ಅಂಥ ವ್ಯತ್ಯಾಸವೇನೂ ಕಾಣುತ್ತಿರಲಿಲ್ಲ.

ಹೀಗೆ ಅದೆಷ್ಟೊ ಕ್ರೂರ ಹತಾಶೆಗಳಾಗಿದ್ದರೂ ಪರಿಸ್ಥಿತಿಯು ಅಲ್ಲಿನ ಜನರನ್ನು ಸುಮ್ಮನಿರಲು ಬಿಡುತ್ತಿರಲಿಲ್ಲ. ಹಾಗಾಗಿ ಸಂಘಟಿತರಾಗಿ ಪ್ರಯತ್ನಿಸಲು 15–9–79ರಂದು ಅಂಬೇಡ್ಕರ್ ಸಂಘ ಹುಟ್ಟು ಪಡೆಯಿತು. ಸ್ಪೀಕರ್ ವೆಂಕಟರಮಣರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಬೋರ್ಡು ಅಧ್ಯಕ್ಷ ಪ್ರಸನ್ನ ಕುಮಾರ್ ಉದ್ಘಾಟಿಸಿ, ಟಿ.ವಿ.ಶ್ರೀನಿವಾಸರಾವ್ ಭಾವಚಿತ್ರ ಅನಾವರಣ ಮಾಡುತ್ತ ಸೈಟು ಸಮಸ್ಯೆ ಬಗೆಹರಿಸುವುದಾಗಿ ಮಾತುಕೊಟ್ಟು ಆಮೇಲೆ ತಲೆ ಮರೆಸಿಕೊಂಡು ಮಾಮೂಲಿಯಾದರು.

ಆಗಲೀಗ ಅಲ್ಲಿನ ಜನರು ತಮ್ಮ ಕಾಲ ಮೇಲೆ ತಾವೆ ನಿಂತು ಹೋರಾಡಲು ನಿಲ್ಲಬೇಕಾಯ್ತು.

**ಹೋರಾಟದ ಕಡೆಗೆ**

ಹಾಗಾಗಿ ವಾಸದ ನೆಲೆಗಾಗಿ ಅರ್ಧ ಶತಮಾನದ ಗೋಳು ಹೋರಾಟವಾಗಿ ರೂಪಾಂತರವಾಯಿತು. ಈ ಹಂತದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಈ ನೆಲಕಾಣದವರಿಗೆ ಬೆನ್ನೆಲುಬಾಗಿ ನಿಂತಿತು. ದಿನಾಂಕ: 17–10–79ರಂದು 'ನಾವು ಸತ್ತ ಮೇಲಾದರೂ ಆರಡಿ ಮೂರಡಿ ಅಳತೆಯ ಜಾಗಕ್ಕೆ ನಮ್ಮ ಶವವನ್ನು ಊಳಲು ಯಾವ ತಂಟೆ ತಕರಾರೂ ಬರುವುದಿಲ್ಲವೆಂದು ನಂಬಿ ಕೊನೆಯ ಪ್ರಯತ್ನವಾಗಿ ಚಳವಳಿ ಮಾಡುತ್ತಿದ್ದೇವೆ' ಎಂದು ಮುಖ್ಯಮಂತ್ರಿಗಳಾದಿಯಾಗಿ ಎಲ್ಲರಿಗೂ ಮನವಿ ಮಾಡಿ ನಂಜನಗೂಡು ನೆಲಕ್ಕೇ ಹೊಸದಾಗಿ ಸುಮಾರು ಏಳ್ನೂರು ಜನರ ದೊಡ್ಡ ಮೆರವಣಿಗೆ ನಡೆಸಿದರು. ಪುರಸಭಾ ಕಚೇರಿ ಮುಂದೆ ಸರದಿ ಉಪವಾಸ ಸತ್ಯಾಗ್ರಹ ಆರಂಭವಾಯ್ತು.

**ಜೊತೆಗೆ ದೇವರ ಅವತಾರ**

ನಂಜನಗೂಡಲ್ಲಿ ಸತ್ಯಾಗ್ರಹ ನಡೆಯುತ್ತಿರಲು ಇತ್ತ ತಗಡೂರು ಗ್ರಾಮದಲ್ಲಿ ನೆಲೆ ಇಲ್ಲದವರಿಗೆ ವಂಚಿಸಲು ದೇವರ ಅವತಾರವೂ ಬಂತು. ಒಬ್ಬನ

ಮೈಮೇಲೆ ದೇವರು ಬಂದು ಅದು ನಿವೇಶನಕ್ಕೆ ನಿಗದಿಪಡಿಸಿದ್ದ ಜಾಗಕ್ಕೆ ಮೆರವಣಿಗೆ ನಡೆದು ಆ ದೇವರು ಆ ಜಾಗವೆಲ್ಲ ತನಗೇ ಬೇಕೆಂದೂ ಅಲ್ಲಿಗೆ ಹೊಲೆಮಾದಿಗರು ಹೆಜ್ಜೆ ಇಟ್ಟರೆ ರಕ್ತ ಕಕ್ಕಿಸಿ ಸಾಯಿಸುತ್ತೇನೆಂದು ಅಬ್ಬರಿಸಿತ್ತು. ಕುಣಿದು ಕುಪ್ಪಳಿಸಿತ್ತು. ಆ ದೇವರು ಮಲೆಮಾದೇಶ್ವರನೆಂದು ಪ್ರತೀತಿ ಪಡೆಯುತ್ತಿತ್ತು. ಆ ಜಾಗದಲ್ಲಿ ಕಲ್ಲೊಂದನ್ನು ಭೂಮಿ ಒಳಗಿಂದ ಒಡಮೂಡಿಸಿ ಅದಕ್ಕೊಂದು ನೆರಳಾಗಿ ಚಪ್ಪರವೂ ಎದ್ದು, ಅದನ್ನು ನಾಕಾರು ಜನ ದೊಣ್ಣೆಗಳೊಡನೆ ರಾತ್ರಿ ಕಾವಲು ಕಾಯುತ್ತಿದ್ದರು.

ಈ ಮಲೈಮಾದೇಶ್ವರನು ಮಾದಿಗನಾದದ್ದಕ್ಕಾಗಿ ಜಾತಿ ವಂಚನೆಗಳ ಅನುಭವಿಸಿ ಸವರ್ಣೀಯ ಶರಣರ ನಡುವೆ ಸೈಟು ಸಿಗದಿದ್ದುದಕ್ಕಾಗಿ ಕುಪಿತನಾಗಿ ಬೇಸತ್ತು ಊರುಗಳನ್ನೇ ತ್ಯಜಿಸಿ ದೂರದ ಬೆಟ್ಟಗುಡ್ಡದಲ್ಲಿ ಜಾತಿ ಸೋಂಕಿಲ್ಲದ ಆದಿವಾಸಿಗಳ ನಡುವೆ ಸೈಟು ಮಾಡಿದ ಎಂಬುದು ತಿಳಿದಿದ್ದಲ್ಲಿ ಬಹುಶಃ ಇದಾಗುತ್ತಿರಲಿಲ್ಲ. ಇತರೆ ದೇವರು ಮೈಮೇಲೆ ಬರುವ ಜಾಣತನವಾದರೂ ನಡೆಯುತ್ತಿತ್ತು. ಈ ಪ್ರಕರಣವು ಮುಂದೆ ಬೆಳೆಯದಂತೆ ಜಿಲ್ಲಾಧಿಕಾರಿಗಳು ತಕ್ಷಣ ಕ್ರಮ ಕೈಗೊಂಡಿದ್ದರಿಂದ ಆ ನಮ್ಮ ದೇವರು ಮುಂದಿನ ಜಾಗಕ್ಕೆ ನಡೆಯಿತು.

**ಮಾತುಗಳಿಗೆ ಬೆಂಕಿ ಬಿದ್ದಿದೆ**

ಕನ್ನಡ ರಾಜ್ಯೋತ್ಸವದಂದು ಸತ್ಯಾಗ್ರಹದ ಸ್ಥಳಕ್ಕೆ ವೆಂಕಟರಮಣ ಅವರು, ಸಚಿವ ಶಿವಯ್ಯನವರು ಭೇಟಿ ನೀಡಿ ವಿಚಾರಿಸಿರುವರು. ವೆಂಕಟರಮಣರು 'ವಾರ ಹದಿನೈದು ದಿನಗಳಲ್ಲಿ ನಾವು ಮಾಡ್ತೀವಿ. ಪರದೆ ಮೇಲೆ ಸಿನಿಮಾ ನೋಡಿ ಅನ್ನೋಥರ ನೀವು ನೋಡಿ. ಚಳವಳಿ ಬಿಡಿ' ಅಂದಿರುವರು. ಸಚಿವ ಶಿವಯ್ಯನವರು 'ಎಲ್ಲರೂ ಸ್ಟೇಗೆ ಹೋದರೂ ವೆಕೇಟ್ ಮಾಡಿಸ್ತೀವಿ, ಹಂಚಿಸ್ತೀವಿ' ಅಂದಿರುವರು. ಜಿಲ್ಲಾಧಿಕಾರಿಗಳಾದ ಎಸ್.ಆರ್. ವಿಜಯ್‌ರವರು ಡಿಸೆಂಬರ್ ಹದಿನೈದರ ಒಳಗಾಗಿ ಹಂಚಿಸುವುದಾಗಿ ತಿಳಿಸಿರುವರು.

ತಗಡೂರಿನಂಥ ಈ ಸಮಸ್ಯೆಯು ತಗಡೂರಿಗೆ ಮಾತ್ರ ಸೀಮಿತವಾಗಿರದೆ ಎಲ್ಲಾ ಕಡೆಗಳಿಂದಲೂ ಈಗೀಗ ಬೆಳಕಿಗೆ ಬರುತ್ತಿವೆ, ಚಳವಳಿಗೆ ಕೂಡುತ್ತಿವೆ.

ಉಪವಾಸ ಸತ್ಯಾಗ್ರಹವು ಒಂದು ತಿಂಗಳಾಗಿ ವಾರವಾದ ಸಂದರ್ಭದಲ್ಲಿ ಅಂಬೇಡ್ಕರ್ ಸಂಘದ ಅಧ್ಯಕ್ಷ ಕೂಸಯ್ಯನವರನ್ನು ಭೇಟಿ ಮಾಡಿ 'ಇಷ್ಟೆಲ್ಲಾ ಆಗಿಯೂ ಕೊನೆಗೂ ಸೈಟು ಸಿಗದಿದ್ದಲ್ಲಿ ಏನು ಮಾಡುವಿರಿ?' ಎಂದು

ಪ್ರಶ್ನಿಸಿದೆ. ಅವರು ಉರಿಯುತ್ತ ನುಡಿದರು: 'ಒಂದು ಕೊನೆಯ ಅರ್ಜಿ ಕೊಡ್ತೀವಿ ಸ್ವಾಮಿ– ಜೈಲಲ್ಲಿ ಇಡೋ ಮೂಲಕವಾದರೂ ಅಲ್ಲಾದರೂ ನಮಗೆ ವಾಸಕ್ಕೆ ಕಲ್ಪಿಸಿಕೊಡಿ ಅಂತ. ಈ ಅರ್ಜಿ ಕೊಟ್ಟಾದ ಮೇಲೆ ಆ ಸೈಟು ಜಾಗದಲ್ಲಿ ಜೋಪಡಿ ಕಟ್ತೀವಿ. ಅಲ್ಲಿಂದ ಎಬ್ಬಿಸಲು ನಮ್ಮನ್ನು ಹೊಡೆದು ಬಡಿದು ಮಾಡಬಹುದು, ಒಂದಿನ ತಾನೇ ಸಹಿಸಿಕೊಳ್ತೀವಿ. ಆಮೇಲೆ ನಮ್ಮನ್ನು ಜೈಲಿಗೆ ತಾನೇ ಹಾಕೋದು? ಅಲ್ಲಾದರೂ ನಮ್ಮ ವಾಸಕ್ಕೆ ಅವಕಾಶ ಕಲ್ಪಿಸಿಕೊಡ್ತಾರಲ್ಲ! ಅಷ್ಟು ಸಾಕು.'

## ಕುರುಡು ಜಾತೀಯು ಕುಣಿಯೂತಲಿತ್ತೊ

ಮೈಸೂರಿಗೆ ಹೆದರಿ ಬಂದಿದ್ದ ಹೊಳೆನರಸೀಪುರದ ಆ ಹುಡುಗರ ಆತಂಕ ತಳಮಳದ ಮುಖಗಳನ್ನು ಮರೆಯಲು ಹೊಳೆನರಸೀಪುರಕ್ಕೆ ಹೊರಟೆ. ಅಲ್ಲಿ ಇಳಿದು ಕಣ್ಣಾಡಿಸಿದ ಕಡೆಗೆಲ್ಲಾ ಜನರ ಗುಂಪು ಕಣ್ಣಿಗೆ ತುಂಬುತ್ತಿತ್ತು. ಅಂದು ಸಂತೆ. ಹಿಂದೆ ದಲಿತರ ಕೇರಿ ಪಕ್ಕ ನಡೆಯುತ್ತಿದ್ದ ಸಂತೆ ಈಗ ಊರೊಳಗೆ ನಡೆಯುತ್ತಿತ್ತು. ಆಗ 144 ಸೆಕ್ಷನ್ನೂ ಇತ್ತು. ಸಂತೆಯು, ಇದ್ದ 144 ಸೆಕ್ಷನ್ನನ್ನು ಗೇಲಿ ಮಾಡುತ್ತಿತ್ತು.

ಮಾರ್ಚ್ 20ರ ಗಲಾಟೆಯಲ್ಲಿ ಹೊಳೆನರಸೀಪುರದಲ್ಲೆ ಇದ್ದ ಗಂಗೂರಿನ ಒಬ್ಬಾತ ಸಿಕ್ಕಿದ್ದರು. ಈತನ ಪ್ರಕಾರ– 'ಜಾತ್ರೇಲಿ ನಾಲ್ಕು ಜನ ಹರಿಜನರು ಸೆಟ್ಟಾಗಿ ಬಂದು ಹುಡುಗೀನ ಹೊತ್ತಾಕಿಬಿಟ್ಟರಂತೆ. ಈಗ ಆ ಹುಡುಗಿ ಗೌರ್ಮೆಂಟ್ ವಶದಲ್ಲಿದ್ದಾಳಂತೆ. ಸಬ್‌ಇನ್‌ಸ್ಪೆಕ್ಟರ್ ತಹಸಿಲ್ದಾರರು ಶೇಕದಾರರು ಎಲ್ಲರಿಗೂ ಎ.ಕೆ.ಗಳು ಹೊಡೆದಿದ್ದಾರಂತೆ. ಉತ್ತಮರ ಬೀದಿಲೆಲ್ಲಾ ಒಳಗೆ ನುಗ್ಗೋದು, ಹೊಡೆಯೋದು, ಈಚೆಗೆ ತಳ್ಳೋದು ಮಾಡ್ತಿದ್ದರಂತೆ. ಈಗ ಮೈಸೂರು ಪೊಲೀಸು ಬಂದು ಹೊಡೆದು ಬಡಿದು ಹಿಡಿತಕ್ಕೆ ತಂದಿದೆಯಂತೆ. ಈ ಸುದ್ದಿನ ಮಾತಾಡಂಗು ಇಲ್ವಂತೆ' ಇತ್ಯಾದಿ. ಇದೆಲ್ಲ ನಾನು ಮೈಸೂರಲ್ಲಿ ಕೇಳಿದ್ದಕ್ಕೆ ತದ್ವಿರುದ್ಧವಾಗಿತ್ತು.

### 'ಪಕ್ಷಿನೋಟ'ದಲ್ಲಿ ರಣಹದ್ದು

ಆಮೇಲೆ ವಿವೇಕಾನಂದರ ಚಿತ್ರವಿರುವ 'ಪ್ರತಿನಿಧಿ' ಎಂಬ ಜಿಲ್ಲಾಪತ್ರಿಕೆಯಲ್ಲಿ ಗಲಭೆ ಪಕ್ಷಿನೋಟ ಸಿಕ್ಕಿತು. ಆ ನೋಟದಲ್ಲಿ 'ಹರಿಜನರ' ಗುಂಪು

ಮಹಿಳೆಯೊಬ್ಬಳ ಶೀಲಭಂಗಕ್ಕೆ ಪ್ರಯತ್ನಿಸಿತು. ಓರ್ವ ಮಹಿಳೆ ಏನು ಮಾಡಿಯಾಳು? ಮಾಂಗಲ್ಯಸರ ಗುಂಪಿನ ಕೈ ಸೇರಿತು' ಎಂದಿತ್ತು. ಶೀಲಭಂಗವಾಗಿರುವುದನ್ನು 'ಮಾಂಗಲ್ಯಸರ' ಎಂದು ಸಾಂಕೇತಿಕವಾಗಿ ಹೇಳಿರಬಹುದೇ ಅನ್ನಿಸಿತು.

ಆದರೆ ಈ ಪಕ್ಷಿನೋಟವು ರಣಹದ್ದಿನ ನೋಟವಾಗಿತ್ತು. ಯಾಕೆಂದರೆ ವಿಚಾರಿಸುತ್ತಾ ಹೋದಂತೆ ಆ ಸುದ್ದಿಗಳು ಸುಳ್ಳೆಂದು ರುಜುವಾತಾದವು. ಗಲಾಟೆಯಾದ ತಕ್ಷಣವೇ ಹೋಗಿದ್ದ ಪ್ರಜಾವಾಣಿ ಪ್ರತಿನಿಧಿಯ ಪ್ರಕಾರ 'ಕಮಲಮ್ಮನವರ ಮಗನನ್ನು ಹೊಡೆಯಲು ಹರಿಜನರ ಗುಂಪು ಮನೆಗೆ ನುಗ್ಗಿದಾಗ, ಮಗ ಮಹಡಿ ಹತ್ತಿದ. ತಾಯಿ ಗುಂಪಿಗೆ ಅಡ್ಡ ಬಂದು ನಿಂತರು. ಎಳೆದಾಟವಾದಾಗ ಎರಡೆಳೆ ತಾಳಿ ಸರದಲ್ಲಿ ಒಂದೆಳೆ ಕಿತ್ತಿತು. ಮಾನಭಂಗಕ್ಕೆ ಪ್ರಯತ್ನಿಸಿಲ್ಲ'. ಇವೇ ಮಾತನ್ನು ಕಮಲಮ್ಮನವರನ್ನು ಕಂಡು ವಿಚಾರಿಸಿದ್ದ ಲೇಖಕ ತ. ಹ. ನಾಗರಾಜನ್‌ರು ತಿಳಿಸಿದರು.

ಆದರೂ ಮೇಲಿನಂತೆ ಸುದ್ದಿಯಾಗಿತ್ತು. ನನಗೆ ತಿಳಿಸಿದ ಗಂಗೂರವನು ಬೇಕಂತ ಹೇಳಿದಂತೆ ಕಾಣಿಸಲಿಲ್ಲ. ಆತ ನಮ್ಮ ಸಾಮಾಜಿಕ ಮನಸ್ಸಿನ ಮುಗ್ಧ ಪ್ರತಿನಿಧಿಯಾಗಿದ್ದನು. ಅವನ ಮಿದುಳಿನೊಳಕ್ಕೆ ಆ ಸುಳ್ಳು ಸುದ್ದಿ ನುಗ್ಗಿ ಓಡಾಡುತಿತ್ತು.

ಇದಕ್ಕೆ ಕಾರಣ ಹುಡುಕುತ್ತಾ ಕಂಡದ್ದು ನಮ್ಮ ಜನರ ತಲೆಯ ಮಿದುಳು ತೆಗೆದು ಅಲ್ಲಿಗೆ ದ್ವೇಷ ಅರಾಜಕತೆ ತುಂಬುತ್ತ ಅದನ್ನೆ ಆಹಾರ ಮಾಡಿಕೊಂಡು ಜೀವಿಸುವ ಆರ್‌ಎಸ್‌ಎಸ್ ಚಿತಾವಣೆ ಒಳಗೊಳಗೆ ಇತ್ತು. ಮೇಲ್ನೋಟಕ್ಕೆ ದಲಿತರ ಪರವಾಗಿ ಕಾಂಗ್ರೆಸ್ಸೂ ಸವರ್ಣೀಯರ ಪರವಾಗಿ ಜನತಾ ಪಕ್ಷ ನಿಂತಿದ್ದವು.

**ಹುಡುಗರ ಮಿಸ್ಟೇಕು**

ಹೊಳೆನರಸೀಪುರದ ಗಲಾಟೆಗೆ ಕಾರಣ ಹುಡುಕುತ್ತ– ಪ್ರಜಾವಾಣಿ ಪ್ರತಿನಿಧಿಯಂತೆ 'ಹುಡುಗರ ಮಿಸ್ಟೇಕು. ಇವರ ಕಡೆಯವರದೇ ಎಂದು ಹೇಳಲು ಬರುವುದಿಲ್ಲ. ಹುಡುಗಿಯರ ಚುಡಾಯಿಸುವುದು ಇದ್ದೀತು.' ಒಬ್ಬ ಸವರ್ಣೀಯ ಹುಡುಗ 'ಹಳೆ ಕಬ್ಬಡಿ ಮಚ್ಚರ', ಅಂದರೆ ಇನ್ನೊಬ್ಬ, 'ಸೈಕಲ್‌ಸ್ಟ್ಯಾಂಡ್ ತೆಗೆಯುವಾಗ ಹರಿಜನ ಹುಡುಗನ ಬೂಡ್ಸು ನಮ್ಮವನಿಗೆ ತಗುಲಿತಂತೆ' ಅಂದನು. ಹಾಗೆ ಒಬ್ಬ ದಲಿತ ಹುಡುಗನ ಪ್ರಕಾರ

'ಮೇಲ್ಜಾತಿಯವರ ಮುಂದೆ ಸ್ಟೈಲಾಗಿ ಹೊಲಾರು ಮಾದಿಗರು ತಿರುಗ್ತಾರಲ್ಲಾ' ಎಂಬುದು. ತ.ಹ. ನಾಗರಾಜನ್ ನೋವಿನಿಂದ ನುಡಿದರು– 'ಪರಸ್ಪರ ಸಮನಾಗಿ ವ್ಯವಹರಿಸಲು ಸವರ್ಣೀಯರು ಸಿದ್ಧರಿಲ್ಲವಾದ್ದರಿಂದ ಇದೆಲ್ಲ'. ಕೊನೆಗೆ ಸಣ್ಣ ಹೋಟ್ಲಲ್ಲಿ ಟೀ ಕುಡಿಯುತ್ತಿದ್ದ ಒಬ್ಬ ಅಂದನು: 'ಕಾರಣ ಇದ್ದೂ ಜಗಳ ಆದ್ರೆ ಒಂಥರಾ. ಕಾರಣಗಳಿಲ್ಲದೆ ಜಗಳ ಆದ್ರೆ ಏನು ಹೇಳೋದು ನಾವು?' ಎಷ್ಟೇ ಹುಡುಕಿದರೂ ಕಾರಣ ಇಷ್ಟೇ ಇರಬೇಕು ಅನ್ನಿಸಿ ನನಗೆ ಆರ್ಕಿಮಿಡೀಸನಂತೆ ಯುರೇಕಾ ಅನ್ನಬೇಕೆನಿಸಿತು.

**ಹಿಂದುಹಿಂದಕ್ಕೆ**

ಸಾಮಾನ್ಯವಾಗಿ ಎಲ್ಲರೂ ಈ ಗಲಾಟೆಗೆ ಹಳೇ ಗಲಾಟೆ ಕಡೆಗೆ ಬೆರಳು ಮಾಡುತ್ತಿದ್ದರು. ಆ ಹಳೇ ಗಲಾಟೆಯೂ ಇನ್ನೊಂದು ಹಳೇ ಗಲಾಟೆಗೆ ಹಿಂದುವರಿಯುತ್ತಿತ್ತು. 1972ರ ಮಾವಿನಕೆರೆ ಗಲಭೆಯಲ್ಲಿ 'ದಲಿತರು ಹಗಲಲ್ಲೆ ನುಗ್ಗಿ ಲೂಟಿ ಮಾಡಿದರಂತೆ' ಎಂಬುದು ಸವರ್ಣೀಯ ಎಳೆಯರ ಮನಸಲ್ಲಿ ಕತೆಯಾಗಿ ಕೂತಿತ್ತು. ಕಂಡವರು ತಿಳಿಸಿದಂತೆ, ಸ್ವಲ್ಪ ದಾರಿ ತಪ್ಪಿದ ಹೆಣ್ಣಿಗೆ ಉತ್ತಮರೂ ದಲಿತರೂ ಪೈಪೋಟಿ ಮಾಡಿದ್ದಕ್ಕಾಗಿ ನಡೆದ ಹುಡುಗರ ನಡುವಿನ ಜಗಳ ಅದಾಗಿತ್ತು.

ಕಳೆದ ವರ್ಷ, ಹಳ್ಳಿಮೈಸೂರಲ್ಲಿ ಡಾ. ನಾಗರಾಜ್ ಎಂಬ ದಲಿತನು ಒಕ್ಕಲಿಗ ಹುಡುಗಿಯನ್ನು ಮದುವೆಯಾದುದಕ್ಕೆ ದೀಪಾವಳಿಯಂದು ಸವರ್ಣೀಯರು ಅವರ ಮನೆಗೆ ನುಗ್ಗಿ ಆಕೇನ ಎಳೆದಾಡಿ ಆ ಹುಡುಗಿ ಮೈಮೇಲೆ ಸಿಗರೇಟಿಂದ ಸುಟ್ಟು ರಂಪೆಬ್ಬಿಸಿದ್ದನ್ನು ಕಂಪ್ಲೆಂಟು ಕೊಡಲು ಹೋದಾಗ, ಎಸ್.ಐ. ನಂಜೇಗೌಡರು, ಡಾ. ನಾಗರಾಜ್‌ರನ್ನು ಕೂರಲು ಬಿಡದೆ ಬೈಯ್ದು ಕಳಿಸಿದರಂತೆ. ಇದು ಹೊಳೆನರಸೀಪುರದ ದಲಿತರಿಗೆ ತಿಳಿದು ಕೆಲವರು ಕುಪಿತರಾಗಿ ಬಸ್ಸಿನಲ್ಲಿದ್ದ ಹಳ್ಳಿಮೈಸೂರಿನವರಿಗೆ ಹೊಡೆದು ಬಡಿದು ಅಷ್ಟಕ್ಕೂ ಬಿಡದೆ ಕೆಲವರು ಹಳ್ಳಿಮೈಸೂರಿಗೂ ಹೋಗಿ 'ಏನಾರು ಈ ಸಂಸಾರದ ಪ್ರಾಣ ಹೋದರೆ ನಿಮ್ಮಗಳ ಪ್ರಾಣವೂ ಹೋಗುತ್ತೆ' ಎಂದು ಬೆದರಿಸಿದ್ದರಂತೆ. ಒಟ್ಟಿನಲ್ಲಿ ಸಬ್‌ಇನ್ಸ್‌ಪೆಕ್ಟರನ ಕೆಲಸವನ್ನು ಇವರೇ ಮಾಡಿದ್ದರು.

ಮುಂದೆ ನವೆಂಬರ್ 80ರಲ್ಲಿ ಬೊಮ್ಮಯ್ಯ ಎಂಬ ದಲಿತನ ಹೊಲದಲ್ಲಿ ಶಿವಾಚಾರದವನ ದನ ಮೇದುದಕ್ಕೆ ಆತ ಊರಲ್ಲಿ ನ್ಯಾಯ ಕೇಳಲು ಬೈಗಳು ಒದೆತ ಬಿತ್ತು. ಅವನು ಸಬ್‌ಇನ್ಸ್‌ಪೆಕ್ಟರ್ ನಂಜೇಗೌಡರಿಗೆ ಕಂಪ್ಲೆಂಟು

ಕೊಡಲು, ಅವರು ಕಂಪ್ಲೆಂಟು ಬದಲಿಸಿ ಬರೆಸಿ ಜೊತೆಗೆ ಒದ್ದರಂತೆ. ಇದನ್ನು ಪ್ರತಿಭಟಿಸಿ ದಲಿತ ಸಂಘರ್ಷ ಸಮಿತಿಯು ಮೆರವಣಿಗೆ ಮಾಡಿ ನಂಜೇಗೌಡರ ಪ್ರತಿಕೃತಿ ದಹಿಸಿ ವರ್ಗಕ್ಕೆ ಒತ್ತಾಯಿಸಿತು. ಇದಕ್ಕೆ ಹಾಸನದಲ್ಲೂ ಧರಣಿ ನಡೆದಾಗ ಜಿಲ್ಲಾಧಿಕಾರಿಗಳೂ ಎಸ್.ಪಿ.ಯವರೂ ವಿಚಾರಣೆ ಮಾಡಿ ವರ್ಗ ಮಾಡುವುದಾಗಿ ಮಾತು ಕೊಟ್ಟು ಮಾತು ತಪ್ಪಿದ್ದರು.

**ಬೇನಾಮಿ ಪತ್ರದಿಂದಾಗಿ**

ಹಾಲಿ ಈಗ ಈ ಗಲಾಟೆಯಲ್ಲಿ ದಲಿತ ಹುಡುಗ ಹನುಮಂತರಾಜುಗೆ ಚಾಕೇಟು ಹಾಕಿದ್ದು ನಡೆದಿದೆ. ಇದಕ್ಕೆ ಕಾರಣ ಹುಡುಕುತ್ತಾ, ಚಾಕು ಹಾಕಿದ ಶ್ರೀನಿವಾಸನ ಸ್ನೇಹಿತ ವಾಸುದೇವ್ ಪ್ರಕಾರ: 'ನಿಮ್ಮ ಕಡೆ ಹೊಲಾರರನ್ನು ಕೊಬ್ಬಿಸಿದ್ದೀರಿ' ಎಂಬರ್ಥದ ಪತ್ರ ಎಲ್ಲಿಂದಲೊ ಶ್ರೀನಿವಾಸಗೆ ಬಂದದ್ದು, ಅದು ದಲಿತರ ಕೈಗೆ ಸಿಕ್ಕಿತೆಂದೂ ಅದಕ್ಕೆ ದಲಿತರು ಕುಪಿತರಾಗಿ ಸೂರ್ನಳ್ಳಿಗೆ ಹೋಗಿ ಹೀಗಂತ ಬರೆದವನ ತೋರಿಸು ಎಂದು ಶ್ರೀನಿವಾಸನಿಗೆ ದಬಾಯಿಸಿ 'ಕಾಲೇಜಿಗೆ ಬಾ ನೋಡಿಕೊಳ್ತೀನಿ' ಎಂದು ಬೆದರಿಕೆ ಹಾಕಿದರು. ಶ್ರೀನಿವಾಸ ಕಾಲೇಜಿಗೆ ಬಂದವನು ರೇಜರಲ್ಲಿ ಹನುಮಂತರಾಜು ತೋಳಿಗೆ ಗೀರಿ ಪೊಲೀಸ್ ಸ್ಟೇಷನ್‌ಗೆ ಹತ್ತಿದನು. ಇಲ್ಲಿ ಕಾಲೇಜಿನಲ್ಲಿ ಗಲಾಟೆ ಎದ್ದಿತು.

ಆ ಗಲಾಟೆ ಕಂಡ ಪುಟ್ಟರಾಜು ಎಂಬ ಸವರ್ಣೀಯ ಹುಡುಗ ಮಾತು ಮುಂದುವರಿಸಿ– 'ಎಲ್ಲರ್ನು ಹೊಡೆದುಕೊಂಡು ಬರೋಣ ಬಾಗಿಲು ಹಾಕಿ ಎಂದು ದಲಿತರು ಕಾಲೇಜು ಮುಂದೆ ಕೂಗುತ್ತಿದ್ದರು. ಕೆಲವರು ದೊಣ್ಣೆ ಹಿಡಿದಿದ್ದರು. ಬಾಗಿಲಲ್ಲಿ ಕವರ್ ಆಗಿ ಯಾರನ್ನೂ ಹೊರಕ್ಕೆ ಬಿಡುತ್ತಿರಲಿಲ್ಲ. ವೇಣುಗೋಪಾಲನಿಗೆ ಚೆನ್ನಾಗಿ ಹೊಡೆದರು. ಆಗ ಸಬ್‌ಇನ್ಸ್‌ಪೆಕ್ಟರ್ ನಂಜೇಗೌಡರು ಲಾಠಿ ಛಾರ್ಜು ಮಾಡಿದರು. ಜನ ರೊಚ್ಚಿಗೆದ್ದು ನಂಜೇಗೌಡರಿಗೆ ಹೊಡೆದರು. ನಂಜೇಗೌಡರು ಟೋಪಿನೆ ಬೀಳಿಸಿಕೊಂಡು ಒಳಕ್ಕೆ ಓಡಿ ಹೋಗಿ ಬಾಗಿಲು ಮುಚ್ಚಿಕೊಂಡರು' ಎಂದು ನಗು ಬಂದು ಮಾತು ನಿಲ್ಲಿಸಿದನು. ತರುಣ ವಕೀಲ ಸೋಮೇಗೌಡರು 'ಶ್ರೀನಿವಾಸ ತುಂಬಾ ಒಳ್ಳೇ ಹುಡುಗ, ಯಾರೋ ಹೇಳಿಕೊಟ್ಟೇ ಮಾಡಿಸಿರಬೇಕು. ಅವನು ನೆಂಟರಾದ ಸೂರ್ನಳ್ಳಿ ಲಕ್ಷ್ಮಣಗೌಡರ ಮನೇಲಿದ್ದನು. ಲಕ್ಷಣಗೌಡರು ದೇವರಂಥವರು. ಈಗ ಇದಕ್ಕಾಗಿ ಶ್ರೀನಿವಾಸನನ್ನು ಮನೇನೆ ಬಿಡಿಸಿರುವರು' ಎಂಬುದನ್ನು ತಿಳಿಸಿದರು.

**ಚಾಕು, ಹಾಕಿಸಿದ್ದು?**
ಮೇಲಿನಂತೆ ದಲಿತ ಹುಡುಗರು ಶನಿವಾರ ಸೂರ್ನಳ್ಳಿಗೆ ಹೋಗಿ ಶ್ರೀನಿವಾಸನಿಗೆ ಬೆದರಿಕೆ ಹಾಕಿದ್ದು, ಭಾನುವಾರ ನಿಡೂಣಿ ಗಲಾಟೆಗೆ ಸಬ್‌ಇನ್ಸ್‌ಪೆಕ್ಟರ್ ನಂಜೇಗೌಡರ ಪ್ರತಿಕೃತಿ ದಹನ ನಡೆದಿದ್ದು, ಸೋಮವಾರ ಒಳ್ಳೆ ಹುಡುಗನಾದ ಶ್ರೀನಿವಾಸ ಚಾಕು ಹಾಕಿದ್ದಾನೆ. ಶನಿವಾರ ಶ್ರೀನಿವಾಸನಿಗೆ ಬೆದರಿಕೆ ಹಾಕಿದ ಮೇಲೆ ಅವನು ಭಾನುವಾರ ನಂಜೇಗೌಡರನ್ನು ರಕ್ಷಣೆಗಾಗಿ ಕಂಡಾಗ ಅವರು ತಮ್ಮ ಪ್ರತಿಕೃತಿ ದಹನದಿಂದ ಕುಪಿತರಾಗಿದ್ದು 'ಚಾಕು ಹಾಕು, ನಾನಿದ್ದೀನಿ' ಎಂದು ಹೇಳಿದ್ದಕ್ಕೆ ಸೋಮವಾರ ಚಾಕು ಹಾಕಿದನೆಂದು ದಲಿತರು ಹೇಳುತ್ತಿದ್ದುದನ್ನು ನಂಬದಿದ್ದ ನಾನು, ಈ ಬಗ್ಗೆ ಸವರ್ಣೀಯರು ಹೇಳಿದ ಕ್ರಮದಿಂದಲೆ ಅನಿವಾರ್ಯವಾಗಿ ನಂಬಬೇಕಾಯ್ತು. ಅನುಮತಿಯಿಲ್ಲದೆ ನಂಜೇಗೌಡರು ಲಾಠಿ ಛಾರ್ಜು ಮಾಡಿದ್ದೂ ಅರ್ಥವಾಯಿತು. ನಂಜೇಗೌಡರು ನನಗೆ ಸ್ವಲ್ಪ ಪರಿಚಿತರಾದ್ದರಿಂದ ನೋವೂ ಆಯಿತು.

ಈ ಸಂದರ್ಭದಲ್ಲೆ ಸಾವಿರಾರು ಸವರ್ಣೀಯರು ಮೆರವಣಿಗೇಲಿ ದಲಿತರ ಕೇರಿಗೆ ನುಗ್ಗಲು ಹೊರಟು, ಆ ಕಡೆ ದಲಿತರ ಕೇರಿಯೂ ಜಗಳಕ್ಕೇ ಸಿದ್ಧವಾಗಿದ್ದು ತಹಸೀಲ್ದಾರ್ ತಿಪ್ಪೇಸ್ವಾಮಿಯವರು ಮೆರವಣಿಗೆಕಾರರಿಗೆ 'ನನ್ನ ಸಾಯಿಸಿ ಹೋಗಿ' ಅಂತ ಮಧ್ಯೆ ಕುಂತು ಆ ಕಡೆ ಐವತ್ತು ಈ ಕಡೆ ಐವತ್ತು ಜನರ ಪ್ರಾಣಗಳನ್ನು ಉಳಿಸಿದ್ದಾಗಿ ಎರಡು ಕಡೆಯವರೂ ತಿಳಿಸಿದರು.

ದಲಿತ ಹುಡುಗರಲ್ಲಿ ಯಾರೂ ನಿಮಗೆ ಸ್ನೇಹಿತರಿಲ್ಲವೆ ಎಂದು ವಾಸು, ಪುಟ್ಟರಾಜು ಮುಂತಾದವರನ್ನು ಕೇಳಿದಾಗ ಪ್ರಶ್ನೆ ತಪ್ಪಿಸುವಂತೆ ನಕ್ಕರು. ವಾಸು 'ರಿಯಲ್ ಆಗಿ ಯಾರನ್ನೂ ಫ್ರೆಂಡ್ಸ್ ಮಾಡಿಕೊಂಡಿಲ್ಲ' ಅಂದನು. ಯಾಕೆ ಅಂದಾಗ ಯೋಚಿಸಿ– 'ಎಸ್ಸೆಲ್ಸೀಲಿ ಒಬ್ಬ ಸ್ನೇಹಿತನಿದ್ದ. ಅವ ಪ್ರತಿ ಗಲಾಟೇಲು ಬರ್‍ತಿದ್ದ. ಈ ಗಲಾಟೇಲಿ ಬಂದಿಲ್ಲ' ಅಂದನು. ಪುಟ್ಟರಾಜನು ತನ್ನ ದಲಿತ ಸ್ನೇಹಿತನ ನೆನಪಿಸಿಕೊಂಡನು. ಆ ಗುಂಪಿನಲ್ಲಿ ಮತ್ತಾರೂ ಮಾತಾಡಲಿಲ್ಲ.

ಈ ಹುಡುಗರು ಜಾತಿ ಮತ ಗುಂಪಲ್ಲಿ ಇಲ್ಲದಿದ್ದಾಗ ವ್ಯಕ್ತಿಗತವಾಗಿ ತುಂಬಾ ಒಳ್ಳೆಯವರೆನಿಸಿತು. ಯಾರ ಹೊಟ್ಟೆಯೊಳಗೂ ಕೆಡುಕಿಲ್ಲ ಅನ್ನಿಸಿತು. ಆದರೂ ಯಾಕೆ ಇದೆಲ್ಲ ಆಗುತ್ತಿದೆ ಎಂದು ತಲೆಗೂದಲು ಕಿತ್ತುಕೊಂಡೆ. ನನ್ನ ತಲೆ ತುಂಬಾ ಇದ್ದ ಚಿಂತೆಯನ್ನು ತ.ಹ.ನಾಗರಾಜ್ ಮಕ್ಕಳು ಕಿತ್ತೆಸೆದು ಮಾಮಾ ಮಾಮಾ ಎಂದು ಸುತ್ತುವರೆದು ಉಸಿರಾಡುವಂತೆ ಮಾಡಿ ಉಳಿಸುತ್ತಿದ್ದವು.

**ಮಾತು, ಮಾತಿಗೆ ಬೆಳೆದು....**

ಮಾರ್ಚ್ ಇಪ್ಪತ್ತರ ಹೊಳೆನರಸೀಪುರ ಗಲಭೆಯಲ್ಲಾದ ಹನುಮಂತರಾಜು ತೋಳಲ್ಲಿ ಉಳಿದಿರುವ ಗಾಯದ ಗುರುತಿಗೆ, ಪೊಲೀಸರ ಬೆಂಬಲ ತಮಗಿದೆಯೆಂಬ ಸವರ್ಣೀಯರ ನಂಬಿಕೆಯೂ ಕಾರಣ. ಸವರ್ಣೀಯ ಹುಡುಗ ಪುಟ್ಟರಾಜು ಕಂಡದ್ದು ಹೀಗಿದೆ: "ರಾತ್ರಿ ಎಂಟೂವರೆ ಗಂಟೇಲಿ ನಾವು ಸರ್ಕಲ್‌ಗೆ ಬಂದೊ. ಹರಿಜನ ಹುಡುಗರೂ ನಮ್ಮ ಹುಡುಗರೂವೆ ನಿಂತಿದ್ದರು. ಹರಿಜನ ಹುಡುಗ ನಮ್ಮ ಹುಡುಗರಿಗೆ 'ನಮ್ಮ ಮೇಲೆ ಬರ್ತಾ ಇದ್ದೀರ ಮಕ್ಕಳ! ಮಗ್ನೆ ನಿಂಗೆ ಎಷ್ಟು ದಪ ಬಿಡಿಸಿದ್ದೀವಿ ನಾವು! ಕುಸ್ತಿ ಮಾಡ್ತಿಯೇನೊ ನನ್ಮೇಲೆ ಎಂದು ನಮ್ಮ ಹುಡುಗನಿಗೆ ತೊಡೆ ತಟ್ಟುತ್ತ ದಬಾಯಿಸುತ್ತಿದ್ದನು. ನಮ್ಮ ಕಡೆ ಹುಡುಗ 'ನಮ್ಮ ಪೇಟೆಗೆ ಬಂದು ಕೊಬ್ಬಾಡ್ತೀಯಾ' ಎಂದು ಆ ಕಡೆಯವನಿಗೆ ಹೊಡೆದನು. ಆಗ ಗಲಾಟೆ ಹೆಚ್ಚಿತು. ಹರಿಜನರು ಆರೇಳು ಜನ, ನಮ್ಮ ಕಡೆಯವರು ಇಪ್ಪತ್ತು ಜನರಷ್ಟು, ಹರಿಜನರಿಗೆ ಸಕತ್ತು ಏಟು ಬಿತ್ತು" ಎಂದನು. ಆಗ ನಿನಗೇನು ಅನ್ನಿಸಿತು ಎಂದು ಕೇಳುವುದನ್ನು ಮರೆತೆ.

ಏಟುಂಡ ದಲಿತ ಹುಡುಗ ಹೇಳಿದ: 'ನಾವು ಜಾತ್ರೆ ನೋಡ್ಕಂಡು ಐದಾರು ಜನ ಬರ್ತಿದ್ದೊ. ಚಂದ್ರಹಾಸ ಸತ್ಯ ಎಂಬುವರು ಬೂಟುಕಾಲಲ್ಲಿ ನನಗೆ ಒದ್ದುಕೊಂಡು ಹೋದರು. ಮಾತು ಮಾತಿಗೆ ಬೆಳೀತು. ಅವರ ಕಡೆಯವರು ಎಲ್ಲಿದ್ದರೊ ಕವರ್ ಆದರು. ಏನೇನು ತಂದಿದ್ದರೋ ಯಾತಾತರಲ್ಲೊ ಹೊಡೆದರು. ಚಾಕು ಹಾಕಿದರು. ಕಣ್ಣಿಗೆ ಕತ್ತಲಿಡಿದು ಬಿದ್ದೆ.' ಇನ್ನೊಬ್ಬ ಮಾತಾಡಲೂ ಕಷ್ಟಪಡುತ್ತಿದ್ದ ಚಂದ್ರಶೇಖರ್ ಮೂರು ಮಾತು ಆಡಿದನು: 'ಮೂವತ್ತು ನಲವತ್ತು ಜನರ ಗುಂಪು ಮುತ್ತಿಕೊಂಡು ಹೊಡೆದರು. ಕೆಳಗೆ ಬಿದ್ದವರನ್ನು ಎತ್ತಿ ಎತ್ತಿ ನಿಲ್ಲಿಸಿ ಹೊಡೆದರು, ಪ್ರಜ್ಞೆ ತಪ್ಪಿತು.' ಈ ಚಂದ್ರಶೇಖರನಿಗೆ ಕಿವಿ ತಲೆಗೆ ಏಟು ಬಿದ್ದುದರಿಂದ ಮಾತಾಡಿದರೆ ಡಬಲ್ ಸೌಂಡ್ ಬರುತ್ತಿತ್ತೆಂದು ತಿಳಿಯಿತು. ಇಂಥವರೊಡನೆ, ಆಸ್ಪತ್ರೆಗೆ ಸೇರಿದ ಮಕ್ಕಳನ್ನು ನೋಡಿ ಬರುತ್ತಿದ್ದ ಬಾಗಲಯ್ಯ, ಈರಯ್ಯರೆಂಬ ಅರವತ್ತರ ಮೇಲಿನ ಮುದುಕರಿಗೆ ಕೈ ಮುಗಿದರೂ ಬಿಡದೆ ಸವರ್ಣೀಯರ ಗುಂಪು ಹೊಡೆದು ಬುರುಡೆಗಳಿಗೆ ಹೊಲಿಗೆ ಹಾಕಿಸಿದೆ, ತಲೆಗೆ ಎದೆಗೆ ಬ್ಯಾಂಡೇಜ್ ಕಟ್ಟಿಸಿದೆ.

ಅಂದು ತಂದೆಯೊಬ್ಬರು ಅನುಭವಿಸಿದ ಸ್ಥಿತಿಯನ್ನು ಇಂಜಿನಿಯರ್ ಜವರಯ್ಯನವರ ಮಾತುಗಳಲ್ಲಿ ಹೇಳುವೆ: 'ನನ್ನ ಮಗ ಪ್ರಜ್ಞೆ ತಪ್ಪಿ ಆಸ್ಪತ್ರೆ ಸೇರಿದ್ದು ತಿಳೀತು. ಜನರೆಲ್ಲ ಸೇರುತ್ತಿದ್ದರು. ನನಗೂ ನೋಡಾಕೆ ಬಿಡ್ತ ಇಲ್ಲ.

ನನಗೆ ನನ್ನ ಮಗನ ನೋಡೋ ತವಕ. ಒಂದು ಪಶುಪಕ್ಷಿಗೂ ಹೃದಯ ಇರುತ್ತೆ, ನಾಳೆ ಮಗನಿಗೆ ಪರೀಕ್ಷೆ ಬೇರೆ. ಕೊನೆಗೆ ನೋಡಲು ಬಿಟ್ಟರು. ಎಲ್ಲರೂ ಪ್ರಜ್ಞೆ ತಪ್ಪಿ ದಿಕ್ಕಾಪಾಲು ಬಿದ್ದಿದ್ದರು. ನಿಲ್ಲಾಕು ಆಗದೆ ಮನೆಗೆ ಬಂದೆ. ಹಿಂಗೇ ಕುಂತಿದ್ದೆ. ನನ್ನ ಹೆಂಡ್ತಿ ಕಿಚ್ಚು ತಡೆಯಲಾರದೆ ಹೊರಗೆ ಧಾಳಿ ಮಾಡುತ್ತಿದ್ದ ಪೊಲೀಸರನ್ನು ಬಯ್ಯುತ್ತಿದ್ದಳು. ಪೊಲೀಸರು ಪ್ರಾಣ ಕಳೆದುಕೊಳ್ಳುವಂಥ ಮಾತುಗಳಾಡುತ್ತಿದ್ದರು. ನಾನು, ನನ್ನ ಹೆಂಡ್ತೀಯನ್ನೆ ಬಯ್ದು ಒಳಕ್ಕೆ ಕರೆತಂದೆ. ನನ್ನ ಹೆಂಡ್ತಿಯೆ ಪ್ರತಿಭಟಿಸುತ್ತಿರುವಾಗ ನನಗೇ ಆಗುತ್ತಿಲ್ಲವಲ್ಲ ದೇವರೇ ಅಂದುಕೊಂಡೆ. ನಿದ್ದೆ ಬರಲಿಲ್ಲ. ನನ್ನ ದೇಹ ನಿಲ್ಲಕ್ಕೂ ಆಗದೆ ಕೂರಕ್ಕೂ ಆಗದೆ ಮಲಗಕ್ಕೂ ಆಗದೆ ನಡುಗುತ್ತಿತ್ತು.'

**ದಲಿತರ ದಾಂಧಲೆ**

ಮೇಲಿನಂಥ ಸ್ಥಿತಿಯನ್ನು ನುಂಗಿಕೊಳ್ಳಲಾಗದೆ ಕುಪಿತರಾದ ದಲಿತರ ಗುಂಪು ದೊಣ್ಣೆ ಚಾಕು ಹಿಡಿದು ಸವರ್ಣೀಯರ ಪೇಟೆಗೆ ನುಗ್ಗಿ ದಾಂಧಲೆಗೆ ಬಿದ್ದಿತ್ತು. ತ.ಹ.ನಾಗರಾಜ್ ಪತ್ನಿ ಗಂಗಾರವರು ಹೆದರಿ ಒಳಗೆ ಕುಳಿತಿದ್ದಾಗ 'ಕೂಗಾಟ, ಕಲ್ಲು ತೂರುವುದು, ದಡಬಡ ಸದ್ದು ಕೇಳಿಸುತ್ತಿತ್ತು ಒಂದ್ಸಲ ಧೈರ್ಯ ಮಾಡಿ ಬಾಗಿಲು ತೆಗೆದಾಗ ಹತ್ತಾರು ಜನ ದೊಣ್ಣೆ ಹಿಡಿದು ಓಡುವುದು ಕಂಡಿತು' ಎಂದರು. ಈ ಬಗೆಯಲ್ಲಿದ್ದ ಗುಂಪು ಒಂದು ಸೆಲೂನಿನ ಗಾಜನ್ನು ಪುಡಿ ಪುಡಿ ಮಾಡಿದೆ. ಚಪ್ಪಲಿ ಅಂಗಡಿ ಚೆಲ್ಲಾಪಿಲ್ಲಿ ಮಾಡಿದೆ. ಕಬ್ಬಿನ ಹಾಲಿನ ಅಂಗಡಿಗೆ ಜಖಂ ಮಾಡಿದೆ. ಬ್ರಾಹ್ಮಣರ ರಾಘವೇಂದ್ರ ಭವನ್ ಎಂದಿದ್ದ ಬೋರ್ಡನ್ನು ಸೀಳಿದೆ. ತಮ್ಮ ಸೇಡಿಗೆ ಕಾರಣರಾದ ನಾಲ್ವರ ಮನೆಗೆ ನುಗ್ಗಿ ಅವರು ಇಲ್ಲದಿದ್ದಾಗ ಎದುರಿಗಿದ್ದ ವಸ್ತುಗಳನ್ನು ಚೆಲ್ಲಾಪಿಲ್ಲಿ ಮಾಡಿ ಯಾವ ವಸ್ತುವನ್ನೂ ಕದಿಯದೆ ಹೊರಬಂದಿದೆ.

ಹೀಗೆಯೇ ಕಮಲಮ್ಮನವರ ಮನೆಗೆ ಅವರ ಮಗನನ್ನು ಹುಡುಕುತ್ತಾ ನುಗ್ಗಿದಾಗ, ಆಕೆ ಆ ಗುಂಪನ್ನು ತಡೆದಾಗ ಎಳೆದಾಟವಾಗಿ ಎರಡೆಳೆ ಮಾಂಗಲ್ಯಸರದಲ್ಲಿ ಒಂದೆಳೆ ಕಿತ್ತಿದೆ. ಕಮಲಮ್ಮನವರ ಕಡೆಗೆ ಒಬ್ಬ ಚಾಕು ಎತ್ತಿದಾಗ ಆ ಗುಂಪಲ್ಲೆ ಇನ್ನೊಬ್ಬ ತಡೆದು ದುರಂತ ತಪ್ಪಿದೆ.

ಈ ಗುಂಪು ಬೇಕಾದವರ ಮನೆಗಳಿಗೆ ಮಾತ್ರವೆ ನುಗ್ಗಿದ್ದರೂ ದಾರೀಲಿ ಆದಷ್ಟು ಮನೆಗಳ ಮೇಲೆ ಕಲ್ಲು ತೂರಿದೆ. ಮಿಠಾಯಿ ಅಂಗಡಿ ನರಸಿಂಹಯ್ಯನವರು ಗಾಬರಿಯಾಗಿ ಅಂಗಡಿ ಬಾಗಿಲು ಮುಚ್ಚುವಾಗ ಅವರ ಮಗನ ಮೇಲಿನ

ಸೇಡಿಗೆ ಅಪ್ಪನಿಗೆ ಬಡಿದಿರುವರು. ನರಸಿಂಹಯ್ಯನವರಿಗೆ ಮುಂಗೈಗೆ ಏಟು ಬಿದ್ದಿದೆ, ಬ್ಲೇಡಿನಲ್ಲಿ ಗೀರಿರುವರು. ಅವರ ಅಂಗಡಿಯ ಖಾರಸೇವು ಚೆಲ್ಲಾಡಿರುವರು. ಇನ್ನೂ ಸ್ವಲ್ಪ ಗಾಬರಿಯಲ್ಲಿದ್ದ ನರಸಿಂಹಯ್ಯನವರು 'ಗುಂಪು, ಕಂಡದ್ದನ್ನು ಬೀಸಾಕೋದು, ಹೊಡೆದು ಓಡೋದು ಮಾಡುತ್ತಿತ್ತು' ಅಂದರು.

ಹೀಗೆಲ್ಲ ದಲಿತರು ಮಾಡಿದ ದಾಂಧಲೆಯು ಆಗತಾನೇ ನಿದ್ದೆಗೆ ಕಣ್ಮುಚ್ಚುತ್ತಿದ್ದ ಹೊಳೆನರಸೀಪುರವನ್ನು ಬೆಚ್ಚಿ ಬೀಳಿಸಿದೆ. ಆಮೇಲೆ ಸವರ್ಣೀಯರು ದೊಣ್ಣೆ ಮಚ್ಚು ಹಿಡಿದು ಮತ್ತೇನಾರು ಬಂದಲ್ಲಿ ಹೊಡೆಯಲು ಗುಂಪಾದರು. ಆ ರಾತ್ರಿಯಲ್ಲಿ ಜನ ಜನಗಳ ನಡುವೆ ಗಲಾಟೆ ಗದ್ದಲ ಆಗಲಿಲ್ಲ. ಆದರೆ...

**ಪೊಲೀಸರ ಬೂಟ್ಸ್ ಬಂತು**

ಆದರೆ, ಎಲ್ಲಾ ಕಡೆಯಿಂದಲೂ ಧಾವಿಸಿ ಬಂದ ಪೊಲೀಸರು ದಲಿತರ ಕೇರಿಗೆ ವ್ಯಾನುಗಟ್ಟಲೆ ನುಗ್ಗಿ, ದಲಿತರು ಸವರ್ಣೀಯರಿಗೆ ಮಾಡಿದ ಹತ್ತರಷ್ಟನ್ನು ಮಾಡಿ ತಮ್ಮ ಸೇಡನ್ನೂ ಸವರ್ಣೀಯರ ಸೇಡನ್ನೂ ಒಟ್ಟಿಗೆ ತೀರಿಸಿ ಇನ್ನೂ ಮಿಕ್ಕಿಸಿದೆ. ಪೊಲೀಸು ಎಂಬುದು ಮನೆ ಮನೆಗೆ ನುಗ್ಗಿ ಇದ್ದವರನ್ನು ಹೊರ ಎಳೆದು ಬಡಿದು ವ್ಯಾನಿಗೆ ತುಂಬಿದೆ. ಹೆಂಗಸರಿಗೂ ಮುದುಕರಿಗೂ ಕಣ್ಣಿಲ್ಲದೆ ಚಚ್ಚಿಟ್ಟಿದೆ. ಹಬ್ಬಕ್ಕೆ ಬಂದಿದ್ದ ನೆಂಟರ ಮೇಲೂ ಕೇಸಾಕಿ ಅವರು ಮುಂದಿನ ಹಬ್ಬಕ್ಕೆ ಬರಬಾರದಂತೆ ಮಾಡಿದೆ. ಗಲಾಟೆಗೆ ಸಂಬಂಧಿಸದ ವಿದ್ಯಾರ್ಥಿ ಸರ್ಕಾರಿ ನೌಕರರನ್ನು ಹುಡುಕ್ಹುಡುಕಿ ಕೇಸ್ಹಾಕಿ ಯಾಕಪ್ಪ ಓದಿದೆವೊ ಅನ್ನಿಸಿದೆ. ಮನೆ ಮನೆ ಬಾಗಿಲುಗಳಲ್ಲಿ ಅಚ್ಚೊತ್ತಿದ್ದ ಪೊಲೀಸರ ಬೂಟ್ಸ್ ಗುರುತುಗಳನ್ನು ನೂರಾರು ಕಂಡೆ. ಅನ್ನ ತಿನ್ನುವಾಗ ನುಗ್ಗಿದ ಪೊಲೀಸರು ತುಳಿದು ಚಿಂದಿ ಮಾಡಿಟ್ಟಿದ್ದ ಊಟದ ತಟ್ಟೆ ಚೆಂಬುಗಳನ್ನು ಕಂಡೆ. ಒಬ್ಬ ಪೊಲೀಸಿನವನೇ ಕರಗಿ 'ಬಿಡ್ರಿ ಬಿಡ್ರಿ ನಮಗಾದ್ರೂ ಇದೆ ಸ್ಥಿತಿಯಲ್ವ, ಸ್ವಲ್ಪ ಸಮಾಧಾನವಾಗಿರಿ' ಎಂದು ಹೇಳುವಷ್ಟು ಭೀಕರವಾಗಿ ಪೊಲೀಸು ನಡೆದಿತ್ತು.

ನೂರು ವರ್ಷದ ಹೊನ್ನಮ್ಮ– 'ಇಲ್ಲೆ ಜಗುಲೀಲಿ ಕುಂತಿದ್ದೆ. ಪೊಲೀಸರು ಬಂದರು. ಏಳ್‌ಮೇಕ್ ಅಂದರು. ಅಪ್ಪಾ ನನಗೆ ಕಣ್ಣು ಕಾಣಿಸದು, ತೊಡೆ ಬರದು ಅಂದೆ. 'ಮಾತು ಬರುತ್ತಾ' ಅಂತ ತಗದು ಒದ್ದುಬಿಟ್ಟರು. ಭೂಮಿಗೆ ಆತುಕೊಂಡುಬಿಟ್ಟೆ' ಅಂದರು. ಪೊಲೀಸು ಹೊನ್ನಮ್ಮನ ಮಾತಾಡಿಸಿಯಾದರೂ ಹೊಡೆದರೆ, ರೇಷ್ಮೆ ಇಲಾಖೆ ಡೈರೆಕ್ಟರ್ ಕೇಶವಮೂರ್ತಿ ತಾಯಿಗೆ ಮಾತಾಡಕ್ಕೂ ಬಿಡದಂತೆ ಹೊಡೆದಿದೆ. ಈಕೆ, ಪೊಲೀಸರು ಊದಿಸಿದ

ತೋಳು ತೆಗೆದುಕೊಂಡು ಆಸ್ಪತ್ರೆಗೆ ಹೋದರೆ ಅಲ್ಲಿ 'ಹೋಗಮ್ಮೊ, ಎ.ಕೆ. ಕಾಲೋನಿಯವರಿಗೇನ ಆಸ್ಪತ್ರೆ ಇಟ್ಟಿರೋದು' ಎಂದು ಹಿಂದಕ್ಕೆ ಕಳಿಸಿರುವರು. ಆಕೆ, 'ನಾನು ಏನು ಪಾಪ ಮಾಡಿದ್ದನಪ್ಪಾ ದೇವರೇ' ಅಂದುಕೊಂಡು ಊದಲಿಗೆ ಸೊಪ್ಪೌಷಧಿ ಕಟ್ಟಿದ್ದರು. ಆ ನೋವಿಗೆ ಚಳಿಜ್ವರ ಬಂದಿದ್ದ ಆಕೆ– 'ಖಾಕಿ ಧರಿಸಿನವರು ಮುದುಕರ್ನೂ ಸಹ ಬಡಿಯೋರು, ಮಕ್ಕಳ್ನೂ ಸಹ ಬಡಿಯೋರು, ಬೀದಿ ಬೀದಿಗೆ ನುಗ್ಗಿ ಸಂಹಾರ ಮಾಡಿಕೊಂಡು ಹೋದರು' ಎಂದು ನಿಟ್ಟುಸಿರಾಗಿ ಕುಂತರು.

**ಸಮಾನ ನಡೆಯಲು ಹೋಗಿ...**

ಇದೆಲ್ಲ ಕಂಡ ಮೇಲೆ ನನಗೆ, ಅಸ್ಪೃಶ್ಯರು ತಾವೂ ಇತರರ ಸಮಾನ ನಡೆಯಲು ಪ್ರಯತ್ನಿಸುತ್ತಿರುವುದು, ಅದಕ್ಕೆ ಸವರ್ಣೀಯ ಮನಸ್ಸು ಒಪ್ಪದಿರುವುದು– ಈ ಎರಡರ ನಡುವೆ ನಡೆದಿರುವ ತುಯ್ದಾಟ ಈ ಎಲ್ಲಾ ಕ್ಷೋಭೆಗೆ ಮೂಲವೆನಿಸಿತು.

ಹೊಳೆನರಸೀಪುರ ಅಂಬೇಡ್ಕರ್ ನಗರದ ದಲಿತರನ್ನು ಇಡೀ ತಾಲ್ಲೂಕಿನ ಸವರ್ಣೀಯರೆಲ್ಲ ಸೇರಿಸಿಯೂ ಕಬಡ್ಡಿ ಆಟದಲ್ಲಿ ಸೋಲಿಸುವುದು ಕಷ್ಟ ಎಂಬ ಕಾರಣಕ್ಕೆ ಒಂದ್ಸಲ ಸವರ್ಣೀಯರು ಸ್ಕೋರ್ ಷೀಟನ್ನೆ ಕಿತ್ತುಕೊಂಡು ಹೋದರೆ, ಇನ್ನೊಂದು ಸಲ ದಲಿತರು ಗೆದ್ದುದಕ್ಕೆ 'ಆಟ ಸುಮ್ಮನೆ ಇಟ್ಟಿದ್ದೊ' ಅಂತ್ಹೇಳಿ ಪ್ರೈಜು ಷೀಲ್ಡನ್ನೇ ಮುಚ್ಚಿಹಾಕಿದ್ದು ಈಗ ಕಬಡ್ಡಿಯೇ ನಿಂತಿತ್ತು.

ನಮ್ಮ ಉಮಾ ಬಸವಣ್ಣಪ್ಪರ ಮಗಳು ಆರು ವರ್ಷದ ವಿನುತ ಹೇಳುವ 'ನಮ್ಮ ಅಪ್ಪನೂ ನಿಮ್ಮ ಅಪ್ಪನೂ, ಅವರ ಅಜ್ಜನೂ ಇವರ ಅಜ್ಜನೂ, ಅವರಜ್ಜನಜ್ಜನೂ ಇವರಜ್ಜನಜ್ಜನೂ ಕೋತಿಗಳಾಗಿದ್ದರು' ಎಂಬ ಸತ್ಯವನ್ನು ಈಗ ಹಾಲಿ ಹುಟ್ಟಿರುವವರು ಹಾಳಾಗಿ ಹೋಗಲಿ, ಈಗಾಗಲೇ ತಾಯ ಗರ್ಭದಲ್ಲಿದ್ದು ಜಾತಿ ಗಾಳಿ ಉಸಿರಾಡುವ ತಾಯ ರಕ್ತದಿಂದಾಗಿರುವ ಶಿಶುಗಳೂ ಭ್ರೂಣಗಳೂ ಹೋಗಲಿ, ಇದರಿಂದಾಚೆಗಿರುವ ಭ್ರೂಣಪೂರ್ವ ಸ್ಥಿತಿಗಾದರೂ ಈ ಮಾನವ ಮೂಲದ ಕಟುಸತ್ಯ ಹೇಳಿಕೊಡದಿದ್ದರೆ ನಮಗೆ ಉಳಿಗಾಲವಿಲ್ಲವೆನ್ನಿಸಿತು.

ಇದರೊಡನೆ ಇಲ್ಲಿ ಗಲಭೆ ನಡೆಯುವಾಗಲೂ ದಲಿತರ ಕೇರಿಯಲ್ಲಿದ್ದ ಹೊಲಿಗೆ ಸೆಂಟರ್‌ಗೆ ಯಾವ ಅಳುಕೂ ಇಲ್ಲದೆ ಪೇಟೆಯಿಂದ ಬರುತ್ತಿದ್ದ ಸವರ್ಣೀಯ ಹೆಣ್ಣು ಮಕ್ಕಳು ದೊಡ್ಡ ಭರವಸೆಯಾಗೂ ಕಾಣಿಸಿತು.

**ನಡಾವಳಿ ಪತ್ರ**

ಮಾತು ಮಾತಿನ ನಡುವೆ ಲೇಖಕ ತ.ಹ. ನಾಗರಾಜನ್‌ರು ದಲಿತ ಹುಡುಗು ಮನಸ್ಸಿಗೆ ಕನ್ನಡಿ ಹಿಡಿದಂಥ ಒಂದು ಘಟನೆ ತಿಳಿಸಿದರು: 'ನಾರಾಯಣ ಪುಂಡ ಅಂತ ಎಲ್ಲಾ ಉಪಾಧ್ಯಾಯರಿಗೂ ಹೆದರಿಕೆ. ಆತನದು ಕಾಲೇಜಿನ ಎಲಕ್ಷನ್‌ಗೆ ಸಂಬಂಧಿಸಿದ ಗಲಾಟೇನೂ ಇತ್ತು. ಹುಡುಗಿಯರನ್ನೂ ಚುಡಾಯಿಸುತ್ತಿದ್ದನಂತೆ. ಈ ಹುಡುಗ ಪ್ರಿನ್ಸಿಪಾಲರಿಂದ ನಡವಳಿಕೆ ಪತ್ರ ಕೇಳಿದರೆ ಅವರು ಕೊಡಲಿಲ್ಲವಂತೆ. ಯಾಕೆ ಕೊಡಲ್ಲ ಅಂತ ಇವ್ನೂ ದಬಾಯಿಸಿದ. ಅಸಹನೆಯಿಂದ 'ಅವರ್ನ ಹೊಡೀತೀನಿ ಇವರ್ನ ಹೊಡೀತೀನಿ' ಅಂತ ಕೂಗಾಡ್ತ ಅಡ್ಡಾಡ್ತ ಇದ್ದ. ಲೆಕ್ಚರರ್‌ಗಳು ಮೂಲೆ ಹಿಡಿದು ನಿಂತಿದ್ದರು. ಆಮೇಲೆ ನನ್ನನ್ನು ತಡೆದರೂ ನಾನು ನಾರಾಯಣನ ಬಳಿ ಹೋಗಿ ಅವನ ಹೆಗಲ ಮೇಲೆ ಕೈ ಹಾಕಿ 'ಏನೊ ಇದೆಲ್ಲ? ಯಾರ್‍ಯಾರೊ ಮೇಸ್ಟರನ್ನ ಹೊಡೀಬೇಕು ಅಂತಿದ್ದಿಯಂತಲ್ಲ. ನನ್ನನ್ನೆ ಹೊಡಿ' ಅಂದಾಗ 'ಎಲ್ಲಾರೂ ಉಂಟಾ ಸಾರ್' ಎಂದು ಅಳೋಕೆ ಸುರು ಮಾಡಿದ. ಅಳಳುತ್ತಲೆ 'ನಾವು ಅಂದ್ರೆ ಎಲ್ರೂ ವಿಂಗಡಿಸ್ತಾರಲ್ಲ. ಪ್ರಿನ್ಸಿಪಾಲರು ನಾನೇ ನಿಮಗೆಲ್ಲ ಸ್ಕಾಲರ್‌ಷಿಪ್ ಕೊಡೋದು ಅಂತ ನಮ್ಮನ್ನು ಜೀತಗಾರನಂತೆ ಕಾಣ್ತಾರಲ್ಲ. ನಮಗೆ ಕೋಪ ಬರಲ್ವ ಸಾರ್' ಅಂದ. ಅದಕ್ಕೆ ನಾನೇನು ಹೇಳಲಿ?' ಅಂದರು.

ಅದಕ್ಕೆ ನಾನೂ ಏನೂ ಹೇಳಲಿಲ್ಲ. ಆ ಹುಡುಗನ ಹುಡುಕಿ ನೋಡಿದೆ. ಈ ಹುಡುಗ ಏನಾರು ಹುಡುಗೀರ ಚುಡಾಯಿಸದಿದ್ದರೆ, ಆ ಹುಡುಗೀರು ಇವನನ್ನೇ ಚುಡಾಯಿಸಿಯಾರು– ಅಷ್ಟೊಂದು ಚೆಂದದ ಹುಡುಗನಾಗಿದ್ದನು.

ಈ ಹುಡುಗಿ ಚುಡಾಯಿಸುವಿಕೆ ಬಗ್ಗೆ ನಾನು ಕೋರ್ಟ್‌ನಲ್ಲಿ ಕೆಲವು ವಕೀಲರೊಡನಿದ್ದಾಗ ಮಾತಿಗೆ ಬಂತು. ದಲಿತ ಹುಡುಗರು ಸವರ್ಣೀಯ ಹುಡುಗಿಯರನ್ನು ಚುಡಾಯಿಸುವುದಕ್ಕೆ ಕೆರಳಿ ಒಬ್ಬ ವಕೀಲರು 'ಅದೇನು? ಹರಿಜನರು ಅಷ್ಟೊಂದು ಕೊಬ್ಬಿದ್ದಾರೆ' ಅಂದರು. ಇನ್ನೊಬ್ಬರು 'ಅವರು ಅಂತೇನು? ಎಲ್ರೂ ಅದ್ನೆ ಮಾಡೋದು ಬಿಡು' ಅಂದರು. ಮೊದಲವರು 'ಹೇ ಬಿಡೊ, ಬೇರೆಯವರು ಹಂಗೇನೂ ಮಾಡಲ್ಲ' ಅಂದರು. ಅದಕ್ಕೆ ನಾನು 'ಸವರ್ಣೀಯರು ಗಂಡಸರಲ್ಲ ಅಂತ ಹೇಳ್ದಂಗೆ ಆಗುತ್ತೆ ನೀವು' ಎಂದು ನಕ್ಕೆ. ಎಲ್ಲರೂ ಬಿದ್ದುಬಿದ್ದೂ ನಕ್ಕರು. ಅಂದವರಿಗೆ ತಮ್ಮ ಮಾತಿನ ಅರ್ಥವಾಗಿ ನಗಲಾರದೆ ಕೂತರು. ಅವರೂ ನಗಬೇಕಿತ್ತೆನಿಸಿತು.

**ರಾಜಕೀಯವೂ ಬೆರೆತು**

ಇನ್ನು ಇಲ್ಲಿನ ರಾಜಕೀಯ, ಮೊದಲೇ ಹೇಳಿದಂತೆ ಕಾಂಗ್ರೈ ದಲಿತರ ಕಡೆಗೆ ಜನತಾ ಪಕ್ಷವು ಸವರ್ಣೀಯರ ಕಡೆಗೆ, ರಫ್‌ಆಗಿ ನಿಂತಿದ್ದವು. ಕಾಂಗ್ರೈ ಕುಮಾರಸ್ವಾಮಿ ವಕೀಲರಾಗಿದ್ದು ದಲಿತರನ್ನು ಜಾಮೀನಿನ ಮೇಲೆ ಬಿಡಿಸಿದ್ದಕ್ಕಾಗಿ ಸವರ್ಣೀಯರ ಗುಂಪೊಂದು ಕುಮಾರಸ್ವಾಮಿಯವರಿಗೆ ಚಪ್ಪಲಿ ಹಾರ ಹಾಕಿ ಅವಮಾನಿಸಿದೆ. ಅವರ ಮನೆಗೆ ಕಲ್ಲಿನ ಮಳೆ ಸುರಿದಿದೆ. ವಿಚಾರಿಸಿದಾಗ ಕುಮಾರಸ್ವಾಮಿಯವರು ಮಾತು ಮಾತಿಗೂ ಈ ಎಲ್ಲ ಗಲಾಟೆಗೂ ಜನತಾಪಕ್ಷದ ಶಾಸಕ ಎಚ್.ಡಿ. ದೇವೇಗೌಡರನ್ನು ಕಾರಣ ಮಾಡುತ್ತಿದ್ದರು. ಅದಕ್ಕೆ ನಾನು 'ಈ ಜಾತಿ ಮತಗಳ ಗಲಭೆ ಮಟ್ಟಿಗಾದರೂ ನಿಂನಿಮ್ಮ ಪಾರ್ಟಿ ಬಿಟ್ಟು ನೀವೂ ದೇವೇಗೌಡರೂ ಒಟ್ಟಿಗೆ ಪರಿಹರಿಸಬಾರದೇಕೆ' ಎಂದೆ. ಕುಮಾರಸ್ವಾಮಿಯವರು 'ನಾನು ರೆಡಿ. ದೇವೇಗೌಡರು ಒಪ್ಪಬೇಕಲ್ಲ' ಅಂದರು. ದೇವೇಗೌಡರನ್ನು ಕೇಳಿದರೂ ಇದನ್ನೇ ಹೇಳಬಹುದು.

ಈ ಬಗ್ಗೆ ಮಾತು ಬಂದಾಗ ತರುಣ ವಕೀಲ ಸೋಮೇಗೌಡ 'ಈ ಇಬ್ಬರಿಗೂ ಪರಿಹಾರ ಬೇಕಿಲ್ಲ. ಕಾಂಗ್ರೈನವರಿಗೆ ಹರಿಜನರ ಓಟು ತಪ್ಪಿಸಿಕೊಳ್ಳಾಕೆ ಇಷ್ಟವಿಲ್ಲ. ದೇವೇಗೌಡರಿಗೆ ಹರಿಜನರ ಓಟು ಪಡೆಯೋ ನಂಬಿಕೆಯೂ ಇಲ್ಲ. ಈಗಿರೊ ಮೇಲ್ಜಾತಿ ಓಟನ್ನು ಕಳೆದುಕೊಳ್ಳಲೂ ಮನಸ್ಸಿಲ್ಲ. ಇಬ್ಬರೂ ತಂತಮ್ಮ ಉಳಿವು ನೋಡ್ತಿದ್ದಾರೆ ಅಷ್ಟೆ' ಎಂದರು ಕಠಿಣವಾಗಿ. ಕಡ್ಡಿ ತುಂಡಾಗುವಂಥ ಅವರ ನುಡಿ ನನಗೂ ನಿಜವೆನ್ನಿಸಿತು. ನಾನು ಇದುವರೆಗೂ ನಾಯಕನೆಂದು ಭಾವಿಸಿದ್ದ ಶಾಸಕ ದೇವೇಗೌಡರು ನಾಯಕನಾಗಿರದೆ ಪುಢಾರಿಯಾಗಿದ್ದು ನನ್ನನ್ನು ಖಿನ್ನನನ್ನಾಗಿಸಿತು. ದೇವೇಗೌಡರು ನಾಯಕರಾಗಿದ್ದರೆ ಚಪ್ಪಲಿ ಹಾರ ಹಾಕಿಸಿಕೊಂಡ ಕುಮಾರಸ್ವಾಮಿಯವರಲ್ಲಿಗೆ ಹೋಗಿ ಸಾಂತ್ವನ ಮಾಡಬೇಕಿತ್ತು. ಸಬ್‌ಇನ್ಸ್‌ಪೆಕ್ಟರ್ ನಂಜೇಗೌಡರನ್ನು ಮೈಯ್ಯಾಕಿಕೊಳ್ಳದೆ ಶಾಸಕರಾದ ತಮ್ಮ ಘನತೆ ಉಳಿಸಿಕೊಳ್ಳುವ ಕಾರಣಕ್ಕಾಗಿ ಸಸ್ಪೆಂಡ್ ಮಾಡಿಸಬೇಕಿತ್ತು. ಊರಿಗೆ ಬಂದ ದೇವೇಗೌಡರು ಹೊಲಗೇರಿ ಕಡೆಗೆ ತಿರುಗಿಯೂ ನೋಡದೆ ಹೋಗುವುದರ ಬದಲು, ಮೊದಲು ಹೊಲಗೇರಿಗೆ ಹೋಗಿ ಅಲ್ಲಿನ ಬಾಗಿಲ ಮೇಲಿದ್ದ ಪೊಲೀಸರ ಬೂಟ್ಸು ಗುರುತನ್ನು ತೊಡೆದು ಇಲ್ಲವಾಗಿಸಬೇಕಿತ್ತು. ಇದಾವುದನ್ನೂ ಮಾಡದೆ ದೇವೇಗೌಡರು ತಮ್ಮನ್ನು ತಾವೇ ಕುಗ್ಗಿಸಿಕೊಂಡಿದ್ದರು.

**ಉಳಿವು ಹೇಗೆ?**

ಇದನ್ನು ನಾನು ಇನ್ನೂ ಬರೆದು ಮುಗಿಸಿಲ್ಲ. ಆಗಲೇ ಹೊಳೆನರಸೀಪುರದಲ್ಲಿ ವೆಂಕಟೇಶ ಎಂಬ ದಲಿತನಿಗೆ ಸವರ್ಣೀಯರು ಗುಂಪಾಗಿ ಹೊಡೆದು, ಅಲ್ಲಿಂದ ಪೊಲೀಸರು ವೆಂಕಟೇಶನನ್ನೆ ಎಳೆದುಕೊಂಡು ಸ್ಟೇಷನ್ನಿನಲ್ಲಿ ಪೊಲೀಸರೂ ಹೊಡೆದು, ಮಗನನ್ನು ನೋಡಲು ಬಂದ ತಾಯಿಗೂ ಹೊಡೆದಿರುವುದು ನಡೆದಿದೆ.

ಕೊನೆಯದಾಗಿ ನಾನು ಹೇಳಬಹುದಾದದ್ದು: ದಲಿತರೆಲ್ಲರೂ ಕಂಗೆಟ್ಟಿದ್ದರು. ಅವರ ದೇಹ, ದೇಹ ಮಾತ್ರವಾಗಿರಲಿಲ್ಲ. ತಳಮಳ ಆತಂಕ ಅಪನಂಬಿಕೆ ತುಂಬಿ ಅವರ ದೇಹವಾಗಿತ್ತು. ಗುಜರಾತು ಮೀಸಲಾತಿ ವಿರೋಧಿ ಚಳವಳಿಯ ಸಾವು ನೋವಿಗೆ ಈ ಗಲಾಟೆ ಗದ್ದಲ ಅಸಹನೆಗಳೂ ಸುತ್ತಿಕೊಂಡು ಪ್ರತಿಯೊಬ್ಬರೂ 'ನಮ್ಮ ಉಳಿವು ಹೇಗೆ?' ಎಂದು ಚಿಂತೆಯಾಗಿದ್ದರು. ಒಬ್ಬರು 'ನಾವು ಮುಸ್ಲಿಮರಾಗದೆ ನಮಗೆ ಉಳಿಗಾಲವಿಲ್ಲ' ಅಂದರು. ನಾನು 'ಇಂಥ ಎಲ್ಲಾ ಧರ್ಮಗಳನ್ನೂ ವಿರೋಧಿಸಬೇಕು' ಎಂದು ತಿಳಿಸಿದೆ. ಅದಕ್ಕವರು 'ಧರ್ಮ ವಿರೋಧಿಸುವುದಕ್ಕಾದರೂ, ನಾವು ಮೊದಲು ಉಳಿಯಬೇಕಲ್ಲ' ಅಂದರು. ಇವರು ಹೇಳುತ್ತಿರುವುದರಲ್ಲೂ ನಿಜವಿದೆಯೇನೊ ಅನ್ನಿಸಿ ನನಗೆ ಗಾಬರಿ ತುಂಬಿಕೊಂಡಿತು.

## ಬ್ರಾಹ್ಮಣರ ಬಹಿರಂಗ ಸಭೆಯ ಅಂತರಂಗದಲಿ ಕೆಲಕಾಲ

ಒಂದು ಗುಂಪು, 'ಶ್ರೀ ಕುವೆಂಪು ಅವರ ವಿರುದ್ಧ ಪ್ರತಿಭಟನಾ ಸಭೆ'ಯಲ್ಲಿ ದಾಂಧಲೆ ಎಬ್ಬಿಸಲು ಸಿದ್ಧರಾಗಿ ನಿಂತಾಗ, ಶ್ರೀಕೃಷ್ಣ ಆಲನಹಳ್ಳಿಯವರು ಅವರನ್ನು ತಡೆದು ಆ ಸಭೆಗೆ ನಾವು ಹೋಗಿ ಅಲ್ಲಿ ಕುವೆಂಪು ಅವರ ದೃಷ್ಟಿ ತಿಳಿ ಹೇಳಿ ಪ್ರಶ್ನಿಸುತ್ತೇವೆಂದೂ, ಯಾವ ಕಾರಣಕ್ಕೂ ಆ ಗುಂಪು ಅಲ್ಲಿಗೆ ಬರಬಾರದೆಂದೂ ಒಪ್ಪಿಸಿದರು. ಅಲ್ಲಿ ಪ್ರಶ್ನಿಸುವುದಕ್ಕಿಂತ ಮುಖ್ಯವಾಗಿ ಅಂದು ಕೂಡುತ್ತಿದ್ದ ತ್ರಿಮತಸ್ಥರ ವಾಕ್‌ಶೀವಿ ಕೇಳುವುದೇ ನಮ್ಮ ಒಳಾಸೆಯಾಗಿತ್ತು.

ಎಲ್ಲಿಗೂ ಕಾಲಕ್ಕೆ ಸರಿಯಾಗಿ ಹೋಗದ ನಾನು ಮತ್ತು ಶ್ರೀಕೃಷ್ಣ ಆಲನಹಳ್ಳಿ ಶ್ರೀ ಅಭಿನವ ಶಂಕರಾಲಯಕ್ಕೆ ಕಾಲಕ್ಕೆ ಸರಿಯಾಗಿ ಹೋದೆವು. ಆಗ ಒಬ್ಬರ ಮುಖ ಇನ್ನೊಬ್ಬರಿಗೆ ಕಾಣುವಷ್ಟು ಬೆಳಕಿತ್ತು. ಅಲ್ಲಿಗೆ, ಒಬ್ಬೊಬ್ಬರಾಗಿ ಮುಖ ನೋಡಿದರೇ ಬ್ರಾಹ್ಮಣರು ಎಂಬಂತಿದ್ದವರು, ಅದರಲ್ಲೂ ಹೆಚ್ಚಾಗಿ ಅರವತ್ತರ ಗಡಿದಾಟಿ ನೂರನ್ನೂ ತಲುಪುತ್ತಿದ್ದವರು ಒಬ್ಬೊಬ್ಬರಾಗಿ ಇಳಿಯುತ್ತಿದ್ದರು. ಆ ಅವರು ಆಕಾಶವೇ ತಲೆಯಮೇಲೆ ಬಿದ್ದಂತೆ ಸೊಂಟದ ಮೇಲೆ ತಮ್ಮೆರಡು ಕೈಯಿಟ್ಟುಕೊಂಡು ಅಥವಾ ಕೋಲೂರಿಕೊಂಡು ಅಥವಾ ಮಕ್ಕಳನ್ನು ಹಿಡಿದು, ಸಂಕಟವೇ ತಾವಾಗಿ ಕಾಲಲ್ಲಿ ಶಕ್ತಿ ಇಲ್ಲದಿದ್ದರೂ ಕಾಲೆಳೆದುಕೊಂಡು ಬರುತ್ತಿದ್ದ ಅವರನ್ನು ಕಂಡು ನಮಗೂ ಕರುಳು ಚುರುಕ್ ಅನ್ನುವಂತಾಗುತಿತ್ತು. ಮುಪ್ಪಾದ ಆ ಸಮೂಹದ ಸಂಕಟ ನೋಡಲಾಗದೆ, ಇದೇನು? ಶ್ರೀ ಮಧ್ವಾಚಾರ್ಯರು ಹೇಳುವ ಮೋಕ್ಷ ಕಾಣದ ನಿತ್ಯ ನಾರುಕಿಗಳು ನಮ್ಮೆದುರು ಸೇರುತ್ತಿದ್ದಾರೆಯೇ? ಎಂಬುವಷ್ಟು ದಾರುಣಮಯತೆ ಆ ಶ್ರೀ ಅಭಿನವ ಶಂಕರಮಠದೊಳಗೆ ತುಂಬಿ ತುಳುಕಾಡತೊಡಗಿತು.

ಈ ಸಂಕಟವಾದರೂ ಯಾಕಾಗಿ? ಶ್ರೀ ಕುವೆಂಪುರವರು ಹಿಂದೂಧರ್ಮವನ್ನು ಅನಿಷ್ಟವೊ ಕನಿಷ್ಠವೋ ಅಂದುದಕ್ಕೆ ಅಷ್ಟಕ್ಕೆ ಈ ಬ್ರಾಹ್ಮಣರು ತಮ್ಮ ಅಸ್ತಿತ್ವದ ಬುಡಕ್ಕೆ ಕೊಡಲಿಪೆಟ್ಟು ಬಿದ್ದಂತೆ ನರಳುತ್ತಿದ್ದರು. ಶ್ರೀ ಕುವೆಂಪು ನುಡಿಯ ಆಳದ ನೋವು ಹಾಗೂ ಆಶಯ ಅಲ್ಲಿನ ಯಾರಿಗೂ ಒಂದು ಕೂದಲಿನಷ್ಟೂ ತಾಕಿರಲಿಲ್ಲ. ಶ್ರೀ ಕುವೆಂಪು 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಹೇಳಿದ್ದರು– 'ಹಿಂದಿನವರು ಏನು ಮಾಡಿದರು? ವೇದ ಕೇಳಿದ ಶೂದ್ರನ ಕಿವಿಗೆ ಕಾದ ಸೀಸ ಸುರಿಯಬೇಕು, ವೇದ ಪಠನ ಮಾಡಿದ ಶೂದ್ರನ ನಾಲಿಗೆ ಕತ್ತರಿಸಬೇಕು ಎಂದು ಹೇಳುತ್ತಾ ಶಿಕ್ಷಣ ವಿರೋಧಿ ಪ್ರವೃತ್ತಿಯನ್ನು ಬೆಳೆಸಿದ್ದರು. ಈ ದೃಷ್ಟಿಯಿಂದ ಹಿಂದೂಧರ್ಮದಂತಹ ಅನಿಷ್ಟ ಧರ್ಮ ಬೇರೊಂದಿಲ್ಲ'. ಯಾರೇ ಆಗಲಿ, ಈ ನುಡಿಯಲ್ಲಿ ನೋಯಬೇಕಿದ್ದು ಏನಿತ್ತು? ಶ್ರೀ ಕುವೆಂಪು ಅವರು ಯಾವ ದೃಷ್ಟಿಯಿಂದ ಹೇಳಿದ್ದರೋ ಆ ದೃಷ್ಟಿಯತ್ತ ನೋಡಿದ್ದರೆ, ಕೇವಲ ನೋಡಿದ್ದರೆ, ಅಂಥ ಒಂದು ಧರ್ಮದಲ್ಲಿ ಹುಟ್ಟಿದ್ದಕ್ಕೆ ಕುಗ್ಗಿ ತಲೆತಗ್ಗಿಸಬೇಕೇ ಹೊರತು, ಆದರೆ, ಆದರೆ ಆ ಸಭೆಯು ಕಣ್ಣು ಕಳೆದುಕೊಂಡಿತ್ತು.

ಹೀಗೆ ಬರುಬರುತ್ತಾ ಸಭೆ ಸಾವಿರ ಸಂಖ್ಯೆಗೂ ಮೀರುತ್ತಾ ಹೆಂಗಸರು ಮಕ್ಕಳನ್ನು ಕೂಡಿಕೊಳ್ಳುತ್ತಾ ಕತ್ತಲೂ ಆಗುತ್ತಾ ಯಾವಾಗ ಆ ಸಭೆಯು ಪ್ರಾರ್ಥನೆ ಮತ್ತು ವೇದವಾಕ್ಯದಿಂದ ಆರಂಭವಾಯ್ತೊ ಆವಾಗ ಇದ್ದಕ್ಕಿದ್ದಂತೆ ಆ ಸಭೆಯ ರೂಪವೇ ಬದಲಾಗಿ 'ಮೊದಲೇ ಹೆಂಡ ಕುಡಿದ ಕೋತಿಗೆ ಚೇಳು ಕಡಿದು ದೆವ್ವ ಹಿಡಿದರೆ' ಹೇಗಾಡುತ್ತೊ ಹಾಗೆ ಆಡತೊಡಗಿತು.
ಶ್ರೀ ವರದರಾಜ ಅಯ್ಯಂಗಾರ್ ತೂಕವಾಗಿಯೇ ತಮ್ಮ ಮಾತುಗಳನ್ನು ಆರಂಭಿಸಿ ಬರುಬರುತ್ತ ಹಲ್ಕಾ ಅಂದರೆ ಹಗುರ ಆಗತೊಡಗಿದರು. ಈ ಕೋತಿ ಮತ್ತು ಹಲ್ಕಾ ಕಲ್ಪನೆಯನ್ನು ಶ್ರೀ ನಾರಾಯಣಶಾಸ್ತ್ರಿ ಎಂಬ ಭಾಷಣಕಾರರು ಶ್ರೀ ಕುವೆಂಪು ಅವರಿಗೆ ಆರೋಪಿಸಿದ್ದನ್ನು ನಾನು ಹೆಚ್ಚಿಗೆ ಮಾಡದೆ ತಿರುಗಿಸಿ ಶ್ರೀ ವರದರಾಜ ಅಯ್ಯಂಗಾರ್‌ಗೆ ಹೇಳಿದ್ದೇನೆ, ಅಷ್ಟೆ,

ಹೆಚ್ಚಿಗೆ ಮಾಡಿಲ್ಲ ಯಾಕೆಂದರೆ ಪಾಪದ ಅವರಿಗೆ ಅವರೇ ಕಾಣುತ್ತಿರಲಿಲ್ಲ. ಅದಕ್ಕಾಗೇ ಶ್ರೀ ಕುವೆಂಪು 'ನಾನು ಹಿಂದೂ ಅಲ್ಲ' ಎಂದಿದ್ದ 'ಸುದ್ದಿ ಸಂಗಾತಿ' ಪತ್ರಿಕೆಯನ್ನು ಎತ್ತಿ ತೋರಿಸುತ್ತ 'ಕುವೆಂಪು ಹಿಂದೂ ದೇಶವನ್ನು ಬಿಟ್ಟು ಹೋಗಲಿ' ಅನ್ನುವುದು ಅಲ್ಲಿನ ಸಾಮಾನ್ಯ ಮಾತಾಗತೊಡಗಿತು. ಯಾರದ್ದು ಹೇಗಾದರೂ ಇರಲಿ, ಅಧ್ಯಕ್ಷತೆ ವಹಿಸಿದ್ದ ಗಾಂಧಿವಾದಿ ನೂರುವರ್ಷಗಳ ಗಡಿ ತಲುಪುತ್ತಿದ್ದ ಶ್ರೀ ಅಗರಂ ರಂಗಯ್ಯನವರೂ 'ನನ್ನ ರಕ್ತ ಕುದಿಯುತ್ತಿದೆ' ಎಂದಾಗ ಅಯ್ಯೋ ಈ ಹಾಳು ಕುದಿಯುತ್ತಿರುವ

ರಕ್ತದ ಬಗ್ಗೆಯೇ ಚಿಂತೆಯಾಗುತ್ತ ಶ್ರೀ ಅಗರಂ ರಂಗಯ್ಯನವರು ಪಾಪದ ಪ್ರಾಣಿಯಾಗಿ ಕಾಣತೊಡಗಿದರು. ಇವರ ವಿಮೋಚನೆಗೆ ದಾರಿ ಯಾವುದು ದೇವರೇ ಎಂಬಷ್ಟು ದಿಕ್ಕು ತಪ್ಪುತ್ತಿತ್ತು. ಶ್ರೀಮತಿ ಶಕುಂತಲಾ ಶ್ರೀಪಾದರಾವ್ ಅವರು ತಮ್ಮ ಮುಂದಿನ ಜನ್ಮದಲ್ಲೂ ಹಿಂದೂವಾಗಿ ಅದರಲ್ಲೂ ಬ್ರಾಹ್ಮಣ ಜಾತೀಲಿ ಹುಟ್ಟಿಸುವಂತೆ ದೇವರಲ್ಲಿ ಮೊರೆ ಇಡುತ್ತ ಸೀಟು ಬುಕ್ ಮಾಡುತ್ತಿದ್ದರು. ಆಗ ಅಲ್ಲಿ ನನಗೆ, ನಾನು ಬ್ರಾಹ್ಮಣ ಆಗದಿರುವುದು ನನ್ನ ಹಿಂದಿನ ಜನ್ಮದ ಪುಣ್ಯವೇ ಎಂದು ಅಲ್ಲಿ ನನಗೆ ಅನ್ನಿಸತೊಡಗಿತು. ಅಂಥ ತಂದೆತಾಯಿಗಳನ್ನು ನಾನು ಪಡೆದಿದ್ದರೆ ನಾನು ನಿಜಕ್ಕೂ ಮಾನಸಿಕ ರೋಗಿಯಾಗಿ ತಪ್ಪಿದರೆ ಗೊಡ್ಡಾಗುತ್ತಿದ್ದೆ. ನನ್ನ ಸಂವೇದನಾಶೀಲ ಬ್ರಾಹ್ಮಣ ಮಿತ್ರರನೇಕರು ತಮ್ಮ ಹಿರಿಯರ ಬಗ್ಗೆ ತಾಳುವ ಕಠಿಣ ಸಿನಿಕ ಪ್ರವೃತ್ತಿಗೆ ಯಾಕೆ ಇವರಲ್ಲಿ ಭಾವನಾತ್ಮಕ ಸಂಬಂಧ ಕಮ್ಮಿ ಅಂದುಕೊಳ್ಳುತ್ತಿದ್ದೆ. ನನಗಲ್ಲಿ ಅರ್ಥವಾಗತೊಡಗಿತು. ಆ ವೇದ ಪುರಾಣ ಪರಂಪರಾಗತವಾದ ಆ ತಲೆತಲಾಂತರದಿಂದಲೂ ಅಕ್ಷರ ಪಠಣ ಕಸುಬಿನ ಈ ಜನರ ಮೌಢ್ಯ, ಗೊಡ್ಡು, ಅವಿವೇಕ, ಕುಹಕಾದಿಗಳನ್ನು ಅನುಭವಿಸಿದಾಗ ಇವರಿಗಿಂತ ಯಾವುದೇ ಹಳ್ಳಿಯ ಅನಕ್ಷರಸ್ಥನೂ ವಿವೇಕಿಯಾಗಿ ಜ್ಞಾನಿಯಾಗಿ ಕಾಣತೊಡಗಿದನು.

ಯಾಕೆ– ಅಲ್ಲಿನ ಯಾವೊಬ್ಬನೂ ಯಾಕೆ ಶ್ರೀ ಕುವೆಂಪು ಹೇಳಿದ್ದು ಈ ಕಾರಣಕ್ಕಾಗಿ, ಈ ದೃಷ್ಟಿಯಿಂದ, ಈ ಅರಿವು ತನ್ನ ಆರೋಗ್ಯಕ್ಕೆ ಅಗತ್ಯ ಅಂತ ಅಂದುಕೊಳ್ಳಲಿಲ್ಲ? ತಪ್ಪು ಎಲ್ಲಿದೆ? ಅರಿವೇ ಇಲ್ಲದ ಅಲ್ಲಿ, ಕನಿಷ್ಠಪಕ್ಷ ಇತಿಹಾಸದ ತಪ್ಪುಗಳನ್ನು ಮರೆಯಬೇಕು ಎಂಬ ಅರಿವಿನಿಂದಾದರೂ ಮಾತಾಡುತ್ತಿದ್ದ ಶ್ರೀ ಟಿ.ವಿ. ಶ್ರೀನಿವಾಸರಾವ್ ಅವರು 'ಬ್ರಾಹ್ಮಣರು ಈಗ ಶೋಷಣೆ ಎಲ್ಲಿ ಮಾಡುತ್ತಿದ್ದಾರೆ? ವರ್ಗ ಹೋರಾಟವಾಗಬೇಕೆಂದು' ಹೇಳುತ್ತಾ ಮಾರ್ಕ್ಸ್‌ನನ್ನು ಎಳೆದು ತಂದು ಬ್ರಾಹ್ಮಣರಿಗೆ ವರ್ಗ ಪ್ರಜ್ಞೆ ಮೂಡಿಸಲು ಹೆಣಗುತ್ತಿದ್ದರು. ಕಾಲವಾದಂತೆ ಆ ಸಭೆ ಮತದ ಹೆಂಡವನ್ನು ಸ್ವಲ್ಪ ಓವರ್ ಆಗಿ ಹಾಕಿಕೊಂಡು ವಾಲಾಡುತ್ತಿದ್ದುದರಿಂದ ಆ ಮಾತುಗಳಾದರೂ ಮುಟ್ಟುತ್ತಲೂ ಇರಲಿಲ್ಲ. ಇನ್ನೊಂದು ಕಡೆ ಶ್ರೀಮತಿ ಶಕುಂತಲಾ ಅವರು ರಣರಂಗದಲ್ಲಿರುವಂತೆ ಕೂಗಿ ಮಾತಾಡುತ್ತ ಸಡಗರ ಸಂಭ್ರಮದಿಂದ ಮತದ ಹೆಂಡ ಸರಬರಾಜು ಮಾಡುತ್ತಿದ್ದರು. ಅದಕ್ಕಾಗಿ ಏನೋ ಅಲ್ಲಿದ್ದವರಿಗೆಲ್ಲ ತಂತಮ್ಮ ವಯಸ್ಸೂ ಕೂಡ ಮರೆತುಹೋಗಿತ್ತು. ಅಲ್ಲಿ ಶೇಕಡ ನೂರಕ್ಕೆ ಅರವತ್ತರಷ್ಟು ಜನ, ಅರವತ್ತು ವರ್ಷದ ಮೇಲಾದವರೇ ಇದ್ದರೂ ಅವರು ಕುವೆಂಪುಗೆ ಅರುಳುಮರಳು ಎನ್ನುತ್ತಿದ್ದರು.

ಕನ್ನಡ ಸಾಹಿತ್ಯದ ಅನೇಕ ಶತಮಾನಗಳಿಗೆ ಮೂವರು– ಪಂಪ, ವಚನಕಾರ, ಕುಮಾರವ್ಯಾಸ ಮಹಾಕವಿಗಳು ದಕ್ಕಿದ್ದರೆ ಈ ನಮ್ಮ ಶತಮಾನ ಒಂದರಲ್ಲೇ ಇಬ್ಬರು– ಕುವೆಂಪು, ಬೇಂದ್ರೆ ಮಹಾಕವಿಗಳಾಗಿರುವುದು ನಾಡಿನ ಪುಣ್ಯ ಎಂಬ ಜ್ಞಾನವಿಲ್ಲದ ಆ ಅವಿದ್ಯಾವಂತರ ಸಭೆ 'ಮೊದ್ಲೇ ಆ ಜಾತಿ... ಏನೋ ಒಂದೆರಡು ಅಕ್ಷರ' ಎಂದು ಮಾತಾಡಿ ಆ ಸಭೆಯು ಅನಿಷ್ಟ ಕನಿಷ್ಠಕ್ಕಿಂತಲೂ ಕಡೆಯಾಗಿ ಅಧಃಪತನಗೊಂಡಿತ್ತು.

ಅಲ್ಲಿ ಇನ್ನೂ ಕೇಳಿಬರುತ್ತಿದ್ದ ಪ್ರಶ್ನೆಗಳು: ವಾಲ್ಮೀಕಿ ಕಾಳಿದಾಸರು ಬ್ರಾಹ್ಮಣರೇ? ಇವರನ್ನು ಬ್ರಾಹ್ಮಣರು ಗೌರವಿಸುವುದಿಲ್ಲವೇ? ಕ್ಷತ್ರಿಯ ರಾಮ, ಗೊಲ್ಲ ಕೃಷ್ಣ ಬ್ರಾಹ್ಮಣರೇ? ಇವರನ್ನು ಬ್ರಾಹ್ಮಣರು ಪೂಜಿಸುವುದಿಲ್ಲವೇ? ಬ್ರಾಹ್ಮಣರಿಗೆ ಜಾತಿ ಎಲ್ಲಿದೆ? ಇತ್ಯಾದಿ. ಭಾರತದಲ್ಲಿ ಅಕ್ಷರವೂ ಸೆರೆಯಾದ ಮೇಲೆ ಅನೇಕಾನೇಕ ವ್ಯಾಸ ವಾಲ್ಮೀಕಿ ಕಾಳಿದಾಸರು ಹುಟ್ಟುವುದು ನಿಂತು ಭಾರತಮಾತೆಯೇ ಬಂಜೆಯಾದಳು, ಹುಳುಗಳ ಹೆತ್ತಳು ಎಂಬುದು ಯಾಕೆ ಕಾಣದು? ಅಥವಾ ಕಂಡೂ ಪೆದ್ದ ಹಾದರಗಿತ್ತಿತನವೇ? ವ್ಯಾಸ ವಾಲ್ಮೀಕಿ ಕಾಳಿದಾಸರ ಪ್ರತಿಭೆಯನ್ನು ಉಚ್ಚರಿಸುವ ಇವರು ಯಾಕೆ ಮೀಸಲಾತಿ ವಿರೋಧಿಗಳಾಗಿದ್ದಾರೆ? ಭಾರತದ ಪ್ರತಿಭೆಯ ಭ್ರೂಣವನ್ನು ಹತ್ಯೆ ಮಾಡಿದ ಪಾಪಿಷ್ಠರು ತಮ್ಮ ಹಿರಿಯರು ಎಂದು ಯಾಕೆ ಇವರೇ ಅರಿತು ತಿದ್ದಿಕೊಳ್ಳಲಾರರು? ಈ ಅರಿವಿದ್ದರೆ 'ಮೊದ್ಲೇ ಆ ಜಾತಿ...ಏನೋ ಒಂದೆರಡು ಅಕ್ಷರ?' ಎಂದು ಕುವೆಂಪು ಅವರಿಗೇ ಹೇಳಿದ ಆ ಅಜ್ಞಾನಿ ಬ್ರಾಹ್ಮಣನಿಗೆ ಅರಿವಿರುವ ಬ್ರಾಹ್ಮಣರೇ ಚಪ್ಪಲಿಯಿಂದ ಹೊಡೆಯುತ್ತಿದ್ದರು. ಹಾಗೆಯೇ, ಕುವೆಂಪು 'ಶ್ರೀ ರಾಮಾಯಣ ದರ್ಶನಂ'ನ್ನು ವೆಂಕಣ್ಣಯ್ಯನವರಿಗೆ ಅರ್ಪಿಸಿದ್ದು ಕಾಣುತ್ತಿತ್ತು. ಆಗ ಕುವೆಂಪು ಬ್ರಾಹ್ಮಣ ದ್ವೇಷಿಯಾಗಿ ಕಾಣುತ್ತಿರಲಿಲ್ಲ, ಯಾರೋ ಅಂದಂತೆ ಕುವೆಂಪು ದುರಾತ್ಮನಾಗೂ ಕಾಣುತ್ತಿರಲಿಲ್ಲ. ಬಂದುದು ಅರೆಜ್ಞಾನಪೀಠ ಪ್ರಶಸ್ತಿಯೂ ಆಗುತ್ತಿರಲಿಲ್ಲ. ಆದರೆ ಅಲ್ಲಿ ಕಾಣುವ ಕಣ್ಣು ಕಾಣದಾಗಿತ್ತು.

ಒಟ್ಟಿನಲ್ಲಿ, ಹಿಂದೂಧರ್ಮದ ಔನ್ನತ್ಯವನ್ನು ಪ್ರಕಾಶಿಸಬೇಕೆಂದು ಸೇರಿದ್ದ ಆ ಸಭೆಯು ಮತಾತ್ಮವಾಗಿ ಹಿಂದೂಧರ್ಮದ ಹೀನತೆಯನ್ನು ತೋರಿಸುತ್ತ ಅದರ ಗುಹ್ಯ ರೋಗಕ್ಕೆ ಅದೇ ಆನಂದಪಡುತ್ತ ಇತಿಹಾಸದ ತಪ್ಪುಗಳಿಗಾಗಿ ಹಾತೊರೆಯುತ್ತಿತ್ತು. ಇಂಥದರಲ್ಲೂ ಶ್ರೀಕೃಷ್ಣ ಆಲನಹಳ್ಳಿಯವರು– 'ನಾನೂ ಹಿಂದೂ ಅಲ್ಲವೇ? ಇಲ್ಲ ಅನ್ನಿ, ಈಗಲೇ ಹೊರಟುಬಿಡುತ್ತೇನೆ. ನಾನು ಓದಿದ್ದೇನೆ, ನಾನೂ ಬ್ರಾಹ್ಮಣನಲ್ಲವೇ?' ಹೀಗೆ ಹಾಗೂ ಹೀಗೂ ಗಂಡಾಗುಂಡಿ

ಮಾಡ್ತಾ, ನಮ್ಮನ್ನು ತಡೆದು ಕಾವಲಿದ್ದ ಹನುಮಂತರಾಯನನ್ನೂ ಮೀರಿ ಆ ಮುಖ್ಯಸ್ಥರನ್ನು ಬಲಾತ್ಕರಿಸಿ ಅಂತೂ ಮಾತಾಡಲು ಒಪ್ಪಿಗೆ ಸಿಕ್ಕಿಬಿಟ್ಟಿತು!

ಮೊದಲು ನಾನೇ ಮಾತಾಡಬೇಕು ಅಂತಾದಾಗ ಯಾಕಾರು ಒಪ್ಪಿಗೆ ಕೊಟ್ಟರಪ್ಪ ಅನ್ನಿಸತೊಡಗಿತು. ನನಗೆ ಮಾತಾಡಲು ನಾಲಿಗೆ ಹೊರಳದೆ ಎಲ್ಲ ಬೆ..ಬೆ..ಬೆ.. ಆಗಿಬಿಟ್ಟು ಆ ತ್ರಿಮತಸ್ಥರ ತ್ರಿಪ್ರಕಾರದ ಬಾಣಗಳು ಠೇಂಕಾರದಲಿ ಹಾರುತ ಬಂದು ನನ್ನನ್ನು ಹೇಗೇಗೆ ಚುಚ್ಚುತ್ತವೋ ಎಂಬುದ ನೆನಸಿಕೊಂಡೇ ನಡುಗತೊಡಗಿದೆ. ಅದರಲ್ಲೂ ಶ್ರೀಕೃಷ್ಣ ಆಲನಹಳ್ಳಿ 'ನೀನು ಮೊದಲೇ ಮಾತಾಡು. ನಾನು ಮೊದಲೇ ಮಾತಾಡಿದರೆ ಸಭೆಯೇ ಬರಕಾಸ್ತ್ 'ಆಗಿಬಿಡುತ್ತೆ್ೖ' ಹಾಗಾದಲ್ಲಿ 'ಪ್ರಾಯಶಃ' ನೀನು ಮಾತಾಡಬಹುದಾದ 'ಪ್ರಸಂಗ'ವೇ 'ಉದ್ಭವಿಸಲಾರದು' ಎಂದು ಈ 'ಆಗಿಬಿಡುತ್ತೆ್ೖ' 'ಉದ್ಭವಿಸಲಾರದು' 'ಪ್ರಾಯಶಃ' 'ಪ್ರಸಂಗ'ಗಳನ್ನು ಅಲ್ಲೇ ಆತನಿಗರಿವಿಲ್ಲದೇ ಕಲ್ತು ನುಡಿದು ನನ್ನನ್ನು ತಳ್ಳಿಬುಟ್ಟಾಗ ನಾನು ಮೈಕಿನ ಮುಂದೆ ಬಂದಾಗಿತ್ತು.

ನಾವು, ಶ್ರೀ ಅಭಿನವ ಶಂಕರಾಲಯಕ್ಕೆ ಬರುವ ಮೊದಲೇ ನಾನು ಶ್ರೀಕೃಷ್ಣ ಆಲನಹಳ್ಳಿಗೆ 'ಅವರೇನಾರೂ ನನ್ನನ್ನು ಮಾತಾಡು ಅಂದುಬುಟ್ಟರೆ ನಾನೇನಪ್ಪಾ ಮಾತಾಡದು?' ಅಂತ ಆತಂಕ ವ್ಯಕ್ತಪಡಿಸಿದ್ದೆ. ಅದಕ್ಕೆ ಆಲನಹಳ್ಳಿ 'ಅದೇ ನೀ ಒಂದೇ ಒಂದು ಮಾತಾಡು. ನನ್ನ ಮಕ್ಕಳನ್ನು ನಿಮ್ಮ ಮಠಕ್ಕೆ ಅಧಿಪತಿ ಮಾಡ್ತಿರಾ ಅಂತ ಕೇಳ್ಬುಟ್ಟು ಬಂದ್‌ಬುಡು. ಮುಂದಲದ ನಾನು ನೋಡ್ಕತ್ತೇನೆ' ಅಂದಿದ್ದರು. ಅದಕ್ಕೆ ನಾನು 'ಅಯ್ಯಯ್ಯೋ ನನ್ನ ಮಕ್ಕಳಿಗೆ ಅದು ಬ್ಯಾಡಪ್ಪ. ನಿನ್ನ ಮಗನಿಗೆ ಬೇಕಾದ್ರೆ ಹೇಳ್ಕೋ' ಅಂದಿದ್ದೆ. ಅದಕ್ಕಾತ 'ಅದಕ್ಕೇನಂತೆ ನನ್ನ ಮಗನಿಗೆ ಮಠಾಧಿಪತಿ ಆಗು ಮಗನೇ ಮಜವಾಗಿರಬಹುದು ಅಂದ್ರೆ 'ಓಯೆಸ್ ಡ್ಯಾಡಿ ಅಂತಾನೆ' ಅಂದದ್ದು ಮೈಕಿನ ಮುಂದೆ ನಿಂತ ನನಗೆ ನೆನಪಾಗಿ ನಗು ಬರತೊಡಗಿತು.

ನಗು ನಗುತ್ತಾ ನಾನು ಒಂದು ಸಲ ಆ ಜನವನ್ನು ನೋಡಿದೆ ಇತಿಹಾಸದ ಕ್ರೌರ್ಯಕ್ಕೆ ಸಿಕ್ಕಿ ಕಣ್ಣು ಕೈಕಾಲು ಕಳೆದುಕೊಂಡು ಕಣ್ಣಾಗಣದೆ ಹೆಳವರಾಗಿರುವ ಈ ನನ್ನ ಸಹಜೀವಿಗಳಿಗೆ ಏನು ಹೇಳಲಿ? ಹೇಗೆ ಹೇಳಲಿ? ಗೊಂದಲಿಸತೊಡಗಿತು. ನನ್ನ ನಗು ಕಂಡು ಅವರ ಕಕ್ಕಾಬಿಕ್ಕಿ ಹೆಚ್ಚಾಗುತ್ತಿತ್ತು. ನನ್ನ ಮುಖದ ಮೇಲೆ ನಗುವಿರುವಾಗಲೇ ನಾನು ಮಾತಾಡಿಬಿಡುವುದು ಕ್ಷೇಮ ಎಂದು ಅನ್ನಿಸತೊಡಗಿದಾಗ ನಾನು ಹೇಳಿದೆ– ಏನೆಂದರೆ 'ಸಂಗಾತಿ ಪತ್ರಿಕೆಗಾಗಿ ಕುವೆಂಪು ಸಂದರ್ಶನ ನಡೆಯುವಾಗ ನಾನೂ ಇದ್ದೆ. ಕುವೆಂಪು

ಅವರು ಆಡಿದ ಮಾತುಗಳನ್ನೆಲ್ಲ ನಾನೂ ಕೇಳಿದ್ದೇನೆ. ಅವರಿಗೆ ಯಾರ ಬಗ್ಗೂ ದ್ವೇಷ ಇರಲಿಲ್ಲ. ನಮ್ಮಲ್ಲಿನ ಈ ಮೇಲುಕೀಳು ಜಾತಿ ಭೇದ ಮತ ಮೌಢ್ಯದ ಬಗ್ಗೆ ಅವರಿಗೆ ಆಕ್ರೋಶ ಇತ್ತು. ಅವರ ತುಡಿತ ಸಮಾನತೆಗಾಗಿ ಇತ್ತು. ಯಾರೋ ಕುವೆಂಪುಗೆ ಜಾತಿ ದ್ವೇಷ ಅಂದ್ರಿ, ಕೇಳಿ, ದಲಿತರ ಮನೆಯಲ್ಲಿ ಊಟ ಮಾಡಿದ ಒಕ್ಕಲಿಗ ಹುಡುಗರಿಗೆ ಕೆಲವು ಮತಾಂಧ ಒಕ್ಕಲಿಗರು ಆ ಹುಡುಗರ ತಲೆಬೋಳಿಸಿ ನಾಲಿಗೆ ಸುಟ್ಟು ಗಂಜಲ ಕುಡಿಸಿದ್ದನ್ನು ಕುವೆಂಪು ಪ್ರಸ್ತಾಪಿಸಿ 'ಆ ಮತಾಂಧ ಒಕ್ಕಲಿಗರಿಗೆ ಪೊಲೀಸ್ ಕೇಸು ಮಾತ್ರ ಹಾಕಿ ನಿಲ್ಲಿಸಬಾರದು. ಆ ಮತಾಂಧರಿಗೂ ತಲೆ ಬೋಳಿಸಿ ನಾಲಿಗೆ ಸುಟ್ಟು ಗಂಜಲ ಕುಡಿಸಿ ಮೂಢರಾ ಶುದ್ಧರಾಗಬೇಕಾದವರು ನೀವು' ಎಂದು ತಿಳಿಹೇಳಬೇಕು ಅಂತಾರೆ. ಒಕ್ಕಲಿಗರಿಗೂ ಈ ರೀತಿ ಅನ್ನೋ ಕುವೆಂಪು ಅವರಿಗೆ ಜಾತಿ ಎಲ್ಲಿ ಬಂತು? ಈಗ ನಮ್ಮನ್ನು ನಾವೇ ನೋಡಿಕೊಳ್ಳೋಣ. ಇಲ್ಲಿರೋ ಎಲ್ಲರ ಮಿದುಳನ್ನು ಬಿಚ್ಚಿಟ್ಟರೆ ಅಲ್ಲಿ ಕಾಣೋದೇನು? ಅದೇನು ಮಿದುಳಾ? ಅಲ್ಲಿ ಜಾತಿ ಮತ, ಮೇಲುಕೀಳುಗಳ ಮಲ...' ಅನ್ನುತ್ತಿದ್ದಂತೆಯೇ ಯಾರೋ ಮೈಕು ಕಿತ್ತುಕೊಂಡರು. ಗಲಾಟೆ ಎದ್ದಿತು. ಆಗ ಸಮ್ ಹೌ ಶ್ರೀಕೃಷ್ಣ ಆಲನಹಳ್ಳಿ ಮೈಕ್ ಮುಂದೆ ಬಂದು 'ನಾವು ಕುವೆಂಪು ಅವರನ್ನು ಸಮರ್ಥಿಸಿಕೊಳ್ಳಲು ಬಂದಿಲ್ಲ. ನೀವು ಬ್ರಾಹ್ಮಣರು ಸಮಾಧಾನವಾಗಿ ಆಲೋಚಿಸ್ತೀರಿ ಅಂತ ಅಂದುಕೊಂಡಿದ್ದೆ. ನಿಮ್ಮಲ್ಲಿ ವಿವೇಕ ಇದ್ದರೆ...' ಎನ್ನುತ್ತಿದ್ದಂತೆಯೇ ಆತನ ಕೈಯಿಂದಲೂ ಮೈಕು ನೆಗ್ದು ಹೋಯ್ತು. ನಮಗೆ ಅದರಲ್ಲೂ ಶ್ರೀಕೃಷ್ಣ ಆಲನಹಳ್ಳಿಗೆ ಧಿಕ್ಕಾರಗಳು ಹೆಚ್ಚಾಗತೊಡಗಿತು.

ಆ ಧಿಕ್ಕಾರಗಳು ಹೆಚ್ಚಾಗುತ್ತಲೇ ಹೋಯಿತು. ಆಗ ಸಭೆಯ ವ್ಯವಸ್ಥಾಪಕರು ನಮ್ಮನ್ನು ಸುತ್ತುವರಿದು, 'ಗಲಾಟೆಗೆ ಆಸ್ಪದ ಮಾಡಬೇಡಿ ದಯವಿಟ್ಟು...' ಎಂದು ಶಂಕರಮಠದ ಒಳಕ್ಕೆ ಕರೆದುಕೊಂಡು ಹೋಗಿ ಬಾಗಿಲು ಮುಚ್ಚಿ ಹೆಚ್ಚೂಕಮ್ಮಿ ನಮ್ಮನ್ನು ಕೂಡಿಹಾಕಿದಂತಾಯ್ತು. ನಾವು ಮಠದ ಒಳಗೆ ಇದ್ದೆವು. ಅಲ್ಲಿ ಹೊರಗೆ ಇದ್ದ ತ್ರಿಮತಸ್ಥರು ಒಳಗೆ ನುಗ್ಗಲು ಯತ್ನಿಸುತ್ತಿದ್ದರು. ಅಲ್ಲೆ ನನಗೊಂದು ಪವಾಡ ಕಾದಿತ್ತು. ಅಲ್ಲಿದ್ದ ಶ್ರೀ ಕೃಷ್ಣಮೂರ್ತಿ ಎಂಬುವವರು ನನ್ನ ಕೈ ಕುಲುಕಿ 'ಏನೋ ನಾವು ಪಾಪ ಮಾಡಿ ಇಲ್ಲಿ ಹುಟ್ಟಿಬಿಟ್ಟೊ. ನೀವು ಸರಿಯಾಗಿ ಅಂದಿರಿ. ವಂದನೆಗಳು' ಎಂದರು. ದಿಗ್ಭ್ರಮೆಯಿಂದ ನಾನು ತುಂಬಿಹೋದೆ.

ಆ ಹೊರಗೆ ನಮಗೆ ಧಿಕ್ಕಾರಗಳೂ ನಾವು ಕ್ಷಮೆಯಾಚಿಸಬೇಕೆಂಬ ಒತ್ತಾಯವೂ ಏರುತ್ತಿತ್ತು. ಇನ್ನೂ ಮುಂದುವರಿದು ನಮಗೆ ಹೊಡೆಯಬೇಕೆಂದು ನುಗ್ಗುತ್ತಿದ್ದ

ಗುಂಪಿಗೆ ಎದುರಾಗಿ ಈ ಹಿಂದೆ ಆ ಸಭೆಯಲ್ಲಿ ಭಾಷಣಕಾರರಾಗಿದ್ದ ಶ್ರೀ ರಂಗರಾಜು ಎಂಬುವವರು ತಡೆಯುತ್ತ– 'ನೀವು ಅವರಿಗೆ ಹೊಡೆದರೆ ನಾನು ನಿಮಗೆ ಹೊಡೆಯುತ್ತೇನೆ' ಎಂದು ಅಡ್ಡ ನಿಂತಿದ್ದರು. ನಾವು ಕ್ಷಮೆಯಾಚಿಸಬೇಕೆಂಬ ಕೂಗು ನಿಂತಿರಲಿಲ್ಲ. ಶ್ರೀ ಕೃಷ್ಣ ಆಲನಹಳ್ಳಿ ಸಿಂಬಾಲಿಕ್ ಆಗಿ ಕ್ಷಮೆ ಯಾಚಿಸಲು ಅಂದರೆ 'ಚಪ್ಪಲಿ ಎತ್ತಿ ಹಿಡಿದು ನಿಮ್ಮ ಇಂತಹ ಹಿಂಥೂ ಧರ್ಮ ನನ್ನ ಚಪ್ಪಲಿಗೆ ಸಮಾನ' ಅನ್ನಲು ತವಕದಿಂದ ತಳಮಳಿಸುತ್ತಿದ್ದರು. ಇಲ್ಲಿರುವ ಹಿಂಥೂ ಎನ್ನುವುದು ಸ್ಪೆಲ್ಲಿಂಗ್ ಮಿಸ್ಟೇಕ್ ಅಲ್ಲ, ಕುಪಿತ ಆಲನಹಳ್ಳಿ ಹೇಳುತ್ತಿದ್ದುದು ಹಾಗೆ!

ಆತ ಅಂದರೆ ಶ್ರೀಕೃಷ್ಣ ತಳಮಳಿಸ್ತ ಆ ಕಡೆ ಕುದಿಯುತ್ತಿದ್ದರೆ ಇಲ್ಲಿ ನನಗೆ ಶ್ರೀ ವಿಶ್ವೇಶ್ವರಯ್ಯ ಎಂಬ ವಿಶ್ವ ಹಿಂದೂಪರಿಷತ್‌ನವರು ಮಾತಿಗೆ ಗಂಟುಬಿದ್ದರು. 'ಜಾತಿ ಎಲ್ಲಿದೇರಿ? ಸರ್ಕಾರ ಅದನ್ನು ಮಾಡಿರೋದು' ಎಂದು ವಾದಿಸತೊಡಗಿದರು. ಅವರು 'ನಮ್ಮ ಮನೆಗೆ ಬನ್ನಿ, ಅಲ್ಲಿ ಜಾತಿ ಎಲ್ಲಿದೆ ತೋರಿಸಿ' ಎಂದು ಅವರ ಮನೆಗೆ ಎಲ್ಲಾ ಜಾತಿಯವರೂ ಬಂದು ಊಟ ಮಾಡುವುದನ್ನು ತಿಳಿಸಿ ಊಟಕ್ಕೆ ಕರೆಯತೊಡಗಿದರು. ಆಮೇಲೆ ಅವರೇ 'ಬ್ರಾಹ್ಮಣರು ಎಂದರೆ ಯಾರು?' ಎಂದು ಪ್ರಶ್ನಿಸಿಕೊಂಡು 'ಒಳ್ಳೆಯ ನಡೆನುಡಿ ಇರುವವನು, ಇತರರಿಗೆ ಕೆಟ್ಟದ್ದನ್ನು ಮನಸ್ಸಿನಲ್ಲೂ ಬಯಸದವನು, ಸಮಾಧಾನ ಚಿತ್ತನು, ವಿದ್ಯೆಯಿಂದ ಜೀವಿಸುವವನು...' ಇತ್ಯಾದಿ ಪಟ್ಟಿ ಮಾಡಿ ಮುಂದಿಡತೊಡಗಿದರು. ಅದಕ್ಕೆ ನಾನು 'ಹಾಗಾದರೆ ನಿಮ್ಮ ಗುಣಕರ್ಮಗಳ ಪ್ರಕಾರವೇ ಇಲ್ಲಿ ಸೇರಿರುವ ಯಾವೊಬ್ಬನೂ ಬ್ರಾಹ್ಮಣನಾಗುವುದಿಲ್ಲವಲ್ಲ!' ಅಂದೆ. ಅದಕ್ಕವರು 'ಹೌದುರೀ ನಾನು ಅದನ್ನೇ ಹೇಳೋದು!' ಅಂದರು. ಆಗ ನಾನು 'ಹಾಗಾದರೆ ಬ್ರಾಹ್ಮಣರು ಅಂದುಕೊಂಡು ಯಾಕೆ ಸೇರಿದ್ದೀರಿ' ಕೇಳಿದೆ. ಆಗ ಅವರು, ಈಗ ನನಗೆ ನೆನಪಿಲ್ಲದ ಶಾಸ್ತ್ರದ ನುಡಿ ಹೇಳಿದರು. ಶಾಸ್ತ್ರ ಬಂತಲ್ಲಾ ಅಂತ ನಾನು ಆಗ ಮನುಧರ್ಮಶಾಸ್ತ್ರದ ಬಗ್ಗೆ, ಅದರಲ್ಲಿನ ಅಸಮಾನತೆಯ ಭೀಕರ ನಿಯಮಗಳ ಬಗ್ಗೆ ಎತ್ತಿದೆ. ಅದಕ್ಕೆ ಅವರು ಯಾವೊಂದು ಅಪನಂಬಿಕೆಯೂ ಇಲ್ಲದೆ 'ಅದಕ್ಕೇರಿ ನಿಮಗೆ ತಿಳಿಯಲ್ಲ ಅಂತ ಅನ್ನೋದು. ಅಲ್ಲಿ ಶೂದ್ರ ವೇದ ಓದಿದರೆ ನಾಲಿಗೆ ಕತ್ತರಿಸಬೇಕು, ಕೇಳಿದರೆ ಕಿವಿಗೆ ಕಾದಸೀಸ ಹಾಕಬೇಕು ಇತ್ಯಾದಿನೆಲ್ಲಾ ನೀವು ಯಥಾರ್ಥ ತಗೊತೀರಿ. ಅದನ್ನು ಯಥಾರ್ಥವಾಗಿ ತಗೊಬಾರದು. ಉಪಮೆ ರೂಪಕವಾಗಿ ತಗೋಬೇಕು...' ಎಂದು ಯಾವೊಂದು ಅಳುಕೂ ಇಲ್ಲದೆ ನುಡಿದರು. ಅ ಶಾಸ್ತ್ರ ಗ್ರಂಥದಲ್ಲಿ ಶೂದ್ರ ಅಂತ್ಯಜರ ಬಗ್ಗೆ ಇರೋ ನಿಯಮಗಳನ್ನು ಉಲ್ಟಾ ಮಾಡಿ

ಅವನ್ನು ಬ್ರಾಹ್ಮಣರಿಗೆ ಬದಲಿಸಿದರೆ ಅದನ್ನು ಕೇಳಲಾರದೆ ಇವರು ತಮ್ಮ ಕಿವಿಗಳಿಗೆ ತಾವೇ ಸ್ವಯಂ ಕಾದಸೀಸ ತುಂಬಿಕೊಳ್ಳುವವರಂತೆ ಇರುವ ಇವರು ಇದನ್ನು ಉಪಮೆ ರೂಪಕವಾಗಿ ತೆಗೆದುಕೊಳ್ಳುವರೇ? ಇವರಿಗೆ ಏನಾಗಿದೆ?

ನಾವು ನಿಂತ ಆ ನೆಲ ಕುಸಿಯುತ್ತಿತ್ತು. ನನಗೆ ಬಾಯಿ ಕಟ್ಟಿತು. ನಾನು ಅವರನ್ನು ನೋಡುತ್ತ ಸುಮ್ಮನೆ ನಿಂತೆ. ಅವರು 'ನೋಡುದ್ರ ನೋಡುದ್ರ ನೀವು ಬದಲಾಗ್ತಾ ಇದ್ದೀರಿ. ಮೊದ್ಲು ತಿಳ್ಕೋ ಬೇಕೂರೀ... ನನ್ನ ಜೊತೆ ಚರ್ಚೆಗೆ ಆಗಾಗ ಬನ್ನಿ. ನೀವೇ ಬದಲಾಯಿಸ್ತೀರಿ...' ಅನ್ನುತ್ತಿದ್ದರು. ನಾನು ಅವರನ್ನು ತದೇಕ ನೋಡುತ್ತ ನಿಂತೆ. ನಿಜ, ಅವರ ಮುಖವೇನೋ ನನ್ನ ಕಡೆಗೆ ಇತ್ತು. ಆದರೆ ಮನುಧರ್ಮಶಾಸ್ತ್ರದಂಥವು ಅವರ ಪಾದಗಳನ್ನು ಹಿಂದಕ್ಕೆ ತಿರುಚಿ ಬಿಟ್ಟಿತ್ತು.

ಆಗ ನಮ್ಮ ಕಣ್ಮುಂದೆ–ನಿಲ್ಲಲೂ ಆಗದಂತಿದ್ದ ಮುಪ್ಪಾದ ಶ್ರೀ ರಾಮಯ್ಯ ಎಂಬುವವರು ಎದ್ದು ನಿಂತು ಬಿಟ್ಟರು! ಅವರು ತಮ್ಮ ಕೈಗಳನ್ನು ಮೇಲೆತ್ತಿಕೊಂಡು ಬೀಸುತ್ತ ತಾವೂ ಹಾರಾಡುತ್ತ 'ಬಂಧುಗಳೇ ಇವತ್ತಿನ ದಿವಸ, 80 ವರ್ಷಗಳ ಮೇಲಾದರೂ ನಿಮ್ಮ ಮುಂದೆ ನಿಂತುಕೊಳ್ಳೋ ಒಂದು ಅವಕಾಶ ನನಗಾಗಿದೆ. ಬ್ರಾಹ್ಮಣ ಎಂದರೇನು? ಬ್ರಾಹ್ಮಣನಿಂದೇನಾಗಬೇಕು? ಬ್ರಾಹ್ಮಣ ಏನೇನ್ ಮಾಡಬಲ್ಲ ಅಂತ ಮಾತಾಡ್ತೀನಿ ಹ್ಹ ಹಾ! ಬ್ರಾಹ್ಮಣ ಬರೀ ಭಾಷಣಗಳಿಂದ ಮಾತುಗಳಿಂದ ಕೆಲಸ ಮಾಡಿದ್ರೆ ಆಗೊದಿಲ್ಲೊ... ಬ್ರಾಹ್ಮಣ ಏನ್ ಮಾಡಬೇಕೂ ಅಂದ್ರೆ ಕಾರ್ಯಕ್ಕೆ ಇಳೀಬೇಕು... ಇದೂ ಮೊದ್ಲನೇ ಠರಾವು. ಈ ಮೊದ್ಲನೆ ಠರಾವಿನಲ್ಲಿ ಏನ್ ಮಾಡಬೇಕು? ಬ್ರಾಹ್ಮಣನಿಗೆ ಒಂದಿಷ್ಟು ಹಣ ಬೇಕೂ... ಯಾವ ಕೆಲ್ಸ ಮಾಡಬೇಕಾದ್ರೂ ಬ್ರಾಹ್ಮಣನಿಗೆ ದುಡ್ಡಿಲ್ಲಾ... ಬ್ರಾಹ್ಮಣ ಮುಂಡೇವಾ ಮೊದ್ಲು ಫಂಡೂ ಫಂಡೂ ಫಂಡೂ. ಇದಕ್ಕೆ ನಾನೇ ಮೊದ್ಲು...' ಎಂದೂ ಎಂದು ಕಿರುಚೋ ಆ ದನಿ ಆ ಅವರ ರೂಪ ಕಂಡು, ಯಾವುದೋ ಸೈತಾನ ಬ್ರಾಹ್ಮಣರನ್ನು ಯಮಪುರಿಗೆ ಕಳಿಸಲು ಸಂಚು ನಡೆಸಿ ಶ್ರೀರಾಮಯ್ಯನವರ ದೇಹಕ್ಕೆ ಸೇರ್ಕಂಡು ಹೀಗಾಡಿಸುತ್ತಿರಬಹುದೇ ಎಂದು ಅನ್ನಿಸಿ ಈ ರೀತಿ ಅನ್ನಿಸಿದ್ದಕ್ಕೆ ನನಗೇ ಬೇಸರವಾಗಿ, ಆದರೆ ಆ ಸಭೆಗೆ ಬಂದಿದ್ದ ನಾರಾಯಣನೆಂಬ ನನ್ನ ಬ್ರಾಹ್ಮಣ ಮಿತ್ರ ಮಾರನೆಯ ದಿನ ಸಿಕ್ಕಾಗ ಅವನು 'ಅದೇನಯ್ಯ ಆ ಬ್ರಾಹ್ಮಣರ ಪತನ. ಆ ರಾಮಯ್ಯ ಎಂಬ ಫಂಡ್‌ನ ಹಸಿದ ಪಿಶಾಚಿ. ಅದೇನಯ್ಯ ಅವನ ದನಿ ಕಿವೀಲಿ ಮೊಳಗುತಾ ನನಗೆ ರಾತ್ರಿ ನಿದ್ದೇನೇ ಬರ್ಲಿಲ್ಲಯ್ಯ' ಅಂದು ಪುನಃ ಮೊದಲ ಅನುಮಾನಕ್ಕೆ ನನ್ನನ್ನು ತಳ್ಳಿದನು. ಇದಿರಲಿ, ಇದು ನಾಳೆ ಮಾತು!

ಇಲ್ಲಿ, ನನಗೆ ಇಲ್ಲಿ, ಈ ಶ್ರೀ ಅಭಿನವ ಶಂಕರಾಲಯದಲ್ಲಿ ಗ್ಲಾನಿ ತುಂಬಿತು. ಮನುಧರ್ಮ ಶಾಸ್ತ್ರದಂತಹ ಗ್ರಂಥಗಳು ಈ ಮನುಷ್ಯರ ಪಾದಗಳನ್ನು ಹಿಂದಕ್ಕೆ ತಿರುಚಿಸಿರೋ ಈ ರೋಗಕ್ಕೆ ಮದ್ದಿಗಾಗಿ ತವಕಿಸುತ್ತಿರುವಾಗ ಆರ್‌ಎಸ್‌ಎಸ್ ಶ್ರೀಪಾದರಾವ್ ಮುಖಾಮುಖಿಯಾದರು. ಅವರು– 'ಬ್ರಾಹ್ಮಣರು ಅಂತ ಅಲ್ಲ. ಯಾವ ಜಾತಿಗೆ ಅವಹೇಳನ ಮಾಡಿದರೂ ಅಂಥಾ ಹೇಳಿಕೆ ಸಾಹಿತ್ಯಕ್ಕೆಲ್ಲ ಪ್ರತಿಭಟನೆ ಮಾಡುವ ಸಂಸ್ಥೆ ಕಟ್ಟುವ' ಬಗ್ಗೆ ಮಾತಾಡಿದರು. ಓಹೋ ಇವರಿಗೂ ನನಗೂ ಮುಂದೆ ಒಂದು ಫೈಟಿಂಗು ಕಾದಿದೆ ಅಂದುಕೊಳ್ಳುತ್ತ, ಹೀಗೆಲ್ಲ ಮಾತಾಗುತ, ಸುಮಾರು ಹೊತ್ತಾಗುತ, ಅಷ್ಟೂ ಕಾಲವೂ ನನಗಂಟಿಕೊಂಡೇ ಬರುತ್ತಿದ್ದ ಸುಬ್ರಹ್ಮಣ್ಯಂ ಎಂಬ ಇಂಜಿನಿಯರಿಂಗ್ ಹುಡುಗ– 'ನಾನು ಜಾತಿ ವಿರೋಧಿಯೆ. ಆದರೆ ಕುವೆಂಪು ಎಲ್ಲಾ ಬ್ರಾಹ್ಮಣರನ್ನು ಒಟ್ಟಿಗೆ ಸೇರಿಸಿ ಅನ್ನಬಾರದಿತ್ತು' ಅಂತಿದ್ದನು. ಅಷ್ಟಕ್ಕೆ ಹೊರಗಡೆಯಿದ್ದ ಇನ್ನೊಂದು ಹುಡುಗ ಕಿಟಕಿ ಸರಳುಗಳಿಂದ ತನ್ನ ಕೈತೂರಿಸಿ ಚಾಚಿ ನನ್ನನ್ನು ಕರೆಯುತ್ತಿದ್ದನು. ಏನೆಂದು ಹತ್ತಿರ ಹೋದಾಗ ಆತ ಚಾಚಿದ ತನ್ನ ಕೈ ನೀಡಿ 'ನಾನು ನಿಮ್ಮ ತಮ್ಮ ಶಂಕರ್‌ನ ಕ್ಲಾಸ್‌ಮೇಟ್' ಎಂದು ನಗು ತುಂಬಿ ನನ್ನ ಕೈ ಕುಲುಕಿದನು. ಆ ನಿಷ್ಕಲ್ಮಶ ಕೈಗಳಿಗೆ ಮುತ್ತಿಕ್ಕಬೇಕೆಂಬ ಆಸೆಯಾಗತೊಡಗಿತು.

ಇತಿಹಾಸಕ್ಕೆ ತಮಾಷೆ ನೋಡುವ ಬಯಕೆ ಬಂದೇನೋ ಏನೋ ನನ್ನನ್ನು ಗುಡಿ ಒಳಕ್ಕೂ ಆತನನ್ನು ಗುಡಿ ಹೊರಕ್ಕೂ ಇರಿಸಿ, ಕಿಟಕಿ ಕಿಂಡಿ ಮೂಲಕ ನಮ್ಮಿಬ್ಬರ ಕೈ ಹಿಡಿಸಿ ನಗುತ್ತಿತ್ತು. ನನ್ನ ಕಣ್ಗಳ ಮುಂದೆ ಆ ಹುಡುಗನ ನಗು ತುಂಬಿತು, ಶ್ರೀ ಕುವೆಂಪು ಅವರ 'ಹುಟ್ಟುತ್ತ ವಿಶ್ವಮಾನವ' ಮೂಡಿತು. ಜಾತಿ ಮತಗಳ ವಿಷ ಜ್ವಾಲೆ ಇಂಥ ನಗುಗಳನ್ನೂ ಕ್ರೂರವಾಗಿ ಸುಡುವುದನ್ನು ಕಲ್ಪಿಸಿಕೊಳ್ಳಲೂ ಮನಸ್ಸಾಗದೆ ಬೇಯತೊಡಗಿದೆ.

# ಸಮಾನತೆಯ ಕನಸನ್ನು ಮತ್ತೆ ಕಾಣುತ್ತಾ

## ಮಾನವೀಯತೆ ಅಂತಾರಲ್ಲ– ಅದರ ಬಗ್ಗೆ

ನಾನು ಅಕಸ್ಮಾತ್ ಓದಿದವನು. ಹಾಗೇನೆ ಅಕಸ್ಮಾತ್ ಕಥೇನೊ ಕವನಾನೊ ಬರೆದವನು. ಈ ಆಕಸ್ಮಿಕ ಸಂಭವಿಸದಿದ್ದರೆ ನಾನು ಇಲ್ಲಿರ್ತ ಇರಲಿಲ್ಲ, ನಮ್ಮೂರಲ್ಲೋ ಎಲ್ಲೋ ಜೀತ ಮಾಡ್ತ ಇರಬೇಕಿತ್ತು, ಯಾರ್‍ದೊ ಹೊಲದಲ್ಲಿ ದುಡೀತಾ ಆ ದುಡಿಮೆಗೂ ಅದರ ಫಲಕ್ಕೂ ಆ ದುಡಿಯುವ ನನಗೂ ಎಂಥದೂ ಸಂಬಂಧಾನೆ ಇಲ್ಲದೆ ಇರಬೇಕಿತ್ತು. ಬಹುತೇಕ ಎಲ್ಲಾ ಶೂದ್ರರ ಕತೆಯೂ ಹೀಗೇ ಇರಬಹುದು.

ಈಗ ನನ್ನ ಎದೆಗೆ ಅಕ್ಷರ ಬಿದ್ದಿದೆ. ತಿಳಿದವರ ಒಡನಾಟದಿಂದ ಒಂದಿಷ್ಟು ತಿಳಿದಿದೆ. ಈ ತಿಳಿವಳಿಕೆಯಿಂದ ಅಷ್ಟಿಷ್ಟು ನಂಗೂ ಕಾಣ್ತಿದೆ. ಇದ ಕಂಡಾಗ ಒಂದೊಂದು ಸಲ ಅನ್ಸುತ್ತೆ– ಇಂದು ಒಬ್ಬ ಆದಿ ಜನಾಂಗದವನು ಸಂವೇದನಾಶೀಲನಾದರೆ ಅದೊಂದು ರೌರವ ನರಕ. ಅವನಿಗೆ ಕಾಣುತ್ತೆ– ತನ್ನ ಸಂಬಂಧಿಗಳು ಹಸಿವಿನಿಂದ ಸಾಯ್ತ ಇರೋದು, ಬೀದೀಲಿ ಭಿಕ್ಷೆ ಬೇಡೋದು, ಜೀವಂತ ಸುಡಿಸಿಕೊಳ್ಳೋದು, ಪಶು ಥರ ದುಡಿಯೋದು, ಅವ ದುಡಿಯೋದು ಅವಗೆ ದಕ್ಕದೆ ಇರೋದು, ಇದರ ಜೊತೆಗೇನೆ ಹುಟ್ಟಿದ ತಪ್ಪಿಗೆ ಥೂ ಛೀ ಅನ್ನಿಸಿಕೊಳ್ಳೋದು ಕೂಡ.

ಈ ನನ್ನ ಹಿನ್ನೆಲೇಲಿ ಒಂದೆರಡು ಮಾತಿಗೆ ಬರ್‍ತೇನೆ– ಸಾಮಾನ್ಯವಾಗಿ ಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯ ಅನ್ನೊ ಮಾತನ್ನ ನಾವು ಆಗಾಗ ಹೇಳ್ತೇವೆ, ಕೇಳ್ತೇವೆ, ಇವಕ್ಕೂ ಸಾಹಿತಿಗೂ ಹುಟ್ಟಾಸಂಬಂಧ ಇದೆಯೇನೊ ಎಂಬಷ್ಟು. ಈ ಜಾತಿ ಅಸಮಾನತೆಯ ಇಂಡಿಯಾದಲ್ಲಿ ವ್ಯಕ್ತಿಸ್ವಾತಂತ್ರ್ಯ, ಸ್ವಾತಂತ್ರ್ಯ ಇವು ಒಂದೊಂದು ಸಲ ಯಮದೂತರ ಥರ ಕಾಣತೊಡಗುತ್ತವೆ.

ಇವೆಲ್ಲಾ ಯಾರಿಗೆ ಇದೆ? ನಮ್ಮ ಬೆನ್ನ ಹಿಂದೆ ಏನೇನೂ ಎಳ್ಳಷ್ಟು ಅರಿವೆ ಇಲ್ಲದ ಕೋಟಿ ಕೋಟಿ ನಮ್ಮ ನಿಮ್ಮಂಥ ನರಮನಸರು ಇದ್ದಾರೆ. ಅಸಮತೆ ಪಾತಾಳ ಆಕಾಶದಷ್ಟು ಇರೋ ಇಲ್ಲಿ ಸ್ವಾತಂತ್ರ್ಯ, ವ್ಯಕ್ತಿಸ್ವಾತಂತ್ರ್ಯ ಅಂದ್ರೆ ಜಾತಿ ಮೇಲ್ಮೆ-ಆಸ್ತಿ ಮೇಲ್ಮೆ ಉಳ್ಳವರ ಸ್ವಾತಂತ್ರ್ಯ ಎಂದೇ ಅರ್ಥವಲ್ಲವೇ? ಅಸಮತೆಯಲ್ಲಿ ನಿಜವಾದ ಸ್ವಾತಂತ್ರ್ಯವು ಉಂಟಾಗುವುದೂ ಇಲ್ಲವೇನೋ.

ಮತ್ತೂ ಭೀಕರತೆ ಎಂದರೆ ಇಂಡಿಯಾದ 'ಸನಾತನ ಸುಲಿಗೆಮನಸು' ಬಂಡವಾಳಶಾಹಿಗಿಂತಲೂ ಕ್ರೂರವಾಗಿ, ಕುಟಿಲವಾಗಿ ಇದೆಯೇನೋ ಅನಿಸುತ್ತದೆ. ಜಾತಿ-ವರ್ಣವ್ಯವಸ್ಥೆಯು ಇಲ್ಲಿ ಹುಟ್ಟುವ ಮಕ್ಕಳ ಸಾಮಾಜಿಕ ಚಲನೆಯ ಕಾಲು ಕತ್ತರಿಸಿ ಚಲನೆಯೇ ಇಲ್ಲದಂತೆ ಮಾಡಿದೆ.

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಆರ್ಥಿಕ ಸ್ಪರ್ಧೆಯ ಏರಿಳಿತದಿಂದ ಬಡವ ಬಲ್ಲಿದನೂ ಆಗಬಹುದು, ಕೀಳಾದವನು ಮೇಲೂ ಆಗಬಹುದು. ಅಲ್ಲಿ ಅಸಮಾನ ವ್ಯವಸ್ಥೆಯ ಬಗ್ಗೆ ಅಸಮಾಧಾನವಾದರೂ ಇರುತ್ತದೆ. ಆದರೆ ಈ ಮೇಲುಕೀಳಿನ ಜಾತಿಯ ಚಾತುರ್ವರ್ಣ ವ್ಯವಸ್ಥೆಯಲ್ಲಿ ಮಗು ಹುಟ್ಟುಟ್ಟುತ್ತಲೇ ಅದರ ಮಿದುಳಲ್ಲಿ ಅಸಮಾನತೆಯನ್ನೂ ಮೇಲು-ಕೀಳ್ತನಗಳನ್ನೂ ಒಪ್ಪಿತ ಮೌಲ್ಯವಾಗಿಸಿ ಮಾನವತೆಯನ್ನು ಕೊಂದು ಹುಟ್ಟಿಸುವಂಥ ಯಶಸ್ವೀ ಶಸ್ತ್ರಚಿಕಿತ್ಸೆ ಇಲ್ಲಿ ಜರುಗುತ್ತದೆ. ಇಂಥದು ಭೂಮಿ ಮೇಲೆ ಮತ್ತೆಲ್ಲು ಇರಲಾರದು. ಇದು, ಸುಲಿಗೆಯ ಅಮೆರಿಕವೂ ಸುಲಿಗೆಯನ್ನು ಶಾಶ್ವತಗೊಳಿಸಲು ಇಲ್ಲಿಂದಲೇ ಕಲಿಯುವುದು ಬಹಳವಿದೆ ಎಂಬಂತಿದೆ.

ಸುಮ್ಮನೆ ಒಂದು ಉದಾಹರಣೆಗೆ- ಇಂಡಿಯಾದಲ್ಲಿ ಕಡು ಬಡತನದೊಡನೆ ಅವಮಾನಿತ ದಲಿತರು, ಅರಳದಂತೆ ಕುಗ್ಗಿದ ಮಹಿಳೆಯರು, ತುಳಿತಕ್ಕೊಳಗಾದ ತಳಸಮುದಾಯದವರು, ಅನುಮಾನಿತ ಮುಸ್ಲಿಮರೂ ಸೇರಿದರೆ ಅದೇ ಜನಸಂಖ್ಯೆಯ ಶೇಕಡ ಎಂಬತ್ತರಷ್ಟಾಗಬಹುದೇನೋ. ಇವರಲ್ಲಿ ಶೇಕಡಾ ಹತ್ತರಷ್ಟು ಹೊಟ್ಟೆ ಬಟ್ಟೆಗೆ ನೇರ ಇರೋರು, ಕಲಿತವರು ಸುಲಿಗೆ ಮಾಡ್ತ ಇರೋರು ಸಿಕ್ತಾರ? ಅದೂ ಕಷ್ಟವೇ. ಹೋಗಲಿ, ಇವರನ್ನ ಬಿಟ್ಟೇಬಿಡ್ರಪ್ಪ. ಉಳಿದವರು ಬಡತನ ಅವಮಾನ ಜತೆಗೆ ಅವಕಾಶವಂಚಿತರಾಗಿ ಸತ್ತೂ-ಹುಟ್ಟಿ ಬದುಕ್ತಾ ಇರೋರೆ ಈ ದೇಶದ ಜನಸಂಖ್ಯೆಯಲ್ಲೆ ಮುಕ್ಕಾಲು ಮೀರುತ್ತೆ. ಅಂದರೆ ಬಹುಸಂಖ್ಯಾತ ಜನಸಂಖ್ಯೆ ಆಗುತ್ತೆ. ಪ್ರಜಾಪ್ರಭುತ್ವ ನಿಜವಾದಲ್ಲಿ ಈ ಬಹುಸಂಖ್ಯಾತ ನೊಂದವರೇ ಈ ದೇಶದ ಮಾಲೀಕರಾಗಬೇಕಾಗಿತ್ತು. ಒಂದು ಕಾನೂನು ಅಥವಾ ಸಮಸ್ಯೆಯನ್ನು ನಿರ್ಧರಿಸುವಲ್ಲಿ ಇವರ

ನಿರ್ಧಾರವೇ ಮೇಲುಗೈ ಆಗಬೇಕಾಗಿತ್ತು. ಇವರ ಹಿತಕ್ಕೆ ತಕ್ಕಂತೆ ಬದಲಾವಣೆ ಜರುಗಬೇಕಾಗಿತ್ತು. ಪ್ರಜಾಪ್ರಭುತ್ವ ಅಂದರೆ ಇದೇ ಅಲ್ಲವೇ?

ಆದರೆ ಇರೋದು ಏನು? ಈ ನರಕದೊಳಗೂ ಮೇಲುಜಾತಿ ಭ್ರಮೆಯ ಬಡವರೂ ಮಡಿ ಬಿಟ್ಟಿಲ್ಲ ಯಾಕೆ? ಹಸಿದು ಸತ್ತರೂ ಬಡವರು ಒಂದಾಗುವುದಿಲ್ಲವೇನೊ ಎಂಬಂಥ ಭೀಕರ ಅಸಹಜ ಸಂಬಂಧ ಇಲ್ಲಿದೆ.

ಇಂದು ವ್ಯಕ್ತಿಯ ಪರಕೀಯತೆಯಲ್ಲಿ ಮುಳುಗಿರುವ ಲೇಖಕ, ಇಲ್ಲಿ, ಈ ನಮ್ಮ ಸಮಾಜದಲ್ಲಿ ಇಡೀ ಒಂದು ಸಮುದಾಯವೇ ಅಸ್ಪೃಶ್ಯವಾಗಿ ಊರಾಚೆ ಬಿದ್ದು ಪರಕೀಯವಾಗಿ (ಏಲಿಯನೇಷನ್) ನರಳುತ್ತಿದೆಯಲ್ಲ– ಇದನ್ನು ಒಂದಿಷ್ಟು ನೋಡಿ ಎಂದಷ್ಟೆ ನನ್ನ ವಿನಂತಿ. ಸಮಷ್ಟಿಯ ಸ್ವಾತಂತ್ರ್ಯದ ಒಳಗೇನೆ ತನ್ನ ಹಿತವನ್ನು ಕಾಣದಿದ್ದರೆ ಆತ ಸ್ಪಂದನೆಯನ್ನು ಕಳೆದುಕೊಂಡು ಆತನ ಸಂವೇದನೆಗೆ ಒಂದಲ್ಲ ಒಂದು ಬಗೆಯ ಕುಷ್ಟ ತಗುಲಿದೆ ಎಂದೇ ಅರ್ಥ. ಆದರೆ ನಾವು ಹುಟ್ಟಿದಾಗಲೇ ನಮ್ಮ ಎಳೆಮೆದುಳಿನ ರಚನೆಯನ್ನು ಇಲ್ಲಿನ ಸುಲಿಗೆಗೆ ಅಣಿಗೊಳಿಸುವಂಥ ಜಾತಿವ್ಯವಸ್ಥೆಯಲ್ಲಿ ನಾವು ಹಾಯ್ದು ಬಂದವರಾಗಿರುತ್ತೇವೆ.

ತಾನೂ ಇನ್ನೊಂದು ಜೀವವಾಗುವ ಕವಿ, ಈ ಜಾತಿಮೂಲವಾದ ಅಸಮತೆಯ ಕೊಳಕಿನಿಂದ ಬಂದ ವ್ಯಕ್ತಿತ್ವವನ್ನು ತನ್ನೊಳಗಿಂದಲೂ ಕಳೆದುಕೊಳ್ಳುವ ಕ್ರಿಯೆ ಸೃಜನಾತ್ಮಕ ಸಂವೇದನೆಯ ಭಾಗವಾಗಿರುತ್ತದೆ.

ಆದರೆ ಇಲ್ಲಿ ಸಾಹಿತ್ಯ ಯಾವ ರೀತೀಲಿ ಹರಿದು ಬಂತು ಅನ್ನೋದನ್ನ ನೋಡಿದರೂ ಕೂಡ, ಇಲ್ಲಿ ಸಮುದಾಯದ ಕತೆಯಾಗಲಿಲ್ಲ. ವಚನಯುಗ ಇದಕ್ಕೆ ಹೊರತು. ವಚನಯುಗ ಮುಗಿದಮೇಲೆ ಮತ್ತದೇ ಹಳೆ ಕಥೆಯಾಯ್ತು. ಅದಿರಲಿ, ಇಲ್ಲಿ ಜನತೆ ತಿಳಿಯದ ಭಾಷೆಯಾದ ಸಂಸ್ಕೃತದಲ್ಲಿ ಸೃಷ್ಟಿಯಾದುದರ ನೆರಳಂತೆ ಕನ್ನಡ ಸಾಹಿತ್ಯ ತನ್ನನ್ನು ರೂಪಿಸಿಕೊಂಡು ಅದರೊಳಗೆ ಜನ್ಮ, ಕರ್ಮ, ವರ್ಣ, ಜಾತಿಕಟ್ಟುಪಾಡು, ಸತ್ಯಕ್ಕೆ ಬಂದರೂ ಅದರೊಳಗೂ ಪಾರಮಾರ್ಥಿಕ ಸತ್ಯ, ಲೌಕಿಕ ಸತ್ಯ ಎಂದು ಸತ್ಯವನ್ನೂ ಇಬ್ಬಂದಿ ಮಾಡಿ ಒಡಲು ಪಡೆದ ಕೃತಿಗಳೇ ಇಲ್ಲಿ ಹೆಚ್ಚಾಗಿ ಸಮಾಜದ ಛಿದ್ರತೆಗೆ ಇವುಗಳ ಕಾಣಿಕೆಯೂ ಇದೆ.

ಇಲ್ಲಿ ಸಾಹಿತ್ಯದಲ್ಲೂ ಸಮಾನತೆಯನ್ನು ಹುಡುಕುವುದು ಎಂದರೆ ಈ ಜಾತಿಯ ರಣರಂಗದ ಹೆಣಗಳ ರಾಶಿಯಲ್ಲಿ ಅಲ್ಲಿ ಇಲ್ಲಿ ಉಳಿದಿರಬಹುದಾದ ಜೀವ ಹುಡುಕುವ ಕೆಲಸದಂತಾಗುತ್ತದೆ.

ಇನ್ನು ಇಪ್ಪತ್ತನೇ ಶತಮಾನಕ್ಕೆ ಬಂದರೆ, ಹೆಚ್ಚು ಮಾನವೀಯರಾದ ಕುವೆಂಪು ಮತ್ತು ಕಾರಂತರನ್ನು ಉದಾಹರಣೆ ಕೊಟ್ಟು ಹೇಳುವೆ. ಕುವೆಂಪು ಸಮಬಾಳು ಸಮಪಾಲು ಇತ್ಯಾದಿ ಬರೆದಂಥವರು. 'ಮಲೆಗಳಲ್ಲಿ ಮದುಮಗಳು'ನಲ್ಲಿ ಹೊಲತಿ ತಿಮ್ಮಿಯಲ್ಲೂ ದಾರ್ಶನಿಕತೆ ಕಾಣುವ, ಸಂವೇದಿಸುವ ಮಹಾಕವಿ ಕುವೆಂಪು, ಕಾವೇರಿಯಿಂದ ತನ್ನ ಕೈ ಬೊಗಸೆಗೆ ನೀರು ಸುರಿಸಿಕೊಂಡು ಕುಡಿಯುವ ಗುತ್ತಿಯನ್ನು ತಾನೆ ಒಂದು ಗಳಿಗೆ ಸಂವೇದಿಸಲಿಲ್ಲವೇನೊ ಎಂಬ ನುಂಗಲಾರದ ತುತ್ತು ಉಳಿದುಬಿಡುತ್ತದೆ. ಹಾಗೆ ಕಾರಂತರ 'ಚೋಮನ ದುಡಿ'ಯಲ್ಲಿ ಕಾರುಣ್ಯಕ್ಕಿಂತ ಕರುಣೆ ಹೆಚ್ಚಿದ್ದು ಚೋಮನ ದುಡಿಯ ದನಿ ಊರಾಚೆ ಬಿದ್ದವನ ಹಕ್ಕಿನ ದನಿಯಾಗಿ ನಮ್ಮೊಳಗೆ ಮರುದನಿ ಕೊಡಲಿಲ್ಲ. ಹಾಗೆಯೆ ಪ್ರಗತಿಶೀಲ ಉದ್ದಿಶ್ಯ ಇಟ್ಟುಕೊಂಡು ಪ್ರಗತಿಶೀಲ ಸಾಹಿತ್ಯ ಹೊರಟರೂ ಕೂಡ ಅದರ ತಲೆ ಒಳಗೆ ಪ್ರಗತಿಶೀಲತೆ ನಡೆದು ನೆಲ ಕಾಣದಿದ್ದುದರ ಪರಿಣಾಮವಾಗಿ ಅದು ಹೆಳವಾಗಿಯೇ ತೆವಳಿತು. ಇಂದು ನಮ್ಮ ನೆಲ ಬೇಡುತ್ತಿರುವುದು, ಪ್ರಗತಿಶೀಲ ಸಾಹಿತ್ಯವನ್ನೇ ಅನ್ನಿಸುತ್ತದೆ. ಈ ಹಿಂದೆ ತಲೆಯಲ್ಲಿ ಹುಟ್ಟಿ, ತಲೆಯಲ್ಲೇ ಸತ್ತ ಪ್ರಗತಿಶೀಲತೆ ಇಂದು ಪಾದಗಳನ್ನು ಬೇಡುತ್ತಿದೆ.

ಇಂದು ನವ್ಯ ಎಂದು ಕರೆಯಲ್ಪಡುತ್ತಿರುವ ನವ್ಯಕ್ಕೆ ಬಂದರೆ ನವ್ಯವು ವ್ಯಕ್ತಿಯನ್ನೇ ಜಗತ್ತು ಎಂದು ತೋರಿಸಿತು. ಜಗತ್ತು ಇವರಿಗೆ ಕಾಣಲೇ ಇಲ್ಲ. ಇವರೊಡನೆಯೇ ಇದ್ದರೂ ನಾನು ಸಮುದಾಯದೊಳಗಿನ ವ್ಯಕ್ತಿಯಾಗಿದ್ದೆ ಎಂದು ಕಾಣುತ್ತದೆ. ಜತೆಗಿದ್ದರೂ ನಾನು ನಿಂತ ನೆಲ ಮತ್ತು ನೆಲೆ ಬೇರೆಯಾಗಿತ್ತೇನೊ! ಅದಕ್ಕಾಗೇ ನವ್ಯ ಸಾಹಿತ್ಯದ ಬಂಧ, ಕೇಂದ್ರ, ಪರಕೀಯತೆ ಇಂಥವುಗಳಿಂದ ನಾನು ಹೊರಗೇ ನಿಂತೆನೇನೋ! ಹರಿಯುವ ಬದುಕಿಗೆ ಯಾವ ಬಂಧವಿದೆ? ಯಾವ ಕೇಂದ್ರವಿದೆ?

ನಮ್ಮ ಸಾಹಿತಿಗಳು ಸಮಾಜಕ್ಕೆ ಹೇಗೆ ಸ್ಪಂದಿಸುವರು ಎಂಬುದಕ್ಕೆ ಉದಾಹರಣೆಯಾಗಿ– ಈಚೆಗೆ ನಡೆದ ಒಂದು ಚರ್ಚೆಯಲ್ಲಿ ಒಬ್ಬ ಲೇಖಕರು– 'ಇಂದಿನ ನಮ್ಮ ಜೀವನದಲ್ಲಿ ನಾವು ಬಯಸಿದ್ದೆಲ್ಲ ತಕ್ಷಣ ಸಿಗುತ್ತದೆ. ಆಸೆ ಮತ್ತು ನೆರವೇರಿಕೆಯ ನಡುವೆ ಅಂತರ ಕಡಿಮೆಯಾಗಿದೆ' ಎಂದಿದ್ದಾರೆ. ತಮ್ಮ ಸುತ್ತಮುತ್ತಲ ಪರಿಚಯ ಇಲ್ದೇನೆ ತಾವೇತಾವಾಗಿ ಸಂತೃಪ್ತರಾದ ವ್ಯಕ್ತಿ ಮಾತ್ರ ಇಂಥ ಮಾತು ಆಡಬಹುದು. ಇಂಡಿಯಾ ತಾರತಮ್ಯ ಅಸಮಾನತೆಯಲ್ಲಿ ಬೇಯ್ತಾ ಇದೆ, ನನಗೆ ದಿಗಿಲು ಆಗುತ್ತೆ, ಇವರ ನೋಟ ನನಗೆ ಅರ್ಥವಾಗುತ್ತಿಲ್ಲ. ಆಮೇಲೆ ದಲಿತರ ಬಗ್ಗೆ ಮಾತಾಡುತ್ತಾ

'ಪ್ರತಿಯೊಬ್ಬನೂ ತನ್ನನ್ನು ತಾನೇ ಮೇಲೆತ್ತಿಕೊಳ್ಳುವ ಸ್ಪರ್ಧೆ ಈ ದೇಶದಲ್ಲಿ ಉಂಟಾಗಬೇಕು. ದಲಿತರಿಗೆ ದೊಡ್ಡ ದೊಡ್ಡ ಅಧಿಕಾರ ಕೊಟ್ಟ ಮಾತ್ರಕ್ಕೆ ಅವರ ಉದ್ಧಾರವಾಗುತ್ತದೆಯಾ?' ಎಂದು ಪ್ರಶ್ನಿಸುತ್ತಾರೆ. ಇಂಡಿಯಾದಲ್ಲಿ ಒಬ್ಬರ ಮೇಲೊಬ್ಬರು, ಒಬ್ಬರ ಮೇಲೊಬ್ಬರು ಹೀಗೆ ಪಿರಮಿಡ್ ಗೋಪುರದಂತೆ ರಚನೆ ಇರುವಾಗ ಇಲ್ಲಿ ಹೆಂಗೆ ನ್ಯಾಯಯುತವಾದ ಸ್ಪರ್ಧೆ? ಅಥವಾ ಈ ಗೋಪುರ ರಚನೆ ಕಿತ್ತು ಆರ್ಥಿಕ ಸ್ಥಿತಿಯನ್ನು ಸಮ ಮಾಡಿದರೂ ಕೂಡ ಅಲ್ಲೂ ಸ್ಪರ್ಧೆ ಯಾಕೆ? ಹಾಗೆ ಇಂದು ದಲಿತರಿಗೆ ದೊಡ್ಡ ದೊಡ್ಡ ಅಧಿಕಾರ ಕೊಟ್ಟ ಮಾತ್ರಕ್ಕೆ ಆ ಸಮುದಾಯದ ಉದ್ಧಾರ ಸಾಧ್ಯವಿಲ್ಲ ಎಂದು ನಾನೇ ಮೊದಲು ಹೇಳುವೆ. ಆದರೂ ಈ ಕಲಸುಮೇಲೋಗರದೊಳಗೂ ಈ ಜಡ ಸಮಾಜದಲ್ಲಿ ಇದರಿಂದಲೂ ಒಂದಿಷ್ಟು ಬದಲಾವಣೆ ಆಗುತ್ತಿರುವುದನ್ನೂ ನಾವು ಕಾಣಬೇಕಲ್ಲವೆ?

ಅವರೇ ಮುಂದೆ 'ಈ ದೇಶದಲ್ಲಿ ಬುದ್ಧಿಯ ವಿರುದ್ಧ, ಉತ್ತಮ ಮೌಲ್ಯಗಳ ವಿರುದ್ಧ ಒಂದು ಹೋರಾಟ ನಡೆಯುತ್ತಾ ಇದೆ. ಅದನ್ನು ನಾವು ಎದುರಿಸಬೇಕು' ಎಂದಿರುವರು. ಈ ದೇಶದಲ್ಲಿ ಯಾವ ತರದ ಬುದ್ಧಿಯಿದೆ? ಅದು ಸೋಮಾರಿಯಾದ ಪರಾವಲಂಬಿಯಾದ ತರ್ಕದ ಅಪಾಯಕಾರಿ ಬುದ್ಧಿ. ಈ ಬುದ್ಧಿಗೂ ದುಡಿಮೆಗೂ ಸಂಬಂಧವಿಲ್ಲದ ಬುದ್ಧಿ. ಇಲ್ಲೂ ಮತ್ತೆ ವಚನಕಾರರ ಯುಗ ಇದಕ್ಕೆ ಹೊರತು. ದುಡಿಮೆ ಮೂಲಕ ಚಿಂತಿಸುವ ಯತ್ನ ನಡೆದ ಅಪೂರ್ವ ಕಾಲ ಅದು. ಇಂದು ಬುದ್ಧಿಗೆ– ವಿವೇಕ, ಅಂತಃಕರಣ, ಮಾನವೀಯತೆ ಕೂಡಿಸಬೇಕಾಗಿದೆ.

ಮುಂದೆ ದಲಿತ ಸಾಹಿತ್ಯಕ್ಕೆ ಅವರ ಚರ್ಚೆ ಬರುತ್ತದೆ. ದಲಿತರು ಬರೆದರೂ ಸ್ವಲ್ಪ ಕಾಲ ಪ್ರತಿಭಟನೆಗಾಗಿ ಬರೆದು ಅನಂತರ ನಮ್ಮಂತೆಯೆ ಬರೆದಾರು ಎಂಬ ತೀರ್ಮಾನಕ್ಕೆ ಬರುತ್ತಾರೆ. ಇದು ಒಳ್ಳೆಯದೊ ಕೆಟ್ಟದೊ ನನಗೆ ಗೊತ್ತಾಗುತ್ತಿಲ್ಲ ಮತ್ತು ಇನ್ನೊಂದು ವಿಚಾರ– ಬರಹಗಾರರ ಒಕ್ಕೂಟದ ಬಗ್ಗೆ ಯಾರೋ ಈ ಪ್ರಶ್ನೆ ಕೇಳಿದರು– 'ಒಕ್ಕಲಿಗರು, ಲಿಂಗಾಯಿತರೂ ದಲಿತರನ್ನು ಶೋಷಣೆ ಮಾಡುತ್ತಾ ಇರುವರು, ಇವರೊಟ್ಟಿಗೆ ಸಾಮರಸ್ಯ ಹೆಂಗೆ ಸಾಧ್ಯ?' ಅಂತ. ಇಲ್ಲಿ ಶೋಷಣೆ ಸ್ಥೂಲವಾಗಿ ಎರಡು ರೀತಿಯಲ್ಲಿ ಇದೆ. ಒಂದು ಕಾಣೋದು. ಇನ್ನೊಂದು ಕಾಣ್ದೆ ಇರೋದು. ಪ್ರತ್ಯಕ್ಷ ತೆರಿಗೆ, ಪರೋಕ್ಷ ತೆರಿಗೆ ಅಂತಾರಲ್ಲ ಹಂಗೆ. ಇಲ್ಲಿ ಬ್ರಾಹ್ಮಣರು, ಶೂದ್ರರು, ದಲಿತರು ಎಂದು ವಿಂಗಡಿಸಿದರೆ ಅವು ಬುದ್ಧಿ, ಹೃದಯ, ಹೊಟ್ಟೆಯ ಥರ, ರಫ್ ಆಗಿ ಇಲ್ಲಿನ ಸಂಬಂಧ ಎಂದುಕೊಳ್ಳಬಹುದೇನೋ. ಆದರೆ ಬ್ರಾಹ್ಮಣರದು ಕೇವಲ

ಒಂದು ಜಾತಿಯಾಗದೆ ಬ್ರಾಹ್ಮಣರೂ ಕೂಡ ಹೇಸುವಂಥ ತಾರತಮ್ಯವನ್ನೇ ಮೌಲ್ಯವಾಗಿಸಿದ ಒಂದು ನೀತಿಯೂ ಆಗಿಬಿಟ್ಟಿದೆ– ಹೀಗೆಂದು ಅವರಿಗೆ ಹೇಳಿದ ನೆನಪು.

ಕೊನೆಗೆ ನನ್ನ ಮಾತನ್ನು– ಊರಾಚೆ ಪರಕೀಯವಾಗಿ ಬಿದ್ದು ನರಳುತ್ತಿರುವ ಅಸ್ಪೃಶ್ಯತೆಯ ಆಕ್ರಂದನ, ಕೋಪ, ತಾಪ ಚೀರುತ್ತಿರುವುದು, ಅದು ಪ್ರೀತಿಗಾಗಿ, ಸಮಾನತೆಗಾಗಿ, ಮಾನವತೆಯ ಸ್ಪರ್ಶಕ್ಕಾಗಿ ಎಂದು ಹೇಳಿ ಮುಗಿಸುತ್ತೇನೆ.

**(ಬಹುಶಃ 1973ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಡಿದ ಒರಟು ಭಾಷಣದ ಲೇಖನ ರೂಪ)**

## ದಲಿತ ನೌಕರರ ಜೊತೆ ಪಿಸುಮಾತು

ದಲಿತ ನೌಕರರ ಬಗ್ಗೆ ಪ್ರಚಲಿತದಲ್ಲಿರುವ ಒಂದು ಮಾತು ಹೀಗಿದೆ: 'ತನಗೆ ಏನಾದರೂ ಅನ್ಯಾಯ ಕಷ್ಟ ಬಂದಾಗ ದಲಿತ ನೌಕರ ಅದನ್ನು ಇಡೀ ಜನಾಂಗಕ್ಕೇ ಆದ ಅನ್ಯಾಯ ಎಂಬಂತೆ ಗೋಳಾಡುತ್ತಾನೆ. ಇಲ್ಲದಿದ್ದರೆ ಸುಮ್ಮನಿರುತ್ತಾನೆ' ಅಂತ. ಈ ಮಾತಿನ ಅರ್ಥ– ದಲಿತ ನೌಕರ ತಾನು ತನ್ನ ಕುಟುಂಬ ಎಂದಾಗಿಬಿಟ್ಟ. ತಾನು ತನ್ನ ಸಮುದಾಯ ಎಂದಾಗಲಿಲ್ಲ. ಇತರರ ಮಾತು ಬೇರೆ, ಆದರೆ ಅವಮಾನ ಬಡತನದಿಂದ ಮೈತಳೆದು ವಿದ್ಯಾವಂತನಾಗಿ ಕಣ್ಣುಬಿಟ್ಟವನು, ತನ್ನ ಸಮುದಾಯದ ಕಡೆಗೆ ತಿಂಗಳಲ್ಲಿ ಕೇವಲ ಒಂದು ದಿನವಾದರೂ ನೋಡಬೇಕಿತ್ತು. ದಲಿತ ನೌಕರರ ಕೇವಲ ಒಂದು ದಿನದ ಸಂಬಳದಲ್ಲಿ ತಾವು ಹುಟ್ಟಿ ಬಂದ ಸಮುದಾಯದ ಇಡೀ ಮಕ್ಕಳ ಶಿಕ್ಷಣ ವಹಿಸಿಕೊಳ್ಳಬಹುದಿತ್ತು. ಅಥವಾ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಈ ಭೂಮಿ ಮೇಲೆ ಅತ್ಯಂತ ಅವಮಾನಿತರು ಕೊರಗರು. ಇವರಿರುವುದು ಕೇವಲ ಇಪ್ಪತ್ತೆರಡು ಸಾವಿರ. ಇವರನ್ನು ಇಡಿಯಾಗಿ ದತ್ತು ತೆಗೆದುಕೊಂಡು ಕೊರಗರ ಕಣ್ಣೀರು ಒರೆಸಬಹುದಿತ್ತು. ಈ ದಿಕ್ಕಲ್ಲಿ ನಡೆಯಲಿಲ್ಲ. ಇಂಥ ಸಮಸ್ಯೆಗಳನ್ನು ದಲಿತ ನೌಕರರು ತನ್ನ ಸ್ವಂತದ್ದು ಅಂದುಕೊಳ್ಳಲಿಲ್ಲ. ಸಂಘಟಿತರೂ ಆಗಲಿಲ್ಲ. ರಚನಾತ್ಮಕವೂ ಆಗಲಿಲ್ಲ.

ಇಂದು ದಲಿತ ನೌಕರರ ಒಕ್ಕೂಟ ಚಿಗುರುವ ಪ್ರಯತ್ನದಲ್ಲಿದೆ. ಇಲ್ಲಿರುವ ಬಹುತೇಕ ದಲಿತ ನೌಕರರು ದಲಿತ ಸಂಘರ್ಷ ಸಮಿತಿಯು ಹುಟ್ಟಿದ ಕಾಲದಲ್ಲಿ ಕೆಲಸಕ್ಕೆ ಸೇರಿದವರಾಗಿದ್ದು, ಈಗ ನಿವೃತ್ತಿ ಹತ್ತಿರ ನಿಂತಿದ್ದಾರೆ. ಇವರು ದಸಂಸ ಆಂದೋಲನದ ಒಡನಾಟದಲ್ಲಿದ್ದವರು ಎಂಬ ಕಾರಣಕ್ಕಾಗಿ ಸ್ವಲ್ಪ ಕಟುವಾಗಿಯೇ ಹೇಳುವೆ. ದಲಿತ ನೌಕರರ

ಜೀವನ ಚರಿತ್ರೆಯನ್ನು ಒಂದೇ ವಾಕ್ಯದಲ್ಲಿ ಬರೆಯಿರಿ ಎಂದರೆ ಏನನ್ನು ಬರೆಯಬಹುದು?– 'ಬಡತನದಲ್ಲಿ ಕಷ್ಟಪಟ್ಟು ಓದಿ ವಿದ್ಯಾವಂತನಾಗಿ ಕೆಲಸಕ್ಕೆ ಸೇರಿ ಸಂಬಳ ತೆಗೆದುಕೊಂಡು ಆಮೇಲೆ ಊಟ ಮಾಡಿಕೊಂಡು ಚೆನ್ನಾಗಿ ಸತ್ತ'– ಬಹುತೇಕರದು ಇಷ್ಟೆ ಅಲ್ಲವೆ? ಇದಾಗದಿರಲಿ. ನಾಳೆಯಲ್ಲ, ಇಂದಿನಿಂದಲೇ ದಲಿತ ನೌಕರರ ಒಕ್ಕೂಟವು ನೊಂದವರ ಕಣ್ಣೀರು ಒರೆಸುವ ಸಂಘಟನೆಯಾಗಲಿ, ಉಳಿಯಲಿ.

ಇತ್ತೀಚೆಗೆ ಎರಡು ವಿದ್ಯಮಾನಗಳು ಜರುಗಿವೆ. ಮೊದಲನೆಯದು ದಲಿತರು ಬೌದ್ಧಧರ್ಮದ ಕಡೆಗೆ. ಇನ್ನೊಂದು ಹಿಂದೂ ಸಮಾಜೋತ್ಸವ. ಈ ಹಿಂದೂ ಸಮಾಜೋತ್ಸವವನ್ನು ಎಚ್ಚೆತ್ತ ಎಲ್ಲರೂ ಗುಮಾನಿಯಿಂದ ನೋಡಬೇಕಾಗಿದೆ. ಈ ಸಂಬಂಧ ಶ್ರೀ ಮುರುಘರಾಜೇಂದ್ರ ಶರಣರಿಗೆ ಒಂದು ಪತ್ರದಲ್ಲಿ ಹೀಗೆ ಬರೆದಿದ್ದೆ: 'ಹಿಂದೆ ಇಡೀ ಸಮಾಜವನ್ನು ಬ್ರಾಹ್ಮಣ ಮಠಗಳು ಪ್ರತಿನಿಧಿಸುತ್ತಿದ್ದವು. ಇತ್ತೀಚೆಗೆ ಮಧ್ಯಮ ಜಾತಿಗಳ ಮಠಗಳು ಪ್ರಬಲಗೊಂಡು ಬಹುಸಂಖ್ಯಾತ ಜನ ಈ ಮಠಗಳಿಗೆ ನಡೆದುಕೊಳ್ಳುತ್ತಿರುವುದರಿಂದ ಬ್ರಾಹ್ಮಣ ಮಠಗಳ ಅಹಂಗೆ ಪೆಟ್ಟು ಬೀಳುತ್ತಿದೆ ಎನ್ನಿಸುತ್ತದೆ. ಅದಕ್ಕಾಗಿ ಬ್ರಾಹ್ಮಣ ಮಠಗಳ ಅಹಂಗೆ, ಇಡೀ ಸಮಾಜವನ್ನು ತಾನು ಮಾತ್ರವೇ ಪ್ರತಿನಿಧಿಸಬೇಕೆಂಬ ಮೇಲರಿಮೆ ಹುನ್ನಾರವಾಗಿ ಭಜರಂಗದಳ ಸಂಘ ಪರಿವಾರಕ್ಕೆ ಆಶೀರ್ವಾದ ಮಾಡುತ್ತಿರುವಂತೆ ಕಾಣುತ್ತಿದೆ. ಹಿಂದುತ್ವ ಪರಿಕಲ್ಪನೆ ಪ್ರಾಬಲ್ಯವಾದರೆ ಭಾರತದ ನೂರಾರು ಧರ್ಮಗಳು ಸಾವಿರಾರು ಸಂಪ್ರದಾಯಗಳು ತಂತಾನೆ ನಾಶವಾಗುವುದರಿಂದ ಮತ್ತೆ ಬ್ರಾಹ್ಮಣಶಾಹಿ ತನ್ನ ಮೇಲರಿಮೆ ಕಾಪಾಡಿಕೊಳ್ಳುವುದರ ಹವಣಿಕೆಯಾಗಿ ಇದು ನನಗೆ ಕಾಣಿಸುತ್ತದೆ. ಶ್ರೀ ಪೇಜಾವರರ ಚಲನವಲನಗಳೂ ನನಗೆ ಹೀಗೆ ಅನ್ನಿಸಲು ಕಾರಣವಾಯ್ತು.' ಈ ಹಿಂದೂ ಸಮಾಜೋತ್ಸವದ ಆಳದಲ್ಲಿ ಇರುವುದಾದರೂ ಏನು? ಈ ಹಿಂದೂ ಜಾತಿ ಸಮಾಜದೊಳಗೆ ಉಣ್ಣಲ್ಲ, ಉಡಲ್ಲ, ಮಠಾಧಿಪತಿಯಂತು ಆಯಾಯ ಜಾತಿ ಬಿಟ್ಟು ಬೇರೆ ಜಾತಿಯವರು ಆಗಲ್ಲ. ಭಾರತದಲ್ಲಿ ಜಾತಿಗಳ ಒಳಗೆ ಏಕರೂಪ ಕಾನೂನು ಕಟ್ಟಳೆಗಳು ಇವೆ. ಆದರೆ ಹಿಂದೂಧರ್ಮಕ್ಕೆ ಅಂತ, ಆ ಧರ್ಮಕ್ಕೆ ಸೇರಿದವರಿಗಾಗಿ ಒಂದು ಅಂತ ಯಾವ ಕಾನೂನು ಕಟ್ಟಳೆಗಳೂ ಇಲ್ಲ. ಇಲ್ಲಿ ಇರುವುದೇ ಮೇಲು ಕೀಳು ಭಿನ್ನ ಭೇದದ ಜಾತಿ ಕಟ್ಟಳೆಗಳು. ಹೀಗಿರುವಾಗ ಮತಾಂತರ ಬೇಡ ಅನ್ನುವವರು ಹೊಟ್ಟೆಗೆ ಏನು ತಿಂತಾರೆ? ನನಗಂತೂ ಅರ್ಥ ಆಗ್ತ ಇಲ್ಲ. ಜಾತಿ ಪದ್ಧತಿಯ ಮೇಲು–ಕೀಳುಗಳನ್ನು ಉಳಿಸಿಕೊಳ್ಳುವುದಕ್ಕೆ ದೇವರು ಧರ್ಮವನ್ನೆ ರೌಡಿಗಳನ್ನಾಗಿಸಿ

ಬಳಸಿಕೊಂಡ ಅಧಃಪತನದ ಸಮಾಜ ನಮ್ಮದು. ಈಗ ಅದೇ ದೇವರು ಧರ್ಮ ಬಳಸಿಕೊಂಡು ಅಧಿಕಾರ ಹಿಡಿಯುವ ಹುನ್ನಾರ ನಡೆಯುತ್ತಿದೆ. ಅದಕ್ಕೆ ವಾತಾವರಣ ನಿರ್ಮಿಸುತ್ತಿರುವ ಶ್ರೀ ಪೇಜಾವರರು, ಶ್ರೀರಾಮಕೃಷ್ಣಾಶ್ರಮದ ಸ್ವಾಮೀಜಿ, ಶ್ರೀ ರವಿಶಂಕರ್, ಶ್ರೀ ಆದಿಚುಂಚನಗಿರಿ ಸ್ವಾಮೀಜಿ ಇವರುಗಳು– 'ಅಧಿಕಾರಕ್ಕಾಗಿ ಹಣಕ್ಕಾಗಿ ಧರ್ಮದೇವರು ಬಳಸಿ ಪಾಪಿಷ್ಟರಾಗಬೇಡಿ' ಎಂದು ಜನ ಸಮುದಾಯಕ್ಕೆ ಹೇಳಬೇಕಾದವರು. ಆದರೆ ಇವರೇ ಮುಂದಾಳ್ತನವಹಿಸಿ ತಾವೇ ಪಾಪಿಷ್ಟರಾಗಿಬಿಟ್ಟರು. ಶ್ರೀ ಆದಿಚುಂಚನಗಿರಿ ಸ್ವಾಮೀಜಿ, ಹೊಸಬರು– ಹೋಗಲಿ. ಶ್ರೀ ರವಿಶಂಕರ್ ಧ್ಯಾನಿ ಅಂತೆ! ಅಂದರೆ ಎಲ್ಲಾ ಕೊಳಕಿಂದ ಅತೀತರಾಗಬೇಕಾದವರು, ಇವರೇಕೆ ಕೊಳಕಿಗೆ ಬಿದ್ದರು? ಎಲ್ಲಾ ಧರ್ಮಗಳ ಸತ್ವ ಕೂಡಿಸಿದ್ದ, ಕೂಡಿಸಲು ದನದ ಮಾಂಸವನ್ನೂ ತಿಂದ ಪರಮಹಂಸರ ಪರಂಪರೆಯ ರಾಮಕೃಷ್ಣ ಆಶ್ರಮದ ಸ್ವಾಮೀಜಿಯವರು ಪರಮಹಂಸರನ್ನೇ ತಿಥಿ ಮಾಡಿ ಊಟ ಮಾಡಿಬಿಟ್ಟರು! ಹೀಗಾಗಬಾರದಿತ್ತು.

ಯಾವುದೇ ಧರ್ಮವನ್ನು ಅಧಿಕಾರಕ್ಕೆ ಹಣಕ್ಕೆ ದುರುಪಯೋಗಪಡಿಸಿಕೊಂಡರೆ ಏನಾಗುತ್ತದೆ? ಅದರ ಜೀವ ತೆಗೆದು ಹೆಣ ಮಾಡಿದಂತಾಗುತ್ತದೆ, ಅಷ್ಟೆ. ಅದಕ್ಕೇ ನನಗೆ ಹಿಂದೂ ಸಮಾಜೋತ್ಸವ ಅಂದರೆ ಅಲ್ಲಿ ಹಿಂದೂ ಧರ್ಮಗಳ ಜೀವ ತೆಗೆದು ಹೆಣ ಮಾಡಿ ಚಟ್ಟದಲ್ಲಿ ಅಲಂಕೃತವಾಗಿ ಕೂಡಿಸಿ ಆ ಚಟ್ಟವನ್ನು ಈ ನಾಲ್ವರು ಅಂದರೆ ಶ್ರೀ ಪೇಜಾವರರು, ರಾಮಕೃಷ್ಣಾಶ್ರಮದ ಸ್ವಾಮೀಜಿ, ಶ್ರೀ ರವಿಶಂಕರ್, ಶ್ರೀ ಆದಿಚುಂಚನಗಿರಿ ಸ್ವಾಮೀಜಿ ಆ ಹೆಣ ಹೊತ್ತುಕೊಂಡು ಹೊರಟ ಮೆರವಣಿಗೆ ಎಂಬಂತೆ ಕಾಣಿಸುತ್ತದೆ.

ಇದನ್ನು ಇಲ್ಲಿ ಯಾಕೆ ಹೇಳುತ್ತಿದ್ದೇನೆ ಅಂದರೆ– ದಲಿತರು ಬುದ್ಧನನ್ನು ಮುಟ್ಟುತ್ತಿದ್ದಾರೆ. ಯಾವ ಕಾರಣಕ್ಕೂ ಧರ್ಮವನ್ನು, ಬುದ್ಧನನ್ನು ಅಧಿಕಾರ–ಹಣಕ್ಕೆ ಅವರಂತೆ ನಾವೂ ದುರುಪಯೋಗಿಸಿಕೊಂಡು ಪಾಪಿಷ್ಟರಾಗುವುದು ಬೇಡ ಎಂಬ ಎಚ್ಚರಿಕೆ ಸದಾ ನಮಗಿರಲಿ. ರಾಮನನ್ನು ಸಾಯಿಸಿದ ಗತಿ ಬುದ್ಧನಿಗೆ ಬಾರದಿರಲಿ. ಧರ್ಮ ಬೀದಿಗೆ ಬೀಳದಿರಲಿ, ಅಂತರಂಗದೊಳಗೆ ವಾಸಿಸಲಿ. ಜೊತೆಗೆ ನಮಗೆ ತಿಳಿದಿರಲಿ– ಬುದ್ಧ, ಜೀಸಸ್, ವಚನಕಾರರು, ಪರಮಹಂಸ ಥರದವರು ಅವರವರ ರೂಢಿಗತ ಧರ್ಮಕ್ಕೂ ಅತೀತರು. ಬುದ್ಧನಿಗೂ ಪಗೋಡಕ್ಕೂ, ಜೀಸಸ್‌ಗೂ ಚರ್ಚ್‌ಗೂ, ವಚನಕಾರರಿಗೂ ಮಠಗಳಿಗೂ, ಪರಮಹಂಸರಿಗೂ ಆಶ್ರಮಕ್ಕೂ ಸಂಬಂಧ ಕಲ್ಪಿಸಬಾರದು. ಅವರು ಸೆರೆ ಮಾಡಲಾಗದ ಕಾಣ್ಕೆಗಳು.

## ಪ್ರತಿಭಾನ್ವೇಷಣೆಗಾಗಿಯೇ ಮೀಸಲಾತಿ

ಇಂದಿಗೆ ಸರಿಯಾಗಿ 135 ವರ್ಷಗಳ ಹಿಂದೆ 'ಮೈಸೂರಿನವರಿಗೆ ಮೈಸೂರು' ಎಂಬ ಪರೋಕ್ಷ ಮೀಸಲಾತಿ ಪರಿಕಲ್ಪನೆ ಆಗಿನ ಮೈಸೂರು ರಾಜ್ಯದಲ್ಲಿ ಮೊಳಕೆಯಾದಾಗ, ಆಗಲೂ ಕೇಳಿಬಂದ ಕುಹಕವು– 'ಇದರಿಂದಾಗಿ ಪ್ರತಿಭೆಗೆ ಮನ್ನಣೆ ಇಲ್ಲದಂತಾಗುತ್ತದೆ, ಸಾಮರ್ಥ್ಯ ಕುಗ್ಗುತ್ತದೆ, ಹಾಗಾಗಿ ಅಭಿವೃದ್ಧಿ ಕುಂಠಿತವಾಗುತ್ತದೆ' ಎಂಬುದೇ ಆಗಿತ್ತು.

ಆಗ ತಮಗೂ ಅವಕಾಶಕ್ಕಾಗಿ ಒತ್ತಾಯಿಸಿದವರು ಹೆಬ್ಬಾರ್ ಅಯ್ಯಂಗಾರ್ ಸಮುದಾಯ. ಒಂದು ಬ್ರಾಹ್ಮಣ ಪಂಗಡವು ಇನ್ನೊಂದು ಬ್ರಾಹ್ಮಣ ಪಂಗಡದವರಿಂದ ಅವಕಾಶ ಹಂಚಿಕೊಳ್ಳಲು ಹೋರಾಡಿತ್ತು. ಕೊನೆಗೆ ಪಡೆಯಿತು.

ಇದಾಗಿ ಮೂವತ್ತು ವರ್ಷಗಳಾದ ಮೇಲೆ ಎಚ್ಚರಗೊಂಡ ಲಿಂಗಾಯಿತ ಒಕ್ಕಲಿಗ ಸಮುದಾಯ ತಮಗೂ ಮೀಸಲಾತಿ ಬೇಕೆಂದು ಧ್ವನಿ ತೆಗೆದಾಗ ಆಗಲೂ ಕೇಳಿ ಬಂದ ಕುಹಕ– 'ಪ್ರತಿಭೆಗೆ ಮನ್ನಣೆ ಇಲ್ಲದಂತಾಗುತ್ತದೆ, ಇದರಿಂದಾಗಿ ಸಾಮರ್ಥ್ಯ ಕುಗ್ಗುತ್ತದೆ, ಹಾಗಾಗಿ ಅಭಿವೃದ್ಧಿ ಕುಂಠಿತವಾಗುತ್ತದೆ'. ಈ ಕುಹಕ ಆಡುವಾಗ ಅದರಲ್ಲಿ ಪ್ರಪ್ರಥಮವಾಗಿ ಅವಕಾಶ ಪಡೆದಿದ್ದ ಹೆಬ್ಬಾರ್ ಅಯ್ಯಂಗಾರ್ ಸಮುದಾಯವೂ ಸೇರಿತ್ತು. ಒಂದು ಕಾಲದಲ್ಲಿ ಅವಕಾಶ ಪಡೆದವರೇ ಇನ್ನೊಬ್ಬರ ಪ್ರಶ್ನೆ ಬಂದಾಗ ತಮ್ಮ ಬೆನ್ನು ನೋಡಿಕೊಳ್ಳದೆ ವಿರೋಧಿಸುವುದು ಭಾರತದ ಸಂಪ್ರದಾಯವಾಗಿದೆ. ಯಾಕೆಂದರೆ ಇಂದೂ ಕೂಡ ಮೀಸಲಾತಿ ಪ್ರಶ್ನೆ ಬಂದಾಗಲೆಲ್ಲ ಕೇಳಿ ಬರುವುದು ಅದೇ ಮಾತು, ಅದೇ ರಾಗ, ಅದೇ ಕುಹಕ.

ಆದರೆ ಇದೇ ಕುಹಕವನ್ನು, ಕಮ್ಮಿ ಅಂಕವನ್ನು ಪಡೆದೂ ಕ್ಯಾಪಿಟೇಷನ್ ಶುಲ್ಕ ಕಟ್ಟಿ ದುಡ್ಡು ಸುರಿದು ಸೀಟು ಕೊಂಡುಕೊಳ್ಳುವ ಉಳ್ಳವರ ಬಗ್ಗೆ ಯಾವ ವಿದ್ಯಾರ್ಥಿಗಳಾಗಲಿ, ಯಾವ ಪ್ರಜ್ಞಾವಂತರಾಗಲಿ ಚಕಾರ ಎತ್ತುತ್ತಿಲ್ಲ. ಹಾಗಾದರೆ ಹಣವೇ ಪ್ರತಿಭೆಯೇ? ಹಣವೇ ಸಾಮರ್ಥ್ಯವೇ? ಇಂದು ಹಣವು ಶಿಕ್ಷಣ ಕ್ಷೇತ್ರದಲ್ಲೂ ಅಟ್ಟಹಾಸ ಮಾಡುತ್ತಾ ಶಿಕ್ಷಣವನ್ನೇ ಕಬಳಿಸುತ್ತಿದೆ. ಕಂಡೂ ಕಾಣದಂತೆ ಎಲ್ಲರೂ ಸುಮ್ಮನಿದ್ದಾರೆ. ಇದು ಏನನ್ನು ಹೇಳುತ್ತದೆ? ಮೀಸಲಾತಿ ವಿರೋಧಿ ಚಳವಳಿಯು ಪ್ರಾಮಾಣಿಕ ಅಲ್ಲ, ಅಪ್ರಾಮಾಣಿಕ ಎಂದು ಸಾರಿ ಸಾರಿ ಹೇಳುತ್ತದೆ.

ನಾವು ಮಾಡಬೇಕಾಗಿದ್ದುದು ಏನು? ವಂತಿಗೆ, ಕ್ಯಾಪಿಟೇಷನ್ ಫೀ ಇಲ್ಲದ ಸಮಾನ ಏಕರೂಪ ಶಿಕ್ಷಣ ವ್ಯವಸ್ಥೆಗೆ ಹೋರಾಡಬೇಕಿತ್ತು. ಸರ್ಕಾರಕ್ಕೆ ಹೇಳಬೇಕಿತ್ತು–'ಶಿಕ್ಷಣ ಸಂಸ್ಥೆಗಳು ನಷ್ಟಕ್ಕೊಳಗಾದರೆ ಅವಕ್ಕೆ ಹೆಚ್ಚಿಗೆ ಅನುದಾನ ನೀಡಿ. ತಗಲುವ ಹೆಚ್ಚುವರಿ ಅನುದಾನಕ್ಕಾಗಿ ಮದ್ಯಪಾನ, ಪೆಟ್ರೋಲ್, ಸೌಂದರ್ಯವರ್ಧಕ ವಸ್ತುಗಳ ಮೇಲೆ ಯದ್ವಾತದ್ವಾ ತೆರಿಗೆ ಹಾಕಿರಿ. ಆದರೆ ಕಡ್ಡಾಯ, ಏಕರೂಪವಾದ, ಕ್ಯಾಪಿಟೇಷನ್ ಶುಲ್ಕ ಇಲ್ಲದ ಶಿಕ್ಷಣ ವ್ಯವಸ್ಥೆ ನಮ್ಮದಾಗಲಿ' ಎಂದು ಹೋರಾಡಬೇಕಿತ್ತು. ಹಣಕ್ಕೂ ಪ್ರತಿಭೆಗೂ ಏನೇನೂ ಸಂಬಂಧ ಇಲ್ಲ ಎಂದು ಹೇಳುತ್ತ ಇದನ್ನು ಸಹಿಸಬಾರದಾಗಿತ್ತು. ಅಂದರೆ ಯಾವುದನ್ನು ಸಹಿಸಿಕೊಳ್ಳಬಾರದಿತ್ತೊ ಅದನ್ನು ಸಹಿಸಿಕೊಂಡಿದ್ದೇವೆ.

ಆದರೆ ಇಂದು ಹಿಂದುಳಿದ ವರ್ಗಕ್ಕೆ ಮೀಸಲಾತಿ ಕೊಡಬೇಕೆಂಬ ಪ್ರಸ್ತಾಪ ಬಂದಾಗ ಅಸಹನೆ ಎದ್ದಿದೆ. ಹುಟ್ಟಿಗೂ ಪ್ರತಿಭೆಗೂ, ಜಾತಿಗೂ ಪ್ರತಿಭೆಗೂ ಏನೇನೂ ಸಂಬಂಧ ಇಲ್ಲದಿರುವುದನ್ನು ಕಾಣುವಷ್ಟಾದರೂ ಪ್ರತಿಭೆ ಭಾರತಕ್ಕೆ ಇನ್ನೂ ಬರಲಿಲ್ಲ. ದಲಿತರನ್ನು ಹಿಂದುಳಿದವರನ್ನು ಹಳ್ಳಿಗರನ್ನು ಕಾರ್ಮಿಕರನ್ನು ವಂಚಿಸುವ ಬುದ್ಧಿಯೇ ಭಾರತದಲ್ಲಿ ಪ್ರತಿಭೆ ಅನ್ನಿಸಿಕೊಂಡುಬಿಟ್ಟಿದೆ. ಈಗ ನಮ್ಮ ಕಣ್ಣೆದುರಿಗೆ ಸಿಇಟಿ ಅಂಕಗಳನ್ನು ಮಾತ್ರ ಪರಿಗಣಿಸಲು ಸಂಚು ನಡೆಯುತ್ತಲಿದ್ದು ಇಲ್ಲಿ ಹಳ್ಳಿ ಮಕ್ಕಳ ವಿದ್ಯಾಭ್ಯಾಸದ ಕತ್ತು ಹಿಚುಕಲಿರುವ ಕ್ರೌರ್ಯ ಬಚ್ಚಿಟ್ಟು ಕೂತಿದೆ ಅಂದರೆ ಕುತಂತ್ರ ಬುದ್ಧಿಯೇ ಇಲ್ಲಿ ಪ್ರತಿಭೆಯಾಗಿಬಿಟ್ಟಿದೆ.

ನಿಜ, ಈಗ ಮೀಸಲಾತಿಗೆ ಹಾತೊರೆಯುತ್ತಿರುವ ಭಾರತದ ನೂರೆಂಟು ತಳಜಾತಿ ಸಮುದಾಯಗಳು ಚಾತುರ್ವರ್ಣದ ಮೇಲು–ಕೀಳು ಅಂಟುರೋಗಕ್ಕೆ ತುತ್ತಾಗಿ ಅವು ಘನತೆ ಇಲ್ಲದ ಹುಳುಗಳಂತೆ ಒದ್ದಾಡುತ್ತಿವೆ, ನಿಜ. ಹೀಗಿದ್ದೂ ಇದರೊಳಗೇನೆ, ಈ ಜಾತಿ ಸಮೂಹಗಳು ತಲೆತಲಾಂತರದ ವೈವಿಧ್ಯಮಯ

ಅನುಭವಗಳ ಗಣಿಗಳಾಗಿ ಈ ಅಪಾರ ಅನುಭವಗಳು ರೆಕ್ಕೆ ಇಲ್ಲದೆ ಬಿದ್ದಿವೆ. ರೆಕ್ಕೆ ಬಂದರೆ ಇದೇ ಸಂಪತ್ತಾಗುತ್ತದೆ. ಉದಾ: ಶಾಸ್ತ್ರ, ಮಾಟವಿದ್ಯೆಯ ಹಿನ್ನೆಲೆಯ ಪ್ರತಿಭಾನ್ವಿತನೊಬ್ಬ ಮನಃಶಾಸ್ತ್ರದ ಉನ್ನತ ವ್ಯಾಸಂಗ ಮಾಡಿದರೆ, ಮನಃಶಾಸ್ತ್ರದ ಉದ್ದ ಅಗಲವೇ ವಿಸ್ತರಿಸಬಹುದಾದ ಸಾಧ್ಯತೆ ಹೆಚ್ಚಿರುತ್ತದೆ. ಈ ಹಿನ್ನೆಲೆ ಇಲ್ಲದ ಬುದ್ಧಿವಂತನೊಬ್ಬ ಇರುವ ಶಾಸ್ತ್ರವನ್ನು ಅರೆದು ನುಂಗಿ ಒಪ್ಪಿಸುವುದನ್ನು ಮಾಡಿದರೆ, ಅದೇ ದೇಸಿ ಜ್ಞಾನ ಹಿನ್ನೆಲೆಯ ಪ್ರತಿಭಾನ್ವಿತನೊಬ್ಬ ಆ ಶಾಸ್ತ್ರದ ಸಾಧ್ಯತೆಗಳನ್ನು ಹೆಚ್ಚಿಸಬಹುದು. ಇಲ್ಲಿ ಮೊದಲನೆಯದು ಬುದ್ಧಿಯಾದರೆ ಎರಡನೆಯದು ಪ್ರತಿಭೆ. 'ಪ್ರತಿಭಾನ್ವೇಷಣೆಗಾಗಿಯೇ ಮೀಸಲಾತಿ ಬೇಕು. ಎಲ್ಲಾ ಜಾತಿ ಜನಾಂಗಗಳಿಗೂ ಅವಕಾಶ ಇದ್ದರೆ ಅದು ಸಮುದ್ರದಲ್ಲಿ ಮೀನು ಹಿಡಿದಂತೆ' –ಡಾ. ಯು.ಆರ್. ಅನಂತಮೂರ್ತಿಯವರ ಈ ರೂಪಕ ಒಂದೇ ಮಾತಲ್ಲಿ ಎಲ್ಲಾ ಹೇಳುತ್ತದೆ.

ಹಾಗೆಯೇ ಅಪಾರ ದೇಸಿಜ್ಞಾನ ಸಂಪತ್ತುಗಳನ್ನು ತನ್ನೊಳಗೆ ಹುದುಗಿಸಿಕೊಂಡಿರುವ ಈ ತಳಜಾತಿ ಸಮುದಾಯಗಳು ಮೇಲು–ಕೀಳು ರೋಗದಿಂದ ತಪ್ಪಿಸಿಕೊಂಡರೆ, ಅವು ಸಾಂಸ್ಕೃತಿಕ ವೈವಿಧ್ಯಮಯ ಸಮುದಾಯವಾಗಿ ರೂಪಾಂತರ ಪಡೆಯುತ್ತವೆ. ಉದಾ: ತಮಟೆಯ ರೂಪಾಂತರ. ದಲಿತರು ಗ್ರಾಮದ ಆಚರಣೆಗಳಲ್ಲಿ ಬಿಟ್ಟಿಯಾಗಿ ಈ ತಮಟೆ ಬಡಿಯುವುದು ಊರಿನ ತಲೆತಲಾಂತರದ ಕಸುಬಾಗಿತ್ತು. ದಲಿತರು ನಿರಾಕರಿಸಿದರೆ ಆ ದಲಿತರ ಚರ್ಮ ಸುಲಿಯುವವರೆಗೂ ಕ್ರೌರ್ಯ ಇತ್ತು. ಸುಲಿಗೆ ಅವಮಾನ ತಮಟೆಯೊಡನೆ ಬೆರೆತುಕೊಂಡಿತ್ತು. 70ರ ದಶಕದಲ್ಲಿ ಎಚ್ಚೆತ್ತ ದಲಿತರ ಧ್ವನಿ ಈ ತಮಟೆ ಬಡಿಯುವುದನ್ನು ನಿರಾಕರಿಸುವಂತೆ ಕರೆ ನೀಡಿತ್ತು. ಇದರಿಂದಾಗಿ ದಲಿತರು ಬಹಿಷ್ಕಾರ ಹಲ್ಲೆಗಳಿಗೆ ತುತ್ತಾಗಬೇಕಾಯ್ತು. ಇದಾಗಿ ಮೂವತ್ತು ವರ್ಷಗಳಾದ ಮೇಲೆ ತಮಟೆಯು ಸುಲಿಗೆ ಅವಮಾನಗಳಿಂದ ಬಿಡುಗಡೆಯಾಗಿ ಸ್ವತಂತ್ರವಾಯ್ತು. ನಂತರ ಅದು ಒಂದು ಕಲಾವಾದ್ಯ ಉಪಕರಣ ಆಯ್ತು. ಮೊದಲು ತಮಟೆಯನ್ನು ಬಹಿಷ್ಕರಿಸಿದ್ದ ದಲಿತ ಸಂಘಟನೆಗಳೇ ತಮ್ಮ ಸ್ವಾಭಿಮಾನದ ಅಭಿವ್ಯಕ್ತಿಯಾಗಿ ತಮಟೆಯನ್ನು ಇಂದು ತಮ್ಮ ಕೈಲಿ ಹಿಡಿದಿವೆ. ತಮಟೆಯನ್ನು ಮುಟ್ಟದವರೂ ತಮಟೆ ಬಡಿಯುತ್ತಿದ್ದಾರೆ. ತಮಟೆಯು ಸುಲಿಗೆ ಅವಮಾನಗಳನ್ನು ರೂಪಾಂತರಿಸಿಕೊಂಡು ಈಗ ಸಾಂಸ್ಕೃತಿಕ ಸಂಪತ್ತಾಗಿದೆ.

ಈ ತಮಟೆಯ ಕಥೆಯೇ ತಳಸಮುದಾಯಗಳ ಕಥೆಯಾಗಿದೆ.

ಆದ್ದರಿಂದ ದಲಿತ ಹಿಂದುಳಿದ ತಳಸಮುದಾಯಗಳಿಗೆ ಇತರರು ಅವರಿಗೆ ಕೊಡುವುದು ಎನ್ನುವುದನ್ನಾಗಲಿ ಅಥವಾ ಅವರೇ ಹಕ್ಕಿನಿಂದ ಪಡೆದರು ಎನ್ನುವುದನ್ನಾಗಲಿ ಮೀರಿ, ದೇಸಿಜ್ಞಾನ ಸಾಂಸ್ಕೃತಿಕ ವೈವಿಧ್ಯತೆಗಳ ಈ ತಳ ಸಮುದಾಯಗಳು– ನಾಡಿನ ಸಂಪತ್ತು, ಇದನ್ನೇ ತುಳಿದುಕೊಂಡು ತಿರುಗಾಡುತ್ತಿದ್ದೇವೆ, ಅಂತ್ಯಜ ಆದಿಯಾಗಿ ಸರ್ವರೂ ಅಭಿವ್ಯಕ್ತಿಗೊಂಡ ಹನ್ನೆರಡನೆಯ ಶತಮಾನ ವಚನಯುಗದ ವಾಸ್ತವವು ನಮ್ಮ ಕನಸಾಗಬೇಕಾಗಿದೆ. ಬೆಳಗ್ಗೆ ನಾವೆದ್ದು ನೆನೆಯಬೇಕಾದುದು ವಚನ ಯುಗವನ್ನು ಎಂಬಷ್ಟು ಅರಿವು ನಮಗೆ ಬಂದರೆ ಅಷ್ಟು ಸಾಕು. ಆಗ ಭಾರತದಲ್ಲಿ ಥರಾವರಿ ಪ್ರತಿಭೆಗಳು ಚಿಗುರೊಡೆಯುತ್ತವೆ.

## ಖಾಸಗೀ ಸಂಚಿನ ವಲಯ

ನಮ್ಮ ಸಮಾಜದ ಮನಃಸ್ಥಿತಿಯು ಅರ್ಥವಾಗದೆ 'ಖಾಸಗಿಯಲ್ಲಿ ಮೀಸಲಾತಿ'ಯೂ ನಮಗೆ ಅರ್ಥವಾಗದು. ಖಾಸಗೀಕರಣದಲ್ಲೂ ಮೀಸಲಾತಿ ಇರಬೇಕು ಎನ್ನುವವರು ಆಸರೆಗೆ ಅಮೆರಿಕಾ ಕಡೆ ನೋಡುತ್ತಾರೆ. ಅಮೆರಿಕಾವು ಖಾಸಗಿಕರಣದಲ್ಲಿ ಯಶಸ್ವಿಯಾದ ದೇಶ, ಅಲ್ಲೇ ವಂಚಿತರಿಗೆ, ಜನಾಂಗೀಯ ಭಿನ್ನತೆ ಇರುವವರಿಗೆ 'ಮೀಸಲಾತಿ' ನೀಡುವುದಾದರೆ ಭಾರತಕ್ಕೇನಾಗಿದೆ? ಈ ಪ್ರಶ್ನೆ ಮುಂದಿಡುತ್ತಾರೆ.

ಈ ಪ್ರಶ್ನೆ ನಮ್ಮ ಮುಗ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದೇ ನನಗನ್ನಿಸುತ್ತದೆ. ಈ ಪ್ರಶ್ನೆ ನಮ್ಮ ಸ್ಥಳೀಯ ಗುಣವಿಶೇಷಗಳನ್ನು ಮರೆತು ಮಾತಾಡಿದಂತಾಗುತ್ತದೆ. ಅಮೆರಿಕಾ ದರೋಡೆಕೋರರ ದೇಶ ಇರಬಹುದು, ಅಲ್ಲಿ ಸುಲಿಗೆ ನಡೆದಿರಬಹುದು, ಸ್ಥಳೀಯರ ರಕ್ತ ಚೆಲ್ಲಾಡಿಸಿ ಆ ನೆಲವನ್ನು ತಮ್ಮದಾಗಿಸಿಕೊಂಡಿರಲೂಬಹುದು, ಜೊತೆಗೇ ಗುಲಾಮಗಿರಿಯ ಕಳಂಕದ ಇತಿಹಾಸ ಹೊಂದಿರಬಹುದು ಇತ್ಯಾದಿ ಇನ್ನೂ ಏನೇನೋ ಇದ್ದರೂ, ಆ ಸುಲಿಗೆ ಆ ದರೋಡೆ, ಆ ಗುಲಾಮಗಿರಿ ಇತಿಹಾಸ ಈ ಎಲ್ಲವೂ ಪ್ರಧಾನವಾಗಿ ಭೌತಿಕವಾದವುಗಳು. ಸಂಪತ್ತಿಗೊ ಸೌಲಭ್ಯಕ್ಕೊ ನಡೆದಂಥವು. ಆ ಸಂಪತ್ತು ಆ ಸೌಲಭ್ಯ ದಕ್ಕಿದ ಮೇಲೆ ಅದು ಅಲ್ಲಿಗೆ ಮುಗಿಯಿತು. ಅನ್ಯಾಯ ಮಾಡಿದವನು ಅಂತಃಕರಣವಿದ್ದರೆ ಪಶ್ಚಾತ್ತಾಪಪಡಬಹುದು, ಅನ್ಯಾಯಕ್ಕೆ ಒಳಗಾದವನು ಕುಪಿತನಾಗಬಹುದು. ಅದೂ ಇಲ್ಲಿ ಒಂದೆರಡು ತಲೆಮಾರುಗಳಲ್ಲಿ ಇದು ಮಾಯುವ ಸಾಧ್ಯತೆ ಇರುತ್ತದೆ. ಅದಕ್ಕೇ ಇಂಥ ಕಡೆ ಸರ್ಕಾರದ ಒತ್ತಡ, ಕಾನೂನು ಇಲ್ಲದಿದ್ದರೂ ಖಾಸಗಿ ಕ್ಷೇತ್ರಗಳಲ್ಲೂ ಸ್ವಪ್ರೇರಣೆಯಿಂದಲೇ

ಮೀಸಲಾತಿ ನೀಡುವ ಇತರರೊಡನೆಯೂ ಹಂಚಿಕೊಳ್ಳುವ ಸಂಭವ ಹೆಚ್ಚು ಇರುತ್ತದೆ.

ಆದರೆ ಭಾರತದ ಪರಿಸ್ಥಿತಿಯೇ ಬೇರೆಯಾದುದು. ಇಲ್ಲಿನ ತಾರತಮ್ಯ ಸುಲಿಗೆ ವಂಚನೆ ದರೋಡೆಗಳು, ಭೌತಿಕ ಮಟ್ಟದಲ್ಲಿ ಮಾತ್ರ ನಿಂತಿಲ್ಲ. ಅದರಾಚೆಗೆ ಅಂದರೆ ಸಾಮಾಜಿಕ ಸಾಂಸ್ಕೃತಿಕ ಏನೆಲ್ಲಾ ಕ್ಷೇತ್ರಗಳಿವೆಯೋ ಅಲ್ಲೆಲ್ಲಾ ಮನಸ್ಸಿನ ತಳಸ್ತರದವರೆಗೂ ತಾರತಮ್ಯದ ಸೋಂಕು ತಗುಲಿದೆ. ಈ ತಾರತಮ್ಯದ ಸಮಾಜವನ್ನು ಸ್ಥಿರವಾಗಿಸಲು ಶಾಸ್ತ್ರ ಧರ್ಮ ದೇವರು ಇವುಗಳನ್ನೂ ದುರುಪಯೋಗಪಡಿಸಿಕೊಂಡು, ಕಳಂಕಿತ ನೆಲ ನಮ್ಮದಾಗಿದೆ. ಹಾಗಾಗಿ ಸಮಾನತೆ ಎಂಬುದೇ ನಮ್ಮ ಸಮಾಜಕ್ಕೆ ನಮ್ಮ ಧರ್ಮಕ್ಕೆ ಅಪರಿಚಿತವಾದ ಪರಿಕಲ್ಪನೆಯಾಗಿದೆ. ಇಂಥ ಪರಿಸ್ಥಿತಿ ಇರುವುದರಿಂದಲೇ ಭಾರತದಲ್ಲಿ ಮೀಸಲಾತಿ ಕಾನೂನು ಇದ್ದರೂ ಅದರೊಳಗೇನೆ ದಲಿತರನ್ನು ವಂಚಿಸುವುದು ಹೇಗೆ, ದಲಿತರಿಗೆ ಮೀಸಲಾಗಿಟ್ಟ ಗ್ರ್ಯಾಂಟನ್ನು ಬಳಸದೇ ಇರುವುದು ಹೇಗೆ– ಹೀಗೆ ಇಂಥದರಲ್ಲೇ ಭಾರತದ 'ಪ್ರತಿಭೆ' ಸಾಕಷ್ಟು ವ್ಯಯವಾಗುತ್ತಿದೆ. ಇಂಥದರಲ್ಲಿ ಖಾಸಗಿ ಕ್ಷೇತ್ರದಲ್ಲಿ ಸ್ವಪ್ರೇರಣೆಯಿಂದ ದಲಿತರಿಗೆ ಹಿಂದುಳಿದವರಿಗೆ ಮೀಸಲಾತಿ ಕಲ್ಪಿಸಿಕೊಡಲು ಕಷ್ಟವಾಗುತ್ತದೆ. ದಲಿತರಿಗೆ ಹಿಂದುಳಿದವರಿಗೆ ಉನ್ನತ ಸ್ಥಾನಮಾನ ಸಿಗದಿರುವುದೇ ನ್ಯಾಯ, ಸಿಗುವುದೇ ಅನ್ಯಾಯ ಎಂಬ ಪರಂಪರೆಯು ಭಾರತದಲ್ಲಿ ಇರುವುದರಿಂದಲೇ ಒಬ್ಬ ದಲಿತನಿಗೆ ಒಂದು ಕೆಲಸ ಸಿಕ್ಕಿದರೆ ಹತ್ತು ಜನಕ್ಕೆ ಸಿಕ್ಕಂತೆ ಅದು ಪರಿಣಾಮ ಬೀರುತ್ತದೆ. ಭಾರತದಲ್ಲಿ ಖಾಸಗೀಕರಣ ಎಂದರೆ ಹೆಚ್ಚುಕಮ್ಮಿ ನವಜಾತೀಯತೆಯಾಗಿ ಬಿಡುತ್ತದೆ. ಸರ್ಕಾರಗಳು ಇದರಲ್ಲಿ ಶಾಮೀಲಾಗದಿದ್ದರೆ ಒಂದು ಕಾನೂನು ಮಾಡಿ ನೋಡಲಿ!– ಅದೇನೆಂದರೆ ಖಾಸಗಿ ಕ್ಷೇತ್ರದಲ್ಲಿ ದಲಿತರಿಗೆ ಶೇಕಡ 30 ರಷ್ಟು ಮೀಸಲಾತಿ ಕೊಡಬೇಕು ಎಂದು. ಆಗ ಖಾಸಗಿ ಕ್ಷೇತ್ರಗಳು ಬಹುತೇಕ ಮುಚ್ಚಿ ಸರ್ಕಾರಿ ಸಾರ್ವಜನಿಕ ಕ್ಷೇತ್ರಗಳು ಲಾಭದಾಯಕದಲ್ಲಿ ನಡೆಯಲಾರಂಭಿಸಬಹುದೇನೋ.

ಈ ನೆಲಜಲ ಗಾಳಿಬೆಳಕನ್ನು ಯಾವ ಖಾಸಗಿಯವನೂ ತಾನು ಹುಟ್ಟುವಾಗ ತನ್ನ ತಾಯಗರ್ಭದಿಂದ ತನ್ನ ಜೊತೆಯಲ್ಲಿ ತರುವುದಿಲ್ಲ ಎಂಬ ಪ್ರಾಥಮಿಕ ತಿಳಿವಳಿಕೆಯಿಂದ ನಾವು ಆರಂಭಿಸಬೇಕಾಗುತ್ತದೆ. ಖಾಸಗೀಕ್ಷೇತ್ರಗಳೂ ಪ್ರಕೃತಿಯ ನೆಲಜಲ ಗಾಳಿಬೆಳಕುಗಳನ್ನು ಬಳಸುವುದರಿಂದ ಇಲ್ಲೂ ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿಸಿದ ಮೇಲೆಯೇ ಖಾಸಗೀಕ್ಷೇತ್ರಕ್ಕೆ ಸರ್ಕಾರ ಪರವಾನಿಗೆ ನೀಡುವುದಾದರೆ ಆಗ ಮಾತ್ರ ಒಂದಿಷ್ಟು ಕಷ್ಟಪಟ್ಟು ಸಾಮಾಜಿಕ ನ್ಯಾಯ

ಇಲ್ಲೂ ಸಿಗಬಹುದು. ಇಂಥ ಕಟು ನಿರ್ಧಾರಗಳಿಲ್ಲದೆ ಖಾಸಗೀಕ್ಷೇತ್ರಗಳಲ್ಲಿ ದಲಿತರ ಹಿಂದುಳಿದವರ ಭಾಗವಹಿಸುವಿಕೆಯನ್ನು ದುರ್ಬೀನಿನಲ್ಲಿ ನೋಡಬೇಕಾಗುತ್ತದೆ ಎಂದೇ ನನಗೆ ಅನ್ನಿಸುತ್ತದೆ.

ಸುತ್ತೀಬಳಸಿ ಹೇಳುತ್ತಿರುವ ನನ್ನ ಉದ್ದಿಶ್ಯ ಇಷ್ಟೇ: ತಾರತಮ್ಯವನ್ನು ಮೌಲ್ಯ ಮಾಡಿದ ನಮ್ಮ ಸಮಾಜದಲ್ಲಿ, ವಂಚಿತರ ಭಾಗವಹಿಸುವಿಕೆ ಇಲ್ಲದಿದ್ದರೆ ನಾವು ಅನಾಗರಿಕರು ನಾವು ವಂಚಕರು ಎಂದು ಅನ್ನಿಸಿದರೆ ಮಾತ್ರ ನಮ್ಮ ಕಣ್ಣು ತೆರೆಯುತ್ತದೆ. ಜೊತೆಗೆ ಇದೇ ಸಂದರ್ಭದಲ್ಲಿ ಇನ್ನೊಂದು ಮಾತು. ದಲಿತರಿಗೆ ಹಿಂದುಳಿದವರಿಗೆ ಮೀಸಲಾತಿ ಪ್ರಶ್ನೆ ಬಂದಾಗಲೆಲ್ಲ ಇದರ ಜೊತೆಯಲ್ಲಿ ಹುಟ್ಟಿದಂತೆ, ಅವಳಿ ಜವಳಿಯಂತೆ ಆರ್ಥಿಕವಾಗಿ ಹಿಂದುಳಿದಿರುವಿಕೆಯನ್ನು ಮೀಸಲಾತಿ ಮಾನದಂಡ ಮಾಡಬೇಕು ಎಂಬ ತೊಡರುಗಾಲು ವಿವಾದವೂ ಏಳುತ್ತದೆ. ಜಗತ್ತಿನ ಎಲ್ಲಾ ದುಡಿಯುವ ವರ್ಗವನ್ನು 'ಶ್ರಮಜೀವಿ'ಗಳು ಎಂದು ಕರೆಯುವ ಕಾರ್ಲ್‌ಮಾರ್ಕ್ಸ್, ಭಾರತದ ಅಸ್ಪೃಶ್ಯರನ್ನು 'ಕಠಿಣ ಶ್ರಮಜೀವಿ'ಗಳು ಎಂದು ಕರೆಯುತ್ತಾನೆ. ಕಡುಬಡತನದ ಜೊತೆಗೆ ಅವಮಾನವೂ ಸೇರಿದ ಬಡತನ ಅಸ್ಪೃಶ್ಯರದು. ಸಾಮಾಜಿಕ ಸಾಂಸ್ಕೃತಿಕ ಚಲನೆ ಇರುವವರ ಬಡತನ ರೆಕ್ಕೆಪುಕ್ಕ ಇರುವ ಬಡತನವಾದರೆ, ಸಾಮಾಜಿಕ ಸಾಂಸ್ಕೃತಿಕ ಚಲನೆ ಇಲ್ಲದ ದಲಿತರ, ಹಿಂದುಳಿದವರ ಬಡತನವು ರೆಕ್ಕೆಪುಕ್ಕ ಕಿತ್ತ, ತೆವಳುವ ಬಡತನವಾಗಿದೆ. ಹೀಗಿರುವಾಗ ಆರ್ಥಿಕವಾಗಿ ಹಿಂದುಳಿದಿರುವಿಕೆಯನ್ನು ಮೀಸಲಾತಿಗೆ ಮಾನದಂಡ ಮಾಡಬೇಕೆನ್ನುವವರಿಗೆ ರೆಕ್ಕೆಪುಕ್ಕ ಇಲ್ಲದೆ ಈ ತೆವಳುವ ಬಡತನ ಯಾಕೆ ಕಣ್ಣಿಗೆ ಕಾಣುವುದಿಲ್ಲವೋ ನನಗೆ ಅರ್ಥವಾಗುವುದಿಲ್ಲ. ಸ್ಪಷ್ಟಪಡಿಸುವುದಕ್ಕಾಗಿ ಇಷ್ಟವಿಲ್ಲದಿದ್ದರೂ ಈ ಉದಾಹರಣೆ ಕೊಡುತ್ತಿರುವೆ– ಕಾಡಿನಲ್ಲಿರುವ ಆದಿವಾಸಿಗಳು ಯಾವುದೋ ಕಾಲಮಾನದಲ್ಲಿ ಬದುಕುತ್ತಿರುತ್ತಾರೆ, ಆದರೆ ಇವರಿಗೆ ಸಂದರ್ಭ ಕೂಡಿ ಬಂದು ಕಾಡಿನಿಂದ ನಾಡಿಗೆ ಬಂದರೆ ಊರು ಅವರನ್ನು ತನ್ನೊಳಕ್ಕೆ ಸೇರಿಸಿಕೊಳ್ಳುತ್ತದೆ. ಆದರೆ ಪಕ್ಕದಲ್ಲೆ ಊರಾಚೆ ಎಸೆಯಲ್ಪಟ್ಟ ಅಸ್ಪೃಶ್ಯರನ್ನು ಊರು ತನ್ನೊಳಕ್ಕೆ ಸೇರಿಸಿಕೊಳ್ಳುವುದಿಲ್ಲ. ಇದನ್ನು ಕಾಣುವ ಕಣ್ಣಿದ್ದರೆ, ಜೊತೆಗೆ ಈ ತೆವಳುವ ದಲಿತರ ಬಡತನವನ್ನೂ ಕಾಣುವ ಕಣ್ಣಿದ್ದರೆ– ಆರ್ಥಿಕ ಹಿಂದುಳಿದಿರುವಿಕೆಯನ್ನು ಮಾನದಂಡ ಮಾಡಿದರೂ ಎಲ್ಲಾ ಕ್ಷೇತ್ರಗಳಲ್ಲೂ ಈಗಾಗಲೇ ದಲಿತರ ಇರುವಿಕೆ ಕನಿಷ್ಠ ಶೇಕಡ 50ಕ್ಕೂ ಹೆಚ್ಚು ಇರಬೇಕಾಗಿತ್ತು. ಅದಕ್ಕೆ ಈ ಪ್ರಶ್ನೆ ಎತ್ತುವವರು ನನಗೆ ಅಪ್ರಾಮಾಣಿಕರು, ದಡ್ಡರು ಅಥವಾ ಧೂರ್ತ ವಂಚಕರಂತೆ ಕಾಣಿಸುತ್ತಾರೆ, ಅಪರೂಪಕ್ಕೆ ಮುಗ್ಧರೂ ಇರಬಹುದು.

ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಪ್ರಶ್ನೆ ಬಂದಾಗ ಸಾಮರ್ಥ್ಯ ಸೊರಗುತ್ತದೆ ಎಂಬ ಮತ್ತೊಂದು ತೊಡರುಗಾಲು ಪ್ರಶ್ನೆ ಸಾಮಾನ್ಯವಾಗಿರುತ್ತದೆ. ತಾರತಮ್ಯ ಮೌಲ್ಯ ಮಾಡಿ– ಮಾನವೀಯತೆ, ಸಮಾನತೆ, ನೈತಿಕತೆಯೇ ಕುಬ್ಜವಾಗಿರುವಾಗ– ಈ ಪಾಪ, ಈ ಅಪರಾಧದ ಮುಂದೆ ಎಷ್ಟೇ ಭೌತಿಕ ನಷ್ಟವಾದರೂ ಅದು ಕಮ್ಮಿಯೇ ಎಂದು ನನಗೆ ಅನ್ನಿಸುತ್ತದೆ. ಬಹುಶಃ ಏನೂ ನಷ್ಟವಾಗಲಾರದು, ಆದರೂ– ನಷ್ಟವಾದರೂ ಅದು ಕಮ್ಮಿಯೇ ಮತ್ತು ತಾತ್ಕಾಲಿಕವಾದುದು.

ನಮ್ಮ ಸರ್ಕಾರಗಳಿಗೆ ಪ್ರಾಥಮಿಕ ಶಿಕ್ಷಣವನ್ನು ನಿಜವಾದ ಕಡ್ಡಾಯ ಮತ್ತು ಏಕರೂಪತೆ ಮಾಡುವ ಸಾಮರ್ಥ್ಯ ಇಲ್ಲದ ತಪ್ಪಿಗೆ ದಲಿತರು ಹಿಂದುಳಿದವರು ಯಾಕೆ ಇಡೀ ಹಳ್ಳಿಗಾಡಿನ ಹಿನ್ನೆಲೆಯು ಸ್ವಲ್ಪ ಮಂಕಾಗಿ ಕಾಣಬಹುದು, ಅದರ ಅರ್ಥ ಅಸಮರ್ಥ ಅಂತ ಅಲ್ಲ. ಈ ಪ್ರತಿಭೆ–ಸಾಮರ್ಥ್ಯ ಎಂದು ಬೊಬ್ಬೆ ಹಾಕುವವರಿಗೆ ವಿದ್ಯಾ ಎಂಬ ಸಂಸ್ಕೃತ ಕವಿಯ ನುಡಿಗಳಿಂದ ಹೇಳುವೆ: 'ಭರತವರ್ಷದಲ್ಲಿ ಮಹಾಕವಿಗಳೆಂದರೆ ವ್ಯಾಸ, ವಾಲ್ಮೀಕಿ. ಕಾಳಿದಾಸನೂ ಮಹಾಕವಿ ಅಂದ್ಕೊಳ್ತಾನೆ, ಅಂದ್ಕೊಳ್ಳಲಿ ಬೇಕಾದರೆ. ಉಳಿದವರು ಏನಾದ್ರು ಮಹಾಕವಿಗಳು ಅಂದ್ಕೊಂಡ್ರೆ ಅವರ ತಲೆಗೆ ನನ್ನ ಎಕ್ಕಡ' ಅಂತಾಳೆ. ಭಾರತದ ಪ್ರತಿಭೆಗೆ ದೇಹವಾಗಿ ಮೂಡಿದ ವ್ಯಾಸ, ವಾಲ್ಮೀಕಿ, ಕಾಳಿದಾಸರಂಥ ಬೆಸ್ತ, ಬೇಡ, ಕುರುಬನಂಥ ತಳಜನಾಂಗಗಳಿಗೆ ವಿದ್ಯೆಯನ್ನೇ ವಂಚಿಸಿದ, ಪಾಪದ ಸಂಚಿನ ಸಮಾಜದ ಹಿನ್ನೆಲೆಯಲ್ಲಿ– ಬುದ್ಧಿ, ಪ್ರತಿಭೆ, ಸಾಮರ್ಥ್ಯ ಮಾತನಾಡುವವರಿಗೆ ಏನು ಹೇಳಬೇಕು? ವಿದ್ಯಾಳ ಮಾತುಗಳನ್ನಷ್ಟೇ ನೆನಪಿಸುವೆ.

ಈ ಬೆಸ್ತ, ಬೇಡ, ಕುರುಬ ಇಂತಹ ತಳಸಮುದಾಯಗಳಲ್ಲಿ ಹುಟ್ಟು ಪಡೆದ ಆ ಮಹಾಪ್ರತಿಭೆಗಳ ಹಾಲು ಕುಡಿದು ಭಾರತದ ಪ್ರತಿಭೆ ಅಂಬೆಗಾಲಿಡಬೇಕಾಗಿದೆ ಎಂಬ ವಿನಯ ಇಂದಾದರೂ ನಮಗೆ ಬೇಕಾಗಿದೆ.

# ಒಳಮೀಸಲಾತಿ ಹಾಗೂ ಜಾತಿ ಜನಗಣತಿ

**ಒಳಮೀಸಲಾತಿ**

ಭಾರತದ ಸಾಮಾಜಿಕ ವಿಷಮತೆಯಲ್ಲಿ ಬ್ರಾಹ್ಮಣರಿಗೇ ಒಂದು ರಾಜ್ಯ ಕೊಟ್ಟರೂ ಅಲ್ಲೂ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಇತ್ಯಾದಿಗಳು ಭೂತಾಕಾರವಾಗಿ ಬೆಳೆದು, ಅವಹೇಳನ ಆತ್ಮಹತ್ಯೆಗಳು ಹೆಚ್ಚಿ, ಮತ್ತೆ ಪ್ರತ್ಯೇಕತೆ ಪ್ರಶ್ನೆ ಏಳುತ್ತದೆ. ದಲಿತರಿಗೇ ಪ್ರತ್ಯೇಕ ರಾಜ್ಯಕೊಟ್ಟರೂ ಅಲ್ಲೂ ಮೇಲು ಕೀಳು ಎಂದು ಹೊಡೆದಾಟ ಕೊಲೆಗಳಾಗಿ ಮತ್ತೆ ಪ್ರತ್ಯೇಕತೆ ಪ್ರಶ್ನೆಯೇ ಏಳುತ್ತದೆ. ಚಾತುರ್ವರ್ಣದ ಜಾತಿ ಪದ್ಧತಿಯ ಶ್ರೇಣಿ ಆಳವಾಗಿ ಬೇರೂರಿ ಸಮಾನತೆಯ ಸಹಬಾಳ್ವೆಯು ಭಾರತೀಯರಿಗೆ ಅಸಹಜವಾಗಿದೆ, ಏನು ಮಾಡೋಣ?

ಹೆಚ್ಚು ಕಡಿಮೆ ಎಲ್ಲಾ ಜಾತಿಗಳಲ್ಲೂ ಎಡಗೈ-ಬಲಗೈ ಪಂಗಡ ಇದ್ದದ್ದು ಈಗ ಮರೆಯಾಗಿರುವುದು ಇತಿಹಾಸ. ಆಸ್ತಿ ಇಲ್ಲದ್ದಕ್ಕೇನೋ ಈ ಅಸ್ಪೃಶ್ಯರು ಎಡಗೈ ಬಲಗೈಗಳನ್ನು ಆಸ್ತಿಯಂತೆ ಇಟ್ಟುಕೊಂಡಿದ್ದಾರೆ! ಒಟ್ಟಲ್ಲಿ ಹಿಂದೂ ಚಾತುರ್ವರ್ಣ ಜಾತಿ ಸಮಾಜಕ್ಕೆ ಸೇರದೆ ನುಂಗಲಾರದ ತುತ್ತಾಗಿ ಉಳಿದವರು ಅಸ್ಪೃಶ್ಯರು. ಹಿಂದೂ ಚಾತುರ್ವರ್ಣ ಜಾತಿ ಸಮಾಜವು ಅಸ್ಪೃಶ್ಯರನ್ನು ದೂರ ಇಟ್ಟು ವಂಚಿಸುವುದೇ ತನ್ನ ಅಳಿವು ಉಳಿವಿನ ಪ್ರಶ್ನೆ ಎಂಬಂತೆ ವರ್ತಿಸುತ್ತ ಬಂದಿದೆ. ಇಂಥದರಲ್ಲಿ, ಓಟು– ಒಗ್ಗಟ್ಟಿನಿಂದ ಅಷ್ಟು ಇಷ್ಟು ನಿಲ್ಲಲು ಪ್ರಯತ್ನಿಸುತ್ತಿರುವ, ಯಾರೂ ರಕ್ಷಿಸದ, ಎಲ್ಲರ ಅಸಹನೆಗೆ ತುತ್ತಾದ ಊರಾಚೆಗಿನ ಈ ಕೊನೆಯ ಘಟಕದಲ್ಲಿ ಇರುವ ಒಡಕು ಹೆಚ್ಚಾದರೆ ಏನೋ ಎತ್ತೋ ಎಂಬ ಆತಂಕ ನನಗಿದೆ.

ಇವತ್ತಿನ ಇತರೆ ಜಾತಿಗಳ ವಿದ್ಯಮಾನ ನೋಡಿದರೆ, ಬ್ರಾಹ್ಮಣ, ಲಿಂಗಾಯಿತ, ಒಕ್ಕಲಿಗ ಇತ್ಯಾದಿ ಪ್ರಬಲ ಜಾತಿಗಳವರೆಲ್ಲಾ ತಮ್ಮ ಒಳಪಂಗಡ ಮರೆತು ಒಟ್ಟಾಗಿ ತಮ್ಮ ಶಕ್ತಿ ಸಾಮರ್ಥ್ಯ ಹೆಚ್ಚಿಸಿಕೊಳ್ಳುವತ್ತ ಹೆಜ್ಜೆ ಇಡುತ್ತಿವೆ. ವಿಪರ್ಯಾಸವೆಂದರೆ ಈ ಸಮಾಜದ ಕೊನೆಯ ಘಟಕವಾದ ದುರ್ಬಲ ಅಸ್ಪೃಶ್ಯರು, ಇರುವ ತಮ್ಮ ಒಡಕನ್ನು ಹೆಚ್ಚಿಸಿಕೊಳ್ಳುತ್ತಾ ನಡೆಯುತ್ತಿದ್ದಾರೆ. ಒಂದೇ ಕಾಲಮಾನದಲ್ಲಿ ಇದು ಜರುಗುತ್ತಿದೆ!

ಕರ್ನಾಟಕದ ಐದು ಕೋಟಿ ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯದು ಒಂದು ಕೋಟಿಯಷ್ಟಾಗಬಹುದೇನೊ. ತಮಾಷೆ ನೋಡಿ– ನುಲಿಯ ಚಂದಯ್ಯ ಕುಳುವ (ಕೊರಮ ಕೊರಚ ಭಜಂತ್ರಿ) ಸಮಾಜವು ತನ್ನ ಜನಸಂಖ್ಯೆ 26 ಲಕ್ಷ ಎನ್ನುತ್ತಿದೆ. ಭೋವಿ 40 ಲಕ್ಷವಾಗಿ ಲಂಬಾಣಿ 35 ಲಕ್ಷವಾದರೆ ಇಲ್ಲೇ ಕೋಟಿ ಮೇಲಾಯಿತು! ಆಗ ಪರಿಶಿಷ್ಟ ಜಾತಿಯಲ್ಲಿ ಎಡಗೈ ಬಲಗೈ ಒಬ್ಬನೂ ಇಲ್ಲ ಎಂದಂತಾಗುತ್ತದೆ. ಹೀಗೆ ಎಡಗೈ 70 ಲಕ್ಷ ಅನ್ನುತ್ತಿದೆ, ಬಲಗೈ 70 ಲಕ್ಷ ಅನ್ನುತ್ತಿದೆ. ಇಲ್ಲೇ ಕೋಟಿ ಮೇಲಾಯ್ತು. ಅಂದರೆ ಉಳಿದವರು ಯಾರೂ ಇಲ್ಲ ಅಂತಾಗುತ್ತದೆ! – ಹೀಗಿದೆ ಪರಿಸ್ಥಿತಿ.

**1.** ಅಸ್ಪೃಶ್ಯರ ಬಲಗೈ ಪಂಗಡವೇನಾದರೂ ಪ್ರತ್ಯೇಕ ಮೀಸಲಾತಿ ಕೇಳಿದರೆ ನಾನು 'ಬೇಡ' ಅನ್ನುತ್ತೇನೆ. ನಾನು ಇದೇ ಪಂಗಡಕ್ಕೆ ಸೇರಿದವನಾದ್ದರಿಂದ ನನ್ನ ನಿಲುವಿನಿಂದಾಗಿ ನಿಷ್ಠುರ ಕಟ್ಟಿಕೊಂಡರೂ ಅಪಾರ್ಥವಾಗುತ್ತಿಲ್ಲ.

**2.** ಈಗ ಅಸ್ಪೃಶ್ಯರ ಎಡಗೈ ಪಂಗಡ ಪ್ರತ್ಯೇಕ ಮೀಸಲಾತಿ ಕೇಳುತ್ತಿದೆ. 'ಬೇಡ' ಅನ್ನಲು ನನಗೆ ಹಕ್ಕಿಲ್ಲವೇನೋ ಎಂಬ ಅಳುಕಿನಿಂದ ಸುಮ್ಮನಾಗುವೆ. ಆದರೆ ನಾನೇ ಭಾಗಿಯಾಗಿ ಪ್ರತ್ಯೇಕತೆ ವರ್ಗೀಕರಣಕ್ಕೆ ಬೆಂಬಲಿಸಲಾರೆ.(ಒಳಮೀಸಲಾತಿ ನೀಡುವಂತಾದರೆ ಇಲ್ಲಿ ಬೆಕ್ಕು ಕಜ್ಜಾಯ ಹಂಚಿದಂತಾಗಿಬಿಡುವ ಸಂಚಾಗದಂತೆ ಎಚ್ಚರವಹಿಸಬೇಕಾಗಿದೆ.)

**3.** ಒಳಪಂಗಡಗಳ ನಡುವೆ ಅಸಮತೋಲನ ತಪ್ಪಿಸಲು **ಸಮತೋಲನ ಬ್ಯಾಕ್‌ಲ್ಯಾಗ್** ಪದ್ಧತಿ ರೂಪಿಸಬಹುದೇನೋ. (ಅಂದರೆ ಒಂದು ಪಕ್ಕಾ ಜನಗಣತಿಯಾಗಿ ಉಪಜಾತಿಗಳ ಪ್ರಮಾಣ ಸಿಕ್ಕ ಮೇಲೆ– ಆಯಾಯ ಉಪಜಾತಿಗಳ ಉದ್ಯೋಗಸ್ಥರ ಪ್ರಮಾಣವನ್ನು ನಿಗದಿಪಡಿಸಿಕೊಂಡು ಯಾವ ಉಪಜಾತಿಗೆ ಅಸಮತೋಲನವಾಗಿದೆಯೋ ಅದು ಸಮತೋಲನವಾಗುವವರೆಗೂ ಆ ಉಪಜಾತಿಗೆ ಎಲ್ಲಾ ಉದ್ಯೋಗಗಳೂ ದೊರಕುವಂತಾಗಿ ನಂತರ ಮಾಮೂಲಿ ಮೀಸಲಾತಿ ಅನುಸರಿಸುವುದು.

ಉದಾಹರಣೆಗೆ ಒಳಮೀಸಲಾತಿಗೆ ಒತ್ತಾಯಿಸುತ್ತಿರುವ ಎಡಗೈ ಗುಂಪು– ಈ ಗುಂಪು ಹೇಳುವಂತೆ ಉದ್ಯೋಗದಲ್ಲಿ ಶೇಕಡ ಎರಡರಷ್ಟು ಮಾತ್ರ ಇದ್ದು ಜನಸಂಖ್ಯಾ ಪ್ರಮಾಣದಲ್ಲಿ ಶೇಕಡ ಆರೇಳು ಇರುವುದು **ನಿಜವಾದಲ್ಲಿ** ಹಳೆ ಬಾಕಿ ಉದ್ಯೋಗ ಸಿಕ್ಕಿ ಸಮತೋಲನವಾಗುವವರೆಗೂ ಉಳಿದವರು ಕಾಯಬೇಕಾಗುತ್ತದೆ. ಇದೇ ನೀತಿ **ಪರಸ್ಪರ** ಎಲ್ಲರಿಗೂ ಅನ್ವಯಿಸುತ್ತದೆ. ಆದರೆ **ಈ ಮಾತು ಖಚಿತವಾದ ಜನಗಣತಿ ಆಗುವುದರ ಮೇಲೆ ನಿಂತಿದೆ**)

**4**. (ಒಳಮೀಸಲಾತಿಗೆ ಪಾರ್ಲಿಮೆಂಟ್ ಅನುಮೋದನೆ ಅಗತ್ಯವಿರುವುದರಿಂದ, ಈ ಸಾಧ್ಯತೆಯು ಕ್ಷೀಣವಾಗಿರುವುದರಿಂದ ನಾನು ಹೇಳುವ ಸಮತೋಲನ ಬ್ಯಾಕ್‌ಲಾಗ್ ಪದ್ಧತಿಯು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವ ಸಾಧ್ಯತೆ ಇದ್ದಲ್ಲಿ ಇದನ್ನು ಕಾನೂನು ತಜ್ಞರೊಡನೆ ಚರ್ಚಿಸಬೇಕಾಗಿದೆ.)

**5**. (ಈಗ ಪರಿಶಿಷ್ಟ ಜಾತಿ ಒಳಗಿನ ಸ್ಪೃಶ್ಯ ಗುಂಪು ಒಳಮೀಸಲಾತಿ ಬೇಡ ಎಂದು ಪ್ರತಿಭಟಿಸುತ್ತದೆ. ಬೇಡ ಅನ್ನಲು ಹಕ್ಕಿಲ್ಲವೇನೊ. ಬದಲಾಗಿ ಉಪಜಾತಿ/ಪಂಗಡಗಳ ಒಂದು ಸಮಗ್ರ ಜನಗಣತಿ ಆಗುವವರೆಗೂ ಇದು ಬೇಡ ಅಂದರೆ ಅದನ್ನು ಅರ್ಥ ಮಾಡಿಕೊಳ್ಳಬಹುದು)

**6**. (ಪರಿಶಿಷ್ಟ ಜಾತಿ ಜನಗಣತಿ ಸಮಗ್ರವಾಗಿ ನಡೆದರೆ ಮೀಸಲಾತಿ ಪ್ರಮಾಣ ಆಗ ಶೇಕಡ 15ರ ಬದಲು ಶೇಕಡ 20ರವರೆಗೂ ಏರುವ ಸಾಧ್ಯತೆ ಇರಬಹುದು ಎಂಬ ಒಂದು ಅಂದಾಜೂ ಇದೆ.)

**7**. (ಹೀಗೂ ಒಂದು ಚಿಂತನೆ ಮಾಡಬಹುದು– **ಪಕ್ಕಾ ಜನಗಣತಿ ಆದಮೇಲೆ** ಪರಿಶಿಷ್ಟ ಜಾತಿಯಲ್ಲಿರುವ ಸ್ಪರ್ಶಗುಂಪನ್ನು ಅವರ ಅನುಪಾತದ ಮೀಸಲಾತಿ ಪ್ರಮಾಣದೊಡನೆ ಪರಿಶಿಷ್ಟ ಪಂಗಡಕ್ಕೆ ವರ್ಗಾಯಿಸಿ ಅಲ್ಲೂ (ಅ) ಮೂಲ ಪರಿಶಿಷ್ಟ ವರ್ಗ (ಆ) ಅಲೆಮಾರಿ ಪರಿಶಿಷ್ಟ ವರ್ಗ (ಇ) ನೆಲೆಗೊಂಡ ಪರಿಶಿಷ್ಟ ವರ್ಗ ಹೀಗೆ ವಿಂಗಡಿಸುವುದು ಸೂಕ್ತವಿರಬಹುದು. ಹಾಗೆಯೇ ಪರಿಶಿಷ್ಟ ಜಾತಿಯಲ್ಲೂ (ಅ) ಸಣ್ಣ ಪುಟ್ಟ ಜನಸಂಖ್ಯೆಯ ಅಸ್ಪೃಶ್ಯ ಗುಂಪು ಮತ್ತು ಪೌರಕಾರ್ಮಿಕರು (ಆ) ಎಡಗೈ ಗುಂಪು (ಇ) ಬಲಗೈ ಗುಂಪು ಹೀಗೆ ವರ್ಗೀಕರಿಸುವುದಾದರೆ ಮುಂದಿನ ವಿಘಟನೆಗಳನ್ನು ಮುಂದಾಲೋಚಿಸಿ ವರ್ಗೀಕರಿಸಿದಂತೂ ಆಗಬಹುದೇನೋ.)

**8**. ಪ್ರತ್ಯೇಕ ಮೀಸಲಾತಿ ವರ್ಗೀಕರಣ ಬೇಕೇಬೇಕು ಅನ್ನುವಂತಾದರೆ (ಉಪಜಾತಿಗಳು ತಂತಮ್ಮಲ್ಲೆ ಹೋರಾಡದೆ) ನ್ಯಾಯಾಲಯ, ರಾಜಕೀಯ

ಒತ್ತಡದಿಂದ ಪಡೆಯುವ ವಿವೇಕ ಉಳಿಸಿಕೊಂಡರೆ ಒಳ್ಳೆಯದು ಎಂದು ಆಶಿಸುವೆ.

ಇಂದಿನ ಅಗತ್ಯ– ದಲಿತರು ಉಳಿದೆಲ್ಲಾ ಹಿಂದುಳಿದ ತಳ ಜನಾಂಗಗಳೊಡಗೂಡಿ ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿಗಾಗಿ ಹಾಗೂ ಮೀಸಲಾತಿ ಇದ್ದೂ ತಪ್ಪಿಸುತ್ತಿರುವ ವಂಚನೆಗಳತ್ತ ಗಮನ ಮತ್ತು ಸುಳ್ಳು ಜಾತಿಪತ್ರದ ವಂಚನೆ ಇತ್ಯಾದಿಗಳ ಕಡೆಗೆ ಎಚ್ಚರವಹಿಸಬೇಕಾಗಿದೆ. ಜೊತೆಗೆ ಮೀಸಲಾತಿಯನ್ನು ಹೆಚ್ಚು ಅರ್ಥಪೂರ್ಣ ಮಾಡಲು ಮೀಸಲಾತಿಯೊಳಗೆ ಆದ್ಯತೆ ಪರಿಕಲ್ಪನೆ ಒಳ್ಳೆಯದೆನ್ನಿಸುತ್ತದೆ– 1) ಒಳ ಪಂಗಡ ವಿವಾಹಿತರಿಗೆ 2) ತಲಾಂತರ ಕಸುಬಿನವರಿಗೆ 3) ಅವಿದ್ಯಾವಂತರ ಮಕ್ಕಳಿಗೆ 4) ಊರಾಚೆ ಇರುವವರಿಗೆ 5) ಹಳ್ಳಿಗರಿಗೆ– ಹೀಗೆ ಇದೇ ಧೋರಣೆಯನ್ನು ಉಳಿದೆಲ್ಲಾ ಕೆಟಗರಿಗೂ ಅಲ್ಲಿ ಅಂತರ್‌ಜಾತೀಯ ಮತೀಯ ವಿವಾಹಿತರಿಗೆ ಅವರ ಮಕ್ಕಳಿಗೆ ಆದ್ಯತೆ ನೀಡಿ ಅನ್ವಯಿಸಬೇಕು ಎಂಬುದು ನನ್ನ ಆಶಯ. ಆದರೆ ಇದು ಯಾರಿಗೂ ಬೇಡವಾಗಿದೆ, ಕ್ಷಮಿಸಿ.
*(ವಾಚಕರ ವಾಣಿಯಲ್ಲಿ ಪ್ರಕಟಿತ ಪತ್ರದ ವಿಸ್ತೃತ ರೂಪ)*

**ಜಾತಿ ಜನಗಣತಿ**

ಭಾರತದ ಛಿದ್ರತೆಗೆ ಮುಖ್ಯ ಕಾರಣಗಳಲ್ಲೊಂದಾದ ಜಾತಿಗಳ ಜನಗಣತಿ ಬಗ್ಗೆ ಚರ್ಚೆಯಾಗುತ್ತಿದೆ. ಹಾಗೂ ಇದು ಆತಂಕವನ್ನೂ ಹುಟ್ಟುಹಾಕಿದೆ. ಅರ್ಜಿಗಳಲ್ಲಿ ಜಾತಿಯ ಕಾಲಂ ಇಲ್ಲದಿದ್ದರೆ ಜಾತಿಯೂ ಇರುವುದಿಲ್ಲ ಎಂದು ಭಾರತದ ಮಧ್ಯಮವರ್ಗದ ಮನಸ್ಸು ಮುಗ್ಧವಾಗಿ ಹೇಳುತ್ತಿದೆ. ಈ ರೀತಿ ಹೇಳುವ ಮನಸ್ಸೇ ಯಾರಾದರೂ ಅಪರಿಚಿತರು ಭೇಟಿಯಾದಾಗ– ಇವರು ಯಾವ ಜನ, ಇವರದು ಯಾವ ಮತ, ಇವರು ಯಾವ ಜನಾಂಗ, ಇವರು ಯಾವ ಸಮಾಜ ಎಂಬುದೇ ಅವರಲ್ಲಿ ಮೊದಲು ಏಳುವ ಪ್ರಶ್ನೆಯಾಗಿರುತ್ತದೆ. ಇಲ್ಲಿ ಜಾತಿಗೆ ಬಳಸುವ– ಜನ, ಮತ, ಜನಾಂಗ, ಸಮಾಜ– ಈ ಪದಗಳೇ ಈ ಮನುಷ್ಯರು ಪರಸ್ಪರ ಸಂಬಂಧ ಇಲ್ಲದವರು, ಬೇರೆ ಬೇರೆ ಮನುಷ್ಯರು ಎಂಬಂತಿವೆ. ಒಂದೇ ಥರ ಇದ್ದರೂ ಒಂದೇ ಸ್ಥಿತಿಯಲ್ಲಿ ಇದ್ದರೂ ಬೇರೆ ಬೇರೆ ಜಾತಿಯಾಗಿದ್ದರೆ, ಆ ಇಬ್ಬರ ನಡುವೆ ಉಂಟಾಗುವ ದೂರ ಅಳತೆಗೂ ಸಿಗದಷ್ಟು ದೂರವಾಗಿರುತ್ತದೆ. ಆದ್ದರಿಂದ ಛಿದ್ರವಾದ ಭಾರತವು ತನ್ನ ಜಾತಿಗಳ ಮನೋಭೂಪಟದ ದೂರ ಆಧರಿಸಿ ಐಕ್ಯತೆಯತ್ತ ಹೆಜ್ಜೆ ಇಡಬೇಕಾಗಿದೆ. ಇದು,

ಜಾತಿಗಳು ಉಪಜಾತಿಗಳು ಹೇಗಿವೆ ಎಷ್ಟಿವೆ ಯಾವ ಸ್ಥಿತಿಯಲ್ಲಿವೆ ಯಾವ ಪ್ರಮಾಣದಲ್ಲಿವೆ ಎಂಬುದರ ಮಾಹಿತಿ ಆಧಾರಿಸಿಯೇ ನಡೆಯಬೇಕಾಗಿದೆ.

ಇದರ ಅಗತ್ಯವನ್ನು ಮನಗಾಣಿಸುವುದಕ್ಕೆ ನಾನು ಜನಸಂಖ್ಯಾತಜ್ಞರ ಅಥವಾ ಸಮಾಜಶಾಸ್ತ್ರಜ್ಞರ ಅಧ್ಯಯನಶೀಲತೆಯ ಪರಿಭಾಷೆಯಲ್ಲಿ ಹೇಳುವುದೂ ಇಲ್ಲ, ಅದು ನನಗೆ ಗೊತ್ತೂ ಇಲ್ಲ. ನಮ್ಮ ಕಣ್ಣೆದುರಿನ ಒಂದು ಉದಾಹರಣೆಯನ್ನಷ್ಟೇ ಮುಂದಿಡುವೆ: ಪರಿಶಿಷ್ಟ ಜಾತಿಗೆ ಸಂವಿಧಾನದತ್ತವಾಗಿ ಮೀಸಲಾತಿಯ ವಿಶೇಷ ಸೌಲಭ್ಯ ಪಡೆಯಲು ಅವಕಾಶವಾಗಿದೆ. ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಯ ಒಳಗೇನೇ ನೂರೊಂದು ಉಪಜಾತಿಗಳಿವೆ. ಎಲ್ಲರಿಗೂ ಸೇರಿ 15% ಮೀಸಲಾತಿಯ ಅವಕಾಶವಿದೆ. ಪರಿಶಿಷ್ಟ ಜಾತಿಯ ಉಪಪಂಗಡಗಳು ಸ್ಥೂಲವಾಗಿ ಒಂದೇ ಸ್ಥಿತಿಯಲ್ಲಿವೆ. ಈ ಪಂಗಡಗಳಲ್ಲೂ ದಿನದಿನಕ್ಕೆ ವಿದ್ಯಾವಂತರಾಗುತ್ತಾ ಉದ್ಯೋಗಸ್ಥರಾಗುತ್ತಾ ಇವರ ನಡುವೆ ಸಾಮರಸ್ಯ–ಸಹಬಾಳ್ವೆ ಹೆಚ್ಚಾಗಿ, ಸಾಂಪ್ರದಾಯಿಕವಾಗಿಯೇ ಮದುವೆ ಜರುಗುವಷ್ಟು ಇವರ ನಡುವಿನ ಸಂಬಂಧ ಕುದುರಬೇಕಿತ್ತು.

ಆದರೆ ವಾಸ್ತವ ಇದಕ್ಕೆ ತದ್ವಿರುದ್ಧವಾಗಿದೆ. ಇಂದು ಪರಿಶಿಷ್ಟ ಜಾತಿಯ ಉಪಪಂಗಡಗಳ ನಡುವೆ ದ್ವೇಷ, ಅಸಹನೆ ದಿನ ದಿನಕ್ಕೂ ಉಲ್ಬಣಿಸುತ್ತಿವೆ. ಪರಿಶಿಷ್ಟ ಜಾತಿಯ ಪ್ರತಿ ಪಂಗಡವೂ ತಮ್ಮ ತಮ್ಮ ಪಂಗಡದ ಜನಸಂಖ್ಯೆಯನ್ನು ಇರುವುದಕ್ಕಿಂತಲೂ ಕನಿಷ್ಠ ಎರಡು ಪಟ್ಟು ಹೆಚ್ಚಿಸಿಕೊಂಡು ಈ ಭ್ರಮೆಯನ್ನು ಸ್ವಲ್ಪವೂ ಅನುಮಾನಿಸದೆ ನಂಬಿರುವುದೂ ಮುಖ್ಯ ಕಾರಣವಾಗಿದೆ. ಈ ಭ್ರಮೆಯಿಂದಾಗಿ ಇಷ್ಟೊಂದು ಸಂಖ್ಯೆಯಲ್ಲಿದ್ದರೂ ತಮಗೆ ಸಿಕ್ಕಿರುವ ಸವಲತ್ತು ಅಷ್ಟೊಂದಿಲ್ಲ ಎಂಬ ಭಾವನೆ ಹುಟ್ಟಿಸಿ ಪರಸ್ಪರ ಕುದಿತಕ್ಕೆ ಇದೂ ಕಾರಣವಾಗಿದೆ. ಏನಾದರೂ ಉಪಪಂಗಡಗಳ ಜನಸಂಖ್ಯೆಯ ಮಾಹಿತಿ ಇದ್ದು ಜೊತೆಗೆ ಆ ಪಂಗಡಗಳ ಉದ್ಯೋಗಸ್ಥರ ಪ್ರಮಾಣದ ಮಾಹಿತಿ ಇದ್ದಿದ್ದರೆ ಬಹುಶಃ ಈ ದ್ವೇಷ, ಅಸಹನೆಗಳು ಇಷ್ಟೊಂದು ಇರುತ್ತಿರಲಿಲ್ಲವೇನೋ. ಬದಲಾಗಿ ಈ ವಾಸ್ತವಾಂಶ ಗೊತ್ತಿದ್ದರೆ ಪರಿಶಿಷ್ಟ ಜಾತಿಯಲ್ಲಿ ಕುಟುಂಬ ಭಾವನೆ ಉಂಟಾಗಬಹುದಾದ ಸಾಧ್ಯತೆಗಳೂ ಹೆಚ್ಚಿತ್ತು. ಉಪಪಂಗಡಗಳ ನಡುವಿನ ಪ್ರಾತಿನಿಧಿಕತೆಯಲ್ಲಿ ಅಸಮತೋಲನವಿದ್ದಲ್ಲಿ ಅದನ್ನು ಸರಿಪಡಿಸಿ ನ್ಯಾಯ ಸಲ್ಲುವಂತಾಗುವ 'ಸಮತೋಲನ ಬ್ಯಾಕ್‌ಲಾಗ್' ಅಥವಾ ಗ್ರಾಮೀಣ ಕೃಪಾಂಕದಂತೆ 'ಸಮತೋಲನ ಕೃಪಾಂಕ' ಇತ್ಯಾದಿ ಉಪಾಯಗಳನ್ನು ಹುಡುಕಬಹುದಾಗಿತ್ತು. ಉಪಪಂಗಡಗಳ ನಡುವಿನ ಜನಸಂಖ್ಯೆಯ ಪ್ರಮಾಣ ತಿಳಿಯದ ಕಾರಣವಾಗಿ ಸ್ನೇಹಿ

ಗುಂಪುಗಳಾಗಬೇಕಾದ ಈ ಉಪಪಂಗಡಗಳು ಶತ್ರುಗುಂಪುಗಳಾಗುವ ದುರಂತ ವ್ಯಂಗ್ಯದಿಂದ ತಪ್ಪಿಸಿಕೊಳ್ಳಬಹುದಾಗಿತ್ತು.

ನಮ್ಮ ಕಣ್ಣೆದುರಿಗೆ ಪರಿಶಿಷ್ಟ ಜಾತಿಯ ಒಳ ಪಂಗಡಗಳ ಜನಸಂಖ್ಯೆಯ ಪ್ರಮಾಣ ತಿಳಿಯದೆ ಈ ಒಳಪಂಗಡಗಳು ಏಳಿಗೆ ಹೊಂದುವುದು ಇರಲಿ, ಪರಸ್ಪರ ಹೊಡೆದಾಡಿಕೊಂಡು ನಾಶವಾಗುತ್ತಿರುವ ಕಟು ವಾಸ್ತವ ಕಂಡೂ ಕೂಡ ಜಾತಿ ಜನಗಣತಿ ಬೇಡ ಎಂದರೆ, ವಿಶೇಷ ಸವಲತ್ತುಗಳಿಗೆ ಅರ್ಹರಾದ ಹಿಂದುಳಿದ ವರ್ಗಗಳ ಜನಸಂಖ್ಯಾ ಪ್ರಮಾಣವನ್ನು ತಿಳಿಯದೆ ಮುಂದುವರೆದರೆ, ಇಂದು ಪರಿಶಿಷ್ಟ ಜಾತಿಗಳು ಈಗ ಅನುಭವಿಸುತ್ತಿರುವ ಪರಸ್ಪರ ದ್ವೇಷ ಅಸೂಯೆಗಳು ಹಿಂದುಳಿದ ವರ್ಗಗಳಲ್ಲೂ ಉಲ್ಬಣಿಸುತ್ತವೆ. ಈ ಕಟು ವಾಸ್ತವವು ಜಾತಿ ಮಾತ್ರವಲ್ಲ, ಉಪಪಂಗಡಗಳ ಜನಸಂಖ್ಯಾ ಪ್ರಮಾಣವೂ ಬೇಕೆಂದು ಕೇಳುತ್ತಿದೆ.

ಭಾರತದ ಮನೋಭೂಪಟದಲ್ಲಿ ಜಾತಿ ಎಂದಾಕ್ಷಣ ಶ್ರೇಣೀಕೃತ ವ್ಯವಸ್ಥೆಯೇ ನಿಲ್ಲುವುದು. ಅದಕ್ಕಾಗಿ ಜಾತಿ ಎಂಬ ಪದ ಬಳಸುವುದನ್ನೇ ಬಿಟ್ಟು ನಾವು ನೋಡಬಹುದೇ? ಉದಾಹರಣೆಗೆ 'ಕೀಳು ಜಾತಿ' ಎಂಬುದಕ್ಕೆ ಪರ್ಯಾಯವಾಗಿ 'ತಳಸಮುದಾಯ' ಎಂಬ ಪರಿಕಲ್ಪನೆ ಇತ್ತೀಚೆಗಷ್ಟೇ ಚಾಲ್ತಿ ಮಾಡಿ ಈಗ ರೂಢಿಯೇ ಆಗಿಬಿಟ್ಟಿದೆ. ಈಗ 'ಜಾತಿ'ಗೆ ಬದಲಾಗಿ ಮೇಲು-ಕೀಳು ಸೋಂಕಿಲ್ಲದ 'ಗುಂಪು' ಪದ ಬಳಸಿ-ಬ್ರಾಹ್ಮಣ ಗುಂಪು, ಲಿಂಗಾಯತ ಗುಂಪು, ನಾಯಕ ಗುಂಪು, ದಲಿತರಲ್ಲೂ ಉಪಪಂಗಡಗಳ ಹೆಸರಿನೊಡನೆ 'ಗುಂಪು' ಸೇರಿಸಿ ಬಳಸಿದರೆ, ಹೀಗೆ ಶ್ರೇಣಿಯ ಸೋಂಕಿಲ್ಲದೆ ನೋಡುವುದರಿಂದಾಗಿ- ಒಂದೊಂದು ಗುಂಪು ಅಂದರೆ ಅದೊಂದು ಅನುಭವ ಸಮುದಾಯ, ಆ ಗುಂಪುಗಳ ಅನುಭವವೂ ಸಂಪತ್ತು, ಆ ಅನುಭವದಿಂದ ಪ್ರತಿ ಗುಂಪಿಗೂ ಅದರದ್ದೇ ಆದ ಬುದ್ಧಿಮತ್ತೆ, ಜಾಣ್ಮೆ, ಪ್ರತಿಭೆ ಇರುತ್ತದೆ, ಇದು ಅರಳಲು ಅವಕಾಶ ಕಲ್ಪಿಸಿಕೊಡುವುದರಲ್ಲೇ ಭಾರತದ ಬೆಳವಣಿಗೆ ಇದೆ, ಈ ಎಲ್ಲಾ ಗುಂಪುಗಳ ಪ್ರತಿಭಾವಂತರು ಎಲ್ಲಾ ಕ್ಷೇತ್ರಗಳಲ್ಲೂ ಪಾಲ್ಗೊಳ್ಳಬೇಕು, ಇದೇ ಭಾರತದ ನಿಜವಾದ ಸರ್ವತೋಮುಖ ಅಭಿವೃದ್ಧಿ ಎಂಬ ಈ ಅಭಿವೃದ್ಧಿಯ ಪರಿಕಲ್ಪನೆ ಬಂದರೆ ಕಸ ರಸವಾಗುತ್ತದೆ; ಮನುಷ್ಯ ಸಂಪತ್ತಾಗುತ್ತಾನೆ.

## ‘ಅಸ್ಪೃಶ್ಯತೆ’ ಅಂದರೆ ವರ್ಣಭೇದದ ಮುತ್ತಾತ

ಮೊದಲಿಗೆ, ದಕ್ಷಿಣ ಆಫ್ರಿಕಾ ಸರ್ಕಾರದ ಪ್ರತ್ಯೇಕತಾ ಅಪಾರ್ಥೈಡ್ (ವರ್ಣಭೇದ) ಕಾನೂನುಗಳು ಕೊನೆಗೊಳ್ಳುವಂತಾಗಲು ಸತತವಾಗಿ ಪ್ರಯತ್ನಿಸಿದ ವಿಶ್ವಸಂಸ್ಥೆಯನ್ನೂ ಈ ಪ್ರಯತ್ನದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಭಾರತವನ್ನೂ ಕೃತಜ್ಞತೆಯಿಂದ ನೆನೆಯುವೆ. ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ಕಾನೂನುಗಳು ಕೊನೆಯಾದುದರಿಂದ ಪ್ರತ್ಯೇಕತೆ ತಾರತಮ್ಯಗಳನ್ನು ಕಾನೂನುಗೊಳಿಸಿ, ಕುಬ್ಜರಾಗಿದ್ದ ಅಲ್ಲಿನ ಬಿಳಿಯರ ಘನತೆ ಹೆಚ್ಚಿದಂತಾಯ್ತು ಹಾಗೂ ಸಮಾನತೆಯ ಕಡೆಗೆ ಒಂದು ಹೆಜ್ಜೆ ಇಟ್ಟಂತಾಯ್ತು.

ಈಗ ಜನಾಂಗೀಯವಾದ, ಜನಾಂಗೀಯ ಭೇದಕ್ಕೆ ಸಂಬಂಧಿಸಿದ ವಿಶ್ವಸಂಸ್ಥೆಯ ಮೂರನೆಯ ವಿಶ್ವ ಸಮ್ಮೇಳನವು ಆಫ್ರಿಕಾದ ಡರ್ಬಾನ್‌ನಲ್ಲಿ ನಡೆಯಲಿದೆ. ‘ಇರುವುದೊಂದೇ ಜನಾಂಗ–ಮಾನವ ಜನಾಂಗ’ ಎಂಬುದು ಸಮ್ಮೇಳನದ ಗ್ರಹಿಕೆಯಾಗಿದೆ. ಈ ಮೂರನೆಯ ಸಮ್ಮೇಳನವು ‘ಜನಾಂಗ’ ಎಂಬ ಪದವನ್ನು ಜನಪ್ರಿಯ ಮಾನವಶಾಸ್ತ್ರಜ್ಞರ ಶಾರೀರಿಕ ಲಕ್ಷಣದ ಸಂಕುಚಿತಾರ್ಥದಲ್ಲಿ ಬಳಸದೆ ವಿಶಾಲವಾದ ಅರ್ಥದಲ್ಲಿ ಗ್ರಹಿಸಿದೆ. ಮಾನವ ಜನಾಂಗದೊಳಗಿನ ಸಾಂಸ್ಥಿಕ ತಾರತಮ್ಯ ನಿವಾರಣೆಯ ಕಡೆಗೆ ಹೆಚ್ಚು ಗಮನ ಕೊಡಲಾಗಿದೆ. ಜೊತೆಗೆ ಈ ಸಮ್ಮೇಳನದ ಚರ್ಚೆಯ ವ್ಯಾಪ್ತಿಯಲ್ಲಿ Descent (ಹುಟ್ಟಿನಿಂದಲೇ ತಾರತಮ್ಯ) ಸೇರ್ಪಡೆಯಾಗಿದೆ.

ಭಾರತದಲ್ಲಿ ಚಾತುರ್ವರ್ಣ ವ್ಯವಸ್ಥೆ ಇದ್ದಾಗಲೂ ಆ ವ್ಯವಸ್ಥೆಯಿಂದ ಆಚೆ ನೂಕಲ್ಪಟ್ಟು ವರ್ಣಬಾಹ್ಯರಾದವರು, ಜಾತಿ ಪದ್ಧತಿಯಿಂದಲೂ

ಆಚೆ ನೂಕಲ್ಪಟ್ಟು ಜಾತಿಹೀನ Outcaste ಆದವರು, ಬಹಿಷ್ಕೃತರು ಅಸ್ಪೃಶ್ಯರು. ಆದ್ದರಿಂದ ಹುಟ್ಟು ಕಾರಣವಾಗಿ ಸಾಮಾಜಿಕ ವ್ಯವಸ್ಥೆಯಿಂದಲೇ ಹೊರಹಾಕಲ್ಪಟ್ಟು 'ಹೀನವೃತ್ತಿ'ಯ ಕಾರಣದಿಂದಲೂ ಪ್ರತ್ಯೇಕತೆ ಭೇದ ನಿರ್ಬಂಧಗಳಿಗೆ ಒಳಗಾಗಿರುವ ಭಾರತದ ಅಸ್ಪೃಶ್ಯ ಸಮುದಾಯದ ಸಮಸ್ಯೆಯೂ ವಿಶ್ವಸಂಸ್ಥೆಯ ಸಮ್ಮೇಳನದಲ್ಲಿ ಚರ್ಚಿತವಾಗಬೇಕಾಗುತ್ತದೆ. ಆದರೆ ಇದಕ್ಕೆ ಭಾರತ ಸರ್ಕಾರ ಒಪ್ಪುತ್ತಿಲ್ಲ. ಆಫ್ರಿಕಾದ ವರ್ಣಬೇದವನ್ನು ವಿಶ್ವಸಂಸ್ಥೆಯಲ್ಲಿ ಚರ್ಚಿಸಲು ಒಪ್ಪುವ ಭಾರತ ಸರ್ಕಾರ ಅದೇ ತನ್ನೊಳಗಿನ ಅಸ್ಪೃಶ್ಯತೆಯನ್ನು ಚರ್ಚಿಸಲು ಒಪ್ಪುತ್ತಿಲ್ಲ. ದಕ್ಷಿಣ ಆಫ್ರಿಕಾದಲ್ಲಿ ಬಣ್ಣ ಮತ್ತು ವಸಾಹತುಶಾಹಿ ಕಾರಣಕ್ಕಾಗಿ ಉಂಟಾದ ತಾರತಮ್ಯವಾದ ವರ್ಣಭೇದವನ್ನೂ ಹಾಗೂ ಭಾರತದಲ್ಲಿ ಜಾತಿ ಪದ್ಧತಿ ಕಾರಣಕ್ಕಾಗಿ ಉಂಟಾದ ತಾರತಮ್ಯವಾದ ಅಸ್ಪೃಶ್ಯತೆಯನ್ನೂ ಹೋಲಿಸಿ ನೋಡಿಯಾದರೂ ಸರ್ಕಾರ ಕಣ್ಣುತೆರೆಯಲಿ.

1948ರಿಂದ 1990ರವರೆಗೆ ದಕ್ಷಿಣ ಆಫ್ರಿಕದ ಬಿಳಿಯರ ಸರ್ಕಾರವು ಅಲ್ಲಿನ ಕರಿಯರನ್ನು ನಿಷೇಧ, ಭೇದ, ನಿರ್ಬಂಧ, ಪ್ರತ್ಯೇಕತೆಗೆ ಒಳಪಡಿಸಲು ರಚಿಸಿದ ಕೆಲವು ಕಾನೂನು ಕಟ್ಟಳೆಗಳು ಹೀಗಿವೆ: 1. ಕರಿಯರ ವಾಸಸ್ಥಾನ, ಶಾಲೆಗಳಿಗೆ ಪ್ರತ್ಯೇಕ ಸ್ಥಳ ನಿಗದಿ ಕಾನೂನು. 2. ಬಿಳಿ ಕರಿಯರ ನಡುವೆ ಮದುವೆ ಸಂಬಂಧ ನಿಷೇಧ ಕಾನೂನು. 3. ಹೊಟೇಲ್ ಕ್ಲಬ್ ಇತ್ಯಾದಿ ಸಾರ್ವಜನಿಕ ಸ್ಥಳಗಳಿಗೆ ಕರಿಯರ ಪ್ರವೇಶ ನಿಷೇಧ ಕಾನೂನು. 4. ಕರಿಯ ವ್ಯಕ್ತಿ ಪಾಸ್ ಹೊಂದಿರಬೇಕೆಂಬ ನಿಯಮ. 5. ಭಾರತದ ಅಸ್ಪೃಶ್ಯರ ಒಳಪಂಗಡಗಳ ವಿಂಗಡಣೆಯಂತೆಯೇ ಕರಿಯರನ್ನು ಮೂರು ಗುಂಪಾಗಿ ಪ್ರತ್ಯೇಕಿಸುವ ಕಾನೂನು 6. ಸಾರ್ವಜನಿಕ ರಾಜಕೀಯ ಹಕ್ಕು ನಿರಾಕರಣೆ... ಇತ್ಯಾದಿ.

ಭಾರತದ ಚರಿತ್ರೆಯಲ್ಲಿ ಹೆಚ್ಚೂ ಕಮ್ಮಿ ಇಂಥವೇ ಕಾನೂನು ಕಟ್ಟಳೆಗಳು ಇರಲಿಲ್ಲವೇ? ವರ್ಣಭೇದ ಕಾನೂನಿನಲ್ಲಿ ಕರಿಯರಿಗೆ ಪ್ರತ್ಯೇಕ ಶಾಲೆ ಶಿಕ್ಷಣವಾದರೂ ಇತ್ತು. ಭಾರತದಲ್ಲಿ ಅಸ್ಪೃಶ್ಯರು ಶೂದ್ರರು ಶಿಕ್ಷಣ ಪಡೆಯುವುದೂ ಶಿಕ್ಷಾರ್ಹ ಅಪರಾಧವಾಗಿತ್ತು. ಆಗ ಆಡಳಿತ ನಿರ್ವಹಣೆ ಎಂದರೆ ಚಾತುರ್ವರ್ಣ ಜಾತಿಪದ್ಧತಿಯ ತಾರತಮ್ಯಗಳು ಚಾಚೂ ತಪ್ಪದೆ ನಡೆಯುವಂತೆ ನೋಡಿಕೊಳ್ಳುವುದೇ ಆಗಿತ್ತು. ಆದರೆ ದಕ್ಷಿಣ ಆಫ್ರಿಕಾದ ವರ್ಣಭೇದವು ಹಸಿಯಾದ ಗಾಯ, ಇತ್ತೀಚಿನದು. ಅಲ್ಲಿಂದ ತೊಟ್ಟಿಕ್ಕುತ್ತಿರುವ ರಕ್ತ ನಮಗೆ ಕಾಣಿಸುತ್ತಿದೆ. ವರ್ಣಭೇದದ ತಾರತಮ್ಯ ಕಾನೂನುಗಳನ್ನು ಪ್ರತಿಭಟಿಸಿದ್ದಕ್ಕೆ ಸಾವಿರಾರು ಜನ ಕರಿಯರ ಹತ್ಯೆಯಾಯ್ತು. ಹತ್ತಾರು ಸಾವಿರ ಜನರು ಜೈಲಲ್ಲಿ ಕೊಳೆಯುವಂತಾಯ್ತು. ಪ್ರತಿಭಟನೆ ತೀವ್ರಗೊಂಡಾಗ

ಒಟ್ಟಿಗೆ ಹತ್ತಾರು ಜನ ಕರಿಯರು ಸೇರುವುದೂ ಅಪರಾಧ ಎನ್ನುವ ಮಟ್ಟಕ್ಕೆ ಹೋಯ್ತು. ಕಾನೂನೇ ಅಪರಾಧಿಯಾದಾಗ ಏನೆಲ್ಲಾ ಅವಾಂತರ ಆಗಬಹುದೋ ಅವೆಲ್ಲಾ ಆಯ್ತು.

ಈ ಭೀಕರತೆಯನ್ನು ನೆನೆಸಿಕೊಂಡಾಗಲೆಲ್ಲಾ ನನಗೆ ಪುರಾತನ ಭಾರತದಲ್ಲಿ ಚಾತುರ್ವರ್ಣ ಜಾತಿಪದ್ಧತಿಯಿಂದ ಒಂದು ಜನಸಮುದಾಯವನ್ನು ಆಚೆಗೆ ನೂಕಿ, ಎಸೆದು, ಅಸ್ಪೃಶ್ಯತೆಗೆ ಒಪ್ಪಿಸಿ ಒಗ್ಗಿಸಲು ನಡೆದಿರಬಹುದಾದ ಬಲಾತ್ಕಾರ, ಕ್ರೌರ್ಯ ಹಿಂಸೆ ಹತ್ಯೆಗಳೇ ದಕ್ಷಿಣ ಆಫ್ರಿಕಾದಲ್ಲಿ ವರ್ತಮಾನದಲ್ಲಿ ವರ್ಣಭೇದದ ರೂಪದಲ್ಲಿ ಪುನರಾವರ್ತನೆ ಆದಂತೆ ಕಾಣುತ್ತದೆ.

ಆನೆ ಹಿಡಿಯುವ ಖೆಡ್ಡಾ ನಿಮಗೆ ತಿಳಿದಿರಬಹುದು. ಕಾಡಲ್ಲಿ ದೊಡ್ಡ ಹಳ್ಳ ಮಾಡಿ, ಕಡ್ಡಿ ಸೊಪ್ಪುಸದೆಯಲ್ಲಿ ಹಳ್ಳದ ಮೇಲ್ಭಾಗವನ್ನು ಛಾವಣಿಯಂತೆ ಮಾಡಿ ಹಳ್ಳ ಕಾಣದಂತೆ ಮಾಡುತ್ತಾರೆ. ನಂತರ ಗದ್ದಲ ಮಾಡಿ ಆ ಹಳ್ಳದತ್ತ ಆನೆ ಓಡಾಡುವಂತೆ ಮಾಡುತ್ತಾರೆ. ಹಳ್ಳದತ್ತ ಹೋದ ಆನೆ, ಹಳ್ಳ ಎಂದು ಅರಿಯದೆ ಹಳ್ಳಕ್ಕೆ ಬೀಳುತ್ತದೆ. ಬಿದ್ದ ಆನೆಗೆ ಸರಪಳಿ ಕಟ್ಟಿ ಬಂಧಿಸುತ್ತಾರೆ. ಬಂಧಿಸಿದ ಆನೆಯನ್ನು ಮೇಲೆತ್ತಿ, ಹೊಡೆದು ಬಡಿದು ಹಿಂಸಿಸಿ ಪಳಗಿಸುತ್ತಾರೆ. ಪಳಗಿದ ಆನೆ ತನ್ನ ಸಹಜ ಸ್ವಭಾವ ಮರೆತು ಪಳಗಿಸಿದವನ ನಮ್ರ ಸೇವಕನಾಗುತ್ತದೆ. ಸೇವಕತನವೇ ಅದರ ಸ್ವಭಾವವಾಗುತ್ತದೆ. ದಕ್ಷಿಣ ಆಫ್ರಿಕಾದ ಕರಿಯರೆಂಬ ಆನೆಯನ್ನು ಹಳ್ಳಕ್ಕೆ ಬೀಳಿಸಲಾಯ್ತು. ಬಂಧಿಸಿಯೂ ಆಯ್ತು. ಹೊಡೆದು, ಬಡಿದು ಹಿಂಸಿಸಿ ಪಳಗಿಸಲು ಪ್ರಯತ್ನವನ್ನೂ ಮಾಡಲಾಯ್ತು. ಆದರೆ ದಕ್ಷಿಣ ಆಫ್ರಿಕಾದ ಕರಿಯರೆಂಬ ಆನೆ, ಪಳಗಲಿಲ್ಲ. ಪಳಗದಿದ್ದಕ್ಕೆ ಹೆಚ್ಚಿನ ಹಿಂಸೆ, ಕೊಲೆ ಸುಲಿಗೆ ದೌರ್ಜನ್ಯ ಎದುರಿಸಬೇಕಾಯ್ತು. ಆದರೆ ಭಾರತದ ಅಸ್ಪೃಶ್ಯರೆಂಬ ಆನೆ ಪಳಗಿಬಿಟ್ಟಿದೆ. ಇದು ಪುರಾತನ ಕಾಲದಲ್ಲೇ ಪಳಗಿಸಲ್ಪಟ್ಟ ಕಾರಣ, ಆ ಕ್ರೌರ್ಯ ನಮಗೆ ಕಾಣುತ್ತಿಲ್ಲ. ಜೊತೆಗೆ ಪಳಗಿಸಿದವನಿಗೂ ಈಗ ತಾನು ಪಳಗಿಸಿದವನು ಎಂಬ ನೆನಪಿಲ್ಲ. ಪಳಗಿಸಲ್ಪಟ್ಟವನಿಗೂ ತಾನು ಪಳಗಿಸಲ್ಪಟ್ಟವನು ಎಂಬ ನೆನಪಿಲ್ಲ. ತಾರತಮ್ಯವು ಸಮಾಜದಲ್ಲಿ ಆಂತರಿಕವಾಗಿ ವ್ಯಾಪಿಸಿ ಸ್ವಭಾವವಾಗಿ ಸಹಜ ಪದ್ಧತಿಯಾಗಿಬಿಟ್ಟಿದೆ.

ಯಾವುದು ಹೆಚ್ಚು ದಾರುಣವಾದುದು? ಇದನ್ನು ಹೇಗೆ ವಿವರಿಸೋಣ? ಪ್ರಾಥಮಿಕ ಹಂತದ ಅಸ್ಪೃಶ್ಯತೆಯನ್ನು ವರ್ಣಭೇದ ಎಂದೋ ಅಥವಾ ವರ್ಣಭೇದದ ಮುತ್ತಾತ ಅಸ್ಪೃಶ್ಯತೆ ಎಂದೊ? ಒಟ್ಟಿನಲ್ಲಿ ವರ್ಣಭೇದದಂಥಹ ಪ್ರತ್ಯೇಕತೆ, ನಿರ್ಬಂಧ, ನಿಷಿದ್ಧ ಭೇದಗಳು ಸಾವಿರಾರು ವರ್ಷ ಬದುಕುಳಿದು

ಧರ್ಮ, ಶಾಸ್ತ್ರ, ದೇವರುಗಳನ್ನೂ ಬಳಸಿಕೊಂಡು ಆಚರಣೆಯಾಗಿಬಿಟ್ಟರೆ ಅದೇ ಅಸ್ಪೃಶ್ಯತೆಯಾಗಿಬಿಡಬಹುದೇನೋ.

ಈ ಎರಡರ ನಡುವೆ ಭಿನ್ನತೆಯನ್ನು ಹೇಳಲೇಬೇಕೆಂದರೆ ಒಂದು ಭಿನ್ನತೆ ಎದ್ದು ಕಾಣುತ್ತದೆ. ವರ್ಣಭೇದದಲ್ಲಿ ಬಿಳಿಯ ಮತ್ತು ಕರಿಯರ ನಡುವಿನ ದೈಹಿಕ ಬಣ್ಣದಿಂದಾಗಿ ನೋಡಿದಾಕ್ಷಣ ಬಲಿಪಶುವನ್ನು ಗುರುತಿಸಬಹುದಿತ್ತು. ಆದರೆ ಅಸ್ಪೃಶ್ಯತೆಯಲ್ಲಿ ಎಲ್ಲರೂ ದೈಹಿಕವಾಗಿ ಒಂದೇ ರೀತಿ ಇದ್ದುದರಿಂದ ಬಲಿಪಶುವನ್ನು ಗುರುತಿಸಲು ಕಷ್ಟಪಡಬೇಕಾಗುತ್ತಿತ್ತು. ಅದಕ್ಕಾಗಿ ಬಲಿಪಶು ಅಸ್ಪೃಶ್ಯರನ್ನು ಗುರುತಿಸಲು, ಭಾರತದಲ್ಲಿ ಹುಟ್ಟಿಕೊಂಡ ಕಟ್ಟುಪಾಡುಗಳು ತಾರತಮ್ಯದ ಎಲ್ಲೆಯನ್ನೇ ವಿಸ್ತರಿಸಿಬಿಟ್ಟಿದೆ! ಅಸ್ಪೃಶ್ಯನ ಹೆಸರು, ವೇಷ, ಭಾಷೆ, ನಡೆ, ಆಹಾರ, ಇವುಗಳಿಂದಲೇ ಬಲಿಪಶುವನ್ನು ಗುರುತಿಸುವ ಲಕ್ಷಣಶಾಸ್ತ್ರ ಭಾರತದಲ್ಲಿ ಹುಟ್ಟಿಬಿಟ್ಟಿತು. ಒಂದು ಉದಾಹರಣೆ ಕೊಡುವೆ– 1936ನೆಯ ನವೆಂಬರ್ 4ರ 'ಮುಂಬೈ ಸಮಾಚಾರ್' ಪತ್ರಿಕೆಯ ವರದಿ ಹೀಗಿದೆ: 'ಮಲಬಾರಿನ ಉಟ್ಟಂಪಾಲ ಎಂಬಲ್ಲಿ 17 ವರ್ಷ ವಯಸ್ಸಿನ ಶಿವರಾಮನ್ ಎಂಬ ಅಸ್ಪೃಶ್ಯ ಎಜವ ಜಾತಿಯವನು ಉಪ್ಪು ಕೊಳ್ಳಲು ಸವರ್ಣೀಯನೊಬ್ಬನ ಅಂಗಡಿಗೆ ಹೋಗಿ ಮಲಯಾಳಂ ಭಾಷೆಯಲ್ಲಿ 'ಉಪ್ಪು'ಬೇಕೆಂದು ಕೇಳಿದ. ಮಲಬಾರಿನ ಸಂಪ್ರದಾಯದಂತೆ ಸವರ್ಣೀಯ ಹಿಂದೂಗಳು ಮಾತ್ರ ಉಪ್ಪಿಗೆ 'ಉಪ್ಪು' ಎಂಬ ಪದ ಬಳಸಬಹುದು. ಅಸ್ಪೃಶ್ಯನಾಗಿ ಅವನು 'ಪುಲಿಚಾತನ್' ಎಂಬ ಪದ ಬಳಸಬೇಕಿತ್ತು. ಇದಕ್ಕೆ ಮೇಲ್ಜಾತಿಯ ಅಂಗಡಿಯವನು ಕೋಪಗೊಂಡು ಶಿವರಾಮನ್‌ನನ್ನು ಚೆನ್ನಾಗಿ ಥಳಿಸಿದನೆಂದೂ ಮತ್ತು ಅದರಿಂದ ಆತ ಮರಣ ಹೊಂದಿದನೆಂದೂ' ವರದಿಯಾಗಿದೆ. ಇಂಥವು ಸಾವಿರಾರು.

ಈಗ ಹಳೆಯದೆಲ್ಲಾ ಯಾಕೆ ಎಂಬ ಪ್ರಶ್ನೆ ಏಳುತ್ತದೆ. ದಕ್ಷಿಣ ಆಫ್ರಿಕಾವು 1990ರಲ್ಲಿ ವರ್ಣಭೇದ ಕಾನೂನು ಹಿಂತೆಗೆದುಕೊಂಡಾಕ್ಷಣ ತಾರತಮ್ಯವು ತನ್ನಷ್ಟಕ್ಕೆ ತಾನೇ ಇಲ್ಲವಾಯಿತು ಎಂದು ಹೇಳಲಾಗದು. ಆ ತಾರತಮ್ಯದ ಕಾನೂನುಗಳು ಉಂಟುಮಾಡಿದ ತಾರತಮ್ಯದ ಅವಾಂತರಗಳು ಸಮಾಜದಲ್ಲಿ ಮುಂದುವರಿಯುತ್ತಿರುತ್ತವೆ. ಜನರು ಸಾಮಾನ್ಯವಾಗಿ ಕಾನೂನಿಗಿಂತಲೂ ಸಂಪ್ರದಾಯ ರೂಢಿಗಳನ್ನೇ ಪರಿಣಾಮಕಾರಿಯಾಗಿ ಆಚರಿಸುತ್ತಾರೆ. ಭಾರತದಲ್ಲಿ ಈ ಪ್ರವೃತ್ತಿ ಭೀಕರವಾಗಿದೆ. ಉದಾಹರಣೆಗೆ ಭಾರತದ ಅಸ್ಪೃಶ್ಯರು ತಲೆಯ ಮೇಲೆ ಮಲಹೊರುವ ಪದ್ಧತಿಯ ನಿಷೇಧ ಕಾನೂನು ಇದ್ದರೂ ಇಂದಿಗೂ ಜನಜೀವನದಲ್ಲಿ ಆಚರಣೆಯಲ್ಲಿ ಇಲ್ಲವೇ? ಈ ಕಾರಣಕ್ಕೆ

ಅವರು ಪ್ರತ್ಯೇಕಗೊಂಡಿಲ್ಲವೇ? ಹೀಗಿದ್ದೂ ಯಾಕೆ ಸರ್ಕಾರ ವಿಶ್ವಸಂಸ್ಥೆಯಲ್ಲಿ ಅಸ್ಪೃಶ್ಯತೆಯ ಸಮಸ್ಯೆಯನ್ನು ಚರ್ಚಿಸಲು ಹಿಂದೇಟು ಹಾಕುತ್ತಿದೆ?

ಜೊತೆಗೆ ದಕ್ಷಿಣ ಆಫ್ರಿಕಾದಲ್ಲಿ ಕಷ್ಟನಷ್ಟ ಅನುಭವಿಸಿದ ಕರಿಯರಿಗೆ ದಾಖಲಾತಿಗಳು ಇರುವುದರಿಂದ ಅದಕ್ಕೆ ಅಲ್ಲಿ ಪರಿಹಾರ ಕೇಳುವ ಸಾಧ್ಯತೆ ಹುಟ್ಟಿಕೊಳ್ಳಬಹುದು. ಆದರೆ ಭಾರತದಲ್ಲಿ ಅಸ್ಪೃಶ್ಯರ ಆಸ್ತಿಪಾಸ್ತಿ ನಷ್ಟದ ದಾಖಲಾತಿಯ ಮಾತಿರಲಿ, ಅದರ ನೆನಪುಗಳೂ ಇಲ್ಲವಾದುದರಿಂದ ಪರಿಹಾರದ ಸಮಸ್ಯೆ ಇಲ್ಲಿ ಬರಲಾರದು. ಆದರೂ ಅಸ್ಪೃಶ್ಯತೆಯ ಸಮಸ್ಯೆಯನ್ನು ಬಗೆಹರಿಸಲು ಭಾರತಕ್ಕೇ ಹೆಚ್ಚು ಸವಾಲುಗಳಿವೆ ಎಂದು ಅನ್ನಿಸುತ್ತದೆ. ಯಾಕೆಂದರೆ ಅಂತಃಸಾಕ್ಷಿಯನ್ನು ಸಾಯಿಸಿ ತಾರತಮ್ಯವನ್ನು ಸುಪ್ತ ಮನಸ್ಸಿಗಿಳಿಸಲು ದೇವರು, ಧರ್ಮ, ಶಾಸ್ತ್ರಗಳನ್ನೂ ದುರುಪಯೋಗಪಡಿಸಿಕೊಂಡ ಪಾಪವು ಭಾರತದ ನೆಲದಲ್ಲಿ ನಡೆದಿದೆ. ಇಲ್ಲಿ ಧರ್ಮವೂ ಅಪರಾಧಿ. ರೋಮನ್ ಕಾನೂನು ಮನುಷ್ಯನನ್ನು ಗುಲಾಮನನ್ನಾಗಿಸಿದರೆ, ರೋಮನ್ ಧರ್ಮ ಅದನ್ನು ಒಪ್ಪುವುದಿಲ್ಲ. ಆದರೆ ಭಾರತದಲ್ಲಿ ಧರ್ಮಗಳೇ ಮುಂದಾಗಿ ನಿಂತು ತಾರತಮ್ಯದ ಕಾನೂನು ಮಾಡಿಸಿದ ಇತಿಹಾಸವಿದೆ. ಹಾಗಾಗಿ ಇಲ್ಲಿ 'ಮಾದಿಗ ಸತ್ತ, ಮೈಲಿಗೆ ಕಮ್ಮಿಯಾಯಿತು' ಎಂಬಂಥ ಗಾದೆಗಳು ಹುಟ್ಟಿವೆ. ಇಂಥ ಮನಃಸ್ಥಿತಿಯೇ ಭಾರತದಲ್ಲಿ ವರ್ಣ ವರ್ಣಗಳ ನಡುವೆ ಮದುವೆಯಾದಾಗಲೂ ಈ ಕೂಡುವಿಕೆ ಕೂಡ ಭಾರತವನ್ನು ಐಕ್ಯದ ಕಡೆಗೆ ನಡೆಯದಂತೆ ಮಾಡಿತು. ಬ್ರಾಹ್ಮಣ ಹೆಣ್ಣು ಶೂದ್ರ ಗಂಡಿಗೆ ಹುಟ್ಟಿದ ಸಂತಾನವನ್ನು ಅಸ್ಪೃಶ್ಯನನ್ನಾಗಿಸಿ ಸಮಾಜ ಆಚೆಗೆ ಎಸೆದುಬಿಟ್ಟಿತು. ಮತ್ತಷ್ಟು ಪ್ರತ್ಯೇಕತೆಯನ್ನು ಉಂಟುಮಾಡಿತು.

ಹೋಲಿಕೆಗೆ ನೋಡಿ–ಅಮೆರಿಕಾದಲ್ಲಿ ಕರಿಯರ ಶಿಕ್ಷಣಕ್ಕೆಂದು ಬಿಳಿಯರು ಉಯಿಲು ಬರೆದು ಹಣ ಮುಡಿಪಿಟ್ಟ ಉದಾಹರಣೆಗಳಿವೆ. 1931ರಲ್ಲಿ ಪ್ರಕಟವಾಗಿರುವ ನೀಗ್ರೋ ಇಯರ್‌ಬುಕ್‌ನಲ್ಲಿ ಈ ವಿವರಗಳಿವೆ. 15 ಲಕ್ಷ ಡಾಲರ್ ನೀಡುವ ಹಾರ್ಕ್ನೆಸ್, 1,60,000 ಡಾಲರ್ ನೀಡಿರುವ ಟ್ಯಾಟನ್ ಮುಂತಾಗಿ ನೀಗ್ರೋ ಶಿಕ್ಷಣಕ್ಕೆ ಉಯಿಲು ಬರೆದವರು ಸುಮಾರು ಜನ ಬಿಳಿಯರು ಸಿಗುತ್ತಾರೆ. ಇದಲ್ಲದೆ ಚರ್ಚ್ ಸ್ವಯಂ ತಾನೇ ಕರಿಯರ ಶಿಕ್ಷಣಕ್ಕೆ ಮುಂದಾಗುತ್ತದೆ. 1865 ರಿಂದ 1930ರತನಕ ಕರಿಯರ ಶಿಕ್ಷಣ ಅಭಿವೃದ್ಧಿಗಾಗಿ ಧಾರ್ಮಿಕ ಮತ್ತು ಮಾನವತಾವಾದಿ ಸಂಸ್ಥೆಗಳು ಖರ್ಚು ಮಾಡಿದ ಒಟ್ಟು ಹಣ 13.5 ಕೋಟಿ ಡಾಲರ್‌ಗಳೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ 8.5 ಕೋಟಿಯಷ್ಟು ಡಾಲರ್‌ಗಳು ಬಿಳಿಯರ ವಂತಿಗೆಯಿಂದ ಬಂದದ್ದಾಗಿದೆ.

ಭಾರತದಲ್ಲಿ ಇದನ್ನು ನೆನೆಸಿಕೊಳ್ಳಲೂ ಸಾಧ್ಯವಿಲ್ಲ. ಡಾ. ಅಂಬೇಡ್ಕರ್‌ರವರು 1932ರಲ್ಲಿ ಹರಿಜನ ಸೇವಕ ಸಂಘದ ಠಕ್ಕರ್‌ಬಾಪಾ ಅವರಿಗೆ ಬರೆದ ಪತ್ರದಲ್ಲಿ 'ಸವರ್ಣೀಯ ಹಿಂದೂಗಳು ಅಸ್ಪೃಶ್ಯರನ್ನು (ಕರಿಯರಂತೆ) ಸೇವಕರನ್ನಾಗಿಯಾದರೂ ಮಾಡಿಕೊಂಡು ಮನೆಯೊಳಕ್ಕೆ ಬಿಟ್ಟುಕೊಳ್ಳುವಂತಾಗಲು ಪ್ರೇರಣೆ ನೀಡಿರಿ' ಎಂದು ವಿನಂತಿಸುತ್ತಾರೆ. ಈ ವಿನಂತಿ ಯಾತನಾಮಯವಾಗಿ ಕಂಡರೂ ಭಾರತದ ಕಠೋರವಾದ ಸಾಮಾಜಿಕ ಪರಿಸ್ಥಿತಿಯಲ್ಲಿ ಇದೂ ಪ್ರಗತಿಯ ಕಡೆಗೆ ಇಟ್ಟ ಒಂದು ಹೆಜ್ಜೆಯಾಗುತ್ತದೆ. ಹಳ್ಳಿಗಾಡಿನಲ್ಲಿ ಸವರ್ಣೀಯರ ಮನೆಗೆ ಅಸ್ಪೃಶ್ಯರ ಪ್ರವೇಶ ಇಂದಿಗೂ ಕನಸಿನ ಮಾತು. ಭಾರತದ ಮುಕ್ಕಾಲು ಭಾಗವಾಗುವ ಹಳ್ಳಿಗಾಡಿನಲ್ಲಿ ಸಮಾಜದಿಂದ ಹೊರಕ್ಕೆ ಎಸೆಯಲ್ಪಟ್ಟ ಅಸ್ಪೃಶ್ಯರ ನಿರ್ಬಂಧ, ನಿಷೇಧ, ಪ್ರತ್ಯೇಕತಾ ಭೇದಗಳು ಇನ್ನೂ ಜೀವಂತವಾಗಿವೆ. ಅಸ್ಪೃಶ್ಯ ಜನಾಂಗವು ಸಮಾನತೆ ಮತ್ತು ಘನತೆಯ ಕಡೆ ಹೆಜ್ಜೆ ಇಟ್ಟಾಗಲೆಲ್ಲಾ ಅಸಹನೆ ಉಂಟಾಗಿ ಹಿಂಸೆ, ಕೊಲೆ, ಲೂಟಿ ಸ್ಫೋಟಿಸುತ್ತದೆ. ಇಂಥ ವಿಷಮ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಭಾರತಮಾತೆ ತನ್ನ ಒಡಲಲ್ಲಿ ಅಸ್ಪೃಶ್ಯತೆಯನ್ನಿಟ್ಟುಕೊಂಡು ಮೈಲಿಗೆಯಾಗಿದ್ದಾಳೆ. ಎಷ್ಟು ಬೇಗ ಶುದ್ಧಿಯಾದರೆ ಅಷ್ಟು ಬೇಗ ಒಳ್ಳೆಯದು. ಇದಾಗಲು ಭಾರತ ಸರ್ಕಾರ ತನ್ನ ಜಾಣಕುರುಡು ಕೈಬಿಡಬೇಕಾಗಿದೆ. ವಿಶ್ವಸಂಸ್ಥೆಯಲ್ಲಿ ನಡೆಯುವ 'ಹುಟ್ಟಿನಿಂದಲೆ ತಾರತಮ್ಯ'(Descent) ಚರ್ಚೆಯಲ್ಲಿ, ಹುಟ್ಟಿನಿಂದಲೆ ತಾರತಮ್ಯವಾದ ಅಸ್ಪೃಶ್ಯತೆಯನ್ನು ಚರ್ಚೆಗಿಟ್ಟು ಭಾರತ ಸರ್ಕಾರ ಮುಖಾಮುಖಿಯಾಗಬೇಕಾಗಿದೆ.

ಕೊನೆಯದಾಗಿ, ಡಾ. ಅಂಬೇಡ್ಕರ್ ಮತ್ತು ಗಾಂಧೀಜಿ ಈ ಒಂದು ವಿಚಾರದಲ್ಲಿ ಒಂದೇ ಅಭಿಪ್ರಾಯವನ್ನು ಹೊಂದಿದ್ದರು. 'ಅಸ್ಪೃಶ್ಯತೆಯ ಸಮಸ್ಯೆ ಅಸ್ಪೃಶ್ಯರ ಸಮಸ್ಯೆ ಅಲ್ಲ' ಎಂದು ಇಬ್ಬರೂ ಭಾವಿಸಿದ್ದರು. ಅಂದರೆ, ಅಸ್ಪೃಶ್ಯರು ಜಾತಿ ಪದ್ಧತಿಗೆ ಬಲಿಪಶುಗಳು. ಹಾಗಾಗಿ ಸಮಸ್ಯೆ ಇರುವುದು ಅಸ್ಪೃಶ್ಯತೆಯನ್ನು ಆಚರಣೆ ಮಾಡುವವರಲ್ಲಿ. ಅಂದರೆ, ಯಾರು ಆಚರಣೆ ಮಾಡುತ್ತಾರೋ ಅದು ಅವರ ಸಮಸ್ಯೆ. ಆದರೆ ಇಂದು ಭಾರತದ ಅಂತಃಸಾಕ್ಷಿಯಾದ ಭಾರತದ ಪ್ರಜ್ಞಾವಂತರು, ಲೇಖಕರು, ಕಲಾವಿದರು, ಪತ್ರಕರ್ತರು, ನ್ಯಾಯವಂತರು 'ಅಸ್ಪೃಶ್ಯತೆ ದಲಿತರ ಸಮಸ್ಯೆ' ಎಂದುಕೊಂಡು ಸುಮ್ಮನಿದ್ದಾರೆ. ಇದು ನನ್ನ ಖಿನ್ನತೆಗೆ ಕಾರಣವಾಗಿದೆ.

## ಭಾರತ ಸಂವಿಧಾನಕ್ಕೆ 'ಭೂತ'ಚೇಷ್ಟೆ

ನಮ್ಮ ಸಂವಿಧಾನಕ್ಕೆ 60 ವರ್ಷಗಳ ಇತಿಹಾಸ. ಆದರೆ ಸಾವಿರಾರು ವರ್ಷಗಳ ಇತಿಹಾಸವಿರುವ ಇಂದೂ ಕೂಡ ಅಗೋಚರವಾಗಿ ಆಳ್ವಿಕೆ ನಡೆಸುತ್ತಿರುವ ಅಲಿಖಿತ ಸಂವಿಧಾನವೂ ಒಂದಿದೆ. ಇದು ಭಾರತದ ಮನೋಭೂಮಿಕೆಯಲ್ಲಿದೆ. ಇದು ಭೂತಕಾಲದ ಸಂವಿಧಾನ. ಇದು ಭಾರತದ ಸುಪ್ತಪ್ರಜ್ಞೆಯ ಆಳದಲ್ಲಿದೆ. ಈ ಎರಡರ ನಡುವೆ ಯುದ್ಧ ಜರುಗುತ್ತಿದೆ. ಭೂತಕಾಲದ ಸಂವಿಧಾನವೂ ಇಲ್ಲಿ ಬಲವಾಗಿದೆ. ಹಾಗಾಗಿ ನಮ್ಮ ವರ್ತಮಾನ ಸಂವಿಧಾನದ ಆಸೆಗಳು ತೆವಳುತ್ತಿವೆ.

ಈ ನನ್ನ ಮಾತುಗಳಲ್ಲಿ ಹೊಸತೇನೂ ಇಲ್ಲ. ನಿಮ್ಮ ನಡುವೆ ನಾನೇ ಸ್ಪಷ್ಟ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವೆ. ಈ ಚಿಂತೆ ಮತ್ತು ಚಿಂತನೆಗಳನ್ನು ಉದಾಹರಣೆಗಳ ಮೂಲಕ ಸ್ಪಷ್ಟ ಮಾಡಿಕೊಳ್ಳಲು ಪ್ರಯತ್ನಿಸುವೆ.

ಬಹಳ ಹಿಂದೆ, ಡಾ.ಯು.ಆರ್.ಅನಂತಮೂರ್ತಿಯವರನ್ನು ಭೇಟಿ ಮಾಡಲು ಹಿರಿಯರೊಬ್ಬರು ಬಂದಿದ್ದರು. ತುಂಬಾ ಶುಭ್ರವಾಗಿದ್ದರು. ಮೈತುಂಬಾ ಬಿಳಿ ಬಟ್ಟೆ. ಜುಟ್ಟು ನಾಮ ಇತ್ತು. ಅವರು ಮಾತಾಡಿ ಹೋದ ಮೇಲೆ ಅನಂತಮೂರ್ತಿಯವರು 'ಈಗ ಬಂದಿದ್ದವರು ವೇದ ಉಪನಿಷತ್ ಪುರಾಣ ಪಾರಂಗತರು' ಎಂದರು. ಜೊತೆಗೆ– 'ಇವರು ತಾವೇ ತಮ್ಮ ಅಡುಗೆ ಮಾಡಿಕೊಂಡು ಊಟ ಮಾಡುವುದು' ಎಂದೂ ಹೇಳಿದರು. ಇದು ಯಾಕೋ ನನ್ನ ಮನಸ್ಸಲ್ಲಿ ಉಳಿದುಬಿಟ್ಟಿತು. ತನ್ನ ಕೈಯಾರ ಮಾಡಿದ್ದನ್ನು ಮಾತ್ರ ಊಟ ಮಾಡುವ ಇವರಿಗೆ ವೇದ ಉಪನಿಷತ್‌ಗಳು ಹೇಳಿಕೊಟ್ಟಿದ್ದೇನು ಎಂಬ ಪ್ರಶ್ನೆ ನನ್ನೊಳಗೆ ಉಳಿದುಬಿಟ್ಟಿತು. ಈಗ ಅನ್ನಿಸುತ್ತಿದೆ– ಇವರ ಕಠೋರ ಮಡಿಯ

ಅಸ್ತಿತ್ವದಲ್ಲೆ ಅಸ್ಪೃಶ್ಯತೆಯ ಪ್ರಚಾರ ಕಾರ್ಯವೂ ಅಂತರ್ಗತವಾಗಿದೆ ಅಂತ. ಇವರನ್ನು ಅರ್ಥ ಮಾಡಿಕೊಳ್ಳೋಣ. ಅಂದರೆ ಇವರನ್ನು ಪಳೆಯುಳಿಕೆ ಎಂದು ಭಾವಿಸಿದರೆ ಸಮಸ್ಯೆ ಇಲ್ಲ. ಆದರೆ ಅವರ ಮಡಿಯನ್ನು ಪಾರಂಪರಿಕ ಮೌಲ್ಯ ಎಂದು ಗೌರವಿಸಿದರೆ ಅಪಾಯ ಆರಂಭವಾಗುತ್ತದೆ.

ಇನ್ನೊಂದು ಭೀಕರ ಉದಾಹರಣೆ ಕೊಡುತ್ತೇನೆ. ಪುರಿ ಜಗದ್ಗುರು ಅಸ್ಪೃಶ್ಯತೆಯನ್ನು ಎತ್ತಿ ಹಿಡಿದಾಗ ಭಾರತ ತಲ್ಲಣಿಸಲಿಲ್ಲ. ಭೀಕರ ಉದಾಹರಣೆ ಎಂದು ನನ್ನ ಸಮಾಧಾನಕ್ಕಾಗಿ ಹೇಳಿಕೊಂಡೆ ಅಷ್ಟೆ. ಆದರೆ ಅದು ಭೀಕರವಾಗಿ ಸಮಾಜಕ್ಕೆ ತಟ್ಟಲೇ ಇಲ್ಲ. ಪುರಿ ಜಗದ್ಗುರು ಅಸಹ್ಯವಾಗಿ ನಮಗೆ ಕಾಣಲೇ ಇಲ್ಲ. ಯಾಕೆಂದರೆ ನಮ್ಮ ವರ್ತಮಾನದ ಪ್ರಜ್ಞೆಯ ಸಂವಿಧಾನವು ಸಮಾನತೆಯನ್ನು ಮೌಲ್ಯ ಮಾಡಿದರೆ, ಭೂತಕಾಲದ ಸುಪ್ತಪ್ರಜ್ಞೆಯ ಸಂವಿಧಾನಕ್ಕೆ ಶ್ರೇಣೀಕೃತ ಸಮಾಜದ ಅಸ್ಪೃಶ್ಯತೆ, ಜಾತಿತಾರತಮ್ಯಗಳೇ ಮೌಲ್ಯವಾಗಿದೆ. ಭೂತದ ಕಪ್ಪುಹಣ ಇಂದೂ ಚಲಾವಣೆಯಲ್ಲಿದೆ. ಹೀಗಿರುವಾಗ ಸಮಾಜ ಯಾಕಾಗಿ ತಲ್ಲಣಿಸಬೇಕು? ಹೀಗಿದ್ದಾಗ ವರ್ತಮಾನದ ಸಂವಿಧಾನದ ಆಸೆಗಳು ತೆವಳದೆ ಮತ್ತೇನು ಮಾಡಲು ಸಾಧ್ಯ?

ಹಾಗೆ ಇಂದು ಚರ್ಚಿತವಾಗುತ್ತಿರುವ ಮತಾಂತರ ನಿಷೇಧದ ಪ್ರಸ್ತಾಪಕ್ಕೆ ಬಂದರೂ ಇಲ್ಲೂ ಕಾಣುವುದು ಇದನ್ನೇ. ಹಾಲಿ ಬಿಜೆಪಿ ಕರ್ನಾಟಕ ಸರ್ಕಾರ ಹಾಗೂ ಪೇಜಾವರ ಮಠಾಧೀಶರಾದಿಗಳು ಈ ಮತಾಂತರ ನಿಷೇಧಕ್ಕಾಗಿ ಹಾತೊರೆಯುತ್ತಿದೆ. ಶೂದ್ರನೊಬ್ಬ ನಿಮ್ಮ ಬ್ರಾಹ್ಮಣ ಜಾತಿಗೆ ಸೇರುತ್ತೇನೆಂದರೆ ಆಕಾಶ ನೋಡುವ ಮಠಾಧಿಪತಿಗಳು ಹಾಗೆ ಬ್ರಾಹ್ಮಣ ಜಾತಿಗೆ ನನ್ನನ್ನು ವರ್ಗಾವಣೆ ಮಾಡಿ ಎಂದು ಶೂದ್ರ ಕೇಳಿದರೆ ಇದು ತನ್ನ ವ್ಯಾಪ್ತಿಗೆ ಬರುವುದಿಲ್ಲವೆನ್ನುವ ಸರ್ಕಾರ, ಮತಾಂತರ ನಿಷೇಧಕ್ಕೆ ಚಿಂತಿಸುತ್ತಿರುವ ಕ್ರೌರ್ಯವು ಗಾಬರಿ ಹುಟ್ಟಿಸುತ್ತದೆ.

ಮತಾಂತರದ ಚಲನೆಯು ಭಾರತದಲ್ಲಿ ಇದ್ದುದರಿಂದಲೇ ಇಲ್ಲಿ ಅನೇಕಾನೇಕ ಧರ್ಮಗಳಿರುವುದು. ಈಗ ಹಾಲಿ ಭಾರತದಲ್ಲಿ ಮತಾಂತರಕ್ಕೆ ಅವಕಾಶವಿರುವ ಜೈನ, ಬೌದ್ಧ, ಸಿಖ್ ಹಾಗೂ ಕೆಲವು ಲಿಂಗಾಯತ ಪರಂಪರೆಯ ಧರ್ಮಗಳಿವೆ. ಲಿಂಗಾಯತವು ತನ್ನ ಜಾತಿ ಬಿಟ್ಟರೆ, ಭಾರತದ ದುಡಿಯುವ ವರ್ಗದ ಅಂದರೆ ತಳಸಮುದಾಯಗಳ ಧರ್ಮವಾಗಬಹುದಾದ ಸತ್ವವು ಅದರೊಳಗೆ ಇನ್ನೂ ಕುಟುಕು ಜೀವದಂತೆ ಹುದುಗಿದೆ. ಇವುಗಳಲ್ಲಿ ನಿಧಾನವಾಗಿಯಾದರೂ ಮತಾಂತರ ಜರುಗುತ್ತಲೇ ಇದೆ. ನಮ್ಮ ಕಣ್ಣೆದುರೇ ಉಪನಿಷದ್ ದ್ರವ್ಯದಿಂದ ಧರ್ಮವಾಗಿ ಹುಟ್ಟು ಪಡೆಯಬಹುದಾಗಿದ್ದ

‘ಪರಮಹಂಸಧರ್ಮ’ವೊಂದು ಗತಿಸಿ ಬಿಟ್ಟಿತು. ಆ ಎಳೆಧರ್ಮದ ಕುತ್ತಿಗೆಗೆ ಜನಿವಾರ ಬಿಗಿದುಬಿಟ್ಟರು. ಇಂದು ರಾಮಕೃಷ್ಣಾಶ್ರಮಗಳು ಭೋಜನಶಾಲೆ ಮತ್ತು ವೇದಾಂತ ಕಥಾಕಾಲಕ್ಷೇಪ ತಾಣಗಳಾಗಿಬಿಟ್ಟಿವೆ. ಇದು ಈ ಸ್ಥಿತಿಯಿಂದ ಜಿಗಿದು ಎದ್ದರೆ ಇಂದೂ ಧರ್ಮವಾಗಬಹುದು. ಇಂದು ಸಂಘ ಪರಿವಾರವು ಹೇಳುತ್ತಿರುವ ಹಿಂದೂ ಧರ್ಮವು ಇಸ್ಲಾಂಗೆ ಪ್ರತಿಸ್ಪರ್ಧಿಯಾಗಿದ್ದು ಕೇವಲ ಇಸ್ಲಾಮಿನ ಮೂಲಭೂತವಾದೀ ಗುಣ ಲಕ್ಷಣಗಳನ್ನು ಮಾತ್ರ ತಾನು ಪಡೆದುಕೊಂಡು ಒಂದು ರೀತಿಯಲ್ಲಿ ನಮ್ಮ ಕಣ್ಣ ಮುಂದೆ ಈಗ ಜರುಗುತ್ತಿರುವುದು ‘ಹಿಂದ್‌ಇಸ್ಲಾಮೀ’ ನವಧರ್ಮವೊಂದರ ಉದಯದಂತೆಯೂ ಕಾಣುತ್ತದೆ.

ಇಂದು ನಮ್ಮ ನಡುವೆ, ಸ್ಥಗಿತಗೊಂಡ ಸಾಮಾಜಿಕ ಪದ್ಧತಿಯೇ ಹಿಂದೂ ಎಂಬ ಧರ್ಮವಾಗಿ ಈ ಪದ್ಧತಿಯು ಎಲ್ಲಾ ಧರ್ಮಗಳಿಗಿಂತಲೂ ಪ್ರಬಲವಾಗಿದೆ. ಶ್ರೇಣಿಯ ಸಮಾಜಕ್ಕಾಗಿ ಇರುವ ಕಾನೂನು ಕಟ್ಟಳೆಗಳೇ ‘ಹಿಂದೂ ಧರ್ಮ’ ಎಂದಾಗಿದೆ, ಈ ಶ್ರೇಣಿಯ ಕಾನೂನು ಕಟ್ಟಳೆಗಳೇ ಇಲ್ಲಿ ಧರ್ಮವಾಗಿದೆ. ಇದು ಸಾವಿರಾರು ವರ್ಷಗಳಿಂದಲೂ ಧರ್ಮದ ವೇಷ ಹಾಕಿಕೊಂಡು ವಂಚಿಸಿ ವಂಚಿಸಿ ತನ್ನನ್ನು ಧರ್ಮವೆಂದೇ ಭಾವಿಸುವಂತೆ ಮಾಡಿಬಿಟ್ಟಿದೆ. ತನ್ನ ವಂಚನೆಗಳಿಗೆ ಭಾರತದ ಮಹೋನ್ನತ ಜ್ಞಾನಶಾಖೆಗಳಾದ ದರ್ಶನಗಳನ್ನೂ ಬೌದ್ಧ–ಜೈನ ಧರ್ಮಗಳನ್ನೂ ಮಾತಾಡುವ ವಸ್ತುವಾಗಿ ಬಳಸಿಕೊಂಡಿದೆ. ದೇವರನ್ನೂ ಅವತಾರ ಎತ್ತಿಸಿದೆ. ಇದೆಲ್ಲಾ ಯಾತಕ್ಕಾಗಿ ಅಂದರೆ– ಶ್ರೇಣೀಕೃತ ಜಾತಿ ವರ್ಣ ಕಟ್ಟುಪಾಡುಗಳನ್ನು ಸುಪ್ತಪ್ರಜ್ಞೆಯಲ್ಲಿ ಸ್ಥಾಪಿಸುವುದಕ್ಕಾಗಿ.

ಅದಕ್ಕಾಗೇ ಯಾವ ರಾಜ ಬಂದರೂ ರಾಜಧರ್ಮ ಅಂದರೆ ವರ್ಣವ್ಯವಸ್ಥೆಯನ್ನು ಕಾಪಾಡುವುದೇ ಆಗಿತ್ತು. ಹಿಂದೂ ಆಗಿರುವುದೆಂದರೆ– ಇದ್ದ ಕಡೆ ಇರುವ ಶ್ರೇಣಿಯಲ್ಲಿ ಬಿದ್ದಿರು–ಎಂದೇ ಅರ್ಥ. ಇಲ್ಲಿರಬೇಕೆ? ಇಲ್ಲಿ ಅಸಮಾನತೆ ಕಟ್ಟಳೆಗಳ ವ್ಯಾಘ್ರನು ಧರ್ಮದ ಗೋಮುಖ ವೇಷದಲ್ಲಿದ್ದಾನೆ. ಹಿಂದೂ ಗೋಮುಖ ವ್ಯಾಘ್ರನಲ್ಲಿ ವ್ಯಾಘ್ರನ ಸಾಯಿಸಿದರೆ–ಅಂದರೆ ಶ್ರೇಣೀಕೃತ ಜಾತಿ ಕಟ್ಟಳೆ, ಅಸ್ಪೃಶ್ಯತೆಗಳ ಸಾಯಿಸಿದರೆ–ಇದೂ ಒಂದು ಧರ್ಮವಾಗಬಹುದು. ಇದು ಸಾಧ್ಯವೆ?

ಆದರೆ ಇದು ಸಾಧ್ಯವೇ ಎಂದು ಶ್ರೀ ಪೇಜಾವರರನ್ನು ಪ್ರಾತಿನಿಧಿಕ ಮಾಡಿಕೊಂಡು ಕೇಳುತ್ತಿದ್ದೇನೆ. ಅವತಾರ ಎತ್ತಿಸಿಯಾದರೂ ಜಾತಿಯ ಶ್ರೇಣಿಯು ಇಲ್ಲದಂತೆ ಹಿಂದೂ ಸಮಾಜ ರೂಪಿಸಿ ಅದನ್ನು ಧರ್ಮ

ಮಾಡಲು ಸಾಧ್ಯವಿದೆಯೆ? ಇದಾಗದಿದ್ದರೆ, ಹಿಂದೂ ಸಮಾಜದ ದೇವಸ್ಥಾನ, ಮಠ, ಇತ್ಯಾದಿಗಳಲ್ಲಿ ಮಠಾಧೀಶ ಸ್ಥಾನ ಪೂಜೆ ಕಾರ್ಯ ಇತ್ಯಾದಿ ನಿರ್ವಹಣೆಗಳಲ್ಲಿ ಸಕಲೆಂಟು ಜಾತಿಗೂ ಪರ್ಯಾಯ ವ್ಯವಸ್ಥೆ ತರಲಾದರೂ ಸಾಧ್ಯವಿದೆಯೆ? ಉಡುಪಿಯಲ್ಲಿ ಅಷ್ಟಮಠಗಳ ಬದಲು ನವಮಠಗಳ ಪರ್ಯಾಯಕ್ಕಾಗಿ, ಡಿಮ್ಯಾಂಡ್ ಇಟ್ಟು ಕಾಯುತ್ತಿರುವವನಂತೆ ಇರುವ ಕನಕ ಇನ್ನೆಷ್ಟು ದಿನ ಕಾಯಬೇಕು? ಅಥವಾ ಅವನು ಹೊರಗಿರುವುದೇ ಧರ್ಮವೆ? ನೀವು ದಲಿತ ಕೇರಿಗೆ ಪಾದವಿಟ್ಟರೆ ಅದನ್ನೆ ಧನ್ಯ ಎಂದುಕೊಳ್ಳುವ ಆ ದಲಿತ ಕೇರಿಯ ಮಗುವೊಂದು ನಿಮ್ಮನ್ನು ಪ್ರೀತಿಸಿ 'ನಾನೂ ನಿಮ್ಮೊಡನೆ ಬರುತ್ತೇನೆ, ನನಗೂ ನೀವಾಗುವ ಆಸೆ' ಎಂದರೆ ನೀವೇನು ಮಾಡುತ್ತೀರಿ? ಇಲ್ಲಿ ನೀವು ಅಂದರೆ ನೀವೇ ಅಲ್ಲ. ನಿಮ್ಮಂತೆ ಇರುವ ಎಲ್ಲರಿಗೂ ಇದು ಎದುರಾಗುತ್ತಿಲ್ಲ ಯಾಕೆ? ನಿಮ್ಮದೂ ಪತನದ ಸ್ಥಿತಿಯಲ್ಲವೇ? ನಿಮ್ಮಂಥವರಿಗೆ ಇಂಥವುಗಳನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಯಾಕೆಂದರೆ ಇಂಥವರ ದೇಹದೊಳಗಿನ ಆತ್ಮಸಾಕ್ಷಿ ಅಥವಾ ಸಾಕ್ಷಿಪ್ರಜ್ಞೆಯು ನೇಣಿಗೆ ಹಾಕಲ್ಪಟ್ಟಿರುತ್ತದೆ.

ಏಕೆಂದರೆ ಭಾರತದ ಸಮಾಜದ ಸುಪ್ತ ಮನಸ್ಸು ಅಸ್ಪೃಶ್ಯತೆ, ಶ್ರೇಣೀಕೃತ ಜಾತಿ ಪದ್ಧತಿ, ತಾರತಮ್ಯಗಳ ಅಪಮೌಲ್ಯಗಳನ್ನೆ ಮೌಲ್ಯ ಮಾಡಿಬಿಟ್ಟಿದೆ. ಇದನ್ನು ಬಿತ್ತುವವರನ್ನು ಪೂಜ್ಯರು, ಶ್ರೀಶ್ರೀಶ್ರೀ, ಮಾತಾಡಿದರೆ ಆಶೀರ್ವಚನ, ಆಧ್ಯಾತ್ಮಿಕ ಚಿಂತಕರು, ಪರಮ ಪೂಜ್ಯರು ಇತ್ಯಾದಿ ಪಟ್ಟಕಟ್ಟಿದೆ. ಈ ಪ್ರಭಾವಕ್ಕೆ ಒಳಗಾದವರೇ ಭಾರತದ ಸಂವಿಧಾನದ ಆಶಯಗಳನ್ನು ನಿರ್ಧರಿಸುವ ನಿರ್ವಹಿಸುವ ನಿರ್ಣಾಯಕ ಸ್ಥಾನಗಳಲ್ಲಿ ಹೆಚ್ಚಾಗಿ ಇರುವಾಗ, ಕಳೆದ ವರ್ಷದ ರಾಜ್ಯ ಬಜೆಟ್‌ನಲ್ಲಿ ದಲಿತರಿಗೆ ಮೀಸಲಿಟ್ಟ 4 ಸಾವಿರ ಕೋಟಿಗಳಲ್ಲಿ ಅರ್ಧದಷ್ಟನ್ನು ಕಾಟಾಚಾರಕ್ಕೆ ಖರ್ಚುಮಾಡಿ ಉಳಿಕೆ ಅರ್ಧವನ್ನು ಲ್ಯಾಪ್ಸ್ ಮಾಡಿರುವ ಕ್ರಿಯೆ ಇಲ್ಲಿ ಸಹಜವಲ್ಲವೆ? ದಲಿತರ ಮೀಸಲಾತಿ ಉದ್ಯೋಗದಲ್ಲಿ ದಲಿತೇತರರು ನುಸುಳಿ ಪಡೆಯುತ್ತಿರುವುದು ಇಲ್ಲಿ ಸಹಜ ಕ್ರಿಯೆ ತಾನೆ? ನಮಗೆ ಅನ್ಯಾಯಗಳು, ಅನ್ಯಾಯಗಳಾಗಿ ಬಂದು ಮುಟ್ಟುತ್ತಿಲ್ಲ.

ಕನ್ನಡದಲ್ಲಿ ಒಂದು ಪದ ಇದೆ– 'ಪಾಪ' ಅಂತ. ಇದನ್ನು ಪಾಪ (Sin) ಕ್ಕೂ ಬಳಸುತ್ತಾರೆ, ಹಾಗೇ ಕರುಣೆ (pity)ಗೂ ಬಳಸುತ್ತಾರೆ. ಪಾಪಕ್ಕೆ ಬಳಸಿದರೆ ಪಾಪಿಷ್ಟ ಆಗುತ್ತಾನೆ. ಕರುಣೆಗೆ ಬಳಸಿದರೆ ಪಾಪದವನು ಆಗುತ್ತಾನೆ. ಪಾಪದವನು ಒಂದು ಪಟ್ಟು ಪತನಗೊಂಡವನಾಗಿದ್ದರೆ, ಪಾಪಿಷ್ಟನು ನೂರು ಪಟ್ಟು ಪತನಗೊಂಡವನಾಗಿರುತ್ತಾನೆ. ಅಸ್ಪೃಶ್ಯತೆಗೆ ಅಥವಾ ತಾರತಮ್ಯಕ್ಕೆ ಒಳಗಾದವರು ಪಾಪದವರು ಆಗುತ್ತಾರೆ. ಯಾಕೆಂದರೆ ಇವರ

ಮನೋಭೂಮಿಕೆಯಲ್ಲಿ ಅಸ್ಪೃಶ್ಯತೆ ತಾರತಮ್ಯ ಇರುವುದಿಲ್ಲ. ಆದರೆ ಯಾರು ಅಸ್ಪೃಶ್ಯತೆ, ತಾರತಮ್ಯ ಆಚರಿಸುತ್ತಾರೋ ಅವರ ಮನೋಭೂಮಿಕೆಯಲ್ಲಿ ಅಸ್ಪೃಶ್ಯತೆ ತಾರತಮ್ಯಗಳೇ ತುಂಬಿರುತ್ತವೆ. ಈ ನಿಜದ ಎದುರು ಅಸ್ಪೃಶ್ಯತೆ ತಾರತಮ್ಯ ಆಚರಿಸುವವರು ಪಾಪಿಷ್ಟರಾಗುತ್ತಾರೆ. 'ಗುಲಾಮನನ್ನು ಪಳಗಿಸಲು ಹೆಣಗುವ ಮಾಲೀಕನ ಮನಸ್ಸಿನ ತುಂಬಾ ಗುಲಾಮತನ ತುಂಬಿರುತ್ತದೆ' –ಎಂಬ ಹೆಗಲ್‌ನ ನುಡಿಯ ನಿಜದಂತೆ. ನಾವು ನಮ್ಮ ಸಮಾಜವನ್ನು ನೋಡುವ ನೋಟಕ್ಕೆ ಈ ನಿಜದ ದರ್ಶನವಾದರೆ ಇದು ಸಂವಿಧಾನದ ಆಶಯಗಳತ್ತ ನಾವಿಟ್ಟ ಮೊದಲ ಹೆಜ್ಜೆಯಾಗುತ್ತದೆ.

ಇದು ಕಡುಕಷ್ಟ. ಭಾರತೀಯ ಮನಸ್ಸಿನ ನಡೆ ಮತ್ತು ನುಡಿ ಸೀಳಿಹೋಗಿದೆ. ಅಸ್ಪೃಶ್ಯತೆ ಪಾಪ ಎಂದರೆ ಹೌದೆನ್ನುವ ಭಾರತೀಯ ಮನಸ್ಸು ಅದೇ ಅಸ್ಪೃಶ್ಯತೆ ಆಚರಿಸುವವರು ಪಾಪಿಷ್ಟರು ಎಂದರೆ ಬೆಚ್ಚಿ ಬೀಳುತ್ತದೆ. ವ್ಯವಹಾರಕ್ಕೆ ವೇದವನ್ನು ನಡೆದುಕೊಂಡು, ಆದರ್ಶಕ್ಕೆ ವೇದಾಂತ ಎಂದರೆ ಉಪನಿಷತ್ತನ್ನು ಮಾತಿನ ಕಾಲಕ್ಷೇಪ ಮಾಡಿದ್ದೇ ಕಾರಣವೂ ಇರಬಹುದು.

ಆದರೆ ಈ ಪಾಪದವರೂ ಎಚ್ಚರದ ಸ್ಥಿತಿಯಲ್ಲಿ ಇಲ್ಲ. ಮಧ್ಯಮ ಜಾತಿಗೆ ಸೇರಿದ ನನ್ನ ಗೆಳೆಯನೊಬ್ಬ– 'ಒಂದು ಚೋಟುದ್ದ ಬ್ರಾಹ್ಮಣ ಹುಡುಗ ಅವನು. ನಮ್ಮ ವಯಸ್ಸಾದ ಅಪ್ಪನಿಗೇನೆ 'ಏನಯ್ಯ ಗೌಡ, ಚೆನ್ನಾಗಿದ್ದೀಯಾ?' ಅಂತ ಏಕವಚನದಲ್ಲಿ ಕೇಳ್ತಾನಲ್ಲಯ್ಯ!' ಎಂದು ಕುಪಿತನಾಗಿ ಹೇಳಿದ. ನಾನು ಅವನಿಗೆ 'ಸರಿಯಪ್ಪ, ನೀನು ಚಿಕ್ಕವನಾಗಿದ್ದಾಗ ನಮ್ಮ ಜಾತಿಯ ವಯಸ್ಸಾದವರಿಗೆ ಯಾವ ವಚನದಲ್ಲಿ ಕರೆಯುತ್ತಿದ್ದೆ?' ಎಂದು ಕೇಳಿದೆ. ಇಂಥವರಲ್ಲಿ ಸ್ವಾಭಿಮಾನದ ಎಚ್ಚರ ಅಂದರೆ ತನ್ನದು ಮಾತ್ರ ಆಗಿರುತ್ತದೆ, ಇನ್ನೊಂದರ ಪರಿವೆ ಇರುವುದಿಲ್ಲ. ಹಾಗೇ ದಲಿತರ ಮನಸ್ಥಿತಿಗೆ ಬಂದರೂ ಸಣ್ಣಪುಟ್ಟದಾದರೂ ಇದನ್ನೇ ಕಾಣುತ್ತೇವೆ. ಭಾರತದ ಬಹುತೇಕ ಸಮುದಾಯಗಳು ಹೀಗೇ ಇವೆ.

ರಸಾಯನಶಾಸ್ತ್ರದಲ್ಲಿ ಬರುವ ಪರ್ಯಾಪ್ತ ದ್ರಾವಣ (Saturated solution) ದಂತೆ ಎಲ್ಲಾ ಜಾತಿಗಳು ತಂತಮ್ಮ ಕೊನೆ ಸ್ಥಿತಿ ತಲುಪಿ, ಅಸ್ಪೃಶ್ಯತೆ ತಾರತಮ್ಯಗಳು ನಡೆದುಬಂದ ಪದ್ಧತಿಗಳಾಗಿ ಎಚ್ಚರವಿಲ್ಲದೆ ತಮಗೆ ತಾವೇ ನಡೆದುಕೊಂಡು ಬರುತ್ತಿವೆ. ನಾವು ಅದರೊಳಗೇ ಸಂಪೂರ್ಣ ಮುಳುಗಿ ಹೋಗಿರುವುದರಿಂದ ಅದರ ಐಬನ್ನು ಅರಿವಿಗೆ ತಂದುಕೊಳ್ಳುವುದಕ್ಕೇ ಹರಸಾಹಸ ಪಡಬೇಕಿದೆ.

ಈಗ ಭಾರತದಲ್ಲಿ ವರ್ತಮಾನದ ಸಂವಿಧಾನವೇನೋ ಪಾಪದವರನ್ನು ಮೇಲೆತ್ತಲು ಕೈಚಾಚಿದೆ. ಆದರೆ ಭೂತಕಾಲದ ಸಂವಿಧಾನ ಕಾಲೆಳೆಯುತ್ತಿದೆ. ಈ ಪಾಪದವರೂ ಎಚ್ಚರದಲ್ಲಿಲ್ಲ. ಸಂವಿಧಾನದ ಆಶಯಗಳ ಕಾಲೆಳೆಯುವ ಪಾಪಿಷ್ಟರಾದರೋ ಸಮಾಜದಲ್ಲಿ ಗಣ್ಯರೆನ್ನಿಸಿಕೊಂಡಿದ್ದಾರೆ. ಇವರ ವಂಶಸ್ಥರೇ ಇವರ ಪ್ರಭಾವದಲ್ಲಿರುವವರೇ ನಿರ್ಧರಿಸುವವರು ನಿರ್ವಹಿಸುವವರು ಆಗಿದ್ದಾರೆ. ಸಂವಿಧಾನದ ಆಸೆಗಳು ಈಡೇರುವುದಾದರೂ ಹೇಗೆ?

ಬಸ್ಸು ರೈಲು ಕಾರಣಕ್ಕಾಗಿ ಅಕ್ಕಪಕ್ಕ ಕೂತಿದ್ದೇವೆ. ಹೋಟೇಲ್ ಕಾರಣಕ್ಕಾಗಿ ಸಹಪಂಕ್ತಿ ಭೋಜನ ಮಾಡಿದ್ದೇವೆ. ನೌಕರಿ ಕಾರಣಕ್ಕಾಗಿ ಒಟ್ಟಾಗಿ ಓಡಾಡಿದ್ದೇವೆ, ಅಲ್ಲಿ ಇಲ್ಲಿ ಮದುವೆಗಳೂ ಆಗಿವೆ. ಇಲ್ಲಿ ಆಗುತ್ತಿರುವ ಬದಲಾವಣೆಗಳು ಹೆಚ್ಚಾಗಿ ಬಹಿರಂಗ ಒತ್ತಡದವು. ಅಂತರಂಗ ಕತ್ತಲಲ್ಲೆ ಇದೆ.

ಏನೇನು ಮಾಡಬಹುದಿತ್ತು? ಮೊದಲ ಹೆಜ್ಜೆಯಾಗಿ, ವರ್ತಮಾನದ ಸಂವಿಧಾನದ ಆಶಯಗಳಿಗೆ ತಕ್ಕಂತೆ ಪ್ರಜೆಗಳನ್ನು ರೂಪಿಸಲು ಶಿಕ್ಷಣ ಕ್ಷೇತ್ರವನ್ನು ತೆಪ್ಪ ಮಾಡಿಕೊಳ್ಳಬಹುದಿತ್ತು. ಶಿಕ್ಷಣ ಪಡೆಯುವ ಎಳೆಯರು ಆ ವಿದ್ಯೆಯಲ್ಲೇ ನಾಗರಿಕರೂ ಆಗುವಂತೆ ಶಿಕ್ಷಣವನ್ನೂ ರೂಪಿಸಬಹುದಿತ್ತು. ಸಮಾಜದಲ್ಲಿ ಅಸ್ಪೃಶ್ಯತೆ ತಾರತಮ್ಯ ಆಚರಿಸುವವರ ಬಗ್ಗೆ ಆ ಪದ್ಧತಿಗಳ ಬಗ್ಗೆ ಇರುವ ಭಯ ಭಕ್ತಿಗಳಲ್ಲಿ– ಭಯ ಇರಲಿ, ಆದರೆ ಭಕ್ತಿಯನ್ನು ಇಲ್ಲದಂತೆ ಮಾಡಬೇಕಿತ್ತು. ಭಕ್ತಿಯು ಅಪಮೌಲ್ಯವನ್ನೇ ಮೌಲ್ಯವಾಗಿಸಿಬಿಡಲೂಬಹುದು. ಈ ಅಪಾಯದ ಅರಿವು ನಮಗಿರಬೇಕಿತ್ತು.

ಈ ಅರಿವು ನಮಗೆ ಇದ್ದಿದ್ದರೆ... ನಮ್ಮ ಶಿಕ್ಷಣದ ಪಠ್ಯ, ನಾವು ನೋಡುವ ದೃಷ್ಟಿಕೋನ ಎಲ್ಲವೂ ಹೊಸತಾಗಿಬಿಡುತ್ತಿತ್ತು. ಆಗ ಕೇವಲ ಮನುಷ್ಯ ಪ್ರಜ್ಞೆ ಕೆಲಸ ಮಾಡುತ್ತದೆ. ಆಗ ತಾರತಮ್ಯ ಮೌಲ್ಯವಾಗಿಸುವವರು ಪಳೆಯುಳಿಕೆಗಳಂತೆ ನಮ್ಮ ಸಮಾಜಶಾಸ್ತ್ರಜ್ಞರಿಗೆ ಕಾಣಬಹುದು. ಆಗ ಇಂಥವು ಸಾಮಾಜಿಕ ಸಾಂಸ್ಕೃತಿಕ ಅನಿಷ್ಟ ಪದ್ಧತಿಗಳು ಎಂದೋ ಅಥವಾ ಸಾಮಾಜಿಕ ಸಮಸ್ಯೆಗಳು ಎಂದೋ ಅಧ್ಯಯನದ ವಸ್ತುವಾಗುತ್ತಿತ್ತು. ರಾಜ್ಯಶಾಸ್ತ್ರದಲ್ಲಿ– ಸಂವಿಧಾನ ಅನುಷ್ಠಾನಕ್ಕೆ ಇರುವ ತೊಡಕುಗಳ ಪಟ್ಟಿಯಲ್ಲಿ ಇದೂ ಸೇರ್ಪಡೆಯಾಗುತ್ತಿತ್ತು. ಮನಃಶಾಸ್ತ್ರದ ಸಮ್ಮೋಹಿನಿ ತಜ್ಞರು ಈ ಸುಪ್ತಪ್ರಜ್ಞೆಯ ತಾರತಮ್ಯಗಳನ್ನು ತಮ್ಮ ಅಧ್ಯಯನ ವಿಷಯ ಎಂದು ಪರಿಗಣಿಸಿ ಭೂತೋಚ್ಚಾಟನೆಯ ವಿಧಿವಿಧಾನಗಳನ್ನು ಕಂಡುಹಿಡಿಯುವ ಪ್ರಯತ್ನಗಳೂ ಆಗುತ್ತಿದ್ದವು. ಶಿಕ್ಷಣತಜ್ಞರಿಂದ ಸಂವಿಧಾನದ ಆಶಯಗಳಿಗೆ ಪಠ್ಯ ರಚನೆಯಾಗುತ್ತಿತ್ತು– ಹೀಗೆ.

ಆದರೆ ಭಾರತದ ಶಿಕ್ಷಣ ಕ್ಷೇತ್ರಕ್ಕೆ ಬಂದರೆ ಇಲ್ಲೂ ಏನಾಗಿದೆ? ಹಿಂದೆ ದ್ವಿಜರಲ್ಲದವರಿಗೆ ವಿದ್ಯೆ ವಂಚಿಸಲ್ಪಟ್ಟಿತ್ತು. ಈಗ ವರ್ತಮಾನದ ಸಂವಿಧಾನದಲ್ಲಿ ವಿದ್ಯೆ ಎಲ್ಲರಿಗೂ ಮುಕ್ತವಾಗಿದೆ, ನಿಜ. ಆದರೆ ಕೊಟ್ಟಂತೆ ಕಾಣಿಸುತ್ತ ಸಹಜವಾಗೇ ಹೊರಗಿಡುವ ಸಂಚೂ ಜೊತೆಗೇ ಜರುಗುತ್ತಿದೆ. ಏಕರೂಪದ ಶಿಕ್ಷಣ ಪದ್ಧತಿ ಇಲ್ಲದೆ, ಪ್ರಾಥಮಿಕ ಶಿಕ್ಷಣದಲ್ಲಾದರೂ ಮಾತೃಭಾಷೆ ಮಾಧ್ಯಮವಾಗದೆ, ಕಡ್ಡಾಯ ಶಿಕ್ಷಣದಲ್ಲಿ ಕಡ್ಡಾಯ ಇಲ್ಲದೆ, ಮುಖ್ಯವಾಗಿ ಗ್ರಾಮೀಣ ಭಾರತವು ಸಹಜವೊ ಎಂಬಂತೆ ಹೊರ ಹಾಕಲ್ಪಡುತ್ತಿದೆ. ಎಲ್ಲರಿಗೂ ಶಿಕ್ಷಣ ನೀಡಬೇಕೆಂಬ ಆಧುನಿಕ ಪ್ರಜ್ಞೆಯನ್ನು, ಶಿಕ್ಷಣ ಕೊಡಬಾರದೆನ್ನುವ ಸನಾತನ ಸುಪ್ತಪ್ರಜ್ಞೆಯೂ ನಿಯಂತ್ರಿಸುತ್ತಿರುವುದರ ಪರಿಣಾಮದಿಂದ ಇದಾಗುತ್ತಿರಬಹುದೇನೋ. ಇಲ್ಲೂ ತಾರತಮ್ಯವೇ. ಇದಕ್ಕೆ ನಾವು ಬೆಚ್ಚುತ್ತಿಲ್ಲ, ಬೆದರುತ್ತಿಲ್ಲ. ಮೊದಲು ಶಿಕ್ಷಣ ಕ್ಷೇತ್ರದಲ್ಲಿ ನಾವು ಎಚ್ಚೆತ್ತುಕೊಂಡು ಮನುಷ್ಯರಾದರೆ ಉಳಿದುದೆಲ್ಲಾ ತಂತಾನೆ ಕಾಣಬಹುದೇನೋ.

ಭಾರತದ ಇಂದಿನ ಸ್ಥಿತಿಗೆ ಒಂದು ಚಿತ್ರಣ ಕೊಟ್ಟು ಮುಗಿಸುತ್ತೇನೆ. ತುಂಬಾ ಹಿಂದೆ, ಹಳ್ಳಿಯೊಂದರಲ್ಲಿ ದಲಿತರಿಗೆ ಹೊಟೇಲ್‌ಗೆ ಪ್ರವೇಶವಿಲ್ಲದ ಕಾರಣಕ್ಕೆ ಗಲಾಟೆಯಾಗಿ ಅಲ್ಲಿಗೆ ಹೋಗಿದ್ದೆವು. ಹೋಗಿ ನೋಡಿದರೆ, ಆ ಹೊಟೇಲ್ ಅಂದರೆ ಅದು ಜಗುಲಿ ಮೇಲೆ ತೆಂಗಿನ ಗರಿ ಕಟ್ಟಿದ ಒಂದು ಕತ್ತಲು ತುಂಬಿದ ಜೋಪಡಿಯಾಗಿತ್ತು. ಅಲ್ಲಿ ನೊಣಗಳ ಸಾಮ್ರಾಜ್ಯವಿತ್ತು. ಬಚ್ಚಲು ಪಕ್ಕದಲ್ಲೆ ಹರಿಯುತ್ತ, ಮೂಗು ಮುಚ್ಚಿಕೊಂಡು ಏನಾರು ತಿನ್ನಬೇಕಿತ್ತು. ಈ ಹೊಟೇಲ್ ಪ್ರವೇಶಕ್ಕೆ ದಲಿತರು ಹಾತೊರೆಯುತ್ತಿದ್ದರು. ಆ ದೃಶ್ಯ ನೋಡಿದ ನನ್ನ ಜೊತೆಗಿದ್ದ ಶ್ರೀಕೃಷ್ಣಆಲನಹಳ್ಳಿ 'ಅಯ್ಯೋ ಮಾದೇವ, ಇಲ್ಲಿ ದಲಿತರು ಏನನ್ನೂ ತಿನ್ನದಿದ್ದರೇನೇ ಆರೋಗ್ಯವಲ್ಲವೆ?' ಎಂದಿದ್ದರು. ಅದಕ್ಕೆ ನಾನು 'ಪ್ರವೇಶ ಕೇಳುತ್ತಿರುವುದು ಮನಸ್ಸಿನ ಒಳಕ್ಕೆ' ಎಂದಿದ್ದೆ.

ಭಾರತದ ಸ್ಥಿತಿಯೂ ಹೆಚ್ಚುಕಮ್ಮಿ ಆ ಹೊಟೇಲ್‌ನ ಕತೆಯಂತೆಯೇ ಇದೆ. ಇಲ್ಲಿ ಕೊಳಕುತನವಿದೆ, ಅನಾರೋಗ್ಯವಿದೆ, ಬಡತನವಿದೆ, ಅಜ್ಞಾನವು ತುಂಬಿದೆ. ಇಷ್ಟಿದ್ದೂ ಹೀಗಿದ್ದೂ ಭಾರತವು ಸ್ವಾತಂತ್ರ್ಯ ಪಡೆದ ನಂತರ ರಾಜರ ಆಳ್ವಿಕೆ ಕೊನೆಗೊಳಿಸಿದ್ದೂ, ವಯಸ್ಕರ ಮತದಾನ ಪದ್ಧತಿ ತಂದಿದ್ದೂ, ತನ್ನ ಮಿತಿಗಳೊಡನೆ ಶಿಕ್ಷಣವನ್ನು ಸರ್ವರಿಗೂ ಮುಕ್ತಗೊಳಿಸಿದ್ದೂ, ಭೂಸುಧಾರಣೆ, ಮೀಸಲಾತಿ ಇತ್ಯಾದಿ ಈ ನೆಲದಲ್ಲಿ ಸಂಭವಿಸಿರುವುದು ಸಾಮಾನ್ಯ ಸಂಗತಿಗಳೇನೂ ಅಲ್ಲ. ಇದಕ್ಕೆ ಕಾರಣ– ಭಾರತದಲ್ಲಿ ಬುದ್ಧ, ವಚನಕಾರರಂಥವರ ಮಹೋನ್ನತ ಪರಂಪರೆಯ ಬೆಳಕು ಇರುವುದೂ

ಅವರು ಉಸಿರಾಡಿದ ಗಾಳಿ ಅವರಿಟ್ಟ ಹೆಜ್ಜೆ ಗುರುತುಗಳು ಇರುವುದೂ ಈ ಮಹೋನ್ನತ ಪರಂಪರೆಯೂ ಭಾರತದ ಉನ್ನತ ಮನಸ್ಸುಗಳನ್ನು ಒಂದಿಷ್ಟು ಸೆಳೆದು ಕೈಹಿಡಿದು ನಡೆಸುತ್ತಿರುವುದೂ ಕಾರಣವಾಗಿರಬಹುದು. ಈ ಉನ್ನತ ಪರಂಪರೆಯ ಹೆಜ್ಜೆಗಳನ್ನು ಗುರುತಿಸಿ ನಾವು ಹೆಜ್ಜೆ ಇಟ್ಟರೆ ಆಗ ಸಂವಿಧಾನದ ಆಸೆಗಳು ಕೈಗೂಡಲೂಬಹುದು.

# ನಾನು ಗಾಂಧಿ ಚಿತ್ರ ನೋಡಿದೆ ಅಥವಾ ಆಕಾಶಕ್ಕೆ ಎರಡು ಗೇಣು ಕಮ್ಮಿ

**1**

ನಾನು ಗಾಂಧಿ ಚಿತ್ರ ನೋಡಿದೆ. ದ.ಸಂ.ಸ ಈ ಚಿತ್ರವನ್ನು ಬಹಿಷ್ಕರಿಸಿರುವುದರಿಂದ ಈ ರೀತಿಯಾಗಿ ಹೇಳಬೇಕಾಗಿ ಬಂದಿದೆ. ಹೀಗಾಗಿ ನಾನು ಗಾಂಧಿ ಚಿತ್ರ ನೋಡಿರುವುದು ನಮ್ಮ ರಾಜ್ಯ ಸಂಚಾಲಕ ಬಿ.ಕೃಷ್ಣಪ್ಪರಾದಿಯಾಗಿ ಗೆಳೆಯರಿಗೆ ಬೇಸರವಾಗಿರುತ್ತದೆ, ಆದರೆ ಆಶ್ಚರ್ಯವಾಗಿರುವುದಿಲ್ಲ. ಯಾಕೆಂದರೆ ಈ ಅಶಿಸ್ತಿನ ಮಹಾದೇವ ಬಹಿಷ್ಕರಿಸಿದ್ದರೂ ಬಹಿಷ್ಕಾರಕ್ಕೆ ಅವನು ಒಳಗಾಗುವವನಲ್ಲ ಅಂತ ಅವರು ಮೊದಲೇ ಅಂದುಕೊಂಡಿರಲೂಬಹುದು. 'ಹಾಳಾಗಲಿ, ಅವ ಬೇಕಾದರೆ ಗುಟ್ಟಾಗಿ ನೋಡಿಕೊಳ್ಳಲಿ, ಅದನ್ನೂ ಯಾಕೆ ಬರೆದ, ಬರೆದು ಯಾಕೆ ಸಂಘಟನೆಯಲ್ಲಿ ಗಲಿಬಿಲಿ ಉಂಟುಮಾಡಿದ' ಎಂಬ ಸಿಟ್ಟು ಅವರಲ್ಲೀಗ ಉಂಟಾಗಿರಬೇಕು. ಅವರಿಗೆ ಏನೇ ಆಗಿರಲಿ ಬೇಸರವೋ, ಕೋಪವೋ, ಸಂಘಟನೆಗೆ ನುಂಗಲಾರದ ತುತ್ತೋ, ಏನೇ ಆಗಿರಲಿ ನಾನು ಬರೆಯಲೇಬೇಕು ಅನ್ನಿಸಿದೆ, ಬರೆಯುತ್ತಿದ್ದೇನೆ.

ಮೊದಲನೆಯದಾಗಿ, ಗಾಂಧಿ ಚಿತ್ರ ಬಹಿಷ್ಕರಿಸುವುದ ನಾನು ಬಯಸಿರಲಿಲ್ಲ. ವಿರೋಧಿಸಿದರೂ ನನ್ನ ಮಾತು ನಡೆಯುವ ಸ್ಥಿತಿಯಲ್ಲಿರಲಿಲ್ಲ. ಬಹಿಷ್ಕಾರ ಬಹುಮತದ ನಿರ್ಣಯವಾಗಿತ್ತು. ಹಾಗಿದ್ದೂ ನಮ್ಮ ಗೋವಿಂದಯ್ಯ, ಯಾವ ಸಿನಿಮಾ ಬಂದರೂ ಬಿಡದೆ ನೋಡುವ ಗೋವಿಂದಯ್ಯ, ಗಾಂಧಿ ಚಿತ್ರ ಬಂದಾಕ್ಷಣವೇ ಬೆಂಗಳೂರಿಗೆ ಹೋಗಿ ಕದ್ದು ಎರಡು ಸಲ ನೋಡಿಬಿಟ್ಟಿದ್ದನು.

ಮೈಸೂರಿಗೆ ಗಾಂಧಿ ಚಿತ್ರ ಬಂದಾಗ ಲೋಕಸಭಾ ಸದಸ್ಯ ಶ್ರೀ ಶ್ರೀನಿವಾಸ್ ಪ್ರಸಾದ್‌ರ ತಮ್ಮ ರಾಮಸ್ವಾಮಿ ಮೊದಲೇ ಟಾಕೀಸ್ ಮಾಲೀಕನನ್ನ ನಡುಗಿಸಿ, ಇನ್ನು ಯಾವ ರೀತಿ ಪ್ರತಿಭಟಿಸಬೇಕೆಂದು ನನ್ನ ಬಳಿ ಬಂದರು. ಸರಳವಾದ ನೇರವಾದ ದುಡುಕು ಸ್ವಭಾವದ ರಾಮಸ್ವಾಮಿ, ಆತನ ಗುಂಪು ದುಡುಕಿ ಎಲ್ಲಿ ಟಾಕೀಸನ್ನೇ ಚಚ್ಚಿ ಹಾಕಿಬಿಡುತ್ತದೊ ಎಂಬ ಆತಂಕ ನನಗೆ ಉಂಟಾಗತೊಡಗಿತು. ಆಗ ನಮ್ಮ ರಾಜ್ಯ ಸಂಚಾಲಕ ಕೃಷ್ಣಪ್ಪನವರು ಮೈಸೂರಿನಲ್ಲಿದ್ದರು. ಪರಿಸ್ಥಿತಿ ವಿವರಿಸಿದೆ. ಆಂಧ್ರದಲ್ಲೋ ಮದ್ರಾಸಲ್ಲೋ ಚಿತ್ರಮಂದಿರದೊಳಗೆ ಹಾವು ಬಿಟ್ಟಿದ್ದು ನನಗೆ ಗಾಬರಿ ತರಿಸಿತ್ತು. ಅದಾಗಲೇ ಬೆಂಗಳೂರಿನಲ್ಲಿ ಪ್ರತಿಭಟಿಸಿದ್ದರಿಂದ ಪ್ರತಿಭಟನೆ ಸಾಂಕೇತಿಕವಾದುದರಿಂದ ಇಲ್ಲೂ ಮಾಡುವುದು ಅನಗತ್ಯ ಎಂದೆ. ಅದಕ್ಕೆ ಕೃಷ್ಣಪ್ಪನವರು 'ಮಾಡಲಿ ಬಿಡಯ್ಯ, ಗಲಾಟೆ ಆದರೆ ಆಗುತ್ತೆ, ನೀನು ಯಾಕೆ ತಡೆಯುತ್ತೀ?' ಎಂದರು. ನನ್ನ ಗಾಬರಿ ಹೆಚ್ಚಿತು. ನಾನು ರಾಮಸ್ವಾಮಿ ಬಳಿ ಬಂದು 'ಟಾಕೀಸಿಗೆ ಏನೂ ಜಖಂ ಮಾಡಬೇಡಿ–ಅಂಬೇಡ್ಕರ್ ಇಲ್ಲದ ಗಾಂಧಿ ಅಪೂರ್ಣ ಎಂದಷ್ಟೇ ಹೇಳಿ' ಎಂದು ಇಪ್ಪತ್ತು ಸಲ ವಿನಂತಿಸಿ ಬೆಂಗಳೂರಿಗೆ ಹೊರಟೆ. ಬೆಂಗಳೂರಿನಲ್ಲಿ ಇದ್ದರೂ ಏನಾಗಿರುತ್ತದೋ ಎಂಬ ಕಿಡಿ ನನ್ನನ್ನು ಸುಡುತ್ತಿತ್ತು.

**2**

ಇನ್ನು ಗಾಂಧಿ ಚಿತ್ರದ ಬಗ್ಗೆ: ಒಂದು ಮಿತಿಯೊಳಗೆ ಗಾಂಧಿಯನ್ನೇ ಕೇಂದ್ರವಾಗಿಸಿಕೊಂಡು ಗಾಂಧಿಯನ್ನಷ್ಟೇ ತೆಗೆದಿರುವ ಚಿತ್ರವಿದು. ಗಾಂಧಿ ಬಿಟ್ಟು ಉಳಿದವರೆಲ್ಲಾ ಇಲ್ಲಿ ಇಲ್ಲವಾಗಿದ್ದಾರೆ. ಗಾಂಧಿ ಪಾತ್ರಧಾರಿಯಂತೂ ಗಾಂಧಿಯೇ ಆಗಿಬಿಟ್ಟು ಎಲ್ಲೂ ಅಭಿನಯಿಸಿಯೇ ಇಲ್ಲ. ಗಾಂಧಿ ಅನುಯಾಯಿಗಳಾದ ನೆಹರೂ, ಪಟೇಲರುಗಳು ಕಮಂಗಿಗಳಾಗಿ ಕೊನೆಗೆ ಅಧಿಕಾರದಾಹಿಗಳಾಗಿ, ಇಂದಿರಾ ಗಾಂಧಿಯವರೂ ಇಷ್ಟಪಡದಷ್ಟು ಚೆನ್ನಾಗಿ ಮೂಡಿವೆ. ಜಿನ್ನಾರ ಅಭಿನಯ ಚೆನ್ನಾಗಿದ್ದು, ಅಂಬೇಡ್ಕರರ ದುಃಖದಾಳವನ್ನು ಅರಿಯದವ ಅಂಬೇಡ್ಕರನ್ನು ಚಿತ್ರಿಸಿದ್ದರೆ ಜಿನ್ನರಂತಾಗಿಬಿಡುತ್ತಿದ್ದು, ಚಿತ್ರದಲ್ಲಿ ಅಂಬೇಡ್ಕರ್ ಇಲ್ಲದಿದ್ದುದು ಒಂದು ರೀತೀಲಿ ಒಳ್ಳೆಯದಾಯಿತು ಅನ್ನಿಸಿತು. ಅಲ್ಲದೆ ಗಾಂಧಿ ಕಾಲದ ಮುಖ್ಯರಾದ ವಿನೋಬಾ, ಸುಭಾಷ್‌ಚಂದ್ರಬೋಸ್, ಜೆ.ಪಿ, ಲೋಹಿಯಾ ಮುಂತಾದ ಪಾತ್ರಗಳೂ ಚಿತ್ರದಲ್ಲಿಲ್ಲ, ಇದ್ದರೂ ಅದು ಯಕಶ್ಚಿತ್ ಹಾಗಾಗಿ ಅಂಬೇಡ್ಕರ್ ಇಲ್ಲದಿರುವಿಕೆ ಆ ಚಿತ್ರದ ಗತಿ ಅಷ್ಟೆ. ಆದರೆ ಸಾಮಾಜಿಕವಾಗಿ ಕೆಳಸ್ತರದತ್ತ ಗಾಂಧಿ ಚಲಿಸುವಂತಾಗಿ

ಗಾಂಧಿ ಮಹಾತ್ಮನಾಗುವಲ್ಲಿ ಅಂಬೇಡ್ಕರರ ಅದಮ್ಯ ಚೇತನವೂ ಕಾರಣ ಎಂಬುದರಲ್ಲೇನೂ ನನಗೆ ಈಗಲೂ ಅನುಮಾನವಿಲ್ಲ.

ಇದನ್ನೆಲ್ಲಾ ಯೋಚಿಸುತ್ತಾ, ಆ ಕಾಲದಲ್ಲಿ ನಾನು ಇದ್ದಿದ್ದರೆ ಯಾರ ಕಡೆ ಇರುತ್ತಿದ್ದೆ ಎಂದು ನನ್ನ ತಲೆ ತಿಂದಿತು. ಅದೆಷ್ಟೋ ಯೋಚಿಸಿದರೂ ನಿಲುಕದೆ ತಳಮಳಿಸಿದೆ. ನಿದ್ದೆಯಲ್ಲೂ ಈ ಚಿಂತೆ ನನ್ನನ್ನು ಬಿಡುತ್ತಿರಲಿಲ್ಲ. ಎದ್ದಾಗ, ನಾನು ಗಾಂಧಿ ಜೊತೆ ಇದ್ದೂ– ಅಂಬೇಡ್ಕರರನ್ನು ಅರ್ಥಮಾಡಿಕೊಳ್ಳಬೇಕೆಂದು, ಗಾಂಧಿಯೊಡನೆ ಅಂಬೇಡ್ಕರರ ಪರವಾಗಿ ವಾದಿಸುತ್ತಿದ್ದೇನೋ ಎನಿಸಿತು. ಆದರೆ ಗಾಂಧಿಯು ಮತಾಂತರದ ಬಗ್ಗೆ ಪೇಜಾವರರಂತೆ ಚಡಪಡಿಸುವುದನ್ನು ಕಂಡಾಗ ಕಸಿವಿಸಿಯಾಗಿ ನಾನು ಹಿಂಸೆಯನ್ನು ಅನುಭವಿಸಬೇಕಾಗಿ ಬರುತ್ತಿತ್ತು!

**3**

ಗಾಂಧಿಯದು ಭೂಮಿಯಂತೆ ಒಂದು ಕ್ಷಣವೂ ನಿಲ್ಲದೆ ಚಲಿಸುವ ಚೇತನವು. ಈ ಚೇತನವನ್ನು ನಿರ್ದೇಶಕ ಹೇಗೆ ಅದ್ಭುತವಾಗಿ ಹಿಡಿದಿದ್ದಾನೆಂದರೆ– ಮೋಹನದಾಸನು ಮೊದಲು ಕೆಂಪು ಮನುಷ್ಯನನ್ನು ಅನುಕರಿಸಲು ಹೋಗಿ ಆ ಪ್ರಯಾಣದಲ್ಲಿ ಕ್ರೂರವಾಗಿ ಆಚೆಗೆ ತಳ್ಳಿಸಿಕೊಂಡು ಅವಮಾನಿತನಾಗಿ ಬಿದ್ದಾಗ, ಆತನ ಆತ್ಮಕ್ಕೆ ಆಚೆ ಬಿದ್ದಿರುವ ಅಸ್ಪೃಶ್ಯ ಆತ್ಮಗಳು ಸೇರಿಕೊಂಡು ಅಸ್ಪೃಶ್ಯತನದ ಬೀಜ ಅವನ ಎದೆಗೆ ಬಿದ್ದಂತಾಗಿ ಮಹಾತ್ಮ ಆಗಲು ಆರಂಭಿಸುತ್ತಾನೆ. ಕೇವಲ ಈ ಒಂದು ಅವಮಾನಕ್ಕೆ ಆ ಮೋಹನದಾಸನು 'ಮಹಾತ್ಮಾಗಾಂಧಿ'ಯಾಗಿ ಪರಿವರ್ತನೆಗೊಳ್ಳುವುದಾದರೆ ದೇಹವಿಡೀ, ಜೀವನವಿಡೀ ಅವಮಾನದಿಂದಲೇ ಮಾಡಲ್ಪಟ್ಟ ಅಸ್ಪೃಶ್ಯ ಬೆಳೆದರೆ ಅದೆಷ್ಟು ಎತ್ತರಕ್ಕೆ ಬೆಳೆಯಬಹುದೆಂಬುದು ನನ್ನ ಊಹೆ ಅಳತೆಗಳಿಗೆ ನಿಲುಕದಷ್ಟು ಎತ್ತರದ್ದಾಗಿಬಿಟ್ಟಿತು.

ಆಫ್ರಿಕಾದಲ್ಲಿ ಅಸ್ಪೃಶ್ಯನಾಗುವ ಮೋಹನದಾಸ್‌ಗೆ ಆ ಅಸ್ಪೃಶ್ಯತನವೇ ಅವನಿಗೆ ದಿಕ್ಕು ತೋರಿಸುತ್ತದೆ. ಸಹನೆ, ದೃಢತೆ, ಅಹಿಂಸೆ ಇವುಗಳೊಡನೆ ಎದುರಾಳಿಯನ್ನು ಮನುಷ್ಯನನ್ನಾಗಿಸುವ ಅಪೂರ್ವತೆ, ಇದರೊಟ್ಟಿಗೇ ಹೊಸತಾಗಿ ಸಹಜೀವನ ಕಟ್ಟುವ ಒಳಗಣ್ಣು ಗಾಂಧಿಗೆ ಅಲ್ಲುಂಟಾಗುತ್ತದೆ. ಆ ಕಾಗದ ಸುಡುವ ಸಂದರ್ಭದಲ್ಲಿ ಮೋಹನದಾಸ್ ಗಾಂಧಿಗೆ ಬಿಳಿ ಪೊಲೀಸ್ ಹೊಡೆದೂ ಸುಸ್ತಾಗಿ ಗಾಂಧಿಯ ನಿರ್ಲಿಪ್ತ ಕಾಯಕಕ್ಕೆ ಆ ಕ್ರೂರ ಪೊಲೀಸ್‌ನಲ್ಲೂ 'ಮಾನವ ಇಣುಕುವುದ'ರ ಎಳೆಯೇ ಗಾಂಧಿಯನ್ನು ಮುಂದೆ ನಡೆಸಿಕೊಂಡು ಹೋಗುತ್ತದೆ.

ಆಮೇಲೆ ಮೋಹನದಾಸ್ ಗಾಂಧಿ ಮೊದಲನೆಯ ದರ್ಜೆಯ ಗುಜರಾತಿಯಾಗಿ ಭಾರತಕ್ಕೆ ಬಂದು ಆತನ ಪಯಣದಲ್ಲಿ ರೈಲು ನಿಂತಾಗ– ಉಟ್ಟ ಸೀರೆಯನ್ನೇ ಒಗೆದುಕೊಳ್ಳುತ್ತಿದ್ದ ಹೆಂಗಸಿಗೆ ತನ್ನ ಪೇಟ ಬಿಚ್ಚಿಕೊಟ್ಟು ಎರಡನೆಯ ದರ್ಜೆಯ ಭಾರತೀಯನಾಗುತ್ತಾನೆ. ಅಲ್ಲಿಂದ ಚಂಪಾರಣ್ಯವೂ ಆತನಿಗೆ ಲಂಗೋಟಿ ಮಾತ್ರದಷ್ಟು ಉಳಿಸಿಕೊಟ್ಟು ಮೂರನೆಯ ದರ್ಜೆಗೆ ಇಳಿಸಿ ಮಹಾತ್ಮನನ್ನಾಗಿಸುತ್ತದೆ, ಮೋಹನದಾಸ್ ಕರಮಚಂದ ಗಾಂಧಿಯು ಮಹಾತ್ಮಾ ಗಾಂಧಿಯಾಗುತ್ತಾರೆ.

ಮಾನವ ಒಂದು ಜೀವಿತದಲ್ಲಿ ಇಷ್ಟೆಲ್ಲಾ ಆಗುವುದು ಒಂದು ಪವಾಡವೆ. ತನ್ನ ಒಂದು ದೇಹದಲ್ಲಿ ಇಷ್ಟೆಲ್ಲಾ ರೂಪಾಂತರವಾದ ಗಾಂಧಿ ತನ್ನ ಜೀವಿತವ ಪ್ರಯೋಗಕ್ಕಿಟ್ಟುಕೊಂಡ ಗಾಂಧಿ, ತಾನು ಅಸ್ಪೃಶ್ಯ ಸ್ಥಿತಿಯೇ ಆಗುವುದಿಲ್ಲ. ಅಸ್ಪೃಶ್ಯ ಆಗಲು ಮುಂದಿನ ಜನ್ಮ ಬಯಸುತ್ತಾರೆ.

'ಭಾರತ ಎರಡಾಗುವುದಾದರೆ ನನ್ನ ಹೆಣದ ಮೇಲಾಗಬೇಕೆಂದು ನುಡಿದ ಗಾಂಧಿ ತಮ್ಮ ನುಡಿಯನ್ನು ಉಳಿಸಿಕೊಂಡಿದ್ದರೆ ಕ್ರಿಸ್ತನಮಟ್ಟಕ್ಕೆ ಮುಟ್ಟುತ್ತಿದ್ದರು' ಎನ್ನುವ ಡಾ.ಲೋಹಿಯಾರ ಮಾತಿನ ಸತ್ಯತೆ– ಅಂದರೆ, ಗಾಂಧಿಯ ಈ ಒಂದು ಕೊರತೆ ಮತ್ತು ಗಾಂಧಿ ಈ ನಾಡ ತಳದ ಮಾನವ ಅಸ್ಪೃಶ್ಯನಾಗಲು ಅದಕ್ಕಾಗಿ ಮುಂದಿನ ಜನ್ಮ ಆಶಿಸುವುದು– ಈ ಎರಡೂ ಕೊರತೆಯಿಂದಾಗಿ ನಮ್ಮ ಯುಗದ ಎತ್ತರದ ಪುರುಷ ಗಾಂಧಿಯ ಎತ್ತರ, ಆಕಾಶ ಮುಟ್ಟಲು ಎರಡು ಗೇಣು ಕಮ್ಮಿ ಎಂಬಂತೆ ಕಾಣಿಸುತ್ತದೆ.

**4**

ನಾನು ಅಹಿಂಸೆಯ ಪರವಾಗಿದ್ದು ಉದ್ವಿಗ್ನತೆಯ ದಲಿತ ಸ್ನೇಹಿತರೊಡನೆ– 'ಅಂಬೇಡ್ಕರ್ ಕೂಡಾ ಅಹಿಂಸೆಯನ್ನು ಹಿಡಿದಿದ್ದರು. ಅದಕ್ಕೇ ಅವರು ಬೌದ್ಧರಾದುದು' ಎಂದು ಒಪ್ಪಿಸುತ್ತಿದ್ದೆ. ಆದಾಗ್ಯೂ ಅನೇಕರು ಒಪ್ಪುತ್ತಿರಲಿಲ್ಲ. ಆಗ ವಾಸ್ತವತೆ ಉದಾಹರಣೆ ಕೊಟ್ಟು ಅಂದರೆ– 'ನೋಡಿ, ನಾವು ಅಸ್ಪೃಶ್ಯರು ಕಮ್ಮಿ ಸಂಖ್ಯೆಯಲ್ಲಿದ್ದೇವೆ. ಪೊಲೀಸು, ಮಿಲಿಟರಿ ಎದುರಿಸುವುದು ಆಗದ ಮಾತು. ಎಲ್ಲಕ್ಕಿಂತ ಮಿಗಿಲಾಗಿ ನಮ್ಮ ಅಕ್ಕಪಕ್ಕದ ವಾಸಿಗಳಾದ ಸವರ್ಣೀಯರು ನಾವು ಇರುವುದನ್ನೇ ಸಹಿಸರು. ಹೀಗಿರುವಾಗ ನಾವು ಹಿಂಸೆ ಹಿಡಿದರೆ ನಮಗೆ ಉಳಿಗಾಲವಿಲ್ಲ' ಎಂದು ತಂತ್ರವಾಗಿಯಾದರೂ ಅಹಿಂಸೆ ಒಪ್ಪಿಸಲು ಹೆಣಗುತ್ತಿದ್ದೆ. ಗಾಂಧಿ ಚಿತ್ರ ನೋಡಿದ ಮೇಲೆ ನನ್ನ ಈ ತಂತ್ರವಾದವೂ ತಪ್ಪೆನಿಸಿತು. ಚಳವಳಿಕಾರರು ಪೊಲೀಸರನ್ನು ಕೊಂದಾಗ,

ನೆಹರೂ, ಪಟೇಲ್, ಜಿನ್ನಾರು ವಿರೋಧಿಸಿದರೂ ಗಾಂಧಿ ಉಪವಾಸ ಮಾಡಿ, ಚಳವಳಿ ಹಿಂತೆಗೆದುಕೊಂಡದ್ದು ನನ್ನನ್ನು ಬದಲಿಸಿತು. ಬಿಳಿ ನ್ಯಾಯಾಧೀಶ ಕರಿಯ ಗಾಂಧಿಗೆ ಎದ್ದು ನಿಂತಿತ್ತು. ನನಗಾಗ ಅಹಿಂಸೆ ತಂತ್ರವಲ್ಲ, ಅದು ಬದುಕು ಅನ್ನಿಸಿತು.

**5**

ಸಾಹಿತ್ಯ ಲೋಕದ ಮಂದಣ್ಣ ಉರುಫ್ ಗಾಂಧಿ ಗೋವಿಂದಯ್ಯ 'ಹೇಗಿದೆ ಗಾಂಧಿ' ಎಂದು ನಗಾಡಿದನು. ಅದಕ್ಕೆ ನಾನು 'ಸಾಯಲು ಮಾನಸಿಕವಾಗಿ ದೃಢವಾಗಿ ಸಿದ್ಧವಾದವನು ಮಾತ್ರ ಗಾಂಧಿಯಾಗಬಲ್ಲ' ಎಂದೆ. ಅಹಿಂಸಾವಾದಿಯಾದ ಗಾಂಧಿಯ ದೇಹದ ಒಂದು ರೋಮದಲ್ಲೂ ಹೇಡಿತನದ ಸುಳಿವು ಇಲ್ಲದಿರುವುದು ನನ್ನನ್ನು ನಡುಗಿಸಿತು. ಹೇಡಿಯಾದವನು ಅಹಿಂಸಾವಾದಿಯಾಗುವುದು ಅಸಾಧ್ಯ ಎಂಬ ನಿಜವೂ ಅರಿವಾಗಿ ಬೆವರಿಸಿತು. ಇಂಥ ಗಾಂಧಿಯನ್ನು ಅಪಾರ್ಥಕ್ಕೊಳಗಾಗಿಸಿದ ಸೈತಾನ... ಅಥವಾ ನಮ್ಮ ಹೇಡಿತನವೇ ಆ ಸೈತಾನ ಆಗಿರಬೇಕು. ನಮ್ಮ ದಲಿತ ಸ್ನೇಹಿತರ ಕಣ್ಣೂ ಗಾಂಧಿಯ ಬಗ್ಗೆ ಸಂಪೂರ್ಣವಾಗಿ ಮುಚ್ಚಿಕೊಂಡಿರದಿದ್ದರೆ, ಕಸ್ತೂರಿ ಬಾ ಅವರು ಅಸ್ಪೃಶ್ಯ ಮೂಲದವನ ಮಲ ಎತ್ತಲು ನಿರಾಕರಿಸಿದಾಗ, ಗಾಂಧಿಯು ತನ್ನನ್ನೇ ತಾನು ಕಳೆದುಕೊಂಡು ಉದ್ವಿಗ್ನನಾಗಿ ಮನೆಯಿಂದಲೇ ತನ್ನ ಪತ್ನಿಯನ್ನು ದೂಡುವ ಚಿತ್ರ ಕಣ್ಮುಂದೆ ಕಾಣುತ್ತಿತ್ತು.

**6**

ದಲಿತ ಸಂಘರ್ಷ ಸಮಿತಿಗೆ ತನ್ನದೇ ರೂಪಿಲ್ಲದೆ ತನ್ನದೇ ದಾರಿಯಿಲ್ಲದೆ ದಿಕ್ಕೆಡುತ್ತಿದೆ. ಮೊನ್ನೆ ದೇವಲಾಪುರದ ಕಾಡು ಸಂಬಂಧಿಸಿ, ದಲಿತ ಸಂಘದ ಸ್ನೇಹಿತರು ನಡೆಸಿದ ಧರಣಿಯಲ್ಲಿ ಕಾಡಿನ ಅಧಿಕಾರಿಯನ್ನು ಸಿಕ್ಕಾಪಟ್ಟೆ ಬೈದು ಆತನನ್ನು ಕುಪಿತಗೊಳಿಸಿದರು ಎಂದು ಕೇಳಿದೆ. ಇದು ಅನಗತ್ಯವಾಗಿತ್ತು. ದೇವಲಾಪುರದ ಭೂ ಚಳವಳಿಯು ಕಾಡಿಗೆ ವಿರೋಧವಲ್ಲ. ರೆವಿನ್ಯೂ ಭೂಮಿಯೆಂದಾಗಿ ದಾಖಲಾತಿ ಸಿಕ್ಕಿದ್ದರಿಂದಲೇ ಆರಂಭವಾದ ಚಳವಳಿ ಅದು. ಆ ಕಾಡಿನ ಅಧಿಕಾರಿಗಳ ಹತ್ತಿರ, ಹಾಗೆ ಸರ್ಕಾರದ ಹತ್ತಿರ 'ರೆವಿನ್ಯೂ ಭೂಮಿಯೆಂದು ಗರೀಬರು ಬಂದಾಗ ಅದ ಕಾಡು ಭೂಮಿ ಮಾಡುತ್ತಿ? ಕಾಡು ಭೂಮಿಯನ್ನು ಒತ್ತರಿಸುವ ಭೂಮಾಲೀಕರಿಗೆ ಅದ ರೆವಿನ್ಯೂ ಭೂಮಿ ಮಾಡುತ್ತಿ? ಹೊಟ್ಟೆಗಿಲ್ಲದ ನಮ್ಮ ಹೊಟ್ಟೆಯನ್ನೇಕೆ ತುಳಿಯುತ್ತೀ? ನಿನ್ನ ನಿಜ ಏನು?'– ಎಂದಷ್ಟೇ ಕೇಳಿದ್ದರೆ ಸಾಕಾಗಿತ್ತು. ಆಗ ಅಧಿಕಾರಿಯೂ, ಸರ್ಕಾರವೂ

ಕನಿಷ್ಠ ಯೋಚಿಸುವಂತಾದರೂ ಆಗುತ್ತಿತ್ತು. ಅವು ತಮ್ಮನ್ನು ತಾವು ಮುಟ್ಟಿನೋಡಿಕೊಳ್ಳುತ್ತಿದ್ದವು.

ಅದಕ್ಕಾಗೆ, ನಮ್ಮ ದಸಂಸ ವಿಭಾಗ ಸಂಚಾಲಕರು ದ್ವೇಷ, ಅನುಮಾನದ ಪ್ರವೃತ್ತಿ ಉಳ್ಳವರಾದ್ದರಿಂದ ಅವರಿಗೆ 'ದಯವಿಟ್ಟು ಗಾಂಧಿ ಚಿತ್ರ ನೋಡಿ' ಎಂದು ಎರಡು ಸಲ ವಿನಂತಿಸಿದೆ. ಹಾಗೆಯೇ ಇನ್ನೊಬ್ಬ ಕಾಂಗೈ ಗೂಂಡಾಗಿರಿಯಿಂದ ಪರಿವರ್ತಿತನಾಗಿ ದಲಿತ ಸಂಘವ ಸೇರಿ ದಿನದಿನಕ್ಕೂ ಬೆಳೆಯುತ್ತಾ ದಲಿತ ಸಂಘದ ನಾಯಕನಾಗುತ್ತಿರುವ ಕೋಟೆಯ ಬೆಟ್ಟಯ್ಯ ಎಂಬ ಚೈತನ್ಯದ ಸೆಲೆಯಂತಿರುವ ಹುಡುಗನಿಗೂ ಸಿಕ್ಕಾಗ ಗಾಂಧಿ ಚಿತ್ರ ನೋಡು ಎಂದು ಹೇಳಬೇಕೆಂದಿರುವೆ. ನನ್ನೆಲ್ಲ ದಲಿತ ಸಂಘದ ಗೆಳೆಯರಿಗೂ ನಾನು ಹೇಳುವುದು ಹೀಗೆಯೇ.

**7**

ಯಾಕೆಂದರೆ ನಮಗಿನ್ನೂ ಸ್ವಾತಂತ್ರ್ಯ ಎಂಬುದು ಬಂದಿಲ್ಲ. ನಮಗೆ ವಿಮೋಚನೆಯು ಆಗಬೇಕಾಗಿದೆ. ಗಾಂಧಿಯು ಬ್ರಿಟೀಷರಿಂದ ಸ್ವಾತಂತ್ರ್ಯ ಪಡೆದದ್ದು ಒಂದು ರೀತೀಲಿ ಸುಲಭದ್ದು. ಗಾಂಧಿಯೊಡನೆ ಸಮಸ್ತ ಜನರಿದ್ದರು ಮತ್ತು ಈ ನೆಲದವನಲ್ಲದವ ವೈರಿಯಾಗಿದ್ದನು. ಆದರೆ ನಮ್ಮ ಇರುವಿಕೆಯನ್ನು ಸಹಿಸದಿರುವ ಸವರ್ಣೀಯ ಜನಸ್ತೋಮವ ಗೆಲ್ಲುತ್ತ ಅದರ ಮನ ವಶಮಾಡಿಕೊಳ್ಳುತ್ತ ನಾವು ನಮ್ಮ ವಿಮೋಚನೆ ಕಡೆಗೆ ನಡೆಯಬೇಕಾಗಿದೆ. ನಮ್ಮೊಡನೆಯೂ ಒಂದಿಷ್ಟು ಸವರ್ಣೀಯರೂ ಬರಬಹುದು. ಇಂಥದ್ದರಲ್ಲಿ ಹೀಗಿರುವಾಗ ನಮ್ಮ ಬಿಡುಗಡೆಗೆ ಅನೇಕ ಸ್ವಾತಂತ್ರ್ಯ ಹೋರಾಟಗಳು ಜರುಗಬೇಕಾಗುತ್ತದೆ. ಇಂಥದ್ದರಲ್ಲಿ ಹೀಗಿರುವಾಗ ನಮ್ಮ ವಿಮೋಚನೆಗಾಗಿ ಸಾವಿರಾರು ರೀತಿಗಳನ್ನು ನಾವು ತಡಕಬೇಕಾಗಿದೆ. ಇಂಥದ್ದರಲ್ಲಿ ಹೀಗಿರುವಾಗ ಗಾಂಧಿಯೂ ನಮಗೆ ದಿಕ್ಕಾಗಬಹುದು.

# ಗಾಂಧಿ ಅಂಬೇಡ್ಕರ್ – ಒಂದಿಷ್ಟು ಮಾತು

ಗಾಂಧಿಯವರ ನಡಿಗೆಯ ಪ್ರತಿ ಹೆಜ್ಜೆಯೂ ದೇವರನ್ನು ಸಾಕ್ಷಾತ್ಕರಿಸಿಕೊಳ್ಳುವವನೊಬ್ಬ ಮಾಡುವ ಪ್ರಯತ್ನದಂತೆ ಕಾಣಿಸುತ್ತದೆ. ಅವರು ಮಾಡಿದ ಎಲ್ಲಾ ಕೆಲಸಗಳ ಆಳದ ತುಡಿತವು ತನ್ನ ಬಿಡುಗಡೆಗಾಗೇ, ತನ್ನ ಮೋಕ್ಷಕ್ಕಾಗೇ ಎಂಬಂತೆ ಇವೆ. ಗಾಂಧಿ ತಮ್ಮ ಆತ್ಮಕತೆಯ ಕೊನೆಯಲ್ಲಿ ಒಂದು ಕಡೆ 'ಸಕಲ ಜೀವಿಗಳಲ್ಲೂ ದೇವರನ್ನು ಕಾಣುವ ನಮ್ರ ಪ್ರಯತ್ನ ತಮ್ಮ ಜೀವನ' ಎಂಬರ್ಥದಲ್ಲಿ ಹೇಳಿಕೊಂಡಿದ್ದಾರೆ. ಈ ನುಡಿಗೆ ಪ್ರಜ್ಞಾಪೂರ್ವಕವಾಗಿ ನಡೆಯುತ್ತ, ಮುಂದಿಡುವ ಪ್ರತಿ ಹೆಜ್ಜೆಗಳನ್ನೂ ಪರೀಕ್ಷಿಸಿಕೊಳ್ಳುತ್ತ ನಡೆವವನಂತೆ ಗಾಂಧಿ ಕಾಣಿಸುತ್ತಾರೆ.

ಹೀಗೆ ನಡೆವವನಿಗೆ ಜಗತ್ತು ಹೇಗೆ ಕಾಣಿಸಬಹುದು? ಐಕ್ಯತೆ ದೈವದಂತೆ, ಭಿನ್ನತೆ ದೆವ್ವದಂತೆ, ಜಗತ್ತು ಒಂದು ಕುಟುಂಬದಂತೆ. ಹೀಗೆ ಭಾವಿಸಿದಾಗ ಮಾತ್ರವೆ 'ಉಪವಾಸ'ವನ್ನು 'ಸತ್ಯಾಗ್ರಹ'ವನ್ನಾಗಿ ಮಾಡಲು ಆಗುತ್ತದೆ. ಯಾಕೆಂದರೆ ಉಪವಾಸವು ಸತ್ಯಾಗ್ರಹವಾಗಿ ಪರಿಣಮಿಸುವುದು ತನ್ನವನೊಡನೆ ಅಥವಾ ಎದುರಾಳಿ ತನ್ನವನೆಂಬ ಭಾವನೆ ಇದ್ದಲ್ಲಿ ಮಾತ್ರ.

ಇಂಥ ಗ್ರಹಿಕೆಯು ಈ ಸೆಮಿನಾರಿನಲ್ಲಿ ನಡೆಯುತ್ತಿರುವ ಸಂಸ್ಕೃತಿ ಪರಿಕಲ್ಪನೆಯನ್ನೂ ಕೂಡಾ ಹೀಗೆ ನೋಡುತ್ತಿತ್ತು: ಈ ಸಂಸ್ಕೃತಿ ಚರ್ಚೆಗಳು ಐಕ್ಯತೆ ಕಡೆಗೆ ಅಂದರೆ ದೈವದತ್ತ ಇಡುತ್ತಿರುವ ಹೆಜ್ಜೆಗಳೋ ಅಥವಾ ಭಿನ್ನತೆ ತಾರತಮ್ಯದ ಕಡೆಗೆ ಅಂದರೆ ದೆವ್ವದ ಕಡೆಗೆ ಇಡುತ್ತಿರುವ ಹೆಜ್ಜೆಗಳೋ ಎಂದು ನೋಡುತ್ತಿತ್ತು. ಒಂದು ಗುಡಿ, ಚರ್ಚ್, ಮಸೀದಿ, ಮಠಗಳಲ್ಲಿ ಭಿನ್ನತೆ ತಾರತಮ್ಯ, ಅಸ್ಪೃಶ್ಯತೆ ಇದ್ದರೆ ಅವರು ಪೂಜಿಸುತ್ತಿರುವುದು ದೆವ್ವವನ್ನು

ಎಂಬುದು ಕಾಣುತ್ತಿತ್ತು. ಬಾಬರಿ ಮಸೀದಿ ಬೀಳಿಸಿದವರು ದೇವರ ನಾಮ ಜಪಿಸುತ್ತಿದ್ದರೂ ಭಿನ್ನತೆಗಾಗಿ ಆ ಕ್ರಿಯೆ ನಡೆದ ದೆಸೆಯಿಂದಾಗಿ ಅವರ ಎದೆಯೊಳಗೆ ದೆವ್ವ ಕುಣಿಯುವುದು ಕಾಣಿಸುತ್ತಿತ್ತು. ತಾರತಮ್ಯ ಅಂತರ ಹೆಚ್ಚಿಸುವ ಒಂದು ಕಾನೂನು ಅಥವಾ ಒಂದು ಕಾರ್ಯಕ್ರಮ ದೈವದಿಂದ ದೂರವಾಗುತ್ತಿರುವ ಪ್ರಕ್ರಿಯೆಯಾಗಿ ಕಂಡು ಅದಕ್ಕಾಗಿ ಅದನ್ನು ಪ್ರತಿಭಟಿಸಲು ಪ್ರೇರೇಪಿಸುತ್ತಿತ್ತು.

ಈಗ ದೈವ ಮತ್ತು ದೆವ್ವವನ್ನು ಕೈಬಿಟ್ಟು ಐಕ್ಯತೆ ಹಿಡಿದುಕೊಂಡು ಇಂದಿನ ಅಗತ್ಯವಾದ ಗಾಂಧಿ, ಅಂಬೇಡ್ಕರ್ ಬಳಿಗೆ ಬರುವೆ.

ಇಂದು ಗಾಂಧಿ ಮತ್ತು ಅಂಬೇಡ್ಕರ್ ಅವರ ಕೃತಿ ಮತ್ತು ವ್ಯಕ್ತಿತ್ವಗಳು ಪ್ರಭಾವಿಸುತ್ತಿರುವ ರೀತಿಗಳು ಬೇರೆ ಬೇರೆಯಾಗೇ ಇವೆ. ಇದನ್ನು ಅರ್ಥಮಾಡಿಕೊಳ್ಳಲು ಗೆಳೆಯ ಸಿದ್ಧಲಿಂಗಯ್ಯನವರ ಗ್ರಹಿಕೆ: ಅಜ್ಜ ಮೊಮ್ಮಗನಿಗೆ ಗಾಂಧಿಯ ಬಗ್ಗೆ ಹೇಳುತ್ತಾನೆ– 'ನಮ್ಮ ಕಾಲದಲ್ಲಿ ಮಹಾತ್ಮಾಗಾಂಧಿ ಅಂತ ಒಬ್ಬರು ಇದ್ದರು. ಅವರು ಬ್ರಿಟೀಷರನ್ನು ಓಡಿಸಿ ಸ್ವಾತಂತ್ರ್ಯವನ್ನು ತಂದುಕೊಟ್ಟರು. ನಾವು ಈಗ ಇರುವ ಸ್ಥಿತಿಗತಿಗೆ ಗಾಂಧಿನೇ ಕಾರಣ'. ಅದೇ ಅಂಬೇಡ್ಕರ್ ಬಗ್ಗೆ ಮೊಮ್ಮಗ ಅಜ್ಜನಿಗೆ ಹೇಳುತ್ತಾನೆ– 'ಅಜ್ಜಾ ನೀನು ಚಿಕ್ಕವನಿದ್ದಾಗ ಅಂಬೇಡ್ಕರ್ ಅಂತ ನಮ್ಮವರೊಬ್ಬರು ಇದ್ದರು. ಅವರು ನಮ್ಮ ಜನಾಂಗಕ್ಕಾಗಿ ತುಂಬಾ ಹೋರಾಡಿದರು. ನಾವು ಈಗ ಇರುವ ಸ್ಥಿತಿಗತಿಗೆ ಅಂಬೇಡ್ಕರ್ ಕಾರಣ.' ಗಾಂಧಿ ಬಗ್ಗೆ ಮಾಗಿದ ಹಣ್ಣು ಹೀಚಿಗೆ ಹೇಳಿದರೆ, ಅಂಬೇಡ್ಕರ್ ಬಗ್ಗೆ ಹೀಚು ಮಾಗಿದ ಹಣ್ಣಿಗೆ ಹೇಳುತ್ತದೆ! ಹಾಗಾಗಿ ಮೊದಲದರಲ್ಲಿ ನಿಧಾನತೆ ಇದ್ದರೆ ಎರಡನೆಯದರಲ್ಲಿ ವೇಗ ಇದೆ. ಈ ನಡಿಗೆಯಿಂದಾಗಿ ಒಂದೇ ಆಶಯವು ಪರಸ್ಪರ ವಿರುದ್ಧವಾಗಿ ಕಾಣಲೂಬಹುದು. ದಲಿತರ ಮೊದಲ ವಿದ್ಯಾವಂತ ತಲೆಮಾರು ಗಾಂಧಿ ಅಂಬೇಡ್ಕರರ ಆಶಯಗಳ ನಾಡಿ ಹಿಡಿದು ಈ ಬಿಕ್ಕಟ್ಟಿನಿಂದ ಪಾರಾಗಿತ್ತು ಎಂದು ಕಾಣುತ್ತದೆ. ಯಾಕೆಂದರೆ ದಲಿತರ ನವಪೀಳಿಗೆ ಅಂಬೇಡ್ಕರ್ ಫೋಟೋ ಮಾತ್ರ ಇಟ್ಟುಕೊಂಡರೆ ದಲಿತರ ಹಿಂದಿನ ತಲೆಮಾರು ಗಾಂಧಿ ಮತ್ತು ಅಂಬೇಡ್ಕರ್ ಈ ಇಬ್ಬರ ಫೋಟೋಗಳನ್ನೂ ಇಟ್ಟುಕೊಂಡಿರುತ್ತಿತ್ತು.

ಹಾಗಾದರೆ ದಲಿತರ ಹಿಂದಿನ ತಲೆಮಾರು ಗಾಂಧಿ, ಅಂಬೇಡ್ಕರ್‌ರ ಜಗಳವನ್ನು ಹೇಗೆ ಕಂಡಿತ್ತು? ಮಕ್ಕಳ ಹಿತಕ್ಕಾಗಿ ಎಂದುಕೊಂಡು ಜಗಳಮಾಡುವ ಅಪ್ಪ ಅಮ್ಮನಂತೆ? ಹೀಗಲ್ಲದಿದ್ದರೆ ಈ ಇಬ್ಬರ ಫೋಟೋಗಳನ್ನು ಒಟ್ಟಿಗೆ ಇಟ್ಟುಕೊಳ್ಳಲು ಹೇಗೆ ಸಾಧ್ಯ? ಉದಾ: ಮಗುವನ್ನು ಕನ್ನಡ ಮಾಧ್ಯಮಕ್ಕೆ

ಸೇರಿಸಬೇಕು ಅಂತ ಅಪ್ಪ ವಾದಿಸುತ್ತಾನೆ. ಇಂಗ್ಲಿಷ್ ಮಾಧ್ಯಮಕ್ಕೆ ಸೇರಿಸಬೇಕು ಅಂತ ಅಮ್ಮ ವಾದಿಸುತ್ತಾಳೆ. ಜಗಳವಾಗುತ್ತದೆ. ಆದರೆ ಜಗಳದಲ್ಲಿ ಏನಿದೆ? ಮಗುವಿನ ಹಿತವೇ ಅಲ್ಲವೆ? ಪೂನಾ ಒಪ್ಪಂದದಲ್ಲೂ ಏನಿದೆ? 'ನನ್ನಲ್ಲಿ ತಪ್ಪಿದೆ, ನಿಜ. ಹಾಗಂತ ಡೈವೋರ್ಸ್ ಕೊಡಬೇಡ' ಎಂಬುದು ತಾನೆ?

ಹಾಗೆ ಹಿಂದೂ ಧರ್ಮಕ್ಕೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಗಾಂಧಿ ಮತ್ತು ಅಂಬೇಡ್ಕರ್‌ರನ್ನು ಪರಸ್ಪರ ವಿರೋಧಿಗಳನ್ನಾಗಿಸುತ್ತೇವೆ. ಅಂಬೇಡ್ಕರ್ ಅವರದು ತಾರ್ಕಿಕ ದೃಷ್ಟಿಕೋನವಾದರೆ ಗಾಂಧಿಯವರು ತರ್ಕಾತೀತ ದೃಷ್ಟಿಕೋನದವರು. ಹಾಗಾಗಿ ಸಮಕಾಲೀನರ ನಡುವೆ ಜಗಳವೂ ನಡೆಯಬಹುದು. ಇದನ್ನು ನಾವು ಪರಿಣಾಮದಲ್ಲಿ ನೋಡಬೇಕು. ಯಾಕೆ ಉಗ್ರ ಹಿಂದೂ ಗೋಡ್ಸೆ ಗಾಂಧಿಯನ್ನು ಕೊಂದ? ಗಾಂಧಿ ಸತ್ತಾಗ ಬ್ರಾಹ್ಮಣ ವಠಾರವು 'ವರ್ಣಸಂಕರ ಮಾಡುವ ಕಲ್ಕಿಯ ಅವತಾರ ಸಧ್ಯ ಕೊನೆಗೊಂಡಿತು' ಎಂದು ಯಾಕೆ ಸಮಾಧಾನಪಟ್ಟಿತು? ಹೀಗಾದರೆ ಗಾಂಧಿ ಹಿಂದೂ ಧರ್ಮದಲ್ಲಿ ಮಾಡುತ್ತಿದ್ದುದಾದರೂ ಏನು? ಗಾಂಧಿ ಅಸಮಾನತೆಯ ಹಿಂದೂಧರ್ಮ ಎಂಬ ಬಚ್ಚಲ ಕೊಳಕು ನೀರನ್ನು ಭಟ್ಟಿ ಇಳಿಸುತ್ತ ತಿಳಿಗೊಳಿಸುತ್ತಿದ್ದರು. ಚಿಟ್ಟೆಯಾಗಲಾರದ ಬಚ್ಚಲು ಹುಳುಗಳಿಗೆ ಉಸಿರು ಕಟ್ಟಿತ್ತು. ಇದನ್ನು ಹೀಗಲ್ಲದೆ ಬೇರೆ ಯಾವ ರೀತಿ ಅರ್ಥಮಾಡಿಕೊಳ್ಳಲು ಸಾಧ್ಯ? ಕೊನೆ ಕೊನೆಯಲ್ಲಿ ಅಂತರ್ಜಾತೀಯ ಮದುವೆಗೆ ಮಾತ್ರ ಹೋಗಿ ಆಶೀರ್ವದಿಸುವ ನಿಲುವಿಗೆ ಬರುವ ಗಾಂಧಿಯನ್ನು ಮತ್ತೆ ಹೇಗೆ ಅರ್ಥಮಾಡಿಕೊಳ್ಳಬೇಕು?

ಹೀಗೆ ಕಾಣಿಸುತ್ತದೆ: ಹಿಂದೂ ಧರ್ಮ ಎಂಬ ಮನೆಯೊಳಗೆ ಭಿನ್ನಭಾವ ಜಾತಿ ತಾರತಮ್ಯದ ಕಂಬಗಳನ್ನು ಒಳಗೊಳಗೇ ಕೊಯ್ಯುವವನಂತೆ ಗಾಂಧಿ ಕಾಣಿಸುತ್ತಾರೆ. ಅದೇ ಅಂಬೇಡ್ಕರ್ ಹೊರಗಿನಿಂದ ಆ ಅಸಮಾನತೆಯ ಮನೆಗೆ ಕಲ್ಲೆಸೆಯುವವನಂತೆ ಕಾಣಿಸುತ್ತಾರೆ. ಈ ಪ್ರಕ್ರಿಯೆಯಿಂದಾಗಿ ಅಂಬೇಡ್ಕರ್ ಎಸೆದ ಕಲ್ಲು ಒಳಗಿದ್ದ ಗಾಂಧಿಗೂ ಬಿದ್ದು ರಕ್ತ ಚೆಲ್ಲಿರಬಹುದು. ಇದನ್ನು ಕಂಡು ಹೊರಲೋಕವು ಗಾಂಧಿಗೂ, ಅಂಬೇಡ್ಕರ್‌ಗೂ ಮಾರಾಮಾರಿ ಹೊಡೆದಾಟ ಎನ್ನಬಹುದು. ಆದರೆ ಇಬ್ಬರೂ ಮಾಡುತ್ತಿದ್ದುದು ಹೆಚ್ಚೂಕಮ್ಮಿ ಒಂದೇ ಕೆಲಸವನ್ನಲ್ಲವೇ?

ಹೀಗಿದ್ದೂ ಗಾಂಧಿ ಯಾಕೆ ಅಪಾರ್ಥಕ್ಕೆ ಒಳಗಾದರು? ಒಂದು ಊಹೆ ಮಾಡುವೆ. ಗಾಂಧಿ ಅಸ್ಪೃಶ್ಯರನ್ನು ಮಕ್ಕಳು ಎಂಬಂತೆ ಭಾವಿಸಿ ವರ್ತಿಸುತ್ತಿದ್ದರು. ಈ ವರ್ತನೆಯನ್ನು ಉಲ್ಟಾ ಮಾಡಿದರೆ, ಅಂದರೆ ಗಾಂಧಿ ಅಸ್ಪೃಶ್ಯರನ್ನು ಪಿತೃಗಳೆಂಬಂತೆ ಭಾವಿಸಿ ವರ್ತಿಸಿದ್ದರೆ ಈ ಅಪಾರ್ಥದಿಂದ

ತಪ್ಪಿಸಿಕೊಳ್ಳಬಹುದಿತ್ತು ಎಂದು ನನಗನ್ನಿಸುತ್ತದೆ. ಇದು ಮೇಲ್ನೋಟಕ್ಕೆ ಸರಳವಾಗಿ ಒಂದೇ ಎಂಬಂತೆ ಕಂಡರೂ ಈ ನೋಟವು ನಡಾವಳಿಯನ್ನೇ ಬದಲಿಸಿಬಿಡುತ್ತದೆ. ಉದಾಹರಣೆಗೆ ಅಸ್ಪೃಶ್ಯರಿಗೂ ಸವರ್ಣೀಯರಿಗೂ ಸ್ಪರ್ಧೆ ಸವಾಲು ಬಂದಾಗ– ಮಕ್ಕಳಂತೆ ಭಾವಿಸಿದ ಮನಃಸ್ಥಿತಿ ಇದ್ದರೆ 'ಎಲಾ ನಾನು ಸಾಕಿದವನ ಕೊಬ್ಬೆ' ಎಂದು ಕ್ರೋಧ, ಅಸಹನೆ ಉಂಟಾಗುತ್ತದೆ. ಅದೇ ತಂದೆತಾಯಿಯಂತೆ ಭಾವಿಸಿದ ಮನಃಸ್ಥಿತಿ ಇದ್ದರೆ 'ನನ್ನನ್ನು ಸಾಕಿದವನು; ನಾನೆ ಸೋತರೆ ಏನಾಯ್ತು?' ಎಂಬ ಭಾವನೆ ಉಂಟಾಗುತ್ತದೆ. ದಲಿತರು ಆದಿಮ ಜನಾಂಗವಾದ್ದರಿಂದ ಈ ಪಿತೃ ಭಾವನೆಯೇ ಚಾರಿತ್ರಿಕವಾಗೂ ಸರಿ ಅನ್ನಿಸುತ್ತದೆ.

ಇಂಥ ಗಾಂಧಿಯನ್ನು ದಲಿತರು ಹೇಗೆ ಸ್ವೀಕರಿಸಬೇಕು? ಗಾಂಧಿಗೆ ಮುಂದಿನ ಜನ್ಮದಲ್ಲಿ ತಾನು ಹರಿಜನನಾಗಿ ಹುಟ್ಟಬೇಕು ಎಂಬ ಆಸೆ ಇತ್ತಂತೆ. ಹುಟ್ಟಿದರೆ ಒಳ್ಳೆಯದು, ಹುಟ್ತಾರೋ ಇಲ್ವೋ ಗೊತ್ತಿಲ್ಲ. ಆದರೆ ಒಂದು ಮಾಡಬಹುದು– ಗಾಂಧಿ ಸಾಹಿತ್ಯವನ್ನು ದಲಿತನ ಒಡಲಿಗೆ, ಹಿತಾಸಕ್ತಿಗೆ ಎಷ್ಟು ಒಗ್ಗುತ್ತದೋ ಅಷ್ಟನ್ನು ಮಾತ್ರ ಸಂಪಾದಿಸಿ ಇಟ್ಟುಕೊಂಡರೆ ಅಲ್ಲಿಂದ ಗಾಂಧಿ ಮತ್ತೆ ಹುಟ್ಟುತ್ತಾನೆ. ಇಡೀ ಜಗತ್ತಿನ ಹಿತವೂ ಇದರೊಳಗೆ ಇರಬಹುದು.

ಹೀಗೆ ಮಾಡುವಾಗ ಒಂದು ಎಚ್ಚರ ಬೇಕು. ನಿನ್ನೆಯ ಗಾಂಧಿ ಇಂದಿಗೆ ಬದಲಾಯಿಸಿರುತ್ತಾನೆ. ಇಂದಿನ ಗಾಂಧಿ ನಾಳೆಗೆ ಬದಲಾಯಿಸಿರುತ್ತಾನೆ. ಈ ನಡಿಗೆಯ ಕ್ರಮದಲ್ಲೇ ಗಾಂಧಿಯ ಆಸೆ–ಚಿಂತನೆಗಳಿಗೂ ನಡಿಗೆ ಇದೆ. ಇಡೀ ಸಮುದಾಯವನ್ನು ತನ್ನ ಜತೆಯಲ್ಲೇ ಕರೆದೊಯ್ಯುವವನ ಕಷ್ಟ ಇದಾಗಿರಬಹುದು. ಇದರಿಂದಾಗಿ ಬೇಕಾದವರು, ಬೇಕಾದ್ದನ್ನು ತೆಗೆದುಕೊಂಡು ಇದೇ ಗಾಂಧಿ ಎನ್ನುವ ಸಾಧ್ಯತೆಗಳು, ದುರುಪಯೋಗಗಳು ಹೆಚ್ಚಿವೆ. ಆದ್ದರಿಂದ ಗಾಂಧಿಯ ಗುರಿ ಹಾಗೂ ಗಾಂಧಿ ಇಟ್ಟ ಕೊನೆಯ ಹೆಜ್ಜೆಗಳ ಗುರುತು ಹಿಡಿದು ಗಾಂಧಿಯನ್ನು ಪುನರ್ ರೂಪಿಸಬೇಕು. ಇದಕ್ಕೆ ಲೋಹಿಯಾರ ವಿವೇಕ ಚಿಂತನೆ ಸಹಾಯಕವಾಗುತ್ತವೆ. ಹೀಗೆ ಗಾಂಧಿಗೆ ಲೋಹಿಯಾ ಕೂಡಿಸಿದ ಮೇಲೆ ಲೋಹಿಯಾಗೆ ಅಂಬೇಡ್ಕರ್ ಜೊತೆಗೂಡಿಸಿ ಒಂದು ಸಾಮರಸ್ಯ ಪಡೆಯಬಹುದು.

ಈ ಬೆಳಕು ದಸಂಸ, ರೈತಸಂಘದಂಥ ಸಂಘಟನೆಗಳಿಗೆ ಕಣ್ಣಾಗಬಹುದು. ಈ ಸಂಘಟನೆಗಳು ಇತ್ತೀಚಿನ ದಿನಗಳಲ್ಲಿ ಸಮುದಾಯಕ್ಕೆ ಚಾಲನೆ ಕೊಟ್ಟು ಒಂದು ಸುತ್ತು ನಡೆದು ಬಂದು, ಈಗ ಜಡವಾಗಿ ಸುಸ್ತಾಗಿ ಮುಂಗಾಣದೆ

ನಿಂತಿವೆ. ಈಗ ಇವು ಪೊರೆ ಕಳಚಬೇಕಾಗಿದೆ. ಇಲ್ಲಿ ಒಂದು ಮಾತು– ಈಗೀಗ ಬುದ್ಧ, ಬಸವ, ಅಲ್ಲಮ, ಗಾಂಧಿ ಇಂಥ ಮಾತುಗಳು ಹೆಚ್ಚಾಗಿ ಕೇಳಿಬರುತ್ತಿವೆ. ಇಂಥವರ ಹೆಸರು ಹೇಳುವಾಗ ಸದಾ ನೆನಪಿಟ್ಟುಕೊಳ್ಳಬೇಕಾದ್ದು ಏನೆಂದರೆ – ಬುದ್ಧ, ಬಸವ, ಅಲ್ಲಮ, ಗಾಂಧಿಯಂಥವರು ತಮ್ಮ ಶತ್ರು ತಮ್ಮ ಒಳಗೂ ಇದ್ದಾನೆ ಎಂದು ಭಾವಿಸಿ ಹೆಣಗುತ್ತಿದ್ದರು. ಆಸೆ, ದ್ವೇಷ, ಅಸೂಯೆ, ನಾನತ್ವ ಇಂಥವು ತಮ್ಮ ಒಳಗಿನ ಶತ್ರು ಎಂದು ಭಾವಿಸುತ್ತಿದ್ದರು. ಆದರೆ ಸಮಾನತೆಗಾಗಿ ಹೋರಾಡುವ ಸಂಘಟನೆಗಳು ತಮ್ಮ ಶತ್ರು ಹೊರಗೆ ಇದ್ದಾನೆ ಎಂದು ಮಾತ್ರ ಹೋರಾಡುತ್ತಿವೆ. ಇದು ಎಲ್ಲಿಗೆ ತಂದು ನಿಲ್ಲಿಸುತ್ತದೆ? ಇಂದಿನ ಭ್ರಷ್ಟಾಚಾರ ವಿರೋಧಿಯೇ ನಾಳಿನ ಭ್ರಷ್ಟ ಎಂಬಲ್ಲಿಗೆ ನಾವೂ ತಲುಪಿಬಿಡಬಹುದು. ಯಾವುದನ್ನು ನಾವು ಇಂದು ವಿರೋಧಿಸುತ್ತೇವೆಯೋ ನಾಳೆ ನಾವು ಅದೇ ಆಗಬಹುದಾದರೆ ಮಾಡಿದ್ದಾದರೂ ಏನು?

ಅದಕ್ಕಾಗಿ ನಾವು ಒಂದು ಮಧ್ಯಮ ಮಾರ್ಗ ಕಂಡುಕೊಳ್ಳಬೇಕಾಗಿದೆ. ನಮ್ಮ ಶತ್ರು ನಮ್ಮ ಒಳಗೂ ಅರ್ಧ ಇದ್ದಾನೆ, ನಮ್ಮ ಹೊರಗೂ ಅರ್ಧ ಇದ್ದಾನೆ– ಈ ತಿಳಿವು ಈ ಎಚ್ಚರ ದಸಂಸ ರೈತಸಂಘಕ್ಕೆ ಹೊಸ ನಡಿಗೆ ನುಡಿ ಕೊಡಬಹುದೆ? ಆಗ ಬಹಿರಂಗದ ಹೋರಾಟಕ್ಕೆ ಕೊಟ್ಟ ಕಾಲವನ್ನು, ತನ್ನ ಅಂತರಂಗದ ಶತ್ರು ನಿರುಕಿಸಿ ಅದನ್ನೂ ಚಿವುಟಿ ಹಾಕುವುದಕ್ಕೂ ಅಷ್ಟೇ ಕಾಲ ಕೊಡಬೇಕಾಗುತ್ತದೆ. ನಾವು ಯಾವ ವ್ಯಕ್ತಿ, ವಸ್ತು ಗುಣಗಳ ಬಗ್ಗೆ ಈಗ ಅಸಹನೆ ಪ್ರತಿಭಟನೆ ಮಾಡುತ್ತಿರುತ್ತೇವೆಯೋ ಅದು ನಮ್ಮೊಳಗೂ ಇರಬಹುದಾದ ಎಚ್ಚರ ನಮ್ಮದಾಗುತ್ತದೆ. ಇದಾಗುತ್ತದೆಯೆ?

ಅಥವಾ ಇದು ಬಿಟ್ಟು ಬೇರೆ ದಾರಿ ಇದೆಯೇ?

## ಆ ದಶಕ – ಬಿಡುಗಡೆಯ ಮಾತು

ನನಗೆ ಆಶ್ಚರ್ಯ ಕಾದಿತ್ತು– ನಾನು ಮನೆಗೆ ಬಂದಾಕ್ಷಣ ನನ್ನ ಪತ್ನಿ ಸುಮಿತ್ರಾ 'ಶಾಮಣ್ಣ ಫೋನ್ ಮಾಡಿದ್ದರು. ಅವರ ಪುಸ್ತಕದ ಬಿಡುಗಡೆ ಅಂತೆ. ಹೋಗಿದ್ದು ಬನ್ನಿ' ಅಂದರು. ನಾನು ಯಾವುದಾದರೂ ಭಾಷಣಕ್ಕೆ ಒಪ್ಪಿ, ಬಿಪಿ ಶುಗರ್ ಹೆಚ್ಚಿಸಿಕೊಂಡು ನರಳುವುದನ್ನು ಕಣ್ಣಾರೆ ಕಾಣುತ್ತ 'ಯಾಕಾರು ಒಪ್ಪಿಕೊಳ್ಳುತ್ತಿ' ಅನ್ನುತ್ತಿದ್ದ ಸುಮಿತ್ರಾ, ನಮ್ಮ 35 ವರ್ಷಗಳ ದಾಂಪತ್ಯದ ಸರ್ವೀಸ್‌ನಲ್ಲಿ 'ಹೋಗಿದ್ದು ಬನ್ನಿ' ಎಂದು ಹೇಳಿದ್ದು ಇದೇ ಪ್ರಪ್ರಥಮ. ಆಗ ನನಗೆ ಅನ್ನಿಸಿಬಿಟ್ಟಿತು– ಈ ಕಡಿದಾಳು ಶಾಮಣ್ಣ ತುಂಬಾ ಪ್ರಭಾವಶಾಲಿ ಅಂತ. ಅಸಹಾಯಕನಾಗಿ ದೂಸರಾ ಮಾತಾಡದೆ ಈಗ ಇಲ್ಲಿ ಬಂದು ನಿಂತಿದ್ದೇನೆ.

ಯಾವ ರೀತಿಯ ಪುಸ್ತಕ ಆಗುತ್ತದೆ ಇದು? ಕೆಲವು ಪತ್ರಗಳು, ಸಂದರ್ಶನ, ಪತ್ರಿಕಾ ವರದಿಗಳು ಸೇರಿ ಆಗುವ ಪುಸ್ತಕ ಪರಿಣಾಮಕಾರಿ ಆಗುವುದಿಲ್ಲವೇನೋ ಎಂಬ ಅನುಮಾನ ನನಗಿತ್ತು. ಇಲ್ಲೂ ನನಗೆ ಆಶ್ಚರ್ಯ ಕಾದಿತ್ತು. ಪುಸ್ತಕ ಓದಿದ ಮೇಲೆ ನನ್ನ ಅನಿಸಿಕೆ ಬುಡಮೇಲಾಯ್ತು. ಸರಳವಾಗಿ, ನೇರವಾಗಿ, ಸತ್ಯವಾಗಿ ಆ ದಶಕ ನನ್ನ ಕಣ್ಮುಂದೆ ಬಂತು. ಬಹುಶಃ ಇದಕ್ಕೆ ಕಾರಣ ಇವು ಅಂತಃಕರಣದ ಸ್ಪಂದನಗಳಾಗಿದ್ದು ಇವು ಪ್ರಾಮಾಣಿಕತೆ ನಿಸ್ವಾರ್ಥತೆಯಿಂದ ಕೂಡಿರುವುದೇ ಕಾರಣವಾಗಿರಬಹುದು. ಇಲ್ಲಿನ–ರೈತರ ಗಾಂಧಿ ಕಂಬಿಕಿತ್ತ ಪ್ರಸಂಗ, ಚಂದ್ರಗುತ್ತಿ ಜಾತಿ ಕ್ರೌರ್ಯ, ಮಾರಮ್ಮನಿಗೆ ನೀರು ಕೊಡದ ಪ್ರಸಂಗ– ಈ ವರದಿಗಳು ತಮ್ಮ ವರದಿತನವನ್ನು ಮೀರಿಕೊಂಡು ಉತ್ತಮ ಬರವಣಿಗೆಗೆ ಮಾದರಿಗಳಾಗಿ ನಿಲ್ಲುತ್ತವೆ.

ಒಂದು ದೃಶ್ಯ ಸದಾ ನನಗೆ ನೆನಪಾಗುತ್ತದೆ– ಶಾಮಣ್ಣನವರನ್ನು ರೈತಸಂಘದ ರಾಜ್ಯ ಸಮಿತಿಯಿಂದ ಹೊರಹಾಕಲಾಗಿತ್ತು. ಯಾವುದೋ ಒಂದು ಸಭೆ. ಸ್ಥಳ, ಸಂದರ್ಭ ಮರೆತುಬಿಟ್ಟಿದ್ದೇನೆ. ರಾತ್ರಿ. ಶಾಮಣ್ಣನವರು ತಮ್ಮ ಚೀಲವನ್ನು ತಲೆಗಿಟ್ಟುಕೊಂಡು ಶ್ರೀಕೃಷ್ಣ ಪರಮಾತ್ಮನು ದನ ಕಾಯುತ್ತ ಒಂದು ಮಂಡಿ ಎತ್ತರಿಸಿ ಅದರ ಮೇಲೆ ಇನ್ನೊಂದು ಕಾಲಿಟ್ಟು ಮಲಗಿದ ಭಂಗಿಯಲ್ಲಿ ಇದ್ದಾರೆ. ಅವರ ಒಂದು ಕೈ ಕ್ಯಾಮೆರಾ ಹಿಡಿದಿದೆ. ಅವರ ಕಣ್ಣುಗಳು ಮುಚ್ಚಿವೆ. ಆದರೆ ಅವರಿಗೆ ನಿದ್ರೆ ಬಂದಿಲ್ಲ. ಅವರ ತಲೆ ಒಂದು ಕ್ಷಣವೂ ನಿಂತ ಕಡೆ ನಿಲ್ಲುತ್ತಿಲ್ಲ. ಎಡದಿಂದ ಬಲಕ್ಕೆ ಹೊರಳುತ್ತಿತ್ತು. ಬಲದಿಂದ ಎಡಕ್ಕೆ ಹೊರಳುತ್ತಿತ್ತು. ನಾನು ಅದನ್ನು ನೋಡುವುದು, ನೋಡುವುದಕ್ಕೆ ಕಷ್ಟವಾಗೊ ಅಥವಾ ನಿದ್ದೆ ಎಳೆಯುತ್ತಿದ್ದುದರಿಂದಲೋ ಕಣ್ಣುಮುಚ್ಚುತ್ತಿದ್ದೆ. ಕಣ್ಣುಮುಚ್ಚಿದರೂ ಕಷ್ಟವಾಗಿ ಕಣ್ಣು ತೆರೆಯುತ್ತಿದ್ದೆ. ಬಹುಶಃ ಬೆಳಗಿನ ಜಾವದವರೆಗೂ ಹೀಗೆ ಜರುಗಿದೆ.

ಈ ದೃಶ್ಯ ಆಗಾಗ ನನ್ನ ಕಣ್ಮುಂದೆ ನಿಲ್ಲುತ್ತದೆ. ಇತ್ತೀಚೆಗೆ ಅಲ್ಲಿ ಶಾಮಣ್ಣ ಇರುವುದಿಲ್ಲ. ಬದಲಾಗಿ ದಲಿತಸಂಘರ್ಷ ಸಮಿತೀನೋ, ರೈತಸಂಘವೋ ಅಥವಾ ಇನ್ನಾವುದೋ ಪ್ರಗತಿಪರ ಚಳವಳಿ ಒಟ್ಟಿನಲ್ಲಿ ನಾಡಿನ ಸಾಕ್ಷಿಪ್ರಜ್ಞೆ ಹೊರಳಾಡುತ್ತಿರುವಂತೆ ಕಾಣುವ ಭ್ರಮೆಗೆ ಒಳಗಾಗಿದ್ದೇನೆ ನಾನು. ನಾವು ಬೆಳೆದಂತೆ ವಯಸ್ಸಾದಂತೆ ಹೀಗೆಲ್ಲಾ ಯಾಕಾಯ್ತು. ಒಂದು ಸಂಘಟನೆ ಸಾಂಸ್ಥಿಕ ಆಗುತ್ತ ನಡೆದುದರ ಪರಿಣಾಮವೆ ಇದು?

'ಸಹನೆ ಮತ್ತು ಪ್ರೀತಿ ನನ್ನ ಧರ್ಮ' ಇದು ಗಾಂಧಿಯವರ ಮಾತು. ಪ್ರೀತಿ ಇದ್ದ ಕಡೆ ಸಹನೆ ಇದ್ದೇ ಇರುತ್ತದೆ. ಆದರೆ ಸಹನೆ ಬೇಕಾಗಿರುವುದು–ನಾವು ಇಷ್ಟಪಡದ ವ್ಯಕ್ತಿ ಅಥವಾ ವಿಚಾರ ನಮ್ಮ ಕಣ್ಣ ಮುಂದೆಯೇ ಇರಬಾರದು, ಅದು ಧ್ವಂಸವಾಗಬೇಕು ಎಂಬ ಅಪೇಕ್ಷೆ ನಮ್ಮನ್ನು ಆವರಿಸಿದಾಗ. ಆಗ ನಮ್ಮನ್ನು ಕಾಪಾಡಬಹುದಾದದ್ದು ಸಹನೆ ಮಾತ್ರವೇ. ಅದೂ ಧರ್ಮಶ್ರದ್ಧೆಯ ತೀವ್ರತೆಯಲ್ಲಿ ನಮ್ಮ ಆಳಕ್ಕೆ ಇಳಿದಾಗ. ಇಂಥಹ ಸಹನಶೀಲ ಸ್ವಭಾವದವರು ಪ್ರಗತಿಪರ ಸಂಘಟನೆಯ ನಾಯಕರಾಗುವಂತೆ ಎಚ್ಚರ ವಹಿಸಬೇಕಾಗಿದೆ.

ಈ ಸಂದರ್ಭದಲ್ಲೇ ವಚನಕಾರರನ್ನು ನೆನಪಿಸಿಕೊಳ್ಳುತ್ತೇನೆ. ಸುಮಾರು ಜನ ಪ್ರತಿಭಾವಂತರು ಒಂದೇ ಕಾಲದಲ್ಲಿ ಒಟ್ಟಿಗೆ ಇದ್ದ ಅಪೂರ್ವ ಸಂದರ್ಭ. ಪ್ರತಿಯೊಬ್ಬರಿಗೂ ಅವರವರ ಇಷ್ಟದೈವ ಬೇರೆ. ಆರ್ಥಿಕ ಸಾಮಾಜಿಕ ಸ್ಥಾನಮಾನಗಳೂ ಬೇರೆ ಬೇರೆ. ವೃತ್ತಿಗಳೂ ಬೇರೆ ಬೇರೆ. ಆದರೂ ಇನ್ನೊಬ್ಬನ ಉಳಿಯುವಿಕೆಯು ತನ್ನ ಉಳಿಯುವಿಕೆಗೂ ಪೂರಕ ಎಂಬಂತೆ ಅವರಿದ್ದರು.

ಅಹಂ ಇಲ್ಲಿ ವಿಜೃಂಭಿಸಲಿಲ್ಲ. ಎಷ್ಟೋ ಜನ ತಮ್ಮ ಅಂತರಂಗದ ವಿರುದ್ಧವೇ ಯುದ್ಧ ಮಾಡುತ್ತಿದ್ದರು. ಅವರದೊಂದು ಕುಟುಂಬವಾಗಿತ್ತು. ಮನೆಮಠ ಹೆಂಡತಿ ಮಕ್ಕಳನ್ನು ತೊರೆದು ಹಿಮಾಲಯಕ್ಕೆ ಹೋದವರು ಅಲ್ಲೂ ಜಗಳ ಮಾಡುವ ಉದಾಹರಣೆ ಇರುವಾಗ ಇದು ಹೇಗೆ ಸಾಧ್ಯವಾಯ್ತು? ಭೂಮಿ ಮೇಲೆ ಎಲ್ಲಾ ಕಡೆ ಹುಡುಕಿದರೂ ಸಿಗದ, ಆದರೆ ನಾವು ನಡೆದಾಡುತ್ತಿರುವ ನೆಲದಲ್ಲೇ ಜರುಗಿದ ಈ ಅದ್ಭುತವನ್ನು ನಮ್ಮೊಳಗಿಟ್ಟುಕೊಂಡು ನಾವು ಬೆಳಕು ಕಾಣಬೇಕಾಗಿದೆ.

ಈಗ ನಾವು ಬದುಕುತ್ತಿರುವ ಸಂದರ್ಭಕ್ಕೆ ಬಂದರೆ, ನಮ್ಮ ವ್ಯವಸ್ಥೆ, ಪ್ರಭುತ್ವ, ದಿಗಿಲು ಹುಟ್ಟಿಸುವುದನ್ನು ಬಿಟ್ಟು ಬೇರೇನೂ ಕಾಣಿಸುತ್ತಿಲ್ಲ. ಕಳ್ಳತನಕ್ಕೂ ಒಂದು ನೀತಿ ನಿಯಮ ನಾಚಿಕೆ ಇರುತ್ತದಂತೆ. ದರೋಡೆ, ರೌಡಿಸಂಗೂ ಒಂದು ನೀತಿ ನಿಯಮ ನಾಚಿಕೆ ಇರುತ್ತದಂತೆ. ಇಂದು ಈ ಕಳ್ಳತನ ದರೋಡೆಗಳು ತಮ್ಮ ನಾಚಿಕೆ ಬಿಟ್ಟು ಎಲ್ಲಾ ಕ್ಷೇತ್ರದಲ್ಲೂ ಕುಣಿದು ಕುಪ್ಪಳಿಸುತ್ತಿದೆ. ಪ್ರಜಾಪ್ರಭುತ್ವಕ್ಕೆ ನೇಣು ಬಿಗಿಯುವ 'ಆಪರೇಷನ್ ಕಮಲ'ವನ್ನು ಸಮರ್ಥಿಸಿಕೊಂಡು ವಿಜೃಂಭಿಸುವುದರಲ್ಲಿ ಕಿಂಚಿತ್ತಾದರೂ ನಾಚಿಕೆ ಇದೆಯಾ? ಹತ್ತು ವರ್ಷಗಳಲ್ಲೆ ಹತ್ತಾರು ಸಾವಿರಕೋಟಿ ನಾಡಿನ ಸಂಪತ್ತು ನುಂಗಿದ ಗಣಿರೆಡ್ಡಿ ಪಟಾಲಂ ಆಡುವ ಮಾತುಗಳನ್ನು ಕೇಳಿದರೆ, ತಪ್ಪುಮಾಡಿ ತಿದ್ದಿಕೊಳ್ಳಬಹುದಾದ ಮನುಷ್ಯರ ಮಾತುಗಳಂತೆ ಅವು ಕೇಳಿ ಬರುವುದಿಲ್ಲ. ಆಲಿಸಿ ನೋಡಿದ್ದೇನೆ, ನಿಜ–ಮನುಷ್ಯರ ಮಾತುಗಳಂತೆ ಅವರ ಮಾತುಗಳು ಕೇಳಿಬರುವುದಿಲ್ಲ. ಹಾಗೆ ಪ್ರವಾಹಕ್ಕೆ ಸಿಕ್ಕಿ ಉಸಿರು ಹಿಡಿದುಕೊಂಡು ಆಕಾಶ ನೋಡುತ್ತಿರುವ ಜನಸಮುದಾಯ ಕಂಡು ರಾಜ್ಯಪಾಲರು 'ಪರಿಹಾರ ಕಾರ್ಯ ವಿಳಂಬವಾಯ್ತು' ಅಂದರೆ ಮುಖ್ಯಮಂತ್ರಿ 'ವಿಳಂಬವಾಗಿಲ್ಲ' ಅಂತ ಹೇಳುತ್ತಾರೆ. ಇಂಥವರು ನಮ್ಮನ್ನು ಆಳುತ್ತಿದ್ದಾರೆ. ಇವರೆಲ್ಲಾ ತಮ್ಮ ನಾಚಿಕೆ ಸಾಕ್ಷಿಪ್ರಜ್ಞೆಯನ್ನು ಎಲ್ಲಿ ಗಿರವಿಗೆ ಇಟ್ಟಿದ್ದಾರೆ? ಅಥವಾ ಸಾಯಿಸಿಬಿಟ್ಟಿದ್ದಾರೋ ಹೇಗೋ? ಭೀತಿ ಆಗುತ್ತದೆ. ನಮ್ಮ ಚಿಂತನಕಾರರು ಹೆಚ್ಚಿರುವ ವಿಶ್ವವಿದ್ಯಾಲಯಗಳಿಗೆ ಬಂದರೂ ನಮ್ಮ ಭೀತಿ ಹೆಚ್ಚುತ್ತದೆಯೇ ಹೊರತು ಕಮ್ಮಿಯಾಗುವುದಿಲ್ಲ. ತಾರತಮ್ಯವನ್ನು ಮೌಲ್ಯವಾಗಿಸಿದ ಬ್ರಾಹ್ಮಣಿಕೆಯ ಅಪರಾಧಿ ಸ್ಥಾನವನ್ನು ಮರೆ ಮಾಚುವುದಕ್ಕಾಗಿಯೇ ಗೋಸುಂಬೆ ಸಿದ್ಧಾಂತದ ಬಿತ್ತನೆ ಕೆಲಸದಲ್ಲಿ ಕುವೆಂಪು ವಿಶ್ವವಿದ್ಯಾನಿಲಯದ ಕೆಲವರು ಈ ಬುದ್ಧಿಯಿಂದ ಜೀವಿಸುತ್ತಿದ್ದಾರೆ. ಇದಕ್ಕೆ, ಡಿ.ಎಸ್. ನಾಗಭೂಷಣ್ ಮುಂತಾದ ಗೆಳೆಯರು ಟಾಂಗು ಕೊಡುವುದೂ ನಡೆಯುತ್ತಿದೆ.

ಇನ್ನೊಂದು ಕಡೆ– ಲಿಂಗಾಯತ ಜಂಗಮರು, ತಾವೂ ಬೇಡುವ ಜಂಗಮರೆಂದೂ ತಮಗೂ ಬೇಡ ಜಂಗಮರಿಗೂ ವ್ಯತ್ಯಾಸವಿಲ್ಲವೆಂದೂ ಹಾಗಾಗಿ ತಮ್ಮನ್ನೂ ಪರಿಶಿಷ್ಟ ಜಾತಿ ಮೀಸಲಾತಿಗೆ ಸೇರಿಸಬೇಕೆಂದೂ ಮಾನ ಮರ್ಯಾದೆ ನಾಚಿಕೆ ಬಿಟ್ಟು ಗದ್ದಲವೆಬ್ಬಿಸುತ್ತಿದ್ದಾರೆ. ದಲಿತ ಸಂಘಟನೆಗಳು ಒಂದಲ್ಲ ಹತ್ತಾರು ಇವೆ. ಇವು ಕಣ್ಮುಚ್ಚಿ ಕುಳಿತಿವೆ. ಈ ಲಿಂಗಾಯತ ಜಂಗಮರು ತಮ್ಮ ಬೇಡಿಕೆ ಈಡೇರಿಕೆಗಾಗಿ ಕೆಲವು ದಿನಗಳ ಹಿಂದೆ ಬೆಂಗಳೂರಲ್ಲಿ ಒಂದು ಬೃಹತ್ ಸಮಾವೇಶ, ಉಪವಾಸ ಸತ್ಯಾಗ್ರಹ ಇತ್ಯಾದಿಗಳ ಸಿದ್ಧತೆ ಮಾಡುತ್ತಿದ್ದು ಅದನ್ನು ಅವರ ಅದೃಷ್ಟಕ್ಕೆ ಮುಂದೂಡಿದರು. ಆ ಸಂದರ್ಭದಲ್ಲಿ ಬುಡ್ಗ ಜಂಗಮ ಸಮುದಾಯಕ್ಕೆ ಸೇರಿದ ಪ್ರಜ್ಞಾವಂತ ಗೆಳೆಯ ಬಾಲಗುರುಮೂರ್ತಿಯವರು ಅವರ ಆತಂಕವನ್ನು ನನ್ನಲ್ಲಿ ಹಂಚಿಕೊಳ್ಳುತ್ತಿದ್ದರು– 'ಸಾರ್, ಲಿಂಗಾಯತ ಜಂಗಮರು ಸಾವಿರ ಸಾವಿರ ಸೇರ್ತಾ ಇದ್ದಾರೆ. ನಮ್ಮ ಬುಡ್ಗ ಜಂಗಮರು ನಿಂತ ಕಡೆ ನಿಲ್ಲಲ್ಲ. ಚೆಲ್ಲೋಗಿರುತ್ತಾರೆ. ಸೇರಿಸೋದು ಕಷ್ಟ. ಹೇಗೆ ಪ್ರತಿಭಟಿಸುವುದು?' –ಇದು ಅವರ ತಲೆ ತಿಂತಿತ್ತು. ನನಗೂ ಏನೂ ತೋಚದೆ ಸುಮ್ಮನಿದ್ದೆ. ಆಗ ನನಗೆ ಒಂದು ದರ್ಶನ ಆಯಿತು, ಅದನ್ನ ಅವರಿಗೆ ಹೀಗೆ ಹೇಳಿದೆ– 'ನೀವೇನೂ ಯೋಚನೆ ಮಾಡಬೇಡಿ, ಪ್ರತಿಭಟಿಸುವುದಕ್ಕೆ ಕೇವಲ ಬೆರಳೆಣಿಕೆ ಜನ ಸಾಕು. ನಾಡಿನ ಕೆಲ ಪ್ರಜ್ಞಾವಂತರೂ ಕೂಡುತ್ತಾರೆ. ನಾನೂ ಬರುವೆ. ನಾವು ಇಷ್ಟು ಮಾಡೋಣ– 'ನಮ್ಮ ಬಂಧುಗಳಾದ ವೀರಶೈವ ಜಂಗಮರು ನಮ್ಮ ಜೊತೆ ಪರಿಶಿಷ್ಟ ಜಾತಿಗೆ ಸೇರಲು ಪಾಪ ಉಪವಾಸ ಕೂತಿದ್ದಾರೆ. ಅವರಿಗೆ ನಮ್ಮ ಸಂಪ್ರದಾಯದ ಪೂಜೆಯ ನೈವೇದ್ಯ– ತ್ವಾಡದ (ಗದ್ದೆ ಇಲಿ) ಬಾಡು ಹಾಗೂ ಹೆಂಡವನ್ನು ಉಣಬಡಿಸಿ ಏನೊ ನಮ್ಮ ಕೈಲಾದಷ್ಟು ಸೇವೆ ಮಾಡೋಣ' –ಹೀಗೆಂದು ಹೇಳುತ್ತ ಟ್ರಾಫಿಕ್‌ಗೆ ತೊಂದರೆ ಆಗದಂತೆ ಒಂಟಿ ಸಾಲಿನ ಮೆರವಣಿಗೆಯಲ್ಲಿ ನಡೆಯೋಣ ಅಂದೆ. ಆಮೇಲೆ ಹೇಳಿದೆ– 'ಹೇಗೂ ಪೊಲೀಸರು ಬಿಡಲ್ಲ. ನಿಮ್ಮ ಬುಡ್ಗ ಜಂಗಮರು ಹೇಗೊ ಎತ್ತೋ ನನಗೆ ಗೊತ್ತಿಲ್ಲ. ನನಗೂ ಸ್ವಲ್ಪ ಆಹಾರ ಪಾನೀಯ ಜೋಪಾನವಾಗಿ ಎತ್ತಿಟ್ಟಿರಿ!' ಎಂದಿದ್ದೆ. ಆ ಗೆಳೆಯ ಪಾಪ ಅಷ್ಟಕ್ಕೇ ಸಮಾಧಾನಗೊಂಡರು.

ಈ ಜಂಗಮರದಾದ ಮೇಲೆ ಭಾರತವನ್ನು ಪ್ರಕಾಶಿಸುತ್ತ ಇರುವ ಐ.ಟಿ ಕ್ಷೇತ್ರದ ನಿರ್ಲಜ್ಜತೆಯನ್ನು ಮುಟ್ಟಿ ಈ ನಿರ್ಲಜ್ಜತಾ ಪ್ರಕರಣ ಮುಗಿಸುತ್ತೇನೆ. ಕತೆಯಾಗಿ ಚೆನ್ನಾಗಿರುವ 'ಹಲೋ ಭಾರತಿ' ಎಂಬ ವಸುಧೇಂದ್ರರ ಕತೆಯ ವಸ್ತು ಹೀಗಿದೆ.

ಭಾರತದ ಒಂದು ಕಂಪೆನಿಗೆ ಪರದೇಶದಿಂದ ಒಂದು ಹೊರಗುತ್ತಿಗೆ ಕೆಲಸ ಸಿಗುತ್ತದೆ. ಕೆಲಸ ಇದು– ಭಾರತ ಕಂಪೆನಿಯ ಗೌರವಾನ್ವಿತ ನೌಕರರು ಹೊರ ದೇಶದ ಗ್ರಾಹಕರಿಗೆ ಫೋನ್ ಮೂಲಕ ಮಾತಾಡಿ – ಏನೆಂದರೆ, ಅಲ್ಲಿನ ಹೆಣ್ಣಿಗೆ ಇಲ್ಲಿನ ಗಂಡು ಕಾಮೋದ್ರೇಕದ ಮಾತಾಡಿ ಅವಳು ಸ್ಖಲಿಸುವಂತೆ ಮಾಡಬೇಕು. ಹಾಗೆ ಅಲ್ಲಿನ ಗಂಡಿಗೆ ಇಲ್ಲಿನ ಹೆಣ್ಣು ಕಾಮೋದ್ರೇಕದ ಮಾತಾಡಿ ಆತ ಸ್ಖಲಿಸುವಂತೆ ಮಾಡಬೇಕು. ಇದು ಉದ್ಯೋಗ. ಇದಕ್ಕಾಗಿ ಟ್ರಯಲ್ ಅಂಡ್ ಎರರ್ ಆಗುತ್ತದೆ. ಆಗಿ, ಈ ಕಾರ್ಯದಲ್ಲಿ ಭಾರತದ ಕಂಪೆನಿ ಯಶಸ್ವಿಯಾಗುತ್ತದೆ. ಈ ಯಶಸ್ಸಿಗೆ ಭಾರತದ ನೌಕರರು ಕುಣಿದು ಕುಪ್ಪಳಿಸುತ್ತಾರೆ. ಕುಣಿದು ಕುಪ್ಪಳಿಸಿದ್ದೇನು? ನಿರ್ಲಜ್ಜ ಕುಣಿತ. ಇವುಗಳೆಲ್ಲಾ ಅಭಿವೃದ್ಧಿ ಎನಿಸಿಬಿಟ್ಟಿದೆ. ಅಭಿವೃದ್ಧಿ ಎಂದರೆ ಇದು– ಅದು ನಿರ್ಲಜ್ಜತೆಯದು ಹಾಗೂ ಅಸಮಾನತೆಯದು ಮಾತ್ರ..

ಹೀಗೆ ನಾವು ಮುಳುಗುತ್ತಿರುವ ಈ ಸ್ಥಿತಿಯಲ್ಲಿ ಚಿಂತನೆಯ ಮಟ್ಟದಲ್ಲಾದರೂ ಕಾಣಬಹುದಾದ ಕನಸುಗಳು ಇವೆಯೆ ಎಂದಾದರೂ ತಡಕಾಡಬೇಕಾಗಿದೆ. ಈ ಗಳಿಗೆಯಲ್ಲಿ ನನಗೆ ಭೂತಾನ್ ರಾಷ್ಟ್ರ ಕಣ್ಣಿಗೆ ಬೀಳುತ್ತಿದೆ. ಭೂತಾನ್ ರಾಷ್ಟ್ರವೇ ನಮ್ಮ ಕರ್ನಾಟಕದ ಒಂದೂವರೆ ಜಿಲ್ಲೆಯಷ್ಟಿರಬಹುದು. ಸಿಂಘೆಯಾಲ್ ವಾಂಗ್ಚುಕ್– ಈ ಚುಲ್ಟಾರಿ ದೇಶದ ಈ ಚುಲ್ಟಾರಿ ದೊರೆ ಜಗತ್ತಿಗೇ ಒಂದು ಸವಾಲು ಎಸೆದಿದ್ದಾನೆ. ಈ ಸವಾಲು ಜಗತ್ತಿಗೆ ನುಂಗಲಾರದ ತುತ್ತಾಗಿದೆ. ಆತ ಹೇಳುತ್ತಾನೆ 'ಒಂದು ದೇಶದ ಅಭಿವೃದ್ಧಿಯನ್ನು ಆ ದೇಶದ ನಿರ್ಜೀವ ಭೌತಿಕ ವಸ್ತುಗಳ ಉತ್ಪಾದನೆಯ ಮೇಲೆ ಲೆಕ್ಕ ಹಾಕಬೇಡಿ. ಬದಲಾಗಿ ಅಲ್ಲಿ ಜೀವಂತವಾಗಿರುವ ಜನರ ಸಂತೋಷದ ಮೇಲೆ ಹಾಗೂ ಸಮಾನತೆಯನ್ನು ಅಳತೆಗೋಲು ಮಾಡಿಕೊಂಡು ಲೆಕ್ಕ ಹಾಕಿ' ಅನ್ನುತ್ತಾನೆ. ಆಮೇಲೆ ಅವನು 'ಅಭಿವೃದ್ಧಿಯ ಪರಿಕಲ್ಪನೆಗೆ ಸಂತೋಷ ಸಮಾನತೆ ಸೇರ್ಪಡೆಯಾಗುವುದಾದರೆ ಭೂತಾನ್ ಎಂಬ ಈ ಬಡರಾಷ್ಟ್ರವೇ ಜಗತ್ತಿನಲ್ಲೇ ಮೊದಲ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ನಿಲ್ಲುತ್ತದೆ. ಅಮೆರಿಕಾವೋ ಚೈನಾವೋ ಅಥವಾ ಇಂಗ್ಲೆಂಡೋ ಅಲ್ಲ' ಅನ್ನುತ್ತಾನೆ. ಇದು ಎಲ್ಲರನ್ನೂ ದಿಕ್ಕೆಡಿಸಿದೆ. ಹೀಗೆ ದಿಕ್ಕೆಟ್ಟು, 25 ದೇಶಗಳ 90 ಜನ ಪ್ರಜ್ಞಾವಂತ ಅರ್ಥಶಾಸ್ತ್ರಜ್ಞರು ಬ್ರೆಜಿಲ್‌ನಲ್ಲಿ ಸಂತೋಷ ಸಮಾನತೆಗಳನ್ನು ಅಭಿವೃದ್ಧಿಯ ಮಾನದಂಡ ಆಗಿಸಬಹುದಾದ ಸಾಧ್ಯತೆಯನ್ನು ಚರ್ಚಿಸುತ್ತಾ ತಲೆಕೆಡಿಸಿಕೊಂಡಿದ್ದಾರೆ.

ಈ ಎಳೆಯನ್ನು ಹಿಡಿದುಕೊಂಡು ನಾವು ಮುನ್ನಡೆಯಬಹುದಾದ ಸಾಧ್ಯತೆ ಇದೆಯೇ? ಇರುವುದಾದರೆ ಅಭಿವೃದ್ಧಿಯ ಮಾನದಂಡಕ್ಕೆ ಸಮಾನತೆ

ಮತ್ತು ಸಂತೋಷವನ್ನೂ ಸೇರ್ಪಡಿಸಲು ಸ್ಥಳೀಯವಾಗಿ ಜಾಗತಿಕವಾಗಿ ಅಭಿಪ್ರಾಯ ರೂಪಿಸಿ ಹೋರಾಡಬೇಕಿದೆ. ಈ ಹೋರಾಟಕ್ಕೆ 'ನೈಸರ್ಗಿಕ ಸಂಪತ್ತು ಸಾರ್ವಜನಿಕ ಸಂಪತ್ತು ಮಾತ್ರ' ಎಂಬುದನ್ನು ಇಂದು ಕೂಗಿ ಕೂಗಿ ಹೇಳಬೇಕಾಗಿದೆ. ಈ ಹೋರಾಟಕ್ಕೆ ಬಾಳಿಕೆ ಬರಬೇಕಾದರೆ ಸಹನೆ ಮತ್ತು ಪ್ರೀತಿ ಧರ್ಮವಾದವರ ಕೈಲಿ ನಾಯಕತ್ವ ಇರಬೇಕಾಗುತ್ತದೆ.

ಓ ದೇವರೇ– ಈ ಗಳಿಗೆಯಲ್ಲಿ ನನಗೊಂದು ಹಗಲುಗನಸು ಬೀಳುತ್ತಿದೆ– ಭೂತಾನನ್ನು ಆದರ್ಶ ಮಾಡಿಕೊಂಡು ಆಧುನಿಕತೆಯಿಂದ ಗೊಂದಲಕ್ಕೊಳಗಾಗಿರುವ ಇಸ್ಲಾಂ ಏನಾದರೂ ಆರ್ಥಿಕ ಸಮಾನತೆಯ ಮಾರ್ಗದಲ್ಲಿ ನಡೆಯುವುದಾದರೆ ಅರ್ಧ ಜಗತ್ತು ಸುಂದರವಾಗಿ ಅದು ಇಡೀ ಭೂಮಂಡಲವನ್ನೆ ಪ್ರಭಾವಿಸಬಹುದೇನೋ. ಇದು ಇಸ್ಲಾಂಗೆ ಮಾತ್ರ ಸಾಧ್ಯ. ಇಲ್ಲಿ ಧಾರ್ಮಿಕ ಶ್ರದ್ಧೆ ಹೃದಯದ್ದು. ಇದರಿಂದಾಗಿಯೇ ಈ ಆಧುನಿಕತೆ ಅಭಿವೃದ್ಧಿ ಇತ್ಯಾದಿಗಳು ಇಸ್ಲಾಂನ ಅಸ್ತಿತ್ವವನ್ನು ತತ್ತರಿಸುವಂತೆ ಮಾಡಿವೆ. ಕ್ರಿಶ್ಚಿಯನ್ ಧರ್ಮ ಆಧುನಿಕತೆ ಹಾಗೂ ಹಾಲೀ ಅಭಿವೃದ್ಧಿಯ ಜತೆ ಹೊಂದಾಣಿಕೆ ಮಾಡಿಕೊಂಡಿರುವುದರಿಂದ ಅದಕ್ಕೆ ಈ ಸಾಧ್ಯತೆ ಕ್ಷೀಣ. ಹಿಂದೂ ಧರ್ಮಕ್ಕೆ ಬಂದರೆ, ಈ ಧರ್ಮಕ್ಕೆ ಅಸಮಾನತೆಯೇ ಬುನಾದಿಯಾಗಿರುವುದರಿಂದ ಇದಕ್ಕೆ ಧಾರ್ಮಿಕವಾಗಿ ಸಮಾನತೆಯ ಕಡೆಗೆ ಚಲಿಸುವುದು ಬಿಲ್ಕುಲ್ ಸಾಧ್ಯವಾಗದ ಮಾತು. ಹೀಗಿರುವುದರಿಂದ ಇಸ್ಲಾಂಗೆ ಅಮಿತವಾದ ಧರ್ಮಶ್ರದ್ಧೆಯೊಂದಿಗೆ ತನ್ನ ಸಮುದಾಯದೊಳಗೆ ಸಹೋದರಭಾವವೂ ಇರುವುದರಿಂದ ಈ ರೀತಿ ಅನ್ನಿಸಿತು.

ನಮ್ಮಲ್ಲಿ, ಅಂದರೆ, ಜಾತಿ–ಅಸ್ಪೃಶ್ಯತೆಯ ಭಾರತದಲ್ಲಿ ಒಂದು ಆಂದೋಲನದ ಕ್ರಾಂತಿಕಾರತ್ವವನ್ನು ಮತ್ತು ಮಾನವೀಯ ಅಂಶವನ್ನು ಅಳತೆ ಮಾಡಲು ಒಂದು ಮಾನದಂಡ ಇಟ್ಟುಕೊಳ್ಳಲೇಬೇಕಾಗಿದೆ. ಅದೇ ಗೆಳೆಯ ಡಿ.ಆರ್ ನಾಗರಾಜರ ಒಗಟಿನ ಮಾತು– 'ಊರ ಒಳಗೆ ಅಂಬೇಡ್ಕರ್ ಊರ ಹೊರಗೆ ಗಾಂಧಿ'– ಈ ಒಗಟನ್ನು ಬಿಡಿಸಿಕೊಳ್ಳಬೇಕಾಗಿದೆ. ಯಾಕೆಂದರೆ ಭಾರತವು ಮೇಲುಜಾತಿ ಭ್ರಮಾರೋಗ ಹಾಗೂ ಕೀಳುಜಾತಿ ಭ್ರಮಾರೋಗಕ್ಕೆ ತುತ್ತಾಗಿ ನರಳುತ್ತಿದೆ. ಈ ಹಳೆರೋಗ ಗುಣಪಡಿಸಲು ಕಷ್ಟ. ಯಾಕೆಂದರೆ ಈ ರೋಗವನ್ನು ನಾವು ರೋಗವೆಂದೇ ಅಂದುಕೊಂಡಿಲ್ಲ. ಇಂಥ ಮನಃಸ್ಥಿತಿಯಲ್ಲಿ ಊರ ಒಳಗೆ ಅಂಬೇಡ್ಕರ್ ಎಂದರೆ ಮೇಲುಜಾತಿಯ ಭ್ರಮಾರೋಗಕ್ಕೆ ತುತ್ತಾದವರು, ಅಸ್ಪೃಶ್ಯ ಅಂಬೇಡ್ಕರ್ ಸಮಾನತೆಯನ್ನು ಒಪ್ಪಿ ತಮ್ಮ ಮನೆಯಲ್ಲಿ ಅಂಬೇಡ್ಕರ್ ಭಾವಚಿತ್ರ ಇಟ್ಟು ಗೌರವಿಸುವುದಾದರೆ ಕಲ್ಪಿಸಿಕೊಳ್ಳಿ– ಆ ವ್ಯಕ್ತಿಯ

ಒಳಗೆ ಮತ್ತು ಹೊರಗೆ ಯಾವ ಬಗೆಯ ಯುದ್ಧ ಜರುಗಬಹುದು! ಆಗ ಆ ಮೇಲುಜಾತಿ ಭ್ರಮಾರೋಗಕ್ಕೆ ತುತ್ತಾದ ವ್ಯಕ್ತಿ ತನ್ನ ರೋಗ, ಅಂದರೆ ತನ್ನದೇ ರೋಗವನ್ನು ಕಳೆದುಕೊಂಡು ಬಿಡುತ್ತಾನೆ! ತಂತಾನೆ ಉದಾತ್ತ ಮೌಲ್ಯದ ಮನುಷ್ಯನಾಗಿ ಮಾರ್ಪಾಡಾಗಿ ಬಿಡುತ್ತಾನೆ!! ಹೀಗೇ ಒಂದು ಹಳ್ಳಿಯಾದರೆ ಅದು ಆರೋಗ್ಯವಂತ ಮನುಷ್ಯರಿಂದ ತುಂಬಿದ ಹಳ್ಳಿಯಾಗುತ್ತದೆ. ಅದಕ್ಕಾಗೇ ಒಂದು ಸಮಾಜದ ಕ್ರಾಂತಿಕಾರತ್ವದ ನಿಜ ತಿಳಿಯಬೇಕಾದರೆ– ಊರೊಳಗೆ ಅಂಬೇಡ್ಕರ್ ಅಳತೆಗೋಲಾಗಬೇಕಿದೆ. ಇದಕ್ಕೆ ವಚನ ಆಂದೋಲನದ ವಾತಾವರಣ ಬೇಕು. ಹಾಗೇ ಗಾಂಧಿ– ಮನುಷ್ಯ ಕೇಂದ್ರಿತ ಆರ್ಥಿಕತೆ ಹಾಗೂ ಜಗತ್ತು ಒಂದು ಕುಟುಂಬ ಎಂಬ ಕನಸನ್ನು ನನಸು ಮಾಡುವುದಕ್ಕಾಗಿ ಗಾಂಧಿ ಬೇಕು. ಅಂದರೆ ಗಾಂಧಿ ಅಂಬೇಡ್ಕರ್ ಮತ್ತು ವಚನಕಾರರ ಮಿಶ್ರಣಕ್ಕೆ ಎಲ್ಲಾ ಸಮಾನತಾ ಆಶಯಗಳನ್ನು ಕೂಡಿಸಿ ಇದಕ್ಕಾಗಿ ಸ್ವಾತಂತ್ರ್ಯ ಹೋರಾಟದ ತೀವ್ರತೆಯಲ್ಲಿ ಹೋರಾಡಿದರೆ...

ಹೋರಾಡಲೇಬೇಕಾಗಿದೆ. 'ಈ ಜಾಗತೀಕರಣ, ಈ ಖಾಸಗೀಕರಣ, ಈ ಉದಾರೀಕರಣಕ್ಕೆ ಅಂತಃಕರಣ ಇಲ್ಲ' –ಇದು ಕಡಿದಾಳು ಶಾಮಣ್ಣನವರ ಮಾತು. ಇದು ಜಗತ್ತಿನ ಗೋಡೆ ಬರಹ ಆಗಬೇಕಾಗಿದೆ. ಅಂತಃಕರಣಕ್ಕಾಗಿ ಜಾಗತೀಕರಣ, ಅಂತಃಕರಣಕ್ಕಾಗಿ ಉದಾರೀಕರಣ, ಅಂತಃಕರಣಕ್ಕಾಗಿ ಖಾಸಗೀಕರಣ ಆಗಿಸುವತ್ತ ನಾವು ನಮ್ಮ ಹೆಜ್ಜೆಗಳನ್ನು ಇಡಬೇಕಾಗಿದೆ.

## ಸರ್ವೋದಯ ಕರ್ನಾಟಕ– ಹೊಸ ರಾಜಕೀಯದತ್ತ ಅಂಬೆಗಾಲು

ಸಮಾಜವಾದದ ಕೊನೆಯ ಬೆಳಕಿನ ಕುಡಿ ಶ್ರೀ ಕಿಷನ್ ಪಟ್ನಾಯಕ್ ಕರ್ನಾಟಕಕ್ಕೆ ಬಂದಿದ್ದಾಗ, ದಲಿತ ಸಂಘರ್ಷ ಸಮಿತಿಯ ಒಂದು ಬಣ ಹಾಗೂ ರೈತಸಂಘದ ಒಂದು ಬಣ ತಾನು ಚಾಲನಾಶಕ್ತಿಯಾಗಿ, ಮುಂದೆ ಎಲ್ಲರನ್ನೂ ಒಳಗೊಳ್ಳುತ್ತ ರಾಜಕೀಯ ಪಕ್ಷವೊಂದನ್ನು ರೂಪಿಸಲು ಪ್ರಯತ್ನಿಸುತ್ತಿರುವುದನ್ನು ಕೇಳಿದಾಕ್ಷಣ ಪುಳಕಿತರಾದರು. 'ಇದು ನಿಜವೆ? ಇದು ಸಂಭವವೆ? ಇದು ಸಂಭವಿಸಿದರೆ ಇಡೀ ಭಾರತವೇ ತನ್ನ ದಿಕ್ಕು ದೆಸೆಗಾಗಿ ಕರ್ನಾಟಕದ ಕಡೆಗೆ ನೋಡುವಂತಾಗುತ್ತದೆ' ಎಂಬ ಉದ್ಗಾರ ಅವರ ಒಡಲಿಂದ ಬಂತು.

ಕಿಷನ್‌ರಿಗಾದ ಸಂತಸಕ್ಕೆ ಕಾರಣವಿತ್ತು. ಇದುವರೆಗೂ ಆಂಶಿಕ ಸಂಘಟನೆಗಳಾದ ದಲಿತ, ರೈತ ಸಂಘಟನೆಗಳು ಈ ಕೂಡುವ ಪ್ರಕ್ರಿಯೆಯಿಂದಾಗಿ ಅವಕ್ಕೆ ತಮ್ಮ ಟ್ರೇಡ್ ಯೂನಿಯನ್ ಸ್ವಭಾವದ ಮೀರುವಿಕೆ ಉಂಟಾಗಿ ಅವುಗಳಿಗೆ ತಂತಾನೆ ತಾತ್ವಿಕತೆ ವಿಸ್ತರಿಸಿ ರೆಕ್ಕೆ ಮೂಡಲು ಕಾರಣವಾಗಿ ಬಿಡುತ್ತದೆ. ಈ ವಿದ್ಯಮಾನ ಈ ಎರಡು ಬಣಗಳಿಗೆ ಮಾತ್ರ ಸೀಮಿತ ಎಂದು ನಾನು ಅಂದುಕೊಂಡಿಲ್ಲ. ಎಲ್ಲಾ ದಲಿತ, ರೈತ ಬಣಗಳೂ ಇನ್ನೂ ಕೂಡದಿದ್ದರೂ ಅವುಗಳಲ್ಲಿ ಕೂಡುವಿಕೆ ಆಸೆ ಇರುವುದನ್ನು ಕಂಡಿದ್ದೇನೆ.

ಈ ಹಿನ್ನೆಲೆಯಲ್ಲಿ ಹಿಂದಿನ ಪ್ರಯತ್ನಗಳನ್ನು ನೆನಪಿಸಿಕೊಳ್ಳಬೇಕಾಗಿದೆ. ಎರಡು ದಶಕಗಳ ಹಿಂದೆ ಪಂಚಮ ಪತ್ರಿಕೆಯ ಸಂಪಾದಕ ಎಚ್. ಗೋವಿಂದಯ್ಯ ಅವರು ವಿಶೇಷ ಸಂಚಿಕೆ ಹೊರತಂದಾಗ ರೈತಸಂಘ ಮತ್ತು ದಲಿತ ಸಂಘರ್ಷ ಸಮಿತಿಗಳು ಮೊದಲ ಬಾರಿಗೆ ಮುಖಾಮುಖಿ ಆದವು. ಆಗ ಕರಗದಿದ್ದರೂ

ಈ ಪ್ರಯತ್ನ ದಲಿತ ರೈತ ಸಂಘಟನೆಗಳು ಸ್ವಲ್ಪವಾದರೂ ಹತ್ತಿರವಾಗಲು ಕಾರಣವಾಯ್ತು. ತದನಂತರ ಪ್ರೊ. ಎಂ.ಡಿ. ನಂಜುಂಡಸ್ವಾಮಿ, ಪ್ರೊ. ಬಿ. ಕೃಷ್ಣಪ್ಪ, ಶ್ರೀ ಪಿ. ಲಂಕೇಶ್ ಒಟ್ಟುಗೂಡಿ ರಾಜಕೀಯ ಮಾಡುವ ಪ್ರಯತ್ನ ನಡೆಯಿತು. ಇದು ಕೈಗೂಡದಿದ್ದರೂ ನಾವು ಒಟ್ಟಿಗೆ ಸೇರಿ ರಾಜಕೀಯ ಮಾಡದಿದ್ದರೆ ನಮಗೆ ರಾಜಕಾರಣವನ್ನೇ ಮಾಡಲಾಗದು ಎಂಬ ತಿಳಿವು ನಮ್ಮೊಳಗೆ ಆಳವಾಗಿ ಇಳಿಯಲು ಕಾರಣವಾಯ್ತು. ಬಹುಶಃ ಈ ತಿಳಿವೇ ಕಾರಣವಾಗಿ ಒಂದಾಗುವ ಚರ್ಚೆಯಲ್ಲಿ ವರ್ಷಾನುಗಟ್ಟಲೆ ಕಳೆದುಹೋಗದೆ, ಇಂದಾದರೂ ರೈತ ಸಂಘದ ಒಂದು ಬಣ ಹಾಗೂ ದಸಂಸದ ಒಂದು ಬಣಗಳಾದರೂ ಒಂದಾಗಿ ಕ್ರಿಯೆ ಆರಂಭಿಸಿವೆ. ಇತ್ತೀಚೆಗೆ ಇವುಗಳೊಡನೆ ಪ್ರಮುಖವಾಗಿ ಕರುನಾಡ ಸೇನೆಯೂ ಕೂಡಿ ಇವು ವೇಗವರ್ಧಕದಂತೆ ಪಾತ್ರವಹಿಸಿ ಈ ನಡಿಗೆಯಲ್ಲಿ ಎಲ್ಲಾ ದಲಿತ, ರೈತ ಮತ್ತಿತರ ಪ್ರಗತಿಪರ ಬಣಗಳನ್ನು ಕೂಡಿಸಿಕೊಂಡೂ, ಈ ನಾವೆಲ್ಲ ಒಟ್ಟಿಗೆ ಸೇರಿ ರಾಜಕಾರಣ ಮಾಡಿದರೂ ಈ ರಾಜಕಾರಣದ ಬೃಹತ್ ಹೊಟ್ಟೆಗೆ ಏನೇನೂ ಸಾಲದು ಎಂಬ ಅರಿವಿನೊಡನೆ ನಾವು ಹೆಜ್ಜೆ ಇಡಬೇಕಾಗಿದೆ.

ಮತ್ತೂ ಹಿಂದಕ್ಕೆ ಹೋಗುವೆ. ಎಪ್ಪತ್ತರ ದಶಕದಲ್ಲಿ ಗೋಪಾಲಗೌಡರ ವಿವೇಕದೊಡನೆ ಇದ್ದ ಸಮಾಜವಾದಿ ಪಕ್ಷದಿಂದ ವಿಧಾನಸಭೆಗೆ ಗೆದ್ದು ಹೋಗುತ್ತಿದ್ದವರು–ಬೆರಳೆಣಿಕೆಯ ಐದಾರು ಜನ ಮಾತ್ರ. ಆದರೆ ಪರಿಣಾಮದಲ್ಲಿ ರಾಜ್ಯದ ತುಂಬಾ ಸಮಾಜವಾದಿ ಕಂಪನವಿತ್ತು. ವಿಧಾನಸಭೆಯು ಸಮಾಜವಾದಿಗಳಿಂದಲೇ ತುಂಬಿ ತುಳುಕುತ್ತಿರುವಂತೆ ಭಾಸವಾಗುತ್ತಿತ್ತು. ಈಗ ಇದು ನಮ್ಮ ಕನಸಾಗಿದೆ.

ಆ ಕಾಲಮಾನವಾದ ಮೇಲೆ ರಾಜಕಾರಣದ ಕುದುರೆಯು ಹಿಡಿತ ತಪ್ಪಿಸಿಕೊಂಡು, ಸವಾರನಾದ ರಾಜಕಾರಣಿಯು ಕುದುರೆ ಮೇಲೆ ಕುಳಿತ ಹೆಗ್ಗಳಿಕೆಯನ್ನು ಬಿಟ್ಟರೆ ಸುಮ್ಮನೆ ದಿಕ್ಕಿಲ್ಲದೆ ಕುಂತವನಾದನು. ಈ ದಿಕ್ಕು ದೆಸೆ ಇಲ್ಲದ ರಾಜಕಾರಣದ ಓಟದಲ್ಲಿ ನಾನೂ ಸೇರಿದಂತೆ ಎಲ್ಲಾ ಪ್ರಗತಿಪರ ಸಂಘಟನೆಗಳೂ ನಾಡು ನುಡಿ ಕಳಕಳಿಯ ಪ್ರಜ್ಞಾವಂತರು ಹವ್ಯಾಸಿ ಕಲಾವಿದರಂತೆ, ಚುನಾವಣೆ ಬಂದಾಗ ಪ್ರತಿಕ್ರಿಯಿಸಿದ್ದು ಹಾಗೂ ಅಷ್ಟಿಷ್ಟು ಕೆಲಸ ಮಾಡಿದ್ದು ಬಿಟ್ಟರೆ ಮತ್ತೇನೂ ಮಾಡಲಾಗಲಿಲ್ಲ. ರಾಜಕೀಯ ಆಟದ ಮೈದಾನದಲ್ಲಿ ಒಳನುಗ್ಗಿ ಆಡಲು ಧೈರ್ಯವಿಲ್ಲದೆ, ಹೊರಹೋಗಲೂ ಮನಸ್ಸಿಲ್ಲದೆ ಆಡುವ ಆಟಗಾರರಿಗೆ ಚೆಂಡು ಎತ್ತಿಕೊಡುವ ಹುಡುಗರಂತೆ ನಮ್ಮ ಸ್ಥಿತಿಯಾಗಿತ್ತು. ರಾಜಕೀಯ ಕ್ಷೇತ್ರದಲ್ಲಿ ಸೋತರೂ, ಗೆದ್ದರೂ, ಠೇವಣಿ

ಕಳೆದುಕೊಂಡರೂ ಅಖಾಡದಿಂದ ದೂರ ಸರಿಯದೆ ಅಲ್ಲೇ ಪ್ರಯತ್ನಪಡುವ ನಿರಂತರತೆಯೇ ರಾಜಕಾರಣದ ಮೊದಲ ಪಾಠ. ಇಲ್ಲೇ ನಾವು ಫೇಲಾದೆವು.

ಈಗ ರಾಜಕಾರಣದಲ್ಲಿ ತಾತ್ವಿಕತೆ ದಿವಾಳಿ ಎದ್ದಿರುವ ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಸಹಮನಸ್ಕ ಪಕ್ಷಗಳನ್ನೂ ಉಳಿಸಿಕೊಂಡು ನಾವು ಉಳಿಯಬೇಕೆಂಬ ಎಚ್ಚರ ಮಾತ್ರ ನಮ್ಮನ್ನು ಉಳಿಸಬಲ್ಲದು. ಉದಾಹರಣೆಗೆ ಆರ್‌ಪಿಐ ಕ್ಷೀಣಿಸುತ್ತಿದ್ದರೂ ಕಮ್ಯುನಿಸ್ಟ್ ಪಕ್ಷಗಳು ಸ್ಥಗಿತಗೊಂಡಿದ್ದರೂ ಅವೂ ಬೆಳೆದು ನಾವೂ ಬೆಳೆಯಬೇಕಾಗಿದೆ. ಹಾಗೆಯೇ ಇತ್ತೀಚಿನ ದಿನಗಳಲ್ಲಿ ರಾಜಕೀಯವನ್ನು ಗಂಭೀರವಾಗಿ ಪರಿಗಣಿಸಿ ಸತತವಾಗಿ ಆ ದಿಕ್ಕಲ್ಲೇ ಕೆಲಸ ಮಾಡುತ್ತ ಸ್ವಲ್ಪಮಟ್ಟಿಗೆ ಯಶಸ್ವಿಯೂ ಆದ ನಮ್ಮ ಸಹಮನಸ್ಕ ಪಕ್ಷ ಬಿಎಸ್‌ಪಿಯು ಗೆಲ್ಲುವ ಕಡೆ ನಮ್ಮಿಂದ ತೊಡಕಾಗದಂತೆ ಸೂಕ್ಷ್ಮವಾಗಿ ರಾಜಕೀಯ ನಿರ್ವಹಿಸುವುದೂ ಕೂಡ, ಇದು ಅವರಿಗೆ ನಾವು ಮಾಡುವ ಸಹಾಯ ಅಲ್ಲ, ಇದೂ ನಮ್ಮ ಅಗತ್ಯ– ಎಂದು ಭಾವಿಸುವ ವಿವೇಕವನ್ನು ನಾವು ಬೆಳೆಸಿಕೊಳ್ಳಬೇಕಾಗಿದೆ. ಸಾಮಾನ್ಯವಾಗಿ ಹೋರಾಟಗಾರ ಹಿನ್ನೆಲೆಯ ಸಂಘಟನೆಗಳಿಗೆ ತಾನು ತನ್ನ ಸಿದ್ಧಾಂತ ಬಿಟ್ಟು ಬೇರೆಯದು ಕಣ್ಣಿಗೆ ಕಾಣುವುದಿಲ್ಲ. ಸಹೋದರರಾದ ನಾವು ದಾಯಾದಿ ಭಾವದಿಂದ ಛಿದ್ರರಾಗಿದ್ದೇವೆ. ನಮ್ಮ ಹತ್ತಿರದವರನ್ನೇ ನಮ್ಮ ಶತ್ರು ಮಾಡಿಕೊಂಡಿರುತ್ತೇವೆ. ಈ ನಮ್ಮ ಅಸಹಾಯಕ ಪರಿಸ್ಥಿತಿಯಲ್ಲಾದರೂ ಸಹೋದರರಾದ ನಾವು, ಸಹೋದರರಂತೆ ನಡೆದುಕೊಳ್ಳದಿದ್ದರೆ ನಮಗೆ ಉಳಿಗಾಲವೆಲ್ಲಿ? ಈ ಸಂದರ್ಭದಲ್ಲೆ ಶಸ್ತ್ರ ಹಾಗೂ ಹಿಂಸೆಯನ್ನು ತಾತ್ವೀಕರಿಸುವುದನ್ನು ಕೈ ಬಿಟ್ಟು ನಮ್ಮೊಡನೆ ಒಂದಾಗಿ ಮುನ್ನಡೆಸಿ ಎಂದು ನಕ್ಸಲೈಟರಲ್ಲೂ ಪ್ರಾರ್ಥಿಸುತ್ತೇನೆ.

ಸರಿ, ಸರ್ವೋದಯ ಕರ್ನಾಟಕದ ತತ್ವ ಸಿದ್ಧಾಂತ ಏನು ಎಂಬ ಪ್ರಶ್ನೆಗೆ–ಈ ಬಗ್ಗೆ ಇದುವರೆಗೂ ತುಂಬಾ ಮಾತಾಡಿಬಿಟ್ಟಿದ್ದೇವೆ ಎಂದೇ ನನಗನ್ನಿಸುತ್ತಿದೆ. ಅಂಬೇಡ್ಕರ್ ಅವರು ಅಧ್ಯಕ್ಷರಾಗಿ, ಲೋಹಿಯಾ ಅವರು ಪ್ರಧಾನ ಕಾರ್ಯದರ್ಶಿಯಾಗಿ ಸಮಾಜವಾದಿ ಪಕ್ಷವನ್ನು ಪುನರ್ ರೂಪಿಸುವ ಪ್ರಯತ್ನ ಅಂಬೇಡ್ಕರ್‌ರ ನಿಧನದಿಂದಾಗಿ ಅಲ್ಲಿಗೆ ನಿಂತಿತು. ಈ ಸಸಿಯನ್ನು ನಾವೀಗ ಕರ್ನಾಟಕದಲ್ಲಿ ನೆಡುತ್ತಿದ್ದೇವೆ. ಹಾಗೇ ಅಂತರಂಗದಲ್ಲಿ ಸಮತ್ವ ಸಾಧಿಸಿ ಬಹಿರಂಗದ ಸಮತ್ವದೊಡನೆ ಸಮತೋಲನಗೊಳಿಸುವ ಬುದ್ಧ, ವಚನಕಾರರು, ಗಾಂಧಿ ನಮಗೆ ಬೆಳಕಾಗಿದ್ದಾರೆ. ಐಕ್ಯತೆಯು ಸಮಾನತೆಯನ್ನು ಆಧರಿಸಿ ಇರಬೇಕು, ಹಾಗೆ ಅಭಿವೃದ್ಧಿಯೂ ಸಮಾನತೆಯನ್ನೇ ಆಧರಿಸಿ ಇರಬೇಕು ಎಂಬುದನ್ನು ವಾಸ್ತವ ಮಾಡಲು, ಇರುವ ಸಿಗುವ ಆದಿವಾಸಿ ಚಿಂತನೆಗಳಿಂದ

ಹಿಡಿದು ಜಗತ್ತಿನ ಮೂಲೆ ಮೂಲೆಯಲ್ಲಿರುವ ಎಲ್ಲಾ ಚಿಂತನೆಗಳೂ ನಮ್ಮವೆ. ಒಂದು ಗೀಜಗ ಎಲ್ಲೆಲ್ಲಿಂದಲೋ ಹುಲ್ಲಿನ ದಳ ತಂದು ಗೂಡು ಕಟ್ಟುವ ರೀತಿಯ ಕಲಾವಿದ ನಾವಾಗಬೇಕಾಗಿದೆ. ನನಗೆ ಈ ಸಂದರ್ಭದಲ್ಲಿ, ಆಂದೋಲನಗಳ ಚಲನೆಯ ನಾಡಿ ಹಿಡಿದು ದಿಕ್ಕು ದೆಸೆ ತೋರಿಸುತ್ತಿದ್ದ ಗೆಳೆಯ ಡಿ.ಆರ್. ನಾಗರಾಜ್ ಇಲ್ಲದ ಕೊರತೆ ಎದ್ದು ಕಾಣುತ್ತಿದೆ. 'ಹಳ್ಳಿಯ ಒಳಗೆ ಅಂಬೇಡ್ಕರ್, ಹಳ್ಳಿಯ ಹೊರಗೆ ಗಾಂಧಿ' ಎಂಬ ಆತನ ರೂಪಕವನ್ನು ಕಾರ್ಯಕ್ರಮವಾಗಿ ಅನುವಾದಿಸಬೇಕಾಗಿದೆ. ಕಡಿದಾಳು ಶಾಮಣ್ಣ ಅವರ ದಾರ್ಶನಿಕತೆ ನಮ್ಮನ್ನು ಕೈ ಹಿಡಿದು ಕರೆದೊಯ್ಯಬಲ್ಲುದು.

ಇಲ್ಲೆ ಒಂದು ಮಾತು: ಗ್ರಾಮ ಪಂಚಾಯ್ತಿ ಸದಸ್ಯರಿಗೆ ತರಬೇತಿ ನೀಡುವಾಗ, ರಾಜ್ಯ ಸಂಪನ್ಮೂಲ ಕೇಂದ್ರದ ಎಸ್. ತುಕಾರಾಂ ಗಮನಿಸಿದ್ದು ನನಗೆ ತುಂಬಾ ಮುಖ್ಯವಾಗಿ ಕಂಡಿತು. ಏನೆಂದರೆ, ಗ್ರಾಮ ಪಂಚಾಯ್ತಿ ಸದಸ್ಯರಿಗೆ ಗಾಂಧಿ, ಅಂಬೇಡ್ಕರ್ ಇತ್ಯಾದಿ ಉದಾಹರಣೆಗಳನ್ನು ಕೊಟ್ಟರೆ ಈ ಸದಸ್ಯರಿಗೆ ಆ ಮಹಾತ್ಮರ ಬಗ್ಗೆ ಗೌರವ ಭಕ್ತಿ ಹೆಚ್ಚಿ ಕೈ ಮುಗಿದು ಸುಮ್ಮನಾಗುತ್ತಿದ್ದರಂತೆ. ಇಂಥದೆಲ್ಲ ತಮ್ಮಿಂದ ಆಗದು ಎಂಬ ಭಾವ ಉಂಟಾಗುತ್ತಿತ್ತಂತೆ. ಅದೇ ಯಾವುದೊ ಒಂದು ಗ್ರಾಮ ಪಂಚಾಯ್ತಿಯಲ್ಲಿ ಯಾರೊ ಒಬ್ಬ ಅಧ್ಯಕ್ಷ ತನ್ನ ಊರನ್ನು ಪೂರ್ತ ಸೋಲಾರ್‌ಗ್ರಾಮ, ಸ್ವಚ್ಛಗ್ರಾಮ, ಪಾನ ನಿಷೇಧ ಗ್ರಾಮ, ದಲಿತರಿಗೂ ಇತರರಿಗೂ ಅಕ್ಕಪಕ್ಕ ನಿವೇಶನ ನೀಡಿಕೆ ಇತ್ಯಾದಿ ಮಾಡಿದ್ದನ್ನು ಉದಾಹರಣೆ ಕೊಟ್ಟರೆ ಇಂಥವನ್ನು ತಾವೂ ಮಾಡಬಹುದು ಅನ್ನಿಸುತ್ತಿತ್ತಂತೆ. ನಾವು ನಮ್ಮ ಜನರ ಹೃದಯದ ಒಳಗೆ ಅಡಗಿರುವ ಪುಟ್ಟ ಪುಟ್ಟ ಬುದ್ಧ, ಬಸವಣ್ಣ, ಗಾಂಧಿ, ಅಂಬೇಡ್ಕರ್ ಅವರನ್ನು ಹುಡುಕೀಹುಡುಕಿ ಉದ್ದೀಪನಗೊಳಿಸಬೇಕಾಗಿದೆ.

ಇನ್ನೂ ರೂಪ ಪಡೆಯಬೇಕಾಗಿರುವ ಒಂದು ಕಾರ್ಯಕ್ರಮ ಮುಂದಿಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ. ಕಾರ್ಯಕ್ರಮ ಹೀಗೆ ಇಂಥವು: 'ನನ್ನ ಊರಿಗೆ ನನ್ನ ಕೈಲಾದಷ್ಟು'. ಹಳ್ಳಿ ತೊರೆದು ಪರಸ್ಥಳಗಳಲ್ಲಿ ಉದ್ಯೋಗದಲ್ಲಿರುವ ಅನೇಕರಿಗೆ ತನ್ನ ಹುಟ್ಟಿದ ಊರಿಗೆ ನೆರವಾಗುವ ಬಯಕೆ ಇದ್ದೂ ಕೈಗೂಡದೆ ಇರುತ್ತದೆ. ಅದಕ್ಕೆ ಸರ್ವೋದಯ ಕರ್ನಾಟಕವು ಪ್ರತಿ ಗ್ರಾಮ ಪಂಚಾಯ್ತಿಯ ವ್ಯಾಪ್ತಿಯಲ್ಲಿ ಹತ್ತೂ ಜನರ ಸಮಿತಿಯನ್ನು ನೇಮಿಸಿ, ಆ ಸಮಿತಿಯು ಪರಸ್ಥಳದಲ್ಲಿರುವ ತನ್ನ ಊರಿನವರ ವಿಳಾಸವನ್ನು ಸಿದ್ಧಪಡಿಸಿ, ನಗರದಲ್ಲಿರುವ ಉದ್ಯೋಗಿಗಳಿಂದ ವಾರ್ಷಿಕ ಒಂದು ಸಲ ಅವರವರ ಊರಿನ ಗ್ರಾಮ ಪಂಚಾಯ್ತಿ ಹೆಸರಿಗೆ ಚೆಕ್, ಡಿಡಿ ಪಡೆದು ಕಳಿಸುವ ವಾಹಕವಾಗಿ

ಸರ್ವೋದಯ ಕರ್ನಾಟಕ ಕೆಲಸ ಮಾಡಬಹುದಲ್ಲವೇ? ಹೊರನಾಡು ಮತ್ತು ವಿದೇಶಿ ಕನ್ನಡ ಸಂಘಗಳನ್ನು ಈ ಸಾರ್ಥಕ್ಯದ ಕಾರ್ಯದಲ್ಲಿ ಒಳಗೊಳ್ಳಬಹುದು. ಹೀಗೆ ಬರುವ ನೆರವನ್ನು ಗ್ರಾಮ ಪಂಚಾಯ್ತಿಗಳು ನೀರು, ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯ, ಗ್ರಂಥಾಲಯದೊಡನೆ ಉದ್ಯೋಗ ಸಹಾಯ ಕೇಂದ್ರಕ್ಕಾಗಿ ಬಳಸಲು ವಿನಂತಿಸುತ್ತ, ಇದೇ ರೀತಿ ವ್ಯವಸಾಯದಲ್ಲಿ ರಸಗೊಬ್ಬರ, ಕ್ರಿಮಿನಾಶಕ, ಹೈಬ್ರಿಡ್ ಬಿತ್ತನೆ ಬೀಜವನ್ನು ನಿರಾಕರಿಸಿಯೂ ನೀರನ್ನು ಮಿತವಾಗಿ ಬಳಸಿಯೂ ಉತ್ತಮ ಇಳುವರಿ ನೀಡುವ ನೈಸರ್ಗಿಕ ಕೃಷಿ ಪದ್ಧತಿಯನ್ನು ವ್ಯಾಪಕಗೊಳಿಸಲು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಹತ್ತು ಜನರ ಸಮಿತಿ ರಚಿಸಿ ಹೊಸ ಆರಂಭವನ್ನು ಸರ್ವೋದಯ ಕರ್ನಾಟಕವು ಮಾಡಬಹುದು. ಇದೇನಾದರೂ ಯಶಸ್ವಿಯಾದರೆ ಬೀಜ, ಗೊಬ್ಬರ, ಕ್ರಿಮಿನಾಶಕಗಳನ್ನು ಮಾರುವ ಬಹುರಾಷ್ಟ್ರೀಯ ಕಂಪನಿಗಳಿಗೆ ಅನ್ನ ನೀರು ಕೊಡದೆ ಕೊಂದಂತಾಗುತ್ತದೆ. ಜೊತೆಗೆ ಅಂತರ್ಜಲ ಭೂಮಿಗೆ ಹತ್ತಿರವಿದ್ದರೆ ಅದು ಅಮೃತ, ಅದೇ ಅಂತರ್ಜಲ ಭೂಮಿಯ ಆಳಕ್ಕೆ ಹೋದಂತೆ ಅದು ವಿಷವಾಗುತ್ತದೆ ಎಂಬ ತಿಳಿವಳಿಕೆ ಭೂಮಿ ಮೇಲೆ ವಾಸಿಸಬೇಕೆನ್ನುವ ಮನುಷ್ಯರೆಲ್ಲರಿಗೂ ಬರಬೇಕಾಗಿದೆ. ಅಂತರ್ಜಲವನ್ನು ಭೂಮಿಗೆ ಹತ್ತಿರವಾಗಿಸಲು ಯುದ್ಧೋಪಾದಿಯಲ್ಲಿ ಕಾರ್ಯಪ್ರವೃತ್ತರಾಗಬೇಕಾಗಿದೆ.

ಹೀಗೆ ಎಲ್ಲಾ ಕ್ಷೇತ್ರದಲ್ಲೂ ಮಹಿಳೆ, ದಲಿತ, ರೈತ, ಆದಿವಾಸಿ, ಹಿಂದುಳಿದ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಸರ್ವೋದಯ ಕರ್ನಾಟಕವು ತಳಮಟ್ಟದ ಹತ್ತೂ ಜನರ ಸಮಿತಿಗಳ ಮೂಲಕ ತನ್ನ ತಳಪಾಯ ಕಟ್ಟುತ್ತ ರಚನಾತ್ಮಕ ಕೆಲಸದೊಡನೆ ಚುನಾವಣಾ ರಾಜಕೀಯವನ್ನು ಮಾಡಬೇಕಾಗಿದೆ. ರಾಜಕಾರಣವೆಂದರೆ ಪರಸ್ಪರ ಕೆಸರು ಎರೆಚಾಟ ಎಂದಾಗಿ ಬಿಟ್ಟಿರುವ ಈ ನಮ್ಮ ವರ್ತಮಾನದಲ್ಲಿ ಪ್ರೀತಿ ಸಹನೆಯಿಂದ ನಾಡು ಕಟ್ಟುವ ಹೃದಯವಂತರನ್ನು ಹುಡುಕೀ ಹುಡುಕೀ ಅಂಥವರ ಕೈಗೆ ಅಧಿಕಾರ ಸಿಗುವಂತೆ ಮಾಡುವುದಕ್ಕಾಗಿ ಈ ಮೇಲಿನ ಕಾರ್ಯಕ್ರಮಗಳನ್ನು ವ್ಯಾಪಕಗೊಳಿಸುವುದು ಸರ್ವೋದಯ ಕರ್ನಾಟಕದ ಹೆಜ್ಜೆಗಳಾಗಬೇಕಾಗಿದೆ.

ಹೀಗೆ ಮಾಡಬಹುದಾದ ಆಸೆ ನನ್ನನ್ನು ಅಧ್ಯಕ್ಷತೆಗೆ ತಂದಿತು. ನನ್ನ ಉದಾಹರಣೆಯ ಮೂಲಕವಾದರೂ ಅಂದರೆ ಅಯ್ಯೋ ಮಾದೇವನೇ ರಾಜಕಾರಣ ಮಾಡುವುದಾದರೆ ಇನ್ನು ನಮಗ್ಯಾವ ಲೆಕ್ಕ ಎಂದುಕೊಂಡು ಸಮಾನತೆ, ಐಕ್ಯತೆ, ಅಭಿವೃದ್ಧಿಗೆ ಆಶಿಸುವವರೆಲ್ಲರೂ ಸುಮ್ಮನಿರದೆ ರಾಜಕಾರಣಕ್ಕೆ ಇಳಿಯುವಂತಾದರೆ ನನ್ನ ಅಧ್ಯಕ್ಷತೆ ಯಶಸ್ವಿಯಾದಂತೆ.

# ಸಮಾನತೆಯ ಕನಸನ್ನು ಮತ್ತೆ ಕಾಣುತ್ತಾ

ಅವರು ಕಾಣಲು ಬೆಂಕಿ ಕೆಂಡದಂತೆ ಇದ್ದರು. ಅವರು ಮಾತಾಡಿದರೆ ಆ ಮಾತೊಳಗಿನ ಕಾವು ತಟ್ಟುತ್ತಿತ್ತು. ಇವರು ಪ್ರೊ. ಎಂ.ಮರಿಸ್ವಾಮಿ ಅಂತ. ಹಿಂದೂ ಅಸ್ಪೃಶ್ಯರಾಗಿ ಹುಟ್ಟಿದ ಇವರು ಬೌದ್ಧರಾಗಿ ನಿಧನರಾದರು. ಇವರು ಬದುಕಿದ್ದಾಗ ಎಸ್.ತುಕಾರಾಂ ಮಾಡಿರುವ ಸಂದರ್ಶನ ದಲಿತನೊಬ್ಬನ ಅಂತರಂಗವನ್ನು ತೆರೆದಿಟ್ಟಂತಿದೆ.

ಆ ಸಂದರ್ಶನದಲ್ಲಿನ ಒಂದು ಘಟನೆ ನನ್ನನ್ನು ಸದಾಕಾಲ ಕೊರೆಯುತ್ತಿರುತ್ತದೆ. ಆಗ ಮರಿಸ್ವಾಮಿಯವರು ಮಾಧ್ಯಮಿಕ ಶಾಲಾ ಶಿಕ್ಷಕರು. ಅವರು ತಮ್ಮ ಪಕ್ಕದೂರಿನ ಬಸ್ಸು ನಿಲ್ಲುತ್ತಿದ್ದ ಲಿಂಗಾಯತ ಬೀದಿಯಲ್ಲಿ ಬಸ್ಸಿಗೆ ಕಾಯುತ್ತಾ ಕೂತಿರುವಾಗ ಕಳ್ಳಂಬಳ್ಳಿ ಮಾದಪ್ಪ ಎಂಬ ಹಳೇಕಾಲದ ವಯಸ್ಸಾದ ವ್ಯಕ್ತಿ ತನ್ನ ಮನೆಯಿಂದ ಹೊರಬಂದು ಮರಿಸ್ವಾಮಿಯವರತ್ತ ಕೈತೋರಿಸುತ್ತಾ 'ಯಾರ್ಲಾ ಅವನು ಅಲ್ಲಿ ಕೂತಿರೋನು' ಎಂದು ತನ್ನ ಮಗನನ್ನು ಕೇಳಿದಾಗ ಅವರ ಮಗ– 'ಹೆಂಡದ ಮಾದಯ್ಯನ ಮಗ, ಮೇಷ್ಟ್ರು ಕೂತಿದ್ದಾರೆ' ಎಂದಾಕ್ಷಣವೇ ಆ ಯಜಮಾನನ ಬಾಯಿಂದ ಹೊಲಸು ಮಾತು ಬರುತ್ತದೆ. 'ಎದ್ದೇಳೋ ಮೇಲಕ್ಕೆ' ಎಂದು ಗದರಿಸುತ್ತಾರೆ. ಇದನ್ನು ನೆನಪಿಸಿಕೊಂಡು ಮರಿಸ್ವಾಮಿಯವರು 'ಆಗ ನಾವು ಬದುಕೋ ರೀತಿ ಇರೋದೇ ಹಾಗೆ ಅಂದುಕೊಂಡಿದ್ದೆವು. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬರಹಗಳನ್ನು ಓದಿದ ಮೇಲೆಯೇ ಅದು 'ಗಾಯ' ಎಂದು ಗೊತ್ತಾಯಿತೇ ವಿನಾ ಅಲ್ಲೀತನಕ ಅದು ಗಾಯ ಅಂತಲೇ ಅನಿಸಿರಲಿಲ್ಲ' ಎನ್ನುತ್ತಾರೆ.

ಭಾರತ ಗಾಯಗೊಂಡು ಬಿದ್ದಿದೆ. ಅದರ 'ಗಾಯ' ಅದಕ್ಕೆ ಗಾಯ ಅನಿಸುತ್ತಿಲ್ಲ. ಅಸ್ಪೃಶ್ಯತೆ ಜಾತಿ ಮತೀಯತೆಯ ಗಾಯ ನಂಜಾಗಿ ಮಿದುಳಿಗೇರಿ ಭಾರತ ಹುಚ್ಚಾಗಿದೆ. ಈ ಗಾಯವನ್ನೇ, ಈ ಹುಚ್ಚನ್ನೇ ಸಮಾಜದಲ್ಲಿ ಸಂಸ್ಕೃತಿ ಅಂತ,

ಪರಂಪರೆ ಅಂತ ಬಿಂಬಿಸಲಾಗಿದೆ. ಸಮಾಜವೂ ಹಾಗೇ ನಂಬಿಕೊಂಡಿದೆ. ಇಲ್ಲಿ ಹುಟ್ಟಿದ ವ್ಯಕ್ತಿಯ ಶಕ್ತಿ ಸಾಮರ್ಥ್ಯದ ಅರ್ಧದಷ್ಟು ಭಾಗ ಈ ಹುಚ್ಚಿನೊಡನೇ ಹೆಣಗಿ ಸುಸ್ತಾಗುತ್ತಿದೆ. ಇದು ಗಾಯ, ಇದು ಹುಚ್ಚು ಎಂಬ ಅರಿವಿದ್ದಿದ್ದರೆ– 'ಊರಾಚೆ ಎಸೆಯಲ್ಪಟ್ಟ ಅಸ್ಪೃಶ್ಯ ಸಮುದಾಯವು ಜಾತಿ ಕಾರಣಕ್ಕಾಗಿ ಯಾರನ್ನೂ ಕೊಂದಿಲ್ಲ, ಯಾರನ್ನೂ ತುಳಿದಿಲ್ಲ, ಯಾರನ್ನೂ ಕೀಳಾಗಿ ನೋಡಿಲ್ಲ. ಹಾಗಾಗಿ ಈ ಸಮುದಾಯವೇ ಅವಮಾನಕ್ಕೆ ತುತ್ತಾಗುವ ಬದಲು ಗೌರವಕ್ಕೆ ಪಾತ್ರವಾಗಬೇಕಾಗಿತ್ತು' ಎಂಬ ಭಾವನೆ ಸಮಾಜದಲ್ಲಿ ಉಂಟಾಗುತ್ತಿತ್ತು. ಜತೆಗೆ, ಅಸ್ಪೃಶ್ಯರನ್ನಾಗಿಸಿ ಊರಾಚೆ ಎಸೆಯಲ್ಪಡಲು ಇರುವ ನೂರೆಂಟು ಕಾರಣಗಳಲ್ಲಿ– ಚಾತುರ್ವರ್ಣದ ವಿಂಗಡನೆಯನ್ನು ಒಪ್ಪದ ತಾತ್ವಿಕರು ಹಾಗೂ ಶೂದ್ರರಾಗಲು ಎಂದರೆ ಸೇವಕರಾಗಲು ಒಪ್ಪದ ಸ್ವಾಭಿಮಾನಿಗಳನ್ನು ಅಸ್ಪೃಶ್ಯರನ್ನಾಗಿಸಿ ಊರಾಚೆ ಎಸೆಯಲ್ಪಟ್ಟಿದ್ದೂ ಕಾಣಿಸುತ್ತಿತ್ತು. ಆಗ ಎಸೆಯಲ್ಪಟ್ಟು ಈಗ ಬಡತನ, ಅವಮಾನಗಳಿಂದ ಜರ್ಝರಿತವಾಗಿರುವ ಈ ಅಸ್ಪೃಶ್ಯ ಸಮುದಾಯದ ಹಿಂದಿನ ಚರಿತ್ರೆಯ ಘನತೆ ಕಾಣಿಸುತ್ತಿತ್ತು. ಅಸ್ಪೃಶ್ಯತೆಯ ತಾರತಮ್ಯಕ್ಕೆ ಒಳಗಾದವರು ಆ ನೋವನ್ನು 'ಬದುಕುವ ರೀತಿ' ಎಂದುಕೊಂಡರೆ ಅದು ಸ್ಥೂಲವಾಗಿ ದೈಹಿಕವಾಗಿರುತ್ತದೆ. ಅದೇ ಆ ನೋವು ತಾರತಮ್ಯಗಳು 'ಗಾಯ' ಎಂದು ಅರಿವಿಗೆ ಬಂದರೆ ಅವು ಸೂಕ್ಷ್ಮವಾಗಿ ಮನೋಮಯವಾಗಿ ಕ್ಷಣಕ್ಷಣವೂ ಹಿಂಸಿಸುತ್ತವೆ. ಆಗ ಆ ಹಿಂಸೆಯನ್ನು ತಾಳಲಾರದವರು ತಾವು ಅಸ್ಪೃಶ್ಯರೆಂಬುದನ್ನೇ ಮರೆಮಾಚಲು ಹವಣಿಸುತ್ತಾರೆ. ಯಾರಿಗೆ ತಮ್ಮ ಸ್ಥಿತಿಯನ್ನು ತಾತ್ವಿಕ ನೆಲೆಗಟ್ಟಿನಲ್ಲಿ ನೋಡುವ ಅರಿವು ಬರುತ್ತದೋ ಅವರು ತಮ್ಮ ವಿಮೋಚನೆಗೆ ತವಕಿಸುತ್ತಾರೆ. ಆಗ ವಿಮೋಚನೆ ಅವರದು ಮಾತ್ರವಾಗಿರುವುದಿಲ್ಲ, ಇದರಿಂದ ಇಡೀ ಸಮಾಜವೇ ವಿಮೋಚನೆಗೊಳ್ಳುವ ದಿಕ್ಕಲ್ಲಿ ಚಲಿಸುತ್ತದೆ.

ಈ ಹಿನ್ನೆಲೆಯಲ್ಲೇ ಹಿಂದೊಂದು ಸಲ ನಾನು– ಚಿಕಿತ್ಸೆ ಯಾರಿಗೆ ಬೇಕಾಗಿದೆ? ಮೇಲು–ಕೀಳು ರೋಗವನ್ನೇ ಸಂಸ್ಕೃತಿಯೆಂದುಕೊಂಡಿರುವವರಿಗೆ ಸಾಂಸ್ಕೃತಿಕ ಚಿಕಿತ್ಸೆ, ತಾರತಮ್ಯದ ಕಟ್ಟುಪಾಡುಗಳನ್ನೇ ಸಂಪ್ರದಾಯ ಎಂದುಕೊಂಡಿರುವವರಿಗೆ ಸಾಮಾಜಿಕ ಚಿಕಿತ್ಸೆ, ಬಡತನದಿಂದ ಎದ್ದು ನಿಲ್ಲಲು ತ್ರಾಣವಿಲ್ಲದ ತಳಸಮುದಾಯಕ್ಕೆ ಆರ್ಥಿಕ ಚಿಕಿತ್ಸೆ– ನೀಡಬೇಕಾಗಿದೆ ಎಂದು ಮಾತಾಡಿದ್ದೆ. ಆ ಸಂದರ್ಭದಲ್ಲೇ ದಲಿತರು ಸಂಘಟಿತರಾಗಬೇಕು, ತಮ್ಮ ಕೀಳರಿಮೆಯ ರೋಗದಿಂದ ಮೊದಲು ತಪ್ಪಿಸಿಕೊಂಡು, ಮೇಲರಿಮೆ ಹುಚ್ಚಿನ ಸಮುದಾಯದ ಏಟುಗಳಿಂದಲೂ ತಪ್ಪಿಸಿಕೊಳ್ಳುತ್ತಲೇ, ಆ ಮೇಲರಿಮೆಯವರ

ಹುಚ್ಚಿಗೂ ಚಿಕಿತ್ಸೆ ಕೊಡಬೇಕು ಎಂದು ಹೇಳಿದ್ದೆ. ಅಂದರೆ ಒಂದು ವಿಮೋಚನಾ ಸಂಘಟನೆ ಹುಚ್ಚಾಸ್ಪತ್ರೆಯ ವೈದ್ಯರಂತೆ ಕಾರ್ಯನಿರ್ವಹಿಸಬೇಕು ಎಂಬುದು ನನ್ನ ಆಶಯವಾಗಿತ್ತು. ಯಾವುದೇ ಒಂದು ಜಾತಿ ಸಂಘಟಿತವಾಗುವುದರಿಂದ ಜಾತಿಸಮಾಜದ ಕಟ್ಟುಪಾಡು ತಾರತಮ್ಯಗಳು ಬಿಗಿಯಾಗುವುದಾದರೆ ಅದು ನಮ್ಮ ಸಂವಿಧಾನದ ಆಶಯಗಳಿಗೆ ಪೂರಕ ಅಲ್ಲ. ಯಾವುದೇ ಒಂದು ಜಾತಿಸಂಘಟನೆಯು ಜಾತಿಯ ಕಟ್ಟುಪಾಡು ತಾರತಮ್ಯಗಳನ್ನು ಸಡಿಲಗೊಳಿಸಿ ಮುಂದಕ್ಕೆಳೆಯುವುದಾದರೆ ಆಗ ಮಾತ್ರ ಅದಕ್ಕೊಂದು ನೈತಿಕತೆ ತಂತಾನೆ ಬಂದುಬಿಡುತ್ತದೆ.

ಈ 'ಜಾತಿ'ಯಿಂದ ನಾವು ಕಳೆದುಕೊಂಡದ್ದು ಏನೇನು? ಆಸ್ತಿ ಅಂತಸ್ತು ಸ್ಥಾನಮಾನ ಅನುಕೂಲ ಇತ್ಯಾದಿಗಳನ್ನು ಬಿಟ್ಟೇ ಬಿಡೋಣ. ಒಬ್ಬ ವ್ಯಕ್ತಿ ತಾನು ಒಂದು ಜಾತಿಯಲ್ಲಿ ಹುಟ್ಟಿದ ಕಾರಣಕ್ಕಾಗಿ ತನ್ನ ನ್ಯಾಯಪರತೆಯನ್ನೇ ಸತ್ಯಸಂಧತೆಯನ್ನೇ ಕಳೆದುಕೊಂಡು ಬಿಟ್ಟಿರುತ್ತಾನೆ. ಈ ಸಾಮಾಜಿಕ ಕಟ್ಟುಪಾಡುಗಳ ದೆಸೆಯಿಂದಾಗಿ ಅನ್ಯಾಯವೂ ಕೂಡಾ ಅನ್ಯಾಯವಾಗಿ ಕಾಣಲಾರದು. ಆತ ತನ್ನ ಅಂತಃಸಾಕ್ಷಿಯನ್ನೇ ಕುರುಡಾಗಿಸಿಕೊಂಡಿರುತ್ತಾನೆ. ತನ್ನದಲ್ಲದ ಜಾತಿ–ಮತಗಳ ಕಷ್ಟ ಸುಖ ಆತನಿಗೆ ಮುಟ್ಟುವುದೂ ಇಲ್ಲ. ಕೆಲವು ಸಲ ತನ್ನದಲ್ಲದ ಜಾತಿಯವನ ಸುಖ ಇವನಿಗೆ ಕಷ್ಟವಾಗಬಹುದು! ಅವನ ಕಷ್ಟ ಇವನಿಗೆ ಸುಖವಾಗಬಹುದು. ಒಟ್ಟಿನಲ್ಲಿ ಆತನ ಸಂವೇದನೆಗೆ ಕುಷ್ಠ ತಗುಲಿರುತ್ತದೆ, ಸ್ಪಂದನೆ ಇರುವುದಿಲ್ಲ. ಈ ಜಾತಿಯಿಂದ ನಾವು ಕಳೆದುಕೊಂಡದ್ದು ಏನೇನು? ಗಾಬರಿಯಾಗುತ್ತದೆ. ನಾವು ಕುಬ್ಜರೂ ರೋಗಿಗಳೂ ಆಗಿಬಿಟ್ಟಿದ್ದೇವೆ. ಎಲ್ಲಾ ನಷ್ಟಕ್ಕಿಂತಲೂ ಇದು ನನಗೆ ದೊಡ್ಡ ನಷ್ಟವಾಗಿ ಕಾಣುತ್ತದೆ. ಹಾಗಾಗಿ ಜಾತಿಯಿಂದ ಬಿಡುಗಡೆ ಪಡೆಯುವುದು ಎಂದರೆ ಅದು ನಮ್ಮೊಳಗಿನ ನ್ಯಾಯಪರತೆ ಸತ್ಯಸಂಧತೆಯನ್ನು ಕಾಪಾಡಿಕೊಳ್ಳುವುದಕ್ಕಾಗಿ, ನಮ್ಮ ಸಂವೇದನೆಯನ್ನು ಉಳಿಸಿಕೊಳ್ಳುವುದಕ್ಕಾಗಿ, ನಾವು ಮನುಷ್ಯರಾಗಿ ಸ್ಪಂದಿಸಲು, ಎಂದರೆ ನಮ್ಮ ವಿಮೋಚನೆಗಾಗಿಯೇ ನಾವು ಜಾತ್ಯತೀತರಾಗಬೇಕಾಗಿದೆ. ನಾಳೆ ಬದುಕಿಬಾಳಬೇಕಾದ ನಮ್ಮ ಎಳೆಯ ಮಕ್ಕಳಲ್ಲಾದರೂ ಈ ಭಾವನೆಯನ್ನು ಬಿತ್ತ ಬೇಕಾಗಿದೆ. ಹಾಗಾಗಿ, ಇದು ಶಿಕ್ಷಣದ ಭಾಗವಾಗಲೂ ಬೇಕಾಗಿದೆ.

ಜಾತಿ ಪದ್ಧತಿಯಿಂದ ಘಾಸಿಗೊಂಡು 'ಈ ಜಾತಿ ಅನ್ನೋದೇ ಇರಬಾರದು' ಎಂಬ ಸಂಕಟದ ಬದುಕಿನ ದಲಿತರನ್ನು ಎಚ್ಚರಿಸಬೇಕಾದರೂ ಅವರ 'ಜಾತಿ'ಯನ್ನೇ ಕೆರಳಿಸಿ ಅಷ್ಟೋ ಇಷ್ಟೋ ನಡೆಯುವಂತೆ ಮಾಡಬೇಕಾದ

ಪರಿಸ್ಥಿತಿಯಲ್ಲಿ ನಾವಿದ್ದೇವೆ. ಇಲ್ಲಿ, ತಳ ಸಮುದಾಯಗಳು ಎಚ್ಚರಗೊಂಡು ತಮಗೆ ಆದ ಅನ್ಯಾಯಕ್ಕೆ ಸೆಟೆದು ನಿಂತು ಕೂಗುವುದೂ ಕೂಡ ಬಿಗಿಯಾದ ಜಾತಿ ಕಟ್ಟುಪಾಡುಗಳನ್ನು ಅಳ್ಳಾಡಿಸಬಲ್ಲದು. ಹೀಗೆ ಗುರುತಿಸಿ ಎಚ್ಚರಗೊಳಿಸುವ ಐಡೆಂಟಿಟಿ, ಅಸ್ಮಿತೆ ಎನಿಸಿಕೊಳ್ಳುವ ಈ ಕ್ರಿಯೆ ಇಂದು ಹೆಚ್ಚು ಚರ್ಚೆಗೆ ಒಳಗಾಗುತ್ತಿದೆ. ಆದರೆ ನಾವು ಚರ್ಚಿಸಬೇಕಾಗಿರುವುದು ಯಾವುದೇ ಕ್ಷೇತ್ರದ ಈ ಗುರುತಿಸುವಿಕೆಯ ಐಡೆಂಟಿಟಿ ಎಷ್ಟಿರಬೇಕು ಮತ್ತು ಯಾಕಾಗಿ ಇರಬೇಕು ಎಂಬುದರ ಬಗ್ಗೆಯೂ ಕೂಡಾ ಇರಬೇಕಾಗುತ್ತದೆ. ಜಾತಿಯನ್ನು ಗುರುತಿಸಿ ಸಂಘಟಿತರಾಗಿ ಹೋರಾಡುತ್ತಲೇ ಅದರೊಳಗೇನೇ ಜಾತ್ಯತೀತತೆಯನ್ನು ಕಾಪಾಡಿಕೊಳ್ಳುವುದು ಹೇಗೆ ಎಂಬ ವಿವೇಕ, ಎಚ್ಚರ ಇಲ್ಲಿ ಬೇಕಾಗಿದೆ. ತಂತಿ ನಡಿಗೆಯಂತೆ ಇದು. ಯಾವುದೇ ಐಡೆಂಟಿಟಿ ಸಂಘಟನೆ ಯಾಕಾಗಿ? ಅದು ಸಮಾನತೆಗಾಗಿ, ವಿಕೇಂದ್ರೀಕರಣಕ್ಕಾಗಿ, ತಾರತಮ್ಯ ನಿವಾರಣೆಗಾಗಿ... ಈ ದಿಕ್ಕಲ್ಲಿ ಹೆಜ್ಜೆ ಇಡುವ ನಡಿಗೆಗಳಾಗಬೇಕು. ಯಾವುದೇ ಐಡೆಂಟಿಟಿ ನಡಿಗೆ, ತಾನೊಂದು ಅಸಮಾನತೆಗೆ ಒಳಗಾದ ಝರಿ, ತಾನು ಇರುವುದೇ ಸಮಾನತೆಯ ನದಿಗೆ ಕೂಡುವುದಕ್ಕಾಗಿ ಎಂಬಂತೆ ತನ್ನ ಆಶಯಗಳ ಇತರ ಝರಿಗಳ ಜೊತೆ ಕೂಡಿಕೊಳ್ಳುತ್ತಾ ಸಮಾನತೆಯ ನದಿಯ ಕಡೆ ಚಲಿಸಬೇಕಾಗುತ್ತದೆ. ಇಲ್ಲದಿದ್ದರೆ ಮತ್ತೆಲ್ಲಿಗೋ ತಲುಪಿಬಿಡಬಹುದು ಅಥವಾ ತಾನೇ ಸರ್ವಸ್ವ ಎಂದುಕೊಂಡು ಅತಿಗೆ ಹೋಗಿ ದಿಕ್ಕು ತಪ್ಪಲೂಬಹುದು. ಸಮಾನತೆ ಬಯಸುವ ಐಡೆಂಟಿಟಿಯ ಆಂದೋಲನಗಳಿಗೆ ಅಂದರೆ– ಆದಿವಾಸಿ, ಮಹಿಳೆ, ದಲಿತ, ದಲಿತ ಒಳಪಂಗಡಗಳು, ಅಲ್ಪಸಂಖ್ಯಾತ, ಯಾವುದೇ ತಳಸಮುದಾಯ, ರೈತಾಪಿ ಹೋರಾಟಕ್ಕೆ ಈ ಅರಿವಿಲ್ಲದಿದ್ದರೆ ಐಕ್ಯತೆಗೆ ಬದಲು ಛಿದ್ರತೆಗೆ ತಾನೂ ಕಾರಣವಾಗಬಹುದು. ಸಮಾನತೆಯ ಆಶಯದ ಯಾವುದೇ ಸಂಘಟನೆಗಳು ಈ ಅರಿವಿನಲ್ಲಿ ನಡೆಯಬೇಕಾಗಿರುವುದು ಇಂದಿನ ತುರ್ತು ಅಗತ್ಯವಾಗಿದೆ.

ಇದು ಇಂದಿನ ತುರ್ತು ಅಗತ್ಯವಾಗಿದೆ. ಯಾಕೆಂದರೆ ಭಾರತ ಧಾವಿಸುತ್ತಿರುವ ದಿಕ್ಕು ವೇಗ ನೋಡಿದರೆ– ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟವರ ಕನಸು ಇಂದು ಅಪಹಾಸ್ಯಕ್ಕೆ ವಸ್ತುವಾಗಿದೆ. ಸಮಾನತೆ ಅಂದರೆ ಇಂದು ನಗುತ್ತಾರೆ. ಬಡವ ಬಲ್ಲಿದರ ನಡುವೆ ಅಂತರ ಕಮ್ಮಿ ಇರಬೇಕು ಎಂದರೆ ಇನ್ನೂ ನಗುತ್ತಾರೆ. ಹಾಗಾದರೆ ನಮಗೆ ಯಾವ ಭಾರತ ಬೇಕು? ಮುಂಬೈನಲ್ಲಿ ಮುಖೇಶ್ ಅಂಬಾನಿಯವರ ಮನೆ ಇಪ್ಪತ್ತೇಳು ಅಂತಸ್ತು. ಮೂರು ಹೆಲಿಪ್ಯಾಡ್. ಒಂಬತ್ತು ಲಿಫ್ಟ್‌ಗಳು. ತೂಗು ಉದ್ಯಾನಗಳು. ಡ್ಯಾನ್ಸ್‌ರೂಮುಗಳು.

ಬಗೆಬಗೆಯ ಹವಾಕೋಣೆಗಳು. ಜಿಮ್‌ಗಳು. ಆರು ಅಂತಸ್ತಿನ ಪಾರ್ಕಿಂಗು, 600 ಸೇವಕರು ಇತ್ಯಾದಿ ಇರುವ ಈ ಮನೆಯ ಸುತ್ತಾ ಸಾವಿರಾರು ಸ್ಲಂ ಜೋಪಡಿಗಳು. ಇದು ಭಾರತವಾಗಬೇಕೇ? ನಮ್ಮ ಬಳ್ಳಾರಿಗೆ ಬಂದರೆ ಸಾರ್ವಜನಿಕ ಆಸ್ತಿಯಾಗಬೇಕಾದ ಸಂಪತ್ತನ್ನು ಕೆಲವೇ ವ್ಯಕ್ತಿಗಳು ಡಕಾಯಿತಿಸಿ ಅದಿರು ತೋಡಿ ಪಾತಾಳ ಕಾಣಿಸುವ ಹಳ್ಳಗಳು, ಗಾಳಿ ನೀರೂ ಕೆಂಪು ಕೆಂಪು– ಇದು ಭಾರತವಾಗಬೇಕೇ? ನೂರಿಪ್ಪತ್ತು ಕೋಟಿ ಜನಸಂಖ್ಯೆಯ ಭಾರತದಲ್ಲಿ ಕೇವಲ ನೂರು ಜನ ಶ್ರೀಮಂತರು ಒಟ್ಟು ರಾಷ್ಟ್ರೀಯ ಉತ್ಪನ್ನದ ಕಾಲುಭಾಗದ ಒಡೆಯರಾಗಿದ್ದಾರೆ! ಇದು ಎಲ್ಲಿಗೆ ಕೊಂಡೊಯ್ಯುತ್ತದೆ? ಇದು ಶ್ರೀಮಂತಿಕೆ ಐಷಾರಾಮಿಗೆ ಮಾತ್ರ ನಿಲ್ಲುವುದಿಲ್ಲ. ಮಿತಿಮೀರಿ ಕುಣಿದಾಡುವ ಆ ದುಡ್ಡು ಎಲ್ಲವನ್ನೂ ಕೊಂಡುಕೊಳ್ಳುತ್ತಾ ಎಲ್ಲವನ್ನೂ ಹರಾಜಿಗೆ ಹಾಕುತ್ತದೆ. ಯಾರನ್ನೂ ಬಿಡುವುದಿಲ್ಲ. ಜನಪ್ರತಿನಿಧಿಗಳನ್ನು, ಶಾಸಕರನ್ನು, ಸಂಸದರನ್ನು, ಸಚಿವರನ್ನು, ಅಷ್ಟೇ ಸಾಲದು ಎಂಬಂತೆ ಜನತಂತ್ರ ವ್ಯವಸ್ಥೆಯನ್ನೂ ಬುಡಮೇಲು ಮಾಡಿ ನ್ಯಾಯಾಂಗ, ಕಾರ್ಯಾಂಗ, ಪತ್ರಿಕಾರಂಗಕ್ಕೂ ಕೈಚಾಚುತ್ತದೆ. ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳುವುದಕ್ಕಾದರೂ ಖಾಸಗಿ, ಕಾರ್ಪೊರೇಟ್ ಒಡೆತನದ ಸಂಪತ್ತಿಗೆ ಒಂದು ಹಂತ ನಿಗದಿಪಡಿಸಿ, ಅದಾದ ಮೇಲೆ ಮಿತಿ ಮೀರಿದ ಆ ಸಂಪತ್ತು ಸಾರ್ವಜನಿಕ ಆಸ್ತಿಯಾಗಬೇಕು, ಆ ಸಂಪತ್ತು ಉಂಟಾಗಲು ಅದು ಬಳಸಿಕೊಂಡ ಗಾಳಿ ನೀರು ಬೆಳಕಿಗೆ ಅಂದರೆ ನಾಡಿಗೆ ಸಲ್ಲುವಂತಹ ಏನೋ ಒಂದು ಉಳಿಗಾಲದ ವ್ಯವಸ್ಥೆಯನ್ನು ನಾವು ಕಂಡುಕೊಳ್ಳಬೇಕಾಗಿದೆ.

ಇಂದು ನಗರ ಉಸಿರಾಡಲು ಕಷ್ಟಪಡುತ್ತಿದೆ, ಹಳ್ಳಿ ನಡೆದಾಡಲು ತ್ರಾಣವಿಲ್ಲದೆ ಕಷ್ಟಪಡುತ್ತಿದೆ. ಅನ್ನ ನೀಡುವಾತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಎಲ್ಲರಿಗೂ ಈಗ ಉಳಿಯಲು ಇರುವ ದಾರಿ ಒಂದೇ– ಇಲ್ಲಿ ಮತ್ತೆ ಸಮಾನತೆಯ ಕನಸನ್ನು ಬಿತ್ತಬೇಕಾಗಿದೆ. ಬಡವ ಬಲ್ಲಿದರ ನಡುವಿನ ಅಂತರ ಕಮ್ಮಿ ಇರಬೇಕು ಎಂಬ ಆಸೆಗೆ ಮತ್ತೆ ನೀರೆರೆಯಬೇಕಾಗಿದೆ. ವಿಕೇಂದ್ರೀಕರಣ, ಎಲ್ಲರಿಗೂ ಉದ್ಯೋಗ, ಸ್ವಾವಲಂಬನೆ ಎಂಬ ಹುದುಗಿ ಹೋಗಿರುವ ಈ ಹಳೆ ಮಾತುಗಳನ್ನು ಮತ್ತೆ ಮತ್ತೆ ಹೇಳಬೇಕಾಗಿದೆ. ಈ ಹಳೇ ಮಾತುಗಳನ್ನು ಎಳೆ ಮಕ್ಕಳು ಹೇಳುವಂತಾದರೆ ಆ ಮಾತುಗಳಲ್ಲಿ ಜೀವಸಂಚಾರ ಉಂಟಾಗಬಹುದು. ಮೊದಲು ಆ ಮಕ್ಕಳ ಶಿಕ್ಷಣದಲ್ಲಿ ಭಿನ್ನಭೇದ ತೊಡೆದು ಸಮಾನ ಶಿಕ್ಷಣ ಪದ್ಧತಿಯ ಮೂಲಕ ಸಂವಿಧಾನದ ಆಶಯಗಳಿಗೆ ತಕ್ಕಂತೆ ಪಠ್ಯ ರಚಿಸಿ ನಾಳಿನ ಭಾರತ ಕಟ್ಟಬೇಕಾಗಿದೆ.